ಕೊಟ್ಟಲಗಿ ಗ್ರಾಮ: ಸಾಂಸ್ಕೃತಿಕ ಸಂಕಥನ

(ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ರಾಮಣ್ಣ ಸಿದರಾಯಪ್ಪ ದೊಡ್ಡನಿಂಗಪ್ಪಗೋಳ

ಮಾರ್ಗದರ್ಶಕರು
ಡಾ.ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೨

ಕೊಟ್ಟಲಗಿ ಗ್ರಾಮ: ಸಾಂಸ್ಕೃತಿಕ ಸಂಕಥನ

(ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ರಾಮಣ್ಣ ಸಿದರಾಯಪ್ಪ ದೊಡ್ಡನಿಂಗಪ್ಪಗೋಳ

ಮಾರ್ಗದರ್ಶಕರು
ಡಾ.ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೨

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

'ಕೊಟ್ಟಲಗಿ ಗ್ರಾಮ: ಸಾಂಸ್ಕೃತಿಕ ಸಂಕಥನ' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್‌ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ.ಮಂಜುನಾಥ ಬೇವಿನಕಟ್ಟಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಸಂಶೋಧನ ಮಹಾಪ್ರಬಂಧವನ್ನು ಇಡಿಯಾಗಿ ಇಲ್ಲವೆ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧಕರು

[signature]

ರಾಮಣ್ಣ ಸಿದರಾಯಪ್ಪ ದೊಡ್ಡನಿಂಗಪ್ಪಗೋಳ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: ೧೯/೧೦/೨೨

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ದೃಢೀಕರಣ ಪತ್ರ

ಶ್ರೀ ರಾಮಣ್ಣ ಸಿದರಾಯಪ್ಪ ದೊಡ್ಡನಿಂಗಪ್ಪಗೋಳ ಅವರು **'ಕೊಟ್ಟಲಗಿ ಗ್ರಾಮ: ಸಾಂಸ್ಕೃತಿಕ ಸಂಕಥನ'** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಈ ಮಹಾಪ್ರಬಂಧದ ಸಮಗ್ರ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇತರೆ ಉದ್ದೇಶಗಳಿಗಾಗಲಿ ಇವರು ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ.ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: ೧೬/೧೦/೧೯

ಸಂಕ್ಷಿಪ್ತ ಸೂಚಿ

೧)	ಪು.ಸಂ	–	ಪುಟಸಂಖ್ಯೆ
೨)	ಅ.ಭಾ.ಕ.ಸಾ.ಸ	–	ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ
೩)	ಆಂ.ಪ್ರ.ಜಾ	–	ಆಂಧ್ರಪ್ರದೇಶ ಜಾನಪದ
೪)	ಎ.ಕ	–	ಎಪಿಗ್ರಾಪಿಯಾ ಆಫ್. ಕರ್ನಾಟಕ
೫)	ಕ.ರಾ.ಗೆ	–	ಕರ್ನಾಟಕ ರಾಜ್ಯ ಗೆಜೆಟಿಯರ
೬)	ಕ.ಅ.ಕೇ	–	ಕನ್ನಡ ಅಧ್ಯಯನ ಕೇಂದ್ರ
೭)	ಕ.ಸಾ.ಅ	–	ಕರ್ನಾಟಕ ಸಾಹಿತ್ಯ ಅಕಾಡೆಮಿ
೮)	ಕ.ಸಾ.ಅ	–	ಕನ್ನಡ ಸಾಹಿತ್ಯ ಪರಿಷತ್ತು
೯)	ಕ.ಸಂ.ಪ	–	ಕರ್ನಾಟಕ ಸಂಸ್ಕೃತಿ ಪರಂಪರೆ
೧೦)	ಕ.ಜಾ.ಮ.ಯ.ಅ	–	ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.
೧೧)	ಕ.ಶಾ.ಸಾ.ಅ	–	ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ
೧೨)	ಕ.ವಿ.ವಿ.ಹಂ	–	ಕನ್ನಡ ವಿಶ್ವವಿದ್ಯಾಲಯ ಹಂಪಿ
೧೩)	ಕ.ವಿ.ವಿ.ಧಾ	–	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
೧೪)	ಕ.ಸಂ.ಇ	–	ಕನ್ನಡ ಸಂಸ್ಕೃತಿ ಇಲಾಖೆ
೧೫)	ಜಾ.ಅ	–	ಜಾನಪದ ಅಧ್ಯಯನ
೧೬)	ಜಿ.ಶಂ.ಪ	–	ಜಿ.ಶಂ. ಪರಮಶಿವಯ್ಯ
೧೭)	ದೇ.ಜ.ಗೌ	–	ದೇ. ಜವರೇಗೌಡ
೧೮)	ಡಿ.ವಿ.ಜಿ	–	ಡಿ.ವಿ.ಗುಂಡಪ್ಪ
೧೯)	ಬೆಂ.ವಿ.ವಿ	–	ಬೆಂಗಳೂರು ವಿಶ್ವವಿದ್ಯಾಲಯ
೨೦)	ಮೈ.ವಿ.ವಿ	–	ಮೈಸೂರು ವಿಶ್ವವಿದ್ಯಾಲಯ
೨೧)	ಬೆ.ಜಿ.ಗೆ	–	ಬೆಳಗಾವಿ ಜಿಲ್ಲಾ ಗೆಜೆಟಿಯರ
೨೨)	ಇ.ಅ	–	Epigraphic Carnatica
೨೩)	ಒ.೦.ಖ	–	Mysore Archeological Annual Reports
೨೪)	ಮ.ಕ.ಶಾ.ಸ.ಹ	–	ಮಹಾರಾಷ್ಟ್ರ ಕನ್ನಡ ಶಾಸನ ಸಂಪುಟ ಹಂಪಿ
೨೫)	ಪ್ರಾ.ಸ.ನಿ.ಮೈ	–	ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಮೈಸೂರು
೨೬)	ಕ.ಇ.ವ್ಯಾ	–	ಕರ್ನಾಟಕ ಇನಸ್ಕ್ರಿಪ್ಷನ ವಾಲ್ಯೂಮ್

ಪರಿವಿಡಿ

ಕೊಟ್ಟಲಗಿ ಗ್ರಾಮದ ನಕ್ಷೆ





ಅಧ್ಯಾಯ ೧

ಅಧ್ಯಯನದ ಉದ್ದೇಶ, ಮಹತ್ವ ಮತ್ತು ವ್ಯಾಪ್ತಿ

೧.೧. ಪೀಠಿಕೆ

೧.೨. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೩. ಆಕರ ಸಾಮಗ್ರಿ

೧.೪. ಅಧ್ಯಯನ ಕ್ರಮ

೧.೫. ಅಧ್ಯಯನದ ವ್ಯಾಪ್ತಿ

೧.೬. ಅಧ್ಯಯನದ ಸಮೀಕ್ಷೆ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಮಹತ್ವ ಮತ್ತು ವ್ಯಾಪ್ತಿ

೧.೧. ಪೀಠಿಕೆ

ಸಂಸ್ಕೃತಿ ಎಂದರೇನು? ಎಂಬುದಕ್ಕೆ ಸರ್ವ ಸಮ್ಮತವಾದ ಒಂದು ವ್ಯಾಖ್ಯಾನವನ್ನು ಕೊಟ್ಟು ಅರ್ಥೈಸಲು ಸಾಧ್ಯವಿಲ್ಲವೆಂಬ ಸಂಗತಿ ಇಲ್ಲಿಯ ತನಕ ಸಂಸ್ಕೃತಿಯನ್ನು ನಿರ್ವಚಿಸಿರುವವರ ಅಭಿಪ್ರಾಯಗಳಿಂದ ವ್ಯಕ್ತವಾಗುತ್ತದೆ. ಏಕೆಂದರೆ ಸಂಸ್ಕೃತಿ ಪರಿಕಲ್ಪನೆ ನಿಶ್ಚಿತವಾದುದಲ್ಲ. ಅದು ನಿರಂತರವಾದುದು. ಕಾಲಕಾಲಕ್ಕೆ ಬದಲಾದ ಸಂದರ್ಭ, ಸನ್ನಿವೇಶಗಳಲ್ಲಿ ಸಂಸ್ಕೃತಿಯನ್ನು ಅರ್ಥೈಸಿಕೊಳ್ಳಬೇಕಾಗಿರುವುದರಿಂದ ಇದರ ಬಗ್ಗೆ ವಿವಿಧ ರೀತಿಯ ಪರಿಕಲ್ಪನೆಗಳು ಬೆಳೆದು ಬಂದಿವೆ. ಇಂತಹ ಪರಿಕಲ್ಪನೆಗಳು ಸಂಸ್ಕೃತಿಯನ್ನು ಅರ್ಥೈಸುವ ವ್ಯಕ್ತಿಯ ದೃಷ್ಟಿಕೋನ ವನ್ನು ಅವಲಂಬಿಸಿರುವುದರಿಂದ 'ಸಂಸ್ಕೃತಿ' ಎಂಬುದನ್ನು ನಿರ್ದಿಷ್ಟವಾದ ಒಂದು ಅರ್ಥದಲ್ಲಿ ಬಂಧಿಸಲು ಸಾಧ್ಯವಾಗಿಲ್ಲ. ಅದರ ಸ್ವರೂಪವನ್ನು ಕುರಿತಂತೆ ಬೇರೆ ಬೇರೆ ಕಾಲಘಟ್ಟಗಳಲ್ಲಿ ವಿವಿಧ ವಿದ್ವಾಂಸರು ತಮ್ಮದೇ ಆದ ಪರಿಭಾಷೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಸಂಸ್ಕೃತಿಯೆಂಬುದು ಮನುಷ್ಯನನ್ನು ಪ್ರಾಣಿ ಸಮಾಜದಿಂದ ಪ್ರತ್ಯೇಕಗೊಳಿಸಿ; ಮನುಷ್ಯ ಸಮಾಜದ ಆ ವರ್ತನೆಗಳನ್ನು ವಿವರಿಸುವ ವಿಶಿಷ್ಟವಾದ ಒಂದು ಪರಿಕಲ್ಪನೆಯಾಗಿದೆ. ಆಧುನಿಕವಾಗಿ ಈ ಬಗ್ಗೆ ಹೆಚ್ಚಿನ ಆಲೋಚನೆಗಳು, ಚಿಂತನೆಗಳು ಬೆಳೆಯುತ್ತಿವೆ. ಸಮಾಜ ಮತ್ತು ಸಂಸ್ಕೃತಿಗಳ ನಡುವೆ ಅವಿನಾಭಾವ ಸಂಬಂಧವನ್ನು ಹೊಂದಿರುತ್ತವೆ. ಸಮಾಜವಿಲ್ಲದೇ ಸಂಸ್ಕೃತಿಯಿಲ್ಲ. ಸಮಾಜದಲ್ಲಿ ಸಂಸ್ಕೃತಿ ಅಂತರ್ಗತವಾಗಿದ್ದು; ಅದರ ಆರಂಭದ ದಿನಗಳಿಂದಲೂ ಒಡನಾಟವನ್ನು ಉಳಿಸಿಕೊಂಡು ಬೆಳೆಯುತ್ತಿರುವ ಪ್ರಕ್ರಿಯೆಯೇ ಸಂಸ್ಕೃತಿ.

ಸಂಸ್ಕೃತಿಯ ಸ್ವಭಾವಗಳ ಮೇಲೆ ಆಯಾ ಭೌಗೋಳಿಕ ಸನ್ನಿವೇಶಗಳು ಗಮನಾರ್ಹವಾದ ಪ್ರಭಾವವನ್ನು ಬೀರಿರುತ್ತವೆ. ಆರ್ಥಿಕ, ರಾಜಕೀಯ, ಸಾಮಾಜಿಕ ಸಂದರ್ಭಗಳು ಸಂಸ್ಕೃತಿಯ ಬದಲಾವಣೆಗಳಿಗೆ ತೀವ್ರತರವಾದ ಚಾಲನೆಯನ್ನು ನೀಡುತ್ತವೆ. ಪ್ರತಿಯೊಂದು ಸಂಸ್ಕೃತಿಯು ತಾನು ಎದುರಿಸಬೇಕಾದ ಬದುಕಿನ ಸಮಸ್ಯೆಗಳನ್ನು ನಿರ್ವಹಿಸಿಕೊಳ್ಳಲು ಒಂದು ಮೂಲ ಮನೋಭಾವವನ್ನು ಆರಿಸಿಕೊಳ್ಳುತ್ತದೆ. ಒಮ್ಮೆ ಮೂಲ ಮನೋಭಾವವು ಸಹಕಾರವಾಗಿರಬಹುದು, ಸಂಪ್ರದಾಯವಾಗಿರಬಹುದು, ಸ್ಪರ್ಧೆಯಾಗಿರಬಹುದು, ದ್ವೇಷಸಾಧನೆ ಯಾಗಿರಬಹುದು.

ಸಂಸ್ಕೃತಿ ಸಾಮಾಜಿಕ ಪ್ರಕ್ರಿಯೆಯಾಗಿದ್ದು ಸಮಾಜವು ಭೌಗೋಳಿಕ ಸನ್ನಿವೇಶ, ಸಮಯ, ಸಂದರ್ಭಗಳನ್ನವಲಂಬಿಸಿರುತ್ತದೆಯಾದ್ದರಿಂದ, ಪ್ರಾದೇಶಿಕವಾಗಿ ಪ್ರತಿಯೊಂದು ಪ್ರದೇಶದ ಸಂಸ್ಕೃತಿಯ; ವೈವಿಧ್ಯಗಳನ್ನು ತಿಳಿಯಬೇಕಾದರೆ, ಅಲ್ಲಿನ ಸಮುದಾಯಗಳು, ಅವರ ವೃತ್ತಿ ಜೀವನ, ವಿಧಾನ,

ಆಚಾರ, ನಂಬಿಕೆ, ಸಂಪ್ರದಾಯ, ಭಾಷೆ, ಧರ್ಮ, ಸಾಮಾಜಿಕ ಪದ್ಧತಿ, ಕಟ್ಟುಪಾಡುಗಳು, ಸಾಂಸ್ಕೃತಿಕ ವಿಶಿಷ್ಟತೆಗಳು, ಸಂಸ್ಕೃತಿಯ ಪಲ್ಲಟಗಳು ಮುಂತಾದ ಅಂಶಗಳನ್ನು ತಿಳಿಯಬೇಕಾದುದು ಅತ್ಯವಶ್ಯಕ. ಈ ದೃಷ್ಟಿಯಿಂದ ಅಥಣಿ ತಾಲೂಕಿನ ಕೊಟ್ಟಲಗಿ ಗ್ರಾಮದ ಪ್ರದೇಶವನ್ನು ಅಧ್ಯಯನದ ಅನೂಕೂಲಕ್ಕೆ ಸೀಮಿತಗೊಳಿಸಿಕೊಂಡು ಅದರ ವ್ಯಾಪ್ತಿಯಲ್ಲಿ ಕಂಡು ಬರುವ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

೧.೨. ಅಧ್ಯಯನದ ಉದ್ದೇಶ ಮತ್ತು ಮಹತ್ವ

ಪ್ರಸ್ತುತ ಅಧ್ಯಯನದ ವಿಷಯ ಕೊಟ್ಟಲಗಿ ಗ್ರಾಮದ ಸಾಂಸ್ಕೃತಿಕ ಸಂಕಥನವಾಗಿದೆ. ಕೊಟ್ಟಲಗಿ ಒಂದು ಪುಟ್ಟ ಗ್ರಾಮವಲ್ಲ ಅಥವಾ ಬೃಹತ್ ಪ್ರಮಾಣದಲ್ಲಿ ಬೆಳೆದ ಗ್ರಾಮವು ಅಲ್ಲ. ಅವೆರಡರ ನಡುವಿನ ಹಳ್ಳಿಯಾಗಿದ್ದು ಅಧ್ಯಯನ ಯೋಗ್ಯವೆನಿಸಿದೆ. "ಯಾವುದೇ ಊರಿನ ಗ್ರಾಮೀಣ ಬದುಕು ಇಂದು ತಮ್ಮದೇ ಆದ ಮೂಲ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿಲ್ಲ. ನಾಗರೀಕತೆಯ ಪ್ರಭಾವದಿಂದ ನಿರಂತರ ಬದಲಾಗುತ್ತಲೇ ಇದೆ. ಇಂತಹ ಸಂದರ್ಭದಲ್ಲಿ ನಾಗರೀಕನ ಅಂತರ್ಯದಲ್ಲಿ ಆದಿಮಾನವ ಹುದುಗಿದ್ದಾನೆ. ಹಬ್ಬ, ಆಚರಣೆ, ನಂಬಿಕೆ, ಸಂಪ್ರದಾಯಗಳ ರೂಪದಲ್ಲಿರುವ ನಾಗರೀಕತೆಯನ್ನು ಕೆರೆದು ನೋಡಿದರೆ ಅಲ್ಲೊಬ್ಬ ಅನಾಗರಿಕ ಕಾಣುತ್ತಾನೆ"[೧] ಎಂದು ಡಾ. ಎಂ ಚಿದಾನಂದಮೂರ್ತಿ ಅವರು ಹೇಳಿದ್ದಾರೆ.

"ಆಧುನೀಕರಣ ಹಳ್ಳಿಗಳನ್ನು ಪ್ರವೇಶಿಸಿದರೂ ಹಳ್ಳಿಯಲ್ಲಿ ಗುಪ್ತವಾಗಿ ಗಟ್ಟಿಯಾಗಿ ಪ್ರಾಚೀನ ಪರಂಪರೆ ಹುದುಗಿದೆ. ಪಟ್ಟಣದಷ್ಟು ಬೇಗ ಹಳ್ಳಿ ತನ್ನ ಪ್ರಾಚೀನ ಪರಂಪರೆಯನ್ನು ಬಿಟ್ಟುಕೊಡಲಾರದು"[೨] ಎಂಬ ಅಂಶವನ್ನು ಡಾ.ಎಂ.ಚಿದಾನಂದಮೂರ್ತಿ ಅವರು ಹೇಳಿದ್ದಾರೆ.

ಡಾ. ಹಿರೇಮಲ್ಲೂರು ಈಶ್ವರನ್‌ರವರು ಭಾರತದ ಹಳ್ಳಿಗಳು ಈ ನಾಡಿನ ಪ್ರಾಚೀನ ಸಂಸ್ಕೃತಿಯಲ್ಲಿ ಅಡಕವಾಗಿರುವ ಅಪೂರ್ವ ಮೌಲ್ಯಗಳನ್ನು ಕಾಲಪುರುಷನ ಕ್ರೂರ ದಬ್ಬಾಳಿಕೆಯಿಂದ ರಕ್ಷಿಸಿಕೊಂಡು ಬಂದಿವೆ. ಶೀಘ್ರಗತಿಯಲ್ಲಿ ಬದಲಾಗುತ್ತಿರುವ ಈ ಕಾಲದಲ್ಲಿ ಕೂಲಂಕುಷವಾಗಿ ಶಾಸ್ತ್ರೋಕ್ತವಾಗಿ ಅಭ್ಯಸಿಸಿ ಅವುಗಳ ವ್ಯಕ್ತಿತ್ವವನ್ನು ರೂಪಿಸುವ ಅವಶ್ಯಕತೆ ಎಂದಿಗಿಂತಲೂ ಈಗ ಹೆಚ್ಚಾಗಿದೆ[೩] ಎಂದಿದ್ದಾರೆ.

ಇಷ್ಟಾಗಿಯೂ ನಿರೀಕ್ಷಿತ ಪ್ರಮಾಣದಲ್ಲಿ ಗ್ರಾಮಗಳ ಅಧ್ಯಯನ ನಡೆದಿರುವುದಿಲ್ಲ. ಆಗಿರುವ ಕೆಲವು ಅಧ್ಯಯನಗಳು ತಮ್ಮವೇ ಮಿತಿಗಳಿಗೆ ಒಳಪಟ್ಟಿವೆ. ಆದ್ದರಿಂದ ಅಲ್ಪ ಪ್ರಮಾಣದ ಕೊರತೆಯನ್ನು ತುಂಬಿಕೊಡುವ ಉದ್ದೇಶದಿಂದ ಪ್ರಸ್ತುತ ಅಧ್ಯಯನ ಕೈಗೊಳ್ಳಲಾಗಿದೆ.

ಭಾರತದ ಹಳ್ಳಿಗಳನ್ನು ಅವುಗಳ ವಿಸ್ತೀರ್ಣ, ಭೂಮಿಯ ಹಂಚಿಕೆ, ಆರ್ಥಿಕ ಸ್ಥಿತಿಗತಿ, ಜಾತಿ ಮೊದಲಾದ ಅಂಶಗಳ ಆಧಾರದ ಮೇಲೆ ಸಣ್ಣ, ಮಧ್ಯಮ ಹಾಗೂ ದೊಡ್ಡ ಗ್ರಾಮಗಳೆಂದು ವಿಭಜಿಸಬಹುದೆಂದು ತಜ್ಞರ ಅಭಿಪ್ರಾಯ. ಆ ದೃಷ್ಟಿಯಿಂದ ನೋಡಿದಾಗ ಕೊಟ್ಟಲಗಿ ಮಧ್ಯಮ ವರ್ಗಕ್ಕೆ ಸೇರಿದ ಗ್ರಾಮ. ಭೂ ಹಿಡುವಳಿದಾರರು, ಶ್ರೀಮಂತರು, ಬಡತನ ರೇಖೆಗಿಂತ ಕೆಳಗಿನವರು ಹೀಗೆ ಎಲ್ಲ ವರ್ಗದ ಜನ ಈ ಗ್ರಾಮದಲ್ಲಿದ್ದಾರೆ. ಕೊಟ್ಟಲಗಿ ಪ್ರಾಚೀನ ಗ್ರಾಮವಾಗಿದೆ.

ಭಾರತದ ಹಳ್ಳಿಗಳ ಪ್ರಾಚೀನತೆಯನ್ನು ಖಚಿತವಾಗಿ ಗುರುತಿಸುವುದು ಕಷ್ಟ. ಆದರೆ ಕೊಟ್ಟಲಗಿ ಗ್ರಾಮಕ್ಕೆ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಅದಕ್ಕೆ ತಕ್ಕ ಸಾಕ್ಷ್ಯಾಧಾರಗಳು, ಚಾರಿತ್ರಿಕ

ವಿವರಗಳು ಶಾಸನಗಳಿಂದ ದೊರೆಯುತ್ತವೆ. ಬದಲಾಗುತ್ತಿರುವ ಗ್ರಾಮೀಣ ಸಮಾಜದ ಸ್ಥಿತಿ, ರಾಜಕೀಯ, ಆರ್ಥಿಕ ಸಂದರ್ಭಗಳನ್ನು ಗಮನಿಸಿದಾಗ ಈ ಊರು ಅಧ್ಯಯನಕ್ಕೊಂದು ಮಾದರಿಯಾಗಿದೆ. ಅಂತೆಯೇ ಜಾನಪದ ದೃಷ್ಟಿಯಿಂದ ನೋಡಿದಾಗಲೂ ಈ ಮಾತು ಅಷ್ಟೇ ನಿಜವಾಗುತ್ತದೆ. ಬೌದ್ಧಿಕವಾಗಿ ೨೧ನೇ ಶತಮಾನಕ್ಕೆ ದಾಪುಗಾಲಿಟ್ಟಿರುವ ಈ ದಿನಗಳಲ್ಲೂ ಭೌತಿಕವಾಗಿ ಇಲ್ಲಿನ ಜನ ಯಾವ ಕಾಲಮಾನದಲ್ಲಿದ್ದಾರೆ. ಅವರ ಹಿಂದಿನ ಹಾಗೂ ಈಗಿನ ಆಚಾರ ವಿಚಾರಗಳೇನು? ಇವರ ಮನಸ್ಸನ್ನಾಳುತ್ತಿರುವ ಶಕ್ತಿಗಳು ಯಾವವು? ಹೊರಗಿನ ಮತ್ತು ಒಳಗಿನ ಒತ್ತಡದಿಂದ ಏರ್ಪಟ್ಟಿರುವ ಪರಿಣಾಮವೇನು? ಜಾನಪದದ ಸ್ವರೂಪವೇನು? ವೈವಿಧ್ಯವೇನು? ಕರ್ನಾಟಕ ಜಾನಪದ ಅಧ್ಯಯನಕ್ಕೆ ಇಲ್ಲಿನ ವಿವರಗಳ ಅಧ್ಯಯನ ಹೇಗೆ ಸಹಕಾರಿಯಾದೀತು? ಇತ್ಯಾದಿ ಅಂಶಗಳ ಪರಿಶೀಲನೆಯನ್ನು ಈ ಅಧ್ಯಯನದಲ್ಲಿ ಕೈಗೊಳ್ಳಲಾಗಿದೆ.

"ಕೊಟ್ಟಲಗಿ ಗ್ರಾಮದ ಸಾಂಸ್ಕೃತಿಕ ಸಂಕಥನ"ವೆಂದರೆ ಇಡೀ ಗ್ರಾಮದ ಕುರಿತ ಅಧ್ಯಯನವಾಗಿದೆ. ಕೊಟ್ಟಲಗಿ ಅನೇಕ ದೃಷ್ಟಿಗಳಿಂದ ವಿಶಿಷ್ಟವಾದ ಪ್ರದೇಶವಾಗಿದೆ. ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿದ್ದರೂ ಈಗಲೂ ಅನೇಕ ವಿಶಿಷ್ಟವಾದ ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ, ಐತಿಹಾಸಿಕ ವಿಚಾರಗಳನ್ನು ತನ್ನ ಗರ್ಭದಲ್ಲಿರಿಸಿಕೊಂಡು ಕಾಪಾಡಿದೆ. ಇದರ ಮಹತ್ವವೆಂದರೆ; ಎಷ್ಟೆಲ್ಲಾ ಆಧುನಿಕತೆಯ ಪ್ರಭಾವದ ಹಿನ್ನಲೆಯಲ್ಲಿಯೂ ಇಲ್ಲಿನ ಜನಪದ ಕಲೆಗಳು, ಸಾಹಿತ್ಯ, ಹಬ್ಬ ಹರಿದಿನಗಳು, ಜಾತ್ರೆ, ಉತ್ಸವ, ಸಂಪ್ರದಾಯ ಇನ್ನೂ ಮುಂತಾದ ಕ್ಷೇತ್ರದಲ್ಲಿ ತನ್ನ ವಿಶಿಷ್ಟತೆಯನ್ನು ಕಾಪಾಡಿಕೊಂಡಿದೆ. ಇಲ್ಲಿನ ನದಿ, ದೇವಾಲಯಗಳು, ಶಾಸನಗಳು, ವೀರಗಲ್ಲುಗಳು, ಮಸೀದಿ, ಮಠ, ಸ್ವಾತಂತ್ರ ಸಂಗ್ರಾಮದ ನೆನಪು, ಸುತ್ತಮುತ್ತಲ ಗ್ರಾಮಗಳ ಐತಿಹಾಸಿಕತೆ ಇತ್ಯಾದಿಗಳು ಓದುಗರ, ನೋಡುಗರ ಮನಸ್ಸನ್ನು ಸೂರೆಗೊಳ್ಳುತ್ತವೆ.

ಇಷ್ಟೆಲ್ಲಾ ವೈಶಿಷ್ಟ್ಯ, ವೈವಿಧ್ಯತೆ, ವಿಶೇಷತೆಗಳು ಇದ್ದರೂ ಕೊಟ್ಟಲಗಿ ಪ್ರದೇಶದ ಸಮಗ್ರ ಸಾಂಸ್ಕೃತಿಕ ವಿಚಾರಗಳನ್ನು ಒಳಗೊಂಡಂತೆ ಯಾವುದೇ ಅಧ್ಯಯನ ಇದುವರೆಗೂ ನಡೆದಿಲ್ಲ. ಹೀಗಾಗಿ ಅಂಥದೊಂದು ಕೊರತೆಯನ್ನು ನೀಗಿಸುವ ಪ್ರಯತ್ನವೇ ನನ್ನ ಸಂಶೋಧನೆಯ ಬಹು ಮುಖ್ಯ ಉದ್ದೇಶವಾಗಿದೆ.

ಆಧುನೀಕರಣದಿಂದಾಗಿ ಸ್ಥಳಿಯ ಕೃಷಿ ಜೀವನ ಪದ್ಧತಿಗೂ ನಾಗರಿಕವಾದ ಜೀವನ ಪದ್ಧತಿಗೂ ಉಂಟಾಗುವ ವ್ಯತ್ಯಾಸಗಳು, ಬದಲಾದ ಸ್ಥಿತಿಗತಿಗಳು. ಆಧುನೀಕರಣದ ಪರಿಣಾಮವಾಗಿ ವಾಣಿಜ್ಯ ವ್ಯವಹಾರಗಳು ವೃದ್ದಿಯಾಗಿ ಸಾಂಪ್ರದಾಯಿಕ ಜೀವನದಲ್ಲಾದ ಪಲ್ಲಟಗಳನ್ನು ಕುರಿತಾದ ಅಧ್ಯಯನ ಅರ್ಥಪೂರ್ಣವಾದುದು. ಈ ಗ್ರಾಮದ ಪ್ರದೇಶದಲ್ಲಿ ವಿವಿಧ ಜಾತಿ, ಜನಾಂಗ, ಧರ್ಮದ ಜನ ನೆಲೆಸಿದ್ದಾರೆ. ಈ ದೃಷ್ಟಿಯಿಂದ ಜಾತ್ಯಾತೀತ ಪ್ರದೇಶವೆಂದು ಕರೆಯಬಹುದಾದರೂ ಸಾಂಪ್ರದಾಯಿಕವಾದ ಜಾತಿ ಪದ್ದತಿ ಹಸಿರಾಗಿಯೇ ಇದೆ. ಆಧುನಿಕತೆಯ ಅನೂಕೂಲಗಳ ಕಾರಣವಾಗಿ ಸಾಮುದಾಯಿಕ ಜೀವನ ಪದ್ಧತಿ ಬದಲಾಗಿದ್ದು, ಜಾತಿಯ ಬಂಧಗಳು ಸಡಿಲಗೊಂಡಿದ್ದರೂ ಅಂತರಂಗದಲ್ಲಿನ ಅಸಮಾಧಾನ ಗಳಿಂದಾಗಿ ಜನರಲ್ಲಿನ ವಿಶ್ವಾಸ ನಂಬಿಕೆಗಳು ದೂರವಾಗಿವೆ. ಸಾಮಾಜಿಕ ವಿಘಟನೆ, ತಾರತಮ್ಯಗಳ ನಡುವೆಯೂ ಸಾಂಸ್ಕೃತಿಕವಾಗಿ ಸಾಮರಸ್ಯದ ಮನೋಭಾವಗಳು ಜೀವನ ವಿಧಾನವನ್ನು ರೂಪಿಸುತ್ತವೆ. ಹೀಗಾಗಿ ಬದಲಾದ ಸನ್ನಿವೇಶಗಳನ್ನು ಪರಿಶೀಲಿಸುವುದು ಅಧ್ಯಯನದ ಅಗತ್ಯತೆಗಳಲ್ಲಿ ಮುಖ್ಯವಾಗಿದೆ.

ಜನಪದ ಕಲೆ, ಸಾಹಿತ್ಯ, ಕೃಷಿ ಪದ್ಧತಿ ಮುಂತಾದ ವಿವಿಧ ಸಂಸ್ಕೃತಿಗಳು ಆಧುನಿಕತೆಯ ಫಲವಾಗಿ ತನ್ನ ನೆಲದಲ್ಲಿಯೇ ಅನ್ಯವಾಗಿ, ಅನಾಥವಾಗಿ ಕಣ್ಮರೆಯಾಗುತ್ತಿರುವ ಸ್ಥಿತಿ ಬಂದೊದಗಿದೆ. ಅಷ್ಟೇ ಅಲ್ಲದೆ ಆಧುನಿಕ ಜೀವನ ವಿಧಾನಗಳಿಗೆ ಹೊಂದಿಕೊಳ್ಳಲಾಗದ ಅಥವಾ ಹೊಂದಿಕೊಳ್ಳಲು ಸಾಮರ್ಥ್ಯವಿಲ್ಲದ ಅಸಹಾಯಕ ಸ್ಥಿತಿಗಳು; ಇಂದಿನ ಸಾಮಾಜಿಕ ಜೀವನದ ವೈರುಧ್ಯಗಳಾಗಿರುವುದರಿಂದ ಅವುಗಳನ್ನು ಕುರಿತ ಅಧ್ಯಯನ ಅಗತ್ಯವಾಗಿದೆ.

ಚಾರಿತ್ರಿಕವಾಗಿ ಕೊಟ್ಟಲಗಿ ಪ್ರದೇಶದಲ್ಲಿ ಅಷ್ಟೇ ಅಲ್ಲದೇ ಸುತ್ತಮುತ್ತಲ ಗ್ರಾಮಗಳನ್ನು ಗಮನಿಸಿದಾಗ ಅನೇಕ ರಾಜವಂಶಗಳು ಆಳ್ವಿಕೆ ನಡೆಸಿದ್ದಾರೆ. ಇವರ ಕಾಲಾವಧಿಯಲ್ಲಿ ಇಲ್ಲಿನ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ವಿವರಗಳಿಗೆ ಕೆಲವು ಅಧಿಕೃತ ಆಧಾರಗಳನ್ನಾಗಿ ಶಾಸನಗಳು ವೀರಗಲ್ಲುಗಳು, ಪ್ರಾಚೀನ ದೇವಾಲಯುಗಳು ಮುಂತಾದವುಗಳನ್ನು ಪರಿಶೀಲಿಸಲಾಗುವದು. ಇತಿಹಾಸ, ಕಲೆ, ಧರ್ಮ ಮುಂತಾದ ಸಾಂಸ್ಕೃತಿಕ ಅಂಶಗಳನ್ನು ಭೂವೈಶಿಷ್ಟ್ಯಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಪ್ರಸ್ತುತ ವಿಷಯದ ವ್ಯಾಪ್ತಿ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಕೊಟ್ಟಲಗಿ. ಕೊಟ್ಟಲಗಿ ಒಂದು ಚಿಕ್ಕ ಗ್ರಾಮವಾಗಿದೆ. ಇದು ಭೌಗೋಳಿಕವಾಗಿ ಒಂದು ಎಲ್ಲೆ, ಕಟ್ಟಿಗೆ ಸೀಮಿತವಾಗಿದ್ದರೂ; ಇಲ್ಲಿನ ಇತಿಹಾಸ, ಧರ್ಮ, ಭಾಷೆ, ಕಲೆ, ವಿವಿಧ ಜಾತಿ, ಜನಾಂಗಗಳು, ಬುಡಕಟ್ಟುಗಳು, ಆಚರಣೆ, ನಂಬಿಕೆ, ಸಂಪ್ರದಾಯಗಳು, ಜಾತ್ರೆ, ಹಬ್ಬ ಹರಿದಿನಗಳು, ಉತ್ಸವಗಳು, ಕೃಷಿಗೆ ಸಂಬಂಧಿಸಿದ ಪದ್ಧತಿಗಳು ಮತ್ತು ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಿತಿಗತಿಗಳನ್ನು ಕುರಿತದ್ದಾಗಿದೆ. ಪ್ರತಿಯೊಂದು ವಿಷಯವನ್ನು ಪ್ರತ್ಯೇಕವಾದ ಅಧ್ಯಯನ ವಿಷಯಕ್ಕೆ ಒಳಪಡಿಸುವುದು ಪ್ರಬಂಧದ ವ್ಯಾಪ್ತಿಯಲ್ಲಿ ಅಸಾಧ್ಯವಾದುದು. ನಿರ್ದಿಷ್ಟಪಡಿಸಿಕೊಂಡಿರುವ ವ್ಯಾಪ್ತಿಯಲ್ಲಿನ ಸಾಂಸ್ಕೃತಿಕ ಅಂಶಗಳನ್ನು ಅಧಿಕೃತವಾದ ದಾಖಲೆಗಳು ಮತ್ತು ಕ್ಷೇತ್ರ ಕಾರ್ಯದ ಮೂಲಕ ದೊರೆತಿರುವ ಮಾಹಿತಿಯನ್ನಾಧರಿಸಿದ ಅಧ್ಯಯನವಾಗಿದ್ದು ಅವುಗಳನ್ನು ಬೇರೆ ಬೇರೆ ಅಧ್ಯಾಯಗಳನ್ನಾಗಿ ವಿಂಗಡಿಸಿ ಮಹಾ ಪ್ರಬಂಧವನ್ನು ಸಿದ್ಧಗೊಳಿಸಲಾಗಿದೆ.

೧.೩. ಆಕರ ಸಾಮಗ್ರಿ

ಒಂದು ನಾಡಿನ ಚರಿತ್ರೆಯನ್ನು ತಿಳಿದುಕೊಳ್ಳಲು ಅನೇಕ ಬಗೆಯ ಆಕರ ಸಾಮಗ್ರಿಗಳ ಮೊರೆ ಹೋಗುವುದು ಅನಿವಾರ್ಯ. ಒಂದು ನಾಡಿನ ಇತಿಹಾಸ ರಚನೆಗೆ ಸಂಬಂಧಿಸಿದ ಮಾಹಿತಿಯನ್ನು ಪ್ರಮುಖವಾಗಿ ಪ್ರಾಚ್ಯವಸ್ತು ಮತ್ತು ಸಾಹಿತ್ಯಿಕ ಆಕರಗಳು ಒದಗಿಸುತ್ತವೆ. ಪ್ರಾಚ್ಯ ವಸ್ತುಗಳಲ್ಲಿ ಶಾಸನ, ನಾಣ್ಯ ಹಾಗೂ ಸ್ಮಾರಕಗಳು ಸೇರ್ಪಡೆಯಾದರೆ; ಸಾಹಿತ್ಯಿಕ ಆಕರಗಳಲ್ಲಿ ದೇಶಿಯ ಮತ್ತು ವಿದೇಶಿಯ ಬರವಣಿಗೆಗಳು ಮುಖ್ಯವಾಗುತ್ತವೆ. ಪ್ರಸ್ತುತ "ಕೊಟ್ಟಲಗಿ ಗ್ರಾಮದ ಸಾಂಸ್ಕೃತಿಕ ಸಂಕಥನದ ಅಧ್ಯಯನದಲ್ಲಿ" ಶಾಸನಗಳು, ಸ್ಮಾರಕಗಳು, ವೀರಗಲ್ಲುಗಳು, ಭಾವಚಿತ್ರಗಳು, ವಕ್ತೃಗಳು, ಕ್ಷೇತ್ರಕಾರ್ಯ ಈ ಎಲ್ಲ ಮೂಲಗಳ ನೆರವನ್ನು ಪಡೆಯಲಾಗಿದೆ.

೧.೪. ಅಧ್ಯಯನ ಕ್ರಮ

ಇಂತಹ ಅಧ್ಯಯನಗಳಿಗೆ ಪಟ್ಟಿಕೆ ಮಾಡಿಕೊಳ್ಳುವ ಕ್ರಮ ಪ್ರಸಿದ್ಧವಾದುದು. ಕಣಂಬಡೆ ನಾಡಿನಲ್ಲಿ ಲಭ್ಯವಿರುವ ಶಾಸನ, ಸಾಹಿತ್ಯ, ಸ್ಮಾರಕಗಳನ್ನು ಅಧ್ಯಯನ ಮಾಡಿ; ಆಯಾ ವಿಷಯಗಳಿಗೆ ಸಂಬಂಧಪಟ್ಟ ವಿಷಯ ಪಟ್ಟಿಕೆಗಳನ್ನು ತಯಾರಿಸಿಕೊಳ್ಳಲಾಯಿತು. ಶಾಸನಗಳು ಮೊದಲ ಪ್ರಮಾಣೀಭೂತ ಆಕರಗಳಾದುದರಿಂದ ಶಾಸನಗಳ ಸ್ವರೂಪ, ಕಾಲ, ಸ್ಥಾನ,

ಅರಸರ ಮಾಹಿತಿಯೊಂದಿಗೆ ಅವು ಒಳಗೊಂಡ ವಿಷಯಗಳನ್ನು ಪ್ರತ್ಯೇಕವಾದ ಪಟ್ಟಿಕೆಗಳಲ್ಲಿ ದಾಖಲಿಸಿಕೊಳ್ಳಲಾಯಿತು. ಕ್ಷೇತ್ರ ಕಾರ್ಯದ ಮೂಲಕ ಕಂಡುಬಂದ ದೇವಾಲಯಗಳ ಅಧ್ಯಯನ ದೊಂದಿಗೆ ಅವುಗಳ ಭಾವಚಿತ್ರಗಳ ಸಹಾಯದಿಂದ ಸಂಗ್ರಹಿಸಿದ ವಿಷಯಗಳನ್ನು ಪಟ್ಟಿಕೆಗಳಲ್ಲಿ ದಾಖಲಿಸಲಾಯಿತು. ಕ್ಷೇತ್ರ ಕಾರ್ಯದ ಮೂಲಕ ಕಂಡುಬಂದ ದೇವಾಲಯಗಳು, ಜಾತ್ರೆ, ಜೀವನಾವರ್ತನದ ಆಚರಣೆಯ ಹಲವಾರು ಸಂದರ್ಭ, ಹಬ್ಬ ಹರಿದಿನ, ಮುಂತಾದವುಗಳ ವಾರ್ಷಿಕ ಆವರ್ತನದ ಆಚರಣೆಗಳ ಅವಲೋಕನ, ಭಾವಚಿತ್ರಗಳನ್ನು ಸಂಗ್ರಹಿಸಿ ವಿಷಯ ಪಟ್ಟಿಕೆಗಳಲ್ಲಿ ಸೇರಿಸಲಾಯಿತು.

ಹೀಗೆ ಶಾಸನ, ಸಾಹಿತ್ಯ ಕೃತಿ, ಸ್ಮಾರಕಗಳ ಅಧ್ಯಯನದಿಂದ ಪಟ್ಟಿಕೆಗಳಲ್ಲಿ ಸಂಗ್ರಹಿಸಿದ ವಿಷಯಗಳನ್ನೆಲ್ಲ ಆಯಾ ವಿಭಾಗಕ್ಕನುಸಾರವಾಗಿ ಭೌಗೋಳಿಕ, ಚಾರಿತ್ರಿಕ, ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ವಿಷಯಾನುಕ್ರಮದಲ್ಲಿ ಹೊಂದಿಸಿಕೊಳ್ಳಲಾಯಿತು. ಅವುಗಳಿಂದ ಈ ನಾಡಿನ ಆಡಳಿತ, ಜನಜೀವನದೊಂದಿಗೆ ಅಲ್ಲಿನ ಚರಿತ್ರೆ, ಸಾಂಸ್ಕೃತಿಕ ನೆಲೆ ಬೆಲೆಗಳನ್ನರಿಯಲು ಸಾಧ್ಯವಾಯಿತು.

ನಮ್ಮ ಅಧ್ಯಯನಕ್ಕೆ ಸಂಬಂಧಿಸಿದಂತೆ ಈ ಮಾದರಿಯಲ್ಲಿ ಬಂದ ಸಂಶೋಧನಾ ಮಹಾ ಪ್ರಬಂಧಗಳಲ್ಲಿ ಡಾ. ಎ.ಸಿ. ಪಾರ್ಥ ಅವರ "ರಾಮ ನಗರ ಒಂದು ಸಾಂಸ್ಕೃತಿಕ ಅಧ್ಯಯನ" ಹಾಗೂ ಪ್ರೊ. ವಿಲಾಸ ಕಾಂಬಳೆ ಅವರ "ಅಥಣಿ ಪ್ರದೇಶದ ಸಾಂಸ್ಕೃತಿಕ ಅಧ್ಯಯನ" ಡಾ.ಬಿ.ಆರ್. ರಾಠೋಡ ಅವರ "ಕಣಂಬಡೆ ಮೂನ್ನೂರು ಒಂದು ಅಧ್ಯಯನ" ಪ್ರಮುಖವಾದವು. ಅಲ್ಲದೆ ಡಾ.ಬಿ.ಪ್ರೇಮಾನಂದ ಅವರ "ಅಥಣಿ ಪರಿಸರದ ವಾಲ್ಮೀಕಿ ಸಮುದಾಯ" ಹಾಗೂ ಡಾ. ಅರ್ಜುನ ಗೋಳಸಂಗಿ ಅವರ "ಗೋಳಸಂಗಿ ಗ್ರಾಮ ಸಾಂಸ್ಕೃತಿಕ ಅಧ್ಯಯನ" ಮುಂತಾದವುಗಳಿಂದ ಪೂರಕ ಮಾಹಿತಿಯನ್ನು ಸಂಗ್ರಹಿಸಿ ಸಂದರ್ಭಕ್ಕ ನುಸಾರವಾಗಿ ಬಳಸಿಕೊಳ್ಳಲಾಗಿದೆ. ಹೀಗಾಗಿ ಅಧ್ಯಯನಕ್ಕೆ ಸಂಬಂಧಪಟ್ಟ ಗ್ರಂಥವಾರು ಕ್ಷೇತ್ರ ಕಾರ್ಯದ ಮೌಖಿಕಾಧಾರಗಳನ್ನು ಸಂಗ್ರಹಿಸಿ ಈ ಮಹಾ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

೧.೫. ಅಧ್ಯಯನದ ವ್ಯಾಪ್ತಿ

ಯಾವುದೇ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಸಾಂಸ್ಕೃತಿಕ ಅಧ್ಯಯನ ನಡೆಸುವಾಗ ಅದರ ಆಳ ಹರವುಗಳನ್ನು ತಿಳಿದುಕೊಂಡೆ ಅಧ್ಯಯನ ನಡೆಸಬೇಕಾಗುತ್ತದೆ. ಹಾಗಾಗಿ ಈ ಅಧ್ಯಯನದಲ್ಲಿ ಒಂದು ವ್ಯಾಪ್ತಿಯನ್ನು ನಿರ್ಮಿಸಿಕೊಂಡು ಅನೂಕೂಲಕ್ಕಾಗಿ ಹಲವು ಭಾಗಗಳನ್ನಾಗಿ ವಿಂಗಡಿಸಿದ್ದೇನೆ. ಈ ಮಹಾಪ್ರಬಂಧವು ಒಟ್ಟು ೯ ಅಧ್ಯಾಯಗಳನ್ನು ಒಳಗೊಂಡಿದ್ದು ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ ಎಂದಿದ್ದು. ಇದರಲ್ಲಿ ಅಧ್ಯಯನದ ಅಗತ್ಯ ಸ್ವರೂಪದೊಂದಿಗೆ ಮೂಲ ಆಕರ ಸಾಮಗ್ರಿ ಮತ್ತು ಅಧ್ಯಯನ ಕ್ರಮವನ್ನು ಸ್ಪಷ್ಟಪಡಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ "ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ" ಎಂದಿದ್ದು ಇದರಲ್ಲಿ ಗ್ರಾಮದ ಭೂ ವಿವರ, ವಾಯುಗುಣ, ಅರಣ್ಯ ಸಂಪತ್ತು, ಜೀವ ಸಂಕುಲ, ಸಾರಿಗೆ ಸಂಪರ್ಕ, ಗ್ರಾಮದ ಅಂಕಿ ಅಂಶಗಳ ಕೋಷ್ಟಕ ಹಾಗೂ ಚಾರಿತ್ರಿಕ ಹಿನ್ನೆಲೆ ಕೊಟ್ಟಲಗಿ ಸ್ಥಳನಾಮ ಪದನಿಷ್ಪತ್ತಿ, ಗ್ರಾಮದ ಪ್ರಾಗೈತಿಹಾಸ, ಗ್ರಾಮದ ಪ್ರಾಚೀನತೆ ಶಾಸನಗಳಲ್ಲಿ ಕೊಟ್ಟಲಗಿ ಮತ್ತು ಕೊಟ್ಟಲಗಿ ಪ್ರದೇಶವನ್ನು ಆಳಿದ ರಾಜ್ಯ ಮನೆತನಗಳು, ಕಲ್ಯಾಣಿ ಚಾಲುಕ್ಯರ ಕೊಡುಗೆಗಳು,

ಕಲ್ಯಾಣ ಚಾಲುಕ್ಯರ ಕಲೆ, ವಾಸ್ತುಶಿಲ್ಪ ದೇವಾಲಯಗಳು, ಸುತ್ತಮುತ್ತಲ ಗ್ರಾಮಗಳು ಮತ್ತು ವೈಶಿಷ್ಟ್ಯ ಮುಂತಾದ ವೈಶಿಷ್ಟ್ಯಗಳನ್ನು ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ "ಸಾಮಾಜಿಕ ಪರಂಪರೆ" ಎಂಬುದಾಗಿ ಮಾಡಿಕೊಂಡು ಇದರಲ್ಲಿ ಗ್ರಾಮದಲ್ಲಿನ ಸಮುದಾಯಗಳು ಕುಟುಂಬ ಪದ್ದತಿ, ಮನೆಗಳ ಮಾದರಿ, ಆಹಾರ ಪದ್ದತಿ, ಉಡುಗೆ ತೊಡುಗೆ, ಜನಪದ ವೈದ್ಯ, ನ್ಯಾಯ ವ್ಯವಸ್ಥೆ, ಅತಿಥಿ ಸತ್ಕಾರ, ಆರ್ಥಿಕ ವ್ಯವಸ್ಥೆ, ಜನಪದ ಆಟಗಳು, ಜನಪದ ಕಲೆಗಳು ಮತ್ತು ಕಲಾವಿದರು, ಶೈಕ್ಷಣಿಕ ವ್ಯವಸ್ಥೆ ಮುಂತಾದವುಗಳನ್ನು ಗಮನಿಸಲಾಗಿದೆ.

ನಾಲ್ಕನೆಯ ಅಧ್ಯಾಯವು ರಾಜಕೀಯ ಪರಂಪರೆಗೆ ಮಿಸಲಾಗಿದೆ. ಇಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೊಟ್ಟಲಗಿ ಇಂಚಗೇರಿ ಮಠದ ಶ್ರೀ ಸದ್ಗುರು ಮಾಧವಾನಂದ ಪ್ರಭುಜೀಯವರು ಪ್ರಭಾವ ಹಾಗೂ ಆಧುನಿಕ ರಾಜಕೀಯ ಪರಂಪರೆಗೆ ಸಂಬಂಧಿಸಿದ ವಿಚಾರಕ್ಕೆ ಪ್ರಾಮುಖ್ಯತೆಯನ್ನು ನೀಡಲಾಗಿದೆ.

"ಧಾರ್ಮಿಕ ಪರಂಪರೆ" ಕುರಿತು ಐದನೆಯ ಅಧ್ಯಾಯದಲ್ಲಿ ಅಧ್ಯಯನ ಕೈಗೊಂಡು ಇದರಲ್ಲಿ ಪ್ರಮುಖ ದೇವಾಲಯಗಳು ದೇವಾಲಯಗಳಲ್ಲಿನ ಆರಾಧನಾ ಸಂಪ್ರದಾಯಗಳು ಕೊಟ್ಟಲಗಿ ದೇವಾಲಯಗಳು ಸೂಚಿಸುವ ಸಾಂಸ್ಕೃತಿಕ ಸಂಬಂಧಗಳು (ಹೊಕ್ಕು ಬಳಕೆಗಳು) ಮುಂತಾದವುದನ್ನು ಪರಿಶೀಲಿಸಲಾಗಿದೆ.

ಅಧ್ಯಾಯ ಆರರಲ್ಲಿ ಗ್ರಾಮದ "ಕೃಷಿ ಪದ್ದತಿ" ಯನ್ನು ವಿವರವಾಗಿ ನೋಡಲಾಗಿದೆ. ಮುಂಗಾರು ಹಿಂಗಾರು, ಕೃಷಿ ಕ್ಷೇತ್ರ ಬೆಳೆಗಳು, ಕೃಷಿ ಪದ್ದತಿ, ಪ್ರಮುಖ ವಾಣಿಜ್ಯ ಬೆಳೆಗಳು, ಸಾಕುಪ್ರಾಣಿಗಳು, ಹೈನುಗಾರಿಕೆ, ತೋಟಗಾರಿಕೆ, ಗ್ರಾಮೀಣ ಸಮಾಜ ಮತ್ತು ಆಧುನಿಕ ಕೃಷಿಯ ಕುರಿತು ವಿವೇಚಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ "ಆಚರಣೆಗಳು" ಎಂದಿದ್ದು ಜೀವನಾವರ್ತನದ ಆಚರಣೆಗಳಾದ ಸೀಮಂತ, ಜನನ, ನಾಮಕರಣ, ಮದುವೆ, ಶವ ಸಂಸ್ಕಾರ ಮೊದಲಾದ ಇತರ ಸಂಪ್ರದಾಯಗಳು ಹಾಗೂ ವಾರ್ಷಿಕಾವರ್ತನದ ಆಚರಣೆಗಳನ್ನು ಸವಿವರವಾಗಿ ಗಮನಿಸಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ ಭಾಷೆ ಮತ್ತು ಸಾಹಿತ್ಯಕ್ಕೆ ಮೀಸಲಿರಿಸಲಾಗಿದೆ. ಅಲ್ಲಿನ ಪರಿಸರದಲ್ಲಿನ ಭಾಷೆ, ಶಿಷ್ಟ ಸಾಹಿತ್ಯ, ಜನಪದ ಸಾಹಿತ್ಯ, ಜನಪದ ಗೀತೆಗಳು, ಕಥೆಗಳು, ಕಥನ ಕಾವ್ಯ, ಗಾದೆ, ಒಡುಪುಗಳು, ಒಗಟು, ಬೈಗುಳಗಳು ಮೊದಲಾದ ಗ್ರಾಮದ ಜನಪದ ಸಾಹಿತ್ಯವನ್ನು ವಿಸ್ತೃತವಾದ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ ಒಂಬತ್ತರಲ್ಲಿ ಸಮಾರೋಪದ ಕುರಿತು ಒಟ್ಟು ಅಧ್ಯಯನದ ನೋಟ, ಅಧ್ಯಯನದ ಫಲಿತಗಳು, ಮುಂದಿನ ಅಧ್ಯಯನದ ಸಾಧ್ಯತೆಗಳು, ಅನುಬಂಧ, ಚಿತ್ರ ಸಂಪುಟಗಳು, ಕ್ಷೇತ್ರ ಕಾರ್ಯದ ಅನುಭವ ಹಾಗೂ ಉಪಸಂಹಾರ ಮಹಾಪ್ರಬಂಧದಲ್ಲಿ ಪ್ರಸ್ತಾಪಿತಗೊಂಡಿರುವ ಹಲವಾರು ವಿಷಯಗಳ ಸಾಂಸ್ಕೃತಿಕ ಮಹತ್ವ, ಸಾಮಾಜಿಕ ಸಂದರ್ಭದಲ್ಲಿ ಅವುಗಳ ಸ್ಥಾನಮಾನಗಳನ್ನು ಗಮನಿಸಲಾಗಿದೆ.

ಹೀಗೆ ಶಾಸನಗಳಿಂದ, ವೀರಗಲ್ಲುಗಳಿಂದ ದೇವಾಲಯ ಸ್ಮಾರಕಗಳು, ಕ್ಷೇತ್ರ ಕಾರ್ಯ, ವಕ್ತೃಗಳಿಂದ ಲಭ್ಯವಾದ ವಿವಿಧ ಮಾಹಿತಿಗಳನ್ನು ಕಲೆ ಹಾಕುವುದರೊಂದಿಗೆ ಸಮರ್ಥನೆಗಾಗಿ,

ಅರ್ಥ ಸ್ಪಷ್ಟತೆಗಾಗಿ ಇದುವರೆಗೆ ಬಂದ ಅಧ್ಯಯನಗಳ ನೆರವನ್ನು ಪಡೆಯಲಾಗಿದೆ. ಅಂದರೆ ಮೇಲೆ ತಿಳಿಸಿದ ಸಾಂಸ್ಕೃತಿಕ ವಿಚಾರಗಳನ್ನು ಅಧ್ಯಯನದ ಪೂರಕವಾಗಿ, ಪ್ರಾಸಂಗಿಕವಾಗಿ, ವಿಷಯದ ಸಮಗ್ರವಾದ ಚರ್ಚೆಯ ಖಚಿತತೆಗಾಗಿ ಬಳಸಿಕೊಂಡಿದ್ದೆನೆಯೇ ವಿನಹ ಯಾವುದೇ ಒಂದು ವಿಷಯದ ತಲಸ್ಪರ್ಷಿ, ಅಧ್ಯಯನ ನನ್ನ ವ್ಯಾಪ್ತಿಗೆ ಮೀರಿದ್ದು ಎಂಬುದು ನನ್ನ ನಂಬಿಕೆ. ಸಾಂಸ್ಕೃತಿಕ ಅಧ್ಯಯನ ವಿಚಾರಗಳ ಬಗ್ಗೆ ಹೇಳಬೇಕಾದ ಇನ್ನೊಂದು ವಿಷಯ ಏನೆಂದರೆ ಇಷ್ಟೇ ಮಿತಿಯ ಒಳಗಡೆಯು ರಚನೆಗೊಂಡ ನನ್ನ ಈ ಸಂಶೋಧನೆ ಸಮಗ್ರ ಅಧ್ಯಯನದ ಪ್ರಯತ್ನವೇ ಹೊರತು ಸಮಗ್ರ ಅಧ್ಯಯನವಲ್ಲ ಎಂಬುದನ್ನು ವಿನಮ್ರವಾಗಿ ತಿಳಿಸಬಯಸುತ್ತೇನೆ. ಕಾರಣ ಸಾಂಸ್ಕೃತಿಕ ವಿಚಾರಗಳ ವ್ಯಾಪ್ತಿ ಬಹಳ ವಿಸ್ತಾರವಾದುದು ಎನ್ನುವುದರ ಅರಿವು ನನಗಿದೆ.

೧.೬. ಅಧ್ಯಯನದ ಸಮೀಕ್ಷೆ

ಪ್ರಸ್ತುತ ಅಧ್ಯಯನದ ವಿಷಯ "ಕೊಟ್ಟಲಗಿ ಗ್ರಾಮ ಸಾಂಸ್ಕೃತಿಕ ಸಂಕಥನವಾಗಿದೆ". ನಿರ್ದಿಷ್ಟ ಪಡಿಸಿದ ಚೌಕಟ್ಟಿನಲ್ಲಿ ಇಲ್ಲಿನ ವಿವಿಧ ಸಾಂಸ್ಕೃತಿಕವಾದ ಆಯಾಮಗಳನ್ನು ಕುರಿತ ಅಧ್ಯಯನವಾಗಿದೆ. ಸಂಸ್ಕೃತಿಯನ್ನು ಕುರಿತು ಈಗಾಗಲೇ ಅನೇಕ ರೀತಿಯ ಅಧ್ಯಯನಗಳು ನಡೆದಿವೆ. ಅವುಗಳೆಲ್ಲ ಒಂದು ನಿರ್ದಿಷ್ಟವಾದ ಗ್ರಾಮ, ಜನಾಂಗ, ಆಚರಣೆ, ಸಂಪ್ರದಾಯಗಳಿಗೆ ಸಂಭಂದಿಸಿದವುಗಳಾಗಿವೆ. ಇಂದು ಹಲವಾರು ವಿದ್ವಾಂಸರು ಅಧ್ಯಯನಗಳು ತಲಸ್ಪರ್ಶಿಯಾಗಿ ನಡೆಯಬೇಕೆಂದು ಕರೆಕೊಡುತ್ತಿರುವುದು ಸರಿಯಷ್ಟೆ. ಈ ಹಿನ್ನಲೆಯಲ್ಲಿ ಹಲವು ಕೃತಿಗಳನ್ನು ನಾವು ಗಮನಿಸಿದಾಗ ಸಮಾಜವಿಜ್ಞಾನ, ಮಾನವವಿಜ್ಞಾನ ಅಥವಾ ಜಾನಪದ ಈ ಯಾವುದೇ ದೃಷ್ಟಿಯಿಂದ ಸಂಸ್ಕೃತಿಯ ಅಧ್ಯಯನ ಮಾಡುವಲ್ಲಿ ಬುಡಕಟ್ಟುಗಳಿಗಿರುವಷ್ಟೆ ಪ್ರಾಧಾನ್ಯತೆ ಗ್ರಾಮಗಳಿಗಿದ್ದರೂ ಗ್ರಾಮಗಳನ್ನು ಕುರಿತ ಹಾಗೆ ನಡೆದಿರುವ ಅಧ್ಯಯನಗಳು ತೀರಾ ಕಡಿಮೆ.

ಬುಡಕಟ್ಟುಗಳ ಅಧ್ಯಯನವು ಪ್ರಾರಂಭದಲ್ಲಿ ಬ್ರಿಟಿಷರ ಆಡಳಿತದ ಅನೂಕೂಲಕ್ಕಾಗಿ ಆದದ್ದು. ಅಬೆದುಬಾಯ ರಚಿಸಿದ Hindu manners, customs and ceremonies (೧೯೫೯) ಥರಸ್ಟನ್ ಅವರ omens and superstitions of south India (೧೯೧೨) ಎಚ್.ವಿ. ನಂಜುಡಯ್ಯ ಮತ್ತು ಎಲ್.ಕೆ. ಅನಂತಕೃಷ್ಣ ಅಯ್ಯರ ಅವರ The Mysore tribes and castesನ ನಾಲ್ಕು ಸಂಪುಟಗಳು (೧೯೨೮-೩೬) ಮೆಕೆಂಜಿಯ ಗಂಗಡಿಕಾರ ಒಕ್ಕಲಿಗರ ಕೈಪಿಯತ್ತು, ಕುಂಚಿ ಒಕ್ಕಲಿಗರ ಕೈಫಿಯತ್ತು ಮೊದಲಾದ ಕೃತಿಗಳು ಮಾನವ ವಿಜ್ಞಾನಕ್ಕೆ ಅಷ್ಟೆ ಅಲ್ಲ; ಜಾನಪದ ಅಧ್ಯಯನಕ್ಕೂ ಉಪಯುಕ್ತವಾಗುವ ಅನೇಕ ಅಮೂಲ್ಯ ಸಂಗತಿಗಳನ್ನು ಒಳಗೊಂಡಿದ್ದು ಗಮನಾರ್ಹವಾಗಿವೆ.

ಒಂದೊಂದು ಗ್ರಾಮವನ್ನೇ ಪ್ರತ್ಯೇಕವಾಗಿ ಅಧ್ಯಯನ ಮಾಡುವುದು ವಿಶೇಷವಾಗಿ ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದಂತೆಯೇ ಸಂಸ್ಕೃತಿಯ ಅಧ್ಯಯನಕ್ಕೂ ಸಂಬಂಧಿಸಿದುವು ಆಗಿವೆ. Beals Alan R ಗೋಪಾಲಪುರ ಡಾ. ಹೀರೆಮಲ್ಲೂರ ಕೆ. ಈಶ್ವರನ್ ಅವರ "ಭಾರತದ ಹಳ್ಳಿಗಳು", ಎಂ.ಎನ್.ಶ್ರೀನಿವಾಸ ಅವರ "ದಕ್ಷಿಣ ಭಾರತದ ಕೊಡವರ ಸಮಾಜ ಮತ್ತು ಧರ್ಮ" ಮೊದಲಾದವರು ಕೃತಿಗಳಲ್ಲಿ ಸ್ವಲ್ಪ ಮಟ್ಟಿಗೆ ಜಾನಪದೀಯ ಅಂಶಗಳಿದ್ದರೂ ಅವು ಮುಖ್ಯವಾಗಿ ಸಮಾಜ ವಿಜ್ಞಾನದ ಹಿನ್ನೆಲೆಪಡೆದವುಗಳಾಗಿವೆ.

ಇಡೀ ಗ್ರಾಮವನ್ನು ಜಾನಪದ ದೃಷ್ಟಿಕೋನದಿಂದ ಅಧ್ಯಯನ ಮಾಡಿರುವ ಕೃತಿಗಳೂ ಕೂಡಾ ನಮ್ಮಲ್ಲಿ ತೀರಾ ವಿರಳ. ಸಮಗ್ರ ಜಾನಪದದ ಕಲ್ಪನೆ ನಮಗೆ ತಡವಾಗಿ ಬಂದದ್ದು. ಇದಕ್ಕೆ ಮುಖ್ಯ ಕಾರಣವಾಗಿರಬೇಕು. ಆದರೆ ಅನಂತರವೂ ಬುಡಕಟ್ಟು ಇಲ್ಲವೇ ಜನಾಂಗಗಳನ್ನು ಕುರಿತು ನಡೆದಷ್ಟು ಅಧ್ಯಯನ ಗ್ರಾಮಗಳ ಬಗ್ಗೆ ನಡೆಯಲಿಲ್ಲವೆಂದೇ ಹೇಳಬಹುದು.

ನಡಕೇರಿಯಂಡ ಚಿಣ್ಣಪ್ಪ ಅವರ "ಪಟ್ಟೋಲೆ ಪಳಮೆ" ಕೊಡಗಿನ ಕೊಡವ ಜನಾಂಗದ ಮೌಖಿಕ ಸಂಸ್ಕೃತಿಯ ವಿವಿಧ ಮುಖಗಳನ್ನು ವಿವರವಾಗಿ ಪರಿಚಯಿಸುತ್ತದೆ. ಆ ಪ್ರದೇಶದ ಕೊಡವರೆಲ್ಲರಿಗೂ ಅನ್ವಯಿಸಬಹುದಾದ ಈ ವಿವರಗಳನ್ನು ಅವರು ತಮ್ಮ ಹುಟ್ಟೂರಿನಲ್ಲಿ ಸಂಗ್ರಹಿಸಿರಬಹುದು. ಆದರೂ ಇದು ಆ ಹಳ್ಳಿಯ ಕೊಡವರ ಸಂಸ್ಕೃತಿ ಎನ್ನಬಹುದೇ ಹೊರತು ಇಡೀ ಗ್ರಾಮಕ್ಕೆ ಅನ್ವಯಿಸುತ್ತದೆ ಎನ್ನಲಾಗುವುದಿಲ್ಲ. ಏಕೆಂದರೆ ಆ ಹಳ್ಳಿಗಳಲ್ಲಿ ಇತರ ಜನಾಂಗದವರು ಇದ್ದಾರೆ. ಇದಕ್ಕಿಂತ ಭಿನ್ನವಾದ ಪೂರ್ಣವಾಗಿ ಒಂದು ಊರಿನ ಜಾನಪದಕ್ಕೆ ಮಿಸಲಾದ ಅಪರೂಪದ ಕೃತಿ ಅರ್ಚಕ. ಬಿ. ರಂಗಸ್ವಾಮಿ ಅವರ "ಹುಟ್ಟಿದ ಹಳ್ಳಿ ಹಳ್ಳಿಯ ಹಾಡು" ಇದು ಅವರ ಹುಟ್ಟೂರಿನ ಜಾನಪದದ ವಿವಿಧ ಪ್ರಕಾರಗಳನ್ನು ಒಂದೆಡೆ ಮೊದಲ ಬಾರಿಗೆ ಸಂಗ್ರಹಿಸಿ ಕೊಟ್ಟ ಕೃತಿ. ಜಾನಪದ ಅಧ್ಯಯನ ದೃಷ್ಟಿಯಿಂದ ಗ್ರಾಮವೊಂದನ್ನು ಆರಿಸಿಕೊಂಡು ಯಾವ ಯಾವ ಮುಖದಿಂದ ಅಧ್ಯಯನ ಮಾಡಬಹುದು, ಸಂಸ್ಕೃತಿಯ ನೆಲೆಗಳು ಯಾವ ರೀತಿ ತೋರಿ ಬರುತ್ತವೆ ಎಂಬುದಕ್ಕೆ ಶ್ರೇಷ್ಠ ಮಾದರಿಯಾಗಿ ಆ ಕೃತಿ ಇಂದಿಗೂ ಅದ್ವಿತೀಯ ಎನಿಸಿದೆ.

ಬುಡಕಟ್ಟಿನ ಹಳ್ಳಿಯೊಂದನ್ನು ಕೇಂದ್ರವಾಗಿರಿಸಿಕೊಂಡು ಅಲ್ಲಿನ ಜಾನಪದವನ್ನು ಆಧುನಿಕ ದೃಷ್ಟಿಕೋನದಿಂದ ಸಮೀಕ್ಷಿಸುವ ಪ್ರಯತ್ನ ನಡೆದಿದ್ದು ಡಾ. ಕಾಳೆಗೌಡ ನಾಗವಾರ ಅವರಿಂದ. ಶಿರಾ ತಾಲ್ಲೂಕು ಬೇವಿನಹಳ್ಳಿಯ ಬುಡಕಟ್ಟಿನ ಗೊಲ್ಲರ ಹಟ್ಟಿಯ ಜಾನಪದವನ್ನು ಕುರಿತದ್ದು. ಈ ಬಗೆಯ ಬದಲಾಗುತ್ತಿರುವ ಒಂದು ಪ್ರತ್ಯೇಕ ಬುಡಕಟ್ಟಿನ ಹಲವು ಅಥವಾ ಸಣ್ಣ ಹಳ್ಳಿಯೊಂದರ ಸಮಸ್ತ ಜಾನಪದವನ್ನು ಕುರಿತು ವಿವೇಚಿಸಲಾಗುತ್ತಿರುವ ಅಧ್ಯಯನಗಳಲ್ಲಿ ಇದು ಮೊದಲನೆಯದಾಗುತ್ತದೆ ಎಂದು ಅವರು ತಮ್ಮ ಅಧ್ಯಯನದ ಬಗ್ಗೆ ಹೇಳಿಕೊಂಡಿದ್ದಾರೆ.

ಡಾ. ಟಿ ಗೋವಿಂದರಾಜು ಅವರ 'ಚನ್ನಾದೇವಿ ಅಗ್ರಹಾರ ಜಾನಪದೀಯ ಅಧ್ಯಯನ' ಕೃತಿ ಸಂಪೂರ್ಣವಾಗಿ ಗ್ರಾಮವೊಂದನ್ನು ಜಾನಪದೀಯ ದೃಷ್ಟಿಯಲ್ಲಿ ಅಭ್ಯಸಿಸಿದ ಕೃತಿಯಾಗಿದೆ. ಚನ್ನಾದೇವಿ ಅಗ್ರಹಾರದ ಜೊತೆಗೆ ಪಾಳ್ಯವನ್ನು ಒಳಗೊಂಡಿದೆ. ಮೇಲೆ ಹೇಳಲಾದ ನಾಗವಾರರ ಗೊಲ್ಲರ ಹಟ್ಟಿ ಒಂದೇ ಜಾತಿಯ ಒಂದೇ ಕಸುಬಿನವರಿಂದ ಕೂಡಿದ ಒಂದು ಬುಡಕಟ್ಟಿನ ಘಟಕ. ಆದರೆ ಚನ್ನಾದೇವಿ ಅಗ್ರಹಾರ ಗ್ರಾಮ ಹತ್ತು ಹದಿನೆಂಟು ಜಾತಿಯವರಿಂದ ಕಸುಬಿನವರಿಂದ ಆದ ಒಂದು ಸಾಮಾಜಿಕ ಘಟಕ. ಇದರಿಂದ ಎರಡು ಅಧ್ಯಯನಗಳಿಗಿರುವ ವಿಷಯ ವ್ಯಾಪ್ತಿಯ ವ್ಯತ್ಯಾಸವನ್ನು ತಿಳಿಯಬಹುದು.

ಡಾ. ಎಚ್ ಪಿ ಮಂಜುಳಾ ಅವರ "ನಂಜನಗೂಡು ಒಂದು ಸಾಂಸ್ಕೃತಿಕ ಅಧ್ಯಯನ" ಕೃತಿಯು ತಾಲ್ಲೂಕಾ ಕೇಂದ್ರವಾದ ಚಾರಿತ್ರಿಕ ಪುರಾಣ ಪುಣ್ಯ ಪ್ರಸಿದ್ಧ ಸ್ಥಳವಾಗಿ ಸುಪ್ರಸಿದ್ಧಿ ಪಡೆದ ನಂಜನಗೂಡನ್ನು ಸಾಂಸ್ಕೃತಿಕ ದೃಷ್ಟಿಯಲ್ಲಿ ಅಭ್ಯಸಿಸಿದ ಕೃತಿಯಾಗಿದೆ.

ಹಾಗೆಯೇ ಡಾ. ಎ.ಸಿ. ಪಾರ್ಥ ಅವರ "ರಾಮನಗರ ಒಂದು ಸಾಂಸ್ಕೃತಿಕ ಅಧ್ಯಯನ" ಕೃತಿಯು ಕೂಡಾ ಚಾರಿತ್ರಿಕ ಐತಿಹಾಸಿಕ, ವಾಸ್ತುಶಿಲ್ಪ ಶಾಸನಗಳ ಬೀಡಾದ ರಾಮನಗರ ತಾಲ್ಲೂಕನ್ನು ಸಾಂಸ್ಕೃತಿಕ ದೃಷ್ಟಿಯಲ್ಲಿ ನೋಡಿದ ಕೃತಿಯಾಗಿದೆ.

ಡಾ. ಕೆ.ವಿ. ಚಂದ್ರಣ್ಣಗೌಡ ಅವರ "ಸುಗ್ಗನಹಳ್ಳಿ ಒಂದು ಸಾಂಸ್ಕೃತಿಕ ಅಧ್ಯಯನವೂ" ಸಾಂಸ್ಕೃತಿಕ ನೆಲೆಯಲ್ಲಿ ಸುಗ್ಗನಹಳ್ಳಿ ಗ್ರಾಮವನ್ನು ಅಭ್ಯಸಿಸಿದ ಕೃತಿಯಾಗಿದೆ.

ಅದೇ ರೀತಿಯಾಗಿ ಡಾ. ಅರ್ಜುನಗೋಳಸಂಗಿಯವರ "ಗೋಳಸಂಗಿ ಗ್ರಾಮ ಒಂದು ಸಾಂಸ್ಕೃತಿಕ ಅಧ್ಯಯನ"ವು ಒಂದು ಅಧ್ಯಯನಪೂರ್ಣ ಸಂಶೋಧನಾ ಪ್ರಬಂಧವಾಗಿದೆ.

ಪ್ರೊ. ವಿಲಾಸ ಕಾಂಬಳೆಯವರ ಅಥಣಿ ತಾಲೂಕಿನ ಸಾಂಸ್ಕೃತಿಕ ಅಧ್ಯಯನವು ತಾಲೂಕಿನ ಹಲವು ಗ್ರಾಮಗಳ ಪ್ರಾಚೀನ ಪರಂಪರೆ, ಕಲೆ, ವಾಸ್ತುಶಿಲ್ಪ, ಶಾಸನ ಮುಂತಾದ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆ. ಜೊತೆಗೆ ಪ್ರಸ್ತುತ ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಂತೆ ಕೊಟ್ಟಲಗಿಯ ಪ್ರಾಚೀನ ಕೆಲವು ದೇವಾಲಯ, ಮೂರ್ತಿಶಿಲ್ಪದ ವಿಚಾರ, ಕೆಲವು ಸ್ವಾತಂತ್ರ್ಯೋಧರ ಕುರಿತು ಆಂಶಿಕವಾಗಿ ಪರಿಚಯಿಸುತ್ತದೆ. ಇದು ಸಮಗ್ರ ತಾಲೂಕಿನ ವಿಷಯ ವ್ಯಾಪ್ತಿಯನ್ನು ಒಳಗೊಂಡಿರುವುದರಿಂದ ತಾಲೂಕಿನ ಎಲ್ಲ ಗ್ರಾಮಗಳ ವಿಚಾರ ವಿವರಿಸುವುದು ಕಷ್ಟದಾಯಕವಾಗಿದೆ. ಈ ಕಾರಣದಿಂದ ಹಲವಾರು ಗ್ರಾಮಗಳನ್ನು ಆಂಶಿಕವಾಗಿ ಅಭ್ಯಸಿಸಲಾಗಿದೆ. ಇದರಿಂದ ಒಂದೇ ಅಧ್ಯಯನ ಕೃತಿಯಲ್ಲಿ ಸಂಪೂರ್ಣ ವಿವರವಾದ ಅಧ್ಯಯನ ಅಸಾಧ್ಯವಾಗಿದೆ.

ಡಾ. ಶೀವಲೀಲಾ ಕೆ. ಲೋಕೇಶ ಅವರ "ಕಮಲಾಪೂರ ಒಂದು ಸಾಂಸ್ಕೃತಿಕ ಅಧ್ಯಯನವು ಗ್ರಾಮದ ಸಾಂಸ್ಕೃತಿಕ ವೈಶಿಷ್ಟಗಳನ್ನು ಸುದೀರ್ಘವಾಗಿ ಏಳು ಅಧ್ಯಾಯಗಳಲ್ಲಿ ಗಮನಿಸಲಾಗಿದೆ, ಹಾಗೆಯೇ ವಿಜಯಲಕ್ಷ್ಮಮ್ಮಜೀ ಅವರ "ನೆಲಮಂಗಲ ತಾಲ್ಲೂಕು ಸಾಂಸ್ಕೃತಿಕ ಅಧ್ಯಯನ" ನೆಲಮಂಗಲದ ಸ್ಥಳೀಯ ಇತಿಹಾಸದೊಂದಿಗೆ ಆಧುನಿಕ ಪ್ರಕ್ರಿಯೆಯಾದ ಕೈಗಾರಿಕರಣ, ನಗರೀಕರಣ, ಜಾಗತೀಕರಣ ಆಧುನಿಕ ಶಿಕ್ಷಣದಿಂದಾಗಿ ವಿವಿಧ ಚಾರಿತ್ರಿಕ ಆಚಾರ ವಿಚಾರ ಭಾಷೆಯ ಮೇಲೆ ಆಗಿರುವ ಪರಿಣಾಮಗಳನ್ನು ಅಭ್ಯಸಿಸಲಾಗಿದೆ.

ಪ್ರಸ್ತುತ ವಿಷಯದ ವ್ಯಾಪ್ತಿ ಭೌಗೋಳಿಕವಾಗಿ ಒಂದು ಎಲ್ಲೆ ಕಟ್ಟಿಗೆ ಸೀಮಿತವಾಗಿದ್ದರೂ; ಇಲ್ಲಿನ ಇತಿಹಾಸ, ಧರ್ಮ, ಭಾಷೆ, ವಿವಿಧ ಜಾತಿ, ಜನಾಂಗಗಳು, ಬುಡಕಟ್ಟುಗಳು, ಆಚರಣೆ, ನಂಬಿಕೆ, ಸಂಪ್ರದಾಯಗಳು, ಜಾತ್ರೆ, ಹಬ್ಬಹರಿದಿನಗಳು, ಉತ್ಸವಗಳು, ಕೃಷಿಗೆ ಸಂಬಂಧಿಸಿದ ಪದ್ದತಿಗಳು ಮತ್ತು ಸಾಮಾಜಿಕ, ಆರ್ಥಿಕ, ರಾಜಕೀಯವಾದ ಸ್ಥಿತಿಗತಿಗಳನ್ನು ಕುರಿತದ್ದಾಗಿದೆ. ಪ್ರತಿಯೊಂದು ವಿಷಯವನ್ನು ಪ್ರತ್ಯೇಕವಾದ ಅಧ್ಯಯನಕ್ಕೆ ಒಳಪಡಿಸುವುದು ಅಸಾಧ್ಯವಾದುದು. ನಿರ್ದಿಷ್ಟ ಪಡಿಸಿಕೊಂಡಿರುವ ವ್ಯಾಪ್ತಿಯಲ್ಲಿನ ಸಾಂಸ್ಕೃತಿಕ ಅಂಶಗಳನ್ನು ಅಧಿಕೃತವಾದ ದಾಖಲೆಗಳು ಮತ್ತು ಕ್ಷೇತ್ರ ಕಾರ್ಯದ ಮೂಲಕ ದೊರೆತಿರುವ ಮಾಹಿತಿಯನ್ನಾಧರಿಸಿದ ಅಧ್ಯಯನವಾಗಿದೆ.

ಅಡಿ ಟಿಪ್ಪಣಿಗಳು

೧. ಡಾ. ಎಂ ಚಿದಾನಂದಮೂರ್ತಿ, ಪಗರಣ, ೧೯೮೪, ಪುಸ್ತಕ ಚಿಲುಮೆ ಮೈಸೂರು, ಪು ೧೫೪

೨. ಡಾ. ಎಂ ಚಿದಾನಂದಮೂರ್ತಿ, ಗ್ರಾಮೀಣ, ೧೯೭೭, ಭಾಷ್ಕೊ ಪ್ರಕಾಶನ, ಬೆಂಗಳೂರು ಪುಟ ೧೧೩

೩. ಭಾರತದ ಹಳ್ಳಿಗಳು ಡಾ. ಎಂ ಹಿರೇಮಲ್ಲೂರು ಈಶ್ವರನ್, ಮೈಸೂರು ವಿವಿ ಪ್ರಸಾರಾಂಗ ಮೈಸೂರು, ೧೯೭೨

೪. ಜಾನಪದ ಜೀ.ಶಂ.ಪರಮಶಿವಯ್ಯ, ಸಾಹಿತ್ಯ ಸದನ ಮೈಸೂರು, ೧೯೭೯, ಪುಟ ೩೯

ಅಧ್ಯಾಯ ೨

ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

೨.೧. ಭೌಗೋಳಿಕ ಹಿನ್ನೆಲೆ
೨.೨. ಪ್ರಾಕೃತಿಕ ಸ್ವರೂಪ
೨.೩. ಭೂ ರಚನೆ
೨.೪. ವಾಯುಗುಣ
೨.೫. ಮಳೆ
೨.೬. ಉಷ್ಣಾಂಶ
೨.೭. ಜಲ ಸಂಪತ್ತು
೨.೮. ಸ್ವಾಭಾವಿಕ ಸಸ್ಯವರ್ಗ
೨.೯. ಪ್ರಾಣಿ ಮತ್ತು ಪಕ್ಷಿ ಸಂಕುಲ
೨.೧೦. ಮಣ್ಣು
೨.೧೧. ಬೆಳೆಗಳು
೨.೧೨. ಚಿಕ್ಕ ಹಾಗೂ ಗುಡಿ ಕೈಗಾರಿಕೆ
೨.೧೩. ಸಾರಿಗೆ ಸಂಪರ್ಕ
೨.೧೪. ಗ್ರಾಮದ ಸ್ವ ವಿವರ ಕೋಷ್ಟಕ
೨.೧೫. ಕೊಟ್ಟಲಗಿ ಚಾರಿತ್ರಿಕ ನೆಲೆ

ಅಧ್ಯಾಯ ೨

ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

೨.೧. ಭೌಗೋಳಿಕ ಹಿನ್ನೆಲೆ

ಮನುಷ್ಯ ಅಥವಾ ಯಾವುದೇ ಜೀವಿ ಏಕಾಂಗಿ ಅಲ್ಲ. ಅವನ ಸುತ್ತಮುತ್ತ ಅನೇಕ ಜೈವಿಕ ಮತ್ತು ಅಜೈವಿಕ ವಸ್ತುಗಳು ಹಬ್ಬಿವೆ. ವೈವಿಧ್ಯಮಯವಾದ ಕ್ರಿಮಿ, ಕೀಟ, ಪಕ್ಷಿ, ಪ್ರಾಣಿ ಮತ್ತು ಮಾನವ, ಮಣ್ಣು, ಕಲ್ಲು, ಗುಡ್ಡ, ಪರ್ವತ, ಖನಿಜಗಳು, ಸಸ್ಯ, ಮರ ಗಿಡ, ಬಳ್ಳಿಗಳು, ಹಳ್ಳ, ನದಿ, ಸರೋವರ, ಸಾಗರಗಳು, ಗಾಳಿ, ಬೆಳಕು, ಹಗಲು, ರಾತ್ರಿ ಋತುಗಳು, ಚಂದ್ರ, ಸೂರ್ಯ, ಗ್ರಹ ನಕ್ಷತ್ರಾಧಿಗಳು ಪರಿಸರ ಎಂಬ ಪರಿಕಲ್ಪನೆಯಲ್ಲಿ ಸೇರಿಸಬಹುದು. ಈ ಎಲ್ಲ ಗೋಚರ, ಅಗೋಚರ ಜಡ ಮತ್ತು ಚಲನಶೀಲ ವಸ್ತುಗಳೆಲ್ಲ ಭೌಗೋಳಿಕ ಪರಿಸರವನ್ನು ಒಳಗೊಂಡಿವೆ.

ಪರಿಸರವು ವೈವಿಧ್ಯಮಯ, ಸಂಕೀರ್ಣ ಮತ್ತು ಅನೇಕ ಮುಖಗಳುಳ್ಳದ್ದು. ಸಾಮಾನ್ಯವಾಗಿ ಪರಿಸರದಲ್ಲಿ ಎರಡು ಸ್ಥೂಲ ಭಾಗಗಳಿರುತ್ತವೆ. ಮೊದಲನೆಯದು ಜೀವಿ ಸಂಕುಲ, ಎರಡನೆಯದು ನಿರ್ಜೀವ ವಸ್ತುಗಳ ಸಮೂಹ. ಮೊದಲನೆಯದರಲ್ಲಿ ಸಸ್ಯ, ಮರ, ಗಿಡ, ಬಳ್ಳಿ, ಕ್ರಿಮಿ, ಕೀಟ, ಪಕ್ಷಿ, ಪ್ರಾಣಿ ಹಾಗೂ ಮಾನವ ಎರಡನೆಯದರಲ್ಲಿ ಮಣ್ಣು, ಕಲ್ಲು, ಖನಿಜ, ನೀರು, ಗಾಳಿ, ಬೆಳಕು, ಶಾಖ, ಗ್ರಹ, ನಕ್ಷತ್ರ ಇತ್ಯಾದಿಗಳು ಸೇರುತ್ತವೆ.

ಮನುಷ್ಯನೂ ಕೂಡ ಒಂದು ಜೀವಿಯೇ. ಆದರೆ ಉಳಿದೆಲ್ಲ ಜೀವಿಗಳಿಗಿಂತ ತೀರ ಭಿನ್ನ. ಎಂಥದೇ ಪರಿಸರದಲ್ಲಾದರೂ ಬದುಕಬಲ್ಲ. ಅವನ ಸಂಖ್ಯೆಯು ಅಪಾರ; ಜೊತೆಗೆ ಪೃಥ್ವಿಯ ಉದ್ದ ಅಗಲಕ್ಕೂ ಹರಡಿದ್ದಾನೆ. ನಿಸರ್ಗದಲ್ಲಿ ಅನುಕೂಲಕ್ಕೆತಕ್ಕಂತೆ ಮಾರ್ಪಾಡು ಮಾಡಿಕೊಂಡು ಜೀವಿಸಬಲ್ಲಂಥ ಬುದ್ಧಿವಂತ ಪ್ರಾಣಿ. ಇತರ ಪ್ರಾಣಿಗಳಿಗಿಂತ ಪರಿಸರವನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಳ್ಳಬಲ್ಲ. ಮಾನವನಲ್ಲಿ ಕಲಿಕೆಯ ಸಾಮರ್ಥ್ಯವಿದೆ. ಇನ್ನಿತರ ಜೀವಿಗಳು ಹೆಚ್ಚಾಗಿ ಪರಿಸರಕ್ಕೆ ಹೊಂದಿಕೊಂಡು ಬಾಳುವಂಥವು. ಇಂಥ ಸಂಕೀರ್ಣವಾದ, ಬಹುಮುಖಿಯಾದ ಪರಿಸರವನ್ನು ಮಾನವ ಹಾಗೂ ಪರಿಸರಗಳ ನಡುವಿನ ಅನ್ಯೋನ್ಯ ಸಂಬಂಧಗಳನ್ನು ಮತ್ತು ಅದರಲ್ಲಿನ ವಿದ್ಯಮಾನಗಳ ಕಾರಣ, ಪರಿಣಾಮಗಳನ್ನು ಮಾನವನು ಸುಮಾರು ಒಂದೂವರೆ ಶತಮಾನಗಳಿಂದೀಚೆಗೆ ತನ್ನ ಅಧ್ಯಯನ ಕಕ್ಷೆಗೆ ಒಳಪಡಿಸುತ್ತಾ ಬಂದಿದ್ದಾನೆ.

ಮಾನವನ ಜೀವನದ ಮೇಲೆ ಭೌಗೋಳಿಕ ಅಂಶಗಳ ಪ್ರಭಾವ ಅಪಾರ. ಅದಕ್ಕೆಂದೆ ಪ್ರದೇಶದಿಂದ ಪ್ರದೇಶಕ್ಕೆ ಜೀವನದ ಶೈಲಿ ಭಿನ್ನವಾಗಿರುವುದು. ಕೇವಲ ಪ್ರಾಥಮಿಕ ಅವಶ್ಯಕತೆಗಳಾದ

ಅನ್ನ, ಬಟ್ಟೆ ಮತ್ತು ವಸತಿಗಳ ಮೇಲೆ ಅಷ್ಟೇ ಭೌಗೋಳಿಕ ಪ್ರಭಾವ ಇಲ್ಲ. ಮಾನವನ ಉತ್ಕೃಷ್ಟ ಸೃಷ್ಟಿಗಳಾದ ಕಲೆ, ವಿಜ್ಞಾನ, ಸಾಹಿತ್ಯ ಮತ್ತಿತರ ಸಾಂಸ್ಕೃತಿಕ ಅಂಶಗಳ ಮೇಲೆಲ್ಲ ಆಯಾ ಪ್ರದೇಶದ ಭೌಗೋಳಿಕ ಪರಿಸರದ ಪ್ರಭಾವ ತನ್ನ ಪಡಿಯಚ್ಚನ್ನು ಮೂಡಿಸಿರುತ್ತದೆ.

ಇಂದು ಎಲ್ಲ ಕ್ಷೇತ್ರಗಳಲ್ಲಿ ಮುಂದುವರೆದಂತೆ ಮಾನವ ತಾಂತ್ರಿಕ ಕೌಶಲ್ಯಗಳ ಕ್ಷೇತ್ರಗಳಲ್ಲಿ ಬಹುಮುಂದೆ ಸಾಗಿದ್ದಾನೆ. ಹಾಗೆಂದೇ ಮಾನವನ ಅನ್ವೇಷಣೆ ಮತ್ತು ಸಾಧನೆಗಳು ಆಗಾಧವಾಗಿವೆ. ಇದರಿಂದಾಗಿ ಮಾನವ ಭೌಗೋಳಿಕ ಸಂಗತಿಗಳ ಮೇಲೆ ತನ್ನದೆ ಆದ ಪ್ರಭಾವ ಬೀರುತ್ತಿದ್ದಾನೆ. ಹೀಗಾಗಿ ಇಂದಿನ ಸುಧಾರಣೆಗೊಂಡ ಜೀವನ ಮಟ್ಟಕ್ಕೆ ಎರಡು ಅಂಶಗಳು ಪ್ರಮುಖ ಕಾರಣವಾಗಿವೆ. ೧) ವೈವಿಧ್ಯಮಯವಾಗಿರುವ ನೈಸರ್ಗಿಕ ಸಂಪನ್ಮೂಲಗಳು ೨) ಬುದ್ಧಿಶಕ್ತಿ ಸಂಪೂರಿತ ಮಾನವ ಸಂಪನ್ಮೂಲ. ಹೀಗಾಗಿ ಯಾವುದೇ ಒಂದು ಪ್ರದೇಶದ ಆರ್ಥಿಕತೆ ಯನ್ನಾಗಲೀ, ಸಾಮಾಜಿಕ ಸ್ಥಿತಿಗತಿಯನ್ನಾಗಲೀ; ಉದ್ಯೋಗಗಳನ್ನಾಗಲೀ ಮತ್ತು ಸಾಂಸ್ಕೃತಿಕ ಅಂಶಗಳನ್ನು ಅಧ್ಯಯನಿಸುವಾಗ ಅಲ್ಲಿನ ಭೌಗೋಳಿಕ ಹಿನ್ನೆಲೆ ಗಮನಿಸುವುದು ಅತ್ಯಂತ ಅಗತ್ಯವಾದ ಕಾರ್ಯವಾಗಿದೆ. ಅಂದಾಗ ಯಾವುದೇ ಕ್ಷೇತ್ರದ ಸಮಗ್ರ ಅಧ್ಯಯನ ಪೂರ್ಣವಾದಂತಾಗುತ್ತದೆ.

೨.೨. ಪ್ರಾಕೃತಿಕ ಸ್ವರೂಪ

ಕರ್ನಾಟಕ ರಾಜ್ಯ ವೈವಿಧ್ಯಮಯ ಪ್ರಾಕೃತಿಕ ಸ್ವರೂಪ ಹೊಂದಿರುವ ರಾಜ್ಯ ಭೂಸ್ವರೂಪದ ದೃಷ್ಟಿಯಿಂದ ಸ್ಥೂಲವಾಗಿ ರಾಜ್ಯವನ್ನು ಮೂರು ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ.

೧. ಕರಾವಳಿ

೨. ಮಲೆನಾಡು

೩. ಮೈದಾನ

ಬೆಳಗಾವಿ ಜಿಲ್ಲೆಯ ಬಹುಭಾಗ (ನೈಋತ್ಯದ ಪಶ್ಚಿಮ ಘಟ್ಟ ಹೊರತುಪಡಿಸಿ) ಮೈದಾನ ಪ್ರದೇಶವಾಗಿದೆ. ಇದರಲ್ಲಿ ಅಥಣಿ ತಾಲೂಕು ಪೂರ್ಣವಾಗಿ ಮೈದಾನದಡಿ ಹಂಚಿಕೆಯಾಗಿದ್ದು ಈ ಮೈದಾನ ಕಪ್ಪು (ಬಸಾಲ್ಟ) ಶಿಲೆಗಳಿಂದ ನಿರ್ಮಿತವಾಗಿದೆ. ಆದ್ದರಿಂದ ಕೊಟ್ಟಲಗಿ ಗ್ರಾಮವು ಕೂಡಾ ಮೈದಾನ ಪ್ರದೇಶದ ಭಾಗವೆಂಬುದು ವಿಧಿತವಾಗುತ್ತದೆ.

ಸ್ಥಾನ, ಸನ್ನಿವೇಶ, ವಿಸ್ತೀರ್ಣ

ಬೆಳಗಾವಿ ಜಿಲ್ಲೆಯನ್ನು ಪ್ರಾಕೃತಿಕವಾಗಿ ಮೂರು ವಲಯಗಳನ್ನಾಗಿ ಗುರುತಿಸಬಹುದು.

೧. ಪಶ್ಚಿಮಘಟ್ಟ ವಲಯ

೨. ಅರೆ ಮಲೆನಾಡು

೩. ಶುಷ್ಕ ಮೈದಾನ ವಲಯ

ಅಥಣಿ ತಾಲೂಕು ಶುಷ್ಕ ಮೈದಾನ ವಲಯದಲ್ಲಿ ಸ್ಥಾಪಿತವಾಗಿದೆ.

ಸ್ಥಾನ

ಅಥಣಿ ತಾಲೂಕು ೧೬೦೩೦ ಉತ್ತರ ಅಕ್ಷಾಂಶದಿಂದ ೧೬೦೫೮ ಉತ್ತರ ಅಕ್ಷಾಂಶಗಳ ಮಧ್ಯ ಹಾಗೂ ೭೪೦೪೦ ಪೂರ್ವ ರೇಖಾಂಶದಿಂದ ೭೫೦೨೧ ಪೂರ್ವ ರೇಖಾಂಶಗಳ ಮಧ್ಯದಲ್ಲಿ ಹರಡಿಕೊಂಡಿದೆ. ಸಮುದ್ರ ಮಟ್ಟದಿಂದ ಸರಾಸರಿ ೪೫೦ ರಿಂದ ೮೦೦

ಮೀ.ಎತ್ತರದಲ್ಲಿದೆ. ಬೆಳಗಾವಿ ಜಿಲ್ಲೆ ಹತ್ತು ತಾಲೂಕುಗಳನ್ನು ಒಳಗೊಂಡಿದೆ. ಅಥಣಿ ತಾಲೂಕು ಬೆಳಗಾವಿ ಜಿಲ್ಲೆಯಲ್ಲಿಯೇ ವಿಸ್ತೀರ್ಣದಲ್ಲಿ ಹಿರಿಯದಾದುದು. ೧೯೯೭ ಚದುರ ಕೀ.ಮಿ. ವಿಸ್ತೀರ್ಣ ಹೊಂದಿದೆ. ಅದರಂತೆ ಕೊಟ್ಟಲಗಿ ಗ್ರಾಮವು ೧೧೮೮೧೬ ಏಕರೆ ೧ ಗುಂಟ ವಿಸ್ತೀರ್ಣ ಹೊಂದಿದೆ. ತಾಲೂಕಿನ ವಾಡಿಕೆಯ ಮಳೆ ಪ್ರಮಾಣ ೫೮೭.೯ ಮೀ.ಮಿ. ಇದ್ದು; ತೆಲಸಂಗ ಹೋಬಳಿಯಲ್ಲಿ ಮಳೆ ವಾರ್ಷಿಕ ಸರಾಸರಿ ೩೩೭.೫ ಮೀ.ಮಿ. ದಾಖಲಾದದ್ದು ಕಂಡುಬರುತ್ತದೆ. ಜಿಲ್ಲೆಯ ಸರಾಸರಿ ಮಳೆ ೫೯೬ ಮೀ.ಮಿ. ಇದ್ದು ಜಿಲ್ಲೆ ಹಾಗೂ ತಾಲೂಕಿನ ಸರಾಸರಿಗಿಂತ ತೆಲಸಂಗ ಹೋಬಳಿಯಲ್ಲಿ ಮಳೆ ಕಡಿಮೆ ಆಗಿರುವುದು ಕಂಡು ಬರುತ್ತದೆ.

ಅಥಣಿ ತಾಲೂಕು ಬೆಳಗಾವಿ ಜಿಲ್ಲೆಯ ಉತ್ತರಕ್ಕಿದೆ. ಈ ತಾಲೂಕು ಮಹಾರಾಷ್ಟ್ರಕ್ಕೆ ಹೊಂದಿಕೊಂಡಿರುವುದರಿಂದ ಗಡಿ ಜಿಲ್ಲೆಯ ಗಡಿ ತಾಲೂಕ ಆಗಿದೆ. ಉತ್ತರ ಮತ್ತು ಪಶ್ಚಿಮಕ್ಕೆ ಮಹಾರಾಷ್ಟ್ರ ರಾಜ್ಯವಿದೆ. ಕೋಲ್ಹಾಪೂರ, ಸಾಂಗಲಿ ಜಿಲ್ಲೆಗಳು ಗಡಿ ಪ್ರದೇಶಗಳಾಗಿವೆ. ಈಶಾನ್ಯ ಮತ್ತು ಪೂರ್ವದಲ್ಲಿ ವಿಜಾಪೂರ ಜಿಲ್ಲೆಯಿದೆ. ಆಗ್ನೇಯದಲ್ಲಿ ಬಾಗಲಕೋಟ ಜಿಲ್ಲೆ, ದಕ್ಷಿಣಕ್ಕೆ ರಾಯಬಾಗ ತಾಲೂಕು ಮತ್ತು ನೈಋತ್ಯದಲ್ಲಿ ಚಿಕ್ಕೋಡಿ ತಾಲೂಕನ್ನು ಹೊಂದಿದೆ.

ಕೊಟ್ಟಲಗಿ ಗ್ರಾಮವು ಅಥಣಿ ಪಟ್ಟಣದಿಂದ ಈಶಾನ್ಯ ಹಾಗೂ ಉತ್ತರಕ್ಕೆ ಇದೆ. ಈ ಗ್ರಾಮವು ಉತ್ತರ ಮತ್ತು ಪಶ್ಚಿಮಕ್ಕೆ ಮಹಾರಾಷ್ಟ್ರದ ಗಡಿಯನ್ನು ಹೊಂದಿದೆ. ಉತ್ತರಕ್ಕೆ ಜತ್ತ ತಾಲೂಕಿನ ಮುಚ್ಚಂಡಿ ಗ್ರಾಮ. ವಾಯುವ್ಯಕ್ಕೆ ಜತ್ತ ತಾಲೂಕಿನ ರಾವಳಗುಂಡವಾಡಿ ಗ್ರಾಮವನ್ನು ಮೇರೆಯಾಗಿ ಹೊಂದಿದೆ. ಪಶ್ಚಿಮಕ್ಕೆ ಜತ್ತ ತಾಲೂಕಿನ ಖೋಜನವಾಡಿ ಗ್ರಾಮವು ಮೇರೆ. ಆದರೆ ನೈಋತ್ಯಕ್ಕೆ ಇತಿಹಾಸ ಪ್ರಸಿದ್ದ ಜತ್ತ ತಾಲೂಕಿನ ಉಂಬರವಾಣಿ ಗ್ರಾಮವನ್ನು ಗಡಿಯಾಗಿ ಹೊಂದಿದೆ. ಅಂದರೆ ಉತ್ತರ ವಾಯವ್ಯ ಪಶ್ಚಿಮ ಮತ್ತು ನೈಋತ್ಯ ಭಾಗದಲ್ಲಿ ಮಹಾರಾಷ್ಟ್ರದ ಜತ್ತ ತಾಲೂಕನ್ನು ಮೇರೆಯಾಗಿ ಹೊಂದಿರುವ ಗಡಿ ಗ್ರಾಮ. ಪೂರ್ವಕ್ಕೆ ವಿಜಾಪೂರ ಜಿಲ್ಲೆಯ ಇತಿಹಾಸ ಪ್ರಸಿದ್ದ ಗ್ರಾಮವಾದ ಕನಮಡಿ ಮೇರೆಯಾಗಿದೆ. ಆಗ್ನೇಯಕ್ಕೆ ಸ್ವಂತ ತಾಲೂಕಿನ ಬನ್ನೂರ ಗ್ರಾಮ ಹಾಗೂ ದಕ್ಷಿಣಕ್ಕೆ ಕೂಡ ಅಥಣಿ ತಾಲೂಕಿನ ಇತಿಹಾಸ ಪ್ರಸಿದ್ದ ಕಕಮರಿ ಗ್ರಾಮವನ್ನು ಮೇರೆಯಾಗಿ ಹೊಂದಿದೆ.

೨.೩ ಭೂ ರಚನೆ

ಸಾಮಾನ್ಯವಾಗಿ ಬೆಳಗಾವಿ ಜಿಲ್ಲೆಯ ಶಿಲಾ ರಚನೆಯಲ್ಲಿ ಕಂಡುಬರುವ ಶಿಲಾ ವರ್ಗಗಳೆಂದರೆ ಪ್ರಮುಖವಾಗಿ ೧) ಧಾರವಾಡ ಶ್ರೇಣಿ ನೈಸ್ (ಸ್ಪಟಿಕ ಪಟ್ಟಿಶಿಲೆ) ರಚನೆ, ಕಲಾದಗಿ ಶ್ರೇಣಿ ಹಾಗೂ ೨) ದಖನ್ ಪದರುಗಲ್ಲು (Deccan Trap) ಇದರಲ್ಲಿ ದಖನ್ ಪದರುಗಲ್ಲು ಪ್ರದೇಶದಲ್ಲಿ ಅಥಣಿ ತಾಲೂಕು ಹಂಚಿಕೆಯಾಗಿದೆ. ಪ್ರಮುಖವಾಗಿ ಕೊಟ್ಟಲಗಿ ಗ್ರಾಮದಲ್ಲಿ ಪೂರ್ವ ಭಾಗ ಗರಸು ಮಿಶ್ರಿತ ಮಣ್ಣು ಕಪ್ಪು ಶಿಲೆಯನ್ನು (ಬಸಾಲ್ಟ) ಹೊಂದಿದೆ. ಉತ್ತರಕ್ಕೆ ಕೆಂಪು ಮಿಶ್ರಿತ ಮಣ್ಣನ್ನು ಹೊಂದಿದೆ. ಪಶ್ಚಿಮ ಹಾಗೂ ದಕ್ಷಿಣ ಭಾಗದಲ್ಲಿ ಫಲವತ್ತಾದ ಕಪ್ಪು ಮಣ್ಣನ್ನು ಹೊಂದಿದೆ. ಆಗ್ನೇಯಕ್ಕೆ ಕೆಂಪು ಮಣ್ಣು ಹಾಗೂ ಹರಳು ಮಿಶ್ರಿತ ಜೇಡಿ ಮಣ್ಣನ್ನು ಹೊಂದಿದೆ. ಸಾಮಾನ್ಯವಾಗಿ ಈ ಮಣ್ಣು ಒದ್ದೆಯಾದಾಗ ಉಬ್ಬಿಕೊಳ್ಳುತ್ತದೆ.

೨.೪ ವಾಯುಗುಣ

ಬೆಳಗಾವಿ ಜಿಲ್ಲೆಯ ಶುಷ್ಕ ಮೈದಾನದಲ್ಲಿ ಅಥಣಿ ತಾಲೂಕು ಇದೆ. ಸಹಜವಾಗಿ ಒಣ ಹಾಗೂ ಆರೋಗ್ಯಕರವಾದ ವಾಯುಗುಣವಿದೆ. ಕೊಟ್ಟಲಗಿ ಗ್ರಾಮವೂ ಕೂಡಾ ಒಣ ಹಾಗೂ ಆರೋಗ್ಯ ಪೂರ್ಣವಾದ ವಾಯುಗುಣವನ್ನೇ ಹೊಂದಿದೆ. ಬೇಸಿಗೆ ಕಾಲ ಫೆಬ್ರವರಿ ಮಧ್ಯಭಾಗದಿಂದಲೇ ಪ್ರಾರಂಭವಾಗಿ ಮೇ ತಿಂಗಳ ಕೊನೆಯವರೆಗೂ ಕೆಲವು ಸಲ ಜೂನ ಮೊದಲ ವಾರದವರೆಗೂ ವಿಸ್ತರಿಸುತ್ತದೆ. ಮುಂಗಾರು ಮಳೆಗಾಲದ ಅವಧಿ ಜೂನದಿಂದ ಸಪ್ಟೆಂಬರ ಕೊನೆಯವರೆಗೆ ಇರುತ್ತದೆ. ಸಪ್ಟೆಂಬರದಿಂದ ಹಿಂಗಾರು ಮಳೆಗಾಲ ಆರಂಭವಾಗುತ್ತದೆ. ಚಳಿಗಾಲ ಡಿಸೆಂಬರದಿಂದ ಫೆಬ್ರುವರಿವರೆಗೂ ಕಂಡುಬರುತ್ತದೆ.

೨.೫ ಮಳೆ

ತಾಲೂಕಿನಲ್ಲಿ ವಾರ್ಷಿಕ ವಾಡಿಕೆ ಮಳೆ ಪ್ರಮಾಣ ೫೫೯.೦ ಮೀ.ಮಿ. ಇದೆ. ಆದರೆ ೨೦೦೧ ರಿಂದ ೨೦೧೨ ರವರೆಗಿನ ಅಂಕಿಅಂಶ ನೋಡಿದರೆ ಕೆಲವೊಮ್ಮೆ ಅತ್ಯಲ್ಪ ಪ್ರಮಾಣದ ಮಳೆಯಾದ ವರ್ಷಗಳು ಇವೆ. ಇತ್ತೀಚಿನ ದಿನಗಳಲ್ಲಿ ಅಥಣಿ ತಾಲೂಕು ಮೇಲಿಂದ ಮೇಲೆ ಬರದ ದವಡೆಗೆ ಸಿಲುಕುತ್ತಿರುವುದು ಅತ್ಯಂತ ಸ್ಪಷ್ಟವಾಗಿದೆ. ಬರಗಾಲದ ವಿಚಾರದಲ್ಲಿ ಕೊಟ್ಟಲಗಿ ಗ್ರಾಮವು ಕೂಡ ತಾಲೂಕಗಿಂತ ಭಿನ್ನವಾಗಿಲ್ಲ. ತಾಲೂಕಿನಲ್ಲಿ ಹತ್ತು ಮಳೆ ಮಾಪನ ಕೇಂದ್ರಗಳಿವೆ. ಅದರಲ್ಲಿ ಕೊಟ್ಟಲಗಿ ಗ್ರಾಮದ ಹೋಬಳಿಯಾಗಿರುವ ತೆಲಸಂಗದಲ್ಲಿ ಮಳೆ ಮಾಪನ ಕೇಂದ್ರವಿದೆ. ಆಗಸ್ಟ ಸಪ್ಟೆಂಬರ ತಿಂಗಳಿನಲ್ಲಿ ಹೆಚ್ಚು ಮಳೆಯಾಗುತ್ತದೆ.

೨.೬ ಉಷ್ಣಾಂಶ

ಕೊಟ್ಟಲಗಿ ಗ್ರಾಮದಲ್ಲಿ ಸರಾಸರಿ ಗರಿಷ್ಟ ಉಷ್ಣಾಂಶ ೩೦.೧ ಸೆಂಟಿಗ್ರೇಡ್ ಹಾಗೂ ಕನಿಷ್ಟ ೧೮.೦ ಸೆಂಟಿಗ್ರೇಡ್ ಇರುತ್ತದೆ. ಆದರೆ ಉಷ್ಣಾಂಶದ ಹಂಚಿಕೆ ಅನೇಕ ವೇಳೆ ಏರುಪೇರಾಗಿರುತ್ತದೆ. ಬೇಸಿಗೆಯಲ್ಲಿ ಅನೇಕ ವೇಳೆ ೪೦ ಸೆಂಟಿಗ್ರೇಡ್‌ಗಿಂತ ಹೆಚ್ಚು ಉಷ್ಣಾಂಶ ದಾಖಲಾಗಿದೆ. ಬೇಸಿಗೆ ತೀವ್ರವಾಗಿರುವ ತಾಲೂಕುಗಳಲ್ಲಿ ಅಥಣಿ ತಾಲೂಕು ಒಂದಾಗಿದ್ದು ಹೀಗಾಗಿ ಗ್ರಾಮವು ಕೂಡ ತೀವ್ರತರದ ಬೇಸಿಗೆಗೆ ತುತ್ತಾಗುವ ಪ್ರದೇಶವೇ ಹೌದು.[೧]

೨.೭ ಜಲಸಂಪತ್ತು

ಅಥಣಿ ತಾಲೂಕಿನಲ್ಲಿ ಕೃಷ್ಣಾ ನದಿ ಹರಿದಿದೆ. ಕರ್ನಾಟಕವನ್ನು ಪ್ರವೇಶಿಸುವುದೇ ಅಥಣಿ ತಾಲೂಕಿನ ಮಂಗಾವತಿ ಗ್ರಾಮದ ಹತ್ತಿರ. ನಂತರ ಚಿಕ್ಕೋಡಿ, ರಾಯಬಾಗ ತಾಲೂಕುಗಳಲ್ಲಿ ಹರಿದು ಹೋಗುತ್ತದೆ. ಆದರೆ ವಿಚಿತ್ರವೆಂದರೆ ಕೃಷ್ಣಾ ನದಿ ತಾಲೂಕಿನಲ್ಲಿ ಹರಿದಿದ್ದರೂ ತಾಲೂಕಿನ ಪೂರ್ವಭಾಗ ಮಾತ್ರ ಸಂಪೂರ್ಣ ಒಣ ಭೂಮಿಯನ್ನು ಹೊಂದಿದೆ. ಏಕೆಂದರೆ ಕೃಷ್ಣಾ ನದಿಯ ನೀರನ್ನು ಸಂಪೂರ್ಣವಾಗಿ ಅಥಣಿ ತಾಲೂಕಿನಾದ್ಯಂತ ಬಳಸಿಕೊಳ್ಳಲಾಗಿಲ್ಲ. ಕೃಷ್ಣಾ ನದಿಯ ನೀರಾವರಿಯಿಂದ ವಂಚಿತ ಗ್ರಾಮಗಳ ಸಾಲಿನಲ್ಲಿ ಕೊಟ್ಟಲಗಿ ಮೊದಲನೆಯದು. ಈ ಗ್ರಾಮವು ತಾಲೂಕಿನಲ್ಲಿಯೇ ಕಟ್ಟಕಡೆಯ ಗ್ರಾಮವೂ ಹೌದು.

ಆದರೆ ಕೊಟ್ಟಲಗಿ ಗ್ರಾಮದಲ್ಲಿ ಯಾವುದೇ ಹಿರಿದಾದ ನದಿ ಹರಿದಿರುವುದಿಲ್ಲ. ಡೋಣಿ ನದಿ ಮಾತ್ರ ಗ್ರಾಮದಲ್ಲಿ ಪ್ರವಹಿಸಿದ್ದು ವಿಶೇಷವಾಗಿದೆ. 'ಡೋಣಿ ಬೆಳೆದರೆ ಓಣಿಯೆಲ್ಲ ಕಾಳು' ಎಂಬ ಗಾದೆ ಉತ್ತರ ಕರ್ನಾಟಕದಲ್ಲಿ ಅದರಲ್ಲಿಯೂ ಡೋಣಿ ನದಿಯ ಇಕ್ಕೆಲಗಳಲ್ಲಿ

ಇಂದಿಗೂ ಪ್ರಚಲಿತವಿದೆ. ಈ ಗ್ರಾಮದಿಂದ ಸುಮಾರು ೧೫ ಕಿಮಿ ದೂರವಿರುವ ಜತ್ತ ತಾಲೂಕಿನ ಬಿಳ್ಳೂರ ಗ್ರಾಮದ ಪೂರ್ವಕ್ಕೆ ಪಿರನ ಕಳ್ಳಿ ಎನ್ನುವ ಪ್ರದೇಶವಿದೆ. ಈ ಸ್ಥಳದಿಂದ ಈ ನದಿ ಉದ್ಭವಿಸುತ್ತದೆ. ಇದು ಕೊಟ್ಬಲಗಿ ಗ್ರಾಮವನ್ನು, ಗ್ರಾಮದ ನೈಋತ್ಯ ಭಾಗದಲ್ಲಿ ಪ್ರವೇಶಿಸುತ್ತದೆ. ಗ್ರಾಮದ ದಕ್ಷಿಣ ಭಾಗದಲ್ಲಿ ಪ್ರವಹಿಸುತ್ತದೆ. ಕೊಟ್ಬಲಗಿ ಗ್ರಾಮದಲ್ಲಿ ಸುಮಾರು ೨, ೩ ಕಿ.ಮಿಯಷ್ಟು ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಪ್ರವಹಿಸುತ್ತದೆ. ಅರೆಕಾಲಿಕ ನದಿಯಾದ ಡೋಣಿ ನದಿಯು ಗ್ರಾಮದ ನೀರಾವರಿಗಾಗಿ ಹೆಚ್ಚು ಸಹಕಾರಿಯಾಗಿಲ್ಲ. ಕೇವಲ ಇಕ್ಕೆಲಗಳಲ್ಲಿರುವ ಪ್ರದೇಶಕ್ಕೆ ಮಾತ್ರ ಸೀಮಿತವಾಗಿ ಸಹಕಾರಿಯಾಗಿದೆ. ಏಕೆಂದರೆ ಹರಿದುಹೋಗುವ ನೀರನ್ನು ತಡೆದು ನಿಲ್ಲಿಸುವ ಚೆಕ್ಕಡ್ಯಾಮ ಅಥವಾ ಬಾಂದಾರ ಇಲ್ಲದೇ ಇರುವುದು ಕಾರಣವಾಗಿದೆ.

ಗ್ರಾಮದಲ್ಲಿ ಸುಮಾರು ಆರರಿಂದ ಏಳು ಹಳ್ಳಗಳು ಹರಿದರೂ ಕೇವಲ ಮಳೆಗಾಲದಲ್ಲಿ ಮಾತ್ರ ಕೆಲವು ದಿನ ಪ್ರವಹಿಸಿ ಅಲ್ಪ ಪ್ರಯೋಜನಕಾರಿಯಾಗಿವೆ. ಗ್ರಾಮದ ಜಲದ ಮಟ್ಟ ದಿನದಿಂದ ದಿನಕ್ಕೆ ಕುಸಿಯುತ್ತಿದ್ದು ತೆರೆದ ಬಾವಿಗಳು ಬತ್ತುತ್ತಿವೆ. ಕೇವಲ ಕೊಳವೆಬಾವಿಗಳನ್ನು ಆಶ್ರಯಿಸಿ ಕೃಷಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

೨.೮ ಸ್ವಾಭಾವಿಕ ಸಸ್ಯವರ್ಗ

ಸ್ವಾಭಾವಿಕ ಸಸ್ಯ ವರ್ಗದ ದೃಷ್ಟಿಯಿಂದ ತಾಲೂಕಿನಷ್ಟೆ ಗ್ರಾಮವು ತೀವ್ರ ಕೊರತೆಯನ್ನು ಎದುರಿಸುತ್ತಿದೆ. ಗ್ರಾಮದಲ್ಲಿ ರಕ್ಷಿತ ಅಥವಾ ಕಾಯ್ದಿಟ್ಟ ಯಾವುದೇ ಅರಣ್ಯ ಪ್ರದೇಶವಿಲ್ಲ. ಈ ಹಿನ್ನೆಲೆಯಲ್ಲಿ ಸ್ವಾಭಾವಿಕ ಸಸ್ಯ ಸಂಪತ್ತು ವಿರಳವಾಗಿರುವುದು ಸ್ಪಷ್ಟವಾಗುತ್ತದೆ.

ಗ್ರಾಮದ ಅರಣ್ಯ ಪ್ರದೇಶವನ್ನು ಉಷ್ಣವಲಯದ ಭೂ (ಶುಷ್ಕ) ಮುಳ್ಳು ಕಂಟಿ ವಿಭಾಗಕ್ಕೆ ಸೇರಿಸಬಹುದು. ಕೊಟ್ಬಲಗಿ ಪ್ರದೇಶದಲ್ಲಿ ಜಾಲಿ, ಹುಲಗಲ, ನೇರಲ, ಬೇವು, ನೀಲ, ಶ್ರೀಗಂಧ, ಹುಣಸೆ, ಬೋರ, ಆಲದಮರ, ಬಸರಿ, ಅತ್ತಿಮರ, ಬಿದಿರು, ನೀಲಗಿರಿ, ಸುಬಾಬುಲ, ಬಳ್ಳಾರಿ ಜಾಲಿ, ಬನ್ನಿಮರ, ಮಾವು ಮುಂತಾದವುಗಳು ಕಂಡುಬರುತ್ತವೆ.

೨.೯ ಪ್ರಾಣಿ ಮತ್ತು ಪಕ್ಷಿ ಸಂಕುಲ

ಗ್ರಾಮದಲ್ಲಿ ಅರಣ್ಯ ವಿರಳವಾಗಿದ್ದರಿಂದ ವನ್ಯ ಜೀವಿಗಳ ಸಂಖ್ಯೆ ಹಾಗೂ ವೈವಿಧ್ಯತೆ ಕಡಿಮೆ ಇದೆ. ಕಾಡಡವಿಗಳಲ್ಲಿ ಕತ್ತೆಕಿರುಬ, ತೋಳ, ನರಿ, ಮುಳ್ಳು ಹಂದಿ, ಕಾಡ ಹಂದಿ, ಮೊಲ, ಮಂಗ, ನವಿಲು, ಕೌಜುಗ, ಪುರಲೆ ಹಕ್ಕಿ, ಪಾರಿವಾಳ, ಚವಣಕ್ಕಿ, ಗುಬ್ಬಚ್ಚಿ, ಕೋಳಿ, ಹುಂಜ, ನಾಯಿ, ಆಕಳು, ಎಮ್ಮೆ, ಆಡು, ಕುರಿ, ಬೆಕ್ಕು, ಹೆಬ್ಬಾವು, ನಾಗರಹಾವು, ಇಲಿ ಮುಂತಾದ ಪ್ರಾಣಿ ಪಕ್ಷಿ ವರ್ಗ ಇದೆ. ಕಳೆದ ಶತಮಾನದಲ್ಲಿದ್ದ ಅನೇಕ ಪ್ರಾಣಿಗಳು ಇಂದು ಕಾಣುತ್ತಿಲ್ಲ.

೨.೧೦ ಮಣ್ಣು

ಈ ಮೊದಲೇ ಪ್ರಸ್ತಾಪಿಸಿದಂತೆ ಬಸಾಲ್ಟ ಶಿಲೆಯಿಂದ ಉತ್ಪತ್ತಿಯಾಗಿರುವ ಕಪ್ಪು ಮಣ್ಣು ಮತ್ತು ಕೆಂಪು ಮಣ್ಣು ಗ್ರಾಮದಲ್ಲಿ ಹಂಚಿಕೆಯಾಗಿದೆ. ಗ್ರಾಮದ ಪೂರ್ವ ಭಾಗದಲ್ಲಿ ಜೆಲ್ಲಿ (ಗರಸು) ಮಣ್ಣು ಹರಡಿದ್ದು ತೋಟಗಾರಿಕೆಗೆ ಉತ್ತಮವಾಗಿದೆ. ಉತ್ತರಕ್ಕೆ ಕೆಂಪು ಮಿಶ್ರಿತ ಮಣ್ಣನ್ನು ಹೊಂದಿದೆ. ದಕ್ಷಿಣ ಹಾಗೂ ದಕ್ಷಿಣ ಭಾಗ ಆಂಶಿಕವಾಗಿ ಗರಸು ಹಾಗೂ

ಫಲವತ್ತಾದ ಕಪ್ಪು ಮಣ್ಣನ್ನು ಹೊಂದಿದೆ. ನೈಋತ್ಯ ಮತ್ತು ಉತ್ತರ ಭಾಗ ಫಲವತ್ತಾದ ಕಪ್ಪು ಮಣ್ಣನ್ನು ಹೊಂದಿದೆ. ಆಗ್ನೇಯಕ್ಕೆ ಕೆಂಪು ಮಣ್ಣು ಹಾಗೂ ಹರಳು ಮಿಶ್ರಿತ ಮಣ್ಣನ್ನು ಹೊಂದಿದೆ. ಸಾಮಾನ್ಯವಾಗಿ ಒದ್ದೆಯಾದಾಗ ಈ ಮಣ್ಣು ಉಬ್ಬಿಕೊಳ್ಳುತ್ತದೆ.

೨.೧೧ ಬೆಳೆಗಳು

ಅಥಣಿ ತಾಲೂಕಿನಲ್ಲಿ ಆಹಾರ ಹಾಗೂ ವಾಣಿಜ್ಯ ಬೆಳೆಗಳೆರಡು ಪ್ರಮುಖ ಸ್ಥಾನವನ್ನು ಪಡೆದುಕೊಂಡಿವೆ. ಅದರಂತೆ ಕೊಟ್ಟಲಗಿ ಗ್ರಾಮದಲ್ಲಿ ಪ್ರಮುಖವಾಗಿ ಜೋಳ, ಸಜ್ಜೆ, ಮುಸುಕಿನ ಜೋಳ, ಗೋದಿ, ಕಡಲೆ, ಹೆಸರು, ಮುಕಣಿ, ಅಗಸಿ, ಕಾರ‍್ಯಾಳ, ತೊಗರಿ, ಉದ್ದು, ಶೇಂಗಾ, ಅಲಸಂದಿ ಬೆಳೆಯುತ್ತಾರೆ. ವಾಣಿಜ್ಯ ಬೆಳೆಗಳಾದ ಹತ್ತಿ, ಸೂರ್ಯಕಾಂತಿ, ಬಿಳಿಕುಸುಬೆ, ತೋಟಗಾರಿಕೆ ಬೆಳೆಗಳಾದ ದಾಳಿಂಬೆ, ದ್ರಾಕ್ಷಿ, ಕಾಯಿಪಲ್ಲೆ, ಈರುಳ್ಳಿ, ಮೆಣಸಿನಕಾಯಿ, ಕೊತಂಬರಿ, ಮೆಂತೆಪಲ್ಲೆ, ಹಿರೇಕಾಯಿ, ಬೆಂಡೆಕಾಯಿ, ಸೌತೆಕಾಯಿ, ಪುಟ್ಟಿಕಾಯಿ, ಬದನೆಕಾಯಿ, ಕುಂಬಳಕಾಯಿ, ಮೂಲಂಗಿ, ಚವಳಿಕಾಯಿ, ಕರಿಬೇವಿನ ಸೊಪ್ಪು, ಅವರೆಕಾಯಿ, ಪಡೋಲಕಾಯಿ, ನುಗ್ಗೆಕಾಯಿ, ತಿಪರಿಕಾಯಿ, ಬಾಳೆಹಣ್ಣು, ಮಾವಿನಹಣ್ಣು, ಚಿಕ್ಕು, ಬಾರಿಹಣ್ಣು, ನೆರಳೆಹಣ್ಣು, ಲಿಂಬೆಹಣ್ಣು, ತೆಂಗಿನಕಾಯಿ, ಸೀತಾಫಲ, ಕಲ್ಲಂಗಡಿ ಹಣ್ಣು ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ.

೨.೧೨ ಚಿಕ್ಕ ಹಾಗೂ ಗುಡಿ ಕೈಗಾರಿಕೆ

ಗ್ರಾಮದಲ್ಲಿ ಪ್ರಮುಖವಾಗಿ ಹೇಳಿಕೊಳ್ಳಬಹುದಾದ ಬೃಹತ್ ಕೈಗಾರಿಕೆಗಳಿರದಿದ್ದರೂ ಚಿಕ್ಕ ಮತ್ತು ಗುಡಿ ಕೈಗಾರಿಕೆಗಳಿಗೆ ಕೊರತೆಯಿಲ್ಲ. ಕೃಷಿ ಉಪಕರಣಗಳನ್ನು ತಯಾರಿಸುವ ಕೇಂದ್ರಗಳಿವೆ. ಅದರಂತೆ ಒಣ ದ್ರಾಕ್ಷಿ ತಯಾರಿಸುವ ಷೆಡ್‌ಗಳನ್ನು ಗ್ರಾಮದಲ್ಲಿ ನಿರ್ಮಿಸುತ್ತಾರೆ. ಒಕ್ಕಲುತನಕ್ಕೆ ಉಪಯೋಗಿಸುವ ಕಬ್ಬಿಣದ ಎತ್ತಿನ ಬಂಡಿಗಳನ್ನು ಗ್ರಾಮದಲ್ಲಿ ತಯಾರಿಸುತ್ತಾರೆ. ಗೃಹೋಪಯೋಗಿ ವಸ್ತುಗಳಾದ ಕಬ್ಬಿಣದ ಆಧುನಿಕ ಕಿಡಕಿ ಬಾಗಿಲಗಳನ್ನು ತಯಾರಿಸುವುದು, ಕಟ್ಟಿಗೆ ಕೊರೆಯುವ ಯಂತ್ರವುಳ್ಳ ಕಾರ್ಖಾನೆಗಳು ಮುಂತಾದ ಚಿಕ್ಕ ಕೈಗಾರಿಕೆಗಳನ್ನು ಗ್ರಾಮವು ಹೊಂದಿವೆ.

ಇನ್ನು ಗುಡಿ ಕೈಗಾರಿಕೆಗಳಾದ ಬುಟ್ಟಿ ಹೆಣೆಯುವುದು, ಕಸಬರಗಿ ತಯಾರಿಸುವುದು, ಚರ್ಮದ ಚಪ್ಪಲಿಗಳನ್ನು ತಯಾರಿಸುವುದು, ಬಡಿಗತನ, ಪತ್ತಾರಿಕೆ, ಕುಂಬಾರಿಕೆ, ಕಂಬಾರಿಕೆ, ಶಿಲ್ಪ ಕಲ್ಲುಗಳನ್ನು ತಯಾರಿಸುವುದು ಮುಂತಾದವು ಗ್ರಾಮದಲ್ಲಿ ಜೀವಂತವಾಗಿವೆ.

೨.೧೩ ಸಾರಿಗೆ ಸಂಪರ್ಕ

ಗ್ರಾಮವು ತಾಲೂಕು ಸ್ಥಳವಾದ ಅಥಣಿಯಿಂದ ४೦ ಕಿಮೀ ಅಂತರ ದೂರ ಹೊಂದಿದ್ದು; ಗ್ರಾಮಕ್ಕೆ ಉತ್ತಮ ರಸ್ತೆಯ ಸಂಪರ್ಕ ಹೊಂದಿದೆ. ಅಲ್ಲದೇ ಕೊಟ್ಟಲಗಿಯ ಪೂರ್ವಕ್ಕೆ ನೆರೆಯ ಗ್ರಾಮವಾದ ಕನಮಡಿ ೮ ಕಿಮಿ ಅಂತರ ಹೊಂದಿದೆ. ಅಥಣಿಯಿಂದ ಕನಮಡಿ ಹಾಗೂ ಕನಮಡಿಯಿಂದ ಅಥಣಿಗೆ ಬಸ್ಸಿನ ಸೌಲಭ್ಯವಿದೆ. ಕನಮಡಿಯ ಗ್ರಾಮದಲ್ಲಿ ಮಹಾರಾಷ್ಟ್ರದ ಜತ್ತದಿಂದ ವಿಜಾಪೂರಕ್ಕೆ ಹೋಗುವ ಮಾರ್ಗವಿದೆ. ಕಾರಣ ಕನಮಡಿಯಿಂದ ವಿಜಾಪೂರಕ್ಕೆ ಸಾಕಷ್ಟು ವಾಹನ ಸೌಕರ್ಯವಿದೆ. ಕೊಟ್ಟಲಗಿಯಿಂದ ಕನಮಡಿ ಮುಖಾಂತರ ನೆರೆ ಜಿಲ್ಲೆ ವಿಜಾಪೂರಕ್ಕೆ ಸಂಪರ್ಕ ಕಲ್ಪಿಸುತ್ತದೆ. ಅಲ್ಲದೇ ಕೊಟ್ಟಲಗಿಯಿಂದ ಉತ್ತರ ದಿಕ್ಕಿಗೆ ಮುಚ್ಚಂಡಿ ಮಾರ್ಗವಾಗಿ ಜತ್ತ ತಾಲೂಕಿನ ಪ್ರಸಿದ್ಧ ಕ್ಷೇತ್ರವಾದ ದಾನಮ್ಮ ದೇವಿ ದೇವಸ್ಥಾನವಿರುವ ಗುಡ್ಡಾಪೂರ ೨೦ ಕಿ.ಮೀ. ಅಂತರದಲ್ಲಿದೆ. ಹೀಗಾಗಿ ಬೆಳಗಾವಿ, ಚಿಕ್ಕೋಡಿ, ರಾಯಬಾಗ,

ಜಮಖಂಡಿ ಮುಂತಾದ ಕಡೆಗಳಿಂದ ಗುಡ್ಡಾಪೂರಕ್ಕೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಇಲಾಖೆಯು ಬಸ್ಸಿನ ಸಂಪರ್ಕವನ್ನು ಕಲ್ಪಿಸಿದೆ. ಜೊತೆಗೆ ಮಹಾರಾಷ್ಟ್ರದ ಜತ್ತದಿಂದ ಸುಮಾರು ೨೦ ಕಿಮಿ ಅಂತರವನ್ನು ಹೊಂದಿದ್ದು; ಜತ್ತದಿಂದ ಕೊಟ್ಟಲಗಿ ಗ್ರಾಮಕ್ಕೆ ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ಬಸ್‌ಗಳು ಗ್ರಾಮಕ್ಕೆ ಬಂದು ಹೋಗುತ್ತವೆ. ಇದರೊಂದಿಗೆ ಖಾಸಗಿ ಸಂಚಾರದ ವಾಹನಗಳು ಸಾಕಷ್ಟು ಸಂಚರಿಸುವುದರಿಂದ ಗ್ರಾಮವು ಬಾಹ್ಯ ಜಗತ್ತಿನ ಜೊತೆಗೆ ಸಾಕಷ್ಟು ವ್ಯವಸ್ಥಿತ ಸಾರಿಗೆ ಸಂಪರ್ಕವನ್ನು ಹೊಂದಿದೆ.

೨.೧೪ ಗ್ರಾಮದ ಸ್ವವಿವರ ಕೋಷ್ಟಕ

ಅ.ನಂ	ವಿವರ	ಎಕರೆ ಗುಂಟೆ
೧)	ಗ್ರಾಮದ ಒಟ್ಟು ಭೌಗೋಳಿಕ ಕ್ಷೇತ್ರ	– ೧೧೮೧೬ ಎಕರೆ ೧ ಗುಂಟಾ.
೨)	ಸಾಗುವಳಿ ಕ್ಷೇತ್ರ	– ೧೧೧೩೧ ಎಕರೆ ೩ ಗುಂಟಾ
೩)	ಪೋಟ ಖರಾಬ (ಸಾಗುವಳಿ ಆಗದೇ ಇರುವ ಜಮೀನು)	– ೬೮೪.೩೮ ಗುಂಟಾ
೪)	ಗಾವಠಾಣ	– ೩೫ ಎಕರೆ
೫)	ಗಾಯರಾಣ	– ೨೧೯ ಎಕರೆ
೬)	ಸ್ಮಶಾನ ಲಿಂಗಾಯತ	– ೦೪ ಎಕರೆ
	,, ಮುಸ್ಲಿಂ	– ೦೩ ಎಕರೆ ೦೪ ಗುಂಟೆ
೭)	ಗ್ರಾಮದ ಮುಂಗಾರಿ ಕ್ಷೇತ್ರ	– ೩೧೦೦ ಎಕರೆ
೮)	ಗ್ರಾಮದ ಹಿಂಗಾರಿ ಕ್ಷೇತ್ರ	– ೭೦೩೧ ಎಕರೆ
೯)	ಗ್ರಾಮದ ಖುಷ್ಕಿ ಕ್ಷೇತ್ರ	– ೭೧೩೧ ಎಕರೆ
೧೦)	ಗ್ರಾಮದ ನೀರಾವರಿ ಕ್ಷೇತ್ರ	– ೩೦೦೦ ಎಕರೆ
೧೧)	ಒಟ್ಟು ಆಕಾರ	– ೨೦೯೪.೦೦
೧೨)	ರಸ್ತೆ	– ೧೦
೧೩)	ಮಾರ್ಗ	– ೨೦
೧೪)	ಹಳ್ಳಗಳು	– ೦೭
೧೫)	ಒಟ್ಟು ಖಾತೆದಾರರ ಸಂಖ್ಯೆ	– ೧೫೧೬
೧೬)	ಚಿಕ್ಕ ಹಿಡುವಳಿದಾರರ ಸಂಖ್ಯೆ	– ೭೨೭
೧೭)	ಅತಿ ಚಿಕ್ಕ ಹಿಡುವಳಿದಾರರ ಸಂಖ್ಯೆ	– ೩೬೨
೧೮)	ಜನಸಂಖ್ಯೆ ೨೦೧೧ ರ ಜನಗಣತಿ ಪ್ರಕಾರ	– ೫೭೭೮
೧೯)	ಪ್ರಾಥಮಿಕ ಶಾಲೆಗಳು (ಸರಕಾರಿ ಹಿರಿಯ)	– ೦೨
	ಪ್ರಾಥಮಿಕ ಶಾಲೆಗಳು (ಖಾಸಗಿ ಹಿರಿಯ)	– ೦೧
	ಪ್ರಾಥಮಿಕ ಕಿರಿಯ ಶಾಲೆಗಳು (ಸರ್ಕಾರಿ)	– ೦೫
೨೦)	ಸರ್ಕಾರಿ ಮಾಧ್ಯಮಿಕ ಶಾಲೆ	– ೦೧
೨೧)	ಅಂಗನವಾಡಿ ಕೇಂದ್ರಗಳು	– ೦೮

೨೨) ಪ್ರಾಥಮಿಕ ಆರೋಗ್ಯ ಕೇಂದ್ರ (ಆಯುರ್ವೇದ ಪದ್ಧತಿ)	– ಇದೆ
೨೩) ಟೇಲಿಫೋನ್ ಸೌಲಭ್ಯ	– ಇದೆ
೨೪) ಮೋಬೈಲ ಸೌಲಭ್ಯ	– ಇದೆ
೨೫) ಅಂಚೆ ಕಚೇರಿ	– ಇದೆ
೨೬) ಕುಡಿಯುವ ನೀರಿನ ಸೌಲಭ್ಯ	– ಇದೆ
೨೭) ಕೊಳವೆ ಬಾವಿಗಳು	– ೬೦೦
೨೮) ತೆರೆದ ಬಾವಿಗಳು	– ೫೩೦
೨೯) ವಿದ್ಯುತ್ ಸೌಕರ್ಯ	– ಇದೆ
೩೦) ಪಿಂಚಣಿದಾರರು (ಒ.ಎ.ಪಿ)	– ೧೭
೩೧) ಅಂಗವಿಕಲ ಪಿಂಚಣಿದಾರರು	– ೬೮
೩೨) ವಿಧವಾ ವೇತನ ಪಡೆಯುವವರು	– ೪೯
೩೩) ಸಂಧ್ಯಾಸುರಕ್ಷಾ	– ೯೬
೩೪) ಸಹಕಾರ ಸಂಘಗಳು	– ೦೧
೩೫) ಹಿಟ್ಟಿನ ಗಿರಣಿಗಳು	– ೦೭
೩೬) ನ್ಯಾಯಬೆಲೆ ಅಂಗಡಿ	– ೦೧
೩೭) ರೇಷನ್ ಕಾರ್ಡದಾರರು ಸಂಖ್ಯೆ ಎ.ಪಿ.ಎಲ್	– ೨೬೩
ಬಿ.ಪಿ.ಎಲ್	– ೧೧೫೬
ಅಂತ್ಯೋದಯ	– ೧೧೨
೩೮) ಆಶ್ರಯ ಯೋಜನೆ ಅರ್ಹ ಕುಟುಂಬಗಳು	– ೧೩೮
೩೯) ಜನತಾ ಮನೆಗಳು	– ೨೦೩
೪೦) ಬ್ಯಾಂಕ (ಎಂ.ಜಿ.ಬ್ಯಾಂಕ)	– ೦೧
೪೧) ಭಾಗ್ಯಜ್ಯೋತಿ ಸೌಲಭ್ಯ ಪಡೆದ ಮನೆಗಳ ಸಂಖ್ಯೆ	– ೨೧೨
೪೨) ಗ್ರಾಮದ ಒಟ್ಟು ಮನೆಗಳ ಸಂಖ್ಯೆ	– ೧೦೫೮
ಇಂದಿರಾ ಆವಾಸ	– ೧೮೨
ಬಸವ ವಸತಿ	– ೪೩೬
೪೩) ಗ್ರಾಮೀಣ ಗ್ರಂಥಾಲಯ	– ಇದೆ
೪೪) ಅಂಬೇಡ್ಕರ ಯೋಜನೆಯಲ್ಲಿ ಮನೆ/ನಿವೇಶನ ಪಡೆದವರು	– ೨೫
ನವಗ್ರಾಮ ಯೋಜನೆ ೨೦೦೧ ರಲ್ಲಿ ನಿವೇಶನ ಮನೆ ಪಡೆದವರು	– ೨೦
೪೫) ಮಳೆ ಮಾಪನ ಕೇಂದ್ರ	– ತೆಲಸಂಗ ಹೋಬಳಿಯಲ್ಲಿದೆ
೪೬) ಪೊಲೀಸ್ ಠಾಣೆ	– ಐಗಳಿ
೪೭) ಹೋಬಳಿ ಕೇಂದ್ರ	– ತೆಲಸಂಗ
೪೮) ನಾಡ ಕಚೇರಿ	– ತೆಲಸಂಗ
೪೯) ತಾಲೂಕು ಕಚೇರಿ	– ಅಥಣಿ

೫೦) ಜಿಲ್ಲಾ ಕೇಂದ್ರ ಕಛೇರಿ – ಬೆಳಗಾವಿ

೫೧) ಕೃಷಿ ಸಂಪರ್ಕ ಕೇಂದ್ರ – ಅಥಣಿ

೫೨) ಅರಣ್ಯ ಇಲಾಖೆ ಕಛೇರಿ – ಅಥಣಿ

೫೩) ತಾಲೂಕು ಪಂಚಾಯತ ಕಛೇರಿ – ಅಥಣಿ

೫೪) ವಿಧಾನಸಭಾ ಮತಕ್ಷೇತ್ರ – ಅಥಣಿ

೫೫) ಲೋಕಸಭಾ ಮತಕ್ಷೇತ್ರ – ಚಿಕ್ಕೋಡಿ

೫೬) ವಿದ್ಯುತ್ ಕೇಂದ್ರ – ಐಗಳಿ

೫೭) ರೈಲ್ವೆ ಸ್ಟೇಶನ್ – ಉಗಾರ (ಖುರ್ದ್)
– ಶೇಡಬಾಳ

೫೮) ಸಕ್ಕರೆ ಕಾರ್ಖಾನೆ – ಅಥಣಿ ಸಹಕಾರಿ ಸಕ್ಕರೆ ಕಾರ್ಖಾನೆ
– ಕೆಂಪವಾಡ ಸಕ್ಕರೆ ಕಾರ್ಖಾನೆ
– ಉಗಾರ ಸಕ್ಕರೆ ಕಾರ್ಖಾನೆ
– ರೇಣುಕಾ ಸಕ್ಕರೆ ಕಾರ್ಖಾನೆ, ಕೊಕಟನೂರ

ಕೊಟ್ಟಲಗಿ ಗ್ರಾಮದ ಜನಸಂಖ್ಯೆ ವಿವರ:[೫]

ಅ.ನಂ		ಒಟ್ಟುಜನಸಂಖ್ಯೆ	
೧	ಪುರುಷರು	ಮಹಿಳೆಯರು	ಒಟ್ಟು
	೨೯೩೨	೨೮೪೬	೫೭೭೮
೨	ಮಕ್ಕಳು		
	ಗಂಡು ೪೬೭	ಹೆಣ್ಣು ೪೩೯	ಒಟ್ಟು ೯೦೬
೩	ಸಾಕ್ಷರರು		
	ಗಂಡು ೧೮೭೬	ಹೆಣ್ಣು ೧೩೮೮	ಒಟ್ಟು ೩೨೬೪
೪	ಗೃಹಿಣಿಯರು		
	–	೧೧೭೮+೧	೧೧೭೯

೨.೧೫. ಕೊಟ್ಟಲಗಿ ಚಾರಿತ್ರಿಕ ಹಿನ್ನೆಲೆ

ಕಣಂಬಡೆ ನಾಡು ಜಂಬು ದ್ವೀಪದ ಭರತಕ್ಷೇತ್ರದ ಕುಂತಳ ದೇಶದಲ್ಲಿ ಕರಹಡ ನಾಲ್ಸಾಸಿರ ಪ್ರಾಂತದ ಉಪಭಾಗವಾಗಿರುವುದು ಇಲ್ಲಿನ ಶಾಸನಗಳಲ್ಲಿದೆ. ಕಣಂಬಡೆ ನಾಡಿನ ಉಮ್ರಾಣಿ ಶಾಸನವು ಅದನ್ನು

ಸ್ಫುರ ದಂಬೋ ನಿಧಿ ವೇಷ್ಟಿತ
ವರ ಜಂಭೋದ್ವೀಪಮಧ್ಯ ಮೇರುಗೆ ತೆಂಕಲ್
ಭರತಕ್ಷೇತ್ರಂ ಭಾಸುರ–
ತರವನ್ತಾ ಕ್ಷೇತ್ರದಲ್ಲಿ ಕುಂತಳದೇಶಂ[೬]

ಎಂದು ಉಲ್ಲೇಖಿಸಿದೆ. ಉಮ್ರಾಣಿಯ ಇನ್ನೊಂದು ಶಾಸನವು ಕುಂತಳ ದೇಶದ ಕರಹಡ ನಾಲ್ಸಾಸಿರ ಮಹಾ ವಿಷಯ ದಲ್ಲಿ ಕಳಂಬಡೆ ನಾಡಿದ್ದುದನ್ನು ಸ್ಪಷ್ಟಪಡಿಸಿದೆ.[7] ಹಾಗೆಯೇ ತೇದಿಯಿಲ್ಲದ ತೆಲಸಂಗ ಶಾಸನ "ಕರಹಡ ನಾಲ್ಸಾಸಿರ ದೊಳಂ ಕಳಂಬಡೆ ಮುನೂರವೆಂಬ ಕಂಪಣಂ ಸೊಗಯಿಸುಗುಂ[8] ಎಂದು ಬಣ್ಣಿಸಿದೆ. ಇದರಿಂದ ಕಳಂಬಡೆ ನಾಡು ಕರಹಡ ನಾಲ್ಸಾಸಿರದ ವಿಭಾಗವೆಂಬುದು ಸ್ಪಷ್ಟವಾಗುತ್ತದೆ.

ಕುಂತಳದೇಶ: ಕುಂತಳದೇಶ ಪ್ರಾಚೀನ ಕರ್ನಾಟಕದ ಇನ್ನೊಂದು ಹೆಸರು. ಇದು ಕವಿರಾಜ ಮಾರ್ಗದಲ್ಲಿ ಹೇಳಿರುವ ಕಾವೇರಿಯಿಂದ ಗೋದಾವರಿ ವರಮಿರ್ದ ನಾಡು, ಎಳುವರೆ ಲಕ್ಷ ಗ್ರಾಮಗಳ ಪ್ರದೇಶವಿದೆ. ಕಾರಣ ಕುಂತಳ ಸಪ್ತಾರ್ಧ ಲಕ್ಷವೆಂದು ಕರೆಯುವ ರೂಢಿ ಎಂದು ಡಾ. ಆರ್.ಸಿ.ಹಿರೇಮಠ ಮತ್ತು ಡಾ. ಎಂ.ಎಂ.ಕಲಬುರ್ಗಿಯವರು ಅಭಿಪ್ರಾಯ ಪಟ್ಟಿದ್ದಾರೆ.[9] ಒಟ್ಟಿನಲ್ಲಿ ಕುಂತಳದೇಶವೊಂದು ಮಹಾನಾಡಾಗಿತ್ತು. ಇಷ್ಟೇ ಅಲ್ಲ ಅನೇಕ ಉಪವಿಭಾಗಗಳನ್ನೂ ಇದು ಹೊಂದಿತ್ತೆಂದು ಹೇಳಬಹುದು. ಕರ್ನಾಟಕದ ಶಾಸನಗಳಲ್ಲಿ ಉಲ್ಲೇಖಿತಗೊಂಡ ಎಲ್ಲ ಆಡಳಿತ ವಿಭಾಗಗಳನ್ನು ಅಭ್ಯಸಿಸಿದರೆ ಇದರ ಸ್ಪಷ್ಟ ಚಿತ್ರಣ ಸಿಗುತ್ತದೆ.

ಕರಹಡ ೪೦೦೦

ಶಾಸನಗಳಲ್ಲಿ 'ಕರಹಡ ನಾಲ್ಸಾಸಿರ' ಎಂದು ಕರೆದಿರುವ ಈ ಪ್ರದೇಶವು ಇಂದಿನ ಮಹಾರಾಷ್ಟ್ರದ ಸಾತಾರ ಜಿಲ್ಲೆಯ ತಾಲೂಕು ಸ್ಥಳವಾದ ಕರಾಡವನ್ನು ಕೇಂದ್ರವಾಗಿಟ್ಟುಕೊಂಡು ನಾಲ್ಕು ಸಾವಿರ ಹಳ್ಳಿಗಳ ಒಂದು ಪ್ರಾಂತ. ಇದರಲ್ಲಿ ಸಾತಾರ ಜಿಲ್ಲೆಯ ದಕ್ಷಿಣ ಭಾಗ, ಸಾಂಗಲಿ ಜಿಲ್ಲೆಯ ಬಹುಭಾಗ, ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕು ಮತ್ತು ವಿಜಾಪೂರ ಜಿಲ್ಲೆಯ ಕನಮಡಿಯನ್ನೊಳಗೊಂಡ ಪಶ್ಚಿಮಭಾಗ ಸಮಾವೇಶವಾಗಿದ್ದವು. ಇದರಲ್ಲಿ ಒಂದು ತುದಿ ಪಶ್ಚಿಮ ಘಟ್ಟವನ್ನು ಇನ್ನೊಂದು ತುದಿ ಕರ್ನಾಟಕದ ಪಶ್ಚಿಮ ಗಡಿ ರೇಖೆಯನ್ನು ಮುಟ್ಟಿರುವುದು ಈ ಪ್ರದೇಶದ ಶಾಸನಗಳಲ್ಲಿ ಕಂಡು ಬರುತ್ತದೆ.[10]

ಕಲ್ಯಾಣಿ ಚಾಲುಕ್ಯರು, ಕಲಚೂರಿಗಳು, ಶಿಲಾಹಾರರು ಮತ್ತು ಯಾದವರು ಈ ವಿಭಾಗದ ಮೇಲೆ ತಮ್ಮ ಪ್ರಭುತ್ವವನ್ನು ಹೊಂದಿದ್ದರೆಂಬುದು ಶಾಸನಗಳಿಂದ ವ್ಯಕ್ತವಾಗುತ್ತದೆ. ಚಾಲುಕ್ಯ ಆರನೇ ವಿಕ್ರಮಾದಿತ್ಯನ ಮಹಾಮಂಡಳೇಶ್ವರನಾದ ಜೋಗಮರಸನು ಕರಹಡ ನಾಲ್ಸಾಸಿರ ಪ್ರಾಂತವನ್ನು ಆಳುತ್ತಿದ್ದ ವಿಷಯವನ್ನು ಇಂದಿನ ಮಹಾರಾಷ್ಟ್ರದ ಸಾಂಗಲಿ ಜಿಲ್ಲೆಯ ಜತ್ತ ತಾಲೂಕಿನ ಕೋಳಗಿರಿ[11] ಮತ್ತು ವಳಸಂಗ[12] ಶಾಸನಗಳು ಸ್ಪಷ್ಟ ಪಡಿಸುತ್ತವೆ. ಜೋಗಮನ ಮೊಮ್ಮಗನಾದ ಬಿಜ್ಜಳ ದೇವರಸನು ಕರಹಡ ನಾಲ್ಕು ಸಾವಿರ ಪ್ರಾಂತ ಆಳುತ್ತಿದ್ದ ವಿಷಯ ವಳಸಂಗದ ಶಾಸನದಲ್ಲಿದೆ. ಇದೇ ಶಾಸನ ಬಿಜ್ಜಳನ ಮುತ್ತಬ್ಬೆ ಆರನೇ ವಿಕ್ರಮಾದಿತ್ಯನ ಪಟ್ಟಮಹಿಷಿ ಚಂದಲದೇವಿ ವಳಸಂಗ ಗ್ರಾಮದ ಆಡಳಿತಾಧಿಕಾರಿಯಾಗಿದ್ದ ವಿಷಯವನ್ನು ಪ್ರಸ್ತಾಪಿಸಿದೆ.

ಕ್ರಿ.ಶ. ೧೧೭೪ರ ಉಮ್ರಾಣಿ ಶಾಸನವು[13] ಕುಂತಳದೇಶದಲ್ಲಿ ಕರಹಡ ನಾಲ್ಕು ಸಾವಿರ ಮಹಾವಿಷಯ ಶೋಭಿಸುತ್ತಿತ್ತು ಎಂದು ಉಲ್ಲೇಖಿಸಿದರೆ ತೆಲಸಂಗ ಶಾಸನವು[14] "ಕರಹಾಟ ಮಹಾಮಹಿತಳ" ಎಂದು ಹೇಳಿದೆ.

ಶಿವಕೋಟ್ಯಾಚಾರ್ಯನ ವಡ್ಡಾರಾಧನೆಯ ವೃಷಭಸೇನ ರಿಸಿಯರ ಕಥೆಯಲ್ಲಿ[೧೫] "ಈ ಜಂಬೂ ದ್ವೀಪದ ಭರತಕ್ಷೇತ್ರದೊಳ್ ದಕ್ಷಿಣಾಪಥದೊಳ್ ಕರಹಟವೆಂಬುದು ನಾಡಲ್ಲಿ ಕುಣಾಳ ವೆಂಬ ಪೊಳಲ್" ಎಂದು ಹೇಳಿದೆ. ಈ ಕಥೆಯಲ್ಲಿನ ಕರಹಟ ಇಂದಿನ ಕರಾಡವಾಗಿದೆ ಇದನ್ನು ಶಾಸನಗಳು ಕರಹಡ ನಾಲ್ಸಾಸಿರ ಮಹಾವಿಷಯವೆಂದು ಕರೆದಿವೆ.

ಕಣಂಬಡೆ ಮುನ್ನೂರು

ಪ್ರಾಚೀನ ಕಾಲದಲ್ಲಿ ರಾಜರು ತಮ್ಮ ವಿಶಾಲವಾದ ಸಾಮ್ರಾಜ್ಯವನ್ನು ಆಡಳಿತದ ಅನೂಕೂಲಕ್ಕಾಗಿ ಪ್ರಾಂತ, ವಿಷಯ ಮತ್ತು ಕಂಪಣಗಳಾಗಿ ವಿಂಗಡಿಸಿದ್ದು ಕಂಡುಬರುತ್ತದೆ. ಸಾಮಾನ್ಯವಾಗಿ ಆಡಳಿತದ ವಿಭಾಗಗಳನ್ನು ಆಯಾ ಮುಖ್ಯ ಸ್ಥಳಗಳ ಹೆಸರಿನಿಂದ ಕರೆಯಲಾಗು ತ್ತಿತ್ತು ಎಂಬುದು ವಿವಿಧ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ತರ್ದವಾಡಿ ಸಾಸಿರ, ಬೆಳ್ವಲ್ ಮುನ್ನೂರು, ಮತ್ತು ಕಣಂಬಡೆ ಮುನ್ನೂರು ಮುಂತಾದ ವಿಭಾಗಗಳಿಂದ ಇದು ಸ್ಪಷ್ಟವಾಗುತ್ತದೆ.

ಕಣಂಬಡೆ ಮೂನ್ನೂರು ಹಳ್ಳಿಗಳ ನಾಡಾಗಿರುವುದನ್ನು ಆ ಪ್ರದೇಶದ ಶಾಸನಗಳು ಉಲ್ಲೇಖಿಸುತ್ತವೆ. ಕಣಂಬಡೆ ನಾಡಿನ ಕೊಕಟನೂರು ಶಾಸನ 'ಪೊಡವಿಗಿ ತೊಡೆವೆನಿಸಿದ ಕರಹಡ ನಾಲ್ಸಾಸಿರದೊಳೂಪ್ಪುಗುಂ ನೆಗಳ್ದ ಕಣಂಬಡೆ ಮುನ್ನೂರು' ಎಂದು ಪ್ರಸ್ತಾಪಿಸಿದರೆ ತೆಲಸಂಗ ಶಾಸನವು 'ಕರಹಡ ನಾಲ್ಸಾಸಿರದೊಳಂ ಕಳಂಬಡೆ ಮೂನೂರೆಂಬ ಕಂಪಣಂ ಸೊಗಯಿಸುಗುಂ'[೧೬] ಎಂದಿದೆ. ಹೀಗೆ ಮುನ್ನೂರು ಹಳ್ಳಿಗಳ ಆಡಳಿತ ವಿಭಾಗವಾಗಿ ರಚನೆಗೊಂಡ ಈ ನಾಡನ್ನು ಶಾಸನಗಳು ಕಳಂಬಡೆ ನಾಡು,[೧೭] ಕಳಂಬಡೆ ಮುನ್ನೂರು,[೧೮] ಕಣಂಬಡೆ ತ್ರಿಶತ,[೧೯] ಕಣಂಬಡೆ ದೇಶ,[೨೦] ಕಂಪಣ ಕಣಂಬಡೆ[೨೧] ಎಂದು ಕರೆದಿವೆ. ಆದರೆ ಕಣಂಬಡೆ ನಾಡು ಯಾವಾಗ ಆಡಳಿತ ವಿಭಾಗವಾಗಿ ರೂಪುಗೊಂಡಿತು, ಇಲ್ಲಿರುವ ಮುನ್ನೂರು ಹಳ್ಳಿಗಳು ಯಾವವು ಎಂಬುದನ್ನು ನಿಖರವಾಗಿ ಗುರುತಿಸಿ ಹೇಳಲು ಸಾಧ್ಯವಿಲ್ಲ ಅದಕ್ಕೆ ಕಾರಣ ಮಹಾರಾಷ್ಟ್ರದ ಭಾಗದ ಶಾಸನಗಳ ಪರಿವೀಕ್ಷಣೆ ಆಗದಿರುವುದು. ಲಭ್ಯ ಶಾಸನಗಳಲ್ಲೂ ಮುನ್ನೂರು ಹಳ್ಳಿಗಳ ಮಾಹಿತಿ ಇಲ್ಲದಿರುವುದೂ ಈ ನಾಡಿನ ಗಡಿರೇಖೆಯನ್ನು ಗುರುತಿಸಿ, ಹಳ್ಳಿಗಳನ್ನು ಪಟ್ಟಿ ಮಾಡಲು ಅಡ್ಡಿಯಾಗಿದೆ.[೨೨]

ಸದ್ಯ ಲಭ್ಯವಿರುವ ಶಾಸನಗಳಿಂದ ಸಾಂಗಲಿ ಜಿಲ್ಲೆಯ ಜತ್ತ ತಾಲೂಕಿನ ದಕ್ಷಿಣ ಭಾಗ ಮಿರಜ ತಾಲೂಕಿನ ಅತೀ ಪೂರ್ವಭಾಗ, ಬೆಳಗಾವ ಜಿಲ್ಲೆಯ ಅಥಣಿ ತಾಲೂಕಿನ ಪಶ್ಚಿಮಭಾಗ ಬಿಟ್ಟು, ಉಳಿದ ಭಾಗ ಜಮಖಂಡಿ ತಾಲೂಕಿನ ಕೃಷ್ಣಾನದಿಯ ಅತೀ ಉತ್ತರ ಮತ್ತು ಪೂರ್ವಭಾಗ, ವಿಜಾಪೂರ ತಾಲೂಕಿನ ಅತೀ ಪಶ್ಚಿಮಭಾಗ ಎಂದು ಈ ನಾಡಿನ ವ್ಯಾಪ್ತಿಯನ್ನು ಹೊಂದಿತು. ಈ ಹಿನ್ನೆಲೆಯಲ್ಲಿ ಕಣಂಬಡೆ ನಾಡಿನ ಮೇರೆಗಳನ್ನು ಉತ್ತರಕ್ಕೆ ತರಿಕಾಡುನಾಡು, ಪಶ್ಚಿಮಕ್ಕೆ ಮಿರಿಂಜೆನಾಡು, ದಕ್ಷಿಣಕ್ಕೆ ಕೊಂಡಿನಾಡು ಮತ್ತು ಕೃಷ್ಣಾನದಿ ಹಾಗೂ ಪೂರ್ವಕ್ಕೆ ತರ್ದವಾಡಿ ನಾಡು ಎಂದು ಗುರುತಿಸಬಹುದಾಗಿದೆ.

ಕಣಂಬಡೆ ನಾಡಿನ ಉಪವಿಭಾಗಗಳು

ಪ್ರಾಚೀನ ಕಾಲದಲ್ಲಿ ವಿಶಾಲವಾದ ಸಾಮ್ರಾಜ್ಯವನ್ನು ಆಡಳಿತದ ಅನುಕೂಲಕ್ಕಾಗಿ ವಿಷಯ, ಕಂಪಣ, ಮಂಡಲ ನಾಡುಗಳೆಂದು ಪ್ರಧಾನವಾಗಿ ವಿಭಾಗಿಸಲಾಗುತ್ತಿತ್ತು ಈ ವಿಭಾಗಗಳಲ್ಲಿ

ಇಂತಿಷ್ಟು ಸಂಖ್ಯೆಯ ಹಳ್ಳಿಗಳು ಸೇರಿರುತ್ತವೆಂಬುದನ್ನು ಶಾಸನಗಳು ಸೂಚಿಸುತ್ತವೆ. ಮತ್ತೆ ಈ ವಿಭಾಗಗಳನ್ನು ಸಣ್ಣ ಸಣ್ಣ ಗುಂಪುಗಳನ್ನಾಗಿ ವಿಂಗಡಿಸಲಾಗುತ್ತಿತ್ತು. ಇವುಗಳನ್ನು ಉಪವಿಭಾಗಗಳೆಂದು ಕರೆಯಬಹುದು. ಕಣಂಬಡೆ ನಾಡಿನಲ್ಲಿರುವ ಇಂತಹ ಉಪವಿಭಾಗಗಳನ್ನು ಮಾಡಿಕೊಂಡಿದ್ದರೆನ್ನುವ ವಿಷಯವನ್ನು ಇಲ್ಲಿನ ಶಾಸನಗಳ ಆಧಾರದಿಂದ ಉಂಬರವಾಣಿ ಮೂವತ್ತಾರು, ತುಂಗಳ ಮೂವತ್ತು, ಕೋಟಬಾಗೆ ಮೂವತ್ತು ಮತ್ತು ಸೇಗಾವೆ ಮೂವತ್ತಾರು ಎಂದು ಗುರುತಿಸಬಹುದು.

ಉಂಬರವಾಣಿ ಮೂವತ್ತಾರು

ಕಣಂಬಡೆ ನಾಡಿನ ಪ್ರಮುಖವಾದ ಉಪವಿಭಾಗಗಳಲ್ಲಿ ಉಂಬರವಾಣಿ ಅತಿ ದೊಡ್ಡ ವಿಭಾಗವಾಗಿದ್ದ ಸಂಗತಿ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಶಾಸನಗಳಲ್ಲಿ ಉಂಬರವಾಣಿಯನ್ನು ಕುರಿತು ಹೀಗೆ ಹೇಳಲಾಗಿದೆ.

ಕರಹಡವೆಂಬಾ ನಾಡಿಂ
ಗುರು ಭೂಷಣದಂತಿರೀ ಕಳಂಬಡೆ ನಾಡು
ದ್ದುರ ರಂಜಿತವದರೊಳಗೆಂ
ತಿರೆ ಮೂವತ್ತಾರು ಬಾಡವನುಪಮ ಪುಣ್ಯಂ[೨೩]

ಕರಹಡ ನಾಡಿನಲ್ಲಿ ಅಲಂಕಾರ ಪ್ರಾಯವಾದ ಕಣಂಬಡೆ ನಾಡು ಮೂವತ್ತಾರು ಬಾಡಗಳಿಂದ ಶೋಭಿಸುತ್ತಿತ್ತು ಎಂದು ಶಾಸನ ವರ್ಣಿಸುತ್ತದೆ.

ಮತ್ತೊಂದು ಶಾಸನ
ವರತದ್ದೇಶದ ಮೊದಲುಂ
ಬರವಾಣಿ ರಾಜಧಾನಿ ಬನದಿಂದಬ್ಜಾ
ಕರದಿಂ ಕೆಯ್ವೊಲದಿಂ ಭಾ
ಸುರ ನಾನಾ ಮರನಿಕೇತನಂಗಳಿನೆಸೆಗುಂ[೨೪]

ಕಣಂಬಡೆ ನಾಡಿನ ಉಪವಿಭಾಗದ ಮುಖ್ಯ ಸ್ಥಳವಾಗಿದ್ದ ಉಂಬರವಾಣಿಯನ್ನು ರಾಜಧಾನಿ ಎಂದು ಕರೆದ ಶಾಸನ ಅದು ವಿವಿಧ ಗಿಡ ಮರಗಳಿಂದ ಕಮಲಗಳು ತುಂಬಿದ, ಕೊಳಗಳಿಂದ, ವನಗಳಿಂದ ಕೆಯ್ವೊಲಗಳಿಂದ ಶೋಭಿಸುತ್ತಿದ್ದ ಸಂಗತಿಯನ್ನು ಹೇಳಿದೆ.

ಕ್ರಿ.ಶ.೧೧೧೫೨೫ ಹಾಗೂ ೧೧೬೭೨೬ ರ ರಾಮತೀರ್ಥದ ಶಾಸನಗಳು ಉಂಬರವಾಣಿ ಉಪವಿಭಾಗವು ಮೂವತ್ತಾರು ನಾಡಗಳನ್ನು ಹೊಂದಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಈ ಉಂಬರವಾಣಿ ಮೂವತ್ತಾರರಲ್ಲಿ ಜತ್ತ ತಾಲೂಕಿನ ಬೀಳೂರ, ಬಸರಗಿ, ಸಿಂಧೂರ ಮತ್ತು ಅಥಣಿ ತಾಲೂಕಿನ ಬಳ್ಳಿಗೇರಿ, ಯಲಹಡಲಗಿ, ಬೇವನೂರ, ಐಗಳಿ, ಕಕಮರಿ, ರಾಮತೀರ್ಥ ಮತ್ತು ನಾಗರಹೋಳೆ ಗ್ರಾಮಗಳು ಸಮಾವಿಷ್ಟಗೊಂಡಿದ್ದವು.

ರಾಮತೀರ್ಥದ ೧೧೬೭ ರ ಶಾಸನ ಹಾಗೂ ಉಮ್ರಾಣಿಯ ೧೧೨೩ ರ ಶಾಸನ ಇವೆರಡು ಶಾಸನಗಳು ಕೊಟ್ಟಲಗಿ ಗ್ರಾಮವನ್ನು ಉಲ್ಲೇಖಿಸುತ್ತವೆ. ಈ ಎರಡು ಶಾಸನಗಳಿಂದ ಉಂಬರವಾಣಿ ಮೂವತ್ತಾರಲ್ಲಿ ಕೊಟ್ಟಲಗಿ ಸಮಾವೇಶವಾಗಿತ್ತೆಂದು ಸ್ಪಷ್ಟವಾಗುತ್ತದೆ.

ಈ ಶಾಸನದಲ್ಲಿ ರಾಮತೀರ್ಥದ ಶ್ರೀ ಮದಗ್ರಹಾರರಂ ಕೊಟ್ಟಲಗೆಯ ಭುಜಬಳಮೂಲಿಗೆಯಷೇಸ ಮಹಾಜನಂಗಳಂ ಭುಜಬಲ ಚಕ್ರವರ್ತಿಯ ಹೇಳಿಕೆಯಿಂ ತಿರ್ತ್ಥದ ಶ್ರೀ ಸ್ವಯಂಭು ರಾಮೇಶ್ವರದೇವರ ಹಾಲು ಮಂಡಿಗೆಗೆ ಹಿರಿಯಕೋಲ ಎಂಟು ಮತ್ತರ್ಕೆಯ್ಯ ಮಂ...... ಅಂಗಡಿ ಮನೆಯಂ ಸರ್ವಬಾಧಾ ಪರಿಹಾರನಮಸ್ಯವಾಗಿ ಬಿಟ್ಟರು[೨೭] ಎಂದು ಸ್ಪಷ್ಟ ಪಡಿಸಿದೆ.

ಉಮ್ರಾಣಿ ಶಾಸನದಲ್ಲಿ ಶ್ರೀಮದುಂಬರವಾಣಿಯಲು ಸರ್ಬ್ಬಬಾಧಾ ಪರಿಹಾರ ಸರ್ಬ್ಬನ ಮಶ್ಯವಾಗಿ ಬಿಟ್ಟ ಬ್ರಹ್ಮಪುರಿಯೊಳಗೆ ಕೊಟ್ಟಲಿಗೆಯ ಕರಿಯ ಕಾಳಿದಾಸ ಭಟ್ಟೋಪಾಧ್ಯಾಯರನ್ನು ಉಲ್ಲೇಖಿಸುತ್ತದೆ.[೨೮] ಹೀಗಾಗಿ ಅಧ್ಯಯನದ ವಿಷಯವಾಗಿರುವ ಕೊಟ್ಟಲಗೆ ಗ್ರಾಮವು ಕಣಂಬಡೆ ಮೂನ್ನೂರರ ಉಪ ಮಹಾವಿಭಾಗವಾದ ಉಂಬರವಾಣಿಯಲ್ಲಿ ಸಮಾವೇಶವಾಗಿತ್ತೆಂದು ಸ್ಪಷ್ಟವಾಗುತ್ತದೆ.

ಅಲ್ಲದೇ ಡಾ. ಬಿ.ಆರ್.ರಾಠೋಡ ಅವರು ತಮ್ಮ 'ಕಣಂಬಡೆ ಮೂನ್ನೂರು ಒಂದು ಅಧ್ಯಯನ' ಎಂಬ ಪಿಹೆಚ್‌ಡಿ ಪ್ರಬಂಧದಲ್ಲಿ ಕಣಂಬಡೆ ನಾಡಿನ ಶಾಸನೋಕ್ತ ಗ್ರಾಮಗಳನ್ನು ಗುರುತಿಸಿದ್ದಾರೆ.[೨೯] ಸುಮಾರು ನಲವತ್ತು ಹಳ್ಳಿಗಳನ್ನು ಗುರುತಿಸಿದ್ದು ಇದರಲ್ಲಿ ಹದಿನಾರನೇಯ ಸಂಖ್ಯೆಯ ಗ್ರಾಮವೇ ಕೊಟ್ಟಲಗಿ ಗ್ರಾಮವಾಗಿದೆ. ಹೀಗಾಗಿ ಕೊಟ್ಟಲಗಿ ಗ್ರಾಮವು 'ಕಣಂಬಡೆ ಮೂನ್ನೂರ'ಲ್ಲಿ ಸಮಾವೇಶವಾದದ್ದು ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಕೊಟ್ಟಲಗಿ ಚಾರಿತ್ರಿಕ ಹಿನ್ನೆಲೆಯುಳ್ಳ ಗ್ರಾಮವೆಂಬುದು ನಿಸ್ಪಂಶಯವಾಗಿ ನಿಶ್ಚಯಿಸಬಹುದು.

ಕೊಟ್ಟಲಗಿ ಪದನಿಷ್ಪತ್ತಿ ಹಾಗೂ ಸ್ಥಳನಾಮ ವಿವೇಚನೆ

ಕೊಟ್ಟಲಗಿಯಂತಹ ಒಂದು ನಿರ್ದಿಷ್ಟ ಪ್ರದೇಶದ ಭಾಷೆ, ಸಂಸ್ಕೃತಿ, ಚರಿತ್ರೆಯನ್ನು ಹೆಚ್ಚು ನಿಖರವಾಗಿ ತಿಳಿಯಬೇಕಾದರೆ ಸ್ಥಳನಾಮವನ್ನು ಅಭ್ಯಾಸಿಸಬೇಕು. 'ಸ್ಥಳನಾಮಗಳು ಒದಗಿಸುವ ಸಾಂಸ್ಕೃತಿಕ ಮಾಹಿತಿ ಶಾಸನಗಳಷ್ಟೆ ಏಕೆ ಇನ್ನಷ್ಟು ಹೆಚ್ಚಾಗಿ ವಿಶ್ವಸನೀಯವೆಂದೇ ಪರಿಗಣಿಸಲಾಗಿದೆ' ಎಂಬ ಅಕ್ಕಿ ಮಣಿಪಾಲರ ಮಾತುಗಳು ಉಲ್ಲೇಖನೀಯವಾದದ್ದು.

ಹೆಸರಿನಲ್ಲೇನಿದೆ? ಎಂಬ ಲೋಕ ರೂಢಿಯ ಮಾತಿದೆ. ಹೆಸರಿನ ಮೂಲವನ್ನು ಕೆದಕುತ್ತ ಹೋದಂತೆ ಅದರ ವಿಶ್ವರೂಪದರ್ಶನವಾಗುವದು. ಪ್ರಾಚೀನ ಕಾಲದಲ್ಲಿ ಸಾಮೂಹಿಕವಾಗಿ ಹುಟ್ಟಿಕೊಂಡಿರುವ ಸ್ಥಳನಾಮಗಳು ಕೇವಲ ಹೆಸರುಗಳಾಗಿ ಉಳಿದಿಲ್ಲ ಮಾನವ ಸಂಸ್ಕೃತಿಯ ಕುರುಹುಗಳಾಗಿ ಉಳಿದಿವೆ, ಬೆಳೆದಿವೆ. ಸ್ಥಳನಾಮಗಳು ಆಯಾ ಜನಾಂಗದ ಮಂತ್ರಗಳೂ ಹೌದು; ಮಾಂತ್ರಿಕ ಶಕ್ತಿಗಳೂ ಹೌದು.[೩೦]

ಸ್ಥಳನಾಮಗಳು ಮಾನವನ ಹುಟ್ಟು, ಬೆಳವಣಿಗೆ, ಸಂಸ್ಕೃತಿ, ನಾಗರಿಕತೆಯ ದೃಷ್ಟಿ ಮತ್ತು ಜೀವಂತ ಪಳಿಯುಳಿಕೆಗಳಾಗಿವೆ. ಮಾನವ ತನ್ನ ಅಲೆಮಾರಿ ಜೀವನಕ್ಕೆ ತಿಲಾಂಜಲಿ ನೀಡಿ ಒಂದೆಡೆ ನೆಲೆ ನಿಂತು ಈಸಿ ಸಂಸ್ಕೃತಿಯನ್ನು ಕಲಿತು ತಾನು ಬದುಕಲು ಸಾಧ್ಯ ಎಂದು ಯಾವಾಗ ಮನವರಿಕೆ ಮಾಡಿಕೊಂಡನೊ ಆಗ ಹಟ್ಟಿ, ಊರು, ಹಳ್ಳಿಗಳ ಉಗಮವಾಯಿತು. ಇದರಿಂದಾಗಿ ಮಾನವ ಮತ್ತು ಪ್ರಕೃತಿ ನಡುವಿನ ಅನಾದಿಕಾಲದ ಅವಿನಾಭಾವ ಸಂಬಂಧದ ಕುರುಹುಗಳು ಹಾಗೂ ನಿಸರ್ಗ ಪ್ರಜ್ಞೆಯ ಅಂಶಗಳು ಸ್ಥಳನಾಮಗಳಲ್ಲಿ ಗೋಚರಿಸುತ್ತವೆ. ಕಾಲಾನಂತರದಲ್ಲಿ "ಜನಾಂಗಗಳು ನಿಸರ್ಗಕ್ಕಿಂತ ತಮ್ಮ ತಮ್ಮ ಗುಂಪುಗಳ ಬಗೆಗೆ ವಿಶೇಷ ಮೋಹ ಬೆಳೆಸಿಕೊಂಡವು, ಜನಾಂಗ ನಿಷ್ಠೆ ಗಟ್ಟಿಗೊಂಡು ನಿಸರ್ಗವಾಚಿಗೆ ಬದಲು ಕ್ರಮೇಣ

ಜನಾಂಗವಾಚಿ ಗ್ರಾಮನಾಮಗಳು ತಲೆ ದೋರಿದವು"[೨೦] ಈ ಮನೋಧರ್ಮಕ್ಕನುಗುಣವಾಗಿ ಕನ್ನಡ ನಾಡಿನಲ್ಲಿ ಸಾವಿರಾರು ಊರುಗಳು ಹುಟ್ಟಿಕೊಂಡಿವೆ. ಅವುಗಳ ಸಹಾಯದಿಂದ ಒಂದು ಕಾಲಕ್ಕೆ ಆ ಪ್ರದೇಶದಲ್ಲಿ ನೆಲೆ ನಿಂತಿದ್ದ ಪ್ರಾಚೀನ ಜನಾಂಗಗಳನ್ನು ಗುರುತಿಸುವುದರೊಂದಿಗೆ ಆ ಮೂಲಕ ಆ ಜನಾಂಗದವರ ರೀತಿ, ನೀತಿ, ಸಂಪ್ರದಾಯ, ಆಚರಣೆ ಮೊದಲಾದ ಸಾಂಸ್ಕೃತಿಕ ಸಂಗತಿಗಳನ್ನು ಅರಿಯಲು ಸ್ಥಳನಾಮಗಳು ಸಹಾಯಕವಾಗಿವೆ.

ಸ್ಥಳನಾಮಗಳ ಉಗಮಕ್ಕೆ ಪ್ರಾಕೃತಿಕ, ಜನಾಂಗಿಕ, ಪೌರಾಣಿಕ, ಐತಿಹಾತ್ಮಕ ಕಸುಬು ಮತ್ತು ವ್ಯಕ್ತಿಗತ ಕಾರಣಗಳು ಮುಖ್ಯವಾಗಿವೆ ಎಂಬುದಾಗಿ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಸ್ಥಳನಾಮಗಳು ಮೂಲತಃ ಭಾಷಿಕ ಘಟಗಳನ್ನು ಒಳಗೊಂಡಿರುವುದರಿಂದ ಭಾಷಾ ಶಾಸ್ತ್ರೀಯ ಅಧ್ಯಯನವನ್ನು ಅಪೇಕ್ಷಿಸುತ್ತಿದೆಯಾದರೂ ಸಮಾಜವಿಜ್ಞಾನ, ಸಸ್ಯವಿಜ್ಞಾನ, ಜಲವಿಜ್ಞಾನ, ಶಿಲಾವಿಜ್ಞಾನ, ಪುರಾತತ್ವ ವಿಜ್ಞಾನ, ಇತಿಹಾಸ, ಮನಃಶಾಸ್ತ್ರ, ಮಾನವಶಾಸ್ತ್ರ, ಭೂಗೋಳ, ಶಾಸನಶಾಸ್ತ್ರ, ಜಾನಪದ ಮೊದಲಾದ ಅನ್ಯ ಶಾಸ್ತ್ರಗಳ ಶಿಸ್ತುಗಳನ್ನಿಟ್ಟುಕೊಂಡು ಅಧ್ಯಯನ ನಡೆಸಿದಾಗ ಸ್ಥಳನಾಮ ಅಧ್ಯಯನ ಪರಿಪೂರ್ಣತೆಯನ್ನು ಪಡೆದುಕೊಳ್ಳುತ್ತದೆ. ಅಲ್ಲದೇ ಸ್ಥಳನಾಮಗಳು ಒದಗಿಸುವ ಸಾಂಸ್ಕೃತಿಕ ವಿವರಗಳು ಅತ್ಯಂತ ಮಹತ್ವಪೂರ್ಣವಾದವುಗಳು. "ಸ್ಥಳನಾಮಗಳಿಗೆ ಸಾಮಾನ್ಯ ನಾಮಗಳಿಗೆ ಕೊಡಬೇಕಾದ ಪ್ರಾಧಾನ್ಯಕ್ಕಿಂತ ಹೆಚ್ಚು ಪ್ರಾಧಾನ್ಯ ಕೊಡಬೇಕಾಗುತ್ತದೆ. ನಮ್ಮ ಪೂರ್ವಿಕರ ವಿದ್ಯಾ ಸಂಪನ್ನತೆ, ಸೌಂದರ್ಯ ಪ್ರಜ್ಞೆ, ಧಾರ್ಮಿಕ ದೃಷ್ಟಿ, ಮೂಢನಂಬಿಕೆ, ಆಳರಸರ ಅಥವಾ ಮೂಲ ನಿವಾಸಿಗಳ ಬಗೆಗೆ ಮಹತ್ವದ ವಿಚಾರಗಳು ಅಂದಿನ ಜನರ ವ್ಯಕ್ತಿ, ನೈಸರ್ಗಿಕ ಸಂಪತ್ತು, ಭಾಷಾ ಚರಿತ್ರೆ, ಮಾನವಶಾಸ್ತ್ರ ಮುಂತಾದ ಅನೇಕ ವಿಷಯಗಳ ಗರ್ಭದಲ್ಲಡಗಿಕೊಂಡಿರುವ ಅನುಲ್ಲೇಖಿತ ಗ್ರಂಥಗಳಾಗಿವೆ. ಭಾಷಾ ದೃಷ್ಟಿಯಿಂದ ಮಾತ್ರವಲ್ಲದೆ ಎಲ್ಲಾ ದೃಷ್ಟಿಯಿಂದಲೂ ಇಂತಹ ಅಧ್ಯಯನದ ಅವಶ್ಯಕತೆ ಇದೆ."[೨೧]

೧. **ಭಾಷಿಕ ಅಧ್ಯಯನ:** ಸ್ಥಳನಾಮ ಅಧ್ಯಯನಕ್ಕೂ ಭಾಷಾ ವಿಜ್ಞಾನಕ್ಕೂ ಹತ್ತಿರದ ಸಂಬಂಧವಿದೆ. ಸ್ಥಳನಾಮಗಳು ಸಾಮಾನ್ಯವಾಗಿ ಕೂಡು ನುಡಿಗಳಿಂದ ಕೂಡಿದ ಭಾಷೆಯ ಹಲವಾರು ಘಟಕಗಳಿಂದ ರಚನೆಯಾದವು. ಭಾಷಾ ವಿಜ್ಞಾನಿಗಳು ಆ ಘಟಕಗಳ ಅರ್ಥವನ್ನು ಅರಿಯಬೇಕಾಗುತ್ತದೆ. ಕಾಲ ಕಾಲಕ್ಕನುಗುಣವಾಗಿ ಧ್ವನಿಯು ಇನ್ನೊಂದಾಗಿ ಮಾರ್ಪಟ್ಟಿರುವ ಸಾಧ್ಯತೆ ಇರುತ್ತದೆ. ಈ ನಿತ್ಯ ಪರಿವರ್ತನೆಯೂ ಭಾಷೆಯ ಜಾನಮಾನವಾಗಿದೆ. ಹೀಗೆ ಬದಲಾವಣೆ ಜರುಗುವಾಗಲೂ ಭಾಷಾಶಾಸ್ತ್ರದ ಕೆಲವು ನಿಯಮಗಳಿಂದ ನಿಯಂತ್ರಿತವಾಗಿರುವದು ಮಾತ್ರ ಸ್ಪಷ್ಟವಾಗಿರುವುದರಿಂದ ಸ್ಥಳನಾಮಗಳ ಭಾಷಿಕ ಅಧ್ಯಯನ ಅವಶ್ಯಕವಾಗಿದೆ. ಭಾಷಾ ವಿಜ್ಞಾನಿಗಳು ಊರ ಹೆಸರುಗಳನ್ನು (ಸ್ಥಳನಾಮಗಳನ್ನು) ನಿರ್ದಿಷ್ಟ ಮತ್ತು ವಾರ್ಗಿಕ ಎಂಬ ಎರಡು ಘಟಕಗಳಲ್ಲಿ ವಿಭಜಿಸಿ ಅಧ್ಯಯನ ಮಾಡುವುದುಂಟು. 'ನಿರ್ದಿಷ್ಟ'ವೆಂದರೆ ವಿಶಿಷ್ಟ ಎಂದರ್ಥ. ಅಂದರೆ ಯಾವುದಾದರೊಂದು ವಿಷಯವನ್ನು ಒಳಗೊಂಡಿರುವಂಥದ್ದು. 'ವಾರ್ಗಿಕ' ಎಂದರೆ ಊರುಗಳ ಉತ್ತರಾರ್ಧ ಘಟಕ. ಇದರಲ್ಲಿ ವಿಷಯ ಪ್ರಸ್ತಾಪವಿರದು. ನಿರ್ದಿಷ್ಟ ಮತ್ತು ವಾರ್ಗಿಕ ಘಟಕಗಳು ಕೂಡುವಾಗ ಧ್ವನಿ ವ್ಯತ್ಯಾಸವೂ ಆಗುತ್ತದೆ. ಭಾಷಿಕ ದೃಷ್ಟಿಯಿಂದ ಕೊಟ್ಟಲಗಿ ಸ್ಥಳನಾಮವನ್ನು ವಿಶ್ಲೇಷಣೆಗೆ ಒಳಪಡಿಸೋಣ.

ಗ್ರಾಮ ಪದ ಸಂಸ್ಕೃತದಲ್ಲಿ ಇದು ಸಾಮಾನ್ಯವಾಗಿ ಊರುಗಳ ಹೆಸರಿನ ಕೊನೆಯಲ್ಲಿ ಬರುವ ವಾರ್ಗಿಕವಾಗಿದೆ. "ಈ ಗ್ರಾಮ "ಗಾವ್" ಆಗುತ್ತದೆ. ಇಲ್ಲಿಯ ಅರ್ಧ ಸ್ವರವಾದ "ವ್" ಆಡುಮಾತಿನಲ್ಲಿ ಬಿಟ್ಟುಹೋಗುತ್ತದೆ. ಆಗ ಉಳಿಯುವ ಗಾ>ಗೆ ಆಗುವದು. ಗೆ>ಗಿ ಆಗುವದು. ಇದು ಭಾಷೆಯಲ್ಲಿ ಜರುಗುವ ಸಹಜ ಪ್ರಕ್ರಿಯೆಯಾಗಿದೆ.[೨೨] ಇದೇ ರೀತಿಯಾಗಿ ಕೊಟ್ಟಲಗಿ ಸ್ಥಳವು ರೂಪುಗೊಂಡಿರಬಹುದು.

ಕೊಟ್ಟಲ+ಗ್ರಾಮ=ಕೊಟ್ಟಲಗಾವ್>ಕೊಟ್ಟಲಗಾ>ಕೊಟ್ಟಲಗೆ>ಕೊಟ್ಟಲಗಿ ಯಾಗಿ ರೂಪುಗೊಂಡಿರಬಹುದು. ಕೊಟ್ಟ – ಕೋಟಿ, ದುರ್ಗ, ರಾಜ್ಯದ ಸಣ್ಣ ವಿಭಾಗ, ಜಿಲ್ಲೆ, ದನ ಕರುಗಳ ಹಟ್ಟಿ[೨೩] ಎಂಬರ್ಥಗಳಿವೆ. ಇದಕ್ಕೆ ಪೂರಕವಾಗಿ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಕೊಟ್ಟಲಗಿ ಗ್ರಾಮವು ಒಂದು ಅಗ್ರಹಾರವಾಗಿದ್ದು, ಈ ಗ್ರಾಮವು ಕೋಟೆಯಿಂದ ಸುತ್ತುವರೆದಿರುವುದನ್ನು ನಮ್ಮ ಹಿರಿಯರು ಈಗಲೂ ನೆನಸಿಕೊಳ್ಳುತ್ತಾರೆ. ಅಲ್ಲದೆ ಕೋಟೆಯ ಅವಶೇಷಗಳನ್ನು ಈಗಲೂ ಕೂಡ ನೋಡಬಹುದಾಗಿದೆ. ಕೊಟ್ಟಲಗಿಯು ಕೋಟೆಯಿಂದ ಸುತ್ತುವರೆದ ಗ್ರಾಮವಾಗಿತ್ತೆಂದು ಇದರಿಂದ ತಿಳಿದುಬರುತ್ತದೆ.

೨. ಸಾಂಸ್ಕೃತಿಕ ಅಧ್ಯಯನ: ಸಂಸ್ಕೃತಿ ಜನತೆಯ ಜೀವನ ವಿಧಾನವೇ ಆಗಿದ್ದು, ಅವರವರ ಸಂಸ್ಕಾರಗಳಿಂದ ಹುಟ್ಟಿಕೊಂಡಿರುವಂಥದ್ದು, ಬಾಹ್ಯದಲ್ಲಿ ಕಾಣುವಂಥದ್ದಲ್ಲ. ಇದು ಅಂತರಂಗಕ್ಕೆ ಸಂಬಂಧಿಸಿದ ವಿಶೇಷ ಗುಣ. ಸಂಸ್ಕೃತಿಯು ಮಾನವನಲ್ಲಿರುವಂತೆ ಆತ ಊರುಗಳಿಗೂ ಹೆಸರಿಡುವಾಗಲೂ ಅದನ್ನು ಪ್ರದರ್ಶಿಸಿದ್ದಾನೆ. ಒಂದು ಕಾಲಕ್ಕೆ ತನ್ನ ಮೇಲೆ ಗಾಢವಾದ ಪರಿಣಾಮವನ್ನುಂಟುಮಾಡಿದ ವಸ್ತು, ವ್ಯಕ್ತ, ಘಟನೆಗಳನ್ನು ಧರ್ಮ, ಸಂಸ್ಕೃತಿಯ ಹಿನ್ನಲೆಯಲ್ಲಿ ತಾನು ವಾಸಿಸುವ ಸ್ಥಳಗಳಿಗೆ ಹೆಸರಿಸಿ ಮಾನವನು ತನ್ನ ಉತ್ಕಟ ಭಾವನೆಗಳನ್ನು ವ್ಯಕ್ತಪಡಿಸಿದ್ದಾನೆ. ಈ ಮಾತು ಕೊಟ್ಟಲಗಿ ಗ್ರಾಮಕ್ಕೂ ಅನ್ವಯಿಸುವಂಥದ್ದಾಗಿದೆ.

ಕೊಟ್ಟಲಗಿ ಸ್ಥಳನಾಮದ ಕುರಿತು ಐತಿಹ್ಯಗಳು

ಕೊಟ್ಟಲಗಿ ಗ್ರಾಮನಾಮದ ಕುರಿತು ಜನಪದರಲ್ಲಿ ತಮ್ಮದೇ ಆದ ಒಂದು ಕಲ್ಪನಾ ಲೋಕವಿದೆ. ಆ ಕಲ್ಪನಾ ಲೋಕದಲ್ಲಿ ಕಟ್ಟಿಕೊಂಡ ಐತಿಹ್ಯಗಳು ಈ ರೀತಿಯಾಗಿವೆ. ಗ್ರಾಮದಲ್ಲಿರುವ ಕೋಟಿಲಿಂಗ ದೇವಾಲಯವು ಗ್ರಾಮದ ಜನರಿಗೆ ಕೂತೂಹಲದ ಕೇಂದ್ರವೇ ಆಗಿದೆ. ಆ ದೇವಾಲಯದ ವೈಶಿಷ್ಟ್ಯವನ್ನು ಕುರಿತು ಐತಿಹ್ಯ ಒಂದು ಈ ರೀತಿಯಾಗಿದೆ.

ಐತಿಹ್ಯ–೧

ರಾಮಾಯಣದ ರಾಮನು ಸೀತೆಯನ್ನು ಹುಡುಕುತ್ತಿರುವಾಗ ಕೊಟ್ಟಲಗಿ ಗ್ರಾಮಕ್ಕೂ ಬಂದಿದ್ದನಂತೆ. ಈ ಹಿಂದೆ ರಾಮನು ಅನೇಕ ಲಿಂಗಗಳನ್ನು ಸ್ಥಾಪಿಸುತ್ತಾ ಬಂದು; ಕೊಟ್ಟಲಗಿ ಗ್ರಾಮದಲ್ಲೂ ಲಿಂಗವನ್ನು ಸ್ಥಾಪನೆ ಮಾಡಿದನಂತೆ. ಆತ ಕೊಟ್ಟಲಗಿ ಗ್ರಾಮದಲ್ಲಿ ಸ್ಥಾಪನೆ ಮಾಡಿದ ಲಿಂಗದೊಂದಿಗೆ ಒಂದು ಕೋಟಿ ಲಿಂಗಗಳು ಸ್ಥಾಪನೆಯಾದುವಂತೆ. ಹೀಗೆ ಒಂದು ಕೋಟಿ ಲಿಂಗಗಳು ಸ್ಥಾಪನೆಯಾದ ಹಿನ್ನೆಲೆಯಲ್ಲಿ ಈ ದೇವಾಲಯಕ್ಕೆ ಕೋಟಿಲಿಂಗ ದೇವಾಲಯವೆಂದು ಹೆಸರು ಬಂದಿದೆ ಎಂದು ಗ್ರಾಮಸ್ಥರ ನಂಬಿಕೆಯಾಗಿದೆ.

ಇನ್ನು ಕೋಟಿಲಿಂಗವಿರುವ ದೇವಾಲಯವೇ ಕೊಟ್ಟಲಗಿ ಎಂದು ಸ್ಥಳನಾಮವಾಗಿ ಮಾರ್ಪಟ್ಟಿದೆ ಎಂಬುದು ಗ್ರಾಮದ ಜನರ ಕಲ್ಪನೆಯಾಗಿದೆ.[೨೫]

ಐತಿಹ್ಯ-೨

ಕೊಟ್ಟಲಗಿ ಗ್ರಾಮದ ಸುತ್ತಮುತ್ತಲೂ ಸಾಕಷ್ಟು ಗಿಡಮರ ಪೊದೆಗಳಿದ್ದು, 'ಹುಲಿಯಂತಹ' ಕ್ರೂರ ಪ್ರಾಣಿಗಳು ವಾಸವಾಗಿದ್ದುವಂತೆ. ಒಂದು ದಿನ ಗ್ರಾಮದ ಮೂಲ ಸಂಸ್ಥಾಪಕ ವ್ಯಕ್ತಿಯ ಮೇಲೆ ಹುಲಿಯೊಂದು ಎರಗಿತಂತೆ. ಆಗ ಆತ ಸ್ಥಳಿಯ ದೈವವಾದ ಸಿದ್ಧೇಶ್ವರನನ್ನು ನೆನೆದಾಗ ಅವನಿಗೆ ಸ್ಥಳಿಯ ದೈವವು 'ಅಲಗು' ಎಂದರೆ ಹರಿತವಾದ ಆಯುಧವನ್ನು ಕೊಟ್ಟನಂತೆ. ಅದೇ ಮುಂದೆ ಹೋಗಿ ಕೊಟ್ಟ+ಅಲಗು=ಕೊಟ್ಟಲಗು>ಕೊಟ್ಟಲಗೆ ಆಯಿತು ಎಂದು ಕೊಟ್ಟಲಗಿ ಸ್ಥಳನಾಮದ ಕುರಿತು ತಮ್ಮದೇ ಆದ ಕಲ್ಪನೆಯ ಕಥೆಯನ್ನು ನಂಬಿದ್ದಾರೆ.[೨೬]

ಕೊಟ್ಟಲಗಿ ಗ್ರಾಮದ ಪ್ರಾಚೀನತೆ

ಒಂದು ನಾಡು ಅಥವಾ ರಾಷ್ಟ್ರದ ಚರಿತ್ರೆಯನ್ನು ತಿಳಿದುಕೊಳ್ಳಲು ಅನೇಕ ಬಗೆಯ ಆಕರ ಸಾಮಗ್ರಿಗಳ ಮೊರೆ ಹೋಗುವುದು ಅನಿವಾರ್ಯ. ಒಂದು ನಾಡಿನ ಇತಿಹಾಸ ರಚನೆಗೆ ಸಂಬಂಧಿಸಿದ ಮಾಹಿತಿಯನ್ನು ಪ್ರಮುಖವಾಗಿ ಪ್ರಾಚ್ಯ ವಸ್ತು ಮತ್ತು ಸಾಹಿತ್ಯಿಕ ಆಕರಗಳು ಒದಗಿಸುತ್ತವೆ. ಪ್ರಾಚ್ಯ ವಸ್ತುಗಳಲ್ಲಿ ಶಾಸನ, ನಾಣ್ಯ ಹಾಗೂ ಸ್ಮಾರಕಗಳು ಸೇರ್ಪಡೆಯಾದರೆ, ಸಾಹಿತ್ಯ ಆಕರಗಳಲ್ಲಿ ದೇಶಿಯ ಮತ್ತು ವಿದೇಶಿಯ ಬರವಣಿಗೆಗಳು ಮುಖ್ಯವಾಗುತ್ತವೆ.

ಇತಿಹಾಸ ರಚನೆಯಲ್ಲಿ ಶಾಸನಗಳು ವಹಿಸಿದ ಪಾತ್ರ ಬಹಳ ಮಹತ್ವದ್ದು. ನಮ್ಮ ನಾಡಿನ ಜನಜೀವನವು ಶಾಸನಗಳಲ್ಲಿ ಅಭಿವ್ಯಕ್ತಿಗೊಂಡಂತೆ ಪ್ರಾಯಶಃ ಇನ್ನೆಲ್ಲೂ ವ್ಯಕ್ತವಾಗಿಲ್ಲ. ಹೀಗಾಗಿ ಚರಿತ್ರೆಯ ಅಧ್ಯಯನಕ್ಕೆ ಅವು ಪ್ರಮಾಣೀಭೂತ ಆಕರಗಳಾಗುತ್ತವೆ. ಆಯಾ ಕಾಲದ ಶಾಸನಗಳಲ್ಲಿ ಆಯಾ ಕಾಲದ ಅರಸುಗಳ, ಅಧಿಕಾರಿಗಳ, ಪ್ರಜಾಸಾಮಾನ್ಯರ ಆಡಳಿತ ವಿಧಾನಗಳು, ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ವ್ಯವಹಾರಗಳ ಪ್ರತ್ಯಕ್ಷ ಪ್ರಸ್ತಾಪಗಳಿರುವುದೇ ಶಾಸನಗಳ ಐತಿಹಾಸಿಕ ಮಹತ್ವಕ್ಕೆ ಮುಖ್ಯ ಕಾರಣ ಎಂಬುದನ್ನು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ಹೀಗಾಗಿ ಅವು ಅಂದಿನ ಕಾಲದ ಚರಿತ್ರೆಯ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಕೊಟ್ಟಲಗಿ ಪ್ರದೇಶದ ಪ್ರಾಗೈತಿಹಾಸ

ಭೌಗೋಳಿಕ ಪರಿಸರಕ್ಕೆ ಅನುಗುಣವಾಗಿ ಪ್ರಾಚೀನ ಮಾನವನ ಬದುಕು ನಡೆದು ಬಂದಿರುವುದು ಕಂಡು ಬರುತ್ತದೆ. ಅಂತಹ ಅನೇಕ ಭೌಗೋಳಿಕ ಪರಿಸರಗಳು ಇಂದಿಗೂ ತಮ್ಮ ಒಡಲಲ್ಲಿ ಇತಿಹಾಸ ಪೂರ್ವದ ಕುರುಹುಗಳನ್ನು ಅಡಗಿಸಿಟ್ಟುಕೊಂಡಿವೆ. ಅವುಗಳನ್ನು ಗಮನಿಸಿದಾಗಲೇ ಅವುಗಳು ನಮ್ಮನ್ನು ಇತಿಹಾಸ ಪೂರ್ವಕ್ಕೆ ಕೊಂಡೊಯ್ಯುವದು.

ಈ ಹಿನ್ನೆಲೆಯಲ್ಲಿ ಅಥಣಿ ತಾಲೂಕಿನಲ್ಲಿ ಅನೇಕ ಗ್ರಾಮಗಳ ಪರಿಸರಗಳಲ್ಲಿ ಇತಿಹಾಸ ಪೂರ್ವ ಕಾಲದ ಅವಶೇಷಗಳನ್ನು ಸಂಶೋಧಕರು ಗುರುತಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕೊಟ್ಟಲಗಿ ಗ್ರಾಮವು ಕೂಡ ಒಂದು ಪ್ರಾಗೈತಿಹಾಸಿಕ ನೆಲೆ ಎಂಬುದನ್ನು ಹಿರಿಯ ಸಂಶೋಧಕರಾದ ಡಾ. ಅ.ಸುಂದರ, ಡಾ. ಆರ್.ಎಸ್.ಪಂಚಮುಖಿ, ಡಾ. ಎಚ್.ಎಸ್.ಕಾಂಬಳೆ ಮೊದಲಾದವರು ಗುರುತಿಸಿದ್ದಾರೆ.

ಪ್ರಾಗೈತಿಹಾಸಿಕ ಯುಗವನ್ನು ಆದಿ ಶಿಲಾಯುಗ (ಪೇಲಿಯೋ ಲಿಥಿಕ್ ಎಜ್), ಸೂಕ್ಷ್ಮ ಶಿಲಾಯುಗ (ಮೈಕೊಲಥಿಕ್ ಏಜ್), ನವ ಶಿಲಾಯುಗ (ನಿಯೋಲಿಥಿಕ ಎಜ್) ಎಂದು ಸ್ಥೂಲವಾಗಿ ಮೂರು ಭಾಗ ಮಾಡಬಹುದು. ನವ ಶಿಲಾಯುಗವನ್ನು ಶಿಲಾ ತಾಮ್ರಯುಗ (ಚಾಲ್ಕೋಲಿಥಿಕ್) ಹಾಗೂ ಬೃಹತ್ ಶಿಲಾಯುಗ (ಮೆಗಾಲಿಥಿಕ ಎಜ್) ಅಥವಾ ಕಬ್ಬಿಣ ಯುಗ (ಐರನ್ ಎಜ್) ಎಂದೂ ವಿಂಗಡಿಸಲಾಗಿದೆ.

ಆದಿ ಶಿಲಾಯುಗವು ಕ್ರಿ.ಪೂ. ಐದು ಲಕ್ಷ ವರ್ಷಗಳಿಂದ ಕ್ರಿ.ಪೂ. ಹತ್ತು ಸಾವಿರ ವರ್ಷಗಳವರೆಗೆ ಅಸ್ತಿತ್ವದಲ್ಲಿತ್ತು. ಸೂಕ್ಷ್ಮ ಶಿಲಾಯುಗವು ಕ್ರಿ.ಪೂ. ಹತ್ತು ಸಾವಿರದಿಂದ ಕ್ರಿ.ಪೂ. ಮೂರು ಸಾವಿರದವರೆಗೆ ಅಸ್ತಿತ್ವದಲ್ಲಿತ್ತು. ತಾಮ್ರ ಶಿಲಾಯುಗವು ಕ್ರಿ.ಪೂ. ಎರಡು ಸಾವಿರದ ಐದನೂರರಿಂದ ಕ್ರಿ.ಪೂ. ಒಂದು ಸಾವಿರ ಇನ್ನೂರವರೆಗೆ ಅಸ್ತಿತ್ವದಲ್ಲಿತ್ತು. ನವಶಿಲಾಯುಗವು ಕ್ರಿ.ಪೂ. ಎರಡು ಸಾವಿರದ ಐದನೂರು ವರ್ಷಗಳ ಹಿಂದೆ ಅಸ್ತಿತ್ವದಲ್ಲಿತ್ತು. ಬೃಹತ್ ಶಿಲಾಯುಗವು ಒಂದು ಸಾವಿರದ ಇನ್ನೂರರಿಂದ ಕ್ರಿ.ಪೂ. ಮೂರನೆಯ ಶತಮಾನದವರೆಗೆ ಅಸ್ತಿತ್ವದಲ್ಲಿತ್ತು.[೩೭]

ಶಿಲಾಯುಗದ ಮಾನವ ನೆಲೆಗಳನ್ನು ಡಾ. ಅ.ಸುಂದರ, ಡಾ. ಎಚ್.ಎಸ್.ಕಾಂಬಳೆ (ಬೆಳಗಾವಿ ಗೆಜೆಟಿಯರ, ಪುಟ ೨೪) ಅವರು ಕೊಟ್ಟಲಗಿ ಗ್ರಾಮದಲ್ಲಿ ಕಬ್ಬಿಣಯುಗದ (ಬೃಹತ್ ಶಿಲಾಯುಗ) ಸಂಸ್ಕೃತಿಯ ಕುರುಹುಗಳು ಗೋಚರಿಸಿವೆ. ಕಬ್ಬಿಣ ಶಿಲಾಯುಗದ ಸಂಸ್ಕೃತಿಯ ಕುರುಹುಗಳನ್ನು ಗುರುತಿಸಿದ್ದಾರೆ. ಅಲ್ಲದೇ ಇತಿಹಾಸ ಆರಂಭ ಕಾಲದ ಗಡಿಗೆ, ಮಡಿಕೆಗಳು ಕಂಡು ಬಂದಿರುತ್ತವೆ. ಅಲ್ಲದೇ ದೊಡ್ಡದಾದ ಪ್ರಾಚೀನ ಮಣ್ಣಿನ ದಿಬ್ಬವಿದ್ದು ಅದರಲ್ಲಿ ಇತಿಹಾಸ ಆರಂಭ ಕಾಲದ ಗಡಿಗೆ, ಮಡಿಕೆಗಳ ತುಣುಕುಗಳು ಸಿಗುತ್ತವೆ. ಅಲ್ಲದೇ ಮಣ್ಣಿನ ದಿಬ್ಬದಲ್ಲಿ ಇಂದಿಗೂ ಕೂಡ ಗಡಿಗೆ, ಮಡಿಕೆಯ ಚೂರುಗಳನ್ನು ಕಾಣಬಹುದಾಗಿದೆ. ಪ್ರಾಗೈತಿಹಾಸಿಕ ನೆಲೆಯನ್ನು ಕೂಡ ಕೊಟ್ಟಲಗಿ ಹೊಂದಿದೆ ಎಂಬುದು ಇದರಿಂದ ನಿಶ್ಚಿತವಾಗುತ್ತದೆ.

ಕೊಟ್ಟಲಗಿ ಗ್ರಾಮದ ಪ್ರಾಚೀನತೆಯನ್ನು ಗುರುತಿಸುವಲ್ಲಿ ಗ್ರಾಮದಲ್ಲಿ ಲಭ್ಯವಾಗಿರುವ ಏಕೈಕ ಶಾಸನ ಕ್ರಿ.ಶ.೧೦೨೨ ರ ಕಾಲದ ಕಲ್ಯಾಣ ಚಾಲುಕ್ಯರ ಎರಡನೆಯ ಜಯಸಿಂಹನ ಶಾಸನ. ಇದು ಗ್ರಾಮದ ಪ್ರಾಚೀನತೆಯನ್ನು ಗುರುತಿಸುವಲ್ಲಿ ಪ್ರಮಾಣಭೂತ ಆಕರವಾಗಿದೆ. ಈ ಶಾಸನವನ್ನೇ ಆಧಾರವಾಗಿಟ್ಟುಕೊಂಡು ಪ್ರಾಚೀನತೆಯನ್ನು ಗಮನಿಸಿದ್ದಾದರೆ ಕೊಟ್ಟಲಗಿ ಕ್ರಿ.ಶ.೧೦೨೨ ಕ್ಕೆ ನಮ್ಮನ್ನು ಕೊಂಡೊಯ್ಯುತ್ತದೆ.

ಈ ಶಾಸನವನ್ನು ಗಮನಿಸಿದಾಗ ಇದಕ್ಕೂ ಹಿಂದೆಯೇ ಗ್ರಾಮವಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಆದರೆ ಪ್ರಮಾಣಸಹಿತವಾಗಿ ಗ್ರಾಮದ ಚರಿತ್ರೆ ರಚಿಸುವಲ್ಲಿ ಈ ಶಾಸನವನ್ನು ಆಧಾರವಾಗಿ ಪರಿಗಣಿಸಬೇಕಾಗುತ್ತದೆ. ಕ್ರಿ.ಶ.೧೦೨೨ ಕ್ಕೂ ಮುಂಚಿನ ಯಾವುದೇ ಅಧಿಕೃತ ಆಧಾರವು ನಮಗೆ ಉಪಲಬ್ದವಾಗದೇ ಇರುವ ಹಿನ್ನೆಲೆಯಲ್ಲಿ ಸದ್ಯಕ್ಕೆ ಈ ಶಾಸನವನ್ನೇ

ಆಧಾರವಾಗಿಟ್ಟುಕೊಂಡು ಗ್ರಾಮದ ಅಧ್ಯಯನವನ್ನು ಕೈಗೊಳ್ಳಬೇಕಾಯಿತು.ಕ್ರಿ.ಶ.೧೦೨೨ ರ ಶಾಸನವನ್ನು ಪ್ರಮಾಣಬದ್ಧ ಆಕರವಾಗಿ ನೋಡಿದಾಗ ಸುಮಾರು ೯೯೦ ವರ್ಷಗಳಷ್ಟು ಸುದೀರ್ಘವಾದ ಪ್ರಾಚೀನತೆಯ ಹಿರಿಮೆಯನ್ನು ಕೊಟ್ಟಲಗಿ ಗ್ರಾಮ ಹೊಂದಿದೆಯೆಂದು ಸ್ಪಷ್ಟವಾಗುತ್ತದೆ.

ಈ ಶಾಸನದ ಪಾಠವನ್ನು ಗಮನಿಸಿದಾಗ ಹತ್ತು ಸಾಲುಗಳಲ್ಲಿ ಈ ಶಾಸನ ರಚಿತವಾಗಿದೆ.

ಶ್ರೀ ಸಂವತ್ಸರ ಶತಂಗ ೯ಳಳ ನೇ –
ಯ ದುಂದುಭಿ ಸಂವತ್ಸರದನ್ದು ಶ್ರೀ–
ಜಯಸಿಂಘದೇವ ಪ್ರಿಥ್ವೀ–
ರಾಜಂಗೆಯ್ಯೆ ಕಾ(ಶ್ಯ)ಪ ಗೋ–
ತ್ರದ ಕೊಟ್ಟಲಗೆಯ(ಮೂ)
ಲಿಗ ನಾಗಲಾವಿಯ ನೂ–
. ಮ . ದೊಳಗಂ ಸತ್ರಕ್ಕೆ
ಬಿಟ್ಟ ಕೆಯಿ?? ಇಂತ್ತಿ (ದಂ)
ಗ್ರಾಮ ರಕ್ಷಿಸು–
ವರ ಮಂಗಳಂ ಶ್ರೀ[೩೮]

ಶಾಸನದ ಕಾಲ : ಕ್ರಿ.ಶ. ೧೦೨೨.
ಚಕ್ರವರ್ತಿ : ಕಲ್ಯಾಣ ಚಾಲುಕ್ಯ ಚಕ್ರವರ್ತಿ ಎರಡನೆಯ ಜಯಸಿಂಹ.
ಶಾಸನದ ಪ್ರಕಾರ : ದಾನ ಶಾಸನ.
ಛಂದಸ್ಸು : ಗದ್ಯದಲ್ಲಿದೆ.
ದಾನ ಬಿಟ್ಟ ವ್ಯಕ್ತಿ : ಕೊಟ್ಟಲಗೆ ಮೂಲದವನು.
ಗೊತ್ರ : ಕಾಶ್ಯಪಗೊತ್ರ.
ಶಾಸನವಿರುವ ಸ್ಥಳ : ಶ್ರೀ ಕೋಟಿಲಿಂಗೇಶ್ವರ ದೇವಸ್ಥಾನದ ಬಲಭಾಗದ ಗೋಡೆಯಲ್ಲಿ.

ಈ ಶಾಸನವು ಶ್ರೀ ಸಂವತ್ಸರ ಶತವರ್ಷ ೯ಳಳ ನೇ ದುಂದುಬಿ ಸಂವತ್ಸರದಂದು ಶ್ರೀ ಜಯಸಿಂಘದೇವನು ಆಳ್ವಿಕೆ ಮಾಡುತ್ತಿರುವ ಸಂದರ್ಭದಲ್ಲಿ ಕೊಟ್ಟಲಗೆಯ ಮೂಲಿಗನಾದ ವ್ಯಕ್ತಿ ನಾಗಲಾವಿಯ ಸತ್ರಕ್ಕೆ ದಾನವನ್ನು ಬಿಟ್ಟ ವಿಚಾರವನ್ನು ಪ್ರಸ್ತಾಪಿಸುತ್ತದೆ.

ಅಗ್ರಹಾರ: ಅಗ್ರಹಾರ ಇದು ಅಗ್ರ + ಆಹಾರ; ಎಂಬ ಎರಡು ಪದಗಳಿಂದ ಕೂಡಿದೆ. ಅಗ್ರ ಎಂದರೆ ಶ್ರೇಷ್ಠ, ಆಹಾರ ಎಂದರೆ ದೇಶ ಅಥವಾ ಸ್ಥಳ. ಅಗ್ರಹಾರವೆಂದರೆ ಶ್ರೇಷ್ಠರಿಗೆ ಕೊಟ್ಟಿರುವ ಸ್ಥಳ ಅಥವಾ ಊರು ಎಂದು ಅರ್ಥ.[೩೯] ಇಲ್ಲಿನ ಶ್ರೇಷ್ಠರೆಂದರೆ ಚಾತುರ್ವರ್ಣದಲ್ಲಿ ಅಗ್ರರಾದ ಬ್ರಾಹ್ಮಣರು, ಅಗ್ರಹಾರಗಳ ನಿರ್ಮಾಣದ ಸಂಗತಿ ಗುಪ್ತ ಸಾಮ್ರಾಜ್ಯದಷ್ಟು ಪ್ರಾಚೀನವಾದುದು. ಕರ್ನಾಟಕದಲ್ಲಿ ರಾಷ್ಟ್ರಕೂಟದ ಕಾಲಕ್ಕೆ ಅಗ್ರಹಾರಗಳು ಹೆಚ್ಚು ಪ್ರಚುರಗೊಂಡಿದ್ದವು. ವೈದಿಕರಿಗೆ ಊರುಗಳನ್ನು ದತ್ತಿ ಕೊಡುವ ಕ್ರಿಯೆ ಕದಂಬರ ಕಾಲಕ್ಕಾಗಲೇ ಮೊದಲುಗೊಂಡಿತ್ತು. ಒಂದು ಊರನ್ನು ಅಗ್ರಹಾರವನ್ನಾಗಿ ಮಾರ್ಪಡಿಸುವ ಉದ್ದೇಶ; ಅದನ್ನು ಬ್ರಾಹ್ಮಣರಿಗೆ ದಾನವಾಗಿ ಕೊಡುವ ಮೂಲಕ ಪುಣ್ಯ ಸಂಪಾದಿಸಬಹುದೆನ್ನುವುದಾಗಿದ್ದರೂ, ಒಂದು ಪ್ರಭುತ್ವವನ್ನು ದಾಳಿ, ತೆರಿಗೆ, ಇತ್ಯಾದಿ ಹಿಂಸೆಗಳಿಲ್ಲದೆ

ನೆಲೆಗೊಳಿಸುವ ಪ್ರಕ್ರಿಯೆಯನ್ನು ಸಾಧ್ಯವಾಗಿಸುವುದಾಗಿತ್ತು.[೮೦] ಕಣಂಬಡೆ ನಾಡಿನ ಅಗ್ರಹಾರಗಳಲ್ಲಿ ಕೊಕಟನೂರು, ತೆಲಸಂಗ, ತುಂಗಳ, ಕೊಟ್ಟಲಿಗೆ ಮತ್ತು ಸತ್ತಿ ಪ್ರಮುಖವಾದ ಅಗ್ರಹಾರಗಳಾಗಿವೆ.

ಕೊಟ್ಟಲಗೆ ಅಗ್ರಹಾರವಾಗಿರುವುದನ್ನು ರಾಮತೀರ್ಥ ಶಾಸನವು "ಶ್ರೀ ಮದಗ್ರಹಾರಂ ಕೊಟ್ಟಲಗೆಯ ಭುಜಬಳಮೂಲಿಗೆಯಷೇಸ ಮಹಾಜನಂಗಳಂ ಭುಜಬಲ ಚಕ್ರವರ್ತಿಯ ಹೇಳಿಕೆಯಿಂ ತೀರ್ತ್ಥದ ಶ್ರೀ ಸ್ವಯಂಭು ರಾಮೇಶ್ವರ ದೇವರ ಹಾಲು ಮಂಡಿಗೆಗೆ ಹಿರಿಯಕೋಲ ಎಂಟು ಮತ್ತರ್ಕ್ಕೆಯ್ಯ ಮಂ. . . . .ಅಂಗಡಿ ಮನೆಯಂ ಸರ್ವ್ವಭಾಧಾ ಪರಿಹಾರ ಸರ್ವನಮಸ್ಯವಾಗಿ ಬಿಟ್ಟರು ಎಂದು ಸ್ಪಷ್ಟಪಡಿಸಿದೆ.

"ಅಗ್ರಹಾರ ಕೊಟ್ಟಲಗೆ ಮಹಾಜನಂಗಳು ಭುಜಬಲ ಚಕ್ರವರ್ತಿ ಬಿಜ್ಜಳದೇವನ ಹೇಳಿಕೆಯಂತೆ ತಿರ್ಥದ ಸ್ವಯಂಬು ರಾಮೇಶ್ವರ ಹಾಲು ಮಂಡಿಗೆಗೆ ಎಂಟು ಮತ್ತರು ಭೂಮಿ ಹಾಗೂ ಅಂಗಡಿ ಮತ್ತು ಮನೆಯನ್ನು ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಕೊಟ್ಟಲಗೆ ಗ್ರಾಮವು ಅಗ್ರಹಾರವಾಗಿರುವುದನ್ನು ಇದರಿಂದ ನಾವು ಸ್ಪಷ್ಟವಾಗಿ ಗುರುತಿಸಲು ಸಹಾಯವಾಗುತ್ತದೆ.

ಶಾಸನಗಳಲ್ಲಿ ಕೊಟ್ಟಲಗಿ

ಕೊಟ್ಟಲಗಿ ಗ್ರಾಮದ ಮಟ್ಟಿಗೆ ಹೇಳುವುದಾದರೆ ಗ್ರಾಮದಲ್ಲಿ ಶಾಸನಗಳು ಅಷ್ಟಾಗಿ ದೊರೆಯುವುದಿಲ್ಲ. ಕಲ್ಯಾಣಿ ಚಾಲುಕ್ಯ ಎರಡನೆಯ ಜಯಸಿಂಹನ ಆಳ್ವಿಕೆಯ ಸಂದರ್ಭದ ಒಂದು ಶಾಸನ ಮಾತ್ರ ಲಭ್ಯವಿದೆ. ಹೀಗಾಗಿ ಗ್ರಾಮದ ಹೊರಗಡೆ ಇರುವ ಶಾಸನಗಳನ್ನು ಗಮನಿಸುವ ಅವಶ್ಯಕತೆ ಕಂಡು ಬಂತು. ಈ ಹಿನ್ನೆಲೆಯಲ್ಲಿ ಶ್ರೀ ರಾಮತೀರ್ಥ ಮತ್ತು ಉಂಬರವಾಣಿಯಲ್ಲಿ ತಲಾ ಒಂದೊಂದು ಶಾಸನಗಳಲ್ಲಿ ಕೊಟ್ಟಲಗೆಯ ಉಲ್ಲೇಖ ಕಂಡು ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಕೊಟ್ಟಲಗೆಯ ಕುರಿತು ಉಲ್ಲೇಖಿಸಿರುವ ಈ ಎರಡೂ ಶಾಸನಗಳಿಂದ ಕೊಟ್ಟಲಗಿ ಕುರಿತು ಹಲವು ವಿಚಾರಗಳ ಮೇಲೆ ಬೆಳಕು ಚೆಲ್ಲುವುದರೊಂದಿಗೆ ಇನ್ನಷ್ಟು ಗಟ್ಟಿಮುಟ್ಟಾದ ಇತಿಹಾಸ ರಚನೆಗೆ ನೆಲೆಯನ್ನು ಒದಗಿಸಿಕೊಟ್ಟಿವೆ. ಹಾಗೂ ಈ ಶಾಸನಗಳು ಸುತ್ತಮುತ್ತಲ ಗ್ರಾಮಗಳ ಜೊತೆಗೆ ಕೊಟ್ಟಲಗಿ ಗ್ರಾಮದ ಸಂಬಂಧ ಹೆಣೆದು ಗ್ರಾಮದ ಚಾರಿತ್ರಿಕ ಇತಿಹಾಸ ರಚನೆಗೆ ಬಹುದೊಡ್ಡ ಕೊಡುಗೆಯನ್ನು ನೀಡಿದೆ.

ಪ್ರಥಮದಲ್ಲಿ ಕೊಟ್ಟಲಗಿಯಲ್ಲಿ ದೊರೆತಿರುವ ಕಲ್ಯಾಣಿ ಚಾಲುಕ್ಯರ ಎರಡನೆಯ ಜಯಸಿಂಹನ ಶಾಸನವು ಕ್ರಿ.ಶ.೧೦೨೨ ರಲ್ಲಿ ರಚನೆಯಾಗಿದೆ. ಈ ಶಾಸನವು "ಶ್ರೀ ಸಂವತ್ಸರ ಶತಂಗ ೯೪೪ ನೆಯ ದುಂದುಬಿ ಸಂವತ್ಸರದನ್ದು ಶ್ರೀ ಜಯಸಿಂಘದೇವನು ಈ ಭೂಮಿಯ ಆಳ್ವಿಕೆಯನ್ನು ನಡೆಸುವ ಸಂದರ್ಭದಲ್ಲಿ ಕಾಶ್ಯಪಗೋತ್ರಕ್ಕೆ ಸೇರಿದ ಕೊಟ್ಟಲಗೆ ಮೂಲಿಗನು (ಊರ ಆಡಳಿತ ನೋಡಿಕೊಳ್ಳುವನು) ನಾಗಲಾವಿಯ ಸತ್ರಕ್ಕೆ ದಾನವಾಗಿ ನೀಡಿದನು.

ಅಂದರೆ ಕೊಟ್ಟಲಗಿ ಗ್ರಾಮವನ್ನು ಕಲ್ಯಾಣಿ ಚಾಲುಕ್ಯ ಎರಡನೆಯ ಜಯಸಿಂಹನ ಕಾಲದಲ್ಲಿ ಆಳುತ್ತಿರುವ ಗ್ರಾಮದ ಮುಖ್ಯಸ್ಥನು ಶ್ರೀ ಸಂವತ್ಸರ ಶತಂಗ ೯೪೪ ನೆಯ ದುಂದುಬಿ ಸಂವತ್ಸರದಂದು ನಾಗಲಾವಿಯ ಸತ್ರಕ್ಕೆ ದತ್ತಿ ಬಿಟ್ಟದನ್ನು ಉಲ್ಲೇಖಿಸುತ್ತದೆ. ಕೊಟ್ಟಲಗಿ ಗ್ರಾಮವು ಕ್ರಿ.ಶ.೧೦೨೨ ರ ದಾನ ಶಾಸನದಲ್ಲಿ ಸ್ಪಷ್ಟವಾಗಿ ಮೂಡಿಬಂದಿದೆ.

ಉಂಬರವಾಣಿ ಶಾಸನ

"ಶ್ರೀಮನು ಮಹಾಮಂಡಳೇಶ್ವರಾ ಹೆಂಮಾಡಿಯರಸರ್ಬ್ಬೆರಸು ಮಧುವಣಯ್ಯದಂಡನಾಯಕ

ಪ್ರಮುಖ ಕಣಂಗಳು ಭುಜಬಲಮಲ್ಲದೇವರ ಹೇಳಿಕೆಯಿಂ ಹೆಂಮೇಶ್ವರ, ಚಂದಲೇಶ್ವರ, ದೇವಾಯತನ ಖಂಡಸ್ಪುಟಿತ ಜೀರ್ಣೋದ್ಧಾರಕ್ಕೆವಲ್ಲಿಯ ಪಾತ್ರಪಾವುಳದ ಜೀವಿತಕ್ಕಂ ಶಕಪುರುಷ ಸಾಸಿರದೆಂಬತ್ತೊಂಭತ್ತನೆಯ ಸರ್ಬಜಿತ್ಸಂವತ್ಸರದ ವೈಶಾಖದಮಾವಸ್ಯೆ ಸೋಮವಾರ ಸೂರ್ಯಗ್ರಹಣ ನಿಮಿತ್ತವಾಗಿ ಆವೂರ ಬಡಗಣ ಹೊಲದಲು ಜತ್ತೆಯ ಬಂಕೇಶ್ವರದೇವರ ಹಳ್ಳಿಯ ಸೀಮೆ ಮೂಡಲು ಕೊಟ್ಟಲಗೆಯ ಸೀಮೆಯಿಂತು ಚತುಸ್ಸೀಮಾ ಹಿರಿಯಕೊಲಮತ್ತರು ಅಯ್ಯತ್ತಯ್ಯು ಆವೂರದೇವರ ನಂದಾದೀವಿಗೆಗೊಂದು ಗಾಣದ ಯಂಣೆಯುಮಂ ಸರ್ವಬಾಧಾ ಪರಿಹಾರಂ ಸರ್ವನಮಸ್ಯವಾಗಿ ಬಿಟ್ಟರು"[೧] ಎಂದು ಉಮ್ರಾಣಿ ಶಾಸನ ನಿರೂಪಿಸುತ್ತದೆ.

ಈ ಶಾಸನದಲ್ಲಿ ಕೊಟ್ಟಲಗೆ ಗ್ರಾಮವು ಉಂಬರವಾಣಿಯ ಪೂರ್ವಕ್ಕೆ ಇದ್ದು ಭುಜಬಲದೇವನ ಆಜ್ಞೆಯ ಮೇರೆಗೆ ಹೆಮ್ಮೇಶ್ವರ ದೇವಾಲಯಕ್ಕೆ ಭೂಮಿಯನ್ನು ಪೂರ್ವಕ್ಕೆ ಕೊಟ್ಟಲಗಿ ಸೀಮೆಯವರೆಗೆ ದತ್ತಿ ಬಿಟ್ಟ ವಿಚಾರ ಪ್ರಸ್ತಾಪಿಸಲಾಗಿದೆ. ಎಂದರೆ ಕೊಟ್ಟಲಗಿಯು ಉಂಬರವಾಣಿಯ ಪಕ್ಕದ ಹಳ್ಳಿಯಾದದ್ದು. ಇದರಿಂದ ವಿಧಿತವಾಗುತ್ತದೆ. ಅಷ್ಟಲ್ಲದೇ ಉಂಬರವಾಣಿಯ ಸಮಕಾಲೀನ ಕಾಲಮಾನದಲ್ಲಿರುವ ಗ್ರಾಮ ಎನ್ನುವುದು ಸ್ಪಷ್ಟವಾಗುತ್ತದೆ. ಅಲ್ಲದೇ ಮಹಾಮಂಡಳೇಶ್ವರನಾದ ಹೆಮ್ಮಾಡಿಯರಸನ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದು ಕೂಡ ವಿಧಿತವಾಗುತ್ತದೆ. ಇಂದಿಗೂ ಈ ಶಾಸನದಲ್ಲಿ ಹೇಳಿರುವ ಸೀಮೆಯಲ್ಲಿ ಕೊಟ್ಟಲಗಿ ಪಶ್ಚಿಮಕ್ಕೆ ದಾನ ನೀಡಿದ ಸೀಮೆಯ ಕಲ್ಲನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗುರುತಿಸಲಾಗಿದೆ. ಆ ದಾನ ಶಾಸನದ ಛಾಯಾಚಿತ್ರವನ್ನು ಚಿತ್ರ ಸಂಪುಟದಲ್ಲಿ ಸಂಗ್ರಹಿಸಲಾಗಿದೆ.

ರಾಮತೀರ್ಥ ಶಾಸನ

ಈ ಕ್ರಿ.ಶ. ೧೧೬೭ ರ ಕಾಲದ ಶಾಸನದಲ್ಲಿ ಶ್ರೀ ಮದಗ್ರಹಾರರಂ ಕೊಟ್ಟಲಗೆಯ ಭುಜಬಳಮೂಲಿಗೆಯಷೇಸ ಮಹಾಜನಂಗಳಂ ಭುಜಬಲ ಚಕ್ರವರ್ತಿಯ ಹೇಳಿಕೆಯಿಂ ತಿರ್ಥದ ಶ್ರೀ ಸ್ವಯಂಭುರಾಮೇಶ್ವರದೇವರ ಹಾಲು ಮಂಡಿಗೆಗೆ ಹಿರಿಯಕೋಲ ಎಂಟು ಮತ್ತರ್ಕೆಯ್ಯ ಮಂ....... ಅಂಗಡಿ ಮನೆಯಂ ಸರ್ವಬಾಧಾ ಪರಿಹಾರನಮಸ್ಯವಾಗಿ ಬಿಟ್ಟರು ಎಂದು ಸ್ಪಷ್ಟ ಪಡಿಸಿದೆ.

ಹೀಗಾಗಿ ಕೊಟ್ಟಲಗೆ ಅಗ್ರಹಾರವಾಗಿರುವುದನ್ನು ಈ ಶಾಸನ ಉಲ್ಲೇಖಿಸುವದರೊಂದಿಗೆ ಭುಜಬಲ ಚಕ್ರವರ್ತಿಯ ಆಳ್ವಿಕೆಗೆ ಕೊಟ್ಟಲಗಿ ಗ್ರಾಮವು ಒಳಪಟ್ಟಿತ್ತು ಎಂಬ ವಿಚಾರವು ತಿಳಿಯುತ್ತದೆ.

ಕೊಟ್ಟಲಗಿ ಪ್ರದೇಶವನ್ನು ಆಳಿದ ರಾಜ ಮನೆತನಗಳು

ಈಗಾಗಲೇ ಕೊಟ್ಟಲಗಿ ಗ್ರಾಮವು "ಕಣಂಬಡೆ ಮನ್ನೂರರ" ಆಡಳಿತ ಭಾಗದಲ್ಲಿರುವ ಒಂದು ಗ್ರಾಮವೆಂಬುದನ್ನು ಗುರುತಿಸಲಾಗಿದೆ.

ಕಣಂಬಡೆ ನಾಡನ್ನು ವಿವಿಧ ಅರಸು ಮನೆತನದ ಪ್ರಭುಗಳು ಆಳಿದ್ದಾರೆ. ಮಹಾ ಮಂಡಳೇಶ್ವರ, ಸಾಮಂತ, ಮನ್ನೆಯರು, ಏನಿದ್ದರೂ ನಾಡ ಆಡಳಿತಕ್ಕೆ ಸಂಬಂಧಿಸಿದವರು. ಹೀಗೆ ಆಳ್ವಿಕೆ ಮಾಡಿದುದನ್ನು ಶಾಸನಗಳು 'ಆಳುತ್ತಮಿರೆ' ಎಂಬ ಪಾರಿಭಾಷಿಕ ಪದದಿಂದ ಕರೆದಿವೆ. ಇಲ್ಲಿ 'ಆಳುತ್ತಮಿರೆ' ಶಬ್ದ ಎರಡು ಅರ್ಥಗಳಲ್ಲಿ ಬಳಕೆಗೊಂಡಿವೆ. ಒಂದು ಪ್ರಭುವಾಗಿ ಆಳುವುದು ಇನ್ನೊಂದು ಅಧಿಕಾರಿಯಾಗಿ ತನ್ನ ಪದವಿಯ ವ್ಯಾಪ್ತಿಯಲ್ಲಿ ಆಡಳಿತ

ನೋಡಿಕೊಳ್ಳುವುದು. ಪ್ರಭುವಾಗಿ ಆಳುವುದು ವಂಶಪಾರಂಪರ್ಯವಾಗಿ ಮುಂದುವರೆದುಕೊಂಡು ಬಂದರೆ; ಅಧಿಕಾರಿಯಾಗಿ ಆಳುವುದು ರಾಜನಿಗೆ ನಿಷ್ಠರಾಗಿರುವುದರ ಮೇಲೆ ಅವಲಂಬಿತವಾಗಿತ್ತು. ಅಂದರೇ ಈ ಪದವಿ ವಂಶ ಪಾರಂಪರಿಕವಾಗಿರಲಿಲ್ಲ. ಪ್ರಭುವಾಗಿ ಆಳುವವರಲ್ಲಿ ಚಕ್ರವರ್ತಿ, ಮಹಾಮಂಡಳೇಶ್ವರ, ಮಹಾಸಾಮಂತ, ಮನ್ನೆಯ ಮತ್ತು ಗಾವುಂಡರು ಪ್ರಮುಖರಾಗಿದ್ದಾರೆ.[೪೨] ಈ ಹಿನ್ನೆಲೆಯಲ್ಲಿ ಕಣಂಬಡೆ ನಾಡನ್ನು ಆಳಿದ ವಿವಿಧ ಅರಸು ಮನೆತನಗಳ ಚಕ್ರವರ್ತಿಗಳು, ಮಹಾಮಂಡಳೇಶ್ವರ, ಮಹಾಸಾಮಂತ, ಮನ್ನೆಯ ಆಳರಸರ ಆಡಳಿತ ವ್ಯವಸ್ಥೆಯನ್ನು ಇಲ್ಲಿ ವಿವರಿಸಲಾಗಿದೆ.

ಮೂನ್ನೂರು ಹಳ್ಳಿಗಳನ್ನೊಳಗೊಂಡ ಕಣಂಬಡೆ ನಾಡು ಪ್ರಮುಖ ರಾಜ ಮನೆತನಗಳಾದ ಕಲ್ಯಾಣ ಚಾಲುಕ್ಯ, ಕಲಚೂರ್ಯ ಹಾಗೂ ಸೇವುಣರ ಆಳ್ವಿಕೆಗೆ ಒಳಪಟ್ಟು ಸುಮಾರು ೨೫೦ ವರ್ಷಗಳ ಸುದೀರ್ಘ ಇತಿಹಾಸವನ್ನು ಹೊಂದಿದೆ. ಅನೇಕ ರಾಜಕೀಯ ಏಳು ಬೀಳುಗಳನ್ನು ಕಂಡ ಈ ನಾಡಿನಲ್ಲಿ ರಾಜಕೀಯ ಹೋರಾಟ ಕೊನೆಯವರೆಗೆ ಉಳಿದುಕೊಂಡಿದ್ದು ಕಂಡು ಬರುತ್ತದೆ.೪೩ ಚಾಲುಕ್ಯರ ಮೂಂಡಲಿಕರಾದ ಕಲಚುರಿಗಳು ಹಾಗೂ ಸೇವುಣರು ಸ್ವತಂತ್ರವಾಗಿ ಅಧಿಪತ್ಯವನ್ನು ಸಾಧಿಸಲು ಮಾಡಿದ ಹೋರಾಟ ಯಶಸ್ವಿಯಾಗಿದ್ದು ಕಣಂಬಡೆ ನಾಡಿನ ಸುತ್ತಮುತ್ತಲ ಪ್ರದೇಶದಿಂದ ಎಂಬುದು ಗಮನಾರ್ಹವಾಗಿದೆ. ಮೂಂಡಲಿಕರಾದ ಬಿಜ್ಜಳ ಮತ್ತು ಸಿಂಘನರು ಎರಡು ಅರಸು ಮನೆತನಗಳಿಗೆ ಶ್ರೀಕಾರಹಾಕಿ ಕರ್ನಾಟಕ ಇತಿಹಾಸದಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ.

ಕಲ್ಯಾಣದ ಚಾಲುಕ್ಯರು

ಕಲ್ಯಾಣ ಚಾಲುಕ್ಯರು ರಾಷ್ಟ್ರಕೂಟ್ ಸಾಮಂತರಾಗಿ, ಅನಂತರ ಸ್ವತಂತ್ರ ಆಳ್ವಿಕೆ ನಡೆಸಿ; ವಿಸ್ತೃತ ಸಾಮ್ರಾಜ್ಯವನ್ನು ಸ್ಥಾಪಿಸಿ ಇತಿಹಾಸ ನಿರ್ಮಿಸಿರುವುದನ್ನು ಅನೇಕ ಶಾಸನಗಳು ಉಲ್ಲೇಖಿಸುತ್ತವೆ. ಕಣಂಬಡೆ ನಾಡಿನಲ್ಲಿ ದೊರೆಯುವ ಶಾಸನಗಳು ಚಾಲುಕ್ಯ ದೊರೆಗಳಾದ ನೂರ್ಮಡಿತೈಲ, ತ್ರಿಭುವನಮಲ್ಲ, ತ್ರೈಲೋಕ್ಯ ೬ನೇ ವಿಕ್ರಮಾದಿತ್ಯನ ವರ್ಣನೆಯೊಂದಿಗೆ ಪ್ರಾರಂಭವಾಗಿ ಅವರ ಸಾಮಂತರಾದ ದಂಡಾಧಿಕಾರಿಗಳು, ಮಹಾಪ್ರಧಾನರಾದ ಕಲಚೂರಿಗಳನ್ನು ಹೆಸರಿಸಿವೆ. ಕಣಂಬಡೆ ನಾಡಿನಲ್ಲಿ ಕಲ್ಯಾಣ ಚಾಲುಕ್ಯರು ಆಳ್ವಿಕೆ ನಡೆಸದೆ ಇದ್ದರೂ ಅವರ ಮಾಂಡಲಿಕರಾದ ಕಲಚೂರಿಗಳು ಆಳ್ವಿಕೆ ನಡೆಸಿದ್ದನ್ನು ಹಲವಾರು ಶಾಸನಗಳು ಉಲ್ಲೇಖಿಸುತ್ತವೆ.

ಕಣಂಬಡೆ ನಾಡಿನ ಮುರಗುಂಡಿ ತಾಮ್ರಪಟ ಶಾಸನವು ಕಲ್ಯಾಣ ಚಾಲುಕ್ಯರ ವಂಶಾವಳಿಯನ್ನು ಉಲ್ಲೇಖಿಸುವುದರೊಂದಿಗೆ ಮೂರನೇ ಸೋಮೇಶ್ವರನನ್ನು ಸರ್ವಜ್ಞ ಚಕ್ರವರ್ತಿ ಎಂದು ವರ್ಣಿಸಿ, ಕಲ್ಯಾಣ ಚಾಲುಕ್ಯರ ವಂಶಾವಳಿಯನ್ನು ಹೇಳಿದೆ.

ಸತ್ಯಾಶ್ರಯ

↓

ಅಹವಮಲ್ಲ (ಸೋಮೇಶ್ವರ I)

↓

(ಪೆರಮಾಡಿ) ವಿಕ್ರಮಾದಿತ್ಯ VI

↓

ಸೋಮೇಶ್ವರ VII

↓

ಜಗದೇಕಮಲ್ಲ

↓

ಸೋಮೇಶ್ವರ IV (ತ್ರಿಭುವನಮಲ್ಲ

ಕಣಂಬಡೆ ಮೂನ್ನೂರನ್ನು ಹೆಸರಿಸುವ ಹೊನವಾಡ ಶಾಸನವುಳಳ ಚಾಲುಕ್ಯ ಸೋಮೇಶ್ವರ ೧ನನ್ನು ಉಲ್ಲೇಖಿಸುತ್ತದೆ.

ಕಲ್ಯಾಣ ಚಾಲುಕ್ಯರ ರಾಜ್ಯಸ್ಥಾಪನೆ: (ಕ್ರಿಶ. ೯೭೩-೧೧೮೩)

ಕರ್ನಾಟಕದಲ್ಲಿ ಕ್ರಿ.ಶ.೯೭೩ ರಲ್ಲಿ ರಾಷ್ಟ್ರಕೂಟದ ಮನೆತನದ ರಾಜಕೀಯ ಕ್ಷೇತ್ರದಿಂದ ಕಣ್ಮರೆಯಾಗಲು ಕಲ್ಯಾಣ ಚಾಲುಕ್ಯ ದೊರೆಯಾದ ಎರಡನೆಯ ತೈಲಪನು ರಾಷ್ಟ್ರಕೂಟ ಮನೆತನದ ಕೊನೆಯ ಅರಸ ಇಮ್ಮಡಿ ಕರ್ಕನನ್ನು ಕ್ರಿ.ಶ.೯೭೩-೭೪ ರಲ್ಲಿ ಸೋಲಿಸಿ ಹೊಸ ರಾಜಮನೆತನವನ್ನು ಸ್ಥಾಪಿಸಿದನು. ಸುಮಾರು ಇನ್ನೂರು ವರ್ಷಗಳವರೆಗೆ ಅಧಿಕ ಕಾಲದವರೆಗೆ ಈ ಮನೆತನವು ಆಳ್ವಿಕೆ ಮಾಡಿತು. ಕರ್ನಾಟಕವು ಇವರ ಕಾಲದಲ್ಲಿ ಸಾಂಸ್ಕೃತಿಕ ಸಾಧನೆಯನ್ನು ಮೆರೆಯಿತು. ಇವರ ರಾಜಧಾನಿ ಈಗಿನ ಬೀದರ ಜಿಲ್ಲೆಯ ಬಸವ ಕಲ್ಯಾಣವಾಗಿತ್ತು. ವರಾಹವನ್ನು ಲಾಂಛನವನ್ನಾಗಿ ಪಡೆದುಕೊಂಡಿದ್ದರು. ಪ್ರಸ್ತುತ ಅಧ್ಯಯನ ಪ್ರದೇಶವು ಕಲ್ಯಾಣ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತ್ತೆಂಬ ವಿಷಯ ಕ್ರಿ.ಶ. ೧೦೨೨ ರ ಕಾಲದ ಕೊಟ್ಟಲಗಿ ಶಾಸನದಿಂದ ಅರಿಯಬಹುದು.

ಎರಡನೆಯ ತೈಲಪ: (ಕ್ರಿ.ಶ.೯೭೩-೯೯೭)

ಕಲ್ಯಾಣ ಚಾಲುಕ್ಯ ವಂಶದ ಸ್ಥಾಪಕನಾದ ಎರಡನೆಯ ತೈಲಪನು ಪ್ರಬಲ ಹಾಗೂ ಪ್ರಮುಖ ಅರಸನಾಗಿದ್ದನು. ಇವನು ರಾಷ್ಟ್ರಕೂಟರನ್ನು ಸೋಲಿಸಿದ ನಂತರ ತನ್ನ ಬಲವನ್ನು ಹೆಚ್ಚಿಸಿಕೊಳ್ಳಲು ರಾಷ್ಟ್ರಕೂಟರ ಹಲವಾರು ಸಾಮಂತರ ಮೇಲೆ ಯುದ್ಧ ಮಾಡಿದನು. ತೈಲಪನು ಸಾಮ್ರಾಟನಾದ ಮೇಲೆ ಗಂಗರ ಸಾಮಂತರಾದ ಪಾಂಚಾಲದೇವನಿಗೂ ತೈಲಪನಿಗೂ ಸಂಬಂಧಿಸಿದ ಯುದ್ಧದಲ್ಲಿ ಪಾಂಚಾಲದೇವನನ್ನು ಸಂಹರಿಸಿದ ಭೂಗತದೇವ ಎಂಬುವವನನ್ನು ತೈಲಪನು ಕೊಗಲೆಯ ಸಾಮಂತನಾಗಿ ನೇಮಿಸಿ ಅವನಿಗೆ 'ಅಹವಮಲ್ಲ' ಎಂಬ ಬಿರುದನ್ನು ಕೊಟ್ಟನು.

ತೈಲಪನ ಮರಣನಂತರ ಅಹವಮಲ್ಲ ಇರಿವಬೆಡಂಗ, ಸಾಹಸಭೀಮ ಮುಂತಾದ ಬಿರುದುಗಳನ್ನು ಧರಿಸಿದ ಸತ್ಯಾಶ್ರಯನು ೯೯೭-೧೦೦೮ ರ ವರೆಗೆ ರಾಜ್ಯವಾಳಿದನು. ಸತ್ಯಾಶ್ರಯನ ಮರಣಾನಂತರ ದಶವರ್ಮನ ಮಗನಾದ ಐದನೆಯ ವಿಕ್ರಮಾದಿತ್ಯನು ಕ್ರಿ.ಶ.೧೦೦೮ ರಲ್ಲಿ ಅಧಿಕಾರಕ್ಕೆ ಬಂದನು. ಇವನಿಗೆ ತ್ರಿಭುವನಮಲ್ಲ, ವಲ್ಲಭನರೇಂದ್ರ ಎಂಬ ಬಿರುದುಗಳಿದ್ದವು. ಪ್ರಸ್ತುತ ಅಧ್ಯಯನ "ಕೊಟ್ಟಲಗಿ" ಪ್ರದೇಶದಲ್ಲಿ ಅಥವಾ "ಕಣಂಬಡೆ ಮೂನ್ನೂರಿನ" ಪ್ರದೇಶದಲ್ಲಿ ತೈಲಪ, ಸತ್ಯಾಶ್ರಯ ಹಾಗೂ ಐದನೆಯ ವಿಕ್ರಮಾದಿತ್ಯರಿಗೆ ಸಂಬಂಧಪಟ್ಟ ಯಾವುದೇ ಶಾಸನಗಳು ಲಭ್ಯವಿರುವುದಿಲ್ಲ. ಆದರೂ ಕರ್ನಾಟಕದ ಬಹುಭಾಗ ಆಳಿರುವುದರಿಂದ ಈ ಪ್ರದೇಶವು ಹೊರತಾಗಿಲ್ಲವೆಂದೇ ಹೇಳಬಹುದು.

ಎರಡನೆಯ ಜಯಸಿಂಹ: (ಕ್ರಿ.ಶ. ೧೦೧೫-೧೦೪೪)

ಐದನೆಯ ವಿಕ್ರಮಾದಿತ್ಯನ ನಂತರ ಎರಡನೆಯ ಜಯಸಿಂಹನು ಕ್ರಿ.ಶ. ೧೦೧೫ ರಲ್ಲಿ ಅಧಿಕಾರಕ್ಕೆ ಬಂದನು. ಈತನಿಗೆ ತ್ರೈಲೋಕ್ಯಮಲ್ಲ ಮತ್ತು ಮಲ್ಲಿಕಾಮೋದ ಎಂಬ ಬಿರುದುಗಳಿದ್ದವು. ಎರಡನೆಯ ಜಯಸಿಂಹನು ಜಗದೇಕಮಲ್ಲ ಎಂಬ ಬರಹನ್ನುಳ್ಳ ಚಿನ್ನದ ಪದ್ಮ ಟಂಕನಾಣ್ಯವನ್ನು ಹೊರಡಿಸಿದನು.[೪೫] ಈತನ ಆಳ್ವಿಕೆಗೆ ಸಂಬಂಧಪಟ್ಟ ಕ್ರಿ.ಶ. ೧೦೨೨ರ ಕಾಲದ ಶಾಸನ ಕೊಟ್ಟಲಗಿಯಲ್ಲಿ ದೊರೆತಿದೆ.[೪೬] ಈ ಶಾಸನವು ಜಯಸಿಂಹನು ಆಳ್ವಿಕೆ ಮಾಡುತ್ತಿರುವುದನ್ನು ಖಚಿತ ಪಡಿಸುತ್ತದೆ.

ಒಂದನೆಯ ಸೋಮೇಶ್ವರ: (ಕ್ರಿ.ಶ. ೧೦೪೪-೧೦೬೮)

ಕ್ರಿ.ಶ. ೧೦೪೪ ರಲ್ಲಿ ಎರಡನೆಯ ಜಯಸಿಂಹನ ಮರಣ ನಂತರ ಆತನ ಪುತ್ರನಾದ ಒಂದನೆಯ ಸೋಮೇಶ್ವರನು ಚಾಲುಕ್ಯ ಸಿಂಹಾಸನವನ್ನೇರಿದನು. ಸೋಮೇಶ್ವರನಿಗೆ ಅಹವಮಲ್ಲ ತ್ರೈಲೋಕ್ಯಮಲ್ಲ, ರಾಜನಾರಾಯಣ ಎಂಬ ಬಿರುದುಗಳಿದ್ದವು. ಈತನ ಆಳ್ವಿಕೆಗೆ ಸಂಬಂಧಪಟ್ಟ ಶಾಸನವು ಕ್ರಿ.ಶ. ೧೦೫೧ ರಲ್ಲಿ ಕೊಕಟನೂರಿನಲ್ಲಿ ದೊರೆತಿದೆ. ಈ ಶಾಸನವು ಬಿರುದಾವಳಿಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ಇತನು ದಂಡಯಾತ್ರೆ ಕೈಗೊಂಡು ಅನೇಕ ಅರಸರನ್ನು ಸೋಲಿಸಿದ್ದು ಮತ್ತು ಚೋಳ ಅರಸನ ಕೂಡ ದ್ವಂದಯುದ್ಧ ಮಾಡಿ ಆತನನ್ನು ಸೋಲಿಸಿದ್ದನ್ನು ಇದು ಉಲ್ಲೇಖಿಸುತ್ತದೆ.

ವಿಕ್ರಮಾದಿತ್ಯ VI

ಕಣಂಬಡೆ ನಾಡಿನ ತೆಲಸಂಗ ಶಾಸನವು[೪೭] ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ೩೯ ನೇ ವರ್ಷವನ್ನು ಪ್ರಸ್ತಾಪಿಸಿ ತೆಲಸಂಗದ ಕಲ್ಲಕೆರೆಯ ದೇವರ ಅಂಗಭೋಗ ಖಂಡ ಸ್ಪುಟಿತ ಜೀರ್ಣೋದ್ಧಾರಕ್ಕೆ ವಿಕ್ರಮಾದಿತ್ಯನ ರಾಣಿ ಅಭಿನವ ಶಾರದೆ ಮತ್ತು ತೆಲಸಂಗದ ಪ್ರಮುಖ ಮಹಾಜನಂಗಳು ಸೇರಿ ದತ್ತಿ ಬಿಟ್ಟಿದ್ದನ್ನು ಹೇಳಿದೆ.

ಚಾಲುಕ್ಯ ಇತಿಹಾಸದಲ್ಲಿ ಆರನೆಯ ವಿಕ್ರಮಾದಿತ್ಯನಷ್ಟು ಪ್ರಸಿದ್ದರಾದವರು ಬೇರಾರೂ ಇಲ್ಲ. ಅವನ ಆಳ್ವಿಕೆಯ ಸುದೀರ್ಘವಾದ ೫೦ ವರ್ಷಗಳು ಅವನ ಜನಾನುರಾಗವು ದಕ್ಷಯುತವಾದ ರಾಜ್ಯಭಾರ, ಅಪ್ರತಿಮವಾದ ಯುದ್ಧಕೌಶಲವು ಕನ್ನಡ ಜನತೆಗೆ ಸದಾ ಸ್ಫೂರ್ತಿದಾಯಕವಾಗಿದೆ. ಭಾರತ ಇತಿಹಾಸದಲ್ಲಿ ಕನ್ನಡ ನಾಡಿನ ಘನತೆಯೂ ಸ್ಥಾನಮಾನಗಳೂ ಬಾನುದ್ದಕ್ಕೆ ನೆಗೆಯಲು ಕಾರಣರಾದ ಕೇಲವೇ ಮಂದಿ ರಾಜ ಪ್ರಮುಖರಲ್ಲಿ ಆರನೆಯ ವಿಕ್ರಮಾದಿತ್ಯನು ಒಬ್ಬ.

ಆರನೆಯ ವಿಕ್ರಮಾದಿತ್ಯನು ಜಯಂತಿಪುರವನ್ನು ತನ್ನ ನೆಲೆವೀಡನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದನು. ಮತ್ತು ತೆಲಸಂಗ ಶಾಸನವು ವಿಕ್ರಮಾದಿತ್ಯನ ಆಳ್ವಿಕೆಯ ೪೯ ನೇಯ ವರ್ಷವನ್ನು ನಿರೂಪಿಸಿ ಕಂಕಣದ ಕೇತನು ಕಲ್ಲಕೆರೆಯನ್ನು ಕಟ್ಟಿಸಿ ಜೀರ್ಣೋದ್ಧಾರಕ್ಕೆ ದತ್ತಿ ಬಿಟ್ಟಿದ್ದನ್ನು ತಿಳಿಸುತ್ತದೆ.

ರಾಮತೀರ್ಥ ಶಾಸನವು[೪೮] ಶ್ರೀ ಚಾಲುಕ್ಯ ವಿಕ್ರಮನ ಆಳ್ವಿಕೆಯ ನಲ್ವತ್ತನೆಯ ವರ್ಷವನ್ನು ಉಲ್ಲೇಖಿಸಿ, ಯುವರಾಜ ಮಲ್ಲಿಕಾರ್ಜುನದೇವನ ಮಹಾಮಂಡಳೇಶ್ವರ ಪೆರ್ಮಾಡಿಯು

ಗೊಟಕನೂರ (ಕೊಕಟನೂರು) ಶಿವಶಕ್ತಿ ಪಂಡಿತನಿಗೆ ಮೂವತ್ತಾರುಭಬಾಡದ ಬಳಿಯ ನಾಗತಿಹಳ್ಳಿಯನ್ನು ದತ್ತಿ ಬಿಟ್ಟಿದ್ದನ್ನು ಹೇಳಿದೆ. ತೇದಿ ಇಲ್ಲದ ತೆಲಸಂಗ ಶಾಸನವು 'ಶ್ರೀಮತ್ತಿಭುವನಮಲ್ಲದೇವರು ವಿಜಯರಾಜ್ಯ ಮುತ್ತರೋತ್ತರಾಭಿವೃದ್ದಿ ಪ್ರವರ್ಧಮಾನ ಚಂದ್ರಾಕ್ಕತಾರಂ ಸಲುತ್ತಮಿರೆ ಜಯನ್ತಿಪುರದನೆಲೆಯವಿಡಿನೋಳ್ ಸುಖಸಂಕಥಾ ವಿನೋದದಿಂ ರಾಜ್ಯಂಗೆಯುತ್ತಂ'[೨೯] ಎಂದು ಪ್ರಸ್ತಾಪಿಸಿದೆ.

ಎರಡನೆಯ ಜಗದೇಕಮಲ್ಲ

ಮೂರನೆಯ ಸೋಮೇಶ್ವರನು ಕ್ರಿ.ಶ. ೧೧೩೮ ರಲ್ಲಿ ಮರಣ ಹೊಂದಿದನು. ಆತನ ಮಗನಾದ ಎರಡನೆಯ ಜಗದೇಕಮಲ್ಲನು ಕ್ರಿ.ಶ.೧೧೩೮ ರಲ್ಲಿ ಪಟ್ಟಕ್ಕೆ ಬಂದನು. ಜಗದೇಕಮಲ್ಲನ ಆಳ್ವಿಕೆಗೆ ಸಂಬಂಧಪಟ್ಟಂತೆ ಮೂವತ್ತಾರುಂಬಾಡದ "ವಳಸಂಗ" ಶಾಸನವು ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲನ ಆಳಿವಿಕೆಯ ಐದನೆಯ ವರ್ಷವನ್ನು ಪ್ರಸ್ತಾಪಿಸಿ ಸಾಮಂತ 'ಹಂದರಸ' ಮತ್ತು ಅಧಿಕಾರಿ 'ಚೌಡಮಯ್ಯ' ಅಲ್ಲಿನ ದೇವರಿಗೆ ಭೂಮಿಯನ್ನು ನೀಡಿದ್ದನ್ನು ಉಲ್ಲೇಖಿಸಲಾಗಿದೆ. ಮಹಾಮಂಡಳೇಶ್ವರ ಬಿಜ್ಜಳದೇವನು ಕರಹಡ ನಾಲ್ಕು ಸಾವಿರ ಪ್ರಾಂತವನ್ನು ಆಳಿದ್ದನೆಂದು ನಿರೂಪಿಸುತ್ತದೆ. ಇದೇ ಶಾಸನದಲ್ಲಿ ಆರನೇ ವಿಕ್ರಮಾದಿತ್ಯನ ಪಟ್ಟಮಹಿಷಿ ಬಿಜ್ಜಳನ ಮುತ್ತವ್ವೆ ಚಂದಲದೇವಿ "ವಳಸಂಗ" ದ ಆಡಳಿತಾಧಿಕಾರಿಯಾಗಿದ್ದಳೆಂದು ಸೂಚಿಸಿ ಚಂದಲದೇವಿಯನ್ನು ಅಭಿನವಶಾರದೆ[೩೦] ಎಂದು ವರ್ಣಿಸಿದೆ.

ಜಗದೇಕಮಲ್ಲನ ಆಳ್ವಿಕೆಯ ಏಳನೆಯ ವರ್ಷವನ್ನು ಪ್ರಸ್ತಾಪಿಸುವ ವಳಸಂಗ ಶಾಸನವು[೩೧] ಮಹಾಸಾಮಂತ ಬೊಮ್ಮದೇವರಸನು ಅಲ್ಲಿಯ ಲಕ್ಕಣೇಶ್ವರದೇವರಿಗೆ ಪ್ರತಿನಿತ್ಯ ದೇವರ ಪೂಜೆಗಾಗಿ ಭೂಮಿ ದತ್ತಿ ಬಿಟ್ಟಿದ್ದನ್ನು ತಿಳಿಸುತ್ತದೆ.

ವಳಸಂಗ ಮತ್ತೊಂದು ಶಾಸನವು ಜಗದೇಕಮಲ್ಲನ ಆಡಳಿತಾವಧಿಯ ಎಂಟನೆಯ ವರ್ಷವನ್ನು ಉಲ್ಲೇಖಿಸಿ ; ಮಹಾಮಂಡಳೇಶ್ವರ 'ರಾಜಯದೇವರಸನು' ಕಣಂಬಡೆ ಮೂನ್ನೂರು ನಾಡನ್ನು ಆಳುತ್ತಿದ್ದನೆಂದೂ ಮತ್ತು ಅಲ್ಲಿಯ ಲಕ್ಕಣೇಶ್ವರ, ಕೇಶವದೇವಾಲಯ ಮತ್ತು ಮೂಲಸ್ಥಾನ ಕಲಿದೇವರಿಗೆ ಎಣ್ಣೆ, ಎಣ್ಣೆಗಾಣ, ತೆರಿಗೆಯನ್ನು ದಾನವಾಗಿ ನೀಡಿದ್ದನ್ನು ಸೂಚಿಸುತ್ತದೆ.

ಕ್ರಿ.ಶ. ೧೧೪೭ರ ಅಥಣಿ ತಾಲೂಕಿನ ತೆಲಸಂಗ ಶಾಸನವು೩೨ ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲನ ಆಳ್ವಿಕೆಯ ೧೦ನೇ ವರ್ಷವನ್ನು ಪ್ರಸ್ತಾಪಿಸಲಾಗಿದೆ. ಜಗದೇಕಮಲ್ಲನು ಕಲ್ಯಾಣ ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದಾಗ, ಕಲಚುರಿ ಜೋಗಮ ಅರಸನ ಮಗನಾದ ಪೆರ್ಮಾಡಿ ಮತ್ತು ಪೆರ್ಮಾಡಿಯ ಮಕ್ಕಳಾದ ಬಿಜ್ಜಳ ಮತ್ತು ಮೈಳುಗಿಯನ್ನು ಉಲ್ಲೇಖಿಸಿ ಮೈಳುಗಿಯನ್ನು ಜಗದೇಕಮಲ್ಲನ ಪಾದಪದ್ಮೋಪಜೀವಿ ಎಂದು ಕರೆದಿದೆ. ಇದೇ ಶಾಸನದ ಮುಂದಿನ ಭಾಗದಲ್ಲಿ "ಸ್ವಸ್ತಿ ಶ್ರೀ ಚಾಳುಕ್ಯ ಪ್ರತಾಪಚಕ್ರವರ್ತಿ ಜಗದೇಕಮಲ್ಲದೇವ ವರ್ಷದ ೧೦ನೇಯ ಪ್ರಭವ ಸಂವತ್ಸರದ ಅಶ್ವೈಜದ/ಮಾವಾಶ್ಯೆ ಆದಿತ್ಯವಾರದಂದಿನ ಸೂರ್ಯಗ್ರಹಣ ನಿಮಿತ್ತದಿ ಶ್ರೀಮನುಮಹಾಗ್ರಹಾರಂ ತೇಲಿಸಂಗವಾದ ಮಹಾಜನಂಗಳೆರಡಯನ್ನೀ(ರ್ವ್ವ) ಸ್ವಾಮಿಗಳುಂ ಮೂವತ್ತಾರು ಬೀಡಿನ ಸೆಟ್ಟಿಯರುಂತಳದ ಬಣಂಜಿಗ ಸೆಟ್ಟಿಯರುಂ ಸಮಸ್ತ ಕರಣಂಗಳುಮಿರ್ದ್ದು ಸತ್ರಕ್ಕೆ ಬಿಟ್ಟ ಧರ್ಮಂ ಎಂದು ನಿರೂಪಿಸುತ್ತದೆ.

ಕಣಂಬಡೆ ನಾಡಿನ ಕೋಹಳ್ಳಿ ಶಾಸನವು ಚಾಲುಕ್ಯ ಜಗದೇಕಮಲ್ಲನ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿದೆ. ದಂಡನಾಯಕ ವೈಜನಾಥಯ್ಯ ಅಲ್ಲಿನ ಗಂಗೇಶ್ವರ ದೇವರಿಗೆ ದತ್ತಿ ಬಿಟ್ಟ ವಿಷಯ ಪ್ರಸ್ತಾಪಿಸುತ್ತದೆ.[೫೩]

ಜಗದೇಕಮಲ್ಲದೇವನ ನಂತರ ಚಾಲುಕ್ಯ ಸಾಮ್ರಾಜ್ಯ ಅವನತಿಯತ್ತ ಸಾಗಿತು. ಇವರ ನಂತರ ಮೂರನೆಯ ತೈಲಪ (ಕ್ರಿ.ಶ. ೧೧೪೯-೧೧೬೨) ನಾಲ್ಕನೆಯ ಸೋಮೇಶ್ವರ (ಕ್ರಿ.ಶ. ೧೧೮೪-೧೧೮೮) ಆಳ್ವಿಕೆ ಮಾಡಿದರು. ಇವರಿಗೆ ಸಂಬಂಧಪಟ್ಟ ಯಾವುದೇ ಶಾಸನಗಳು ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ದೊರೆತಿರುವುದಿಲ್ಲ.

ಕಲ್ಯಾಣದ ಕಲಚೂರಿಗಳು

ಕಲ್ಯಾಣ ಚಾಲುಕ್ಯರ ಮುಖ್ಯ ಸಾಮಂತರಲ್ಲಿ ಒಬ್ಬರಾದ ಕಲಚೂರಿಗಳು ಕರ್ನಾಟಕದ ಇತಿಹಾಸದಲ್ಲಿ ಬೆಳಕಿಗೆ ಬಂದದ್ದು ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿ. ಕಲ್ಯಾಣ ಚಾಲುಕ್ಯರ ಸುಸಂಘಟಿತ ರಾಜ್ಯಭಾರವು ಪ್ರಭಾವಶಾಲಿಯಾಗಿ ಬಹುಕಾಲದವರೆಗೆ ಆಳ್ವಿಕೆ ನಡೆಸಿತು. ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ನಂತರ ಅವನ ಮಗ ಸೋಮೇಶ್ವರ ಮತ್ತು ಮೊಮ್ಮಗ ಎರಡನೆಯ ಜಗದೇಕಮಲ್ಲನ ಕಾಲಾವಧಿಯಲ್ಲಿ ಯಾವುದೇ ಮಹತ್ವದ ಬೆಳವಣಿಗೆಗಳು ಜರುಗಲಿಲ್ಲ. ಚಾಲುಕ್ಯ ಮೂರನೆ ತೈಲಪನ ಅಧಿಕಾರವಧಿಯಲ್ಲಿ ಮಾಂಡಳಿಕರಾಗಿದ್ದ ಕಲಚೂರಿ ಎರಡನೇ ಬಿಜ್ಜಳನು; ಅಸಮರ್ಥನಾದ ತೈಲಪನನ್ನು ಅಧಿಕಾರದಿಂದ ಕೆಳಗಿಳಿಸಿ ಚಾಲುಕ್ಯ ಸಿಂಹಾಸನದ ಉತ್ತರಾಧಿಕಾರಿಯಾಗಿ ಸ್ವತಂತ್ರ ಸಾರ್ವಭೌಮ ಕಲಚೂರಿ ದೊರೆ ಎಂಬ ಹೆಗ್ಗಳಿಕೆಗೆ ಪಾತ್ರನಾದನು.

ಮಧ್ಯಭಾರತದಿಂದ ಕರ್ನಾಟಕಕ್ಕೆ ಬಂದ ಕಲಚೂರಿಯರು ಕಣಂಬಡೆ ನಾಡಿನ ಪೂರ್ವೋತ್ತರಗಡಿಗೆ ತಗುಲಿದ ತರಿಕಾಡ ನಾಡನ್ನು ತಮ್ಮ ನೆಲೆವೀಡಾಗಿರಿಸಿಕೊಂಡಿದ್ದರು ಎಂಬುದನ್ನು ಜತ್ತ ತಾಲೂಕಿನ ಉಮ್ರಾಣಿ ಶಾಸನವು ಉಲ್ಲೇಖಿಸುತ್ತದೆ.

ಎರಡನೆಯ ಬಿಜ್ಜಳ

"ಭರತಕ್ಷೇತ್ರಂ ಭಾಸುರತರವನ್ತಾ ಕ್ಷೇತ್ರದಲ್ಲಿ ಕುಂತಳ್‌ದೇಶಂ ಹಿಂದುಂ ರಂಜಿಮದ ದಯೊಳುಭರಿತಂ ತರಿಕಾಡನಾಡು ತದ್ದಿಕ್ಷೆಯ ಕಾಭರಣಂ ಮಂಗಳಿವಾಡಂ ಪುರರತ್ನಂ ತತುಪುರೇಶ ನೃಪರಂನಯದೊಳ್ ಜಗದೀಶಮ ಚಲದಂಕರಾಮನದಟಂ ವೈರಿಭಕಂಠಿರವಂ ನೆಗರ್ದಂ ವಿಶುತನಾದಿರಾಜಬಳವತ್ತೇಜೋಗವಂ ಜೋಗಮಂ ನೆಗದಣ ತತ್ಸುತನುದ್ದ ತಾರಿಬಳಮಂ ಹೆಣ್ಮಾಡಿ ಹೆಂಮಾಡಿ ತಾಂ ನೆಗರ್ದಂ ತತ್ತುದ್ತನಿಪ್ಪಚಾತಕನಾವಾಂ ಭೋಭಜ್ವಲಂ ಬಿಜ್ಜಲಂ ಚೋಳಕುಳಾ ತಂಕನೃಪ ಪಾಂಚಾಂ ಗೂರ್ಜ್ಜರ ಕಳಿಂಗ ಕೇರಳ ಧಾತ್ರೀ ಪಾಳಕ ವಿಳಯಂಲಾಳೋತ್ತ್ರೋಳಾಹಳ ಸೌರ್ಯಶಾಳಿ ಬಿಜ್ಜನೃಪಾಳಂ ಅರಿಭೂಭೃತ್ತಶಂಳ ಕುಮುದೋತ್‌ಕರನೆಂದು ಬಿಜ್ಜಭೂಭುಜಾಯತ ಸೌರ್ಯ ಸ್ಥಿರ ಮಿತ್ರೋ ದಯೊರೋಚಿಃ ಪರಿಣತೆಯಿಂ ಮುಗಿವುತಿಮದಿರುಳಂ ಪಗಲುಂ.

"ಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀ ಪೃಥ್ವೀವಲ್ಲಭಂ ಮಹಾರಾಜಾಧಿರಾಜಂ ಪರಮೇಶ್ವರಂ ಕಾಳಾಂಜನಪುರವರಾಧೀಶ್ವರಂ ಸುವರ್ಣಾವೃಷಭಧ್ವಜಂ ಪರನಾರೀಸೋದರಂ ಚಲದಂಕರಾಮ ಶ್ರೀಮತುಕಳಚುರಿಯ ಭುಜಬಳ ಚಕ್ರವರ್ತ್ತಿ ಬಿಜ್ಜಲದೇವ ವಿಜಯಾರಾಜ್ಯಮುತ್ತ ರೋತ್ತರಾಭಿವೃದ್ಧಿ ಪ್ರವರ್ಧಮಾನವೂ ಚಂದ್ರರ್ಕತಾರಂಸಲುತ್ತಮಿರೆ[೫೪] ಎಂದು ಉಲ್ಲೇಖಿಸುವುದರಿಂದ ಕಲಚುರಿಗಳು ತರಿಕಾಡಿನಲ್ಲಿ ಮಂಗಳವೇಡೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ್ದು ಗೊತ್ತಾಗುತ್ತದೆ. ಅಲ್ಲದೇ ಭುಜಬಲ ಚಕ್ರವರ್ತಿ ಬಿಜ್ಜಲದೇವನೆಂದು ಹೇಳಿರುವುದರಿಂದ ಸ್ವತಂತ್ರ ಆಳ್ವಿಕೆ ಮಾಡುತ್ತಿದ್ದುದು ಸ್ಪಷ್ಟವಾಗುತ್ತದೆ.

ಎರಡನೆಯ ಬಿಜ್ಜಳ

ಬಿಜ್ಜಳನಿಗೆ ಸಂಬಂಧಪಟ್ಟ ಕ್ರಿ.ಶ. ೧೧೫೬ ರ ಶಾಸನವೊಂದು ಬಳ್ಳಿಗೇರಿಯಲ್ಲಿ ದೊರೆತಿದೆ.[೫೫] ಎರಡನೆಯ ಬಿಜ್ಜಳನು ಹಿರಿಯ ಸಹೋದರನಾದ ಮೈಲುಗಿಯು ತನ್ನ ಹೆಂಡತಿಯಾದ ಲಕ್ಷ್ಮೀದೇವಿಯ ಜೊತೆಗೂಡಿ ಮುಳಗುಂದ ಬೆಳವಲ ೩೦೦ ಪ್ರದೇಶದ ಮೇಲೆ ಆಳ್ವಿಕೆ ನಡೆಸಿದ ಬಗ್ಗೆ ಉಲ್ಲೇಖವಿದೆ. ಅವನು ಮಹಾಮಂತ್ರಿಯಾದ ಕಾಳಿದಾಸ ಚಂಪಾನ ಬಗ್ಗೆ ಉಲ್ಲೇಖಿಸುತ್ತದೆ.

ಬಿಜ್ಜಳನಿಗೆ ಸಂಬಂಧಪಟ್ಟ ಶಾಸನವೊಂದು ಕೊಕಟನೂರ ಕಲ್ಮೇಶ್ವರ ದೇವಾಲಯದ ಹೊರಗೋಡೆಯಲ್ಲಿ ದೊರೆತಿದೆ.[೫೬] ಶಾಸನದ ಭಾಗವು ತ್ರುಟಿತಗೊಂಡಿದ್ದು ಕಾಲ ತಿಳಿದು ಬಂದಿಲ್ಲ. ಈ ಶಾಸನದಿಂದ ಬಿಜ್ಜಳನ ವಂಶಾವಳಿಯನ್ನು ಅರಿಯಬಹುದು.

ಪೆರ್ಮಾಡಿ

ಎರಡನೆಯ ಬಿಜ್ಜಳ — ಮೈಲುಗಿ

ಈ ಶಾಸನದಲ್ಲಿ ಬಿಜ್ಜಳನನ್ನು ಪರಮೇಶ್ವರ, ಸುವರ್ಣವೃಕ್ಷಭಧ್ವಜ, ಶನಿವಾರಸಿದ್ಧಿ, ಭುಜಬಲಚಕ್ರವರ್ತಿ ಎಂಬ ಬಿರುದುಗಳಿಂದ ವರ್ಣಿಸಿದ್ದು ಕಂಡುಬರುತ್ತದೆ.

ಕ್ರಿ.ಶ. ೧೧೬೭ ರ ಶಾಸನವೊಂದು[೫೭] ರಾಮತೀರ್ಥದಲ್ಲಿ ದೊರೆತಿದೆ. ಬಿಜ್ಜಳದೇವನ ಸಾಮಂತನಾಗಿದ್ದ ಮಹಾಮಂಡಳೇಶ್ವರ ಪೆರ್ಮಾಡಿಯನ್ನು ಸತ್ಯತೆಯ ಸಾಗರವಾಗಿದ್ದ. ಹಾವುಗಳಿಗೆ, ಗರುಡ ಹೇಗೋ ಹಾಗೆ ಇವನು ತನ್ನ ವೈರಿಗಳಿಗೆ ಸಿಂಹಸ್ವಪ್ನವಾಗಿದ್ದನು ಎಂದು ವರ್ಣಿಸುತ್ತದೆ. ಬಪ್ಪನ ನಂಬಿಗಸ್ತ ಸೇವಕನಾಗಿದ್ದ ಚಂದ್ರಾಭರಣ ಪಂಡಿತ ದೇವನನ್ನು ಕುರಿತು ಹೇಳುವದಲ್ಲದೇ ಇವನ ಕೀರ್ತಿಯು ಸಾಮ್ರಾಜ್ಯದ ಗಡಿಯವರೆಗೆ ಹಬ್ಬಿತ್ತೆಂದು ತಿಳಿದು ಬರುತ್ತದೆ.

ಎರಡನೆಯ ಬಿಜ್ಜಳನು ಕ್ರಿ.ಶ. ೧೧೬೭ ರಲ್ಲಿ ಮರಣ ಹೊಂದಿದನು. ತದನಂತರ ಕಲಚೂರಿ ವಂಶದಲ್ಲಿ ರಾಜ್ಯಾಧಿಕಾರಕ್ಕಾಗಿ ಕಲಹ ಪ್ರಾರಂಭವಾಯಿತು. ಬಿಜ್ಜಳನ ತಮ್ಮನಾದ ಮೈಲುಗಿಯನ್ನು ಸೋವಿದೇವನು ನಿಷ್ಠಾವಂತ ಸಾಮಂತ ದಂಡಾಧಿಕಾರಿಗಳ ನೆರವಿನಿಂದ ಸೋಲಿಸಿದನು. ಕ್ರಿ.ಶ. ೧೧೬೭ ರಲ್ಲಿ ಸೋವಿದೇವನು ಪಟ್ಟಾಭಿಷಿಕ್ತನಾದನು.[೫೮] ಇವನ ಆಳ್ವಿಕೆಗೆ ಸಂಬಂಧಪಟ್ಟ ಕ್ರಿ.ಶ. ೧೧೬೯ ರ ಶಾಸನವೊಂದು[೫೯] ಕೊಕಟನೂರಿನಲ್ಲಿ ದೊರೆತಿದೆ. ಈ ಶಾಸನವು ರಾಯಮೂರಾರಿ ಸೋವಿದೇವನ ವಂಶಾವಳಿಯ ಬಗ್ಗೆ ಮಾಹಿತಿಯನ್ನು ನೀಡಿದೆ. ಸೋವಿದೇವನಿಗೆ ಸಮಸ್ತ ಭುವನಾಶ್ರಯ, ಪೃಥ್ವಿವಲ್ಲಭ, ಮಹಾರಾಜಾಧಿರಾಜ, ಕಾಲಂಜರ

ಪುರವರಾಧೀಶ್ವರ, ಸುವರ್ಣವೃಕ್ಷಭಧ್ವಜ, ಭುವನೈಕವೀರ ಮುಂತಾದ ಬಿರುದುಗಳಿದ್ದ ಬಗ್ಗೆ ಉಲ್ಲೇಖಿಸುತ್ತದೆ.

ಕ್ರಿ.ಶ. ೧೧೭೪ರ ಉಮ್ರಾಣಿ ಶಾಸನವು ಕಲಚೂರಿಗಳ ವಂಶಾವಳಿಯನ್ನು ಜೋಗಮನಿಂದ ಬಿಜ್ಜಲನವರೆಗೆ ಉಲ್ಲೇಖಿಸುತ್ತದೆ.[೬೦]

ಡಾ. ಪಿ.ಬಿ.ದೇಸಾಯಿಯವರು ಕಲಚೂರಿ ಮೂಲ ಪುರುಷನ ಕುರಿತು ಹೇಳುವಾಗ ಕೊಕಟನೂರ ಶಾಸನದಲ್ಲಿ ಜೋಗಮನ ತಂದೆ ಕೃಷ್ಣಾ ಎಂದು ಹೇಳುವುದರ ಜೊತೆಗೆ ಈತ ಮಂಗಳವೇಡೆಯಲ್ಲಿ ಆಳ್ವಿಕೆ ಮಾಡುತ್ತಿರುವ ಕುರಿತ ವಿಷಯವನ್ನು ತಿಳಿಸುತ್ತದೆ. ಕನ್ನಮನೆ ಜೋಗಮನ ತಂದೆ ಎಂದು ಅರ್ಥೈಯಿಸಬಹುದು.

ಜೋಗಮ

ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ೧೧ನೇ ವರ್ಷವನ್ನು ಸೂಚಿಸುವ ಕೊಳಗಿರಿ ಶಾಸನವು ಕ್ರಿ.ಶ. ೧೦೮೭–೮೮ ನೇಯ ಅವಧಿಯಲ್ಲಿ ಜೋಗಮರಸನು ಕರಹಡ ನಾಲ್ಕು ಸಾವಿರ ಪ್ರಾಂತವನ್ನು ತ್ರಿಭೋಗಾಭ್ಯಂತರ ಸಿದ್ದಿಯಿಂದ ಆಳುತಿದ್ದನೆಂದು[೬೧] ಪ್ರಸ್ತಾಪಿಸುತ್ತದೆ.

ಮಹಾಮಂಡಳೇಶ್ವರ ಬನ್ನರಸ

ಭುಜಬಲ ಚಕ್ರವರ್ತಿ ಬಿಜ್ಜಲದೇವನ ಆಡಳಿತಾವಧಿಯಲ್ಲಿ ಮಹಾಮಂಡಳೇಶ್ವರ "ಬನ್ನರಸನು" ದತ್ತಿ ಬಿಟ್ಟ ವಿಷಯವನ್ನು ರಾಮತೀರ್ಥ ಶಾಸನ[೬೨] ನಿರೂಪಿಸುತ್ತದೆ.

ಮಹಾಮಂಡಳೇಶ್ವರ ಹೆಮ್ಮಾಡಿ

ಬಿಜ್ಜಳನ ಆಡಳಿತಾವಧಿಯಲ್ಲಿ ಕಣಂಬಡೆ ನಾಡಿನ ಉಂಬರವಾಣಿ ಮೂವತ್ತಾರು ಪ್ರಾಂತ್ಯದ ಆಡಳಿತಾಧಿಕಾರಿ ಮಹಾಮಂಡಳೇಶ್ವರ 'ಹೆಮ್ಮಾಡಿ' ಮತ್ತು ದಂಡನಾಯಕ 'ಮಧುವಣಯ್ಯ'ರನ್ನು ಉಲ್ಲೇಖಿಸಿದೆ. ಅಲ್ಲಿ ಇವರು ದೇವರಿಗೆ ದತ್ತಿ ಬಿಟ್ಟಿದನ್ನು ಉಮ್ರಾಣಿ ಶಾಸನವು[೬೩] ನಿರೂಪಿಸುತ್ತದೆ. ಇದೇ ಶಾಸನದಲ್ಲಿ ಕೊಟ್ಟಲಗಿ ಸೀಮೆಯು ಸಹ ಉಲ್ಲೇಖಗೊಂಡಿರುವುದು ಗಮನಾರ್ಹ ಸಂಗತಿಯಾಗಿದೆ.

ಮೈಲುಗಿದೇವ

ಅಥಣಿ ತಾಲೂಕಿನ ಬಾಡಗಿ ಶಾಸನವು ಭುಜಬಲ ಚಕ್ರವರ್ತಿ ಬಿಜ್ಜಳದೇವನ ಆಳ್ವಿಕೆಯ ಹನ್ನೊಂದನೆಯ ವರ್ಷವನ್ನು ಪ್ರಸ್ತಾಪಿಸುತ್ತದೆ. ಮಹಾಮಂಡಳೇಶ್ವರ ಮೈಲುಗಿದೇವನ ಅನುಮತಿಯಿಂದ ತುಂಗಳ ಹನ್ನೆರಡರ ಮನೆಯ ದೇವರಸ ಮತ್ತು ಬಾಡಿಗೆ ಪ್ರಭು ಚೌಡಭಟ್ಟೋಪಾಧ್ಯಾಯರು ಬಾಡಗಿಯ ಶ್ರೀ ಲಕ್ಷ್ಮಣೇಶ್ವರ ದೇವರಿಗೆ ಭೂಮಿಯನ್ನು ದತ್ತಿಯಾಗಿ ನೀಡಿದ್ದನ್ನು ಉಲ್ಲೇಖಿಸುತ್ತದೆ.[೬೪]

ರಾಯಮುರಾರಿ ಸೋಯಿದೇವರಸ

ಕಣಂಬಡೆ ನಾಡಿನ ಉಮ್ರಾಣಿ ಶಾಸನವು ಉಮ್ರಾಣಿಯ ಮಹಾಮಂಡಳೇಶ್ವರ, ಹೆಮ್ಮಾಡಿ ಅರಸನ ಪಟ್ಟಮಹಿಷಿ "ಚಂದಲದೇವಿ" ಮತ್ತು ದಂಡನಾಯಕ "ಕಪ್ಪದೇವಗೋಪತಿ" ಮುಂತಾದವರು "ಶಕವರ್ಷ" ಸಾಸಿರದೊಂಬತ್ತಾರನೆಯ ವಿಜ್ಜೆಯ ಸಂವತ್ಸರದ ಜೇಷ್ಠದಮಾವಸ್ಯೆ ಸೋಮವಾರ ಸೂರ್ಯಗ್ರಹಣದಂದು ರಾಯಮುರಾರಿಭುಜಬಳಮಲ್ಲ ಸೋಯಿದೇವರಸನ ಹೇಳಿಕೆಯಿಂ ಶ್ರೀ

ಹೆಂಮ್ಮೇಶ್ವರ ದೇವರ ಖಂಡುಸ್ಫುಪಿತಜೀರ್ಣೋದ್ವಾರ ತಪೋಧನರಾಹಾರದಾನಕ್ಕಂ ಚಂದಲದೇವಿಯರಸೀಯಿ, ಕಡಲ್ವೆಡಿನೀಂ ಕಪ್ಪದೇವಗೋಪತಿ ದಂಡನಾಯಕ ಪ್ರಮುಖ ಕರಣಂಗಳು ಸರ್ವಬಾಧಾಪರಿಹಾರಂ ಸರ್ಬನಮಸ್ಯಂ ಧಾರಾಪೂರ್ವ್ವಕ ಮಾಡಿ ಬಿಟ್ಟರು ಎಂದು ಹೇಳಿದೆ.[೬೫]

ಚಿದ್ದರಸ ದಂಡನಾಯಕ

ಭುಜಬಲ ಚಕ್ರವರ್ತಿ ರಾಯಮುರಾರಿ ಸೋವಿದೇವನು ಮೊದಗನೂರಿನಲ್ಲಿ ಆಳ್ವಿಕೆ ಮಾಡುತ್ತಿದ್ದಾಗ ಮಹಾಪ್ರಧಾನ ದಂಡನಾಯಕನು ಕಣಂಬಡೆ ನಾಡಿನಾಧಿಕಾರಿ ಚಿದ್ದರಸ ದಂಡನಾಯಕ ಮತ್ತು ತುಂಗಳ ಅಗ್ರಹಾರದ ಮಹಾಪ್ರಭು ಚೌಡಭಟ್ಟೋಪಾಧ್ಯಾಯರು ಅಲ್ಲಿಯ ದೇವರಿಗೆ ದತ್ತಿ ಬಿಟ್ಟಿದ್ದನ್ನು ತುಂಗಳ ಶಾಸನ[೬೬] ದೃಡಪಡಿಸುತ್ತದೆ.

ಇನ್ನು ವೀರ ಬಿಜ್ಜಳ, ಕಲಚೂರಿ ಮೈಲುಗಿ–ಮೈಳುಗಿ,–ಮಲ್ಲಿಕಾರ್ಜುನ, ಕಲಚೂರಿ ಸಂಕಮ, ಸೇವುಣರ ಭಿಲ್ಲಮ, ದೇವಗಿರಿ ಸಿಂಘಣನಾಗರಸ, ಯಾದವ ಮಹಾದೇವ ಮುಂತಾದವರು ಆಳಿದ ಉಲ್ಲೇಖಗಳಿವೆ.

ಕಣಂಬಡೆ ನಾಡು ಆಳಿದ ದೊರೆಗಳು, ನೀಡಿದ ವಾಸ್ತುಶಿಲ್ಪ ಕೊಡುಗೆಗಳು

ಕೊಟ್ಟಲಗಿ ನಾಡನ್ನು ಒಳಗೊಂಡಂತೆ ಕಣಂಬಡೆ ನಾಡಿನಲ್ಲಿರುವ ವಾಸ್ತುಶಿಲ್ಪ ದೇವಾಲಯಗಳು ಅಂದಿನ ಜನಜೀವನದಲ್ಲಿ ಪ್ರಮುಖ ಪಾತ್ರವಹಿಸಿರುವುದು ಕಂಡು ಬರುತ್ತದೆ. ದೇವಾಲಯಗಳು ಕೇವಲ ಶ್ರದ್ಧಾ ಭಕ್ತಿಯ ಕೇಂದ್ರಗಳಾಗಿರದೆ ಅಂದಿನ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ವಿದ್ಯಾಕೇಂದ್ರಗಳಾಗಿ ಕಾರ್ಯ ನಿರ್ವಹಿಸುತ್ತಿದ್ದುದು ಗಮನಾರ್ಹವಾದ ಸಂಗತಿಯಾಗಿದೆ.

ಪ್ರಾಚೀನ ಕಾಲದಲ್ಲಿ ಜನರು ಪಾಪ ಪುಣ್ಯದ ಕಲ್ಪನೆಯಿಂದ ಧರ್ಮಾಚರಣೆಗೆ ತೊಡಗಿ ಜೀವನದುದ್ದಕ್ಕೂ ಸಾಮಾಜಿಕ ಸತ್ಕಾರ್ಯಗಳನ್ನು ಮಾಡುತಿದ್ದರು. ಇದರ ಉದ್ದೇಶ ಪುಣ್ಯಗಳಿಸುವುದಾಗಿತ್ತು. ಈ ಹಿನ್ನೆಲೆಯಲ್ಲಿ ಅವರ ಔದಾರ್ಯದ ಫಲವಾಗಿ ದೇವಸ್ಥಾನ, ಕೆರೆ, ಕಟ್ಟೆ, ಬಾವಿ, ಸತ್ರ ಹಾಗೂ ಆರಾಮ, ಅರವಟ್ಟಿಗೆ ಮೊದಲಾದವುಗಳು ನಿರ್ಮಾಣಗೊಂಡವು. ಅವುಗಳಿಗಾಗಿ ಅವರು ಅನೇಕ ದಾನದತ್ತಿಗಳನ್ನು ನೀಡುತ್ತಿದ್ದರು. ಇದಕ್ಕೆ ಅರಸರು, ಮಹಾಮಂಡಳೇಶ್ವರರು ಮತ್ತು ಅಧಿಕಾರಿಗಳು ಪ್ರೋತ್ಸಾಹ ನೀಡಿದ್ದಾರೆ.

ದೇವಾಲಯಗಳನ್ನು ಕಟ್ಟಿಸಿದ ವ್ಯಕ್ತಿಗಳು ಅದರ ಚಟುವಟಿಕೆಗಳು ಸಾರೋದ್ದಾರವಾಗಿ ನಡೆದುಕೊಂಡು ಹೋಗಲು ದಾನ ಬಿಡುತ್ತಿದ್ದರು. ಅದರೊಂದಿಗೆ ಅರಸರು, ಮಹಾಮಂಡಳೇಶ್ವರರು, ಆಡಳಿತದ ವಿವಿಧ ಅಧಿಕಾರಿಗಳು, ವರ್ತಕರು ಹಾಗೂ ಸಾಮಾನ್ಯರು ಭೂಮಿ, ನಿವೇಶನ, ದವಸ–ಧಾನ್ಯ, ಎಣ್ಣೆ, ಗಾಣ, ಧನಿಕರು, ಹಣ, ಸುಂಕ ಮೊದಲಾದವುಗಳನ್ನು ದಾನ ಮಾಡುತ್ತಿದ್ದರು. ಅವು ಆರ್ಥಿಕ ಹಾಗೂ ಸಾಮಾಜಿಕ ವಿಸ್ತೃತರೂಪ ಪಡೆದುಕೊಂಡಂತೆ ಅದನ್ನು ವ್ಯವಸ್ಥಿತವಾಗಿ ನೋಡಿಕೊಂಡು ಹೋಗಲು ಆಡಳಿತವರ್ಗ ಇಲ್ಲವೇ ಪರಿಚಾರಿಕ ವರ್ಗದವರಿಗೆ ಮತ್ತು ಅವರು ನಿರ್ವಹಿಸುವ ಕೆಲಸಗಳಿಗೆ ಇಷ್ಟಿಷ್ಟೆಂದು ವಿವರವಾಗಿ ನಿಗದಿಪಡಿಸಿ ಕೊಡುತ್ತಿದ್ದರು. ದೇವರ ನೈವೇದ್ಯ, ನಂದಾದೀವಿಗೆ, ತಿಕಾಲಪೂಜೆ, ಗಂಧ, ಪುಷ್ಪ, ಕರ್ಪೂರ, ಕುಂಕುಮ, ತಾಂಬೂಲ, ಗೀತವಾದ್ಯ, ನೃತ್ಯ, ರಂಗಶೋಭೆ, ಚೈತ್ರಪವಿತ್ರಾರೋಹಣ, ಖಂಡಸ್ಫುಪಿತ, ಜೀರ್ಣೋದ್ದಾರ, ತಪೋಧನರ, ವಿದ್ಯಾರ್ಥಿಗಳ, ಆಹಾರ ಬಟ್ಟೆ ಹಾಗೂ ಸ್ಥಾನಾಚಾರ್ಯರಿಗೆ, ಪೂಜಾರಿಗೆ, ಶಿಲ್ಪಿಗಳಿಗೆ, ಉಪಾದ್ಯಾಯರಿಗೆ, ಹಾಡುವವರಿಗೆ, ಮಾಲೆಗಾರರಿಗೆ ದಾನ ಬಿಟ್ಟಿರುವುದನ್ನು ಶಾಸನಗಳು ಉಲ್ಲೇಖಿಸುತ್ತವೆ.

ದೇವಾಲಯಗಳಿಗೆ ಅತ್ಯಂತ ಮಹತ್ವ ದೊರೆಯುವುದಕ್ಕೆ ಧಾರ್ಮಿಕ ಹಿನ್ನೆಲೆ ಒಂದು ಕಾರಣವಾಗಿದೆ. ಇನ್ನೊಂದು ಸಾರ್ವಜನಿಕ ಕಾರ್ಯಗಳಲ್ಲಿ ತೊಡಗಿದ್ದುದು. ದೇವಸ್ಥಾನ, ಮಠಗಳು ಈಗಿನ ಶಾಲೆಗಳಂತೆ ವಿದ್ಯಾದಾನ ಮಾಡುತ್ತಿದ್ದವು. ಹೀಗಾಗಿ ಸಾರ್ವಜನಿಕರಿಂದ ದಾನ ದತ್ತಿ ಹರಿದು ಬರುತ್ತಿದ್ದವು. ವಿದ್ಯಾಕೇಂದ್ರಗಳಾಗಿದ್ದ ಮಠಗಳು ದೇವಾಲಯಕ್ಕೆ ಹೊಂದಿ ಕೊಂಡಂತೆ ಇರುತ್ತಿದ್ದವು. ಹೀಗಾಗಿ ದೇವಾಲಯಗಳು ಇಡೀ ನಾಡಿನ ನಾಡಿಯನ್ನು ಹಿಡಿದು ನಡೆಸುತ್ತಿದ್ದ ಸಾಂಸ್ಕೃತಿಕ ಕೇಂದ್ರಗಳಾಗಿದ್ದವು.[೬೭]

ದೇವಾಲಯದ ನಿರ್ಮಾಣ ಮತ್ತು ಅವುಗಳ ಪೋಷಣೆಯಲ್ಲಿ ಆಗಿನ ಅರಸು ಮನೆತನಗಳ ಪಾತ್ರ ಹಿರಿದಾಗಿತ್ತು. ಕಣಂಬಡೆ ನಾಡಿನ ದೇವಾಲಯಗಳ ನಿರ್ಮಾಣ ಚಟುವಟಿಕೆಗಳಿಗೆ ಪ್ರೋತ್ಸಾಹ ಮತ್ತು ದಾನ ದತ್ತಿಗಳ ಮೂಲಕ ಅವುಗಳ ಪೋಷಣೆ ಒದಗಿಸಿದವರಲ್ಲಿ ಕಲ್ಯಾಣ ಚಾಲುಕ್ಯರು, ಕಲಚೂರ್ಯರು ಮತ್ತು ಯಾದವ ಅರಸು ಮನೆತನಗಳು ಪ್ರಧಾನಪಾತ್ರ ವಹಿಸಿ ಗಮನಾರ್ಹ ಸೇವೆ ಸಲ್ಲಿಸಿವೆ. ಕಣಂಬಡೆ ನಾಡಿನ ವಿವಿಧ ಅರಸು ಮನೆತನಗಳ ಕಾಲಾವಧಿಯಲ್ಲಿ ಕಂಡು ಬರುವ ವಿವಿಧ ಮತಧರ್ಮಗಳ ದೇವಾಲಯಗಳು ಮತ್ತು ಅವುಗಳಿಗೆ ದಾನದತ್ತಿಗಳನ್ನು ನೀಡಿದ ಉಲ್ಲೇಖ ಹಲವು ಶಾಸನಗಳಲ್ಲಿವೆ.

ಕೊಟ್ಟಲಗಿ ಹಾಗೂ ಕಣಂಬಡೆ ನಾಡಿನಲ್ಲಿ ಕಲ್ಯಾಣ ಚಾಲುಕ್ಯರ ದೀರ್ಘಕಾಲದ ಆಳ್ವಿಕೆಯಿಂದಾಗಿ ಕಲಚೂರ್ಯ ಮತ್ತು ಯಾದವರಿಗಿಂತ ಹೆಚ್ಚಿನ ದೇವಾಲಯಗಳು ಮತ್ತು ದೇವಾಲಯಗಳಿಗೆ ನೀಡಿದ ದಾನದತ್ತಿಗಳು ಅವರ ಹೆಸರಿನಲ್ಲಿ ಕಂಡುಬರುತ್ತವೆ. ದೇವಾಲಯಗಳ ನಿರ್ಮಾಣ ಹಂತದಲ್ಲಿ ತ್ರಿಮೂರ್ತಿ, ತ್ರೈಪುರುಷ ದೇವಾಲಯ ಮತ್ತು ತ್ರಿಕೂಟಗಳು ತಲೆ ಎತ್ತಿದ್ದವು. ತ್ರಿಮೂರ್ತಿ ದೇವಾಲಯಗಳನ್ನು ತ್ರೈಪುರುಷ ದೇವಾಲಯಗಳೆಂದು ಕರೆಯುತ್ತಿದ್ದರು.[೬೮]

ತ್ರಿಕೂಟ ಎಂದರೆ ಮೂರು ಶಿಖರಗಳುಳ್ಳ ದೇವಾಲಯಗಳು. ಈ ದೇವಾಲಯಗಳಲ್ಲಿ ಮಧ್ಯಕೂಟದ ದೇವರಿಗೆ ಪ್ರಮುಖ ಸ್ಥಾನವಿರುತ್ತಿತ್ತು. ತ್ರಿಕೂಟಗಳಲ್ಲಿ ಇಂಥವೇ ದೇವರುಗಳಿರಬೇಕೆಂಬ ನಿಯಮವಿರಲಿಲ್ಲ. ಮಧ್ಯದಲ್ಲಿ ಹೆಚ್ಚಾಗಿ ಈಶ್ವರ ಮತ್ತು ಕೇಶವ ದೇವರುಗಳಿದ್ದರೆ, ಉಳಿದ ಎರಡು ಕೂಟಗಳಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ, ಆದಿತ್ಯಾದೇವ, ವಿನಾಯಕದೇವ ಹೀಗೆ ಯಾವುದಾದರೂ ಇರಬಹುದಾಗಿತ್ತು.[೬೯] ಕೆಲವು ಸಂದರ್ಭಗಳಲ್ಲಿ ಅವು ವಿಭಿನ್ನವಾದ ಹೆಸರುಗಳಿಂದ ಕರೆಯಲ್ಪಟ್ಟಿರುವುದು ವಿಧಿತವಾಗಿದೆ. ಉಮ್ರಾಣಿಯ[೭೦] "ತ್ರಿಕೂಟ ದೇವಾಲಯ" ಹೆಮ್ಮೇಶ್ವರ ದೇವಾಲಯ, ಕೊಕಟನೂರಿನ 'ತ್ರಿಕೂಟ ದೇವಾಲಯ'[೭೧] ಮಹಾದೇವ ದೇವಾಲಯ ಮುಂತಾದವು. ಕಣಂಬಡೆ ನಾಡಿನ ತ್ರಿಕೂಟ ದೇವಾಲಯಗಳಲ್ಲಿ ಶೈವಲಿಂಗ ದೇವರ ಹೆಸರುಗಳು ಕಂಡುಬರುತ್ತವೆ.

ಕಣಂಬಡೆ ನಾಡಿನ ಶಾಸನಗಳಲ್ಲಿ ಉಕ್ತವಾದ ದೇವಾಲಯಗಳಲ್ಲಿ ಪ್ರಮುಖವಾದವುಗಳೆಂದರೆ ತದಲಬಾಗಿಯ ಸೋಮನಾಥ ದೇವಾಲಯ ಮತ್ತು ಸೋಮೇಶ್ವರ ದೇವಾಲಯ, ರಾಮತೀರ್ಥದ ಸ್ವಯಂಭುರಾಮೇಶ್ವರ ದೇವಾಲಯ, ಕೊಕಟನೂರಿನ ಸ್ವಯಂಭೂವಿಶ್ವೇಶ್ವರ ದೇವಾಲಯ ಮತ್ತು ಭಾವಸುದ್ದ ದೇವರ ದೇವಾಲಯ, ತೆಲಸಂಗದ ರೇವಣೇಶ್ವರ ದೇವಾಲಯ, ಕಲ್ಲಿನಾಥ ದೇವಾಲಯ, ಕೊಕಟನೂರ, ಉಮ್ರಾಣಿಯ ಹೆಮ್ಮೇಶ್ವರ, ಉಕ್ಕೇಶ್ವರ, ಚಂದಲೇಶ್ವರ ದೇವಾಲಯ, ತುಂಗಳದ ಚನ್ನಕೇಶವ ದೇವಾಲಯ, ಯಂಕಂಚಿಯ ಕೋಪನಾಥ ದೇವಾಲಯ, ಕೇಶವ

ದೇವಾಲಯ ಹಾಗೂ ಮೂಲಸ್ಥಾನ ಕಲಿದೇವ ದೇವಸ್ಥಾನ ಇವು ಕಣಂಬಡೆ ನಾಡಿನ ಪ್ರಮುಖ ದೇವಾಲಯಗಳಾಗಿವೆ.

ಕಣಂಬಡೆ ನಾಡಿನ ದೇವಾಲಯಗಳು ಕಲ್ಯಾಣ ಚಾಲುಕ್ಯರ ಮಾದರಿ(ಶೈಲಿ)ಯಲ್ಲಿ ನಿರ್ಮಾಣ ಗೊಂಡಿದ್ದು. ಇವುಗಳಲ್ಲಿ ಏಕಕೂಟ, ದ್ವಿಕೂಟ, ತ್ರಿಕೂಟ ಮತ್ತು ಚರ್ತುಷ್ಕೂಟ ದೇವಾಲಯಗಳು ಕಂಡು ಬರುತ್ತವೆ. ಇವು ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖಮಂಟಪ ಹೊಂದಿವೆ. ಏಕಕೂಟ ದೇವಾಲಯಗಳಿಗೆ ಕೆಲವು ಸಲ ಮುಖ ಮಂಟಪಗಳಲ್ಲದೆ ನೇರವಾಗಿ ಸಭಾ ಮಂಟಪದಿಂದ ಪ್ರವೇಶವಿರುತ್ತದೆ. 'ಉಮ್ರಾಣಿಯ ಹೆಮ್ಮೇಶ್ವರ(ಹೆಮ್ಮೆಲಿಂಗ) ದೇವಾಲಯ ತ್ರಿಕೂಟ ದೇವಾಲಯವಾಗಿದ್ದು' ಮಧ್ಯದಲ್ಲಿ ಗರ್ಭಗೃಹವಿದ್ದು ಶಿವಲಿಂಗವಿದೆ. ತೆರೆದ ಅಂತರಾಳ ಸಭಾ ಮಂಟಪಗಳಿಂದ ಕೂಡಿದೆ. ಈ ಸಭಾ ಮಂಟಪಕ್ಕೆ ಹೊಂದಿಕೊಂಡು ಇನ್ನೊಂದು ಸಭಾ ಮಂಟಪವಿದೆ. ಮಧ್ಯದಲ್ಲಿ ನಂದಿಯ ವಿಗ್ರಹವಿದೆ. ಯಂಕ್ಕಂಚಿಯ ಮಲ್ಲಿಕಾರ್ಜುನ ದೇವಾಲಯ ದ್ವಿಕೂಟವಾಗಿದ್ದು; ಮೂರು ಗರ್ಭಗೃಹಗಳನ್ನು ಹೊಂದಿದೆ. ದೇವಾಲಯದ ಮುಂಭಾಗದಲ್ಲಿ ಮತ್ತೆ ಎರಡು ಗರ್ಭಗೃಹಗಳನ್ನು ರಚಿಸಿದ್ದರಿಂದ ಪಂಚಕೂಟಗಳಾಗಿ ವಿಸ್ತಾರರೂಪ ಪಡೆದುಕೊಂಡಿದೆ.

ಕೊಟ್ಟಲಗಿ ಸಿದ್ದೇಶ್ವರ ದೇವಾಲಯ

ಕೊಟ್ಟಲಗಿಯಲ್ಲಿರುವ ಶ್ರೀ ಸಿದ್ದೇಶ್ವರ ದೇವಾಲಯವು ಯಾವುದೇ ಶಾಸನಗಳಲ್ಲಿ ಉಲ್ಲೇಖ ಬರದೇ ಇದ್ದರೂ ಈ ದೇವಾಲಯದ ವಾಸ್ತುಶಿಕ್ಷಣದ ಹಿನ್ನೆಲೆಯಲ್ಲಿ ಇದು ಕಲ್ಯಾಣ ಚಾಲುಕ್ಯ ಕಾಲಾವಧಿಯಲ್ಲಿ ನಿರ್ಮಾಣವಾಗಿರಬೇಕೆಂಬ ಅಂಶ ಸ್ಪಷ್ಟವಾಗುತ್ತದೆ. ಏಕಕೂಟ ಮಾದರಿಯಲ್ಲಿರುವ ದೇವಾಲಯವು ಆಯತಾಕಾರದ ತಲವಿನ್ಯಾಸವನ್ನು ಹೊಂದಿದೆ. ಈ ದೇವಾಲಯದ ತಲವಿನ್ಯಾಸದಲ್ಲಿ ಚೌಕಾಕಾರದ ಗರ್ಭಗೃಹ, ಅಂತರಾಳ, ಮುಚ್ಚಿದ ನವರಂಗ ಹಾಗೂ ಮುಖ ಮಂಟಪಗಳಿಂದ ಕೂಡಿದೆ. ಮುಖಮಂಟಪದ ಪ್ರವೇಶದ್ವಾರ ಉತ್ತರ ದಿಕ್ಕಿಗಿದೆ. ಅಧಿಷ್ಠಾನ, ಭಿತ್ತಿ, ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪ, ಬಾಗಿಲವಾಡು, ಸ್ತಂಭಗಳು, ಭುವನೇಶ್ವರಿಗಳು ಈ ರೀತಿಯಾಗಿ ವಿವಿಧ ವಿನ್ಯಾಸಗಳನ್ನೊಳಗೊಂಡಿದೆ.

ಗಣಪತಿ ವಿಗ್ರಹ

ಗ್ರಾಮದ ಸಿದ್ದೇಶ್ವರ ದೇವಾಲಯದ ಉತ್ತರ ಭಾಗದ ಬಾಗಿಲಿಗೆ ಎದುರಾಗಿ ಬೃಹತ್ ಗಣಪತಿ ವಿಗ್ರಹವಿದೆ. ಈ ವಿಗ್ರಹವು ಸಂಪೂರ್ಣ ಕಲ್ಲಿನಿಂದ ನಿರ್ಮಾಣವಾಗಿದ್ದು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿದೆ. ಮೂರು ಅಡಿ ಎತ್ತರದ ಜಗತಿಯ ಮೇಲೆ ಈ ಸುಂದರ ವಿಗ್ರಹ ಸ್ಥಾಪಿತವಾಗಿದೆ.

ಕಲ್ಮೇಶ್ವರ ದೇವಾಲಯ

ಇದರಂತೆ ಕೊಟ್ಟಲಗಿಯಲ್ಲಿರುವ ಕಲ್ಮೇಶ್ವರ ದೇವಾಲಯವು ಕೂಡ ಕಲ್ಯಾಣಿ ಚಾಲುಕ್ಯರ ಮಾದರಿಯನ್ನು ಹೊಂದಿದೆ. ಇದು ಕೂಡ ಏಕಕೂಟ ಮಾದರಿಯ ದೇವಾಲಯವಾಗಿದೆ. ಕಲ್ಮೇಶ್ವರ ದೇವಾಲಯವು ಶಾಸನಗಳಲ್ಲಿ ಕಂಡುಬರದಿದ್ದರೂ ಸ್ಥಳೀಕರು ಕರೆದಿರುವದನ್ನು ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ. ಈ ದೇವಾಲಯವು ಒಂದು ಗರ್ಭಗೃಹವನ್ನು ಹೊಂದಿದೆ. ಪೂರ್ವಾಭಿಮುಖವಾಗಿ ಈ ಗರ್ಭಗೃಹವಿದ್ದು ಚೌಕಾಕಾರವಾಗಿದೆ ಮಧ್ಯದಲ್ಲಿ ಪಾಣಿ ಪೀಠವುಳ್ಳ

ಲಿಂಗವಿದೆ. ಗರ್ಭಗೃಹದ್ವಾರವು ಆಕರ್ಷಕವಾಗಿದೆ. ಅಲ್ಲದೇ ನವರಂಗ ಮಂಟಪ ಇರಬಹುದಾದರೂ ಶಿಥಿಲಗೊಂಡಿದ್ದರಿಂದ ಪೂರ್ಣವಾಗಿ ನಿರ್ದರಿಸಲು ಸಾಧ್ಯವಿಲ್ಲದಾಗಿದೆ.

ಇದೇ ತೆರನಾದ ಶಾಸನದಲ್ಲಿ ಉಲ್ಲೇಖವಿಲ್ಲದ ತೇಲಸಂಗದ ಕಲ್ಮೇಶ್ವರ ದೇವಸ್ಥಾನ ಕೂಡ ಕಲ್ಯಾಣ ಚಾಲುಕ್ಯ ಮಾದರಿಯನ್ನು ಹೊಂದಿದ್ದು ಕಂಡುಬರುತ್ತದೆ. ಅಥಣಿ ತಾಲೂಕಿನ ಹಲವಾರು ಗ್ರಾಮಗಳಲ್ಲಿ ಈ ಮಾದರಿಯ ಕಲ್ಮೇಶ್ವರ, ಕಲಾಲಿಂಗ ಮುಂತಾದ ಹೆಸರಿನ ದೇವಾಲಯಗಳು ಇದ್ದು ಇವು ಕೂಡ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದವು ಎಂದು ಹೇಳಬಹುದಾಗಿದೆ.

ಅಲ್ಲದೇ ಕೊಟ್ಟಲಗಿ ಹೂತೋಟದಲ್ಲಿ ಇರುವ ಜ್ಯೋತಿರ್ಲಿಂಗ ದೇವಾಲಯವು ಏಕಕೂಟ ಮಾದರಿಯ ದೇವಾಲಯವೇ ಆಗಿದೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಮುಖಮಂಟಪದಲ್ಲಿ ನಂದಿ ವಿಗ್ರಹವಿದೆ. ಇದರಂತೆ ಪವಾಡಸಿದ್ದ ದೇವಾಲಯವು ಕೂಡ ಕಲ್ಯಾಣ ಚಾಲುಕ್ಯ ಶೈಲಿಯ ದೇವಾಲಯವೇ ಆಗಿದೆ. ಅಲ್ಲದೇ ಕಣಂಬಡೆ ನಾಡಿನ ಶಾಸನದಲ್ಲಿ ಉಲ್ಲೇಖಿತಗೊಂಡಂತೆ ಹೂತೋಟಗಳಿಂದ ಕಂಗೊಳಿಸುತ್ತಿತ್ತು ಎನ್ನುವ ವಿಚಾರ ತಿಳಿದು ಬರುತ್ತದೆ. ಆ ಹೂತೋಟಗಳಲ್ಲಿ ಕೊಟ್ಟಲಗಿಯ ಹೂತೋಟವು ಇರಬಹುದು ಎನ್ನುವ ಅಭಿಪ್ರಾಯ ಸಹಜವಾಗಿ ಮೂಡುತ್ತದೆ.

ಕೋಟಿಲಿಂಗ ದೇವಾಲಯ

ಕಲ್ಯಾಣಿ ಚಾಲುಕ್ಯರ ಎರಡನೆಯ ಜಯಸಿಂಹನ ಕಾಲದ ಕ್ರಿ.ಶ.೧೦೨೨ನೇ ಇಸ್ವಿಯ ಶಾಸನವು ಇದೇ ದೇವಾಲಯದ ಹೊರ ಪ್ರಾಕಾರದ ಬಲಭಾಗದಲ್ಲಿದೆ. ಹೀಗಾಗಿ ಈ ದೇವಾಲಯದ ಉಲ್ಲೇಖ ಈ ಶಾಸನದಲ್ಲಿ ಇರದಿದ್ದರು ಕೂಡ ಇದು ಸಹಜವಾಗಿ ಕಲ್ಯಾಣಿ ಚಾಲುಕ್ಯರ ಶಿಲ್ಪವೆಂದು ಗುರುತಿಸಬಹುದಾಗಿದೆ. ಮೇಲ್ನೋಟಕ್ಕೆ ಏಕಕೂಟ ಮಾದರಿಯ ದೇವಾಲದಂತೆ ಕಂಡುಬಂದರೂ ಕೂಡ ಶಿಖರವು ಸಂಪೂರ್ಣವಾಗಿ ಶಿಥಿಲಗೊಂಡಿದೆ. ಹೀಗಾಗಿ ಶಿಖರವನ್ನು ಗುರುತಿಸಲು ಸಾಧ್ಯವಿಲ್ಲ. ಕಾಲ ನಿರ್ಣಯಿಸಲು ತೊಡಕು ಉಂಟು ಮಾಡಿದೆ. ಅದರಂತೆ ಎರಡು ಶಿವಲಿಂಗಗಳನ್ನು ಹೊಂದಿರುತ್ತದೆ. ಇನ್ನೊಂದು ಶಿವಲಿಂಗ ಬಹುತೇಕ ಸ್ಥಳಾಂತರ ಆಗಿರುವ ಸಾಧ್ಯತೆ ಕಂಡುಬರುತ್ತದೆ. ಇದೊಂದು ತ್ರೈಪುರುಷ ದೇವಾಲಯವಾಗಿರುವ ಸಾಧ್ಯತೆಯಿದೆ. ತ್ರೈಪುರುಷ ಎಂದರೆ ಬ್ರಹ್ಮ, ವಿಷ್ಣು, ಮಹೇಶ್ವರ ಮೂರು ದೇವತೆಗಳ ಪ್ರತಿಕ. ಉದಾಹರಣೆಗೆ ಕ್ರಿ.ಶ.೧೦೫೦ ರಲ್ಲಿ ಕಲ್ಯಾಣಿ ಚಾಲುಕ್ಯ ತ್ರೈಲೋಕ್ಯ ಮಲ್ಲ ದೇವನು ಕೊಕಟನೂರಿನಲ್ಲಿ ಇಂಥ ಮಾದರಿಯ ದೇವಾಲಯ ಕಟ್ಟಿಸಿದ. ಇದೊಂದು ಶೈವ ದೇವಾಲಯವಾಗಿದೆ. ಇನು ಗರ್ಭಗುಡಿ ಮುಖ ಮಂಟಪ ಹೊಂದಿದೆ.

ಪವಾಡ ಸಿದ್ದ ದೇವಾಲಯ

ಇದು ಕೂಡ ಏಕಕೂಟ ಮಾದರಿಯ ದೇವಾಲಯವಾಗಿದ್ದು; ಕಲ್ಯಾಣಿ ಚಾಲುಕ್ಯರ ಮಾದರಿಯನ್ನು ಹೊಂದಿದೆ. ಎತ್ತರದ ಜಗತಿಯ ಮೇಲೆ ದೇವಾಲಯವು ಗರ್ಭಗೃಹವನ್ನು ಹೊಂದಿದೆ. ದೇವಾಲಯದ ನಾಲ್ಕು ಗೋಡೆಗಳ ಮೇಲ್ಭಾಗದಲ್ಲಿ ಎಲೆಗಳ ಚಿತ್ರ ಬಿಡಿಸಿದ್ದು ಚಿಕ್ಕದಾದ ಶಿಖರವನ್ನು ಹೊಂದಿದೆ.

ಮಹಾದೇವಿ ಮೂರ್ತಿ

ಗ್ರಾಮದ ಶ್ರೀ ಬಸವಾರೂಢ ಶಿಕ್ಷಣ ಸಂಸ್ಥೆಯ ಸಮಿಪದಲ್ಲಿ ಒಂದು ಕಲ್ಲಿನ ಸ್ತ್ರೀ ಪ್ರತಿಮೆ ಇದ್ದು ಇದನ್ನು ಸ್ಥಳಿಯರು ಮಹಾದೇವಿಯೆಂದು ಕರೆಯುತ್ತಾರೆ. ಈ ಮೂರ್ತಿಯು ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸ್ಥಾಪಿತವಾಗಿರಬಹದು ಎಂಬ ಕಲ್ಪನೆಗೆ ಅವಕಾಶ ಮಾಡಿಕೊಡುತ್ತದೆ. ಹೇಗೆಂದರೆ ಆರನೆಯ ವಿಕ್ರಮಾದಿತ್ಯನಿಗೆ ಹನ್ನೆರಡು ಹೆಚ್ಚು ಜನ ರಾಣಿಯರು ಇದ್ದುದಾಗಿ ಶಾಸನಗಳಿಂದ ತಿಳಿದು ಬರುತ್ತದೆ. ತರ್ದವಾಡಿ ನಾಡು; ಒಂದು ಅಧ್ಯಯನ ಡಾ. ಎಸ್.ಕೆ.ಕೊಪ್ಪ ಅವರು ಗುರುತಿಸಿದ್ದಾರೆ. ಅವನ ರಾಣಿಯರಲ್ಲಿ ಕೇತಲದೇವಿ, ಪಟ್ಟ ಮಹಾದೇವಿ, ಮೈಳಲದೇವಿ, ಲಕ್ಷ್ಮೀದೇವಿ, ಪ್ರೀಯಾಂಗನೆ, ಮಲ್ಲಿಗೆ ದೇವಿಯರನ್ನು ಶಾಸನಗಳು ಉಲ್ಲೇಖಿಸಿವೆ. ಪಟ್ಟ ಮಹಾದೇವಿಯನ್ನು ಕ್ರಿ.ಶ.೧೧೯೪ಳರ ಶಾಸನ ಉಲ್ಲೇಖಿಸುತ್ತದೆ. ಬಹುತೇಕ ಈ ಮಹಾದೇವಿಯ ಹೆಸರಿನಲ್ಲಿ ನೆಟ್ಟ ಸ್ಮಾರಕ ಅಥವಾ ದಾನ ನೀಡಿದ ಕುರುಹು ಇದಾಗಿರಬಹುದು ಎಂಬ ಊಹೆಗೆ ಅವಕಾಶವಿದೆ.

ಕೊಟ್ಟಲಗಿ ಕೋಟೆ

ಗ್ರಾಮವು ಕೋಟೆಯಿಂದ ಸುತ್ತುವರೆದಿತ್ತು ಎನ್ನುವುದಕ್ಕೆ ಸಾಕಷ್ಟು ಪುರಾವೆಗಳು ದೊರೆಯುತ್ತವೆ. ಗ್ರಾಮದ ಸುತ್ತಮುತ್ತಲು ಪ್ರಸ್ತುತ ಉತ್ತರ ಭಾಗದಲ್ಲಿ ಕೋಟೆಯಿದ್ದು ನಾಶವಾದ ಬಗ್ಗೆ ಸ್ಪಷ್ಟವಾದ ಲಕ್ಷಣಗಳು ಗೊಚರಿಸುತ್ತವೆ. ಇದಕ್ಕೆ ಪೂರಕವೆನ್ನುವಂತೆ ಗ್ರಾಮದಲ್ಲಿ 'ಕೋಟೆ ಮಳ' ಎಂದರೆ ಒಂದು ತೋಟದ ಹೆಸರು ಕಂಡು ಬರುತ್ತದೆ. ಈ ತೋಟವು ಗ್ರಾಮದ ಪಕ್ಕದಲ್ಲಿರುವುದು ಗಮನಾರ್ಹ ವಿಷಯವಾಗಿದೆ. ಅಲ್ಲದೇ ಗ್ರಾಮದ ಹಿರಿಯರು ಕೂಡ ಕೋಟೆ ಇರುವ ಕುರಿತು ಜ್ಞಾಪಿಸಿಕೊಳ್ಳುತ್ತಾರೆ. ಗ್ರಾಮವು ಹಿಂದೆ ಅಗ್ರಹಾರವಾಗಿರುವದರಿಂದ ರಕ್ಷಣೆಗಾಗಿ ಕೋಟೆ ನಿರ್ಮಿಸಿದ ಸಾಧ್ಯತೆಯನ್ನು ನಂಬ ಬಹುದಾಗಿದೆ.

ವೀರಗಲ್ಲುಗಳು

ಗ್ರಾಮದಲ್ಲಿ ಶ್ರೀ ಹನುಮಂತ ದೇವರ ದೇವಸ್ಥಾನದ ಮುಂದಿರುವ ಮಂಟಪದ ಎಡಭಾಗದಲ್ಲಿ ಒಂದು ಹಾಗೂ ಶ್ರೀ ಕೋಟಿಲಿಂಗ ದೇವಾಲಯದಲ್ಲಿ ಒಂದು ಹೀಗೆ ಒಟ್ಟು ಎರಡು ವೀರಗಲ್ಲುಗಳಿವೆ. ಇವುಗಳು ಗ್ರಾಮದ ವೀರರು ಹೋರಾಡಿ ಗ್ರಾಮ ರಕ್ಷಣೆಗೆ ಪ್ರಾಣ ಕೊಟ್ಟಂತಹ ಸಂಕೇತಗಳಾಗಿವೆ. ವೀರಗಲ್ಲುಗಳಲ್ಲಿ ಮೂರು ಹಂತದ ಚಿತ್ರಗಳಿದ್ದು ಅವುಗಳನ್ನು ವಿವರಿಸುವುದಾದರೆ ಮೊದಲ ಹಂತದಲ್ಲಿ ಗೋವುಗಳು ಹಾಗೂ ಹೊಡೆದಾಡುತ್ತಿರುವ ಯೋಧನ ಚಿತ್ರವಿದೆ. ಎರಡನೇಯ ಹಂತದಲ್ಲಿ ಇಬ್ಬರು ಸ್ತ್ರೀಯರು ಆಚೆ ಈಚೆ ಇದ್ದು ಮಧ್ಯದಲ್ಲಿರುವ ಪುರುಷನನ್ನು ಕೈ ಹಿಡಿದು ಕೊಂಡೊಯ್ಯುತ್ತಿರುವ ದೃಶ್ಯವಿದೆ. ಮೂರನೇಯ ಹಂತದಲ್ಲಿ ಶಿವಲಿಂಗ ಆಚೆ ಈಚೆ ಸ್ತ್ರೀಯರು ಇದ್ದಾರೆ. ಇದರ ಅರ್ಥವೇನೆಂದರೆ ಗ್ರಾಮದ ವೀರನು ಗೋವುಗಳನ್ನು ಕದ್ದೊಯ್ಯಲು ಬಂದ ಕಳ್ಳಕಾಕರರ ವಿರುದ್ಧ ಹೋರಾಟ ಮಾಡಿ ಮಡಿದನು. ಹೀಗಾಗಿ ವೀರಸ್ವರ್ಗ ಆತನಿಗೆ ಪ್ರಾಪ್ತವಾದ ಕಾರಣ ದೇವಲೋಕದ ಕನ್ಯೆಯರು ಬಂದು ಆತನನ್ನು ಸ್ವರ್ಗಕ್ಕೆ ಕೊಂಡೊಯ್ಯುತ್ತಿದ್ದಾರೆ. ನಂತರ ಆತನಿಗೆ ಸ್ವರ್ಗ ಪ್ರಾಪ್ತಿಯಾಯಿತು.

ಇದರಿಂದ ಗ್ರಾಮದಲ್ಲಿ ಪ್ರಾಚೀನ ಕಾಲದಲ್ಲಿಯೂ ವೀರರಿದ್ದು ಹೋರಾಟ ಮಾಡಿದ್ದು ಹೆಮ್ಮೆ ಸಂಗತಿಯೇ ಸರಿ. ಅವರ ಗೌರವಾರ್ಥ ಈ ವೀರಗಲ್ಲುಗಳನ್ನು ನೆಡುವ ಪದ್ಧತಿ ಜಾರಿಯಲ್ಲಿತ್ತು. ಈ ಕಲ್ಲುಗಳು ಗ್ರಾಮದ ಬೇರೆ ಬೇರೆ ಕಡೆ ಇದ್ದು ಕಾಲಾಂತರದಲ್ಲಿ ಸ್ಥಾನ ಪಲ್ಲಟವಾಗಿ ಇಲ್ಲಿ ತಂದು ನಿಲ್ಲಿಸಿದ ಸಾಧ್ಯತೆ ಇದೆ. ಇಲ್ಲಿಯ ವೀರಗಲ್ಲು ಒಂದನ್ನು ಕೋಟಲಿಂಗ ದೇವಾಲಯದಲ್ಲಿ ಒಯ್ದು ನಿಲ್ಲಿಸಿದ ಉದಾಹರಣೆ ಇದೆ.

ದಾನ ಶಾಸನಗಳು

ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ತಾವು ದಾನ ನೀಡಿದ ಸ್ಥಳದಲ್ಲಿ ದಾನ ಶಾಸನ ನಿಲ್ಲಿಸಿ ಇತರರಿಗೂ ಅದು ಪ್ರೇರಣೆಯಾಗುವಂತೆ ಔದಾರ್ಯ ಮೆರೆದ ಸಂಗತಿಗಳು ಇತಿಹಾಸದ ಪುಟದಲ್ಲಿ ವಿಫುಲವಾಗಿ ದೊರೆಯುತ್ತವೆ.

ಕೊಟ್ಟಲಗಿ ಗ್ರಾಮದ ಪಶ್ಚಿಮಕ್ಕೆ ಉಂಬರವಾಣಿ ಸೀಮೆಯಲ್ಲಿ ಇಂಥ ದಾನ ಶಾಸನವೊಂದಿದೆ. ಗ್ರಾಮದ ಪಶ್ಚಿಮಕ್ಕೆ ಉಂಬರವಾಣಿಯ ಮತ್ತು ಕೊಟ್ಟಲಗಿ ಎರಡು ಗ್ರಾಮ ಸೀಮೆಗಳು ಸೇರುವ ಸ್ಥಳದಲ್ಲಿ ನಿಲ್ಲಿಸಲಾಗಿದೆ. ದಾನ ಶಾಸನದಲ್ಲಿ ಲಿಖಿತವಾದ ಅಕ್ಷರಗಳಾವುವೂ ದೊರೆಯುವುದಿಲ್ಲ. ಕಾರಣ ನಿರ್ದಿಷ್ಟ ದಾನ ಮಾಡಿದ ಕಾಲವನ್ನು ಹೆಸರಿಸುವುದು ತೊಂದರೆದಾಯಕವಾಗಿದೆ. ಆದರೆ ಶಿಲ್ಪಕಲೆಯ ಆಧಾರದ ಮೇಲೆ ಗಮನಿಸಿದಾಗ ಮೇಲ್ಭಾಗದಲ್ಲಿ ಎಡಕ್ಕೆ ಸೂರ್ಯ ಬಲಕ್ಕೆ ಚಂದ್ರ ಮಧ್ಯದಲ್ಲಿ ಶಿವಲಿಂಗ ಅದರ ಕೆಳಗೆ ಆಕಳು ಮೊಲೆ ಕುಡಿಯುತ್ತಿರುವ ಕರುವಿನ ಚಿತ್ರವಿದೆ. ಕೊಟ್ಟ ಈ ದಾನ ಸೂರ್ಯ, ಚಂದ್ರ ಇರುವವರೆಗೂ ಶಾಶ್ವತವಾಗಿರಲಿ ನಿರಂತರವಾಗಿ ಮುಂದುವರೆಯಲಿ ಎಂಬುದಾಗಿ ಅರ್ಥವಾಗುತ್ತದೆ. ಈ ಶಾಸನವು ಬುಜಬಲ ದೇವನ ಆಜ್ಞೆಯ ಮೇರೆಗೆ ಹೆಮ್ಮೇಶ್ವರ ದೇವಾಲಯಕ್ಕೆ ದತ್ತಿ ಬಿಟ್ಟ ದಾನ ಶಾಸನವಾಗಿರಬಹುದು ಎಂದು ಊಹಿಸಬಹುದಾಗಿದೆ.

ಇದೇ ಪ್ರಕಾರ ಇನ್ನೊಂದು ದಾನ ಶಾಸನ ಕೊಟ್ಟಲಗಿಯಿಂದ ೩ ಕಿ.ಮೀ. ಅಂತರದಲ್ಲಿ ಗ್ರಾಮದ ದಕ್ಷಿಣಕ್ಕೆ ಡೋಣಿ ದಾರಿಯಲ್ಲಿ ಶ್ರೀ ಸಿದ್ದಪ್ಪ ಕೋಟ್ಯಾಳ ಅವರ ಹೊಲದಲ್ಲಿ ಈ ಶಾಸನವಿದೆ.

ಇದರಲ್ಲಿ ಶಾಸನದ ಮೇಲ್ಭಾಗ ಎಡಕ್ಕೆ ಬಲಕ್ಕೆ ಸೂರ್ಯ ಚಂದ್ರರ ಚಿತ್ರಗಳಿವೆ. ಮಧ್ಯದಲ್ಲಿ ವ್ಯಕ್ತಿಯೊಬ್ಬನು ನಿಂತಿರುವ ಚಿತ್ರವಿದೆ. ಕೆಳಗಡೆ ಆಕಳು ಕರುವಿಗೆ ಹಾಲು ಕುಡಿಸುತ್ತಿರುವ ದೃಶ್ಯವಿದೆ. ಇದು ಕೂಡ ದಾನ ಶಾಸನವೇ ಆಗಿದೆ.

ಸುತ್ತಮುತ್ತಲಿನ ಗ್ರಾಮದ ವಿಶೇಷತೆಗಳು

ಕಕಮರಿ

ಕಕಮರಿ ಗ್ರಾಮವು ಕೊಟ್ಟಲಗಿ ಗ್ರಾಮದ ದಕ್ಷಿಣ ದಿಕ್ಕಿಗೆ ಇದ್ದು, ಪಕ್ಕದ ಹಳ್ಳಿಯಾಗಿದೆ. ಕಾರಣ ಕಕಮರಿ ಗ್ರಾಮದ ವೈಶಿಷ್ಟವನ್ನು ಕೂಡ ಗಮನಿಸುವುದು ಅವಶ್ಯವಾಗಿದೆ.

ಕಾಕುಮಾರಿ–ಕಾಕುಮರಿ–ಕಕಮರಿಯಾಗಿದೆ. ಈ ಕಕಮರಿಯು ಒಂದು ಕಾಲಕ್ಕೆ ಗೋಸಂಪತ್ತು ಸಮೃದ್ಧವಾಗಿದಂತಹ ಊರಾಗಿತ್ತು. ಊರಿನಾಚೆಗೆ ಕಾಣುವ ಗುಡ್ಡದಲ್ಲಿ ದನಕರುಗಳಿಗೆ, ಹೊರಿಗಳಿಗೆ

ಸಾಕಷ್ಟು ಹುಲ್ಲು ದೊರಕುತ್ತಿದ್ದ ಸುಖ, ಸಮೃದ್ಧಿಯ ಕಾಲ. ಈಗಲೂ ಸುತ್ತಮುತ್ತಲು ಸುಂದರವಾಗಿ ಕಾಣುವ ಪರಿಸರ ಇದೆ.

ಶುಕ್ರ ಋಷಿಗಳ ಆಶ್ರಮ ಹೋಗಿ ದಂಡಕಾರಣ್ಯವೆಂದು ಹೆಸರು ಪಡೆದಸ್ಥಳ ಇದಾಗಿದೆ. ಒಮ್ಮೆ ಶುಕ್ರಮ ಋಷಿಗಳು ಕ್ರೋಧಗೊಂಡು ದಂಡಕಾರಾಜನ ರಾಜ್ಯ ನಾಶವಾಗಲೆಂದು ತನ್ನ ಮಗಳಿಗೆ ಹುಲಿಯಾಗಬೇಕೆಂದು ಶಾಪ ಕೊಟ್ಟನು. ಅಂತೆಯೇ ಇದು ದಂಡಕಾರಣ್ಯವಾಯಿತು. ಮಗಳು ಹುಲಿಯಾದಳು ಅರಣ್ಯ ಮಗಳು ಶುದ್ರ ಋಷಿಗಳಿಗೆ ಈ ಶಾಪಮುಕ್ತಿ ಯಾವಾಗ ಎಂದು ಕೇಳುತ್ತಾಳೆ. ಅದಕ್ಕೆ ಮುನಿಗಳು ಕೇಲವು ಕಾಲಾನಂತರ ಸಕಲ ವೇದ ಪಾರಂಗತನದ 'ಧರ್ಮನಿಷ್ಠ ಶ್ವೇತನೆಂಬ ಬ್ರಾಹ್ಮಣ ಸ್ನಾನಕ್ಕೆಂದು ಇಲ್ಲಿಗೆ ಬಂದಾಗ ನೀನು ಆತನನ್ನು ತಿನ್ನಲು ಹೋಗುವೆ ಆ ಬ್ರಾಹ್ಮಣನು ವಿಜೋಶ್ವೆರನ ಸ್ತೋತ್ರ ಪಠನೆ ಮಾಡಲು ಸ್ತ್ರೀಯಾಗುವೆ ಎಂದನು. ಅಂತೆಯೇ ಬ್ರಾಹ್ಮಣನು ಮಂತ್ರ ಪಠನೆ ಮಾಡಲು ಆ ಹೆಣ್ಣು ಹುಲಿಯ ಸ್ಥಳದಲ್ಲಿ ಒಂದು ಸುಂದರ ಸ್ಥಳದಲ್ಲಿ ಒಂದು ಸುಂದರ ಸ್ತ್ರೀ ರೂಪ ಕಂಡುಬಂದು ಹುಲಿಯು ಹೆಣ್ಣಾಗಿ ಪಾರಣ್ಯ ಹೊಂದುತ್ತಾಳೆ. ಅವಳೇ ಕಾಕುಮಾರಿ ದೇವತೆಯಾಗಿ ಬದಲಾವಣೆ ಹೊಂದುತ್ತಾಳೆ.

ಕಾಕು–ಎಂದರೆ–ಬದಲಾವಣೆ

ಮಾರಿ–ಎಂದರೆ–ಕ್ಷುದ್ರ ದೇವತೆ

ಈ ಬದಲಾವಣೆಯನ್ನು ಹೊಂದಿದ ದೇವತೆ ಕಾಕುಮಾರಿ ಶುಕ್ರ ಋಷಿಗಳ ಮಗಳು ಅಂದಿನಿಂದ ಅವಳ ಹೆಸರೇ ಆ ಗ್ರಾಮಕ್ಕೆ ರೂಢಿಯಾಗಿ ಬಂದು ಕಾಕುಮಾರಿ, ಕಾಕುಮರಿ, ಕಕಮರಿ ಎಂದು ಜನರ ಬಾಯಲ್ಲಿ ಬಂದ ಪರಿಭಾಷೆಯಾಗಿದೆ. ಆ ಕಾಕುಮರಿಯನ್ನೆ ಅಮ್ಮಾಜಿ ದೇವಿ ಎಂದು ಪೂಜಿಸುತ್ತಾರೆ. ಈ ಊರು ಚಿಕ್ಕದಾಗಿದ್ದರೂ ಅಮ್ಮಾಜಿದೇವಿ ಕೀರ್ತಿಯ ದೊಡ್ಡದು. ಜನವಸತಿ ಇಂದು ತೀರ ವಿರಳವಿದ್ದರೂ ಜನರು ನೆಮ್ಮದಿಯಿಂದ ಜೀವನ ನಡೆಸುತ್ತಿದ್ದಾರೆ. ಅಂದಿನ ದಂಡಕಾರಣ್ಯದ ಸೊಬಗನ್ನು, ಕಲ್ಪನೆಯನ್ನೂ ಇಂದು ಊರು ಕಳೆದುಕೊಂಡಿದ್ದರೂ, ರಮಣಿಯಾದ ಸ್ಥಳ ಇದಾಗಿದೆ. ಗಿರಿಕಂದರಗಳಿಂದ ಸೃಷ್ಟಿ ಸೌಂದರ್ಯದಿಂದ ಕಂಗೋಳಿಸುತ್ತದೆ. ಇಲ್ಲಿ ಪ್ರತಿಯೊಬ್ಬರೂ ಹುಟ್ಟಿದ ಮಗುವಿಗೆ ಅಮ್ಮಾಜಿದೇವಿ ಎಂದು ಮೊದಲು ಹೆಸರು ಕರೆದು ನಂತರ ಪ್ರೀತಿ ನಾಮಗಳನ್ನು ಇಡುತ್ತಾರೆ.

ರಾವಳಗುಂಡವಾಡಿ

ಕೊಟ್ಟಲಗಿ ಗ್ರಾಮಕ್ಕೆ ಹೊಂದಿಕೊಂಡಿರುವ ವಾಯುವ್ಯ ದಿಕ್ಕಿಗೆ ಮಹಾರಾಷ್ಟ್ರದ ಸೀಮೆಯಲ್ಲಿ ಕೊಟ್ಟಲಗಿ ಗ್ರಾಮದಿಂದ ಮೂರು ಕಿ.ಮಿ. ಅಂತರದಲ್ಲಿ ಈ ಗ್ರಾಮವಿದೆ. ಮಹಾರಾಷ್ಟ್ರದ ಜತ್ತ ತಾಲೂಕಿನಲ್ಲಿರುವ ಈ ಗ್ರಾಮವು ಬಹಳಷ್ಟು ವೈಶಿಷ್ಟವನ್ನು ಹೊಂದಿದೆ. ರಾವಳಪ್ಪ ಎನ್ನುವ ವ್ಯಕ್ತಿಯ ಹೆಸರೇ ಗ್ರಾಮಕ್ಕೆ ಬಂದಿತು ಎನ್ನುವ ನಂಬಿಕೆ ಆ ಗ್ರಾಮದ ಜನರಲ್ಲಿದೆ. ಹೇಗೆಂದರೆ

ರಾವಳಪ್ಪ–ಗ್ರಾಮದ ಮೂಲ ವ್ಯಕ್ತಿಯ ಹೆಸರು

ವಾಡಿ–ಎಂದರೆ ಮರಾಠಿಯಲ್ಲಿ ಜನವಸತಿ ಎಂದರ್ಥ

ಈ ಗ್ರಾಮವು ಕನ್ನಡ ಕಂಪಿನ ಗ್ರಾಮವಾಗಿದೆ. ಗಾಂಧೀಜಿ ಕಂಡ ಗ್ರಾಮ ಸ್ವರಾಜ್ಯ ಕನಸನ್ನು ನನಸು ಮಾಡಿಕೊಂಡು ಮುಂದುವರೆಯುತ್ತಿರುವ ಗ್ರಾಮವಾಗಿದೆ. ಈ ಗ್ರಾಮ

ಶೇಕಡಾ ೮೫ ರಷ್ಟು ಕನ್ನಡಿಗರಿಂದ ತುಂಬಿ ತುಳುಕಾಡುವ ಗ್ರಾಮವಾಗಿದೆ. ಆದರೆ ಮಾತೃಭೂಮಿ ಮಹಾರಾಷ್ಟ್ರಕ್ಕೂ ಅಷ್ಟೇ ಮಹತ್ವ ನೀಡುತ್ತದೆ. ಶತಮಾನಕ್ಕೂ ಹಿಂದೆ ಅಂದರೆ ೧-೧೦-೧೯೦೭ ರಲ್ಲಿ ಕನ್ನಡ ಶಾಲೆ ಪ್ರಾರಂಭವಾಗಿದೆ.

ಅಲ್ಲದೇ ಈ ಗ್ರಾಮ ಹಿಂದೂ ಮುಸ್ಲಿಂ ಭಾವೈಕ್ಯತೆಯ ಗ್ರಾಮವಾಗಿದೆ. ಹಿಂದೂ ಮುಸ್ಲಿರಡು ಸಮುದಾಯಕ್ಕೂ ಒಂದೇ ಸ್ಮಶಾನ ಭೂಮಿಯಿರುವ ಅಪರೂಪದ ಮಾದರಿ ಗ್ರಾಮವಾಗಿದೆ. ಈ ಗ್ರಾಮದಲ್ಲಿ ಹಿಂದೂಗಳ (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಒಳಗೊಂಡು) ಪೈಕಿಯಾಗಲೀ ಯಾರೆ ತಿರಿಕೊಂಡರು ಎಲ್ಲರೂ ಊರಲ್ಲಿ ಒಕ್ಕಟ್ಟಿನಿಂದ ಅಂತ್ಯ ಕ್ರಿಯೆಯಲ್ಲಿ ಭಾಗಿಯಾಗುವುದು ಕಡ್ಡಾಯವಾಗಿದೆ.

ಮುಚ್ಚಂಡಿ

ಕೊಟ್ಟಲಗಿಯ ಉತ್ತರ ಭಾಗಕ್ಕೆ ಮಹಾರಾಷ್ಟ್ರದ ಜತ್ತ ತಾಲೂಕಿನ ಗ್ರಾಮವೇ ಮುಚ್ಚಂಡಿಯಾಗಿದೆ. ಮುಚ್ಚಂಡಿಯ ಧರೇಪ್ಪ ಈ ಭಾಗದ ಕರ್ನಾಟಕ ಮಹಾರಾಷ್ಟ್ರದ ಚಾರಿತ್ರಿಕ ಹಿನ್ನೆಲೆಯುಳ್ಳ ಗ್ರಾಮವಾಗಿದೆ. ಧರೇಪ್ಪ ದೇವರು ಕರ್ನಾಟಕ ಮಹಾರಾಷ್ಟ್ರದ ಅನೇಕ ಭಕ್ತಾಧಿಗಳ ದೈವವು ಆಗಿದೆ. ಇದೊಂದು ಜಾಗೃತ ಸ್ಥಳವಾಗಿದ್ದು ಜಕ್ಕವ್ವನ ದೇವಸ್ಥಾನ ಹಾಗೂ ಧರೇಪ್ಪ ಇಲ್ಲಿನ ಪ್ರಸಿದ್ಧ ದೇವಾಲಯಗಳಾಗಿವೆ.

ಖೊಜನವಾಡಿ

ಕೊಟ್ಟಲಗಿ ಗ್ರಾಮದ ಪಶ್ಚಿಮಕ್ಕೆ ೫ ಕಿ.ಮಿ. ಅಂತರದ ಮೇಲೆ ಜತ್ತ ತಾಲೂಕಿನ ಖೊಜನವಾಡಿ ಗ್ರಾಮವಿದೆ. ಈ ಗ್ರಾಮವು ಭಾರತ ಸ್ವಾತಂತ್ರ ಸಂಗ್ರಾಮದಲ್ಲಿ ಶ್ರೀ ಕ್ಷೇತ್ರ ಇಂಚಗೇರಿ ಮಠದ ಸದ್ಗುರುಗಳಾದ ಮಾಧವಾನಂದ ಪ್ರಭುಗಳ ಆದೇಶದ ಮೇರೆಗೆ ಹೋರಾಟ ಮಾಡಿದ ಗ್ರಾಮವಾಗಿದೆ. ಮಾಧವಾನಂದರು ಕೊಟ್ಟಲಗಿ ಗ್ರಾಮ ಹಾಗೂ ಖೊಜನವಾಡಿ ಗ್ರಾಮಗಳು ನನ್ನ ತವರು ಮನೆಗಳು ಎಂದು ಹೇಳಿ ಗ್ರಾಮದ ಸ್ವಾತಂತ್ರ ಸೈನಿಕರನ್ನು ಹೋರಾಟದಲ್ಲಿ ಧುಮುಕಿಸಿದರು. ಇಷ್ಟೇ ಅಲ್ಲದೆ ಖೊಜನವಾಡಿಯ ಶ್ರೀ ರಾಮಗೊಂಡಪ್ಪಾ ಚನ್ನವೀರಪ್ಪ ಬಸರಗಿ ಇವರು ಕೊಟ್ಟಲಗಿಯ ಸ್ವಾತಂತ್ರ ಸಂಗ್ರಾಮದಲ್ಲಿ ಮಹತ್ವದ ಪಾತ್ರ ವಹಿಸಿದ್ದು ವಿಶೇಷವಾಗಿದೆ. ಹಾಗೆಯೇ ಶ್ರೀ ಸತ್ಯಪ್ಪ ಮಿರಜಿಯವರು ಕೂಡ ಮಾಧವಾನಂದರ ಆಪ್ತ ಶಿಷ್ಯರಾಗಿದ್ದರು. ಅವರು ತಮ್ಮ ಮಕ್ಕಳನ್ನು ಕೂಡ ಮಾಧವಾನಂದರ ಆಜ್ಞೆಯಂತೆ ಮಠದ ಸೇವೆಗಾಗಿ ನೀಡಿದ ಮಹಾನ್‌ದಾನಿಗಳು. ಇಷ್ಟೇ ಅಲ್ಲದೆ ಡಾ.ಸರೋಜನಿ ಚವಲಾರರವರು ಖೊಜನವಾಡಿ ಗ್ರಾಮದ ಸ್ವಾತಂತ್ರ ಸೈನಿಕರನ್ನು ಬೆಳಗಾವಿ ಜಿಲ್ಲೆಯ ಸ್ವಾತಂತ್ರ ಸೈನಿಕರ ಪುಸ್ತಕದಲ್ಲಿ ಗುರುತಿಸಿದ್ದು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ.

ರಾಮತೀರ್ಥ

ರಾಮತೀರ್ಥಗ್ರಾಮವು ಕೋಟ್ಟಲಗಿ ಗ್ರಾಮದ ನೈರುತ್ಯ ದಿಕ್ಕಿನಲ್ಲಿ ಇದೆ. ಇದು ಕೂಡಾ ಕಲ್ಯಾಣ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿದೆ. ರಾಮತೀರ್ಥದ ರಾಮೇಶ್ವರ ದೇವಾಲಯದಲ್ಲಿ ಇರುವ ಶಾಸನ ಒಂದರಲ್ಲಿ ಕೋಟ್ಟಲಗಿ ಗ್ರಾಮವನ್ನು ರಾಮೇಶ್ವರ ದೇವಾಲಯಕ್ಕೆ ದತ್ತಿಬಿಟ್ಟ ವಿಚಾರ ಪ್ರಸ್ಥಾಪಿತವಾಗಿದೆ, ಈ ಹಿನ್ನೇಲೆಯಲ್ಲಿ ರಾಮತೀರ್ಥವು ಕೂಡಾ ಅಧ್ಯಯನದ ವಿಷಯಕ್ಕೆ ಸಂಬಂಧಿಸಿದ್ದು. ಪೂರಕವಾಗಿ ಅಧ್ಯಯನಕ್ಕೆ ಬಳಸಿಕೋಳ್ಳಲಾಗಿದೆ.

ರಾಮತೀರ್ಥದ ಕುರಿತು ಚಾರಿತ್ರಿಕ ಐತಿಹ್ಯವನ್ನು ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಲಾಗಿದೆ. ತ್ರೇತಾಯುಗದಲ್ಲಿ ಶ್ರೀಮನ್ನಾರಾಯಣನು ಧರೆಗಿಳಿದು ದುಷ್ಟಮರ್ದನ ಶಿಷ್ಯ ಪರಿಪಾಲನೆಗಾಗಿ ಶ್ರೀ ರಾಮಾವತಾರ ತಾಳಿದನು. ಸೀತೆಯನ್ನು ರಾವಣನು ಅಪಹರಿಸಿಕೊಂಡು ಹೋದ ನಿಮಿತ್ತ ಭಾರತದ ದಕ್ಷಿಣ ಭಾಗದ ಪರಿಸರದ ದಂಡಕಾರಣ್ಯದಲ್ಲೇಲ್ಲಾ ಶ್ರೀರಾಮನು ತನ್ನ ಪತ್ನಿಯ ಶೋದಾರ್ಥವಾಗಿ ಸಂಚರಿಸುತ್ತಿರುವಾಗ ಕಹೋಳ ಋಷಿಯ ಆಶ್ರಮಕ್ಕೆ ಬಂದನು. ರಾವಣ ಮತ್ತು ರಾಕ್ಷಸ ಪರಿವಾರ ತನ್ನಿಂದ ಹರತಾಗಬೇಕು. ಮತ್ತು ಪತ್ನಿ ಸೀತೆಯನ್ನು ಮರಳಿಪಡೆಯಬೇಕೆಂದು "ಕಹೋಳ" ಋಷಿಗಳಲ್ಲಿ ಬೇಡಿಕೊಂಡನು ಮಹಾಶಿವಭಕ್ತನಾದ ರಾವಣನ್ನನು ಗೆಲ್ಲಲು. ಆ ಶಿವನನ್ನೇ ಮೋರೆಹೋಕ್ಕು ಅವನಿಂದ ವರ ಪಡೆಯಬೇಕೆಂದು ಕಹೋಳ ಋಷಿಗಳು ಪರಿಹಾರ ಹೇಳಿ. ಸಾಮಿಪ್ಯದಲ್ಲಿ ಸ್ವಯಂ ಕಾಶಿಯ ವಿಶ್ವೇಶ್ವರನೇ ಪರಿಹಾರ ಸಹಿತವಾಗಿ ನೆಲೆಸಿದ ಸ್ವಯಂಭೂ ಓಂಕಾರೇಶ್ವರನನ್ನು ಕುರಿತು ತಪಸ್ಸು ಮಾಡಿ ವರಗಳನ್ನು ಪಡೆಯುವಂತೆ ಪಡೆದು ಹರಹರರಲ್ಲಿ ಆಜ್ಞಾಪಿಸಿದರು. ಆ ಪ್ರಕಾರ ಶ್ರೀರಾಮಚಂದ್ರನು. ಸ್ವಯಂಭೂ ಓಂಕಾರೇಶ್ವರನನ್ನು ಪೂಜಿಸಿ ಅನುಷ್ಠಾನ ಮಾಡಿ ವರಗಳನ್ನು ಪಡೆದು ಹರಹರರಲ್ಲಿ ಭೇದವಿಲ್ಲೆಂಬುದನ್ನು ಲೋಕಕ್ಕೆ ನಿದರ್ಶನ ನೀಡಿದನು. ಅಲ್ಲದೆ ತಾನೂ ಶ್ರೀ ಓಂಕಾರೇಶ್ವರನ್ನು ಪೂಜಿಸಿದ್ದಕ್ಕಾಗಿ ತನ್ನ ಹೆಸರು ಸಮ್ಮಿಲಿತವಾದ "ರಾಮೇಶ್ವರ " ನಾಮಕರಣವಾಗಲೆಂದು ಬೇಡಿಕೊಂಡನು. ಅಂದಿನಿಂದ ರಾಮೇಶ್ವರ ಎಂಬ ಹೆಸರು ಪ್ರಚಲಿತದಲ್ಲಿ ಬಂದಿದೆ. ಅನೇಕ ತಿರ್ಥಗಳ ಉತ್ಪತ್ತಿಯಾದ್ದರಿಂದ ಇಲ್ಲಿಯ ಅಗ್ರಹಾರಕ್ಕೆ " ರಾಮತಿರ್ಥ" ಎಂಬ ಅನ್ವರ್ಥಕಗಳು ಬಂದಿವೆ. ಈ ಸ್ಥಳಕ್ಕೆ ದಕ್ಷಿಣ ಕಾಶಿ ಎಂದು ಅನ್ವರ್ಥಕನಾಮವಿದೆ.[೩]

ಅಡಿ ಟಿಪ್ಪಣಿಗಳು

೧. ತಾಲೂಕು ಕಛೇರಿ ಅಂಕಿ ಅಂಶಗಳ ಇಲಾಖೆ ಅಥಣಿ.

೨. ಪಿ.ಡಿ.ಬಡಿಗೇರ ಗ್ರಾಮ ಲೆಖಾಧೀಕಾರಿಗಳು ಕೊಟ್ಟಲಗಿ.

೩. ತಾಲೂಕಾ ಅಂಕಿ ಅಂಶಗಳ ಇಲಾಖೆ ತಾಲೂಕಾ ಕಾರ್ಯಾಲಯ ಅಥಣಿ.

೪. ಶ್ರೀ ಟಿ.ಎ.ಪಾಟೀಲ ಗ್ರಾಮ ಪಂಚಾಯತ ಸಹಾಯಕರು, ಗ್ರಾಮ ಪಂಚಾಯತ ಕೊಟ್ಟಲಗಿ.

೫. ಜನಗಣತಿ ೨೦೧೧ ತಾಲೂಕಾ ಕಛೇರಿ ಅಥಣಿ.

೬. ಮಹಾರಾಷ್ಟ್ರದ ಕನ್ನಡ ಶಾಸನಗಳು ಸಂಪುಟ ೬, ನಂಬರ ೧೦೯ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೧

೭. ಅದೇ ನಂಬರ ೧೧೧

೮. ಕ.ಇ. Vol - II ನಂಬರ ೧೮ ತೆಲಸಂಗ ತಾಲೂಕಾ ಅಥಣಿ

೯. ಹಿರೇಮಠ ಆರ್.ಸಿ ಮತ್ತು ಕಲಬುರ್ಗಿ ಎಂ.ಎಂ ಶಾಸನ ಸಂಪದ ಪು.೧೩೪ ೧೯೬೪

೧೦. ಕಲಬುರ್ಗಿ ಎಂ.ಎಂ ಮಹಾರಾಷ್ಟ್ರದ ಕನ್ನಡ ಶಾಸನಗಳು ಪು.೧೦ ಶಾ. ೯೮೭

೧೧. ARSIE No. ೧೦೩ ಕೊಳಗಿರಿ ತಾ.ಜತ್ತ ೧೦೮೭

೧೨. ಅದೇ ನಂಬರ ೧೨೪, ೧೯೪೦-೪೧ ವಳಸಂಗ ತಾ.ಜತ್ತ ಕ್ರಿ.ಶ. ೧೦೯೪

೧೩. ಕ.ಇ. Vol - II ನಂಬರ ೨೬ ಉಮ್ರಾರಾಣಿ ತಾ. ಜತ್ತ ೧೧೭೪

೧೪. ಅದೇ ನಂ.೧೮ ತೆಲಸಂಗ ತಾ.ಅಥಣಿ

೧೫. ನರಸಿಂಹಾಚಾರ ಡಿ.ಎಲ್ ಸಂಪಾದಿಸಿದ ಶಿವಕೋಟ್ಯಾಚಾರ್ಯರ ವಡ್ಡಾರಾಧನೆ ಪು.೨೩೭-೧೯೯೩

೧೬. ಅದೇ ನಂ.೧೮ ತೆಲಸಂಗ ತಾ.ಅಥಣಿ

೧೭. ಅದೇ ನಂ.೧೪ ಉಮ್ರಾಣಿ ತಾ.ಜತ್ತ

೧೮. Indian Antiquary – Vol No. XIX pp, 274, 1054 AD

೧೯. Journal of Karnataka University Social Science Vol – I 1965 pp 37 Murugundi plates of Someshwara IV

೨೦. Collected Works of Shri R.G.Bhandarkar Vol-III p.346 Badami Copper plates

೨೧. S II XV ಕಟಗೇರಿ ತಾ.ಬದಾಮಿ

೨೨. ಕಣಂಬಡೆ ಮುನ್ನೂರು ಒಂದು ಅಧ್ಯಯನ ಬಿ.ಆರ್.ರಾಠೋಡ ಅವರ ಪಿ.ಎಚ್.ಡಿ. ಪ್ರಬಂಧ ೨೦೧೧ ಪು.೧೬

೨೩. ಮ.ಕ.ರಾ. ಸಂಪುಟಾ ೬ ನಂಬರ ೧೦೯, ೧೧೬೫, ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೧

೨೪. ಅದೇ

೨೫. ಕ.ಇ.II No.೧೩ ರಾಮತೀರ್ಥ ತಾ.ಅಥಣಿ ೧೧೧೫

೨೬. ಅದೇ ನಂಬರ ೨೪, ೧೧೬೭

೨೭. ಅದೇ ನಂಬರ ೨೪, ೧೧೬೭

೨೮. ಕ.ಇ.ನಂ-ಖಖ ಶಾ.ಸಂ.೧೪ ಉಂಬರವಾಣಿ ತಾ.ಜತ್ತ

೨೯. ಕಣಂಬಡೆ ಮುನ್ನೂರು ಒಂದು ಅಧ್ಯಯನ ಬಿ.ಆರ್.ರಾಠೋಡ ಅವರ ಪಿ.ಎಚ್.ಡಿ. ಪ್ರಬಂಧ ೨೦೧೧ ಪು.೩೪)

೩೦. ಡಿ.ಲಿಂಗಯ್ಯ ೨೦೦೮ ಪುಟ ೧

೩೧. ಎಂ.ಎಂ.ಕಲಬುರ್ಗಿ ಕನ್ನಡ ನಾಮ ವಿಜ್ಞಾನ ಪ್ರಸಾರಾಂಗ ಬೆಂ,ವಿ.ವಿ.೧೯೮೯ ಪುಟ ೬೩

೩೨. ಸಂ, ಡಿ.ಲಿಂಗಯ್ಯ ಡಾ.ಚಕ್ಕೇರೆ ಶಿವಶಂಕರ-ಸ್ಥಳನಾಮಗಳ ಅಧ್ಯಯನ ಪುಟ ೧೬ ೨೦೦೮

೩೩. ಅದೇ ಪುಟ ೧೮೪ ೨೦೦೮

೩೪. ಸಂಕ್ಷಿಪ್ತ ಕನ್ನಡ ನಿಘಂಟು ಪುಟ ೩೨೪ ಕ.ಸಾ.ಪ.ಬೆಂಗಳೂರು ೨೦೦೧

೩೫. ಶ್ರೀ ಶಿವಪ್ಪಾ ಸಿದ್ದಪ್ಪಾ ಕೊಟ್ಟಲಗಿ ವಯಸ್ಸು ೭೦ ಉದ್ಯೋಗ ನಿವೃತ್ತ ಎನ್.ಸಿ.ಸಿ. ಅಧಿಕಾರಿಗಳು ಜಾತಿ ಲಿಂಗಾಯತ ಊರು ಕೊಟ್ಟಲಗಿ

೩೬. ಶ್ರೀ ಕಾಡಯ್ಯ ಮಠಪತಿ ವಯಸ್ಸು ೪೭ ಉದ್ಯೋಗ ಶಿಕ್ಷಕರು ಸಾಕಿನ ಕೊಟ್ಟಲಗಿ

೩೭. ಬೆಳಗಾವಿ ಜಿಲ್ಲೆ ಗೆಜೆಟಿಯರ ಪು.೨೪

೩೮. ಕ.ಇ.II NO ೬ ಕೊಟ್ಟಲಗಿ ತಾ.ಅಥಣಿ

೩೯. ಚಿದಾನಂದಮೂರ್ತಿ ಎಂ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು.೨೦೯, ೧೯೯೦

೪೦. ಕಣಂಬಡೆ ಮುನ್ನೂರು ಒಂದು ಅಧ್ಯಯನ ಬಿ.ಆರ್.ರಾಠೋಡ ಅವರ ಪಿ.ಎಚ್.ಡಿ. ಪ್ರಬಂಧ ೨೦೧೧ ಪು.೨೯

೪೧. ಮ,ಕ,ಶಾ,ಸಂಪುಟ ೬ ಕನ್ನಡ ವಿಶ್ವವಿದ್ಯಾಲಯ ಹಂಪಿ

೪೨. The Journal of Karnataka University, Social Science, Vol, I, ೧೯೬೫

೪೩. ಕಣಂಬಡೆ ಮುನ್ನೂರು ಒಂದು ಅಧ್ಯಯನ ಬಿ.ಆರ್.ರಾಠೋಡ ಅವರ ಪಿ.ಎಚ್.ಡಿ. ಪ್ರಬಂಧ ೨೦೧೧ ಪು.೩೪)

೪೪. (Indian Antiquary Vol, ೧೯)

೪೫. ಅದೇ

೪೬. ಕ.ಇ.II No ೬ ಕ್ರಿ.ಶ. ೧೦೨೨ ತಾ.ಅಥಣಿ

೪೭. ಕ.ಇ.II No. ೧೫ ತೆಲಸಂಗ ೧೧೨೨ ತಾ.ಅಥಣಿ

೪೮. ಅದೇ ನಂ.೧೩ ರಾಮತೀರ್ಥ ೧೧೧೫ ತಾ.ಅಥಣಿ

೪೯. ಅದೇ ನಂ.೧೮ ತೆಲಸಂಗ ೧೧೧೫ ತಾ.ಅಥಣಿ

೫೦. ARISE No.೧೨೮ ೧೯೪೦-೪೧

೫೧. ಅದೇ ನಂ.೧೨೫, ೧೯೪೦-೪೧

೫೨. PÀ.E.II No. ೨೧ ತೆಲಸಂಗ ೧೧೪೭ ತಾ.ಅಥಣಿ

೫೩. ARISE ೧೯೪೦-೪೧

೫೪. ಮ.ಕ.ಶಾ.ಸಂಪುಟ ೬ ಕನ್ನಡ ವಿಶ್ವವಿದ್ಯಾಲಯ ಹಂಪಿ

೫೫. Annual Report ೧೯೫೩-೫೪ page ೩೫

೫೬. ಕ.ಇ.II No. ೨೩ ರಿಚಿಂಜ ೮೨ ತೆಲಸಂಗ ತಾ.ಅಥಣಿ

೫೭. ಅದೇ ಪುಟ ಶಾಸನ ಸಂಖ್ಯೆ ೨೪ ಪುಟ ೮೮-೮೯

೫೮. ಕಾಮತಯು ಸೂರ್ಯನಾಥ ೧೯೮೪, ಕರ್ನಾಟಕ ಗೆಜೆಟಿಯರ ಸಂ.೦೧ ಪುಟ ೧೯೫

೫೯. ಕ.ಇ.II No. ೨೫ page ೯೩-೯೪

೬೦. ಮ.ಕ.ಶಾ.ಸಂಪುಟ ೬ ಕನ್ನಡ ವಿಶ್ವವಿದ್ಯಾಲಯ ಹಂಪಿ

೬೧. B,K,No.೧೦೩, ೧೯೪೦-೪೧

೬೨. ಮ.ಕ.ಶಾ.ಸಂಪುಟ ೬ ಕನ್ನಡ ವಿಶ್ವವಿದ್ಯಾಲಯ ಹಂಪಿ

೬೩. ಅದೇ

೬೪. ಎಇSI No. Vol ೨೪, ೧೯೯೬

೬೫. ಮ.ಕ.ಶಾ.ಸಂಪುಟ ೬ ಕನ್ನಡ ವಿಶ್ವವಿದ್ಯಾಲಯ ಹಂಪಿ

೬೬. S-II, Pol, No. Vol-XX, No, ೧೬೨

೬೭. ಚಿದಾನಂದಮೂರ್ತಿ ಎಂ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು.೧೭, ೧೯೯೦

೬೮. ಡಾ. ಎಸ್.ಕೆ.ಕೊಪ್ಪಾ ತರ್ದವಾಡಿ ನಾಡು ಒಂದು ಅಧ್ಯಯನ ಪುಟ ೩೦೧, ೧೯೯೦

೬೯. ಅದೇ ಪುಟ ಸಂಖ್ಯೆ ೩೦೨, ೧೯೯೦

೭೦. ಕ.ಇ.II No. ೧೪ ಉಮ್ರಾಣಿ ತಾ.ಜತ್ತ

೭೧. ಅದೇ ನಂ.೪೨ ಕೊಕಟನೂರ ತಾ.ಅಥಣಿ

೭೨. ಸಂಯುಕ್ತ ಕರ್ನಾಟಕ ದಿನಪತ್ರಿಕೆ ದಿನಾಂಕ: ೪-೨-೨೦೧೦ ಪುಟ ೦೬.

೭೩. ಶ್ರೀ ರಾಮೇಶ್ವರ ಮಹಾತ್ಮೆ ಲೇಖಕರು ಶ್ರೀ ಕೆ.ಜಿ.ಉಪಾಧ್ಯೆ ಪ್ರಕಾಶಕರು ಉಮಾರಾಮೇಶ್ವರ ಸೇವಾಸಮಿತಿ ಶ್ರೀಕ್ಷೇತ್ರ ರಾಮತೀರ್ಥ ತಾ.ಅಥಣಿ.

ಅಧ್ಯಾಯ ೩

ಸಾಮಾಜಿಕ ಪರಂಪರೆ

೩.೧. ಸಮುದಾಯಗಳು ಮತ್ತು ವೃತ್ತಿ
೩.೨. ಕುಟುಂಬ ಪದ್ಧತಿ
೩.೩. ಮನೆಗಳ ಮಾದರಿ
೩.೪. ಆಹಾರ ಪದ್ಧತಿ
೩.೫. ಉಡುಗೆ–ತೊಡುಗೆ
೩.೬. ಜನಪದ ವೈದ್ಯ
೩.೭. ನ್ಯಾಯ ವ್ಯವಸ್ಥೆ
೩.೮. ಅತಿಥಿ ಸತ್ಕಾರ
೩.೯. ಆರ್ಥಿಕ ವ್ಯವಸ್ಥೆ
೩.೧೦. ಜನಪದ ಆಟಗಳು
೩.೧೧. ಜನಪದ ಕಲೆಗಳು ಮತ್ತು ಕಲಾವಿದರು
೩.೧೨. ಶೈಕ್ಷಣಿಕ ವ್ಯವಸ್ಥೆ

ಅಧ್ಯಾಯ ೩

ಸಾಮಾಜಿಕ ಪರಂಪರೆ

ಪೀಠಿಕೆ

ಕೇವಲ ವೃತ್ತಿ ಅಥವಾ ಭೌಗೋಳಿಕ ಪರಿಸ್ಥಿತಿಯನ್ನು ಅನುಸರಿಸಿಯಷ್ಟೇ ಯಾವುದೇ ಸಮುದಾಯವು ಬೆಳೆಯುವದಿಲ್ಲ. ಅದರ ನಡುವೆ ವಿವಿಧ ಸಮುದಾಯಗಳ ಸಂಬಂಧವು ಮುಖ್ಯವಾಗಿರುತ್ತದೆ. 'ಮಾನವ ಸಂಘಜೀವಿ, ಸಮಾಜಜೀವಿ' ಎಂಬ ಅರಿಸ್ಟಾಟಲನ ಮಾತು ತುಂಬಾ ಮಾರ್ಮಿಕವಾದದ್ದು. ವ್ಯಕ್ತಿ ಏಕಾಂಗಿಯಾಗಿ ಬದುಕಲು ಸಾಧ್ಯವಿಲ್ಲ. 'ಮನಕ್ಕ ಮನ ಕೂಡಿದರೆ ಮನಿಮಾರ, ಜನಕ್ಕ ಜನಾ ಕೂಡಿದರ ಸಹಕಾರ' ಎಂಬ ಜನಪದರ ನಾಣ್ಣುಡಿಯಂತೆ ಮಾನವ ಕಾಡಿಂದ ನಾಡಿಗೆ ಬರುವ ಮೊದಲು ಗುಂಪು ಗುಂಪಾಗಿಯೇ ಇರುತ್ತಿದ್ದ. ಕ್ರಮೇಣ ಅಲೆಮಾರಿಯಾದಾಗಲೂ ಕೂಡ ಗುಂಪುಗಳು ಚದುರಲಿಲ್ಲ. ನೀರು, ಹಣ್ಣು-ಹಂಪಲ, ಮೇವು ಎಲ್ಲಿ ಯಥೇಚ್ಛವಾಗಿ ದೊರೆಯ ಹತ್ತಿತೋ, ಅಲ್ಲೆಲ್ಲ ನೆಲೆ ನಿಂತ ಜನಸಮೂಹಗಳೇ ಹಳ್ಳಿಗಳಾಗಿ ಪರಿಣಮಿಸಿದವು. ಅಲ್ಲಿ ಕುಟುಂಬ, ಸಮಾಜ, ಧರ್ಮ ಮುಂತಾದ ಸಂಸ್ಥೆಗಳಗು ಜನ್ಮ ತಾಳಿದವು.

೩.೧. ಸಮುದಾಯಗಳು ಮತ್ತು ವೃತ್ತಿ

ಕೊಟ್ಟಲಗಿ ಗ್ರಾಮದಲ್ಲಿ ಕರ್ನಾಟಕದ ಇತರ ಕಡೆಗಳಲ್ಲಿ ಇರುವಂತೆ ಹಲವು ಮತ ಪಂಥಗಳ ವಿವಿಧ ವರ್ಗಗಳ ಜನರು ವಾಸವಾಗಿದ್ದಾರೆ. ಭಾರತೀಯ ಸಂದರ್ಭದಲ್ಲಿಯಂತೂ ಸಮುದಾಯವು ಬಲಿಷ್ಠವಾದ ಒಂದು ಸಾಮಾಜಿಕ ಗುಣವಾಗಿದ್ದು; ಸಾಂಸ್ಕೃತಿಕವಾಗಿ ಹಲವು ಅಂಶಗಳನ್ನು ನಿಯಂತ್ರಿಸುವ, ನಿರ್ಮಿಸುವ ವಿಶೇಷತೆಯನ್ನು ಸಮುದಾಯವು ಹೊಂದಿರುತ್ತದೆ. ಅಲ್ಲದೇ ಯಾವುದೇ ಸಮುದಾಯದ ಬಗೆಗೆ ಈ ಕುರಿತ ಅಧ್ಯಯನಕ್ಕೆ ಪೂರಕವಾದ ಅಂಶಗಳೇ ಆಗಿರುತ್ತವೆ.

ಕೊಟ್ಟಲಗಿ ಪರಿಸರದಲ್ಲಿ ವೀರಶೈವರು, ಜೈನರು, ಬ್ರಾಹ್ಮಣರು, ಕುರುಬರು, ಬೇಡರು, ಮುಸ್ಲಿಂರು, ಅಕ್ಕಸಾಲಿಗರು (ಪತ್ತಾರರು), ಪಾಟೀಲ, ಗೌಡರು, ಹಡಪದರು, ಮಾದಿಗರು, ಹೊಲೆಯರು, ಕೊರವ, ರಜಪೂತರು, ಗುರವ, ತಳವಾರ, ಬಡಿಗೇರ, ಕೂಡ ಒಕ್ಕಲಿಗ, ಕಂಬಾರ, ಕುಂಬಾರ ಮುಂತಾದ ಜನರು ಇಲ್ಲಿ ವಾಸವಾಗಿದ್ದಾರೆ.

ಲಿಂಗಾಯತ: ಕೊಟ್ಟಲಗಿ ಗ್ರಾಮದಲ್ಲಿ ವೀರಶೈವ ಸಮುದಾಯವು ಹೆಚ್ಚಿನ ಜನಸಂಖ್ಯೆಯನ್ನು ಹೊಂದಿದ್ದು ಕಂಡುಬರುತ್ತದೆ. ವೀರಶೈವ ಸಮುದಾಯದ ಒಳಪಂಗಡಗಳಲ್ಲಿ ಲಿಂಗಾಯತ

ಸಮುದಾಯದ ಸಂಖ್ಯೆ ಶೇ.೭೦ರಷ್ಟಿದೆ. ಈ ಸಮುದಾಯದಲ್ಲಿ ವೀರಶೈವ ಪಂಚಮಸಾಲಿ ಜನಾಂಗವು ಹೆಚ್ಚಾಗಿದೆ. ಪ್ರಾಚೀನ ಕಾಲದಿಂದಲೂ ಗೌಡನೇ ಗ್ರಾಮದ ಮುಖಂಡನಾಗಿರುತ್ತಿದ್ದನು. ಊರಿನ ಗೌಡ ಮತ್ತು ವಾಲಿಕಾರ ಮತ್ತು ತಳವಾರ ಊರಿನಲ್ಲಿ ಪ್ರಮುಖ ಪಾತ್ರಧಾರಿಗಳು. ನಮ್ಮೂರ ಗೌಡರಿಗೆ ಊರ ಪಾಟೀಲ ಎಂದು ಕರೆಯುವದುಂಟು. ಗ್ರಾಮಾಡಳಿತ ನಡೆಸುವ ಮನೆತನಗಳಿಗೆ ಗೌಡಕಿ ಮನೆತನವೆಂದು ಕರೆಯುತ್ತಾರೆ. ತಮ್ಮ ಕೈಯಲ್ಲಿ ವಾಲಿಕಾರ, ತಳವಾರರನ್ನು ಇರಿಸಿಕೊಳ್ಳುತ್ತಿದ್ದರು. ಗೌಡರ ಬಲಗೈ ಭಂಟನಾಗಿ ವಾಲಿಕಾರ, ಊರ ಕಾವಲಿಗಾಗಿ ತಳವಾರ ಕೆಲಸ ಮಾಡುತ್ತಿದ್ದರು. ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಪತ್ರಗಳನ್ನು ಮುಟ್ಟಿಸುವುದು ವಾಲಿಕಾರನ ಪ್ರಮುಖ ಕೆಲಸ. ಊರಲ್ಲಿಯ ಜಗಳುಗಳನ್ನು ಬಗೆಹರಿಸುವದು, ತೆರಿಗೆ ವಸೂಲು ಮಾಡುವುದು, ಊರಲ್ಲಿ ಶಾಂತಿ ಕಾಪಾಡುವದು, ಊರಿನ ಒಳಿತು-ಕೆಡಕುಗಳನ್ನು ಕುರಿತು ವಿಚಾರಿಸುವದು ಈ ಮೂವರು ವ್ಯಕ್ತಿಗಳ ಜವಾಬ್ದಾರಿಯಾಗಿತ್ತು. ಮೊದಲು ಗ್ರಾಮ ಚಾವಡಿ ಗ್ರಾಮದ ಆಡಳಿತ ಕಛೇರಿಯಾಗಿತ್ತು. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಗ್ರಾಮದಲ್ಲಿ ಗೌಡಕಿ ಮನೆತನದವರೂ ಕೂಡ ಲಿಂಗಾಯತ ಸಮುದಾಯದವರಿರುವದು ವಿಶೇಷವಾಗಿದೆ. ಗ್ರಾಮದಲ್ಲಿ ಬಹುಸಂಖ್ಯಾತ ಸಮುದಾಯವೂ ಕೂಡ ಆಗಿರುವುದರಿಂದ ಸಹಜವಾಗಿ ಗ್ರಾಮದ ಆಡಳಿತದಲ್ಲಿ ಹಿಡಿತ ಸಾಧಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಆದರೆ ಇಷ್ಟೆಲ್ಲ ಪ್ರಬಲ ಸಮುದಾಯವಾಗಿದ್ದರೂ ಯಾವ ಅಲ್ಪ ಸಮುದಾಯದ ಮೇಲ್ಲೂ ದೌರ್ಜನ್ಯವೆಸಗಿದ ಸನ್ನಿವೇಶಗಳಿಲ್ಲ. ಇವರು ಶಾಂತಿಪ್ರಿಯ ಜನ, ಶಿವನ ಆರಾಧಕರೂ ಹೌದು. ಇಷ್ಟೆಲ್ಲ ಹಿರಿಮೆ ಯನ್ನು ಹೊಂದಿದ ಈ ಸಮೂಹ ಗ್ರಾಮ ಆಡಳಿತದಲ್ಲಿ ತನ್ನ ಸ್ಥಾನಮಾನವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಪ್ರಜಾಪ್ರಭುತ್ವದ ಹಿನ್ನೆಲೆಯಲ್ಲಿ ಸಹಜವಾಗಿ ಆಡಳಿತವು ವಿವಿಧ ಸಮುದಾಯಕ್ಕೆ ಹಂಚಿಕೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅಲ್ಪಸಂಖ್ಯಾತ ಸಮುದಾಯದ ಜನ ಕೂಡ ಮಹತ್ವ ಪಡೆದುಕೊಳ್ಳುವಂತಾಗಿದೆ. ಆದರೆ ಇಂದು ಶೈಕ್ಷಣಿಕವಾಗಿ, ಆರ್ಥಿಕವಾಗಿ ಅಷ್ಟಾಗಿ ಪ್ರಗತಿ ಕಾಣಲು ಈ ಜನಾಂಗಕ್ಕೆ ಸಾಧ್ಯವಾಗಿಲ್ಲವೆಂದೇ ಹೇಳಬೇಕು. ಒಟ್ಟಾರೆ ಗ್ರಾಮದ ಬಹುಸಂಖ್ಯಾತ ಸಮುದಾಯವಾಗಿದ್ದು ಇತರ ಸಮುದಾಯದೊಂದಿಗೆ ಭಾವೈಕ್ಯತೆಯಿಂದ ಹೊಂದಿಕೊಂಡು ಕೃಷಿ, ವ್ಯಾಪಾರ, ನೌಕರಿ ಜೊತೆಗೆ ವಿವಿಧ ಆಧುನಿಕ ವೃತ್ತಿಗಳನ್ನು ಕೈಗೊಂಡು ನೆಮ್ಮದಿಯ ಬದುಕನ್ನು ಸಾಗಿಸುತ್ತಿದ್ದಾರೆ.

ಬಣಜಿಗ: ಬಣಜಿಗ ಸಮಾಜದಲ್ಲಿ ಎರಡು ಒಳಪಂಗಡಗಳನ್ನು ಹೊಂದಿದೆ. ೧) ಆದಿ ಬಣಜಿಗ ೨) ಶೀಲವಂತ ಬಣಜಿಗ ಎಂಬ ಎರಡು ಪ್ರಕಾರಗಳಿವೆ. ಶೀಲವಂತ ಬಣಜಿಗರಲ್ಲಿ ಸುಮಾರು ೧೫ ಮನೆತನಗಳಿದ್ದು ೧೦೦ ರವರೆಗೆ ಜನಸಂಖ್ಯೆ ಇದೆ. ಇವರಲ್ಲಿ ಮೂವರು ನೌಕರಿ ಮಾಡುತ್ತಿದ್ದು ಇಪ್ಪತ್ತ ಜನ ವ್ಯಾಪಾರ ಮಾಡುತ್ತಿದ್ದಾರೆ. ಇನ್ನುಳಿದವರು ವ್ಯವಸಾಯ ಕಾರ್ಯ ನಿರ್ವಹಿಸತ್ತಿದ್ದಾರೆ. ಕನಿಷ್ಠ ೫ ಎಕರೆಯಿಂದ ಹಿಡಿದು ಗರಿಷ್ಠ ೩೫ ಏಕರೆಯವರೆಗೆ ಜಮೀನು ಉಳವರಿದ್ದಾರೆ. ರಾಜಕೀಯವಾಗಿ ಉನತ ಸ್ಥಾನಮಾನ ಹೊಂದಿದ್ದಾರೆ.

ಆದಿ ಬಣಜಿಗ ಮನೆತನದ ಸುಮಾರು ೩೦ ಕುಟುಂಬಗಳು ಗ್ರಾಮದಲ್ಲಿ ವಾಸವಾಗಿವೆ. ಸುಮಾರು ೧೫೦-೨೦೦ ಜನಸಂಖ್ಯೆ ಹೊಂದಿದ್ದಾರೆ. ಕನ್ನಡ ನಾಡಿನ ಅರಸು ಮನೆತನಗಳ ಕಾಲದ ಅಂದಿನ ಸಮಾಜಗಳಲ್ಲಿಯೂ ಬಣಜಿಗ ಶೆಟ್ಟಿಯರಿದ್ದುದ್ದು ಶಾಸನಾಧಾರಗಳಿಂದ ತಿಳಿದುಬರುತ್ತದೆ. ಇದಕ್ಕೆ ನಿದರ್ಶನವಾಗಿ ಕ್ರಿ.ಶ. ೧೧೪೭ರ ತೇಲಸಂಗ ಶಾಸನವೊಂದರಲ್ಲಿ

ಬಣಜಿಗ ಸೆಟ್ಟಿ ಎಂಬ ಉಲ್ಲೇಖವನ್ನು ಕಾಣಬಹುದು. "ಇವರೂ ಕೂಡ ಗ್ರಾಮದಲ್ಲಿ ಒಂದಿಲ್ಲೊಂದು ವ್ಯಾಪಾರದಲ್ಲಿ ತೊಡಗಿಕೊಂಡಿರುವದು ಕಂಡುಬರುತ್ತದೆ. ಶೈಕ್ಷಣಿಕವಾಗಿ ಇವರೂ ಕೂಡ ಅಷ್ಟೊಂದು ಮುಂದುವರೆಯದೇ ಇರುವುದು ಕಂಡುಬರುತ್ತದೆ. ಧಾರ್ಮಿಕ ವಿಧಿ ವಿಧಾನಗಳಲ್ಲಿ ನಂಬಿಕೆಯುಳ್ಳವರಾಗಿದ್ದು ಇತರ ಸಮುದಾಯದೊಂದಿಗೆ ಹೊಂದಿಕೊಂಡು ಹೋಗುತ್ತಿದ್ದಾರೆ. (ಅಡಿಟಿಪ್ಪಣಿ: ಕರ್ನಾಟಕ ಇನಸ್ಕ್ರಿಪ್ಷನ್ ನಂ.೨ ಕಾ.ಸಂ.ಪು. ೩೯–೮೦)

ಮಾಳಿ ಸಮಾಜ: ವೀರಶೈವ ಒಳಪಂಗಡಗಳಲ್ಲಿ ಇನ್ನೊಂದು ಬಹುಸಂಖ್ಯಾತ ಪಂಗಡವೆಂದರೆ ಮಾಳಿ ಜನಾಂಗವಾಗಿದೆ. ಗ್ರಾಮದಲ್ಲಿ ೪–೫ ಜನ ಪ್ರಾಥಮಿಕ ಶಾಲಾ ಶಿಕ್ಷಕರಿದ್ದು ವಿವಿಧ ವ್ಯಾಪಾರ ವೃತ್ತಿಯ ಜೊತೆಗೆ ಕೃಷಿ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಸಮುದಾಯದವರೂ ಕೂಡ ಹಿಂದಿನಿಂದಲೂ ಕಾಯಿಪಲ್ಲೆ, ಹಣ್ಣು ಇನ್ನಿತರೆ ವ್ಯವಹಾರ ಮಾಡಿಕೊಂಡು ಬಂದವರು. ಆದರೆ ಇಂದು ಕೃಷಿ ಕಾರ್ಯದೆಡೆಗೆ ಒಲವು ತೋರಿಸುತ್ತಿದ್ದಾರೆ. ಸಾಮಾಜಿಕ ರಂಗದಲ್ಲಿ ಒಳ್ಳೆಯ ಗೌರವದ ಸ್ಥಾನಮಾನವನ್ನು ಹೊಂದಿದ್ದಾರೆ. ವಿಶೇಷವಾಗಿ ಗ್ರಾಮ ಪಂಚಾಯತಿ ಆಡಳಿತದಲ್ಲಿ ಈ ಸಮುದಾಯವರು ಕೂಡ ಸದಸ್ಯ, ಉಪಾಧ್ಯಕ್ಷ, ಅಧ್ಯಕ್ಷರಾಗಿರುವದು ಗಮನಾರ್ಹ ಸಂಗತಿಯಾಗಿದೆ. ಆದರೆ ಇವರು ಶಾಂತ ಸ್ವಭಾವದ ಸಜ್ಜನ ವ್ಯಕ್ತಿಗಳು. ಗ್ರಾಮದ ಇತರೆ ಸಮುದಾಯದೊಂದಿಗೆ ಸಹಬಾಳ್ವೆಯಿಂದ ಬದುಕುತ್ತಿದ್ದಾರೆ.

ಕುರುಬರು: ಗ್ರಾಮದಲ್ಲಿ ವಿಶೇಷವಾಗಿ ಶೈಕ್ಷಣಿಕವಾಗಿ ಹಿಂದುಳಿದ ಜನಾಂಗವಾಗಿದೆ. ಗ್ರಾಮದ ರಾಜಕೀಯದಲ್ಲಿ ತಕ್ಕಮಟ್ಟಿನ ಪಾತ್ರ ನಿರ್ವಹಿಸುತ್ತಿದ್ದಾರೆ. ಕೃಷಿ, ಕುರಿಸಾಗಾಣಿಕೆ ವೃತ್ತಿಯನ್ನು ಮಾಡುತ್ತಿದ್ದಾರೆ. ಪ್ರಾಚೀನ ಕಾಲದಿಂದಲೂ ಕುರಿ ಸಾಕಾಣಿಕೆ, ಕಂಬಳಿ ನೇಯುವಿಕೆ ಮುಂತಾದ ಕುಲಕಸುಬನ್ನು ಈ ಸಮುದಾಯದವರು ಮಾಡುತ್ತಿದ್ದರು. ಆದರೆ ಇಂದು ಕುರಿ ಸಾಕಾಣಿಕೆಯಿಂದ ಬಹುತೇಕ ಕುರುಬರು ಹಿಂದೆ ಸರಿಯುತ್ತಿದ್ದಾರೆ. ಭೌತಿಕವಾಗಿ ಕುರಿ ಮೇಯಿಸಲು ವಿಶಾಲವಾದ ಭೂಪ್ರದೇಶವು ಲಭ್ಯವಾಗುತ್ತಿಲ್ಲ. ಇನ್ನೊಂದೆಡೆ ಕುರಿ ಕಾಯುವದೆಂದರೆ ಆಧುನಿಕ ಯುವ ಪೀಳಿಗೆ ದೃಷ್ಟಿಯಲ್ಲಿ ಕೀಳಾದ ಉದ್ಯೋಗ ಎಂಬ ಮನೋಭಾವನೆ ಆವರಿಸಿದೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಕುರಿ ಸಾಕಾಣಿಕೆಯಲ್ಲಿ ಅಷ್ಟೊಂದು ಲಾಭ ಪಡೆಯಲು ಸಾಧ್ಯವಿಲ್ಲದ ಸಂದರ್ಭಗಳು ಇವೆ. ಹೀಗಾಗಿ ಕೃಷಿ ಕಾರ್ಯದೆಡೆಗೆ ವಾಲುತ್ತಿದ್ದಾರೆ. ಹಾಗೆಂದೇ ಗ್ರಾಮದಲ್ಲಿ ಬಹುತೇಕ ಕುರುಬ ಸಮಾಜದವರು ಕೃಷಿ ಕಾರ್ಯದಲ್ಲಿ ತೊಡಗಿರುವದು ಕಂಡುಬರುತ್ತದೆ. ಕೆಲವೊಂದು ಈ ಗ್ರಾಮದ ಸುಧಾರಿತ ಕುಟುಂಬದವರು, ಆರ್ಥಿಕವಾಗಿ ಸಬಲರಾದವರು ವಿವಿಧ ಆಧುನಿಕ ಉದ್ಯೋಗಗಳಲ್ಲಿ ತೊಡಗಿರುವುದು ಕಂಡುಬರುತ್ತದೆ. ವಿಠ್ಠರಾಯ ಇವರ ಆರಾಧ್ಯ ದೈವ. ಡೊಳ್ಳು ಕುಣಿತ, ಹಾಡುಗಾರಿಕೆ ಮುಂತಾದ ಕಲೆಗಳಲ್ಲಿ ಪ್ರಾವಿಣ್ಯತೆ ಸಾಧಿಸಿದ್ದಾರೆ.

ಜೈನರು: ಜೈನರು ಗ್ರಾಮದಲ್ಲಿ ಅಲ್ಪಸಂಖ್ಯಾತರಾಗಿದ್ದಾರೆ. ಈ ಹಿಂದೆ ಗ್ರಾಮದಲ್ಲಿ ಒಂದೇ ಒಂದು ಕುಟುಂಬವನ್ನು ಹೊಂದಿದ್ದ ಈ ಸಮುದಾಯದವರು ಇಂದು ಗರಿಷ್ಠವೆಂದರೆ ಒಂದು ನೂರರವರೆಗೆ ಜನಸಂಖ್ಯೆಯನ್ನು ಹೊಂದಿರುವುದು ಕಂಡುಬರುತ್ತದೆ. ಅಲ್ಪಸಂಖ್ಯಾತರಾಗಿ ಬಹುಸಂಖ್ಯಾತ ಸಮುದಾಯದ ಅಡಿಯಲ್ಲಿ ತಮ್ಮ ವೈಯಕ್ತಿಕ ಭಿನ್ನವಾದ ಸಂಸ್ಕೃತಿಯನ್ನು ಬಹುತೇಕ ಇವರು ರಕ್ಷಿಸಿಕೊಳ್ಳಲು ಸಾಧ್ಯವಾಗಿಲ್ಲ. ಏಕೆಂದರೆ ವೈಯಕ್ತಿಕ ಆಚಾರ–ವಿಚಾರಗಳನ್ನು ಹೊರತಪಡಿಸಿದರೆ ಜಾತ್ರೆ, ಹಬ್ಬ–ಹರಿದಿನ ಇತರೆ ಕಾರ್ಯಗಳ ಸಂದರ್ಭದಲ್ಲಿ ಇತರೆ

ಸಮುದಾಯಗಳ ಅವಶ್ಯಕತೆ ಇರುತ್ತದೆ. ಇತರ ಸಮುದಾಯದ ಜೊತೆ ಸಂಪರ್ಕವನ್ನು ಸಾಧಿಸಿ ಸಂತೋಷದಿಂದ ಕೊಡುಕೊಳ್ಳುವಿಕೆ ನಡೆಯುತ್ತದೆ. ಒಂದೇ ಮನೆತನದವರು ಇರುವುದರಿಂದ ಈ ಪ್ರಕ್ರಿಯೆಗೆ ಅವಕಾಶವಿಲ್ಲದಂತಾಗಿ ಬಹುಸಂಖ್ಯಾತ ಸಮುದಾಯದ ಆಚರಣೆಗಳನ್ನು ಇವರು ರೂಢಿಸಿಕೊಂಡಿದ್ದಾರೆ. ಗ್ರಾಮದಲ್ಲಿ ಜೈನ ಧರ್ಮದ ಶ್ವೇತಾಂಬರ ಸಮುದಾಯಕ್ಕೆ ಸೇರಿದ ಜನರಿದ್ದು, ಕೃಷಿ ಕಾರ್ಯ ಮಾಡುತ್ತಾರೆ. ಇವರೂ ಕೂಡ ಶೈಕ್ಷಣಿಕವಾಗಿ ಪ್ರಗತಿ ಸಾಧಿಸಲು ಸಾಧ್ಯವಾಗದೇ ಪಾರಂಪರಿಕ ಹಿರಿಯರಿಂದ ಬಂದ ಕೃಷಿಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ಬ್ರಾಹ್ಮಣರು: ಒಂದು ಕಾಲದಲ್ಲಿ ಗ್ರಾಮದ ಬ್ರಾಹ್ಮಣರು ಅಗ್ರಹಾರದ ಮುಖ್ಯಸ್ಥರಾಗಿದ್ದವರು. ಶೈಕ್ಷಣಿಕ ಪ್ರಗತಿಯನ್ನು ಸಾಧಿಸಿ, ಬೌದ್ಧಿಕ ವಿಕಾಸ ಹೊಂದಿದ ಜನ ಸಮೂಹವಿದು. ಗ್ರಾಮವು ಈ ಹಿಂದೆ ಅಗ್ರಹಾರವಾಗಿದ್ದ ಸಂದರ್ಭದಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದ ಜನಾಂಗ ವಿದ್ಯೆ ನೀಡುವಲ್ಲಿ ಬೌದ್ಧಿಕ ಕಸರತ್ತುಗಳನ್ನು ನಿರ್ವಹಿಸುವಲ್ಲಿ, ಗ್ರಾಮಾಡಳಿತದಲ್ಲಿ ವಿಶೇಷವಾದ ಗೌರವದ ಸ್ಥಾನಮಾನವನ್ನು ಹೊಂದಿದ್ದರು. ಆದರೆ ಆಧುನಿಕ ಸನ್ನಿವೇಶದಲ್ಲಿ ಗ್ರಾಮದ ಬ್ರಾಹ್ಮಣರು ಈಗ ಅಲ್ಪಸಂಖ್ಯಾತರಾಗಿದ್ದಾರೆ. ಈ ಹಿಂದೆ ಇದ್ದ ೧೦-೧೨ ಮನೆತನಗಳಲ್ಲಿ ಅನೇಕ ಜನ ಈಗಾಗಲೇ ಗ್ರಾಮ ತೊರೆದು ಕೇವಲ ಎರಡೆ ಮನೆತನದವರು ಗ್ರಾಮದಲ್ಲಿ ಉಳಿದುಕೊಂಡಿದ್ದಾರೆ. ಉಳಿದವರು ಜಾತ್ರೆ, ಹಬ್ಬ ಹರಿದಿನಗಳಲ್ಲಿ ಬಂದು ಹೋಗುತ್ತಾರೆ. ಸರಕಾರಿ ಅಥವಾ ಖಾಸಗಿ ನೌಕರಿ ನಿರ್ವಹಿಸುತ್ತಿದ್ದಾರೆ. ಗ್ರಾಮೀಣ ಬದುಕಿಗೆ ಹೊಂದಿಕೊಳ್ಳಲು ಸಾಧ್ಯವಾಗದೇ ಪಟ್ಟಣವಾಸಿಗಳಾಗುತ್ತಿದ್ದಾರೆ. ಕೃಷಿ ಕಾರ್ಯ ಅಷ್ಟೊಂದು ಲಾಭದಾಯಕವಾಗಿ ಕಂಡುಬರದೇ ಇರುವುದರಿಂದ ಕೃಷಿ ಭೂಮಿಯನ್ನು ಸಾಗುವಳಿ ಮಾಡಿಸುತ್ತಾರೆ. ಗ್ರಾಮದಲ್ಲಿ ವೈಷ್ಣವ ಪಂಥಕ್ಕೆ ಸೇರಿದ ಬ್ರಾಹ್ಮಣ ಸಮುದಾಯ ಇರುವದು ಕಂಡುಬರುತ್ತದೆ.

ಬೇಡ ಸಮುದಾಯ: ಹಿಂದೆ ಕಾಡಿನ ವಾಸ ಮಾಡುತ್ತ ಬೇಟೆಯಾಡುವದನ್ನೇ ಕುಲಕಸುಬನ್ನಾಗಿಸಿಕೊಂಡಿದ್ದ ಈ ಸಮುದಾಯವು ಇಂದು ಪರಿವರ್ತನೆ ಹೊಂದಿದೆ. ಗ್ರಾಮದಲ್ಲಿ ಬೇಡ ಸಮುದಾಯದ ಹದಿನೈದು ಮನೆತನಗಳಿವೆ. ಸುಮಾರು ೩೦೦ ರಿಂದ ೪೦೦ ಜನಸಂಖ್ಯೆ ಇರಬಹುದು. ಬಹುತೇಕರು ತಮ್ಮ ಪ್ರಾಚೀನ ಉದ್ಯೋಗವಾದ ಬೇಟೆಯಾಡುವ ವೃತ್ತಿ ಗ್ರಾಮದಲ್ಲಿ ಕಂಡುಬರುವದಿಲ್ಲ. ಏಕೆಂದರೆ ಬಹುತೇಕ ಈ ಸಮುದಾಯದ ಜನರು ಕೃಷಿ ಕಾರ್ಯದಲ್ಲಿ ಆಸಕ್ತಿ ಹೊಂದಿದ್ದು ಅದನ್ನೇ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಪ್ರಾಚೀನ ಕಾಲದಿಂದಲೂ ಬಹುಸಂಖ್ಯಾತ ಸಮುದಾಯದಲ್ಲಿ ಇವರು ಬೆರೆತುಹೋಗಿದ್ದು, ಆಚಾರ, ವಿಚಾರ, ನಡುವಳಿಕೆಗಳಲ್ಲಿ ಬಹುಸಂಖ್ಯಾತರ ಪ್ರಭಾವ ಎದ್ದು ಕಾಣುತ್ತದೆ ಹಾಗೂ ಶೈಕ್ಷಣಿಕವಾಗಿ ಪ್ರಗತಿ ಸಾಧಿಸಲು ಈ ಸಮುದಾಯಕ್ಕೆ ಸಾಧ್ಯವಾಗಿಲ್ಲವೆಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಬಹುತೇಕರು ಪ್ರಾಥಮಿಕ ಶಿಕ್ಷಣ, ಮೂರು ನಾಲ್ಕನೇಯ ತರಗತಿ ಓದಿದವರೇ ಹೆಚ್ಚು, ಹೀಗಾಗಿ ಸಾಕ್ಷರತೆಯ ಅಭಾವದಿಂದ ಸರಕಾರಿ ಸೌಲಭ್ಯ ಪಡೆಯುವಲ್ಲಾಗಲಿ ಹಾಗೂ ಹೆಚ್ಚಿನ ವಿದ್ಯಾಭ್ಯಾಸ ಪಡೆಯುವುದರಲ್ಲಾಗಲಿ ಈ ಸಮುದಾಯ ಹಿಂದೆ ಬಿದ್ದಿರುವದು ಕಂಡುಬರುತ್ತದೆ. ಇವರು ಆಧುನಿಕ ಸಮಾಜದೊಂದಿಗೆ ಬಹುತೇಕ ಹೊಂದಿಕೊಂಡು ಬಾಳಿ ಬದುಕುತ್ತಿದ್ದಾರೆ. ಬಿಸಲಸಿದ್ಧೇಶ್ವರ (ಅಚಕನಳ್ಳಿ) ಯಲ್ಲಮ್ಮ ಕೊಕಟನೂರ, ಸಿದ್ಧೇಶ್ವರ ಮುಂತಾದ ದೇವರಿಗೆ ನಡೆದುಕೊಳ್ಳುತ್ತಾರೆ. ಒಕ್ಕಲುತನ ಹಾಗೂ ಕೃಷಿ ಕಾರ್ಮಿಕರಾಗಿ ಕೆಲವು ಜನ ಕೆಲಸ ನಿರ್ವಹಿಸುತ್ತಿದ್ದಾರೆ.

ಮುಸ್ಲಿಂ ಸಮುದಾಯ: ಗ್ರಾಮದಲ್ಲಿ ಮುಸ್ಲಿಂ ಸಮುದಾಯದಲ್ಲಿ ಪಿಂಜಾರ, ಕೊರಬು, ಭಾವಾಜನಾಂಗ ಹೀಗೆ ವಿವಿಧ ಒಳಸಮುದಾಯವದವರು ವಾಸವಾಗಿದ್ದಾರೆ. ಗ್ರಾಮದಲ್ಲಿ ಎಲ್ಲರೂ ಮುಸ್ಲಿಂ ಸುನ್ನತ ಜಮಾತದಲ್ಲಿ ಬರುತ್ತಾರೆ. ಈ ಹಿಂದೆ ಈ ಸಮುದಾಯದ ಜನ ವೈಯಕ್ತಿಕವಾದ ಯಾವುದೇ ವಿಶೇಷ ಉದ್ಯೋಗವನ್ನು ಮಾಡುವದು ಕಂಡುಬರದಿದ್ದರೂ ಗ್ರಾಮದ ಮಟ್ಟಿಗೆ ಹೇಳುವುದಾದರೆ ಇವರು ಕೃಷಿಕರೇ ಹೌದು. ಹೇಗೆಂದರೆ ಗ್ರಾಮದಲ್ಲಿ ಅತೀ ಹೆಚ್ಚು ಕೃಷಿ ಭೂಮಿಯನ್ನು ಹೊಂದಿದ ಸಮುದಾಯವೆಂದರೆ ಮುಸ್ಲಿಂ ಸಮುದಾಯ. ಇವರು ಕೃಷಿ ಕಾಯಕವನ್ನು ಮಾಡಿಕೊಂಡು ಹೋಗುತ್ತಿದ್ದು ಕಷ್ಟ ಜೀವಿಗಳಾಗಿದ್ದಾರೆ. ಯಾವುದೇ ಕೆಲಸ ಮಾಡಲು ಹಿಂಜರಿಯದ ಮನೋಭಾವ ಕಂಡುಬರುತ್ತದೆ. ಈ ಸಮುದಾಯದ ಕೆಲವರು ದೇಶ ಸೇವೆ ಮಾಡುವ ಆಸಕ್ತಿಯಿಂದ ಸೈನ್ಯದಲ್ಲಿ ಸೇರಿದ್ದಾರೆ. ಇನ್ನು ಕೆಲವು ಜನ ಶಿಕ್ಷಕರಾಗಿದ್ದಾರೆ. ಅಲ್ಲದೇ ಕೆಲವರು ವ್ಯಾಪಾರ ವೃತ್ತಿಯನ್ನು ಮಾಡುತ್ತಿದ್ದಾರೆ. ಬಳೆ ಇಡಿಸುವದು, ಬಟ್ಟೆ ಹೊಲಿಯುವುದು, ಸಂತೆಯಲ್ಲಿ ಧಾನ್ಯ ಮಾರಾಟ ಮಾಡುವದು ಇತರೆ ಕಾರ್ಯಗಳನ್ನು ಮಾಡುತ್ತ ಬದುಕನ್ನು ನಿರ್ವಹಿಸುತ್ತಿದ್ದಾರೆ. ಸಮುದಾಯದ ಹಿನ್ನೆಲೆಯಲ್ಲಿ ಹೇಳುವುದಾದರೆ ಇವರೂ ಗ್ರಾಮದಲ್ಲಿ ಅಲ್ಪಸಂಖ್ಯಾತರೇ ಹೌದು. ಇಂದು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡುತ್ತ ಅಭಿವೃದ್ಧಿಯ ಪಥದೆಡೆಗೆ ಸಾಗುವ ಪ್ರಯತ್ನದಲ್ಲಿದ್ದಾರೆ.

ಅಕ್ಕಸಾಲಿಗರು: ಗ್ರಾಮದ ಜನಪದರ ಧಾರ್ಮಿಕ ಹಾಗೂ ಸಾಮಾಜಿಕ ಜೀವನದ ಹಲವಾರು ರೂಢಿ, ಸಂಪ್ರದಾಯ, ಆಚರಣೆಗಳಿಗೆ ಸಂಬಂಧಿಸಿದಂತೆ ಆವಶ್ಯಕ ಆಭರಣಗಳನ್ನು ತಯಾರಿಸುವ ಕಾರ್ಯ ಮಾಡುವ ಎರಡು ಮನೆತನದವರು ಇದ್ದಾರೆ. ಗ್ರಾಮದಲ್ಲಿ ಹತ್ತಾರು ಪಂಚಾಳ ಸಮೂಹಕ್ಕೆ ಸೇರಿದ ಮನೆತನಗಳಿವೆ. ಗ್ರಾಮದಲ್ಲಿ ಬಡಿಗತನ, ಕಮ್ಮಾರಿಕೆ, ಪತ್ತಾರಿಕೆ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಗ್ರಾಮದಲ್ಲಿ ಪಂಚಾಳ ಜನಾಂಗದವರ ಹತ್ತು ಮನೆಗಳಿದ್ದು ಎರಡು ಮನೆತನಗಳು ಅಕ್ಕಸಾಲಿಗರಾಗಿದ್ದಾರೆ. ಪತ್ತಾರಿಕೆ ಇವರ ಉದ್ಯೋಗವಾಗಿದೆ.

ಬಡಿಗೇರ: ಇವರು ಕೂಡ ಪಂಚಾಳ ಜನಾಂಗದವರಾಗಿದ್ದು ಹತ್ತು ಹನ್ನೆರಡು ಮನೆತನಗಳಿವೆ. ಇವರು ಸೃಷ್ಟಿಯ ಮೂಲ ಕರ್ತೃಗಳೇ ನಾವೇ ಎಂದು ಹೇಳಿಕೊಳ್ಳುವ ಹಿನ್ನೆಲೆಯುಳ್ಳವರು. ಇವರು ಶೈಕ್ಷಣಿಕವಾಗಿ ತಮ್ಮ ಮಕ್ಕಳಿಗೆ ಹೆಚ್ಚಿನ ಶಿಕ್ಷಣ ಕೊಡದೆ ತಮ್ಮ ಪರಂಪರಾಗತ ಹಿನ್ನೆಲೆಯ ಉದ್ಯೋಗಗಳನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಆರ್ಥಿಕವಾಗಿ ತಕ್ಕ ಮಟ್ಟಿಗೆ ಸುಧಾರಿಸಿಕೊಂಡು ಬದುಕುತ್ತಿದ್ದಾರೆ. ಆಧುನಿಕ ವ್ಯವಸ್ಥೆಗೆ ತಕ್ಕಂತೆ ಉಪಕರಣಗಳನ್ನು ಬಳಸಿಕೊಂಡು ತಮ್ಮ ಪರಂಪರಾಗತ ಉದ್ಯೋಗಗಳನ್ನು ಜೀವಂತವಾಗಿರಿಸಿ ಕೊಂಡಿದ್ದಾರೆ. ಇವರು ಶಿರಸಂಗಿ ಕಾಳಮ್ಮ, ಮುಚ್ಚಂಡಿ ಧರೆಪ್ಪ, ಕೊಟ್ಟಲಗಿ ಸಿದ್ಧೇಶ್ವರ, ಯಲ್ಲಮ್ಮ ಮುಂತಾದ ದೇವರುಗಳ ಆರಾಧಕರಾಗಿದ್ದಾರೆ. ಶೈಕ್ಷಣಿಕತೆಯಲ್ಲಿ ಅಷ್ಟೊಂದು ಮುಂದು ವರೆಯದೆ ಕೆಲವೇ ಜನ ಪದವಿ ಪಡೆದಿದ್ದು ಇನ್ನುಳಿದ ಜನ ಪ್ರಾಥಮಿಕ ಹಂತದ ಶಿಕ್ಷಣ ಪಡೆದಿದ್ದಾರೆ. ಬಡಿಗತನ, ಕಂಬಾರಿಕೆ ಮುಂತಾದ ಕಾರ್ಯ ಮಾಡುತ್ತಾರೆ.

ಹಡಪದರು: ಗ್ರಾಮದ ಪ್ರಬಲ ಸಮುದಾಯದ ಸಹವರ್ತಿಯಾಗಿ ಕ್ಷೌರ ಕಾರ್ಯಮಾಡುವ ನಾಲ್ಕೈದು ಜನ ನಾವಿಗರ ಮನೆತನಗಳು ಗ್ರಾಮದಲ್ಲಿವೆ. ಇವರೂ ಕೂಡ ಈ ಹಿಂದೆ ಮನೆ ಮನೆಗೆ ಹೋಗಿ ಕ್ಷೌರ ಕಾರ್ಯ ಮಾಡುತ್ತಿದ್ದರು. ಆದರೆ ಇಂದು ಬದಲಾವಣೆ ಹೊಂದಿದ್ದು ಆಧುನಿಕ ಉಪಕರಣಗಳೊಂದಿಗೆ ಕ್ಷೌರದ ಅಂಗಡಿಗಳನ್ನು ಸ್ಥಾಪಿಸಿಕೊಂಡು ದೈನಿಕ ಬದುಕನ್ನು

ಸಾಗಿಸುತ್ತಿದ್ದಾರೆ. ತಮ್ಮ ವೃತ್ತಿಯ ಜೊತೆಗೆ ವಿವಿಧ ಸಮುದಾಯದೊಂದಿಗೆ ಸಾಮರಸ್ಯದ ಬದುಕನ್ನು ನಡೆಸುತ್ತಿದ್ದಾರೆ.

ಹೊಲೆಯರು ಮತ್ತು ಮಾದಿಗರು: ಚನ್ನಪಟ್ಟಣದವರು ಹೊಲೆಯರು ಜಾಂಬವ ಪಟ್ಟಣದವರು ಮಾದಿಗರು ಎಂದು ಹೇಳಿಕೊಳ್ಳುವ ಈ ದಲಿತ ಜನಪದ ವರ್ಗಗಳ ಆನುವಂಶಿಕ ವೃತ್ತಿ ಸತ್ತ ದನಗಳನ್ನು ಊರ ಹೊರಗೆ ಎಳೆದು ಒಗೆಯುವುದು, ಅವುಗಳನ್ನು ಸುಲಿಯುವುದು, ಊರಿನ ಸುಗ್ಗಿಯ ಸಂದರ್ಭದಲ್ಲಿ ರೈತ ಕುಟುಂಬದವರಿಂದ ಕಾಳುಗಳನ್ನು ಪಡೆಯುವದು, ಸತ್ತ ಸುದ್ದಿ ಒಯ್ಯುವದು, ಹಬ್ಬ-ಹರಿದಿನಗಳಲ್ಲಿ ಕಟ್ಟಿಗೆ ಒಡೆಯುವದು, ಹೊಲೆಯರು ಸುಲಿದು ಕೊಟ್ಟ ಚರ್ಮದಿಂದ ಮಾದಿಗರು ಒಕ್ಕಲಿಗನಿಗೆ ಬೇಕಾದ ತೊಗಲಿನ ಬಾರಕೋಲು, ಗೆಜ್ಜೆ ಸರ, ಮಿಣಿ, ಕವಣಿ ಮುಂತಾದವುಗಳನ್ನು ತಯಾರಿಸುವದು ಮುಂತಾದ ವೃತ್ತಿಗಳನ್ನು ಮಾಡುತ್ತಿದ್ದರು. ಗ್ರಾಮದಲ್ಲಿ ಪಸ್ತುತ ನಾಲ್ಕೈದು ಮನೆತನದವರು ಪಾದರಕ್ಷೆಗಳನ್ನು ತಯಾರಿಸುತ್ತಾರೆ. 'ಹೊಲೆಯ' ಪದ ಬಂದಿರುವುದೇ ಹೊಲವನ್ನು ಕಾಯುವ ವೃತ್ತಿಯಿಂದ, ಗ್ರಾಮದ ಗೌಡ ಹಾಗೂ ಕೆಲವೊಂದು ಮೇಲ್ವರ್ಗದವರ ಹೊಲವನ್ನು ಈ ಜನ ಕಾಯತ್ತಿದರು. ಮಾತಂಗಿಯ ಮಕ್ಕಳಾದ ಮಾದಿಗರು ಡೋಣಿ ಕೆಲಸ ಮಾಡುತ್ತ ಬಂದಿರುವರು. ಅನೇಕ ತಲೆಮಾರುಗಳಿಂದ ವೃತ್ತಿಗಳ ಜನರು ಸಿಕ್ಕುವದು ಈಗ ಕೈ ಬೆರಳಲ್ಲಿ ಎಣಿಸುವಷ್ಟು ಮಾತ್ರ, ಹೊಸ ಪೀಳಿಗೆಯ ಯುವ ಜನಾಂಗವಂತೂ ಸಂಪೂರ್ಣವಾಗಿ ಪಾರಂಪರಿಕ ವೃತ್ತಿಗಳಿಂದ ಹೊರಬಂದಿದ್ದಾರೆ. ವಿವಿಧ ಆಧುನಿಕ ವತ್ತಿಗಳೊಂದಿಗೆ ಕೃಷಿ, ನೌಕರಿ, ಪಾದರಕ್ಷೆ ತಯಾರಿಕೆ ವಿವಿಧ ಉದ್ಯೋಗಗಳೊಂದಿಗೆ ಗ್ರಾಮದಲ್ಲಿ ಪೂರಕವಾದ ಬದುಕನ್ನು ಸಾಗಿಸುತ್ತಿದ್ದಾರೆ. ಗ್ರಾಮದ ಕೆಳಸಮುದಾಯದವರಾಗಿದ್ದರೂ ಗ್ರಾಮದ ಮಟ್ಟಿಗೆ ಹೇಳುವುದಾದರೆ ಕೆಲವು ಜನ ಬ್ಯಾಂಕ ಮ್ಯಾನೇಜರ ಆಗಿ, ಒಬ್ಬರು ಸೈನ್ಯದಲ್ಲಿ ಕರ್ನಲ್, ಒಬ್ಬರು ಹೈಸ್ಕೂಲ ಶಿಕ್ಷಕರಾಗಿ, ೫ ಜನ ಕನ್ನಡ ಶಾಲೆ ಮತ್ತು ಸಂಗೀತ ಶಿಕ್ಷಕರಾಗಿ ೮ ಜನ, ನ್ಯಾಯವಾದಿಗಳಾಗಿ ೨ ಜನ ಕಾರ್ಯ ನಿರ್ವಹಿಸುತ್ತಿದ್ದಾರೆ. ಸುಶಿಕ್ಷಿತರಾಗಿ ಬೆಳವಣಿಗೆ ಹೊಂದುತ್ತಿರುವುದು ವಿಶೇಷವಾಗಿದೆ. ತಕ್ಕಮಟ್ಟಿಗೆ ಗ್ರಾಮದಲ್ಲಿ ಕೃಷಿ ಕಾರ್ಯ, ಕೂಲಿ, ಗೌಂಡಿ ಕಾರ್ಯ ಮುಂತಾದ ಕಾರ್ಯ ನಿರ್ವಹಿಸುತ್ತಾರೆ. ಇವರು ಗ್ರಾಮದಲ್ಲಿ ಸಮಾಜದ ಕೆಳಸಮುದಾಯದವರಾದರೂ ಸಮಾಜದ ಎಲ್ಲ ಸಮುದಾಯ ದವರೊಂದಿಗೆ ಸಾಮರಸ್ಯದಿಂದ ಬದುಕುತ್ತಿದ್ದಾರೆ.

ರಜಪೂತರ ಸಮುದಾಯ: ಈ ಸಮುದಾಯದಲ್ಲಿ ತಿವಾರಿ, ಪರದೇಶಿ ಮುಂತಾದ ಪ್ರಕಾರಗಳ ಸಮುದಾಯದವರಿದ್ದಾರೆ. ಶೈಕ್ಷಣಿಕವಾಗಿ ಮುಂದುವರೆದಿದ್ದು ಸುಮಾರು ೧೩ ಮನೆತನಗಳು ಗ್ರಾಮದಲ್ಲಿವೆ. ಒಕ್ಕಲುತನ, ವ್ಯಾಪಾರ, ನೌಕರಿ ಮಾಡಿಕೊಂಡಿದ್ದಾರೆ.

ಕುಂಬಾರ: ಗ್ರಾಮದಲ್ಲಿ ಸುಮಾರು ಹದಿನೈದು ಮನೆತನಗಳಿವೆ. ಪ್ರಾಥಮಿಕ ಶಾಲಾ ಶಿಕ್ಷಕರಾಗಿ, ಸೈನ್ಯದಲ್ಲಿ, ಗ್ರಾಮದ ಪಿ.ಕೆ.ಪಿ.ಎಸ್. ಬ್ಯಾಂಕನಲ್ಲಿ ಉದ್ಯೋಗ ಮಾಡುತ್ತಿದ್ದಾರೆ. ಗ್ರಾಮದ ನಾಲ್ಕಾರು ಕುಟುಂಬಗಳು ಮಾತ್ರ ಕುಂಬಾರಿಕೆ ವೃತ್ತಿಯನ್ನು ಮಾಡುತ್ತಿವೆ. ಈ ಜನಾಂಗದವರು ನಾಗರಪಂಚಮಿಯಲ್ಲಿ ೧) ಕುರುಬರ ಓಣಿಯಲ್ಲಿ ೨) ಹನುಮಾನ ದೇವಸ್ಥಾನ ೩) ಅಗಸಿಯಲ್ಲಿ ಬಂದು ನಾಗಪ್ಪನ ಮೂರ್ತಿ ತಯಾರಿಸುತ್ತಾರೆ. ಈ ನಾಗಪ್ಪನ ಮೂರ್ತಿಗೆ ಗ್ರಾಮದ ಜನ ಓಣಿಗಳಲ್ಲಿ ಹಾಲೆರೆಯುತ್ತಾರೆ. ಅಲ್ಲದೇ ಜೋಕುಮಾರನನ್ನು ತಯಾರಿಸುತ್ತಾರೆ. ಗೌರಿ ಹುಣ್ಣಿಮೆಯಲ್ಲಿ ಗೌರಿಯನ್ನು ತಯಾರಿಸುತ್ತಾರೆ. ಕುಂಬಾರ ಜನಾಂಗದಲ್ಲಿ ಲಿಂಗಾಯತ ಕುಂಬಾರರೆ ಕೊಟ್ಟಲಗಿಯಲ್ಲಿ ವಾಸವಾಗಿದ್ದಾರೆ.

ತಳವಾರರು: ಕೇವಲ ನಾಲ್ಕೈದು ಮನೆತನದವರಿದ್ದು ಗ್ರಾಮದಲ್ಲಿ ಅಲ್ಪಸಂಖ್ಯಾತರಾಗಿದ್ದಾರೆ. ಜೊತೆಗೆ ವರ್ಷದ ಸಾರ್ವತ್ರಿಕ ಆಚರಣೆಯಾದ ಜೋಕುಮಾರನನ್ನು ಹೊತ್ತುಕೊಂಡು ಊರಲ್ಲೆಲ್ಲ ತಿರುಗಾಡುತ್ತಾರೆ. ಜೋಕುಮಾರನ ಆಚರಣೆಯಲ್ಲಿ ಇವರು ವಿಶೇಷ ಪಾತ್ರ ವಹಿಸುತ್ತಾರೆ. ಇವರು ಗ್ರಾಮದ ಎಲ್ಲಮ್ಮ ಜಾತ್ರೆಯಲ್ಲಿ ಅಗ್ನಿ ಕುಂಡವನ್ನು ಸ್ವಚ್ಛಗೊಳಿಸುವ ಕಾರ್ಯ ಮಾಡುತ್ತಾರೆ. ಬಹುಸಂಖ್ಯಾತ ಸಮುದಾಯದ ಜೊತೆಗೆ ಹೊಂದಿಕೊಂಡು ಆಧುನಿಕ ಬದುಕಿನ ಹಲವು ಉದ್ಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಸಾಮರಸ್ಯದಿಂದ ಈ ಸಮುದಾಯ ಬದುಕುತ್ತಿರುವುದು ಕಂಡುಬರುತ್ತದೆ.

ಕೊರವರು: ಪ್ರಾಚೀನ ಕಾಲದಲ್ಲಿ ಅಲೆಮಾರಿಗಳಾಗಿದ್ದ ಕೊರವರು ಈಗ ಒಂದೆಡೆ ಸ್ಥಿರವಾಗಿ ಗ್ರಾಮದಲ್ಲಿ ನೆಲೆ ನಿಂತಿದ್ದಾರೆ. ಕೊರವರಲ್ಲಿ ಕಕ್ಕೆ ಕೊರವ, ಒಡ್ಡ ಕೊರವ, ಹಕ್ಕಿ ಕೊರವ, ಕಳ್ಳ ಕೊರವ, ಕುಂಚಿ ಕೊರವ ಎಂಬ ಮುಂತಾದ ಪಂಗಡಗಳಿವೆ. ಕ್ರಮವಾಗಿ ಮೋಡಿ ಮಾಡುವುದು, ವಾಲಗ ಊದುವುದು, ಹಕ್ಕಿ ಹಿಡಿಯುವುದು, ಕುಂಚು ತಯಾರಿಸುವದು, ಕಣಿ ಹೇಳುವುದು ಇವರ ಪಂಗಡಗಳ ಆನುವಂಶಿಕ ವೃತ್ತಿಯಾಗಿವೆ. ಗ್ರಾಮದಲ್ಲಿರುವ ಕೊರವರು ಒಡ್ಡ ಕೊರವರು. ಇವರನ್ನು ವಾಲಗದವರು, ಸನಾದಿಯವರು, ಬುಟ್ಟಿ ಕೊರವರು ಎಂಬ ಬೇರೆ ಬೇರೆ ಹೆಸರುಗಳಿಂದ ಕರೆಯುವ ಪದ್ಧತಿ ಇದೆ. ವಾಲಗ ಊದುವುದು, ಬುಟ್ಟಿ, ತಟ್ಟಿ ಹೆಣೆಯುವುದು ಇವರ ಪ್ರಧಾನ ಕುಲ ಕಸುಬು. ಊರಲ್ಲಿಯ ಮದುವೆ, ಕುಬಸದ ಕಾರ್ಯ, ಗ್ರಾಮ ದೇವತೆಗಳ ಜಾತ್ರೆ, ಉತ್ಸವ ಇತರ ಮೆರವಣಿಗೆ ಮತ್ತು ಶವ ಯಾತ್ರೆಗಳ ಸಂದರ್ಭದಲ್ಲಿ ವಾಲಗ ಊದಿ ಕಾಣಿಕೆ ಪಡೆಯುತ್ತಾರೆ. ಒಕ್ಕಲಿಗರಿಗೆ ಬೇಕಾಗುವ ಬುಟ್ಟಿ, ತಟ್ಟೆಗಳನ್ನು ಹೆಣೆದು ಕೊಟ್ಟು ಆಯ ಪಡೆಯುತ್ತಾರೆ. ಈಗಲೂ ಕೊರವರು ಇದೇ ವೃತ್ತಿಯಲ್ಲಿ ಮುಂದುವರೆಯುತ್ತಿದ್ದರೂ ಆಧುನಿಕತೆಯ ಹಿನ್ನೆಲೆಯಲ್ಲಿ ಈ ಉದ್ಯೋಗ ಬದುಕಿಗೆ ಪೂರಕವಾಗುತ್ತಿಲ್ಲ. ಹೀಗಾಗಿ ಅನ್ಯವೃತ್ತಿಗಳನ್ನು ಅನುಸರಿಸಿ ಬದುಕುವ ಅನಿವಾರ್ಯತೆಯಲ್ಲಿ ಈ ಜನ ಇದ್ದಾರೆ. ಗ್ರಾಮದಲ್ಲಿ ಕೆಳಸಮುದಾಯದವರಾಗಿದ್ದು ವಿಶಿಷ್ಟ ಸಂಸ್ಕೃತಿಯ ಪರಂಪರೆಯನ್ನು ಪಾಲಿಸಿಕೊಂಡು ಬದುಕಿದವರು ಕೊರವರು.

ಗೊರವ ಜನಾಂಗ: ಕೇವಲ ಎರಡೇ ಎರಡು ಮನೆತಗಳನ್ನು ಹೊಂದಿದ್ದು, ಕೃಷಿ ಕಾಯಕದ ಜೊತೆಗೆ ಶ್ರೀ ಹನುಮಂತ ದೇವರ ಪೂಜಾರಿಯಾಗಿ, ಸಾಂಬಾಳವಾದ್ಯ ನುಡಿಸುವರಾಗಿ, ಕಲಾವಿದರಾಗಿ ವಿವಿಧ ಸಾಮಾಜಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರು ಗ್ರಾಮದ ವಿವಿಧ ಸಮುದಾಯಗಳಿಗೆ ದೇವರ ಪೂಜೆಗೆ ಹೂವು–ಪತ್ರಿ ತಂದು ನೀಡುವ ಕಾರ್ಯವನ್ನು ಮಾಡುತ್ತಾರೆ. ಇವರು ಅಲ್ಪಸಂಖ್ಯಾತರಾಗಿದ್ದು ಗ್ರಾಮದಲ್ಲಿ ಸಾಮರಸ್ಯದಿಂದ ಬದುಕಿದ್ದಾರೆ.

ಗಾಣಿಗ ಸಮುದಾಯ: ಈ ಸಮುದಾಯವು ಕೂಡ ಅಲ್ಪಸಂಖ್ಯಾತರಾಗಿದ್ದರೂ ಪ್ರಜ್ಞಾವಂತರಾಗಿದ್ದಾರೆ. ನೌಕರಿ, ವ್ಯಾಪಾರ, ಕೃಷಿ ಎಲ್ಲ ಕಾಯಕಗಳ ಮೂಲಕ ಬದುಕಿಗೆ ನೆಲೆ ಕಂಡುಕೊಂಡಿರುವದು ತಿಳಿದುಬರುತ್ತದೆ. ಈ ಸಮುದಾಯವು ತಮ್ಮ ಮೂಲ ವೃತ್ತಿಯಾದ ಎಣ್ಣೆ ತೆಗೆಯುವ, ಗಾಣ ಹೊಡೆಯುವ ಕಾರ್ಯವನ್ನು ಇಂದು ಮಾಡುತ್ತಿಲ್ಲ. ಆಧುನಿಕ ಯಾಂತ್ರಿಕತೆಯು ಎಲ್ಲೆಡೆ ವ್ಯಾಪಿಸಿದ್ದರಿಂದ ಪರಂಪರಾಗತ ಉದ್ಯೋಗದಿಂದ ಅನಿವಾರ್ಯವಾಗಿ ಹಿಂದೆ ಸರಿಯುವ ಸಂದರ್ಭ ಒದಗಿದೆ. ಹೀಗಾಗಿ ಇವರು ಕೂಡ ಶಿಕ್ಷಣ ಪಡೆದು

ಆಧುನಿಕ ಜೀವನದೆಡೆಗೆ ವಾಲುತ್ತಿದ್ದಾರೆ. ತಮ್ಮ ಮನೆಯಲ್ಲಿ ಗಾಣಗಳನ್ನು ಇಟ್ಟುಕೊಂಡಿದ್ದು ಕೇವಲ ಪ್ರದರ್ಶನದ ವಸ್ತುಗಳಾಗಿವೆ.

ಮಠಪತಿ ಸಮುದಾಯ: ಗ್ರಾಮದಲ್ಲಿ ಶ್ರೇಷ್ಠ ಸ್ಥಾನಮಾನ ಈ ಸಮುದಾಯಕ್ಕೆ ಸಿಕ್ಕಿರುವದು ಕಂಡುಬರುತ್ತದೆ. ಕಾರಣ ಗ್ರಾಮದ ಸಮುದಾಯದವರ ವಿವಿಧ ಆಚರಣೆ ಜೀವನಾವರ್ತನೆಗಳ ಸಂದರ್ಭದಲ್ಲಿ ಇವರು ಅತೀ ಅವಶ್ಯಕವಾಗಿ ಬೇಕೆ ಬೇಕು. ಜನನ, ಸೀಮಂತ, ನಾಮಕರಣ, ಮರಣ ಮುಂತಾದ ಸಂದರ್ಭಗಳಲ್ಲಿ ಇವರ ಸಮ್ಮುಖದಲ್ಲಿ ಎಲ್ಲ ಕಾರ್ಯ ನೆರವೇರುತ್ತದೆ. ಕೆಲವು ಸಮುದಾಯ ಹೊರತುಪಡಿಸಿದರೆ ಇವರು ಎಲ್ಲ ಸಂದರ್ಭಗಳಲ್ಲಿ ಇವರ ಹಾಜರಾತಿ ಇಲ್ಲದೇ ಯಾವುದೇ ಕಾರ್ಯ ಜರುಗುವದಿಲ್ಲ. ಗ್ರಾಮದ ಎಲ್ಲ ಜನ ಇವರನ್ನು ತಮ್ಮ ಸಮುದಾಯದ ಗುರುಗಳೆಂದು ಭಾವಿಸುತ್ತಾರೆ. ಹೀಗೆ ಇವರು ಕೊಟ್ಟಲಗಿ ಗ್ರಾಮದಲ್ಲಿ ಗೌರವದ ಸ್ಥಾನಮಾನ ಹೊಂದಿದ್ದಾರೆ.

ಕೂಡುಒಕ್ಕಲಿಗ ಸಮುದಾಯ: ಗ್ರಾಮದಲ್ಲಿ ಕೃಷಿ ಕಾಯಕದ ಜೊತೆಗೆ ನೌಕರಿ, ಕೆಲಸ ಕಾರ್ಯ ಮಾಡುತ್ತ ಇತರ ಸಮುದಾಯದ ಜೊತೆ ಸಾಮರಸ್ಯದ ಬದುಕನ್ನು ಸಾಗಿಸುತ್ತಿದ್ದಾರೆ. ಧರ್ಮಿಷ್ಟರಾಗಿ ಪೂಜೆ, ಪುನಸ್ಕಾರ, ಆರಾಧನೆಗಳಲ್ಲಿ ಭಯ ಭಕ್ತಿವುಳ್ಳವರಾಗಿದ್ದಾರೆ. ಗ್ರಾಮದಲ್ಲಿ ೨೦-೩೦ ಕುಟುಂಬಗಳು ಈ ಸಮುದಾಯದಲ್ಲಿ ಕಂಡುಬರುತ್ತವೆ. ಇವರು ವಿಶೇಷವಾಗಿ ಶೈಕ್ಷಣಿಕವಾಗಿ ಮುಂದುವರೆಯದೆ ಕೃಷಿ ಕಾಯಕದಲ್ಲಿಯೇ ತಲ್ಲೀನರಾದದ್ದು ಕಂಡುಬರುತ್ತದೆ.

ವೃತ್ತಿ

ಕೊಟ್ಟಲಗಿ ಗ್ರಾಮದಲ್ಲಿ ವ್ಯವಸಾಯವೇ ಪ್ರಮುಖ ಉದ್ಯೋಗವಾಗಿದೆ. ಗ್ರಾಮದ ವ್ಯವಸಯಗಾರರು ಜೋಳ, ಮೆಕ್ಕೆಜೋಳ, ಶೇಂಗಾ, ಗೋಧಿ, ಸಜ್ಜೆ, ಸೂರ್ಯಕಾಂತಿ, ತೊಗರಿ, ಕಡಲೆ, ಹುರುಳಿ, ಮುಕಣಿ ಮುಂತಾದ ಬೆಳೆಗಳ ಜೊತೆಗೆ ದ್ರಾಕ್ಷಿ, ದಾಳಿಂಬೆ ಬೆಳೆಯುತ್ತಾರೆ. ಗ್ರಾಮದಲ್ಲಿ ಗುಡಿಕೈಗಾರಿಕೆಗಳು ಜೀವಂತವಾಗಿವೆ. ಕೊಟ್ಟಲಗಿಯಲ್ಲಿ ವೀರಶೈವ ಜನಾಂಗದವರು ಬಹುಸಂಖ್ಯಾತರಿದ್ದಾರೆ. ಇವರಲ್ಲಿ ಹೆಚ್ಚು ಜನರು ಬೇಸಾಯವನ್ನೇ ಅವಲಂಬಿಸಿದ್ದಾರೆ. ಉಳಿದ ಜನ ವ್ಯಾಪಾರ, ಕೂಲಿ ಕೆಲಸ ಮಾಡಿಕೊಂಡು ಉಪಜೀವನವನ್ನು ಮಾಡುತ್ತಾರೆ. ಈ ಜನರು ಸಾತ್ವಿಕ ಸ್ವಭಾವದವರು. ದೇವರು, ದೈವ, ಧರ್ಮದಲ್ಲಿ ಅತೀವ ನಂಬಿಕೆಯುಳ್ಳವರು. ಇತ್ತೀಚೆಗೆ ಈ ಜನಾಂಗದವರು ಸರ್ಕಾರಿ, ಅರೆ ಸರ್ಕಾರಿ ಉದ್ಯೋಗಗಳನ್ನು ಹಿಡಿದು ಜೀವನ ಸಾಗಿಸುತ್ತಾರೆ. ಬ್ರಾಹ್ಮಣರಲ್ಲಿ ಕೃಷಿ ಭೂಮಿಯನ್ನು ಹೊಂದಿದ್ದು ಕೂಡ ಲಾಭಕಾರಿಯಾಗಿ ಕೃಷಿಯನ್ನು ನಿರ್ವಹಿಸಲಾಗದೇ ಗೇಣಿಗೆ ಭೂಮಿಯನ್ನು ಹಲವಾರು ರೈತರುಗಳಿಗೆ ಕೆಲವರು ಒಪ್ಪಿಸಿದ್ದಾರೆ. ಕೆಲವರು ಕೃಷಿ ಭೂಮಿಯನ್ನು ಮಾರಾಟ ಮಾಡಿ ಪಟ್ಟಣವನ್ನು ಸೇರಿದ್ದಾರೆ. ಗ್ರಾಮದಲ್ಲಿ ಕೇವಲ ಎರಡು ಮೂರು ಕುಟುಂಬದವರು ವಾಸ್ತವ್ಯವಿರುವದು ಕಂಡುಬರುತ್ತದೆ. ಇನ್ನು ಕೆಲವರು ಜ್ಯೋತಿಷಿಯಾಗಿ, ಅರ್ಚಕರಾಗಿ, ವಾಸ್ತು ತಜ್ಞರಾಗಿ ಮಠಪತಿ ಸ್ವಾಮಿಗಳೆಂದು ಕರೆಸಿಕೊಳ್ಳುವವರು ಕಾರ್ಯನಿರ್ವಹಿಸುತ್ತಾರೆ. ಅವರು ಗ್ರಾಮದ ಕೃಷಿ ಕಾಯಕದ ಜೊತೆಗೆ ನೌಕರಿ ಕೂಡಾ ಮಾಡುತ್ತಿದ್ದಾರೆ.

ಗ್ರಾಮದ ಕುರುಬರು ಕುರಿ ಸಾಕುವ ವೃತ್ತಿಯನ್ನು ಕಡಿಮೆ ಮಾಡಿದ್ದು, ಕೃಷಿ ಕಾಯಕದೆಡೆ ಲಕ್ಷಹರಿಸುತ್ತಿದ್ದಾರೆ. ಜೊತೆಗೆ ಒಬ್ಬರು ಸರಕಾರಿ ನೌಕರಿಯಲ್ಲಿರದೇ ಇರುವುದು ಶೈಕ್ಷಣಿಕವಾಗಿ

ಹಿಂದುಳಿದಿರುವುದು ಸ್ಪಷ್ಟವಾಗುತ್ತದೆ. ಇತ್ತೀಚೆಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುತ್ತಿರುವದು ಶೈಕ್ಷಣಿಕ ಜಾಗೃತಿಯುಂಟಾಗಿರುವುದು ಕಂಡುಬರುತ್ತದೆ.

ಬಡಿಗೇರ ಹಾಗೂ ಕಮ್ಮಾರ, ಅಕ್ಕಸಾಲಿಗ ಮೂರು ವೃತ್ತಿಯನ್ನು ಗ್ರಾಮದ ಪಂಚಾಳ ಜನಾಂಗದವರು ನಿರ್ವಹಿಸಿಕೊಂಡು ಹೋಗುತ್ತಿದ್ದಾರೆ. ತಮ್ಮ ತಮ್ಮ ಕುಟುಂಬಗಳಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುತ್ತಿದ್ದಾರೆ. ಕುಂಬಾರ ಜನಾಂಗದವರು ತಮ್ಮ ಕಸುಬಿನಿಂದಲೇ ಜೀವನ ನಡೆಸುತ್ತಿದ್ದಾರೆ. ವೈಜ್ಞಾನಿಕವಾಗಿ ಮುಂದುವರೆದಿರುವ ಈ ಸಂದರ್ಭದಲ್ಲಿ ನಗರೀಕರಣದ ಪ್ರಭಾವದಿಂದಾಗಿ ಇವರು ಪೈಪೋಟಿಯನ್ನೆದುರಿಸುವಂತಾಗಿದೆ.

ಇತರ ಪ್ರದೇಶಗಳಂತೆಯೇ ಕೊಟ್ಟಲಗಿ ಪರಿಸರದಲ್ಲಿಯೂ ಇಂದು ಜನತೆ ಅಡುಗೆ ಮಾಡುವುದಕ್ಕಾಗಿ ಸ್ಟೀಲ್, ತಾಮ್ರ, ಅಲ್ಯೂಮಿನಿಯಂ, ಪ್ಲಾಸ್ಟಿಕ ಸಾಮಾನುಗಳಿಗೆ ಮಾರು ಹೋಗಿರುವುದರಿಂದ ಕುಂಬಾರರು ತಮ್ಮ ವೃತ್ತಿಯ ಮಹತ್ವ ಕಳೆದುಕೊಳ್ಳುವಂತಾಗಿದೆ.

ಬೇಡ ಸಮುದಾಯದವರು ನಾಲ್ಕಾರು ಜನ ಸುಶಿಕ್ಷಿತರಾಗಿದ್ದು; ಒಬ್ಬರು ಮಾತ್ರ ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದಾರೆ. ಕೆಲವರು ಕೃಷಿ ಭೂಮಿಯನ್ನು ಹೊಂದಿದ್ದು; ಕೃಷಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇನ್ನಿತರರು ಕೂಲಿ ಕಾರ್ಯವನ್ನು ಮಾಡಿಕೊಂಡು ಉಪಜೀವನ ಮಾಡುತ್ತಿದ್ದಾರೆ. ಸರ್ಕಾರಿ ಸೌಲಭ್ಯದ ಅರಿವು ಇರದೇ ಇರುವುದು ಕ್ಷೇತ್ರಕಾರ್ಯದಲ್ಲಿ ಕಂಡುಬಂತು. ಗಾಣಿಗರು ತಮ್ಮ ಪ್ರಾಚೀನ ಉದ್ಯೋಗಗಳಾದ ಗಾಣದಿಂದ ಎಣ್ಣೆ ತೆಗೆಯುವ ಕಾಯಕವನ್ನು ಬಿಟ್ಟು ಕೃಷಿ, ವ್ಯಾಪಾರ, ನೌಕರಿಯ ಕಡೆಗೆ ವಾಲಿರುವುದು ಸ್ಪಷ್ಟವಾಗುತ್ತದೆ.

ಮಾದಿಗ ಜನಾಂಗದವರು ಚರ್ಮದಿಂದ ತಯಾರಿಸುವ ವಸ್ತುಗಳನ್ನು ತಯಾರಿಸುತ್ತಿದ್ದರೂ ಇಂದು ಮಾರಾಟವಾಗದೇ ನಷ್ಟದಲ್ಲಿದ್ದಾರೆ. ಗ್ರಾಮದ ಕೊರವ ಜನಾಂಗದವರು ಕೂಡ ತಮ್ಮ ಮೂಲ ಉದ್ಯೋಗವಾದ ಬುಟ್ಟಿ ಹೆಣೆಯುವ ಕಾರ್ಯಕ್ಕೆ ಮೂಲವಸ್ತು ಸಿಗದೇ, ಅಕಸ್ಮಾತ ಸಿಕ್ಕರೂ ಆಧುನಿಕತೆಯ ಪ್ರಭಾವದಿಂದ ಮಾರಾಟವಾಗದೇ ಸಂಕಷ್ಟದಲ್ಲಿದ್ದಾರೆ.

ಮಾಳಿ ಜನಾಂಗದವರು ನಾಲ್ಕು ಜನ ಕನ್ನಡ ಶಾಲಾ ಶಿಕ್ಷಕರು, ನಾಲ್ಕು ಜನ ಬಸ್ ಡ್ರೈವರ, ಗ್ರಾಮಲೆಕ್ಕಾಧಿಕಾರಿ ಮುಂತಾದ ಸರ್ಕಾರಿ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಇಪ್ಪತ್ತು ಮೂವತ್ತು ಜನ ಪದವೀಧರರಿದ್ದಾರೆ. ಜೊತೆಗೆ ತಮ್ಮ ಸಮುದಾಯದ ವೃತ್ತಿಯಾದ ಕಾಯಿಪಲ್ಲೆ ಮಾರಾಟವನ್ನು ಕೆಲವು ಜನ ಮಾಡಿದರೆ, ಬೇಸಾಯವನ್ನು ಹಲವು ಜನ ನಿರ್ವಹಿಸಿ ಉಪಜೀವನ ಮಾಡುತ್ತಿದ್ದಾರೆ.

ಜೈನರು ಗ್ರಾಮದಲ್ಲಿ ಅಲ್ಪಸಂಖ್ಯಾತರಾಗಿದ್ದು; ಗ್ರಾಮದ ಇತರ ಸಮುದಾಯದಂತೆ ಕೃಷಿ ಚಟುವಟಿಕೆಯಲ್ಲಿ ತೊಡಗಿ ಬೇಸಾಯವನ್ನೇ ತಮ್ಮ ವೃತ್ತಿಯಾಗಿಸಿಕೊಂಡಿದ್ದು ಕಂಡುಬರುತ್ತದೆ.

ಬಣಜಿಗ ಸಮುದಾಯದಲ್ಲಿ ವ್ಯಾಪಾರ ವೃತ್ತಿಯನ್ನು ಕೆಲವು ಜನ ಅವಲಂಬಿಸಿದ್ದಾರೆ. ಇನ್ನು ಹಲವು ಜನ ಕೃಷಿಯನ್ನೇ ಅವಲಂಬಿಸಿದ್ದಾರೆ. ಇದ್ದುದರಲ್ಲಿಯೇ ಮಕ್ಕಳಿಗೆ ಒಳ್ಳೆಯ ಬದುಕನ್ನು ನೀಡಲು ಹಂಬಲಿಸುವ ಜನ ಇವರಾಗಿದ್ದಾರೆ.

ಮುಸ್ಲಿಂ ಜನಾಂಗದವರು ಗ್ರಾಮದಲ್ಲೆ ಅತೀ ಗರಿಷ್ಠ ಕೃಷಿ ಭೂಮಿಯನ್ನು ಹೊಂದಿದವರಿದ್ದರೆ, ಇನ್ನು ಕೆಲವು ಜನ ಭೂಮಿ ಸೀಮೆ ಇಲ್ಲದ ಜನರೂ ಇದ್ದಾರೆ. ಹಲವರು ಕೃಷಿ,

ವ್ಯಾಪಾರ, ಕೂಲಿ, ಸಕರಾರಿ ನೌಕರಿ ಹೀಗೆ ವಿವಿಧ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದು; ಗ್ರಾಮದಲ್ಲಿ ಸೌಹಾರ್ದದಿಂದ ಇತರ ಜನತೆಯ ಜೊತೆಗೆ ಬದುಕುತ್ತಿದ್ದಾರೆ.

ರಜಪೂತರು ಗ್ರಾಮದಲ್ಲಿ ಅಲ್ಪಸಂಖ್ಯಾತವಾಗಿದ್ದರೂ ಉತ್ತಮ ಸ್ಥಿತಿವಂತರಾಗಿದ್ದಾರೆ. ಇನ್ನು ಕೆಲವರು ಮಧ್ಯಮ ವರ್ಗದವರಾಗಿದ್ದರು ಶಿಕ್ಷಣ, ವ್ಯಾಪಾರ, ವಿವಿಧ ಉದ್ಯೋಗದ ಜೊತೆಗೆ ಕೃಷಿ ಚಟುವಟಿಕೆಯನ್ನು ನಿರ್ವಹಿಸುವಲ್ಲಿ ಆಸಕ್ತರಾಗಿದ್ದಾರೆ.

ತಳವಾರರು ಅಲ್ಪಸಂಖ್ಯಾತರಾಗಿದ್ದರೂ ಕೃಷಿ ಕಾಯಕದ ಜೊತೆಗೆ ಸಾಮಾಜಿಕ ಸ್ಥರದಲ್ಲಿ ಸೇವಾ ವರ್ಗದವರಾಗಿ ಜೋಕುಮಾರನ ಆರಾಧಕರಾಗಿ ಮಹತ್ವದ ಸ್ಥಾನ ಪಡೆದುಕೊಂಡಿದ್ದಾರೆ.

ನಾವಿ ಸಮುದಾಯದವರು ಸಮಾಜಿಕ ರಂಗದಲ್ಲಿ ಶೈಕ್ಷಣಿಕವಾಗಿ ಅಷ್ಟು ಮುಂದುವರೆಯದೇ ಇದ್ದರೂ ತಮ್ಮ ಕುಲಕಸುಬನ್ನೇ ಆಶ್ರಯಿಸಿ ಸಣ್ಣಗೆ ಮುಂದುವರಿದುಕೊಂಡು ಜೀವನವನ್ನು ಮಾಡುತ್ತಿದ್ದಾರೆ. ಮಕ್ಕಳಿಗೆ ಶಿಕ್ಷಣ ಕೊಡಿಸಿ; ಉತ್ತಮ ಬದುಕನ್ನು ನೀಡುವತ್ತ ದಾಪುಗಾಲಿ ಡುತ್ತಿದ್ದಾರೆ.

ಗ್ರಾಮದ ಹೊಲೆಯ ಸಮುದಾಯದವರೂ ಪಾರಂಪರಿಕ ಉದ್ಯೋಗಗಳಿಂದ ದೂರ ಸರಿದಿದ್ದಾರೆ. ಇವರು ಕೂಡಾ ಶೈಕ್ಷಣಿಕವಾಗಿ ಸರ್ಕಾರ ನೀಡುವ ಹಲವು ಸೌಲಭ್ಯಗಳನ್ನು ಬಳಸಿಕೊಂಡು ಗೌರವದಿಂದ ಬದುಕುತ್ತಿದ್ದಾರೆ. ಅಲ್ಪ ಸ್ವಲ್ಪ ಜನ ಅನಕ್ಷರಸ್ಥರಾಗಿದ್ದರೂ ಆಧುನಿಕ ಸಮಾಜದ ಜೊತೆ ಹೊಂದಿಕೊಂಡು ನೆಮ್ಮದಿಯ ಬದುಕು ನಡೆಸುತ್ತಿದ್ದಾರೆ. ತಮ್ಮ ಬದುಕಿಗೆ ಪೂರಕವಾದ ನಿರ್ಣಯ ಕೈಗೊಳ್ಳುವಷ್ಟು ಸಂಪೂರ್ಣ ಸ್ವಾತಂತ್ರತೆಯಲ್ಲಿ ಇವರು ಬದುಕುತ್ತಿದ್ದಾರೆ.

ಒಟ್ಟಾರೆ ಕೊಟ್ಬಲಗಿ ಗ್ರಾಮದ ಜನ ವಿವಿಧ ಉದ್ಯೋಗ ಕೈಗೊಳ್ಳುವಲ್ಲಿ ಪುರುಷರಷ್ಟೇ ಸ್ತ್ರೀಯರು ಸಬಲರಾಗುತ್ತಿರುವದು ಕಂಡುಬರುತ್ತದೆ. ವಿವಿಧ ಸ್ತ್ರೀ ಸಂಘಗಳ ಮೂಲಕ ಆರ್ಥಿಕ ಸಬಲಿಕರಣದತ್ತ ಸಾಗುತ್ತಿದ್ದಾರೆ. ಇದರ ಜೊತೆಗೆ ವಿವಿಧತೆಯಲ್ಲಿ ಏಕತೆ ಸಾಧಿಸುವತ್ತ ಕೊಟ್ಬಲಗಿ ಗ್ರಾಮವು ಜನಪದರ ಬದುಕಿಗೆ ವಿವಿಧ ನೆಲೆಗಳನ್ನು ಒದಗಿಸಿರುವುದು ಎದ್ದು ಕಾಣುತ್ತದೆ.

೩.೨. ಕುಟುಂಬ ಪದ್ಧತಿ

ಕುಟುಂಬವು ಸಮಾಜದ ಮೂಲಭೂತ ಶಕ್ತಶಾಲಿ ಘಟಕವಾಗಿದೆ. ಹಾಗಾಗಿಯೇ ಸಾಮಾಜಿಕ, ಸಾಂಸ್ಕೃತಿಕ ಅಧ್ಯಯನದ ಸಂದರ್ಭದಲ್ಲಿ ಕುಟುಂಬ ಮಹತ್ವದ ಪಾತ್ರವಹಿಸುತ್ತದೆ. ಮೈಕೆವರ ಮತ್ತು ಪೇಜರವರ ಪ್ರಕಾರ "ಕುಟುಂಬವು ಲೈಂಗಿಕ ಸಂಬಂಧದಿಂದ ಸ್ಪಷ್ಟಪಡಿಸಲ್ಪಟ್ಟ; ಸಾಕಷ್ಟು ಖಚಿತವಾದ, ಮಕ್ಕಳನ್ನು ಪಡೆಯಲು ಮತ್ತು ಪೋಷಿಸಲು ಅವಕಾಶ ಮಾಡಿಕೊಡುವಂತಹ ಒಂದು ಸಾಮಾಜಿಕ ವ್ಯವಸ್ಥೆ ಎಂದು ಹೇಳಿದ್ದಾರೆ.[೧]

ಆದಿಮ ಕುಟುಂಬಗಳ ವ್ಯವಸ್ಥೆಯಲ್ಲಿ ಸ್ತ್ರೀ ಪುರುಷರ ನಡುವಣ ಯಾವುದೇ ನಿರ್ಬಂಧ ವಿರಲಿಲ್ಲ. ಆದರೆ ಸಮಾಜ ಬೆಳೆಯುತ್ತ ಬಂದಂತೆ ಒಂದೇ ರಕ್ತ ಸಂಬಂಧಿಗಳ ನಡುವೆ ಲೈಂಗಿಕ ಸಂಬಂಧವನ್ನು ನಿಷೇಧಿಸಲಾಯಿತು. ಮುಂದೆ ಸಮಾಜಗಳು ಬೆಳೆದಂತೆ ಲೈಂಗಿಕ ಚಟುವಟಿಕೆಗಳ ಮೇಲೆ ಇನ್ನಷ್ಟು ನಿರ್ಬಂಧಗಳನ್ನು ಹೇರಲಾಯಿತು. ಸೋದರ ಸೋದರಿಯರ ನಡುವಣ ಲೈಂಗಿಕ ಸಂಬಂಧವನ್ನು ನಿಷೇಧಿಸಲಾಯಿತು. ಮುಂದೆ ಸಮಾಜಗಳು ಬೆಳೆದಂತೆ ಲೈಂಗಿಕ ಚಟುವಟಿಕೆಗಳ ಮೇಲೆ ಇನ್ನಷ್ಟು ನಿರ್ಬಂಧಗಳನ್ನು ಹೇರಲಾಯಿತು. ಮುಂದೆ ಏಕ

ಪತಿ ಏಕ ಪತ್ನಿ ವ್ಯವಸ್ಥೆ ಜಾರಿಗೆ ಬಂದಿತು. ಹೀಗಾಗಿ ಕುಟುಂಬಗಳು ಹುಟ್ಟಿಕೊಂಡು ಕುಟುಂಬಕ್ಕೊಂದು ನಿರ್ದಿಷ್ಟ ರೂಪ ದೊರೆತಂತಾಯಿತು. ಅವುಗಳಲ್ಲಿ ಹಲವಾರು ಕಾರಣಗಳಿಂದಾಗಿ ಸಮಾಜದಲ್ಲಿ ಬೇರೆ ಬೇರೆ ತೆರನಾದ ಕುಟುಂಬಗಳು ರಚನೆಯಾದವು. ಕುಟುಂಬವು ಸಮಾಜದಲ್ಲಿ ಅನೇಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದು, ಅದರಲ್ಲಿ ಮಕ್ಕಳನ್ನು ಪಡೆಯುವುದು, ಮಕ್ಕಳನ್ನು ಪಾಲಿಸುವುದು, ಅವರಿಗೆ ಸಮಾಜದಲ್ಲಿ ನಿರ್ದಿಷ್ಟ ಸ್ಥಾನ ಕಲ್ಪಿಸುವುದು, ಅಶಕ್ತರನ್ನು ಪಾಲಿಸುವುದು ಹೀಗೆ ಕುಟುಂಬಗಳು ಕ್ರಿಯಾಶೀಲವಾಗಿವೆ. ಹೀಗಾಗಿ ಕುಟುಂಬದ ಹಿನ್ನೆಲೆಯನ್ನು, ಪ್ರಕಾರಗಳನು ವಿಂಗಡಿಸಿ ಅಧ್ಯಯನಕ್ಕೊಳಪಡಿಸಲಾಗಿದೆ.

ಕುಟುಂಬಗಳನ್ನು ಅಧ್ಯಯನದ ಅನುಕೂಲಕ್ಕಾಗಿ ವಿಂಗಡಿಸಿ ನೋಡಿದಾಗ

ಕುಟುಂಬದ ಹಲವು ಪ್ರಕಾರಗಳು[3]

- ಅವಿಭಕ್ತ ಕುಟುಂಬ
- ವಿಭಕ್ತ ಕುಟುಂಬ
- ಮಾತೃಮೂಲ ಕುಟುಂಬ
- ಪಿತೃಪ್ರಧಾನ ಕುಟುಂಬ
- ರಕ್ತ ಸಂಬಂಧಿಗಳ ಕುಟುಂಬ
- ಗಂಡ ಹೆಂಡಿರ ಕುಟುಂಬ
- ಏಕಪತ್ನಿ ಕುಟುಂಬ
- ಬಹುಪತ್ನಿ ಕುಟುಂಬ
- ಬಹುಪತಿ ಕುಟುಂಬ

ಹೀಗೆ ಕುಟುಂಬಗಳ ವಿವಿಧ ಪ್ರಕಾರಗಳಿದ್ದರೂ ಪ್ರಸ್ತುತ ಕೊಟ್ಟಲಗಿ ಪರಿಸರದಲ್ಲಿನ ಕುಟುಂಬ ವ್ಯವಸ್ಥೆಯನ್ನು ಪರಿಶೀಲಿಸುವುದು ಇಲ್ಲಿನ ಮುಖ್ಯ ಉದ್ದೇಗವಾಗಿದೆ.

ಏಕೆಂದರೆ ಕುಟುಂಬವು ಸಾಮಾಜಿಕ ವ್ಯವಸ್ಥೆಯ ಕೇಂದ್ರ ಬಿಂದು. ಕುಟುಂಬವೆಂಬ ಘಟಕಗಳ ಆಧಾರದ ಮೇಲೆ ಈ ವ್ಯವಸ್ಥೆ ನಿಂತಿದೆ ಎಂದರೆ ತಪ್ಪಾಗಲಾರದು. ಎಲ್ಲಾ ಸಮಾಜಗಳ ಬಗ್ಗೆಯೂ ಈ ಮಾತು ನಿಜವೇ ಅನಿಸುತ್ತದೆ. ಅಂತೆಯೇ ವಿವಾಹ ಮತ್ತು ಕುಟುಂಬ ಇವು ಭಾರತೀಯ ಸಾಮಾಜಿಕ ವ್ಯವಸ್ಥೆಗೆ ಒತ್ತಾಸೆ ನೀಡಿರುವ ಎರಡು ಪ್ರಮುಖ ಸಾಮಾಜಿಕ ಸಂಸ್ಥೆಗಳು. ಪರಿವರ್ತನೆಯ ದಾಳಿಯನ್ನು ಎದುರಿಸಿಯೂ ತಮ್ಮ ಅಸ್ತಿತ್ವವನ್ನು ಕಾಯ್ದುಕೊಂಡಿರುವ ಸಂಸ್ಥೆಗಳು. ಇವು ಎಷ್ಟು ಸಾರ್ವತ್ರಿಕವಾಗಿವೆಯೋ ಇಂದಿಗೂ ಅಷ್ಟು ಸದೃಢವಾಗಿ ಮುಂದುವರೆದಿವೆ.

ಕೊಟ್ಟಲಗಿ ಪರಿಸರ ಗ್ರಾಮಾಂತರ ಪ್ರದೇಶವನ್ನೊಳಗೊಂಡಿದೆ. ಕೃಷಿ ಪರಂಪರೆಯ ಹಿನ್ನಲೆಯಲ್ಲಿ ಅವಿಭಕ್ತ ಕುಟುಂಬಗಳು ಅಸ್ತಿತ್ವದಲ್ಲಿವೆ. ಇತ್ತೀಚಿನ ದಿನಗಳಲ್ಲಿ ಜನ ಆಧುನೀಕರಣದ ಹಿನ್ನಲೆಯಲ್ಲಿ ವಿವಿಧ ವೃತ್ತಿಗಳನ್ನು ಕೈಗೊಂಡು ಜೀವನ ಸಾಗಿಸುತ್ತಿದ್ದಾರೆ. ಕೈಗಾರಿಕೀಕರಣ, ನಗರೀಕರಣ, ಶಿಕ್ಷಣ, ಉದ್ಯೋಗದಂತಹ ಪ್ರಭಾವಕ್ಕೆ ಒಳಗಾಗಿ ನಿರ್ದಿಷ್ಟ ಸ್ಥಳದಲ್ಲಿ ಇರಲಾಗುತ್ತಿಲ್ಲ. ಏಕೆಂದರೆ ತಮಗೆ ಅನುಕೂಲವೆನಿಸುವ ಸ್ಥಳಗಳಿಗೆ ಹೋಗಿ ಜೀವಿಸಲು ಬಯಸುವುದರಿಂದ ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಿ ಪರಿವರ್ತನೆಯನ್ನು ಹೊಂದುತ್ತಿವೆ.

ಸಾಮಾನ್ಯವಾಗಿ ಜೀವನವು ಇವತ್ತು ಪರಿಸರ ಮತ್ತು ಪರಿಸ್ಥಿತಿಗೆ ಅನುಗುಣವಾಗಿ ಬದಲಾವಣೆಯನ್ನು ಹೊಂದುವುದು ಸಹಜವಾಗಿ ಪುರುಷನೆ ನಮಗೆ ಅರಿವಿಗೆ ಬರುತ್ತಿರುವ ಸಂಗತಿ. ಪುರುಷ ಪ್ರಧಾನ ಕುಟುಂಬಗಳು ಎಲ್ಲೆಡೆ ಕಂಡುಬರುತ್ತಿದ್ದು ಸಹಜವಾಗಿ ಕುಟುಂಬದ ಯಜಮಾನನಾಗಿದ್ದಾನೆ. ಈ ಕಾರಣದಿಂದ ಕುಟುಂಬದ ಎಲ್ಲರ ಮೇಲೂ ಅಧಿಕಾರ ನಡೆಸುತ್ತಾನೆ. ಅಲ್ಲದೆ ಸ್ತ್ರೀಯರಿಗೂ ಗೌರವದ ಸ್ಥಾನವನ್ನು ನೀಡಿದ್ದಾನೆ. ಸ್ತ್ರೀ ಎಷ್ಟೋ ವೇಳೆ ಮನೆ ಮಕ್ಕಳನ್ನು ನೋಡಿಕೊಳ್ಳುವುದರ ಜೊತೆಗೆ ಕೃಷಿ ಚಟುವಟಿಕೆ ಇನ್ನಿತರ ಕಾರ್ಯಗಳಲ್ಲೂ ಭಾಗಿಯಾಗುತ್ತಾಳೆ. ಪುರುಷ ದುಶ್ಚಟಗಳಿಗೆ ಬಲಿಯಾದ ಸಂದರ್ಭಗಳಲ್ಲಿ; ತಮ್ಮ ಕುಟುಂಬ

ನಿರ್ವಹಣೆಯಲ್ಲಿ ಎಡವಿದಾಗ ಮನೆಯ ಯಜಮಾನಿಯಾಗಿ, ಹೆಂಡತಿಯಾಗಿ, ತಾಯಿಯಾಗಿ ಈ ಕುಟುಂಬಗಳ ಜವಾಬ್ದಾರಿಯನ್ನು ವಹಿಸಿಕೊಂಡು ಹೋಗುವುದು ಕಂಡುಬರುತ್ತದೆ.

೩.೩. ಮನೆಗಳ ಮಾದರಿ

ಕೊಟ್ಟಲಗಿ ಗ್ರಾಮದಲ್ಲಿ ಮನೆಗಳನ್ನು ಅಭ್ಯಸಿಸುವಾಗ ಸಹಜವಾಗಿ ಕಂಡುಬರುವ ಮನೆಗಳನ್ನು ಹೀಗೆ ವಿಂಗಡಿಸಿದಾಗ

೧. ಗುಡಿಸಲು

೨. ಕಬ್ಬಿಣ ತಗಡಿನ ಮನೆಗಳು

೩. ಮೇಲ್ ಮುದ್ದಿ ಮನೆಗಳು

೪. ಕಡೆಪಾಟ ಮನೆಗಳು

೫. ಆರ್.ಸಿ.ಸಿ. ಮನೆಗಳು, ಹೀಗೆ ವಿವಿಧ ರೀತಿಯ ವಿಂಗಡನೆಗಳನ್ನು ಮಾಡಿಕೊಳ್ಳಬಹುದು.

ಕೆಲವು ಸಂದರ್ಭಗಳಲ್ಲಿ ಜನತೆಯ ಆರ್ಥಿಕ ಪರಿಸ್ಥಿತಿಯನ್ನವಲಂಬಿಸಿ ಮನೆಗಳು ನಿರ್ಮಾಣವಾದರೆ; ಕೆಲವು ವೇಳೆ ಭೌಗೋಳಿಕ ಹಿನ್ನಲೆಯಲ್ಲೂ ಪರಿಶೀಲಿಸಬೇಕಾಗುತ್ತದೆ.

ಮನೆಗಳ ನಿರ್ಮಾಣವು ನಿಜವಾಗಿ ವಾಸ್ತುಶಿಲ್ಪ ಕಲೆಯೆಂದು ಪರಿಗಣಿಸಲಾಗುತ್ತದೆ. ಆದಾಗ್ಯೂ ಮರಗಳ ತೊಲೆ, ಕಂಬ, ಜಂತಿಗಳ ವಿನ್ಯಾಸ ಹಾಗೂ ಕೆತ್ತನೆಯ ಕೆಲಸದಿಂದಾಗಿ ಅದು ಕರಕುಶಲ ಕಲೆಯೆಂದೂ ಹೇಳಬಹುದಾಗಿದೆ. ಕೊಟ್ಟಲಗಿ ನಾಡು ಬಯಲು ಪ್ರದೇಶದಲ್ಲಿ ಬರುವುದು. ಹೆಚ್ಚಾಗಿ ಮೇಲ್ಮಾಳಿಗೆ ಮನೆಗಳು ಕಂಡುಬರುತ್ತವೆ. ಮನೆಯ ಮರಮುಟ್ಟುಗಳಲ್ಲಿ ಕಲಾಕೆಸರಿನ ಕೆಲಸ ಅಧಿಕವಾಗಿರುತ್ತದೆ. ಪಡಸಾಲೆಯ ತೊಲೆಯ ಮುಂಭಾಗದಲ್ಲಿ ವಿವಿಧ ವಿನ್ಯಾಸಗಳು, ಕಂಬ ಬೋಧುಗಳಲ್ಲಿ ವಿವಿಧ ನಕ್ಷೆಗಳು ಕಂಡುಬರುತ್ತವೆ. ಎದುರಿನ ಮಾಡುಗಳ ಚೌಕಟ್ಟಿಗೆ ಸುಳುವು ಇತ್ಯಾದಿ ಇರುವುದು ವಾಡಿಕೆಯಾಗಿದೆ. ತಲೆಬಾಗಿಲು (ಮುಂಬಾಗಿಲು) ದೊಡ್ಡದಿದ್ದು ಅದರ ಚೌಕಟ್ಟಿನ ಮೂರು ಬದಿಗಳಲ್ಲಿ ನಾನಾ ಬಗೆಯ ಸುಳುವುಗಳು, ಮೃಗ ಪಕ್ಷಿಗಳು, ಎಲೆ ಬಳ್ಳಿ ಕಾಯಿಗಳು, ದೇವ ದೇವತೆಗಳ ಹಲವು ಭಂಗಿಗಳನ್ನು ಕೆತ್ತಿರುತ್ತಾರೆ. ಕೆಳಗಿನ ಬಾಗಿಲ ಚೌಕಟ್ಟಿನಲ್ಲಿ ಸ್ವಸ್ತಿಕ ಮತ್ತು ಸೂರ್ಯ ಚಂದ್ರ ಮುಂತಾದ ಕೆತ್ತನೆಗಳಿರುವುದು ಕಂಡುಬರುತ್ತದೆ.

ಇನ್ನು ಅವರವರ ವೈಯಕ್ತಿಕ ಅನುಕೂಲತೆಗಳಿಗನುಗುಣವಾಗಿ ಕೋಣೆಗಳ ನಿರ್ಮಾಣ ಮಾಡಿಕೊಂಡಿರುವುದು ಕಂಡುಬರುತ್ತದೆ. ಶ್ರೀಮಂತರು ಪಡಸಾಲೆ, ಅಡುಗೆ ಕೋಣೆ, ದೇವರ ಕೋಣೆ, ಕಾಳು ಕಡಿ ಇಡುವ ಕೋಣೆ, ದನಗಳ ಕೊಟ್ಟಿಗೆ ಹೀಗೆ ಹಲವು ಕೋಣೆಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಮಧ್ಯಮ ವರ್ಗದವರು ಎರಡೇ ಕೋಣೆಗಳನ್ನು ನಿರ್ಮಿಸಿಕೊಂಡಿರುವುದು ಕಂಡುಬರುತ್ತದೆ. ಪಡಸಾಲೆಯಲ್ಲಿ ದನ, ಎತ್ತು, ಎಮ್ಮೆ, ಆಡುಗಳನ್ನು ಕಟ್ಟುವದು ಕಂಡುಬರುತ್ತದೆ.

ಬಡವರು ಒಂದೊಂದೆ ಕೋಣೆಗಳಲ್ಲಿ ವಾಸಿಸುವದು ಕಂಡುಬರುತ್ತದೆ. ಅವರವರ ಅನುಕೂಲತೆಗೆ ತಕ್ಕಂತೆ ತಗಡು ಮೇಲುಹೊದಿಕೆ, ಹಂಚು, ಸಿಮೆಂಟ (ಆರ್.ಸಿ.ಸಿ) ನಿಂದ ಮನೆ ನಿರ್ಮಿಸಿರುವುದು ಕಂಡುಬರುತ್ತದೆ. ಇನ್ನು ನಿರ್ಮಾಣ ಹಂತದಲ್ಲಿ ಹಾಳು ಮಣ್ಣಿನ ಕೆಸರು ಉಪಯೋಗಿಸಿ ಮನೆ ಕಟ್ಟಿ ಮೇಲೆ ಸಿಮೆಂಟನ್ನು ಲೇಪಿಸಿ ಹೊದಿಕೆ ನಿರ್ಮಿಸುತ್ತಾರೆ. ಸಾಮಾನ್ಯ ಹೊದಿಕೆ, ಕಡೆಪಾಟ ಹೀಗೆ ವಿವಿಧ ರೀತಿಯ ಹೊದಿಕೆಗಳನ್ನು ಕಾಣಬಹುದಾಗಿದೆ.

ಹೊಲ, ತೋಟ, ಗದ್ದೆಗಳಲ್ಲಿ ವಾಸಿಸುವ ಜನರು ಕೆಲವರು ಗುಡಿಸಲು ನಿರ್ಮಿಸಿಕೊಂಡಿರುವದುಂಟು. ಇನ್ನು ಕೆಲವರು ಸರ್ಕಾರದ ಇಂದಿರಾ ಆವಾಸ್, ಬಸವ ವಸತಿ, ಅಂಬೇಡ್ಕರ ಹೀಗೆ ವಿವಿಧ ಯೋಜನೆಗಳಲ್ಲಿ ಮನೆಗಳನ್ನು ನಿರ್ಮಿಸಿಕೊಂಡಿರುವರು.

ಮನೆಯು ಮೂಲತಃ ಸ್ವತಂತ್ರವಾದ ಘಟಕವಲ್ಲ. ಅದರ ಸುತ್ತಲಿನ ದನಗಳ ಹಟ್ಟಿ, ಬಚ್ಚಲು, ಕೊಟ್ಟಿಗೆ, ತುಳಸಿ ಕಟ್ಟೆ, ಬಾವಿ ಮನೆಯ ಜೊತೆ ಸೇರಿಕೊಂಡು ಅದೊಂದು ಸಂಕೀರ್ಣ ಘಟಕವಾಗುತ್ತದೆ. ಜಾತಿ, ವೃತ್ತಿ, ಪ್ರದೇಶ, ಧರ್ಮ, ರಾಜಕೀಯ ಮತ್ತಿತರ ಅಂಶಗಳು ಗೃಹ ನಿರ್ಮಾಣ ವಸ್ತುವಿನ ಮೇಲೆ ಪರಿಣಾಮ ಬೀರಿ ಅಪಾರ ವೈವಿಧ್ಯತೆಯನ್ನು ಮನೆಗಳ ರಚನೆಯಲ್ಲಿ ಕಾಣಬಹುದು.

೩.೪. ಆಹಾರ ಪದ್ಧತಿ

ಅಡುಗೆಯ ಅಭಿರುಚಿ ವ್ಯಕ್ತಿಯಿಂದ ವ್ಯಕ್ತಿಗೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗುತ್ತ ಹೋಗುತ್ತದೆ. ಆಧಾರದ ಹಿನ್ನೆಲೆಯಲ್ಲಿ ಗಮನಿಸಿದಾಗ ಒಂದು ಕಾಲಕ್ಕೆ; ಕೇವಲ ಹಸಿಯಾದ ಆಹಾರ ಪದಾರ್ಥಗಳನ್ನು ಸೇವಿಸುತ್ತಿದ್ದನು. ಬೆಂಕಿಯ ಅವಿಷ್ಕಾರವಾದ ಮೇಲೆ ರುಚಿಯ ಬೆನ್ನು ಹತ್ತಿ ಬಗೆ ಬಗೆಯ ಅಡುಗೆಗಳನ್ನು ಮಾಡಿಕೊಳ್ಳುತ್ತ ವಿವಿಧ ರೀತಿಯ ಆಹಾರ ಪದಾರ್ಥಗಳನ್ನು ಕಂಡುಹಿಡಿದನು.

ಆಹಾರವು ಪ್ರತಿಯೊಂದು ಜೀವಿಗೆ ಅಗತ್ಯವಾದುದು. ಹಾಗೆಂದೇ ಕೊಟ್ಬಲಗಿ ಗ್ರಾಮದ ಜನಪದರ ಆಹಾರ ಪದ್ಧತಿಯನ್ನು ವಿವೇಚಿಸುವುದು ಅವಶ್ಯಕವೆನಿಸಿದೆ.

ರೊಟ್ಟಿ: ಜೋಳವು ಗ್ರಾಮದಲ್ಲಿ ಸಾಕಷ್ಟು ಬೆಳೆಯುವುದರಿಂದ ಜೋಳದ ರೊಟ್ಟಿ ಈ ಜನರ ನಿತ್ಯದ ಆಹಾರದಲ್ಲಿ ಬಹು ಪ್ರಾಮುಖ್ಯತೆ ಪಡೆದಿದೆ. ಗ್ರಾಮದಲ್ಲಿ ಹಿಂಗಾರಿಯ ಬೆಳೆಯಾದ ಬಿಳಿಯ ಜೋಳದ ರೊಟ್ಟಿಯನ್ನೇ ವಿಶೇಷವಾಗಿ ಬಳಸುತ್ತಾರೆ. ಜೋಳದ ಹಿಟ್ಟನ್ನು ಕೊಣಮಿಗೆ ಹಾಕಿಕೊಂಡು ಅದಕ್ಕೆ ಹೆಸರು ಬಂದ ನೀರನ್ನು ಸುರುವಿ ಚನ್ನಾಗಿ ನಾದಿಕೊಂಡು ತರುವಾಯ ಸಣ್ಣ ಸಣ್ಣ ಉಂಡೆ ಮಾಡಿಕೊಂಡು; ಅದೇ ಕೊಣಮಿಗಿಯಲ್ಲಿ ತಟ್ಟಲಾಗುತ್ತದೆ. ತಟ್ಟಿದ ರೊಟ್ಟಿಯನ್ನು ತವೆಯಲ್ಲಿ (ಹಂಚು) ಹಾಕಿ ಬೇಯಿಸುವುದಲ್ಲದೇ ಕಿಚ್ಚಿಗೆ (ಒಲೆಯಲ್ಲಿರುವ ಬೆಂಕಿಯ ಮೇಲೆ ಹಾಕುವುದು) ಹಚ್ಚುವುದು ಉಂಟು. ರೊಟ್ಟಿಗೆ ಆಸರೆಯಾಗಿ ಕಾಳಿನ ಪಲ್ಲೆ, ಅಥವಾ ತರಕಾರಿ ಪಲ್ಲೆ ಇರುತ್ತದೆ. ಕಾಳಿನ ಪಲ್ಲೆಗೆ ಹೆಸರು, ಮೂಕಣಿ, ಕಡಲೆ, ಅಲಸಂದಿ, ತೊಗರಿ ಮೊದಲಾದವನ್ನು ಬಳಸುತ್ತಾರೆ. ತರಕಾರಿ ಪಲ್ಲೆಗೆ ಕಿರಸಾಲ್ಯಾನ ಪಲ್ಲೆ, ಗೂಳಿ ಪಲ್ಲೆ, ರಾಜಗಿರಿ ಪಲ್ಲೆ, ಕಡಲೆ ಪಲ್ಲೆ, ಮೆಂತೆ ಪಲ್ಲೆ, ಕುಸಬಿ ಪಲ್ಲೆ, ಪುಂಡಿ ಪಲ್ಲೆ ಮೊದಲಾದವುಗಳನ್ನು ಬಳಸುತ್ತಾರೆ. ಕಡಕ ರೊಟ್ಟಿಯಲ್ಲಿ ಜೋಳದ ರೊಟ್ಟಿ, ಸಜ್ಜೆ ರೊಟ್ಟಿ ತಯಾರಿಸುತ್ತಾರೆ. ಕಡಕ ರೊಟ್ಟಿ ಜೊತೆ ಕಾರಬ್ಯಾಳಿ ಮಾಡುತ್ತಾರೆ. ಈ ಕಾರಬ್ಯಾಳಿ ತೊಗರಿ ಬೇಳೆ, ಹೆಸರು ಬೇಳೆ, ಶೇಂಗಾ, ಚನ್ನಂಗಿ ಬೇಳೆ, ಅವರಿ ಬೇಳೆ ಕುದಿಸಿ ತಯಾರಿಸುತ್ತಾರೆ. ಕಾರಬ್ಯಾಳಿ ರೊಟ್ಟಿಗೂ ಸಹ ನಡೆಯುತ್ತದೆ. ತರುವಾಯ ಅನ್ನ, ಜೋಳದ ನುಚ್ಚಿಗೂ ನಡೆಯುತ್ತದೆ. ಜೋಳವನ್ನು ಒಡೆಸಿ ನುಚ್ಚು ಮಾಡಲಾಗುತ್ತದೆ. ಅನ್ನ ಅಥವಾ ನುಚ್ಚಿಗೆ ಮಜ್ಜಿಗೆ ಸಾರು, ಹುಣಸಿ ಹಣ್ಣಿನ ಸಾರು ಮಾಡುವುದುಂಟು.

ಹೋಳಿಗೆ: ಹಬ್ಬ, ಮದುವೆಯಂತಹ ಸಂದರ್ಭಗಳಲ್ಲಿ ಹೋಳಿಗೆ, ಸಜ್ಜಕ, ಕಡುಬು, ಹುಗ್ಗಿ ಮುಂತಾದ ಸಿಹಿ ಪದಾರ್ಥಗಳನ್ನು ಮಾಡುತ್ತಾರೆ. ಹೋಳಿಗೆ ಕಡಲೆ ಬೇಳೆ ಕುದಿಸಿ, ಅದಕ್ಕೆ ಬೆಲ್ಲಸೇರಿಸಿ ಅರದು ಹೂರಣ ಮಾಡಿಕೊಳ್ಳುವದು. ತರುವಾಯ ಗೋಧಿ ಹಿಟ್ಟಿನ ಕಣಕಕ್ಕೆ ಹೂರಣ ತುಂಬಿ ಹೋಳಿಗೆ ಮಣಿಯ ಮೇಲಿಟ್ಟು ತೀಡಿಕೊಂಡು ಹಂಚಿಗೆ ಹಾಕಿ ಬೇಯಿಸಿದರೆ ಹೋಳಿಗೆ ಸಿದ್ಧವಾಗುತ್ತದೆ. ಕಡುಬಿಗೂ ಹೂರಣ, ಕಣಕ ಎಲ್ಲ ಬೇಕು. ಆದರೆ ಆಕಾರದಲ್ಲಿ ಬೇರೆ ಆಗಿದ್ದು ಎಣ್ಣೆಯಲ್ಲಿ ಕರಿಯಲಾಗುತ್ತದೆ. ಹೋಳಿಗೆ ಜೊತೆಗೆ 'ಬೆಲ್ಲದ ಹಾಲು' ಅಂದರೆ ಬೆಲ್ಲ ಹಾಕಿ ಕುದಿಸಿದ ನೀರಿನಲ್ಲಿ ಅದ್ದಿಕೊಂಡು ತಿನ್ನುತ್ತಾರೆ. ಶೇಂಗಾ ಕಾಳನ್ನು ಸಣ್ಣಗೆ ಅರೆದು ಬೆಲ್ಲ ಸೇರಿಸಿ ಗೋಧಿ ಹಿಟ್ಟು ನಾದಿ ಅದರಲ್ಲಿ ಹಾಕಿ ಹೋಳಿಗೆ ತಯಾರಿಸುತ್ತಾರೆ.

ಸಜ್ಜಕ: ಸಜ್ಜಕವೆಂದರೆ ಇದೂ ಗೋಧಿಯ ಪದಾರ್ಥವೇ ಆಗಿದೆ. ಗೋಧಿ ಒಡೆಸಿ ಅದನ್ನು ನೀರಿನಲ್ಲಿ ಬೆಲ್ಲದೊಂದಿಗೆ ಕುದಿಸಿ ಮಾಡಿರುತ್ತಾರೆ. ಇದೇ ಸಜ್ಜಕದಿಂದ ಗೋಧಿ ಹಿಟ್ಟನ್ನು ನಾದಿ ಹೋಳಿಗೆ ಕೂಡ ಮಾಡುವದುಂಟು.

ಹುಗ್ಗಿ: ಗೋಧಿಯ ಕಾಳನ್ನ ಬೆಲ್ಲದೊಂದಿಗೆ ಕುದಿಸಿ ಮಾಡಿದ್ದು ಇರುತ್ತದೆ. ವಿಶೇಷ ದಿನಗಳಲ್ಲಿ ಈ ಆಹಾರ ತಯಾರಿಸುತ್ತಾರೆ. ಈ ಸಿಹಿ ಆಹಾರದ ಜೊತೆಗೆ ಉಪ್ಪಿನಕಾಯಿ, ಹಪ್ಪಳ, ಸಂಡಿಗೆ ಬಳಸುವದುಂಟು.

ವಿವಿಧ ರೀತಿಯ ಚಟ್ನಿಗಳು: ಸ್ಥಳಿಯವಾಗಿ ಬೆಳೆಯುವ ಧಾನ್ಯಗಳಾದ ಅಗಸಿ, ಕಾರ್‍ರ್ಯಾಳ, ಕುಸಬಿ, ಶೇಂಗಾ ಧಾನ್ಯಗಳಿಂದ ಅಗಸಿ ಹಿಂಡಿ, ಕಾರ್‍ರ್ಯಾಳ ಹಿಂಡಿ, ಕುಸಬಿ ಹಿಂಡಿ, ಶೇಂಗಾ ಹಿಂಡಿ ತಯಾರಿಸುತ್ತಾರೆ. ಈ ಧಾನ್ಯಗಳ ಜೊತೆ ಉಪ್ಪು, ಕಾರ ಸೇರಿಸಿ ಅರೆದು ಮಾಡಿದ ಚಟ್ನಿ ಎಂತವರ ಬಾಯಲ್ಲೂ ನೀರೂರಿಸುವುದು.

ಹುಳಬಾನ: ಮೊದಲ ರಾತ್ರಿ ಮಜ್ಜಿಗೆಯಲ್ಲಿ ಜೋಳದ ನುಚ್ಚ ನೆನೆಹಾಕಿ, ಮುಂಜಾನೆ ಎದ್ದು ಉಪ್ಪು, ಬಳ್ಳೊಳ್ಳಿ ಹಾಕಿ ಕುದಿಸುತ್ತಾರೆ. ಸಾಮಾನ್ಯವಾಗಿ ದೂರ ಪ್ರವಾಸಕ್ಕೆ ಹೋಗುವ ಎರಡು ಮೂರು ದಿನಗಳವರೆಗೆ ಪದಾರ್ಥವನ್ನು ರೊಟ್ಟಿ ಜೊತೆ ಹಚ್ಚಕೊಂಡು ಪಕ್ಕದಲ್ಲಿ ಹಿಂಡಿ ಹಾಕಿಕೊಂಡು ತಿನ್ನಲು ಬಹು ರುಚಿಯಾಗಿರುತ್ತದೆ.

ಆಧುನಿಕ ಪ್ರಭಾವದಿಂದಾಗಿ ನಗರದ ಆಹಾರಗಳಾದ ಶಿರಾ, ಪೂರಿ ಭಾಜಿ, ಭಜ್ಜಿ, ದೋಸೆ, ಉತ್ತಪ್ಪ, ಇಡ್ಲಿ ಮುಂತಾದವುಗಳ ಜೊತೆಗೆ ಜಾಮುನು, ಬುಂದಿ ಎಲ್ಲವೂ ಗ್ರಾಮಕ್ಕಾಗಮಿಸಿವೆ.

ಪಾನಿಯಗಳು: ಪಾನಿಯ ಎಂದರೆ ದ್ರವ ರೂಪದ ಕುಡಿಯಲು ಬಳಸುವಂಥದ್ದು. ಇದರಲ್ಲಿ ವಿಂಗಡಿಸಿ ನೋಡಿದರೆ

೧. ಸಿಹಿ ಪಾನಿಯ

೨. ಉಪ್ಪು ಪಾನಿಯ

೩. ಮಾದಕ ಪಾನಿಯ ಬಗೆ ಬಗೆಯಾಗಿ ವಿಂಗಡನೆಗಳು ಕಂಡುಬರುತ್ತವೆ.

ಷರಬತ್ತು: ಸಿಹಿ ಪಾನೀಯವಾಗಿ ಕೊಟ್ಟಲಗಿ ಗ್ರಾಮದಲ್ಲಿ ಬಳಸಲ್ಪಡುತ್ತದೆ. ಅಷ್ಟೇ ಅಲ್ಲ ಕರ್ನಾಟಕದಾದ್ಯಂತ ಪ್ರಿಯವಾದ ಪಾನೀಯವೆಂದು ಹೇಳಬಹುದು. ನಿಂಬೆ ಹಣ್ಣನ್ನು ಹಿಂಡಿದ ನೀರಿಗೆ ಅದಕ್ಕಷ್ಟು ಸಕ್ಕರೆ ಬೆರೆಸಿ ಈ ಪಾನಕವನ್ನು ತಯಾರಿಸುತ್ತಾರೆ. ಈ ಭಾಗದಲ್ಲಿ 'ಪಾನಕ'ವೆಂದೆ ಪ್ರಸಿದ್ಧಿ ಪಡಿದಿದೆ. ಇದಕ್ಕೆ ಯಾಲಕ್ಕಿ ಅರೆದು ಬೆರೆಸಿದರೆ ಪಾನಕಕ್ಕೆ ಒಳ್ಳೆಯ ಸುಹಾಸನೆ ಬರುತ್ತದೆ. ಬೇಸಿಗೆಯ ದಿನಗಳಲ್ಲಿ ಬಿಸಿಲ ಬೇಗೆಯಿಂದ ತಂಪು ಉಂಟುಮಾಡಲಿ ಎಂದು ಇದರ ಬಳಕೆ ಹೆಚ್ಚಾಗಿ ಕಂಡುಬರುತ್ತದೆ. ಉತ್ತರ ಕರ್ನಾಟಕದ ಬಿಸಿಲಿನ ಭಾಗದಲ್ಲಿ ಗ್ರಾಮವು ಬರುವುದರಿಂದ ಮಣ್ಣಿನ ಕೊಡ, ಹರವಿಗಳನ್ನು ನೀರನ್ನು ತುಂಬಿಡಲು ಬಳಸುತ್ತಾರೆ. ಪಾನಕಕ್ಕೆ ಇಂತಹ ಕೊಡ ಹರವಿಗಳಿಂದ ನೀರನ್ನು ತೆಗೆದುಕೊಂಡು ಬಳಸುತ್ತಾರೆ.

ಮಜ್ಜಿಗೆ ಮತ್ತು ಅಂಬಲಿ: 'ಮಜ್ಜಿಗೆ' ಮತ್ತು 'ಅಂಬಲಿ'ಗಳು ಉಪ್ಪು ಪಾನೀಯವಾಗಿ ಸೇವಿಸ್ಪಡುತ್ತವೆ. ಊಟದಲ್ಲಿ ಮಜ್ಜಿಗೆ ಬಳಸುವುದಲ್ಲದೇ ಊಟವಾದ ಬಳಿಕ ಮಜ್ಜಿಗೆಯನ್ನು ಕುಡಿಯುವ ರೂಢಿಯು ಕೆಲವರಿಗೆ ಇರುತ್ತದೆ. ಮಜ್ಜಿಗೆಗೆ ಸ್ವಲ್ಪ ಉಪ್ಪು ಬೆರೆಸಿ ಕುಡಿದರೆ 'ಸಾದಾ' ಮಜ್ಜಿಗೆ ಇವೆ. ಮಜ್ಜಿಗೆ ಉಪ್ಪು, ಬೆಳ್ಳುಳ್ಳಿ, ಜೀರಿಗೆ, ಕೋತ್ತಂಬರಿ ಬೆರೆಸಿದರೆ ಅದು ''ಮಸಾಲೆ' ಮಜ್ಜಿಗೆ' ''ವಗ್ಗರಣೆ' ಮಜ್ಜಿಗೆ' ಎನಿಸುತ್ತದೆ. ಅಂಬಲಿ ಸೇವನೆಯು ಸರ್ವೇಸಾಮಾನ್ಯವಾಗಿದೆ. ಜೋಳದ ಹಿಟ್ಟಿಗೆ ಉಪ್ಪು, ಬೆಳ್ಳುಳ್ಳಿ, ಜೀರಿಗೆ ಸ್ವಲ್ಪ ಬೆರೆಸಿ, ಸ್ವಲ್ಪ ಮೊಸರು ಹಾಕಿ ಕುದಿಸಿಬಿಟ್ಟರೆ 'ಅಂಬಲಿ' ಸಿದ್ಧಗೊಳ್ಳುತ್ತದೆ. ಉತ್ತರ ಕರ್ನಾಟಕದ ಹಲವಾರು ಮಠಗಳಲ್ಲಿ 'ಅಂಬಲಿಯು ಪ್ರಸಾದ ರೂಪದಲ್ಲಿ ಬಳಕೆಯಾಗುತ್ತಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಕನಕದಾಸರ ರಾಮಧಾನ್ಯ ಚರಿತೆಯಲ್ಲಿ ರಾಗಿ ಅಂಬಲಿ'ಪ್ರಸ್ತಾಪ ಕಾಣಬಹುದಾಗಿದೆ.

ಮಾದಕ ಪಾನೀಯಗಳು: ಮಾದಕ ಪಾನೀಯವಾಗಿ 'ಸೆರೆ' ಬಳಕೆಯಾಗುತ್ತದೆ. ಮೊದಲು ಸಿಂದಿ ಗಿಡದಿಂದ ಇಳಿಸಿದ 'ಶೇಂದಿ' ಬಳಕೆಯಾಗುತ್ತಿತ್ತು. ಚಟಕ್ಕಂಟಿಕೊಂಡವರು ದಿನವೂ ಸೆರೆ ಬಳಸುತ್ತಾರೆ. ಕೆಲವರು ಮದುವೆ, ದೇವತಾಕಾರ್ಯ, ಭಜನಾ ಕಾರ್ಯಕ್ರಮ, ನಾಟಕ ಪ್ರದರ್ಶನ, ಕೆಲವೊಂದು ಹಬ್ಬ ಹರಿದಿನಗಳಲ್ಲಿ ಮಾತ್ರ ಸೇವಿಸುತ್ತಾರೆ.

ಪ್ರತಿಯೊಂದು ಪದಾರ್ಥದ ಹಿಂದೆ ಬೇಕಾಗುವ ಸೇವನಾ, ಬಳಸುವ ಉಪಕರಣ, ಮಾಡುವ ವಿಧಾನ, ಉಣ್ಣುವ ರೀತಿ ಬೇರೆ ಬೇರೆಯಾಗಿದೆ. ಅಲ್ಲದೇ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗುತ್ತಾ ಹೋಗುತ್ತದೆ. ಗ್ರಾಮದ ಆಹಾರ, ಪಾನೀಯಗಳ ಬಳಕೆಗಳು ಗ್ರಾಮದ ಸಂಸ್ಕೃತಿಯ ಭಾಗವೆಂದು ಹೇಳಬಹುದು.

೩.೫. ಉಡುಗೆ ತೊಡುಗೆ

ಚಳಿ ಮಳೆಗಳಿಂದ ರಕ್ಷಿಸಿಕೊಳ್ಳಲು ಗಿಡದ ತೊಗಟೆಯನ್ನು ಸುತ್ತಿಕೊಳ್ಳಲು ತೊಡಗಿದ್ದ ಮಾನವ ನಂತರಲ್ಲಿ ನಾರು ಬಟ್ಟೆಯ ಮೊರೆ ಹೊಕ್ಕ. ತರುವಾಯದ ದಿನಗಳಲ್ಲಿ ಹತ್ತಿಯ ಅವಿಷ್ಕಾರವಾಯಿತು. ಹೀಗೆ ಮನುಷ್ಯ ಬದುಕಿನ ಮೊದಲ ಮೊದಲಲ್ಲಿ ಕೇವಲ ಪ್ರಾಕೃತಿಕ ಅವಶ್ಯಕತೆಯಾಗಿದ್ದ ಉಡುಪು ಬರಬರುತ್ತ ಸಾಮಾಜಿಕ ಬಂಧನವಾಗಿ ಮಾರ್ಪಟ್ಟಿದ್ದು ಕುತೂಹಲಕಾರಿಯಾದ ಸಂಗತಿಯಾಗಿದೆ. ಇದರೊಂದಿಗೆ ಉಡುಪಿನಲ್ಲಿ ವೈವಿಧ್ಯತೆಯುಂಟಾಯಿತು. ಗಮನಾರ್ಹವಾದ ಸಂಗತಿಯೆಂದರೆ ಈ ಬದಲಾವಣೆ ಏಕಕಾಲದಲ್ಲಿ ಎಲ್ಲೆಡೆ ತೋರ್ಪಡಲಿಲ್ಲ.

ಜಗತ್ತಿನಾದ್ಯಂತ ಚದುರಿಹೋಗಿರುವ ಜನಾಂಗಗಳು ಈ ಸಾಂಸ್ಕೃತಿಕ ಬದಲಾವಣೆಯಲ್ಲಿ ಕೆಲವು ಮುಂದುವರಿದವು. ಕೆಲವು ಹಿಂದುಳಿದವು. ಉಡುಪಿನ ಅಂದ ಚೆಂದಕ್ಕೆ ಮನಸೋತ ಮನುಷ್ಯನಿಗೆ ಕ್ರಮೇಣ ಆಭರಣಗಳ ಪ್ರಜ್ಞೆ ಮೂಡಿ ಅದರಲ್ಲಿಯೂ ವೈವಿಧ್ಯತೆಯನ್ನು ಬೆಳೆಯಿಸಿಕೊಂಡ. ಪ್ರಸ್ತುತ ಕೊಟ್ಬಲಗಿ ಗ್ರಾಮದ ಉಡುಗೆತೊಡುಗೆಯನ್ನು ವಿವೇಚಿಸುವುದು ಇಲ್ಲಿನ ಮುಖ್ಯ ಉದ್ದೇಶವಾಗಿದೆ.

ಉತ್ತರ ಕರ್ನಾಟಕದಲ್ಲಿ ಕೊಟ್ಬಲಗಿ ಗ್ರಾಮವು ಬರುವುದರಿಂದ ಸಾಮಾನ್ಯವಾಗಿ ಪುರುಷರು ಧೋತ್ರ ಉಡುತ್ತಾರೆ, ಅಂಗಿ ತೊಡುತ್ತಾರೆ. ಕೈಕಪ್ಪ ಅಂಗಿ ಹಾಕಿಕೊಳ್ಳುತ್ತಾರೆ. ಇತ್ತೀಚೆಗೆ ಬರುಬರುತ್ತ ಆಧುನಿಕತೆಯ ಹಿನ್ನೆಲೆಯಲ್ಲಿ ನೆಹರೂ ಶರ್ಟ ಅಂಗಿ ಹಾಕುತ್ತಾರೆ. ಸಾಮಾನ್ಯವಾಗಿ ತಲೆಗೆ ಟೊಪ್ಪಿಗೆ ಹಾಕುತ್ತಾರೆ. ನಾಗರೀಕತೆಯ ಸೊಗದ ವ್ಯಕ್ತಿಗಳು ಟೊಪ್ಪಿಗೆ ಧರಿಸುವದಿಲ್ಲ. ಗ್ರಾಮದ ಹಿರಿಯರು ಹಿಂದೆ ಅಂಗಿ ಹಾಕಿಕೊಳ್ಳುತ್ತಿದ್ದರು. ನೂಲಿನ ಅಥವಾ ಜರತಾರಿ ರೇಷ್ಮೆ ಪಟಕಾ(ಪೇಟ) ಸುತ್ತುತ್ತಾರೆ. ಇನ್ನು ಆಧುನಿಕತೆಯ ಸ್ಪರ್ಶವಾಗಿ ಶಾಲೆ, ಕಾಲೇಜು, ನೌಕರಿ ಕೆಲಸ ಮಾಡುತ್ತಿರುವವರು ಪ್ಯಾಂಟು, ಶರ್ಟು ಹಾಕುವುದು ಕಂಡುಬರುತ್ತದೆ.

ಪುರುಷರ ಆಭರಣಗಳು: ಬಂಗಾರ ಚೈನ, ಕರಿದಾರದಲ್ಲಿ ಕಟ್ಟಿದ ತಾಯಿತ, ಬೆಳ್ಳಿ ಕಡಗ, ಬೆರಳಿಗೆ ಉಂಗುರ, ನಡುವಿಗೆ ಬೆಳ್ಳಿಯ ಉಡದಾರ ಕಟ್ಟಿಕೊಳ್ಳುತ್ತಾರೆ. ಗ್ರಾಮದ ಲಿಂಗಾಯತ ಸಮುದಾಯದವರು ಬೆಳ್ಳಿ ಗುಂಡಗಡಿಗೆ ಹಾಕಿಕೊಳ್ಳುತ್ತಾರೆ.

ಸ್ತ್ರೀಯರ ಉಡುಗೆ: ಗ್ರಾಮದ ಸ್ತ್ರೀಯರು ಸೀರೆಯುಡುತ್ತಾರೆ, ಜಂಪರುಗಳನ್ನು ಹಾಕಿಕೊಳ್ಳುವರೆ ಹೆಚ್ಚು. ಕುಪ್ಪಸ ಕೂಡ ಹಿರಿಯ ಜನರು ಧರಿಸುತ್ತಾರೆ. ಗ್ರಾಮದ ವಿವಿಧ ಸಮುದಾಯದ ಅನೇಕ ಮಹಿಳೆಯರು ತಲೆಯ ಮೇಲೆ ಸೆರಗನ್ನು ಹೊದ್ದಿರುತ್ತಾರೆ. ಮದುವೆಯ ಸಂದರ್ಭದಲ್ಲಿ ಬಗೆ ಬಗೆಯಾದ ಸೀರೆಗಳನ್ನು ಉಪಯೋಗಿಸುತ್ತಾರೆ. ಅವುಗಳೆಂದರೆ ಮದುವೆ ಸೀರೆ, ಧಾರೆ ಸೀರೆ, ಬಪ್ಪಗಿ ಸೀರೆ, ಅರಿಷಿಣ ಪತ್ತಲು, ಆಯಿ ಸೀರೆ, ತಾಯಿ ಸೀರೆ ಇವು ಕಡ್ಡಾಯವಾಗಿ ಬೇಕೆ ಬೇಕು. ಗ್ರಾಮದಲ್ಲಿ ಹಿರಿಯ ಸ್ತ್ರೀಯರು ಇಲಕಲ್ ಸೀರೆ, ಮಹಾಲಿಂಗಪೂರ ಸೀರೆ, ಬನಹಟ್ಟಿ ಸೀರೆ ಮುಂತಾದ ಕಡೆಗಳಿಂದ ನಿರ್ವಾಣವಾಗುವ ಸೀರೆಗಳನ್ನು ಉಪಯೋಗಿಸುವದುಂಟು. ಇವುಗಳಲ್ಲಿ ಟೋಪ ಸೆರಗ, ತೇನಿ ತಿರಿಗಿದ್ದು ಎಂದು ಸೆರಗಿನಲ್ಲಿ ವಿನ್ಯಾಸ ಹೊಂದಿರುವ ಪ್ರಕಾರಗಳಿವೆ.

ಇನ್ನು ಆಧುನಿಕತೆ ಸೋಕಿರುವ ಕುಟುಂಬದ ಸ್ತ್ರೀಯರು ಇಂತಹ ಸೀರೆಗಳನ್ನು ಉಡದೆ, ಪತ್ತಲುಗಳನ್ನು ಉಡುವದು ಕಂಡುಬರುತ್ತದೆ. ನೂಲಿನ ಸೀರೆ, ಸಿಲ್ಕ ಸೀರೆ, ಜರಿ ಸೀರೆ, ಪೂನಮ್ ಸೀರೆ, ಕಂಚಿನ ಸೀರೆ, ರೇಷ್ಮೆ ಸೀರೆ, ಪೆಂಟಿಂಗ ಸೀರೆ, ಅಂಬರ ಪತ್ತಲು ಹೀಗೆ ವಿವಿಧ ರೀತಿಯ ಸೀರೆಗಳನ್ನು ಉಪಯೋಗಿಸುತ್ತಾರೆ. ಜೊತೆಗೆ ಶಿಕ್ಷಣ ಪಡೆದ ಕೆಲವರು ಚೂಡಿದಾರ ಧರಿಸುತ್ತಾರೆ.

ಸ್ತ್ರೀಯರು, ಹಿರಿಯರಾಗಿರುವವರು ಕುಪ್ಪಸಗಳನ್ನು ಹಾಕಿಕೊಂಡರೆ, ಕಿರಿಯರು ವಿವಿಧ ವಿನ್ಯಾಸಮಯ ಜಂಪರಗಳನ್ನು ಧರಿಸುತ್ತಾರೆ. ಮನೆಯಲ್ಲಿ ಹೆಣ್ಣುಮಕ್ಕಳು, ಆಧುನಿಕ ಸ್ತ್ರೀಯರು ಗೌನ ಬಳಸುವದು ಸರ್ವೇಸಾಮಾನ್ಯವಾಗಿದೆ.

ಆಧುನಿಕ ಶಾಲಾ ಬಾಲಕಿಯರು ಅವರಿವರೆನ್ನದೇ ಎಲ್ಲ ಸಮುದಾಯದವರು ಪರಕಾರ ಜಂಪರ ಧರಿಸುತ್ತಾರೆ. ಜೊತೆಗೆ ಚೂಡಿದಾರ ಆಧುನಿಕ ಆಕರ್ಷಣೆಯಾಗಿದೆ. ಅವರಿವರೆನ್ನದೆ ಎಲ್ಲ ಸಮುದಾಯಗಳಲ್ಲಿ ವಿಶೇಷ ಸಮಾನವಾದ ಬಟ್ಟೆ ಧಾರಣೆ ಕಂಡುಬರುತ್ತದೆ.

ಸ್ತ್ರೀಯರ ಆಭರಣಗಳು: ಕೊಟ್ಬಲಗಿ ಗ್ರಾಮದಲ್ಲಿ ಗಮನಿಸಿದಾಗ ಆಭರಗಣಗಳಲ್ಲಿ ಸ್ತ್ರೀಯರದೇ ಸಿಂಹಪಾಲು. ಅವರು ತಲೆ, ಕಿವಿ, ಮೂಗು, ಕೊರಳು, ಟೊಂಕ, ಕೈ ಕಾಲುಗಳು ಹಾಗೂ ಬೆರಳುಗಳಲ್ಲಿ ಆಭರಣ ಧರಿಸುತ್ತಿರುವುದುಂಟು. ಕೊರಳಿಗೆ ಭಾರವಾದ ಆಭರಗಣಗಳನ್ನು ಧರಿಸುತ್ತಾರೆ.

ತಲೆಯಲ್ಲಿ ಧರಿಸುವ ಆಭರಣಗಳು: ಬೈತಲೆ ಸರ, ಬೈತಲೆ ಪದಕ, ಗುಲಾಬಿ ಹೂ, ಕೇದಿಗೆ ಮಾಲೆ, ಮಗ್ಗಿ ಮಾಲೆ, ಬಂಗಾರ ಹೆಣಿಗೆ, ಚಿನ್ನದ ಎಳೆಗಳು ಮುಂತಾದವು. ಸ್ಥಿತಿವಂತರು ತುರುಬಿನಲ್ಲಿ ಚಿನ್ನದ ಆಭರಣಗಳನ್ನು ಧರಿಸುವದುಂಟು.

ಕಿವಿಯಲ್ಲಿ ಧರಿಸುವ ಆಭರಣಗಳು: ವಾಲಿ, ಜುಮಕಿ, ಬೆಂಡೋಲೆ, ಮಿಂಚ ಪಟ್ಟಿ, ಬುಗಡಿ, ಅಗಸಿ ಕಟ್ಟಿ ಹೀಗೆ ಮುಂತಾದವುಗಳನ್ನು ಧರಿಸುತ್ತಾರೆ.

ಕೊರಳಿನಲ್ಲಿ ಧರಿಸುವ ಆಭರಣಗಳು: ಪುತಳಿ ಸರ, ಸಿಂಗಾರದ ಸರ, ಹಳ ಸರ, ಕಂಠಿ ಸರ, ಗುರಿನ ಸರ, ಅವಲಕ್ಕಿ ಸರ, ಕಾಸಿನ ಸರ, ಸೂರ್ಯದಾರ, ಗೆಜ್ಜಿ ಟಿಕ್ಕೆ, ವಜ್ಜ ಟಿಕ್ಕೆ, ಪರಗಿ, ಪಮ್, ಮಾಂಗಲ್ಯ ಸರ ಮುಂತಾದವುಗಳನ್ನು ಧರಿಸುತ್ತಾರೆ. ಪುತಳಿ ಸರವು ಚಿನ್ನದ ನಾಣ್ಯಗಳನ್ನು ಪವಣಿಸಿರುವ ಸರವಾಗಿದ್ದು; ಇವನ್ನು ಒಂದರ ಮೇಲೊಂದರಂತೆ ಇಲ್ಲವೇ ಒಂದರ ಬದಿಗೊಂದು ಬರುವಂತೆ ಅಳವಡಿಸಲಾಗುವದು. ಕಂಠಿ ಸರವು ಚಿನ್ನದ ಎಲೆಗಳಲ್ಲಿ ಪೋಣಿಸಿದ್ದು ಮಾಂಗಾಯಿ ಮಾವಿನಕಾಯಿ ಆಕಾರವುಳ್ಳದ್ದು ಪವನ ಸರವು ನಯಾ ಪೈಸೆ ಆಭರಣ.

ಮಾಂಗಲ್ಯ ಸರದಲ್ಲಿ ಚೈನ ಗುಳದಾಳಿ, ಸೈಡ ಗುಂಡ, ಸಾದಾ ಗುಳದಾಳಿ ಮುಂತಾದವುಗಳಿವೆ. ಟಿಕ್ಕೆ, ಬೋರಮಾಳ, ಏಗಸಾರ, ಚೈನ, ರಿಂಗ, ಹೂವ, ಜುಮಕಿ ಮುಂತಾದವು ಹೆಚ್ಚಾಗಿ ಬಳಕೆಯಾಗುವದು.

ಮೂಗಿನಲ್ಲಿ ಧರಿಸುವ ಆಭರಣ: ಮೂಗುತಿ, ನತ್ತು ಗ್ರಾಮದಲ್ಲಿ ವಿಶೇಷ ಬಳಕೆಯಾಗುತ್ತವೆ. ಹರಳಿನ ಮೂಗುತಿ, ಸೊಲೆ, ಶ್ರೀದೇವಿ, ರಿಂಗ್ ನಾನಾ ರೀತಿಯ ಮೂಗುತಿ ಬಳಕೆಯಲ್ಲಿವೆ. ಮೂಗುತಿಯಲ್ಲಿ ಕೆಂಪು ಹರಳು, ಬಿಳಿ ಹರಳು ಅಳವಡಿಸಿ ಧರಿಸುವರು.

ಕೈಗಳು: ಗೋಟು, ಪಾಟಲಿ, ತೊಡೆ, ಮುತ್ತಿನ ಬಳಿ, ಬಂಗಾರ ಬಳಿ, ವಂಕಿ, ಕಂಕಣ, ಬಾಜು ಬಂದ ನಾಗಮುರಗಿ ಇವು ಕೈ ಆಭರಣಗಳು.

ವಂಕಿ, ಬಾಜುಬಂದ, ನಾಗಮುರಗಿ ಇವು ತೋಳಿನಲ್ಲಿ ಧರಿಸುವ ಆಭರಣಗಳು. ಕೈ ಬೆರಳುಗಳಲ್ಲಿ ಉಂಗುರ ಸಾಮಾನ್ಯವಾಗಿದೆ.

ಕಾಲುಗಳ ಆಭರಣ: ಕಾಲುಂಗರ, ಸುತ್ತುಂಗರ, ಮಿನಪಿಲ್ಲೆ, ಬಾಳಪಿಲ್ಲೆ, ಕಳವರ ಪಿಲ್ಲಿ ಹೀಗೆ ಕಾಲಿನ ಐದು ಬೆರಳುಗಳಿಗೆ ಒಂದೊಂದು ಆಭರಣ ಧರಿಸುತ್ತಾರೆ. ಸ್ತ್ರೀಯರು ಕಾಲಲ್ಲಿ ತೋಡೆ ಧರಿಸುತ್ತಾರೆ. ಇನ್ನು ಪ್ರಸ್ತುತವಾಗಿ ಕಾಲುಗಳಲ್ಲಿ ಚಾಳು (ಚೈನು) ಸರ್ವೇಸಾಮಾನ್ಯವಾಗಿ ಬಳಕೆಯಲ್ಲಿದೆ.

ಟೊಂಕಕ್ಕೆ: ಪಟ್ಟಿದಾಬ, ಗೆಜ್ಜಿ ಡಾಬ ಎಂಬ ಎರಡು ಪ್ರಕಾರಗಳಿವೆ.

ಮಕ್ಕಳ ಆಭರಣಗಳು: ಚಿಕ್ಕಮಕ್ಕಳ ಆಭರಣ ತೊಡಿಸುವ ಕಲೆ ಪ್ರಾಚೀನ ಕಾಲದಿಂದಲೂ ಇದೆ. ಮಕ್ಕಳಿಗೆ ಆಭರಣ ಹಾಕಿ ಆನಂದ ಪಡುವದು ತಂದೆ ತಾಯಿಗಳ ಭಾಗ್ಯವೆಂದೇ ಭಾವಿಸುವದು ರೂಢಿಯಲ್ಲಿದೆ.

ತಲೆಯಲ್ಲಿ: ಮಕ್ಕಳ ಕುಲಾಯಿಗೆ ಜುಲಪಿ ಹೂ ಹಚ್ಚುತ್ತಿದ್ದರು. ಬೆರಳಿಗೆ ೪-೫ ವರ್ಷದವರಾಗುತ್ತಲೇ ನಾಗರ, ಕ್ಯಾದಗಿ, ಗುಲಾಬಿ ಹೂ ಇತ್ಯಾದಿಗಳನ್ನು ಧರಿಸುತ್ತಾರೆ.

ಕೈ: ಮಣಿಕಟ್ಟಿಗೆ ಬಿಂದಲಿ, ಗುಂಡು, ಬದೆ, ತೊಡೆ, ಸರವನ್ನು ಹಾಕುತ್ತಿದ್ದರು. ಬೆರಳಿಗೆ ಹಲವು ಬಗೆಯ ಉಂಗುರಗಳನ್ನು ಇಡಿಸುತ್ತಿದ್ದರು.

ಟೊಂಕ: ಟೊಂಕಕ್ಕೆ ಬೆಳ್ಳಿಯ ಇಲ್ಲವೆ ಚಿನ್ನದ ಉಡದಾರ ಧರಿಸುತ್ತಿದ್ದರು. ಮಾಂಗಾಯ ಇಲ್ಲವೆ ಸಾದಾ ಉಡದಾರ ಎಂದು ಪ್ರಕಾರಗಳುಂಟು.

ಕಾಲು: ಮಕ್ಕಳ ಕಾಲುಗಳಲ್ಲಿ, ತೋಡೆ, ಪೆಂಡೆದ ಗೆಜ್ಜೆ, ಹಾಲ್ಗಡಗ, ಮಾವಿನ ಗೆಜ್ಜೆ ಈ ಆಭರಣಗಳು ಇರುತ್ತಿದ್ದವು.

ಪ್ರಾಣಿಗಳ ಆಭರಣಗಳು: ಮಾನವನು ತಾನಷ್ಟೇ ಆಭರಣಗಳನ್ನು ಧರಿಸಿ ಸಂತಸಪಡದೆ; ತನ್ನ ಪ್ರೀತಿಯ ಸಾಕುಪ್ರಾಣಿಗಳಿಗೂ ಆಭರಣಗಳನ್ನು ತೊಡಿಸುತ್ತ ಬಂದದ್ದು ಒಂದು ವಿಶೇಷ. ಎತ್ತಿನ ಕೊಂಬಣಸ, ಕೊರಳಲ್ಲಿ ಗೆಜ್ಜೆ ಸರ, ಗುಮರಿ, ಕಾಲಲ್ಲಿ ತೊಡೆ ಹಾಕುವುದನ್ನು ಇಂದಿಗೂ ಕಾಣುತ್ತೇವೆ. ನಾಯಿಯ ಕೊರಳಲ್ಲಿ ಗೆಜ್ಜೆಯ ಪಟ್ಟಿ ಇರುವುದುಂಟು. ಮಾನವನ ಸೌಂದರ್ಯಕಾಂಕ್ಷೆಗೆ ಇವು ಸಾಕ್ಷಿಯಾಗಿವೆ.

ಆಭರಣಗಳು ಸೌಂದರ್ಯವರ್ಧಕ ಸಾಧನಗಳಾದರೂ ಇವು ನಮ್ಮ ಜನಪದರ ಆಪತ್ ಧನ. ಆಪತ್ತು ಬಂದಾಗ ಅರಗಿಲ್ಲದ ಆರು ಸೇರು, ಚಿನ್ನದ ಆಭರಣ ಮಾರಿ ಹಣ ಪಡೆಯುತ್ತಿದ್ದರು. 'ಹೊನ್ನುಳ್ಳವರಿಗೆ ಮಾನವುಂಟು' ಎಂಬ ಲೋಕೋಕ್ತಿ ಹೊನ್ನಿಗಿರುವ ಬೆಲೆಯನ್ನು ಸೂಚಿಸುತ್ತದೆ. ಇವು ಸಂಪತ್ತಿನ ಸಂಚಯದ ಪ್ರತೀಕಗಳಾಗಿದ್ದವು. ಬೇಕಾದಾಗ ಮಾರಿ, ಅನುಕೂಲವಾದಾಗ ಮಾಡಿಸಲು ಅನುಕೂಲವಾಗುವಂತೆ ಆಭರಣಗಳು ಇರುವುದು.

೩.೬. ಜನಪದ ವೈದ್ಯ

ಭಾರತ ಹಳ್ಳಿಗಳ ನಾಡು. ಕೃಷಿಯನ್ನವಲಂಬಿಸಿದ ಮಣ್ಣಿನ ಮಕ್ಕಳು. ತಮಗೊದಗಿದ ಕಾಯಿಲೆ, ರೋಗ ರುಜಿನಗಳಿಗೆ ತಮ್ಮದೇ ಆದ ನಾಟಿ ವೈದ್ಯ ಪದ್ಧತಿಯನ್ನು ಬಳಸುತ್ತಿದ್ದರು. ಇದನ್ನು ಜನಪದ ವೈದ್ಯ ಎನ್ನುಬಹುದು. ಪ್ರಸ್ತುತ ಕೊಟ್ಟಲಗಿ ಗ್ರಾಮದ ಜನಪದರು ತಮಗೆ ಒದಗಿದ ರೋಗಗಳಿಗೆ ಮಾಡುವ ಮದ್ದಲ್ಲಿ ಅನುಸರಿಸುವ ಪದ್ಧತಿ ವಿವೇಚಿಸುವದು ಇಲ್ಲಿನ ಮುಖ್ಯ ಉದ್ದೇಶವಾಗಿದೆ.

ಅಜೀರ್ಣಕ್ಕೆ

೧. ಸುಟ್ಟ ಇರುಳ್ಳಿಯನ್ನು ತಿಂದರೆ ಅಜೀರ್ಣ ರೋಗ ಪರಿಹಾರವಾಗುವದೆಂದು ನಂಬಿದ್ದಾರೆ.
೨. ದಿನವೂ ಮಜ್ಜಿಗೆಗೆ ಉಪ್ಪು ಬೆರೆಸಿ ಕುಡಿದರೆ ಅಜೀರ್ಣ ಗುಣವಾಗುವದು.

೩. ದಿನವೂ ಜೇನುತುಪ್ಪವನ್ನು ಗೊತ್ತಾದ ಪ್ರಮಾಣದಲ್ಲಿ ಸೇವಿಸುತ್ತಿದ್ದರೆ ಅಜೀರ್ಣ ಗುಣವಾಗುತ್ತದೆ.

೪. ಆಗಾಗ ನುಗ್ಗೆಕಾಯಿ ಸೇವಿಸುವುದರಿಂದ ಪಚನಶಕ್ತಿ ಹೆಚ್ಚುವುದರೊಂದಿಗೆ ಆರೋಗ್ಯ ವೃದ್ಧಿಸುವುದು.

ಆಮಶಂಕೆ

೧. ೧೦ ಗ್ರಾಂ ಕಸಕಸಿ ಮತ್ತು ೫ ಗ್ರಾಂ ಬಿಳಿ ದಾಸವಾಳದ ಹೂವನ್ನು ದನದ ಹಾಲಿನಲ್ಲಿ ಕಾಯಿಸಿ ಬೆಳಿಗ್ಗೆ ಒಂದು ಹೊತ್ತು ೧೦ ಗ್ರಾಂ ಬೆಣ್ಣೆ ಹಾಕಿ ಕುಡಿಯಲಿಕ್ಕೆ ಕೊಟ್ಟರೆ ಆಮಶಂಕೆ ಕಡಿಮೆ ಆಗುತ್ತದೆ.

೨. ಶಿಸುವಿನ ಗಿಡದ ಚಿಗುರೆಲೆಗಳನ್ನು ತಿಂದರೆ ಆಮಶಂಕೆ ಕಡಿಮೆ ಆಗುತ್ತದೆ.

ಉಗುರು ಸುತ್ತು: ಉಗುರು ಸುತ್ತು ಆದರೆ ಉಪ್ಪನ್ನು ನೀರಿಗೆ ಸೇರಿಸಿ ಬಿಸಿ ಮಾಡಿ ಅದನ್ನು ಉಗುರಿನ ಮೇಲೆ ಸುರಿಯಬೇಕು.

ಉಳುಕು: ಉಳುಕಿರುವ ಜಾಗಕ್ಕೆ ಬಿಸಿ ನೀರಿನ ಶಾಖ ಕೊಡುವುದರಿಂದ ನಿವಾರಣೆಯಾಗುತ್ತದೆ.

ಎದೆಯಲ್ಲಿ ಹಾಲು ಬರಲು: ಎದೆಹಾಲು ಹೆಚ್ಚಾಗಲು ಮೆಂತ್ಯದ ಕಾಳನ್ನು ನೆನೆಸಿ ಗಂಜಿಯಂತೆ ಮಾಡಿ ಬಿಸಿ ಹಾಲಿನಲ್ಲಿ ಸೇವಿಸುವುದರಿಂದ ಎದೆಹಾಲು ವೃದ್ಧಿಯಾಗುತ್ತದೆ.

ಕಾಲುಗಳ ಹಿಮ್ಮಡಿ ಒಡೆದರೆ: ತೆಂಗಿನಕಾಯಿ ನೀರಿನಲ್ಲಿ ಒಂದು ಹಿಡಿ ಅಕ್ಕಿ ಹಾಕಿ ೪ ದಿನ ಹಾಗೆ ಇಟ್ಟು ಅದು ಹುಳಿಯಾದ ನಂತರ ಅರೆದು ಲೇಪಿಸುವುದು.

ಕಿವಿ ನೋವು:

೧. ಕಿವಿಗೆ ಈರುಳ್ಳಿ ರಸವನ್ನು ಹಿಂಡುವುದರಿಂದ ಕಿವಿ ನೋವು ನಿವಾರಣೆಯಾಗುತ್ತದೆ.

೨. ಕಿವಿಗೆ ತುಳಸಿ ಎಲೆ ರಸದ ಹನಿಯನ್ನು ಹಾಕುವುದರಿಂದ ಕಿವಿ ನೋವು ಕಡಿಮೆ ಆಗುತ್ತದೆ.

ವಾಂತಿ: ನಿಂಬೆಹಣ್ಣಿನ ರಸದಲ್ಲಿ ಸಕ್ಕರೆ ಕಲಿಸಿ ಸ್ವಲ್ಪ ಸ್ವಲ್ಪವೇ ಕುಡಿಯುತ್ತಿದ್ದರೆ ವಾಂತಿ ನಿಲ್ಲುವುದು.

ಕೆಮ್ಮಿಗೆ: ಅರಿಷಿಣ ಪುಡಿ, ಬೆಳ್ಳುಳ್ಳಿ, ಬೆಲ್ಲ ಸೇರಿಸಿ ಕುದಿಸಿ ಸೇವಿಸಿದರೆ ಕೆಮ್ಮು ಕಡಿಮೆ ಆಗುತ್ತದೆ.

ಹೀಗೆ ಗ್ರಾಮದ ಜನಪದರು ತಮ್ಮದೇ ಆದ ವೈದ್ಯ ಪದ್ಧತಿಯ ಮುಖಾಂತರ ತಮ್ಮ ದೈಹಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡಿದ್ದಾರೆ.

೩.೭. ನ್ಯಾಯ ಪದ್ಧತಿ

ಜನ ಶಾಂತಿಯಿಂದ ಬದುಕಬೇಕು ಎಂದರೆ ನೀತಿ ನಿಯಮಗಳು ಮುಖ್ಯವಾಗಿ ಬೇಕಾಗುತ್ತವೆ. ಹಿಂದೆಲ್ಲ ರಾಜ ಅಥವಾ ಸಂಸ್ಥಾನಿಕರ ಪರವಾಗಿ ಗೌಡನೋ, ಪಟೇಲನೋ ಊರಿನ ಆಡಳಿತ ವ್ಯವಸ್ಥೆಯನ್ನು ನಿಯಂತ್ರಿಸುತ್ತಿದ್ದರು. ರಾಜಕೀಯ ಕಟ್ಟಳೆಗಳಿಗಿಂತ ಸಾಮಾಜಿಕ

ಕಟ್ಟಳಗಳೇ ಗ್ರಾಮೀಣರಿಗೆ ಹೆಚ್ಚು ಆತ್ಮೀಯತೆ ನೀಡುತ್ತವೆ. ಪ್ರಸ್ತುತ ಕೊಟ್ಟಲಗಿ ಗ್ರಾಮದ ನ್ಯಾಯ ಪದ್ಧತಿಯು ಇಲ್ಲಿ ಮಹತ್ವ ಪಡೆದುಕೊಂಡಿದೆ.

ಗ್ರಾಮದಲ್ಲಿ ನ್ಯಾಯ ತೀರ್ಮಾನ ಮಾಡುವ ಒಂದು ಗುಂಪಿಗೆ ಅಥವಾ ಸದಸ್ಯರಿಗೆ ದೈವದವರು ಎಂದು, ಹಿರಿಯರು ಎಂದು, ಪಂಚಾಯ್ತಿ ಕಟ್ಟೆಯವರು ಎಂದು ಕರೆಯುತ್ತಾರೆ. ಆಪಾದಿತ ವ್ಯಕ್ತಿಯು ಮಾಡಿದ ಪ್ರಮಾದಕ್ಕನುಗುಣವಾಗಿ ತೀರ್ಪು ನಿರ್ಧರಿಸಲಾಗುತ್ತದೆ.

ಕೊಟ್ಟಲಗಿ ಗ್ರಾಮದಲ್ಲಿ ಬಹುಪಾಲು ಆಳುವ ವರ್ಗ, ವರ್ಣವ್ಯವಸ್ಥೆ ಜನಪದ ನ್ಯಾಯ ಸಂದರ್ಭವನ್ನು ವ್ಯಾಪಿಸಿದಂತೆ ಸಾಮಾನ್ಯವಾಗಿ ಉಚ್ಚಕುಲದವರು, ಶ್ರೀಮಂತರು ಇಲ್ಲಿ ಹಿರಿಯರೆಂಬುದು ಸತ್ಯ. ಸಮಾಜದ ಎಲ್ಲ ಸಮಸ್ಯೆಗಳನ್ನು ಪರಿಹರಿಸುವುದರಿಂದ ಒಂದರ್ಥದಲ್ಲಿ ಇವರುಗಳು ಅಧಿಕೃತ ನ್ಯಾಯಾಧೀಶರಾಗಿ ಕೆಲಸ ಮಾಡುತ್ತಾರೆ.

ಅಪರಾಧಕ್ಕೆ ತಕ್ಕಂತೆ ಶಿಕ್ಷೆಯನ್ನು ಬೇರೆ ಬೇರೆ ರೀತಿಯಲ್ಲಿ ವಿಧಿಸಲಾಗುತ್ತದೆ. ಕಳ್ಳತನ, ಕುಡಿತ, ಜಮೀನು ಹಗರಣ, ಹಲ್ಲೆ ಮುಂತಾದ ಅಪರಾಧಗೈದ ಸಂದರ್ಭಗಳಿಗಿಂತಲೂ ಹೆಣ್ಣು ಮಕ್ಕಳ ಮಾನಕ್ಕೆ ಸಂಬಂಧಿಸಿದ ಅಪರಾಧ ತೀವ್ರವಾಗಿ ಪರಿಗಣಿಸಲ್ಪಡುತ್ತದೆ. ಒಂದು ಕಡೆ ಕುಲದವರು; ಇನ್ನೊಂದು ಕಡೆ ಊರಿಗೆ ಊರೇ ಬಹಿಷ್ಕಾರ ಹಾಕುವದು ಹಿಂದಕ್ಕೆ ಜಾರಿಯಲ್ಲಿತ್ತು. ಇದು ವೈಜ್ಞಾನಿಕವಾಗಿ ಮುಂದುವರಿದ ಸಂದರ್ಭದಲ್ಲಿ ನಾಗರೀಕರಣದ ಸಂದರ್ಭದಲ್ಲಿ ಒಂದು ಸಮುದಾಯದ ಸ್ತ್ರೀ ಮೇಲೆ ಇನ್ನೊಂದು ಸಮುದಾಯದವರು ಮಾನಭಂಗ ಮಾಡಿದ ಸಂದರ್ಭದಲ್ಲಿ ಅವರಿಬ್ಬರನ್ನು ಒಂದುಗೂಡಿಸುವ ಇಲ್ಲವೇ ಬೇರೆ ಬೇರೆ ಮಾಡಿ ಮದುವೆ ಮಾಡಿಸುವ ಸನ್ನಿವೇಶಗಳನ್ನು ನೋಡಬಹುದು. ಹೆಣ್ಣಿನ ಮದುವೆಯ ಖರ್ಚಿಗೆ ಬೇಕಾಗುವಷ್ಟು ಹಣ ಆಪಾದಿತ ವ್ಯಕ್ತಿ ಕೊಡಬೇಕು. ಇಲ್ಲವೇ ನ್ಯಾಯ ಸಮ್ಮತವಾಗಿ ಬಗೆಹರಿಸಲು ಪ್ರಯತ್ನಿಸುತ್ತಾರೆ.

ಚಿಕ್ಕಪುಟ್ಟ ಕಳ್ಳತನ, ಪಕ್ಕದ ಸೀಮೆಯ ಒಬ್ಬರ ಹೊಲವನ್ನು ಇನ್ನೊಬ್ಬ ಉಳುವುದು, ಕಳ್ಳತನದಿಂದ ಮರ ಕಡಿಯುವುದು, ದನ ಕರು, ಕುರಿಗಳನ್ನು ಕಳುವು ಮಾಡುವುದು ಮುಂತಾದ ಸಂದರ್ಭಗಳಲ್ಲಿ ದೈವದ ದೇವರ ಹುಂಡಿಗೆ ಹಣವನ್ನು ನೀಡುವುದು, ಹೊಲ ಉಂಡಂತ ಪ್ರಕರಣದಲ್ಲಿ ಅದರ ಮೌಲ್ಯ ನೀಡುವುದು ಮುಂತಾದವನ್ನು ಕಾಣಬಹುದಾಗಿದೆ.

ಗ್ರಾಮದ ನ್ಯಾಯ ಸಂಹಿತೆಯು ದಂಡ, ಶಿಕ್ಷೆ, ಬಹಿಷ್ಕಾರ ಈ ಮೂರು ಹಂತದಲ್ಲಿಯೂ ನಡೆಯುತ್ತದೆ. ಹಿರಿಯರಾದವರು, ದೈವದವರು ಬಹಳಷ್ಟು ವಿಚಾರವನ್ನು ಮಾಡಿ; ಆಯಾ ವ್ಯಕ್ತಿಗಳ ಸಮಸ್ಯೆಗಳನ್ನು ಪರಿಗಣಿಸಿ ತೀರ್ಪನ್ನು ಇಂದು ಕೊಡುವಲ್ಲಿ ಬಹಳಷ್ಟು ಸಡಿಲಿಕೆ ಕಂಡುಬರುತ್ತದೆ. ಹೊಂದಾಣಿಕೆಯ ಗುಣವನ್ನು ಹುಟ್ಟು ಹಾಕುವ ಪ್ರಯತ್ನ ಇಲ್ಲಿ ನಡೆಯುತ್ತದೆ. ಸಣ್ಣ ಪುಟ್ಟ ತಪ್ಪು ಒಪ್ಪುಗಳ ಸಂದರ್ಭದಲ್ಲಿ ದೈವಕ್ಕೆ ಶರಣಾಗುವುದರ ಮೂಲಕ ಅಡ್ಡ ಬಿದ್ದರೆ ಶಿಕ್ಷೆಯಿಂದ ಪರಿಹಾರ ಸಿಗುತ್ತದೆ.

ಪರಂಪರಾಗತವಾಗಿ ನಡೆದುಕೊಂಡು ಬಂದಿರುವ ದೈವ, ಹಿರಿಯರು, ಪಂಚರು ಇವರನ್ನು ಆಧುನಿಕ ಸಮುದಾಯ ನಂಬುತ್ತಿಲ್ಲ. ಕೋರ್ಟ, ಕಛೇರಿಯತ್ತ ಇವರು ವಾಲುತ್ತಿದ್ದಾರೆ. ಮಾನಸಿಕ ತಾಳ್ಮೆ, ಸ್ಥಿಮಿತ ಇಲ್ಲದೆ ಇರುವ ಇಂದಿನ ಪೀಳಿಗೆ ಪರಂಪರೆಯ ಪರಿಧಿಯಿಂದ ಹೊರಬರುವ ಯತ್ನ ಮಾಡುತ್ತಿದ್ದಾರೆ.

೩.೮. ಅತಿಥಿ ಸತ್ಕಾರ

'ಅತಿಥಿ ದೇವೋಭವ'ಎಂಬುದು ನಮ್ಮ ಭಾರತೀಯ ಸಂಸ್ಕೃತಿ. ಗ್ರಾಮವು ಸಂತ ಶರಣರ ಬೀಡಾಗಿರುವುದರಿಂದ ಅವರ ಪಥದಲ್ಲಿ ಸಾಗುವಲ್ಲಿ ಹಿಂದೆ ಬಿದ್ದಿಲ್ಲವೆಂದೇ ಹೇಳಬಹುದು. ಬಸವಣ್ಣನವರ "ಏನಿ ಬಂದಿರಿ ಹದುಳಿದ್ದರೆ"ಎಂದು ಕ್ಷೇಮ ಸಮಾಚಾರವನ್ನು ವಿಚಾರಿಸಿ ಆತಿಥ್ಯ ಸತ್ಕಾರ ನೀಡುವ ಉದಾತ್ತ ಸಂಸ್ಕೃತಿ ಗ್ರಾಮದ ಜನತೆಯದು. ಬಂದಿರುವ ಅತಿಥಿ ಅಭ್ಯಾಗತರನ್ನು ಹೃದಯಪೂರ್ವಕ ಬರಮಾಡಿಕೊಳ್ಳುವ ಹೃದಯವಂತರು ಗ್ರಾಮದ ಜನತೆ.

ಕೊಟ್ಟಲಗಿ ಗ್ರಾಮದ ಯಾವುದೇ ಸಮುದಾಯದ ಮನಗೆ ಬಂದರೆ ನಿಮಗೆ ಬರ್ರಿ 'ಕೂಡ್ರಿ' ಎಂದು ಹೇಳಿ ಮನೆಯಲ್ಲಿರುವ ಕೌದಿಯನ್ನು ಅಥವಾ ಚಾಪೆಯನ್ನು, ಜಮಖಾನವನ್ನು ಹಾಸುತ್ತಾರೆ. ಕಾಲು ತೊಳೆದುಕೊಳ್ಳಲು ನೀರು ಕೊಟ್ಟು ಚಹಾ ನೀಡುತ್ತಾರೆ. ಊಟದ ಸಮಯವಿದ್ದರೆ ಊಟ ಮಾಡಿಸದೇ ಬಿಡಲಾರರು.

ಗ್ರಾಮಕ್ಕೆ ಬರುವ ಸಂಬಂಧಿಕರಿಗೆ 'ಬೀಗರು" ಎಂದು 'ಪಾವಣ್ಯಾರು' ಎಂದು ಕರೆಯುವರು. ಆಗಮಿಸುವ ಪುರುಷರಿಗೆ ಹಿರಿಯರಾಗಿದ್ದರೆ ಕಾಕಾ ಎಂದು, ಕಿರಿಯರಾಗಿದ್ದರೆ ಅಣ್ಣ ತಮ್ಮ ಎಂದು ಸಂಭೋದಿಸುತ್ತಾರೆ. ಸ್ತ್ರೀಯರಿಗೆ ಚಿಗವ್ವ ಎಂದು, ಕಿರಿಯರಿಗೆ ಅಕ್ಕಾರಿ, ತಂಗಿರಿ ಹೀಗೆ ಪ್ರೀತಿಯಿಂದ ಸಂಭೋದಿಸುತ್ತಾರೆ. ಯಾವುದೇ ಅತಿಥಿಗೆ ಏಕವಚನದಲ್ಲಿ ಸಂಭೋದಿಸದೆ ಅಣ್ಣಾರಿ, ತಮ್ಮಾರಿ, ತಂಗಿರಿ, ಅಕ್ಕಾರಿ ಎಂದು ಗೌರವದಿಂದ ಸಂಭೋದಿಸುತ್ತಾರೆ.

ಇನ್ನು ಗ್ರಾಮಗಳಿಗೆ ಎಷ್ಟೋ ವೇಳೆ ಆಗಮಿಸುವ ದಿಂಡಿ, ಪಾದಯಾತ್ರೆ, ಸಂತರಿಗೆ, ಸಪ್ತಾಹ, ಪುಣ್ಯತಿಥಿ ಕಾರ್ಯಕ್ರಮಗಳಿಗೆ ಆಗಮಿಸುವ ಅನ್ಯ ಗ್ರಾಮದ ಅತಿಥಿಗಳಿಗೆ ಊಟೋಪಚಾರ ವಾಸ್ತವ್ಯದ ವ್ಯವಸ್ಥೆ ಮಾಡುವುದು ಸಂಪ್ರದಾಯವಾಗಿದೆ.

ಗ್ರಾಮಕ್ಕೆ ಖವಟಕೊಪ್ಪ, ಸಂಕೋನಟ್ಟಿ, ಹಲ್ಯಾಳ, ದರೂರ, ಶೇಗುಣಸಿ, ಕಕಮರಿ ಮುಂತಾದ ಇಂಚಗೇರಿ ಸಂಪ್ರದಾಯದ ಭಕ್ತರು ಶ್ರೀ ಕ್ಷೇತ್ರ ಇಂಚಗೇರಿ ಮಠಕ್ಕೆ ಎರಡು ಬಾರಿ ವರ್ಷದ ಫೆಬ್ರುವರಿ ಮತ್ತು ಜೂನ್ ಮೊದಲ ವಾರದಲ್ಲಿ ಪುಣ್ಯತಿಥಿ ಸಪ್ತಾಹಗಳಿಗೆ ಪಾದಯಾತ್ರೆಯ ಮೂಲಕ ಬರುತ್ತಾರೆ. ಅವರ ಅನ್ನ, ನೀರು, ವಾಸ್ತವ್ಯದ ವ್ಯವಸ್ಥೆಯನ್ನು ಗ್ರಾಮದ ಜನತೆ ಮಾಡುವದಲ್ಲದೇ ಪಾದಯಾತ್ರೆಗೆ ಧನ ಸಹಾಯ ಮಾಡುತ್ತಾರೆ.

ಅಲ್ಲದೇ ಶ್ರೀ ಕ್ಷೇತ್ರ ಗುಡ್ಡಾಪೂರ ದಾನಮ್ಮ ದೇವಸ್ಥಾನವು ಪ್ರಸಿದ್ಧ ಶಕ್ತಿ ದೇವತೆಯ ಜಾಗೃತ ಸ್ಥಾನವಾಗಿದ್ದು; ಇದು ಮಹಾರಾಷ್ಟ್ರದ ಜತ್ತ ತಾಲೂಕಿನಲ್ಲಿದೆ. ಜಮುಖಂಡಿ ತಾಲೂಕಿನ ಬನಹಟ್ಟಿ, ರಬಕವಿ, ಅಥಣಿ ಸುತ್ತಮುತ್ತಲಿನ ಗ್ರಾಮದ ಜನತೆ ಪಾದಯಾತ್ರೆಯ ಮೂಲಕ ವರ್ಷದಲ್ಲಿ ಛಟ್ಟಿ ಅಮವಾಸ್ಯೆಯ ಸಂದರ್ಭದಲ್ಲಿ ಆಗಮಿಸಿದಾಗ ಅವರಿಗೆ ಊಟ, ವಾಸ್ತವ್ಯದ ವ್ಯವಸ್ಥೆಯನ್ನು ಮಾಡಿ ಹೃದಯ ಶ್ರೀಮಂತಿಕೆ ಮೆರೆಯುತ್ತಾರೆ.

ಅಲ್ಲದೇ ಗ್ರಾಮದಲ್ಲಿ ಮಲ್ಲಯ್ಯನ ಕಂಬಿ ತೆಗೆದುಕೊಂಡು ಬರುವ ಪಾದಯಾತ್ರಿಕರಿಗೆ ಗ್ರಾಮದಲ್ಲಿ ಊಟ, ವಾಸ್ತವ್ಯದ ವ್ಯವಸ್ಥೆಯನ್ನು ಮಾಡುತ್ತಾರೆ.

ಶ್ರೀ ಅಯ್ಯಪ್ಪಸ್ವಾಮಿ ಮಹಾಪೂಜೆಗೆ ಆಗಮಿಸುವ ಹಾಗೂ ವಿಶೇಷ ಪೂಜೆಯ ನಿಮಿತ್ಯವಾಗಿ ಆಗಮಿಸುವ ಭಕ್ತಾದಿಗಳಿಗೆ ಗ್ರಾಮದಲ್ಲಿ ಪ್ರಸಾದ ವ್ಯವಸ್ಥೆ ಮಾಡಿ ಗೌರವಿಸುತ್ತಾರೆ.

ಹಬ್ಬ ಹರಿದಿನಗಳಾದ ಯುಗಾದಿ, ದೀಪಾವಳಿ, ಶ್ರಾವಣ ಮಾಸದಲ್ಲಿ, ರಮಜಾನ್, ಮೊಹರಂ ಮುಂತಾದ ಸಂದರ್ಭದಲ್ಲಿ ಪರಸ್ಪರ ಮನೆಗಳಿಗೆ ಅಮಂತ್ರಿಸಿ ಊಟೋಪಚಾರ ಮಾಡಿಸಿ ಔದಾರ್ಯ ಮೆರೆಯುತ್ತಾರೆ.

ಹೀಗೆ ವಿವಿಧ ಸಂದರ್ಭಗಳ ಜೊತೆಗೆ ಗ್ರಾಮಕ್ಕೆ ಬರುವ ಮತಮಾನ್ಯಗಳ ಗುರು ಮಹಾರಾಜರನ್ನು, ಸಾಧು ಸತ್ಪುರುಷರನ್ನು, ಸಂತ ಶರಣರನ್ನು ಸಹೃದಯದಿಂದ ಸತ್ಕರಿಸಿ ಸಂತೋಷಪಟ್ಟು ಸಂತುಷ್ಟರಾಗುವ ಮನಸ್ಸಿನವರು ಕೊಟ್ಟಲಗಿ ಗ್ರಾಮದ ಜನತೆ. ಇದಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿ ಶ್ರೀ ಕವಟಗಿ ಮುತ್ಯಾ, ಶ್ರೀ ವಿಠ್ಠಲಸಿಂಗ ಮಹಾರಾಜರು ಕೊಟ್ಟಲಗಿ ಗ್ರಾಮಕ್ಕೆ ಆಗಮಿಸಿದಾಗ ಅವರನ್ನು ಗೌರವಿಸಿ ಗ್ರಾಮದವರನ್ನಾಗಿಸಿಕೊಂಡಿದ್ದಾರೆ. ಆ ಮಹಾತ್ಮರ ಅಂತ್ಯದ ನಂತರ ದೇವಾಲಗಳನ್ನು ನಿರ್ಮಿಸಿದ್ದಾರೆ. ಹೃದಯಲ್ಲಿ ಅವರಿಗೆ ಕೊಟ್ಟಿರುವ ಸ್ಥಾನದ ಪ್ರತೀಕವೇ ಅವರ ದೇವಾಲಯಗಳೆಂದು ಹೇಳಬಹುದು.

ಹೀಗೆ ಉದಾತ್ತವಾದ ಮನೋಭಾವದವರು ಕೊಟ್ಟಲಗಿ ಗ್ರಾಮದ ಜನತೆ. ಸಮಸ್ತ ಜನತೆಯನ್ನು ಸಹೃದಯದಿಂದ ಕಾಣುವ ಉದಾರವಾದಿ ಮನೋಭಾವದವರು.

೩.೯. ಅರ್ಥಿಕ ವ್ಯವಸ್ಥೆ

ಆರ್ಥಿಕ ವ್ಯವಸ್ಥೆಯ ಅಧ್ಯಯನ ಮಾಡದಿದ್ದರೆ ಗ್ರಾಮದ ಅಧ್ಯಯನ ಪೂರ್ಣವಾಗುವದಿಲ್ಲ. ಗ್ರಾಮವೊಂದರ ಅಧ್ಯಯನದ ಸಂದರ್ಭದಲ್ಲಿ ಅದರ ಸರ್ವತೋಮುಖ ಆಭಿವೃದ್ಧಿಯು ಅಲ್ಲಿನ ಆರ್ಥಿಕ ವ್ಯವಸ್ಥೆಯನ್ನು ಅವಲಂಬಿಸಿರುತ್ತದೆ.

ಭಾರತೀಯ ಗ್ರಾಮಗಳು ಬಡತನದಿಂದ ಬಳಲುತ್ತಿದ್ದರೂ ಜನಪದ ಕ್ಷೇತ್ರ ಈ ಸಂವೇದನಗಳಿಂದಲೇ ಅರಳುತ್ತಿರುವುದನ್ನು ಕಾಣಬಹುದಾಗಿದೆ. ಬದುಕಿಗೆ ಅಗತ್ಯವಾದ ಕಸುಬು ಉಪಕಸುಬುಗಳೆ ಗ್ರಾಮೀಣ ಜನರ ಆದಾಯದ ಮೂಲಗಳಾಗಿರುತ್ತವೆ. ಅರ್ಥವ್ಯವಸ್ಥೆಯ ಅಧ್ಯಯನದಿಂದ ಒಂದು ಗ್ರಾಮವು ನಾಗರೀಕತೆಯ ಯಾವ ಹಂತದಲ್ಲಿದೆ ಎಂಬುದರ ಸೂಚನೆಯೂ ಆಗಿರುತ್ತದೆ. ಕೊಟ್ಟಲಗಿ ಗ್ರಾಮದ ಆರ್ಥ ವ್ಯವಸ್ಥೆಯಲ್ಲಿ ಹಲವಾರು ಆದಾಯದ ಮೂಲಗಳನ್ನು ಗುರುತಿಸಿ ಆ ಹಿನ್ನಲೆಯಲ್ಲಿ ಇಲ್ಲಿನ ಅಧ್ಯಯನ ಗಮನಿಸಲಾಗಿದೆ.

ಕೃಷಿ

ಗ್ರಾಮ ಸಮುದಾಯದ ಪ್ರಧಾನ ಮಾನದಂಡ; ಅದರ ಉದ್ಯೋಗ ಎಂದು ಸಮಾಜಶಾಸ್ತ್ರಜ್ಞರಾದ ಸೊರೊಕೆನ್ ಮತ್ತು ಜಿಮ್ಮರಮನ್ ಎಂಬುವರು ಹೇಳಿದ್ದಾರೆ. ಸಾಮಾಜಿಕ ವಿಕಾಸದ ಒಂದು ಮಹತ್ವದ ಹಂತವೇ ಗ್ರಾಮ. ವಿವಿಧ ಕಸುಬುದಾರ ಕುಟುಂಬಗಳು, ವಿವಿಧ ಜಾತಿಗಳ್ಳವರು, ವೃತ್ತಿಗಳವರು ನೆಲೆಸಿರುವ ತಾಣ ಗ್ರಾಮ. ಗ್ರಾಮೀಣ ಸಮುದಾಯಗಳು ಕೃಷಿ ಪ್ರಧಾನವಾದವುಗಳಾಗಿವೆ. ಗ್ರಾಮಗಳಲ್ಲಿ ಜೀವನ ಮಾಡುವ ಆ ಜನರಿಗೆ ಕೃಷಿಯೇ ಮೂಲಾಧಾರ. ಕೃಷಿ ಕೇವಲ ಉದ್ಯೋಗವಲ್ಲ; ಒಂದು ಜೀವನ ಮಾರ್ಗ.

ಖುಷ್ಕಿ ಜಮೀನಿನಲ್ಲಿ ಮಳೆಗಾಲದಲ್ಲಿ ಮಾತ್ರ ಹೆಸರು, ಉದ್ದು, ಮೂಕಣಿ, ಶೇಂಗಾ ಬೆಳೆಯುವುದರೊಂದಿಗೆ ಸೂರ್ಯಕಾಂತಿ, ಹುರುಳೆ, ಅವರಿ, ಹೆಸರು, ಕಡಲೆ ಕಾಳುಕಡ್ಡಿಗಳನ್ನು ಬೆಳೆಯುತ್ತಾರೆ.

ಆಧುನಿಕ ಸೌಲಭ್ಯಗಳು ದೊರೆತಿದ್ದರಿಂದ ಸರ್ಕಾರ ಹಾಗೂ ಸರ್ಕಾರೇತರ ಸವಲತ್ತುಗಳನ್ನು ಬಳಸಿಕೊಂಡು ಖುಷ್ಕಿ ಮತ್ತು ಬಾಗಾಯ್ತ ಜಮೀನುಗಳಲ್ಲಿ ತೆರೆದ ಬಾವಿ, ಕೊಳವೆ ಬಾವಿಗಳನ್ನು ಕೊರೆಸಿ ವ್ಯವಸಾಯ ಮಾಡುತ್ತಿದ್ದಾರೆ. ನಿರೀಕ್ಷಿತ ಪ್ರಮಾಣದಲ್ಲಿ ನೀರು ದೊರಕದೇ ಸಂಕಷ್ಟಕ್ಕೆ ಒಳಗಾಗಿದ್ದಾರೆ. ದ್ರಾಕ್ಷಿ ಮತ್ತು ದಾಳಿಂಬೆ ಜೊತೆಗೆ ನಿತ್ಯ ಉಪಯೋಗಿಸಬಹುದಾದ ಬದನೆಕಾಯಿ, ಚವಳಿಕಾಯಿ, ಕೊತ್ತಂಬರಿ, ಬೆಂಡೆಕಾಯಿ, ಟೊಮೆಟೊ ಮುಂತಾದ ತರಕಾರಿಗಳನ್ನು ಅಲ್ಪ ಪ್ರಮಾಣದಲ್ಲಿ ಬೆಳೆಯುತ್ತಾರೆ.

ಚಳಿ, ಮಳೆಗಾಲ, ಬಿಸಿಲುಗಳನ್ನು ಲೆಕ್ಕಿಸದೆ ಹಗಲಿರುಳು ದುಡಿದು ಇಷ್ಟೆಲ್ಲಾ ಬೆಳೆಗಳನ್ನು ಬೆಳೆದರೂ ರೈತನ ಸ್ಥಿತಿ ತುಂಬಾ ಚಿಂತಾಜನಕವಾಗಿದೆ. ರೈತರು ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ನಿಗದಿ ಮಾಡದಿರುವುದು; ಮಾರುಕಟ್ಟೆಗಳಲ್ಲಿನ ಬೆಲೆಯ ಅನಿಶ್ಚಿತತೆ, ದಲ್ಲಾಳಿಗಳ ಹಾವಳಿಗಳಿಂದಾಗಿ ನಷ್ಟಗಳನ್ನು ಅನುಭವಿಸುತ್ತಿರುವ ರೈತರ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತಿಲ್ಲ. 'ಬೆಟ್ಟ ಅಗೆದು ಇಲಿ ಹಿಡಿದರು' ಎಂಬ ಗಾದೆಯಂತೆ ಊಟದ ಹೊತ್ತಿಗೆ ಊಟ, ತಿಂಡಿ ಹೊತ್ತಿಗೆ ತಿಂಡಿ, ನಿದ್ದೆಯ ಹೊತ್ತಿಗೆ ನಿದ್ದೆ ಇಲ್ಲದೇ ದುಡಿದರೂ ರೈತರಿಗೆ ನಾನಾ ರೀತಿಯ ಕಾರಣಗಳಿಂದಾಗಿ (ರೋಗ ರುಜಿನ) ಆದಾಯಕ್ಕಿಂತ ನಷ್ಟವೇ ಹೆಚ್ಚಾದಾಗ ವ್ಯವಸಾಯವನ್ನೇ ಮಾಡುವುದು ಬೇಡ ಎನ್ನುವಷ್ಟು ಬೇಸತ್ತಿದ್ದಾರೆ. ಇತ್ತೀಚೆಗೆ ೨೦೧೦-೧೧, ೨೦೧೧-೧೨, ೨೦೧೨-೧೩ ವರ್ಷಗಳಲ್ಲಿ ಸಂಪೂರ್ಣ ಬರಗಾಲ ಆವರಿಸಿದೆ.

ಜಮೀನು ಹೊಂದಿದ ರೈತರು, ದಿನೇ ದಿನೇ ಏರುತ್ತಿರುವ ರಸಗೊಬ್ಬರಗಳ ಬೆಲೆ ಹಾಗೂ ಆಳುಗಳಿಗೆ ನೀಡಬೇಕಾದ ಹೆಚ್ಚಿನ ಕೂಲಿ, ಕಣ್ಣುಮುಚ್ಚಾಲೆಯಾಡುವ ವಿದ್ಯುತ್, ಬೆಳೆಗಳಿಗೆ ಸರಿಯಾದ ಸಮಯಕ್ಕೆ ನೀರುಣಿಸಲಾಗದ್ದು, ದುಡಿಯುವ ಕೂಲಿ ಆಳುಗಳು ಶೋಕಿವಾಲಾಗಳಾಗಿ ಹೊತ್ತು ಕಳೆಯುವುದು ಇದಲ್ಲದರಿಂದ ಬೇಸತ್ತ ಭೂ ಮಾಲೀಕರು ವ್ಯವಸಾಯ ಮಾಡುವದನ್ನು ಕಡಿಮೆ ಮಾಡುತ್ತಿದ್ದಾರೆ.

ಜಮೀನುಗಳಿಲ್ಲದ ಮಂದಿ ಉಳ್ಳವರ ಜಮೀನುಗಳನ್ನು ಪಾಲುದಾರಿಕೆಯಲ್ಲಿ ಅಥವಾ ಗುತ್ತಿಗೆ ಭೋಗ್ಯಕ್ಕೆ ಪಡೆದು ದುಡಿಯುತ್ತಿದ್ದವರು ವ್ಯವಸಾಯದಿಂದ ಏನೇನೂ ಲಾಭ ದೊರೆಯದ್ದರಿಂದ ವ್ಯವಸಾಯವನ್ನು ಮರೆತು ಕೂಲಿ ಇನ್ನಿತರ ಉದ್ಯೋಗಗಳನ್ನು ಮಾಡುತ್ತಿದ್ದಾರೆ. ಅಲ್ಪ ಸ್ವಲ್ಪ ಶಿಕ್ಷಣ ಪಡೆದ ಮಂದಿ ಮೈ, ಕೈ ಕೆಸರು ಮಾಡಿಕೊಳ್ಳದೇ ಹಣ ಸಂಪಾದನೆ ಮಾಡಬಹುದಾದಂತ ವಿವಿಧ ವೃತ್ತಿ, ಉದ್ಯೋಗಗಳನ್ನು ಅರಸಿ; ಗ್ರಾಮದ ಜನಸಂಖ್ಯೆಯ ಶೇ. ೨೦ ರಷ್ಟು ಮಂದಿ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ವಿದ್ಯಾವಂತರೆನಿಸಿಕೊಂಡ ಮಂದಿ ಇತ್ತ ಪೂರ್ಣ ವ್ಯವಸಾಯ ಮಾಡುವುದನ್ನು ಕಲಿಯದೇ, ಅತ್ತ ವಿದ್ಯೆಗೆ ತಕ್ಕ ಉದ್ಯೋಗ ದೊರೆಯದೇ ಎಡಬಿಡಂಗಿಗಳಾಗುತ್ತಿದ್ದಾರೆ. ಈ ಎಲ್ಲ ಕಾರಣಗಳಿಂದಾಗಿ ಕೆಲವೊಮ್ಮೆ 'ಕೈ ಕೆಸರಾದರೆ ಬಾಯಿ ಮೊಸರು' ಎಂಬ ಗಾದೆ ಅರ್ಥ ಕಳೆದುಕೊಳ್ಳುತ್ತಿದೆಯೇನೊ ಅನಿಸುತ್ತಿದೆ.

ಕೊಟ್ಟಲಗಿ ಗ್ರಾಮದಲ್ಲಿ ಬೆಳೆದ ದ್ರಾಕ್ಷಿ, ದಾಳಿಂಬೆ ಬೆಳೆಗಳು ಹಲವಾರು ರಾಜ್ಯಗಳ ಮಾರುಕಟ್ಟೆಗಳಲ್ಲಿ ಮಾರಾಟವಾಗುತ್ತಿವೆ. ಈ ಬೆಳೆಗಳು ಗ್ರಾಮದ ಹಲವಾರು ಕೃಷಿ ಕಾರ್ಮಿಕ ವರ್ಗಕ್ಕೆ ಪೂರಕ ಉದ್ಯೋಗಗಳಾದ ದ್ರಾಕ್ಷಿ, ದಾಳಿಂಬೆ ಕಟಾವು ಅವುಗಳನ್ನು ಪೆಟ್ಟಿಗೆಯಲ್ಲಿ

ಹಾಕಿಕೊಂಡು ಹೋಗುವ ಸಲುವಾಗಿ 'ಪ್ಯಾಕ್' ಮಾಡಲು ಹಲವು ಜನರಿಗೆ ಉದ್ಯೋಗಾವಕಾಶಗಳಾಗಿವೆ. ದ್ರಾಕ್ಷಿ, ದಾಳಿಂಬೆ ಬೆಳೆಗಳಿಂದ ಹಲವು ಜನ ಸ್ವಲ್ಪ ಮಟ್ಟಿಗೆ ಆರ್ಥಿಕ ಚೇತರಿಕೆ ಕಂಡುಕೊಂಡರೂ ಇತ್ತೀಚಿನ ದಿನಗಳಲ್ಲಿ ದ್ರಾಕ್ಷಿ ಬೆಳೆಯ ಬೆಲೆ ಸ್ಥಿರವಾಗಿ ಉಳಿಯುತ್ತಿಲ್ಲ. ಆ ಹಿನ್ನಲೆಯಲ್ಲಿ ಆದರೆ ದ್ರಾಕ್ಷಿ ಆಗದಿದ್ದರೆ ರುದ್ರಾಕ್ಷಿ'ಎನ್ನುವ ಗಾದೆ ಪ್ರಚಲಿತದಲ್ಲಿದೆ.

ಸಾಕು ಪ್ರಾಣಿಗಳು

ಕೃಷಿ ಆಧಾರಿತ ಜೀವನದಲ್ಲಿ ಸಾಕು ಪ್ರಾಣಿಗಳು ಕೃಷಿಗೆ ಸಹಕಾರಿ ಮಾತ್ರ ಆಗದೆ ಆದಾಯದ ಮೂಲವೂ ಆಗಿವೆ. ಕುರಿ, ಕೋಳಿ, ಆಡು, ಹಸು, ಎಮ್ಮೆ, ಎತ್ತು ಮುಂತಾದ ಪ್ರಾಣಿಗಳನ್ನು ಸಾಕುವ ಕೊಟ್ಟಲಗಿ ಗ್ರಾಮದ ಜನತೆ ಆ ಮೂಲಕವಾಗಿ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುತ್ತಿದ್ದಾರೆ.

ಗ್ರಾಮದಲ್ಲಿ ಆಡು, ಕುರಿಗಳನ್ನು ಹಿಂಡು ಹಿಂಡಾಗಿ ಸಾಕಿ, ಹೋರಿ ಕರುಗಳನ್ನು ಜಾತ್ರೆಗಳಲ್ಲಿ, ಹಬ್ಬ ಹುಣ್ಣಿಮೆಗಳಲ್ಲಿ ಮಾರಾಟ ಮಾಡಿ ಹಣ ಸಂಪಾದಿಸುತ್ತಿದ್ದರು. ತಮ್ಮ ಆರ್ಥಿಕ ಬದುಕನ್ನು ಈ ಮೂಲಕ ಸುಧಾರಿಸಿಕೊಳ್ಳುತ್ತಿದ್ದರು. ಅವಿಭಕ್ತ ಕುಟುಂಬಗಳಲ್ಲಿನ ಜನ ವಿದ್ಯಾವಂತರಲ್ಲದಿದ್ದರೂ ದಡ್ಡರು, ಆಲಸಿಗಳು, ಸೋಮಾರಿಗಳು ಆಗಿರಲಿಲ್ಲ. ಕೂಡು ಕುಟುಂಬದ ಏಳಿಗೆಗೆ ಸದಸ್ಯರುಗಳು ಒಂದೊಂದು ಕೆಲಸವನ್ನು ನಿರ್ವಹಿಸುವ ಜವಾಬ್ದಾರಿ ಹೊತ್ತು, ಕುಟುಂಬದ ಏಳಿಗೆಗೆ ಹಗಲಿರುಳು ದುಡಿಯುತ್ತಿದ್ದರು. ಓರ್ವ ಆಡು, ಕುರಿ, ಮತ್ತೋರ್ವ ದನಕರುಗಳನ್ನು ಮೇಯಿಸುವ, ಮತ್ತೋರ್ವ ಕೃಷಿ ಚಟುವಟಿಕೆಗಳನ್ನು ನಿರ್ವಹಿಸುವ ಕೆಲಸಗಳನ್ನು ಮಾಡುತ್ತಿದ್ದರು.

ಆಧುನಿಕತೆಯ ಪರಿಣಾಮದಿಂದಾಗಿ ಅವಿಭಕ್ತ ಕುಟುಂಬಗಳು ಒಡೆದು ವಿಭಕ್ತ ಕುಟುಂಬಗಳಾಗಿ ಈಗ ಬೆರಳೆಣಿಕೆಯಷ್ಟು ಮಾತ್ರ (ಐದಾರು) ಅವಿಭಕ್ತ ಕುಟುಂಬಗಳಿವೆ. ಈ ಕುಟುಂಬದ ಸದಸ್ಯರುಗಳು ತಮ್ಮ ಹೊರೆ, ಜವಾಬ್ದಾರಿ, ತಾಪತ್ರಯಗಳನ್ನು ಕಡಿಮೆ ಮಾಡಿಕೊಂಡಿದ್ದರಿಂದಾಗಿ ಕುರಿ, ಕೋಳಿ, ಮೇಕೆಗಳನ್ನು ಸಾಕುವ ಪ್ರವೃತ್ತಿ ಕಡಿಮೆಯಾಗಿ ಆ ಮೂಲಕ ಬರುತ್ತಿದ್ದು ಆದಾಯ ಕಡಿಮೆಯಾಗಿದೆ.

ವ್ಯವಸಾಯದ ಅನುಕೂಲಕ್ಕೆ ಸಾಕುತ್ತಿದ್ದ ಹಸು, ಎತ್ತು, ಎಮ್ಮೆ, ಕುರಿ, ಆಡುಗಳ ಗೊಬ್ಬರ ವ್ಯವಸಾಯಕ್ಕೆ ಉಪಯೋಗವಾಗುತ್ತಿತ್ತು. ಹಾಗೆಯೇ ಅವುಗಳಿಂದ ದೊರೆಯುತ್ತಿದ್ದ ಹಾಲು ಮನೆ ಬಳಕೆಗೆ ಅಂದರೆ ಕಾಫಿ, ಚಹಾ, ಮಜ್ಜಿಗೆ, ಬೆಣ್ಣೆ, ತುಪ್ಪಕ್ಕೆ ಬಳಸಿ; ಸಾಕಾಗಿ ಉಳಿದದ್ದು ನೆರೆಹೊರೆಯವರಿಗೆ ನೀಡುವ ಮೂಲಕ ಸಹಕಾರ ಸಹಬಾಳ್ವೆಗೆ ಕಾರಣವಾಗಿತ್ತು. ಆದರೆ ಇಂದು ಸರ್ಕಾರ, ಸರ್ಕಾರಿ ಬ್ಯಾಂಕುಗಳು ಹಾಗೂ ಸಹಕಾರ ಸಂಘಗಳು ಸಾಲ ಸೌಲಭ್ಯ ನೀಡುತ್ತ ಹೋದ ಹಾಗೆ ಹೈನುಗಾರಿಕೆಯಲ್ಲಿ ಕ್ರಾಂತಿ ಆದ ಹಾಗೆಲ್ಲ; ಸಾಲ ಸೌಲಭ್ಯ ಪಡೆದ ಜನತೆ ಹಲವಾರು ಹೊಸ ತಳಿಗಳ ಹಸುಗಳನ್ನು ಸಾಕಿ ಹಾಲು ಉತ್ಪಾದಕರ ಸಂಘಗಳಿಗೆ ಹಾಲು ಹಾಕುತ್ತಿರುವುದರಿಂದ ದಿನವೊಂದಕ್ಕೆ ಗ್ರಾಮದಲ್ಲಿ ಒಂದು ಸಾವಿರ ಲೀಟರವರೆಗೆ ಹಾಲು ಸಂಗ್ರಹವಾಗುತ್ತಿದೆ.

ವ್ಯಾಪಾರ ವಹಿವಾಟು

ಕಳೆದ ಒಂದು ಒಂದೂವರೆ ಶತಮಾನದಿಂದ ಗ್ರಾಮ ಸಮುದಾಯದ ಕಾರ್ಯಗಳು

ತೀವ್ರವಾಗಿ ಬದಲಾಗುತ್ತಿವೆ. ವಿಶ್ವದ ಎಲ್ಲೆಡೆ ಸಾಂಪ್ರದಾಯಿಕ ಗ್ರಾಮ ಸಮಾಜಗಳು ಆಧುನೀಕರಣಕ್ಕೆ ಗುರಿ ಆದಂತೆ ಕೊಟ್ಟಲಗಿ ಗ್ರಾಮವು ಆಧುನೀಕರಣಕ್ಕೆ ಗುರಿಯಾಗಿದೆ. ಸಾಂಪ್ರದಾಯಿಕ, ಸಾಮಾಜಿಕ ವ್ಯವಸ್ಥೆ ಮಾರ್ಪಾಡುಗೊಂಡು ಹಣ ಮತ್ತು ಮಾರುಕಟ್ಟೆಗೆ ಪ್ರಾಮುಖ್ಯವಿರುವ ಆರ್ಥಿಕ ವ್ಯವಸ್ಥೆ ರೂಪುಗೊಳ್ಳುತ್ತಿದೆ. ಕೊಟ್ಟಲಗಿ ಗ್ರಾಮವೂ ಸಹ ಇದರಿಂದ ಹೊರತಾಗಿಲ್ಲ.

ಹಿಂದೆ ಕೊಟ್ಟಲಗಿ ಅಗ್ರಹಾರವಾಗಿತ್ತು. ಗ್ರಾಮದಲ್ಲಿ ಹಿಂದಿನಿಂದಲೂ ಇಂದಿನವರೆಗೆ ಚಿಕ್ಕ ಪುಟ್ಟ ವ್ಯಾಪಾರಗಳು ನಡೆಯುತ್ತಲಿವೆ. ಗ್ರಾಮದಲ್ಲಿಯೂ ಸಹ ಸಂತೆ ನಡೆಯುತ್ತಿದ್ದು ಸುತ್ತಮುತ್ತಲಿನ ಗ್ರಾಮದ ಹಲವಾರು ವ್ಯಾಪಾರಿಗಳು ದಿನಿತ್ಯದ ಆಹಾರ ಸಾಮಗ್ರಿಗಳಿಂದ ಹಿಡಿದು ದವಸ ಧಾನ್ಯದವರೆಗೆ ವ್ಯಾಪಾರ ವಹಿವಾಟು ನಡೆಸುತ್ತಾರೆ.

ಗ್ರಾಮದಲ್ಲಿನ ವಿವಿಧ ಉದ್ಯೋಗಗಳನ್ನು ಈ ರೀತಿಯಾಗಿ ಕ್ಷೇತ್ರ ಕಾರ್ಯದ ಮೂಲಕ ಗುರುತಿಸಲಾಗಿದೆ.

ಅಂತೆಯೇ ಗ್ರಾಮದಲ್ಲಿ ಚಿಕ್ಕ ಪಾನ ಬೀಡಾ ಅಂಗಡಿಯಿಂದ ಹಿಡಿದು ವಿವಿಧ ವ್ಯಾಪಾರವನ್ನು ಮಾಡುವವರು ಗ್ರಾಮದಲ್ಲಿದ್ದಾರೆ.

ಗ್ರಾಮದ ಪಾನಶಾಪಗಳು

೧. ಶ್ರೀ ಶ್ರೀಶೈಲ ಕುಂಬಾರ
೨. ಶ್ರೀ ರಮೇಶ ದಾನಪ್ಪಗೋಳ
೩. ಶ್ರೀ ಭೀಮಣ್ಣ ಕುಂಬಾರ
೪. ಶ್ರೀ ವಿಜಯ ಕಾಂಬಳೆ
೫. ಶ್ರೀ ಈರಪ್ಪ ಕುಂಬಾರ
೬. ಶ್ರೀ ಸಿದರಾಯ ದಾನಪ್ಪಗೋಳ
೭. ಶ್ರೀ ಪ್ರಕಾಶ ಐಹೊಳೆ
೮. ಶ್ರೀ ಶ್ರೀಶೈಲ ಆಲಬಾಳ
೯. ಶ್ರೀ ರಾವಸಾಬ ಮುಡಸಿ
೧೦. ಶ್ರೀ ನಾಗೇಶ ಕೊಂಗನಳ್ಳಿ
೧೧. ಶ್ರೀ ಆಶಪಾಕ್ ಮುಲ್ಲಾ
೧೨. ಶ್ರೀ ಗಿರಿಮಲ್ಲ ಮಳಸಿದ್ದನವರ
೧೩. ಶ್ರೀ ಸಿದ್ದಣ್ಣ ದೊಡ್ಡನಿಂಗಪ್ಪಗೋಳ

ಮೊಬೈಲ ಕರೆನ್ಸಿ

೧. ಶ್ರೀ ಸಿದನಿಂಗ ಸಾವಳಗಿ
೨. ಶ್ರೀ ಅಜಿತ ಜೇವೂರ
೩. ಶ್ರೀ ಪ್ರಮೋದ ಆಲಬಾಳ
೪. ಶ್ರೀ ಸಿದ್ದಣ್ಣ ಬನ್ನೂರ

ಓ,ವ್ಹಿ. ರಿಪೇರ್ ಅಂಗಡಿ

೧. ಶ್ರೀ ಮಹಾಂತೇಶ ಸಂಗಟಿ

೨. ಶ್ರೀ ಶ್ರೀಮಂತ ಮಾಳಿ

೩. ಶ್ರೀ ಕುಮಾರ ಮಾಳಿ

ಗಡಿಯಾರ ರಿಪೇರಿ

೧. ಶ್ರೀ ಸುರೇಶ ಬ್ಯಾಳಿ

ಝುರಾಕ್ಸ ಮತ್ತು ಸ್ಟೇಶನರಿ ಮತ್ತು ಜನರಲ್

೧. ಶ್ರೀ ಅಜಿತ ಜೇವೂರ

ಮೋಟರ ರಿವೈಂಡಿಂಗ್

೧. ಶ್ರೀ ಶಂಕರ ಯಲಗೊಂಡ

೨. ಶ್ರೀ ಪೈಗಂಬರ ಸನದಿ

೩. ಶ್ರೀ ಮಲ್ಲಿಕಾರ್ಜುನ ಜ್ಯೋತಿಕಾನ

೪. ಶ್ರೀ ಗುರಸಿದ್ದ ಬಿಕಾಪಗೋಳ

ಸಿಮೆಂಟ ವ್ಯಾಪಾರಿಗಳು

೧. ಶ್ರೀ ರವಿ ಗಣಿ

೨. ಶ್ರೀ ಗುರು ಹತ್ತಿ

೩. ಶ್ರೀ ಬಸವರಾಜ ಅವಟಿ

ಕೃಷಿ ಗೊಬ್ಬರ, ಔಷಧಿ ವ್ಯಾಪಾರಿಗಳು

೧. ಶ್ರೀ ಸಿದರಾಯ ಯಲ್ಲಡಗಿ

೨. ಶ್ರೀ ರಾಜು ಮಾಳಿ

೩. ಶ್ರೀ ಈರಗೊಂಡ ಪಾಟೀಲ

೪. ಶ್ರೀ ಗುರು ಹತ್ತಿ

ಕಿರಾಣಿ ಅಂಗಡಿಗಳು

೧. ಶ್ರೀ ಅನೀಲ ಬನಹಟ್ಟಿ

೨. ಶ್ರೀ ಗುಡುಸಾಬ ಮುಲ್ಲಾ

೩. ಶ್ರೀ ಸತೀಶ ಉಪಾಸೆ

೪. ಶ್ರೀ ಗುರುಬಸು ಪೋಪಡಿ

೫. ಶ್ರೀ ಚನ್ನಪ್ಪ ಬನಹಟ್ಟಿ

೬. ಶ್ರೀ ಚನಗೌಡ ಪಾಟೀಲ

೭. ಶ್ರೀ ಶಿವು ಮದಭಾವಿ

೮. ಶ್ರೀ ಗುರು ಹತ್ತಿ

೯. ಶ್ರೀ ಮಲ್ಲಿಕಾರ್ಜುನ ಸಿ. ದೊಡ್ಡನಿಂಗಪ್ಪಗೋಳ

೧೦. ಶ್ರೀ ಪ್ರಕಾಶ ಮಾಳಿ

೧೧. ಶ್ರೀ ಮಹಾದೇವ ಮುಡಸಿ

೧೨. ಶ್ರೀ ಮುರಗಯ್ಯ ಆಲಬಾಳ
೧೩. ಶ್ರೀ ಸದಾಶಿವ ದೊಡಮನಿ

ಹೊಟೇಲುಗಳು

೧. ಶ್ರೀ ಅಲಗೊಂಡ ನಂದಗೊಂಡ
೨. ಶ್ರೀ ಮಹಾದೇವಿ ಮಗದುಮ
೩. ಶ್ರೀ ಸಿದ್ದಣ್ಣ ನಂದಗೊಂಡ
೪. ಶ್ರೀ ಮಲ್ಲೇಶಿ ಮಾಳಿ
೫. ಶ್ರೀ ಸಂಗಪ್ಪ ದಾನಪ್ಪಗೋಳ
೬. ಶ್ರೀ ಗುರುಪಾದ ಬೀಕ್ಸ
೭. ಶ್ರೀ ಸಿದರಾಯ ಹತ್ತಿ
೮. ಶ್ರೀ ಚನ್ನಪ್ಪ ಮುರಡಿ

ಸೈಕಲ್ ರಿಪೇರಿ ಅಂಗಡಿಗಳು

೧. ಶ್ರೀ ಗುರಬಸು ಬಿಳ್ಳೂರ
೨. ಶ್ರೀ ದಾನಪ್ಪ ಶಿಂಪಿ
೩. ಶ್ರೀ ಪತ್ತುಸಾಬ ಸನದಿ
೪. ಶ್ರೀ ಅಪ್ಪಾಸಾಬ ಮುಧೋಳ

ಸಿಂಪಿಗರು

ಪುರುಷ ಸಿಂಪಿಗರು

೧. ಶ್ರೀ ಮಹಾದೇವ ಜತ್ತಿ
೨. ಶ್ರೀ ಭೀಮಣ್ಣ ಅಥಣಿ
೩. ಶ್ರೀ ಸಿದ್ದಣ್ಣ ಬನ್ನೂರ
೪. ಶ್ರೀ ಅಶೋಕ ಯರನಾಳ
೫. ಶ್ರೀ ಕಬ್ಬಿನ

ಮಹಿಳಾ ಸಿಂಪಿಗರು

೧. ಶ್ರೀಮತಿ ಕಮಲಾ ನಾವ್ಹಿ
೨. ಶ್ರೀಮತಿ ಜ್ಯೋಬಾನ ಕೊಕಟನೂರ
೩. ಶ್ರೀಮತಿ ದೇವಕ್ಕಿ ದೊಡ್ಡನಿಂಗಪ್ಪಗೋಳ
೪. ಶ್ರೀಮತಿ ಕಲಾವತಿ ಹಂಜಿ
೫. ಶ್ರೀಮತಿ ಕಸ್ತೂರಿ ಗುರಸಿದ್ದ ಬಿಕಾಪಗೋಳ

ವೆಲ್ಡಿಂಗ ಕೆಲಸ ಮಾಡುವವರು

೧. ಶ್ರೀ ಭೀಮಣ್ಣ ಮೋ. ಬಡಿಗೇರ
೨. ಶ್ರೀ ಮಾನಪ್ಪ ಸಿ. ಬಡಿಗೇರ
೩. ಶ್ರೀ ಕಾಳಪ್ಪ ಅಣ್ಣಪ್ಪ ಬಡಿಗೇರ

ಹಿಟ್ಟಿನ ಗಿರಣಿಗಳು

೧. ಶ್ರೀ ಈರನಗೌಡ ಪ. ಪಾಟೀಲ ಪಾಟೀಲ ಗಲ್ಲಿ

೨. ಶ್ರೀ ರಾಮನಗೌಡ ಸಿ. ಪಾಟೀಲ ಪಾಟೀಲ ಗಲ್ಲಿ

೩. ಶ್ರೀ ಭೈರಪ್ಪ ಬಿಳ್ಳೂರ ಮಾರುಕಟ್ಟೆ

೪. ಶ್ರೀ ಮುದಕಪ್ಪ ಅನಂತಪೂರ ಅಥಣಿ ರಸ್ತೆ

೫. ಶ್ರೀ ಸಿದರಾಯ ಬ್ಯಾಳಿ ತೋಟದಲ್ಲಿ

೬. ಶ್ರೀ ಶಂಕ್ರಪ್ಪ ಬಂಡರಗೋಟ ಬಂಡರಗೋಟ ಓಣಿ

೭. ಶ್ರೀ ಅಗರಣೆಪ್ಪಾಗೋಳ ಗಿರಣಿ ತೋಟದಲ್ಲಿ

ಶ್ಯಾವಿಗಿ ಮಾಡುವ ಮಶೀನ

೧. ಶ್ರೀ ಸಿದ್ದಣ್ಣ ಪೋಪಡಿ

೨. ಶ್ರೀ ಪ್ರಕಾಶ ಕತ್ತಿ

ಕಾರಾ ಕುಟ್ಟುವ ಮಶೀನ

೧. ಶ್ರೀ ರಾಮನಗೌಡ ಸಿ. ಪಾಟೀಲ

೨. ಶ್ರೀ ಮುದಕಪ್ಪ ಅನಂತಪೂರ

೩. ಶ್ರೀ ಅಗರಣೆಪ್ಪಗೋಳ ತೋಟ

ಕಟಿಂಗ್ ಸಲೂನ

೧. ಅಶೋಕ ನಾವಿ

೨. ಸಿದ್ದಪ್ಪ ನಾವಿ

೩. ಶ್ರೀಶೈಲ ನಾವಿ

೪. ಈರಪ್ಪ ನಾವಿ

೫. ಭೀಮಪ್ಪ ನಾವಿ

ಸರ್ಕಾರಿ ಹಾಗೂ ಖಾಸಗಿ ಕೆಲಸ

ವಿದ್ಯಾವಂತರಾದ ಕೊಟ್ಟಲಗಿ ಗ್ರಾಮದ ನೂರಾರು ಜನ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಾಗೂ ಖಾಸಗಿ ವಲಯದ ಸಂಸ್ಥೆಗಳಲ್ಲಿ ಜವಾನನಿಂದ ಹಿಡಿದು ಅಧಿಕಾರಿಗಳವರೆಗೆ ನೌಕರಿಯಲ್ಲಿದ್ದಾರೆ. ತಮ್ಮದೇ ಆದ ಆರ್ಥಿಕ ಅಭಿವೃದ್ಧಿಯ ಬದುಕಿನತ್ತ ಸಾಗುತ್ತಿದ್ದಾರೆ.

ಇದಲ್ಲದೆ ಗ್ರಾಮದಲ್ಲಿ ಕೂಲಿ ಕಾರ್ಮಿಕರ ಸಂಖ್ಯೆಯೂ ಹೆಚ್ಚಾಗಿದ್ದು ಸರಕಾರಿ ಕಾಮಗಾರಿಗಳಲ್ಲಿ, ಭೂ ಹಿಡುವಳಿದಾರರಲ್ಲಿ, ಗ್ರಾಮದ ಹಾಗೂ ನೆರೆಯ ಗ್ರಾಮಗಳ ರೈತರ ಜಮೀನುಗಳಲ್ಲಿ ಶ್ರಮಿಸುತ್ತಿದ್ದಾರೆ. ಇವರನ್ನು ಅಧಿಕಾರಿಗಳು, ಬಂಡವಾಳಗಾರರು ನಯವಾಗಿ ಶೋಷಣೆ ಮಾಡುವುದು ಕಂಡುಬರುತ್ತದೆ. ಉದ್ಯೋಗ ಖಾತ್ರಿ ಯೋಜನೆ, ಜೀವವಿಮೆ, ವಸತಿ, ಪೌಷ್ಠಿಕ ಆಹಾರ, ಔಷದೋಪಚಾರ ಮುಂತಾದ ಸೌಲಭ್ಯಗಳಿಂದ ವಂಚಿತರಾಗಿ ಹಗಲು ರಾತ್ರಿಯೂ ದುಡಿದು ಬೆಂಡಾಗುತ್ತಿದ್ದಾರೆ. ಇವರಿಗೆ ಭದ್ರತೆ ನೀಡಲು ಸರಕಾರ, ಸಹಕಾರ ಸಂಘ ಸಂಸ್ಥೆಗಳು ಸಹಕರಿಸುತ್ತಿವೆ.

ಆರ್ಥಿಕ ಸಂಘ ಸಂಸ್ಥೆಗಳು

ಗ್ರಾಮದಲ್ಲಿ ೩ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿರುವುದು ಆರ್ಥಿಕ ವಹಿವಾಟಿಕೆ ಸಾಕ್ಷಿಯಾಗಿದೆ. ಗ್ರಾಮದಲ್ಲಿ ೧) ಗ್ರಾಮ ಸೇವಾ ಸಹಕಾರಿ ಸಂಘ ೨) ಶ್ರೀ ಸಿದ್ಧಾರೂಢ ಫೈನಾನ್ಸ ೩) ಇದೇ ವರ್ಷ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ ಸ್ಥಾಪನೆಯಾಗಿದೆ. ಗ್ರಾಮ ಸೇವಾ ಸಹಕಾರಿ ಸಂಘದ ಮೂಲಕ ಅನೇಕ ಜನ ಸಾಲ ಸೌಲಭ್ಯ ಪಡೆದಿದ್ದಾರೆ. ಸರ್ಕಾರದ ಸಹಾಯ ಧನ, ಸಬ್ಸಿಡಿಯಂತಹ ಅನುಕೂಲತೆಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಎಲ್ಲ ಬ್ಯಾಂಕುಗಳು ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುತ್ತಿರುವುದರಿಂದ ಆರ್ಥಿಕವಾಗಿ ಸಬಲತೆಯನ್ನು ಸಾಧಿಸಿಕೊಳ್ಳಲು ಸಾಧ್ಯವಾಗುತ್ತಿದೆ. 'ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ' ಎನ್ನುವಂತೆ ಆಧುನಿಕತೆಯ ಬದುಕಿಗೆ ಹೊಂದಿಕೊಳ್ಳುವಷ್ಟು ಆರ್ಥಿಕ ಸಬಲನಾಗದೇ, ಹಳ್ಳಿಯ ಗಮಾರ ಎನಿಸಿಕೊಳ್ಳಲು ಇಷ್ಟವೂ ಪಡದೆ ಸಾಲಮಾಡಿಯಾದರೂ ಬದುಕನ್ನು ಸುಧಾರಿಸಿಕೊಳ್ಳಲು ಬಯಸುತ್ತಿದ್ದಾನೆ. ಹಾಗೆಂದೇ ಸ್ಟೇಟ ಬ್ಯಾಂಕ ಆಫ್ ಮೈಸೂರು, ಜಮಖಂಡಿ ಶಾಖೆಯಿಂದ ಅತಿ ಹೆಚ್ಚು ಸಾಲವನ್ನು ಕೊಟ್ಟಲಗಿ ಗ್ರಾಮದಲ್ಲಿ ಪಡೆದಿದ್ದು ಕಂಡುಬರುತ್ತದೆ. ಗ್ರಾಮದಲ್ಲಿ ಕೃಷಿ ತೋಟಗಾರಿಕೆ ಬೆಳೆಗಳಿಗೂ ಈ ಬ್ಯಾಂಕಿನ ಸಹಾಯವು ಪ್ರಯೋಜನಕಾರಿಯಾಗಿದೆ. ಕರ್ನಾಟಕ ಗ್ರಾಮೀಣ ವಿಕಾಸ ಬ್ಯಾಂಕ, ತೆಲಸಂಗ ಹಾಗೂ ಕೆನರಾ ಬ್ಯಾಂಕ ಶಾಖೆ ಅಥಣಿ, ಸ್ಟೇಟ ಬ್ಯಾಂಕ ಆಫ್ ಇಂಡಿಯಾ, ಡಿ.ಸಿ.ಸಿ. ಬ್ಯಾಂಕ ಶಾಖೆ ಅಥಣಿ ಮುಂತಾದ ಕಡೆಗಳಿಂದ ಸಾಲ ಸೌಲಭ್ಯ ಪಡೆದು ವಾಹನ, ಕೃಷಿ ಉಪಕರಣಗಳು, ಟ್ರ್ಯಾಕ್ಟರ, ದ್ವಿಚಕ್ರ ವಾಹನಗಳನ್ನು ರೈತರು ಖರಿದಿಸುತ್ತಿದ್ದಾರೆ. ಎಷ್ಟೋ ವೇಳೆ ಬರಗಾಲದಂತ ಬವಣೆಯಲ್ಲಿ ಸಿಲುಕಿ ಬಡ್ಡಿ ಕಟ್ಟಲು ಆಗದೇ ಪರದಾಡುವ ಸ್ಥಿತಿ ಕಂಡುಬರುತ್ತಿದೆ.

ಸರಕಾರದ ಸಾಲಮನ್ನಾದಂತಾ ಕಾರ್ಯಕ್ರಮಗಳು ಸ್ವಲ್ಪ ಮಟ್ಟಿಗೆ ಆರ್ಥಿಕ ಬದುಕಿಗೆ ಚೈತನ್ಯ ನೀಡಿದರೂ, ಸಂಪೂರ್ಣ ಋಣಭಾರದಿಂದ ಮುಕ್ತರಾಗುವುದು ಸಾಧ್ಯವಿಲ್ಲದ ಮಾತಾಗಿದೆ.

ಗ್ರಾಮೀಣ ಸ್ವ-ಸಹಾಯ ಸಂಘಗಳು

ನಬಾರ್ಡನಿಂದ ಗ್ರಾಮದ ಅಭಿವೃದ್ಧಿಗೆ ಅನೇಕ ಸ್ವ ಸಹಾಯ ಸಂಘಗಳ ಮೂಲಕ ಸಂಘಟಿಸಲಾಗುತ್ತಿದೆ. ಗ್ರಾಮದ ಪುರುಷ ಮತ್ತು ಮಹಿಳಾ ಸಂಘಗಳನ್ನು ಸ್ಥಾಪಿಸಿ ಅವರಲ್ಲಿ ಚಿಕ್ಕ ಉಳಿತಾಯದ ಅರಿವು ಮೂಡಿಸಿ ಪುರುಷ ಅದರಲ್ಲೂ ಮಹಿಳಾ ಆರ್ಥಿಕ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ.

ಈ ಸಂಘಗಳ ಸ್ಥಾಪನೆಯ ಉದ್ದೇಶಗಳು ಈ ರೀತಿಯಾಗಿವೆ.

೧. ಮಹಿಳಾ ನಿರುದ್ಯೋಗ ನಿರ್ಮೂಲನೆ

೨. ಮಹಿಳಾ ಸಬಲೀಕರಣ

೩. ಸಾಮರ್ಥ್ಯ ಬಲವರ್ಧನೆ

೪. ನಾಯಕತ್ವ ತರಬೇತಿ

೫. ಆದಾಯ ಉತ್ಪನ್ನ ಚಟುವಟಿಕೆಗಳನ್ನು ರೂಪಿಸುವುದು

೬. ಸ್ತ್ರೀಯರನ್ನು ಕ್ರಿಯಾಶೀಲರನ್ನಾಗಿ ಮಾಡುವುದು

ಹೀಗೆ ವಿವಿಧ ಉದ್ದೇಶಗಳ ಈಡೇರಿಕೆಗಾಗಿ ಗ್ರಾಮದಲ್ಲಿ ಸಂಘ ಸಂಸ್ಥೆಯ ಮೂಲಕ ಸಾರ್ವಜನಿಕರ ಪಾಲುದಾರಿಕೆಯಲ್ಲಿ ಈ ಕಾರ್ಯಗಳು ಜರುಗುತ್ತಿರುವದು ವಿಶೇಷವಾಗಿದೆ.

ಕೃಷಿ ಭೂಮಿ ಇಲ್ಲದ ಸಂಘದ ಸದಸ್ಯರಿಗೆ ಬಡ್ಡಿ ರಹಿತ ಸಾಲ ನೀಡುವದು. ಕೃಷಿ ಭೂಮಿ ಇರುವವರಿಗೆ ಶೇ.೧ ರೂ. ಬಡ್ಡಿಯ ಮೂಲಕ ಸಾಲ ನೀಡುವರು. ಈ ಮೂಲಕ ಅವರ ಆರ್ಥಿಕ ಬದುಕನ್ನು ಸಬಲಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಸರಿಯಾದ ಸಮಯಕ್ಕೆ ಕಂತು ಮರುಪಾವತಿಸಲು ಎಲ್ಲ ಸದಸ್ಯರು ಶ್ರಮಿಸುತ್ತಾರೆ. ಜವಾಬ್ದಾರಿ ಅರಿತುಕೊಂಡು ಆರ್ಥಿಕ ಸಬಲೀಕರಣದತ್ತ ಸಾಗುವುದು ಇವರ ಉದ್ದೇಶವಾಗಿದೆ.

ಹೀಗೆ ವಿವಿಧ ಕಾರ್ಯಕ್ರಮಗಳ ಮೂಲಕ ಸಾರ್ವಜನಿಕ ಆರ್ಥಿಕ ಹೊಣೆಗಾರಿಕೆ ನಿರ್ವಹಿಸುವಲ್ಲಿ ಗ್ರಾಮದ ಸ್ತ್ರೀಯರು ಜಾಗೃತರಾಗಿದ್ದಾರೆ.

ವಿವಿಧ ಕೆಲವು ಸಂಘಗಳನ್ನು ಕ್ಷೇತ್ರಕಾರ್ಯದಲ್ಲಿ ಸಂದರ್ಶಿಸಿ ಸಂಘದ ಹೆಸರು, ಕಾರ್ಯಾಲಯದ ಸ್ಥಳ, ಸದಸ್ಯರ ಸಂಖ್ಯೆ, ವಾರದ ಉಳಿತಾಯ, ಪ್ರತಿನಿಧಿಗಳು ಹೀಗೆ ಎಲ್ಲ ವಿವರಗಳನ್ನು ಈ ಕೆಳಗಿನಂತೆ ಗಮನಿಸಲಾಗಿದೆ.

ವಿಜಾಪೂರ ಪಾವರ ಸಂಸ್ಥೆ ಅಡಿಯಲ್ಲಿ ಗ್ರಾಮದಲ್ಲಿರುವ ಸ್ವ ಸಹಾಯ ಸಂಘಗಳು

ಈ ಸಂಘಗಳಲ್ಲಿ ಮೂರು ಪ್ರಕಾರದ ಸಂಘಗಳಿವೆ

೧. ಮಹಿಳಾ ಸ್ವ-ಸಹಾಯ ಸಂಘಗಳು

೨. ಪುರುಷ ಸ್ವ-ಸಹಾಯ ಸಂಘಗಳು

೩. ಪುರುಷ-ಮಹಿಳಾ ಸಂಯುಕ್ತ ಸಂಘಗಳು

ಮಹಿಳಾ ಸ್ವ-ಸಹಾಯ ಸಂಘಗಳು

ಅ. ನಂ.	ಸಂಘದ ಹೆಸರು	ಸ್ಥಳ	ಪ್ರತಿನಿಧಿ ೧	ಪ್ರತಿನಿಧಿ ೨	ಸದಸ್ಯರ ಸಂಖ್ಯೆ	ವಾರದ ಉಳಿತಾಯ
೧	ರಮಾದೇವಿ ಮಹಿಳಾ ಸ್ವ- ಸಹಾಯ ಸಂಘ, ಕೊಟ್ಬಲಗಿ	ನವಗ್ರಾಮ	ಕಲಾವತಿ ಅವಟಿ	ಬದಲಾವಣೆ ಕಾರಣ ಲಭ್ಯವಿಲ್ಲ	೧೨	೨೦
೨	ಧನ್ವಂತರಿ ಮಹಿಳಾ ಸ್ವ-ಸಹಾಯ ಸಂಘ ಕೊಟ್ಬಲಗಿ	ಆಯಗಾರ ಓಣಿ	ಕಾಳಮ್ಮ ಬಡಿಗೇರ	ಶೋಭಾ ಬನಟ್ಟಿ	೧೨	೨೦
೩	ರಾಣಿ ಚೆನ್ನಮ್ಮ ಮಹಿಳಾ ಸ್ವ-ಸಹಾಯ ಸಂಘ, ಕೊಟ್ಬಲಗಿ	ರಜಪೂತ ಗಲ್ಲಿ	ಸುನಿತಾ ಕಾಯಸ್ತ	ವಿಜಯಲಕ್ಷ್ಮಿ ರಜಪೂತ	೧೨	೨೫
೪	ಸಂಜೀವಿನಿ ಸ್ವ-ಸಹಾಯ ಮಹಿಳಾ ಸಂಘ	ಮಾಧವಾನಂದ ಸರ್ಕಲ್	ಅನಿತಾ ಸಿ. ನಾವಿ	ಸಾವಿತ್ರಿ ಬಿರಾದಾರ	೧೩	೨೫
೫	ಅನ್ನಪೂರ್ಣೇಶ್ವರಿ ಮಹಿಳಾ ಸ್ವ-ಸಹಾಯ ಸಂಘ	ಆಯಗಾರ ಓಣಿ	ಸೋನಕ್ಕ ಪಾಟೀಲ	ಕೀರ್ತಿ ಬನಕಾರ	೧೧	೨೦
೬	ಕೋಟಿಲಿಂಗೇಶ್ವರ ಮಹಿಳಾ ಸ್ವ-ಸಹಾಯ ಸಂಘ	ಕಂಟ್ಯಾನ ಓಣಿ	ಮಾಬುಬಿ ಸನದಿ	ಬಿಸ್ಮಿಲ್ಲಾ ಮುಲ್ಲಾ	೧೨	೨೫
೭	ವೈಭವಲಕ್ಷ್ಮಿ ಮಹಿಳಾ ಸ್ವ- ಸಯಾಹ ಸಂಘ	ಮಾರುಕಟ್ಟೆ ಓಣಿ	ಸುನಿತಾ ಮಠಪತಿ	ರೇಖಾ ರ. ನಂದಗೊಂಡ	೧೦	೩೦

೮	ಬಸವಾರೂಢ ಮಹಿಳಾ ಸ್ವ- ಸಹಾಯ ಸಂಘ	ಕೋಟ್ಯಾಳ ವಸತಿ ಮುಡಸಿ	ಅಕ್ಕತಾಯಿ	ಲಕ್ಷ್ಮೀಬಾಯಿ ಕೋಟ್ಯಾಳ	೧೬	೨೦
೯	ನವಗ್ರಾಮ ಮಹಿಳಾ ಸ್ವ- ಸಹಾಯ ಸಂಘ	ನವಗ್ರಾಮ	ಅಕ್ತರಬಾನು	ಮಂಗಲಾ ಹಂಜಿ	೧೨	೨೫
೧೦	ವಿಜಯಲಕ್ಷ್ಮಿ ಮಹಿಳಾ ಸ್ವ- ಸಯಾಹ ಸಂಘ	ಮಾಳಿ ತೋಟ	ಕಲ್ಲವ್ವ ನಾಟಿಕಾರ	ಕಾಂಬಳೆ	೧೧	೩೦
೧೧	ಜೋಗುಳ ಬಾತಿ ಸತ್ತೆವ್ವ ಮಹಿಳಾ ಸ್ವ-ಸಹಾಯ ಸಂಘ	ಜೋಗುಳ ಭಾವಿ ತೋಟದ ವಸತಿ	ಗಿರಿಜಾ ಬನ್ನೂರ	ಸುರೇಖಾ ಸಾವಳಗಿ	೧೨	೨೫
೧೨	ಅಕ್ಕಮಹಾದೇವಿ ಮಹಿಳಾ ಸ್ವ-ಸಹಾಯ ಸಂಘ	ಹರಳೆ ತೋಟದ ವಸತಿ	ಸೇವಂತಾ ಕಾಂಬಳೆ	ಬದಲಾವಣೆ ಕಾರಣ ಲಭ್ಯವಿಲ್ಲ	೧೯	೨೦
೧೩	ಜೈ ಸಂತೋಷಿ ಮಾತಾ ಮಹಿಳಾ ಸ್ವ-ಸಯಾಯ ಸಂಘ	ಕರೆಪ್ಪಗೋಳ ಓಣಿ	ಶೈಲಾ ಮ. ಕರೆಪ್ಪಗೋಳ	ಮಹಾದೇವಿ ತಂಗಡಿ	೧೨	೨೫
೧೪	ಶ್ರೀಮಾಧವಾನಂದ ಮಹಿಳಾ ಸ್ವ-ಸಹಾಯ ಸಂಘ	ಮಾದರ ಓಣಿ	ಶೇಖವ್ವಾ ಐಹೊಳೆ	ಚಂದ್ರವ್ವ ಐಹೊಳೆ	೧೨	೨೫
೧೫	ಕೊರೆವ್ವ ತಾಯಿ ಮಹಿಳಾ ಸ್ವ-ಸಹಾಯ ಸಂಘ	ತೋಟದ ವಸತಿ ಬಿರಾದಾರ	ಸಾವಿತ್ರಿ ಬಿರಾದಾರ	ನೀಲಾ	೧೨	೨೫
೧೬	ಗಜಾನನ ಮಹಿಳಾ ಸ್ವ- ಸಹಾಯ ಸಂಘ	ಬಡವಗೋಳ ವಸತಿ ತೋಟ	ಕಸ್ತೂರಿ ಬಡವಗೋಳ	ಭಾರತಿ ಕರೆವ್ವಗೋಳ	೧೧	೨೫
೧೭	ಲಕ್ಷ್ಮಿ ಮಹಿಳಾ ಸ್ವ-ಸಹಾಯ ಸಂಘ	ಬಡವಗೋಳ ವಸತಿ	ಮಹಾದೇವಿ ಬಡವಗೋಳ	ಸುವರ್ಣ ಹೊಸಟ್ಟಿ	೧೨	೨೫
೧೮	ಬನಶಂಕರಿ ಮಹಿಳಾ ಸ್ವ-ಸಹಾಯ ಸಂಘ	ಮಲ್ಲಯ್ಯನ ಗುಡಿ	ಕಮಲಾ ಗು. ನಾವಿ	ಅನ್ನಪೂರ್ಣ ಹಿರೇಮಠ	೧೨	೨೦
೧೯	ರೇಣುಕಾ ಮಹಿಳಾ ಸ್ವ- ಸಹಾಯ ಸಂಘ	ಯಲ್ಲಮ್ಮನ ಗುಡಿ	ಸಾವಿತ್ರಿ ಖಡಕಿ	ಜಯಶ್ರೀ ಮಗದುಮ	೧೨	೨೫
೨೦	ಅಂಬಿಕಾ ಮಹಿಳಾ ಸ್ವ-ಸಹಾಯ ಸಂಘ	ಕುಂಬಾರ ಮನೆ	ದಾನಮ್ಮ ಕುಂಬಾರ	ಆಶಾ ತಂಗಡಿ	೧೦	೧೦
೨೧	ಪಾವಡಿ ಸಿದ್ಧೇಶ್ವರ ಮಹಿಳಾ ಸ್ವ-ಸಹಾಯ ಸಂಘ	ಗಂಗವ್ವ ಬಡವಗೋಳ	ಕೊಟ್ಟಲಗಿ ಗ್ರಾಮ	ಕಸ್ತೂರಿ ಬಿಕಾಪಗೋಳ	೧೧	೨೦
೨೨	ಸಿದ್ದಾರೂಢ ಮಹಿಳಾ ಸ್ವ-ಸಹಾಯ ಸಂಘ	ಕೊಟ್ಟಲಗಿ ಗ್ರಾಮ	ಶಾಂತಾ ಬಡಿಗೇರ	ಗೋದವ್ವ ಗುರವ	೧೨	೨೦
೨೩	ಭುವನೇಶ್ವರಿ ಮಹಿಳಾ ಸ್ವ-ಸಹಾಯ ಸಂಘ	ಮಲ್ಲಯ್ಯನ ಗುಡಿ	ಸುಪ್ರಿಯಾ ಬಡಿಗೇರ	ಮಹಾದೇವಿ ಹಿರೇಮಠ	೧೧	೨೦
೨೪	ಸರಸ್ವತಿ ಮಹಿಳಾ ಸ್ವ-ಸಹಾಯ ಸಂಘ	ಕೊಟ್ಟಲಗಿ ಗ್ರಾಮ	ಲಕ್ಷ್ಮಿ ಹದನೂರ	ಮಹಾದೇವಿ ಮಾಳಿ	೧೨	೧೦
೨೫	ದಾನೇಶ್ವರಿ ಮಹಿಳಾ ಸ್ವ-ಸಹಾಯ ಸಂಘ	ವಾಡೆದ ಲಕ್ಷ್ಮಿ	ಕಸ್ತೂರಿ ಪಾಟೀಲ	ಗಂಗವ್ವ ಡುಮ್ಮನವರ	೧೨	೧೦
೨೬	ಈಶ್ವರಾನಂದ ಮಹಿಳಾ ಸ್ವ-ಸಹಾಯ ಸಂಘ	ಬಿಳ್ಳೂರ ತೋಟ	ಬಸವ್ವ ಮಾನಿಂಗೋಳ	ಮೈತ್ರಾ ಬಿಳ್ಳೂರ	೧೧	೨೦
೨೭	ಮುಕ್ತಾಯಕ್ಕ ಮಹಿಳಾ ಸ್ವ-ಸಹಾಯ ಸಂಘ	ಮಾಳಿ ತೋಟ	ಲಲಿತಾ ಪಾಟೀಲ	ದಾನೇಶ್ವರಿ ಕುಂಬಾರ	೧೨	೨೦

೨೮	ನಿಂಬೆಕ್ಕದೇವಿ ಮಹಿಳಾ ಸ್ವ-ಸಹಾಯ ಸಂಘ	ಕೊಟ್ಟಲಗಿ ಗ್ರಾಮ	ಭಾರತಿ ಮಾಳಿ	ಗೌರವ್ವ	೧೨	೫೦
೨೯	ಕಾವೇರಿ ಮಹಿಳಾ ಸ್ವ-ಸಹಾಯ ಸಂಘ	ಕರಾಳಿ ಅವರ ತೋಟ	ಅನಾರಕಲಿ ಪಾಟೀಲ	ಮಹಾದೇವಿ ತಳವಾರ	೧೩	೫೦
೩೦	ಭವಾನಿ ಮಹಿಳಾ ಸ್ವ-ಸಹಾಯ ಸಂಘ	ಈರಪ್ಪ ಕುಂಬಾರ	ಅನಿತಾ ಯರನಾಳ	ಜಯಶ್ರೀ ಮಾಳಿ	೧೦	೨೫
೩೧	ಮದರ ತೆರೆಸಾ ಮಹಿಳಾ ಸ್ವ-ಸಹಾಯ ಸಂಘ	ಅಗ್ರಾಣಿ ತೋಟ	ಮೀನಾಕ್ಷಿ ಪತ್ತಾರ	ಶೋಭಾ ಯಡಗೊಂಡ	೧೬	೨೫
೩೨	ಫಾತಿಮಾ ಅಲ್ಪಸಂಖ್ಯಾತ ಸಂಘ	ಕೊಟ್ಟಲಗಿ ಗ್ರಾಮ	ದಾಹಿಅಲಿಮಾ ಕೊಟಕನೂರ	ದಿಲಶಾದ ಸನದಿ	೧೬	೫೦

ಪುರುಷ ಸ್ವ-ಸಹಾಯ ಸಂಘಗಳು

ಅ. ನಂ.	ಸಂಘದ ಹೆಸರು
೧	ಭರಮದೇವರ ಪುರುಷ ಸ್ವ-ಸಹಾಯ ಸಂಘ
೨	ಮಣಿಕಂಠಸ್ವಾಮಿ ಪುರುಷ ಸ್ವ-ಸಹಾಯ ಸಂಘ
೩	ಲಕ್ಷ್ಮಣ ಸವದಿ ಪುರುಷ ಸ್ವ-ಸಹಾಯ ಸಂಘ
೪	ಸ್ವಾಮಿ ವಿವೇಕಾನಂದ ಪುರುಷ ಸ್ವ-ಸಹಾಯ ಸಂಘ
೫	ಭೂಮಿತಾಯಿ ಪುರುಷ ಸ್ವ-ಸಹಾಯ ಸಂಘ
೬	ಮಾತೃಭೂಮಿ ಪುರುಷ ಸ್ವ-ಸಹಾಯ ಸಂಘ
೭	ಬಸವೇಶ್ವರ ಪುರುಷ ಸ್ವ-ಸಹಾಯ ಸಂಘ

ಪುರುಷ ಹಾಗೂ ಮಹಿಳಾ ಸಂಯುಕ್ತ ಸಂಘಗಳು

ಅ. ನಂ.	ಸಂಘದ ಹೆಸರು	ಸ್ಥಳ	ಪ್ರತಿನಿಧಿ	ಪ್ರತಿನಿಧಿ ಸಂಖ್ಯೆ	ಸದಸ್ಯರ	ವಾರದ ಉಳಿತಾಯ
೧	ಸಿದ್ಧೇಶ್ವರ ಪುರುಷ ಹಾಗೂ ಮಹಿಳಾ ಸ್ವ-ಸಹಾಯ ಸಂಘ	ಕೊಟ್ಟಲಗಿ ಗ್ರಾಮ	ಗುರಬಸು ಕೋಟ್ಯಾಳ	ಪಾರ್ವತಿ ಬಂಗಾರಿ	೧೩	೫೦
೨	ಸಿದ್ಧಾರೂಢ ಪುರುಷ ಹಾಗೂ ಮಹಿಳಾ ಸ್ವ-ಸಹಾಯ ಸಂಘ	ಕೊಟ್ಟಲಗಿ ಗ್ರಾಮ	ರಘುನಾಥ ದೊಡ್ಡನಿಂಗಪ್ಪ ಗೋಳ	ಸೋಮನಿಂಗ ಕವಟಿ	೧೩	೨೫
೩	ಭೀಮಾನಂದ ಮಹಿಳಾ ಸ್ವ-ಸಹಾಯ ಸಂಘ	ಕೊಟ್ಟಲಗಿ ಗ್ರಾಮ	ಮೈತ್ರಾ ಅನಂತಪೂರ	ಸುಮಿತ್ರಾ ಆಜೂರ	೧೦	೨೫

ಇಷ್ಟಲ್ಲದೆ ಇನ್ನೂ ಹಲವಾರು ಸಂಘಗಳನ್ನು ರಚಿಸುತ್ತಾ ಸಾಮಾಜಿಕ ಕಾರ್ಯಕರ್ತೆಯರು ಮಹಿಳೆ ಹಾಗೂ ಪುರುಷರನ್ನು ಆರ್ಥಿಕವಾಗಿ, ಔದ್ಯೋಗಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುವ ಕಾರ್ಯದಲ್ಲಿ ಯಶಸ್ಸಿನತ್ತ ದಾಪುಗಾಲಿಡುತ್ತಿದ್ದಾರೆ. ಚಿಕ್ಕ ಉಳಿತಾಯ ಯೋಜನೆಗಳಿಂದಾಗಿ ಆರ್ಥಿಕ ಚೇತರಿಕೆ ಕಂಡುಬರುತ್ತಿದೆ. ಗ್ರಾಮದ ಜನತೆ ನಿತ್ಯ ಬದುಕಿನ ತೊಂದರೆಗಳನ್ನು ಪರಿಹರಿಸಿಕೊಳ್ಳುವಲ್ಲಿ ಸಮರ್ಥರಾಗುತ್ತಿದ್ದಾರೆ.

೩.೧೦. ಜನಪದ ಆಟಗಳು

ಭಾರತವು ಕೃಷಿ ಪ್ರಧಾನವಾದ ದೇಶ. ಸಹಜವಾಗಿಯೇ ಹಳ್ಳಿಗಳು ಇಲ್ಲಿನ ಜೀವಾಳ. ಇಲ್ಲಿಯ ಗ್ರಾಮ ಸಮಾಜ ತನ್ನದೇ ಆದ ಹತ್ತು ಹಲವು ವೈಶಿಷ್ಟ್ಯಗಳನ್ನು ಹೊಂದಿದೆ. ಕೃಷಿ

ಪ್ರಧಾನವಾದ ಭಾರತದ ಗ್ರಾಮಗಳು ತಮ್ಮದೇ ಆದ ರೀತಿಯಲ್ಲಿ ಕೃಷಿ ಪರವಾದ ಹಬ್ಬಗಳನ್ನು, ಆಚರಣೆಗಳನ್ನು, ಕ್ರೀಡೆಗಳನ್ನು ಮುಂದುವರೆಸಿಕೊಂಡು ಬಂದಿವೆ. ಜನಪದ ಆಟಗಳು ಗ್ರಾಮೀಣ ಬದುಕಿನೊಂದಿಗೆ ಬೆರೆತುಕೊಂಡಿವೆ. ಮನೋರಂಜನೆಗೆ, ಶಾರೀರಿಕ ಬಲಸಂವರ್ಧನೆಗೆ ಎರಡಕ್ಕೂ ಇವು ಸಹಾಯಕವಾಗಿವೆ. ಕೊಟ್ಟಲಗಿ ಗ್ರಾಮದ ಜನಪದರು ಅನುಸರಿಸಿಕೊಂಡು ಬಂದ ಗ್ರಾಮೀಣ ಕ್ರೀಡೆಗಳು ಸಹಜವಾಗಿಯೇ ಕೃಷಿ ಪರವಾಗಿಯೇ ಇವೆ. ಹಳ್ಳಿ ಮಕ್ಕಳು ಚಿಕ್ಕವರಿರುವಾಗಲೇ ಆಡುವುದನ್ನು ಸಹಜವಾಗಿಯೇ ರೂಢಿಸಿಕೊಂಡೆ ಬೆಳೆಯುತ್ತಾರೆ. ಇಲ್ಲಿನ ಕೃಷಿ ಚಟುವಟಿಕೆಗಳೇ ಹಬ್ಬವಾಗಿ, ಕ್ರೀಡೆಯಾಗಿ ಆಚರಿಸಿಕೊಂಡು ಬಂದಿದ್ದಾರೆ. ಕೊಟ್ಟಲಗಿ ಜನಪದರು ಗ್ರಾಮದ ಸಂಸ್ಕೃತಿಗೆ ಸರಿಹೊಂದುವ ಆಟಗಳನ್ನು ಇಂದಿಗೂ ಕಾಪಾಡಿಕೊಂಡು ಬಂದಿರುವದು ಸ್ಪಷ್ಟವಾಗಿ ಕಾಣಸಿಗುತ್ತವೆ.

ಗ್ರಾಮೀಣ ಆಚರಣೆಗಳೇ ಜನಪದ ಆಟಗಳಾಗಿವೆ. ಇಂದಿನ ಆಧುನಿಕ ಸಂದರ್ಭದಲ್ಲಿ ಫುಟಬಾಲ್, ಥ್ರೋ ಬಾಲ್, ಕ್ರಿಕೇಟಗಳಂತಹ ಆಟಗಳನ್ನು ನಾವು ಕಾಣುತ್ತಿರುವುದು ಸಹಜವಷ್ಟೆ ಆದರೆ ಈ ಆಟಗಳು ನಮ್ಮ ಗ್ರಾಮೀಣರಿಗೆ ಚಿರಪರಿಚಿತವಾಗಿರುವ ಚಿಣ್ಣಿ ದಾಂಡು ಮತ್ತು ಚೆಂಡು ಆಟಗಳಿಂದ ವಿಕಾಸ ಪಡೆದ ಸ್ವರೂಪದವುಗಳು ಎಂಬುದು ಸಹಜವಾಗಿಯೇ ಸತ್ಯವಾದುದಾಗಿದೆ.

ವಂಶವಾಹಿಯಾಗಿ ಅನುಕರಣೆಯಿಂದ ಜನಪದ ಆಟಗಳು ಪೀಳಿಗೆಯಿಂದ ಪೀಳಿಗೆಗೆ ವರ್ಗಾಂತರವಾಗುವಂತವುಗಳಾಗಿವೆ. ಹಾಗೆಯೇ ಸಾಮಾಜಿಕ ಅಗತ್ಯಗಳನ್ನು ಪೂರೈಸುವ ಕಾರಣದಿಂದ ಕಲಿಕೆಯಾಗಿ ಮೈಗೂಡಿಸಿಕೊಂಡಂತವುಗಳು. ಉದಾ: ಕಲ್ಲು, ಮಣ್ಣು, ಕಟ್ಟಿಗೆಗಳು ಮಕ್ಕಳಿಗೆ ಪ್ರಮುಖವಾದವು. ಅದರಂತೆ ಕಲ್ಲಿನಿಂದ ಮನೆ ಕಟ್ಟುವುದು, ಮನೋರಂಜಿಸುವುದಕ್ಕೆ ಪ್ರೇರಣೆಯೂ ಹೌದು. ಅದರಂತೆ ಮಣ್ಣಿನಲ್ಲಿ ಆಡುವ ಮಕ್ಕಳಿಗೆ ಮಣ್ಣೆಂದರೆ ಪ್ರೀಯವಾದುದು. ಮಣ್ಣಿನಿಂದ ಇಂದಿಗೂ ಕುಂಬಾರರು ಮಡಿಕೆಗಳನ್ನು ತಯಾರಿಸುತ್ತಾರೆ. ಹೀಗೆ ಎಲ್ಲ ಸಮುದಾಯದ ಮಕ್ಕಳು ಮಣ್ಣನ್ನು ಹದಗೊಳಿಸಿ ಆಟಿಕೆಗಳನ್ನು ಗ್ರಾಮದ ವಿವಿಧ ಸಮುದಾಯದ ಮಕ್ಕಳು ಕೂಡ ಸೃಷ್ಟಿಸಿ ಬಿಡುತ್ತಾರೆ.

ಮಕ್ಕಳಾಗಿರುವಾಗ ಕೇವಲ ಮನೋರಂಜನೆಯೆನಿಸುತ್ತಿದ್ದ ಆಟಗಳು ಮನುಷ್ಯನ ಹುಟ್ಟು ಪ್ರವೃತ್ತಿಯಾದ ಸ್ಪರ್ಧಾ ಮನೋಭಾವನೆಯನ್ನು ಜಾಗೃತಗೊಳಿಸುತ್ತವೆ. ಕ್ರೀಡೆ ಅಥವಾ ಆಟವೆಂಬುದು ಏಕಘಟಕ ಕ್ರೀಡೆಯಲ್ಲ. ಇಲ್ಲಿ ನಿರ್ದಿಷ್ಟವಾಗಿ ಇಬ್ಬರು ಅಥವಾ ಎರಡು ತಂಡಗಳು ಮುಖಾಮುಖಿಯಾಗಿ ಸ್ಪರ್ಧಿಸಬೇಕಾಗುತ್ತದೆ. ಇಬ್ಬರಲ್ಲೂ ಸ್ಪರ್ಧೆ ಇರುತ್ತದೆ. ಸೋಲು ಗೆಲುವು ಎಂಬುದೇ ಇಲ್ಲಿ ನಿರ್ಣಾಯಕ. ಯಾವುದೇ ಗ್ರಾಮೀಣ ಆಟದಲ್ಲಿ ಸಂವಹನ ಮತ್ತು ಕ್ರಿಯೆಗಳ ಸಹಚರ್ಯ ಇದ್ದೇ ಇರುತ್ತದೆ. ಈ ಸಂವಹನವು ಕ್ರಿಯಾತ್ಮಕವಾಗಿ ಆಟಗಾರರ ಚಾತುರ್ಯ, ಬುದ್ಧಿ, ಸಾಂಘಿಕತೆ, ಶಿಸ್ತು, ನೀತಿ, ನಿಯಮಾವಳಿಗಳನ್ನು ಪ್ರಚೋದಿಸುತ್ತದೆ. ಸಮಾಜದಲ್ಲಿ ಸಮಚಿತ್ತತೆಯ ಮನೋಭಾವವನ್ನು ರೂಪಿಸಿಕೊಳ್ಳಬೇಕೆಂದು ಪಾಠವನ್ನು ಪರೋಕ್ಷವಾಗಿ ವರ್ಧಿಸುವಂತೆ ಮಾಡುತ್ತದೆ. ಅಂದರೆ ಮನಸ್ಸನ್ನು ಹದಗೊಳಿಸುವ ಮಾಧ್ಯಮವಾಗಿ ಜನಪದ ಆಟಗಳು ಕೆಲಸ ಮಾಡುತ್ತವೆ. ಜನಪದ ಆಟಗಳು ಕೇವಲ ಮನೋರಂಜನೆಯನ್ನು ಉಂಟುಮಾಡುವುದಲ್ಲದೇ ಸಮಾಜದೊಳಗಿನ ಏರುಪೇರುಗಳನ್ನು ಸರಿಮಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಜನಪದ ಆಟಗಳಲ್ಲಿ ಕೆಲವು ದಿನನಿತ್ಯ, ಇನ್ನು ಕೆಲವು ಹಬ್ಬ ಹರಿದಿನಗಳಂತಹ ವಿಶೇಷ ಸಂದರ್ಭಗಳಲ್ಲಿ ಜರುಗುತ್ತವೆ. ಜನಪದ ಆಟಗಳನ್ನು ವರ್ಗೀಕರಿಸಿ ಇವುಗಳ ಸಂದರ್ಭವನ್ನು ಹೆಚ್ಚು ನಿಖರಗೊಳಿಸುತ್ತವೆ. ಜನಪದ ಆಟಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

೧. ಮಕ್ಕಳ ಆಟಗಳು

೨. ಗಂಡಸರ ಆಟಗಳು

೩. ಹೆಂಗಸರ ಆಟಗಳು

೪. ಪ್ರಾಣಿ ಸಂಬಂಧಿ ಆಟಗಳು ಎಂದು ನಾಲ್ಕು ವಿಭಾಗಗಳಲ್ಲಿ ಗಮನಿಸಬಹುದಾಗಿದೆ.

ಮಕ್ಕಳಾಟಗಳು

ಮಕ್ಕಳಾಟಗಳು ಮನೋರಂಜನೆಯನ್ನೇ ಮುಖ್ಯ ಗುರಿಯಾಗಿಸಿಕೊಂಡಿರುತ್ತವೆ. ಮಕ್ಕಳು ಸಂತೋಷದಿಂದ ಆಡುತ್ತಲೇ ಬೆಳೆಯಬೇಕೆಂಬ ಸಾಮಾಜಿಕ ಪ್ರಜ್ಞೆ, ಮಕ್ಕಳ ನೂರಾರು ಆಟಗಳಿಗೆ ಜನ್ಮ ಕೊಟ್ಟಿದೆ. ಮಕ್ಕಳ ಎಲ್ಲ ಆಟಗಳಲ್ಲಿ ಸ್ಪರ್ಧೆ ಇದ್ದೆ ಇರುತ್ತದೆಂಬುದೇನಿಲ್ಲ. ಮಕ್ಕಳು ತಮ್ಮ ಸಂತೋಷಕ್ಕೆ ಸುಮ್ಮನೆ ಕೆಲವು ಆಟಗಳನ್ನು ಆಡಿಕೊಳ್ಳುವುದುಂಟು. ಉದಾ: ಹೊಳೆ, ಹಳ್ಳಗಳ ದಂಡಿಯಲ್ಲಿ ಗುಬ್ಬಿ ಗೂಡುಕಟ್ಟಿ ಆಡುವುದು, ಗಾಳಿಪಟದಾಟ ಇವುಗಳಲ್ಲಿ ಇಂಥವರೇ ಗೆದ್ದರು ಎಂಬ ತೀರ್ಮಾನ ಬರುವದಿಲ್ಲ.

ಗಂಡುಮಕ್ಕಳಾಟಗಳು

ಗಂಡುಮಕ್ಕಳಾಡುವ ಆಟಗಳು ವಯಸ್ಸಿಗನುಗುಣವಾಗಿ ಬೇರೆ ಬೇರೆ ತೆರನಾಗಿವೆ. ಮಾನಸೋಲ್ಲಾಸಕ್ಕಾಗಿ ೧೦ರಿಂದ೧೧ ವರ್ಷದವರು ಆಡುವ ಆಟಗಳು ಒಂದು ಬಗೆಯಾಗಿದೆ. ೧೮ರಿಂದ ಮಧ್ಯಮ ವಯಸ್ಸಿನವರೆಗಿನವರು ಆಡುವ ಆಟಗಳು ಇನ್ನೊಂದು ಬಗೆಯವು. ೧೦-೧೮ ವರ್ಷದವರು ಮಾನಸೋಲ್ಲಾಸಕ್ಕಾಗಿ ನಿತ್ಯವೂ ಆಡುತ್ತಿರುತ್ತಾರೆ. ಅವುಗಳನ್ನು ವಿವರವಾಗಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಿ ಸಂಪಾದಿಸಲಾಗಿದೆ.

೧. ಮುಟ್ಟಾಟ

ನಿರ್ದಿಷ್ಟ ಸ್ಥಳವನ್ನು ಮುಟ್ಟಬರುವದರೊಳಗೆ ಇನ್ನುಳಿದ ಮಕ್ಕಳೆಲ್ಲ ಓಡಿಹೋಗುವುದು. ಅವರನ್ನು ಮುಟ್ಟಲು ಹೋದ ಹುಡುಗ ಯಾರನ್ನು ಮುಟ್ಟುತ್ತಾನೋ ಅವನು ಆಟದಿಂದ ಹೊರಗೆ. ಹೀಗೆ ಮುಟ್ಟಿಸಿಕೊಂಡ ವ್ಯಕ್ತಿ ಮರಳಿ ನಿರ್ದಿಷ್ಟ ಸ್ಥಳ ಮುಟ್ಟಿ ಎಲ್ಲರನ್ನೂ ಮುಟ್ಟಲು ಹೋಗಬೇಕು. ಇದರಲ್ಲಿ ಸದಸ್ಯರ ನಿರ್ಬಂಧವಿಲ್ಲ.

೨. ಇಸ್ಪಾಪ

ಈ ಆಟದಲ್ಲಿ ನಿರ್ದಿಷ್ಟ ಸ್ಥಳವನ್ನು ಮುಟ್ಟಲು ಒಬ್ಬ ಹೋಗಬೇಕು. ಆತ ಬರುವದರೊಳಗೆ ಇನ್ನುಳಿದವರೆಲ್ಲ ಅಜ್ಞಾತ ಸ್ಥಳದಲ್ಲಿ ಅಡಗಿಕೊಳ್ಳಬೇಕು ಹಾಗೂ ನಿರ್ದಿಷ್ಟ ಸ್ಥಳ ಮುಟ್ಟಿ ಬಂದಾತ ಪ್ರತಿಯೊಬ್ಬರನ್ನು ಹುಡುಕಬೇಕು. ಉದಾ: ಗಿರಿ ಇಷ್ಪಾಪ, ರಾಮ ಇಷ್ಪಾಪ ಎಂದು ಎಲ್ಲರನ್ನು ಗುರುತಿಸಬೇಕು. ಒಂದು ವೇಳೆ ಗುರುತಿಸುವ ಸಂದರ್ಭದಲ್ಲಿ ಗುರುತಿಸುವ ವ್ಯಕ್ತಿಗೆ ಅರಿವಾಗದಂತೆ ಬಂದು ಆತನ ಬೆನ್ನು ತಟ್ಟಿ ಗುಲ್ಲೋ ಎಂದರೆ ಆತನೆ ಮರಳಿ ಮತ್ತೊಮ್ಮೆ ಎಲ್ಲರನ್ನು ಹುಡುಕಲು ಬರಬೇಕು. ಒಂದು ವೇಳೆ ಯಾರು ಗುಲ್ಲೋ ಎನ್ನದಿದ್ದರೆ ಮೊದಲು

ಯಾರಿಗೆ ಇಷ್ಟಾಪ ಎಂದಿರುತ್ತಾನೋ ಆತನೇ ನಿರ್ದಿಷ್ಟ ಸ್ಥಳ ಮುಟ್ಟಲು ಹೋಗಬೇಕು. ಇಲ್ಲಿಯೂ ಸದಸ್ಯರ ನಿರ್ದಿಷ್ಟ ನಿರ್ಬಂಧವಿಲ್ಲ.

೩. ಮೊಲ ಎಬ್ಬಿಸುವ ಆಟ

ಆಟದ ಸದಸ್ಯರಲ್ಲಿ ಒಬ್ಬಾತ ಸ್ಥಳ ಮುಟ್ಟಿ ಬಂದು ಒಬ್ಬನನ್ನು ಮುಟ್ಟಬೇಕು. ಮುಟ್ಟಿದ ನಂತರ ಮುಟ್ಟಿಸಿಕೊಂಡ ವ್ಯಕ್ತಿ ಮುಟ್ಟಲು ಬಂದ ವ್ಯಕ್ತಿಯ ಜೊತೆ ಸೇರಬೇಕು. ಇಬ್ಬರೂ ಸೇರಿ ಇನ್ನುಳಿದವರ ಬೇಟೆಗೆ ಹೋಗಬೇಕು. ಹೀಗೆ ಮುಟ್ಟಿಸಿಕೊಂಡ ವ್ಯಕ್ತಿಗಳು ಮುಟ್ಟಿದವರ ಪಕ್ಷಕ್ಕೆ ಸೇರುತ್ತ ಹೋಗಬೇಕು. ಹೋಗಿ ಕೊನೆ ಸದಸ್ಯನವರೆಗೆ ಬೇಟೆ ನಡೆಯುತ್ತದೆ.

೪. ಝುಂಡಾ ಕಟ್ಟೆ

ಆಟಕ್ಕೆ ಸೇರಿದ ಮಕ್ಕಳೆಲ್ಲ ಒಂದು ಗಿಡವನ್ನು ಅಥವಾ ಲೈಟು ಕಂಬವನ್ನು ಅಥವಾ ನಿಲ್ಲಿಸಿದ ಯಾವುದೇ ಕಟ್ಟಿಗೆ ಕಂಬವನ್ನು ಝುಂಡಾ ಕಟ್ಟಿ ಎಂದು ಭಾವಿಸುತ್ತಾರೆ. ನಂತರ ನಿರ್ದಿಷ್ಟ ವ್ಯಕ್ತಿ ಉಳಿದವರನ್ನು ಮುಟ್ಟಲು ಹೋದಾಗ ಅವರು ಬಂದು ಝುಂಡಾ ಕಟ್ಟೆಯನ್ನು ಮುಟ್ಟಿದರೆ ಆತ ಸೋತಂತೆ. ಪುನಃ ಅವರನ್ನು ಮುಟ್ಟಲು ಹೋಗಬೇಕು ಅಥವಾ ಹೋದ ವ್ಯಕ್ತಿಗಳಲ್ಲಿ ಒಬ್ಬರನ್ನು ಮುಟ್ಟಿದರೆ ಅವರು ಬಂದು ಇನ್ನುಳಿದವರನ್ನು ಮುಟ್ಟಬೇಕು.

೫. ಆಲ್.ಆಲ್. ಪೊಡೊ

ಈ ಆಟದಲ್ಲಿ ನಿರ್ದಿಷ್ಟ ಒಂದು ಕಂಬದ ಹತ್ತಿರ ಒಬ್ಬ ನಿಂತುಕೊಂಡು, ಉಳಿದ ವ್ಯಕ್ತಿಗಳನ್ನು ಅದಕ್ಕೆ ಕರೆಯುತ್ತ ಆತ ಆಲ್ ಆಲ್ ಪೊಡೊ ಎನ್ನುತ್ತಾನೆ. ಇನ್ನುಳಿದವರು ಯಾವ ಗಿಡ ಎಂದು ನಿರ್ದಿಷ್ಟ ವಸ್ತುವನ್ನು ಕೇಳುತ್ತಾರೆ. ಆಗ ಆತ ಆ ಸ್ಥಳದಲ್ಲಿ ಉಪಲಬ್ಧವಿದ್ದ ಯಾವುದೇ ವಸ್ತುವನ್ನು, ಗಿಡ ಮರವನ್ನೋ ಹೇಳುತ್ತಾನೆ. ಆವಾಗ ಇನ್ನುಳಿದವರು ಆ ಸ್ಥಳದಲ್ಲಿ ಆತ ಹೇಳಿರುವ ವಸ್ತುವನ್ನು ಮುಟ್ಟುವದರಲ್ಲಿ ಈತ ಹೋಗಿ ಅವರನ್ನು ಮುಟ್ಟಬೇಕು. ಯಾರನ್ನು ಹೀಗೆ ಮುಟ್ಟಲು ಬಂದಾಗ ಕಬ್ಬಿಣ ತುಂಡಿನ ಮೇಲೆ ಅಥವಾ ಕಲ್ಲಿನ ಮೇಲೆ ನಿಂತ ವ್ಯಕ್ತಿಗಳನ್ನು ಮುಟ್ಟುವಂತಿಲ್ಲ, ಇದು ಈ ಆಟದ ವೈಶಿಷ್ಟ್ಯತೆ. ಯಾವಾಗ ಕಟ್ಟಿಗೆ ಅಥವಾ ಕಬ್ಬಿಣದ ಸ್ಪರ್ಷವಿಲ್ಲದೆ ಇರುತ್ತಾರೋ ಆವಾಗ ಆ ವ್ಯಕ್ತಿಗಳನ್ನು ಮುಟ್ಟಬೇಕು. ಅಲ್ಲದೇ ಆತ ಹೇಳಿದ ಮರದ ಹತ್ತಿರ ನಿಂತಾಗ ಅಲ್ಲಿಗೆ ಬಂದು ಆಲ್ ಆಲ್ ಪೊಡೊ ಎಂದು ಹೇಳುತ್ತಾನೆ. ಮತ್ತೆ ಉಳಿದವರು ಯಾವ ಗಿಡ ಎಂದು ಕೇಳುತ್ತಾರೆ. ಅವರು ಆತ ಉದ್ದೇಶಪೂರ್ವಕ ತನಗೆ ಅನುಕೂಲದ ವಸ್ತು ಅಥವಾ ಗಿಡವನ್ನು ಹೇಳುತ್ತಾರೆ. ಆವಾಗ ಅಲ್ಲಿಗೆ ಅವರು ಹೋಗುವುದರೊಗಳಗೆ ಹೋಗಿ ಈತ ಮುಟ್ಟುತ್ತಾನೆ. ಮುಂದೆ ಮುಟ್ಟಿಸಿಕೊಂಡಾತನ ಸರದಿ ಬರುತ್ತದೆ.

೬. ಬಡಗಿ ರೆಚಾಟ

ಈ ಆಟದಲ್ಲಿ ನಿರ್ದಿಷ್ಟ ವ್ಯಕ್ತಿ ಎರಡು ಕೈಗಳನ್ನು ಮೇಲಕ್ಕೆ ಮಾಡಿ ಕೈಯಲ್ಲಿ ಉದ್ದನೇ ಕೋಲನ್ನು ಹಿಡಿದುಕೊಂಡು ನಿಂತಿರುತ್ತಾನೆ. ಆವಾಗ ಇನ್ನುಳಿದವರು ಕೈಯಲ್ಲಿ ಕೋಲನ್ನು ಹಿಡಿದಿರುತ್ತಾರೆ. ಅವರಲ್ಲಿ ಒಬ್ಬಾತ ಕೋಲಿನಿಂದ ನಿಂತಿರುವ ವ್ಯಕ್ತಿಯ ಕೋಲನ್ನು (ಕೈಯಲ್ಲಿಯ) ದೂರಕ್ಕೆ ಚಿಮ್ಮುತ್ತಾನೆ. ಅದು ದೂರ ಹೋಗಿ ಬೀಳುತ್ತದೆ. ನಂತರ ಆ ಕೋಲನ್ನು ಇನ್ನುಳಿದವರು ತಮ್ಮ ಕೋಲಿನಿಂದ ದೂರ ಚಿಮ್ಮುತ್ತ ಹೋಗುತ್ತಾರೆ. ಆ ಸಂದರ್ಭದಲ್ಲಿ ಆ

ಕೈಯಲ್ಲಿನ ಕೋಲನ್ನು ಹಿಡಿದುಕೊಂಡು ನಿಂತಿದ್ದ ವ್ಯಕ್ತಿ ಅವರನ್ನು ಮುಟ್ಟಲು ಹೋಗುತ್ತಾನೆ. ಆವಾಗ ವ್ಯಕ್ತಿಗಳು ತಮ್ಮ ಕೋಲನ್ನು ಒಂದು ಕಲ್ಲಿಗೆ ತಾಗಿಸಿಕೊಂಡು ನಿಲ್ಲಬೇಕು. ಕಲ್ಲಿಗೆ ತಾಗಿಸಿಕೊಂಡು ನಿಲ್ಲದೇ ಇದ್ದಾಗ ಆತನನ್ನು ಮುಟ್ಟುತ್ತಾನೆ. ಆವಾಗ ಮುಟ್ಟಿಸಿಕೊಂಡಾತ ಔಟ ಆಗುತ್ತಾನೆ.

೭. ಸುರಮಣಿ ಅಥವಾ ಕಾಯಿ ಆಟ (ರೈಸ ಆಟ)

ಈ ಆಟದಲ್ಲಿ ಕೇವಲ ೫ ಜನ ವ್ಯಕ್ತಿಗಳು ಹಾಗೂ ೪ ಚಿಕ್ಕ ಕಲ್ಲುಗಳು ಬೇಕು. ನಾಲ್ಕು ಚೌಕದರಲ್ಲಿ ಒಬ್ಬರು ಇರಬೇಕು, ನಡುವೆ ನಿಂತಿರುವ ವ್ಯಕ್ತಿ ಕಲ್ಲುಗಳನ್ನು ರಕ್ಷಣೆ ಮಾಡುತ್ತ ೧ನೇಯ ಸ್ಥಳದಿಂದ ೨ನೇ ಸ್ಥಳಕ್ಕೆ, ೩ನೇ ಸ್ಥಳಕ್ಕೆ, ೪ನೇಯ ಸ್ಥಳಕ್ಕೆ, ಪುನಃ ೨ನೆಯ ಸ್ಥಳಕ್ಕೆ ತಂದು ೫ನೇಯ ಸ್ಥಳ ತಲುಪಿ ಬರಬೇಕು. ಬರುವುದರಲ್ಲಿ ಇನ್ನುಳಿದವರು ಆ ನಾಲ್ಕು ಕಲ್ಲುಗಳನ್ನು ತೆಗೆದುಕೊಳ್ಳಬೇಕು, ತೆಗೆದುಕೊಳ್ಳುವಾಗ ಒಬ್ಬರನ್ನು ಮುಟ್ಟಬೇಕು. ಹಾಗೆ ಮುಟ್ಟದೇ ಇದ್ದಾಗ ಪುನಃ ಆ ನಾಲ್ಕು ಜನ ಒತ್ತಟ್ಟಿಗೆ ಒಂದು ಮನೆ ಸೇರಬೇಕು. ಹಾಗೆ ಸೇರುವಾಗ ಮುಟ್ಟಿದರೆ ಅವರು ಔಟ ಆಗುತ್ತಾರೆ.

೮. ಕಳ್ಳ ಪೋಲಿಸ

ಇದು ಎರಡು ತಂಡದಲ್ಲಿ ನಡೆಯುವದು. ಪರಸ್ಪರ ಕಳ್ಳರನ್ನು ಪೋಲಿಸರು ಹಿಡಿಯಲು ಹೋಗುವರು. ಬಂಧಿಸಿದ ನಂತರ ಕಳ್ಳರ ಪಕ್ಷದವರು ಪೋಲಿಸರಾಗಿ ಪಾತ್ರ ನಿರ್ವಹಿಸುತ್ತಾರೆ.

೯. ಮರ ಕೋತಿ ಆಟ

ಒಬ್ಬ ವ್ಯಕ್ತಿಯ ಕೈಯಲ್ಲಿನ ಕೋಲನ್ನು ಇನ್ನುಳಿದವರು ದೂರ ಎಸೆಯುತ್ತಾರೆ. ಆ ಕಟ್ಟಿಗೆ ತರುವುದರೊಳಗೆ ಇನ್ನುಳಿದವರು ಮರವನ್ನೇರುತ್ತಾರೆ. ಆತ ಕಟ್ಟಿಗೆ ತೆಗೆದುಕೊಂಡು ಒಂದು ನಿರ್ದಿಷ್ಟ ಮರದ ಕೆಳಗೆ ದುಂಡಗೆ ಒಂದು ವೃತ್ತವನ್ನು ಹಾಕಿರುತ್ತಾರೆ. ಆ ವೃತ್ತದಲ್ಲಿ ಈತ ಬೆನ್ನಟ್ಟಬೇಕು. ಅಷ್ಟರಲ್ಲಿ ಮರದಿಂದ ಕೆಳಕ್ಕೆ ಜಿಗಿದು ವೃತ್ತದಲ್ಲಿರುವ ಕಟ್ಟಿಗೆಯನ್ನು ಮರ ಏರಿದ ವ್ಯಕ್ತಿಗಳು ಮುಟ್ಟಿದರೆ ಪುನಃ ಅವರು ಎಸೆದ ಕಟ್ಟಿಗೆಯನ್ನು ತರಲು ಮೊದಲಿನ ವ್ಯಕ್ತಿಯೇ ಹೋಗಬೇಕು. ಇಲ್ಲವೇ ಮುಟ್ಟಿಸಿಕೊಂಡ ವ್ಯಕ್ತಿ ಹೋಗಬೇಕು. ಎಲ್ಲರು ತೆಗೆದು ಮೇಲೆ ಕೆಳಗೆ ಮಾಡಬೇಕು. ಮಾಡುವಾಗ ಭಿನ್ನವಾದ ಕೈ ಯಾರದಾಗುತ್ತದೆಯೋ ಆತ ಪಾರು. ಇನ್ನುಳಿದವರು ಮಾಡುತ್ತ ಕೊನೆಗೆ ಯಾವ ವ್ಯಕ್ತಿ ಉಳಿಯುತ್ತಾನೋ ಆತನೆ ಓಡುವ ವ್ಯಕ್ತಿ.

೧೦. ಗೋಲಿಯ ಆಟ

೧) ಕುಣಿಗಳು ೨) ಗೆರೆ ದಾಟಿಸುವದು ೩) ಬೆಂದಾ ೪) ಚಿನಾಲಿ ೫) ಹತ್ತು ಇಪ್ಪತ್ತು ೬) ಜಾಪಾ ಹಾಕುವದು ೭)ಪಿಕಾಟ ೮) ಪಟವಾ ೯) ಗುಂಡುಗೆರೆ ೧೦) ಸರಿಬೆಸ ಈ ಎಲ್ಲ ಆಟಗಳಲ್ಲಿ ಎಷ್ಟು ಬೇಕಾದಷ್ಟು ವ್ಯಕ್ತಿಗಳು ಪಾಲ್ಗೊಳ್ಳಬಹುದಾಗಿದೆ.

೧೧ ಹುಣಸೆ ಪೀಕಾಟ

ವೃತ್ತವನ್ನು ಹಾಕಿ ಅದರ ಸಮೀಪ ಒಂದು ಗೆರೆಯನ್ನು ಹಾಕಿರುತ್ತಾರೆ. ಆ ಗೆರೆಯ ಸಮೀಪ ಒಬ್ಬೊಬ್ಬರಾಗಿ ತಮ್ಮ ಕೈಯಲ್ಲಿರುವ ಒಂದೊಂದು ಕಲ್ಲನ್ನು ಗೆರೆಯ ಸಮೀಪ ಎಸೆಯುತ್ತಾರೆ. ಯಾರ ಕಲ್ಲು ಗೆರೆಗೆ ಸಮೀಪ ಬಿದ್ದಿರುತ್ತದೆ ಅದರಂತೆ ಒಬ್ಬೊಬ್ಬರಾಗಿ

ಕಲ್ಲುಗಳಿಂದ ಹುಣಸೆ ಬೀಜಗಳಿಗೆ ಹೊಡೆಯುವದು. ಹೊಡೆದವರಿಗೆ ಇನ್ನುಳಿದವರ ಎಲ್ಲ ಹುಣಸೆ ಬೀಜಗಳು ಲಭಿಸುತ್ತವೆ.

೧೨ ಬಳೆ ಚೂರಾಟ

ಎರಡು ಮಕ್ಕಳು ಸೇರಿ ಪ್ರತಿಯೊಬ್ಬರ ನಾಲ್ಕು, ನಾಲ್ಕು ಚಿಕ್ಕ ಚಿಕ್ಕ ತಗ್ಗುಗಳನ್ನು ವಿರುದ್ಧ ದಿಕ್ಕಿನಲ್ಲಿ ನಿರ್ಮಿಸುವದು. ಒಬ್ಬೊರಿಗೊಬ್ಬರಿಗೆ ತಿಳಿಯದಂತೆ ಬಳೆಯ ಗಾಜಿನ ಚೂರುಗಳನ್ನು ಅಂದರೆ ವಿವಿಧ ವರ್ಣದ ಹಲವಾರು ಚೂರುಗಳನ್ನು ತೆಗೆದುಕೊಂಡು ಒಬ್ಬನನ್ನು ದೂರಕ್ಕೆ ಹೋಗುವಂತೆ ತಿಳಿಸಿ ಒಂದು ತಗ್ಗಿನಲ್ಲಿ ಹಾಕಿ ನಾಲ್ಕು ತಗ್ಗುಗಳನ್ನು ಮಣ್ಣು ಹಾಕಿ ಮತ್ತೊಬ್ಬರು ಹಾಗೂ ಆ ತಗ್ಗುಗಳ ಹತ್ತಿರ ಒಂದು ಚಿಕ್ಕ ಕಲ್ಲನ್ನು ಇಟ್ಟಿರುತ್ತಾರೆ. ನಂತರ ಇನ್ನೊಬ್ಬ ಬಂದು ಆ ಕಲ್ಲಿಗೆ ತನ್ನ ನಾಲ್ಕು ಕೈ ಬೆರಗಳುಗಳಿಂದ (ಹೆಬ್ಬೆಟ್ಟಿನ ಹೊರತು) ಉಗುಳು ಅಂಟಿಸಿ ನಾಲ್ಕು ಬೆರಳುಗಳನ್ನು ಕಲ್ಲಿನ ಮೇಲೆ ಮೂಡಿಸುತ್ತಾನೆ. ಆಗ ಯಾವ ಬೆರಳು ದುಂಡಾಗಿ ಮಾಡಿರುತ್ತದೋ ಆ ನಂಬರಿನ ತಗ್ಗಿನಲ್ಲಿ ಬಳಚೂರು ಇವೆ ಎಂದು ನಂಬುತ್ತಾರೆ. ಅದನ್ನೇ ತರೆಯುತ್ತಾರೆ. ಒಂದು ವೇಳೆ ತೆಗೆದವನಿಗೆ ಬಳಚೂರು ಇರುವ ತೆಗ್ಗು ದೊರೆತರೆ ಆತನಿಗೆ ಅದರಲ್ಲಿರುವ ಚೂರುಗಳ ಜೊತೆಗೆ ಅವು ಎಷ್ಟಿರುತ್ತವೆಯೋ ಅಷ್ಟು ಚೂರುಗಳನ್ನು ಮುಚ್ಚಿಟ್ಟು ಮೊದಲ ವ್ಯಕ್ತಿಗೆ ಕೊಡಬೇಕೆಂದು ನಿಯಮ. ಒಂದು ವೇಳೆ ಬಳಚೂರು ಇದ್ದು ತಗ್ಗು ಹುಡುಕಲು ವಿಫಲವಾದರೆ ಮೊದಲಿನ ವ್ಯಕ್ತಿ ಬೇರೆ ತಗ್ಗಿನಲ್ಲಿ ಮುಚ್ಚಿಟ್ಟ ಬಳಚೂರಿನಷ್ಟೇ ತನ್ನಲ್ಲಿ ಚೂರುಗಳನ್ನು ಮೊದಲ ವ್ಯಕ್ತಿಗೆ ಕೊಡಬೇಕು.

ಗಂಡಸರ ಆಟಗಳು

ಗಂಡಸರ ಆಟಗಳೆಂದರೆ ಸಾಮಾನ್ಯವಾಗಿ ೧೮ ವರ್ಷ ಮೇಲ್ಪಟ್ಟವರ ಆಟಗಳೆಂದು ನಾವು ಪರಿಗಣಿಸಬಹುದು. ಸಾಮಾನ್ಯವಾಗಿ ದೊಡ್ಡವರ ಆಟಗಳು ಹಬ್ಬ ಹರಿದಿನಗಳಲ್ಲಿ ನಡೆಯುತ್ತವೆ.

ಗ್ರಾಮದಲ್ಲಿ ವಿವಿಧ ದೇವರ ಜಾತ್ರೆ, ಉತ್ಸವ, ಸಿದ್ಧೇಶ್ವರ ಆರಾಧನಾ ಮುಂತಾದ ಕಾರ್ಯಕ್ರಮಗಳ ಸಂದರ್ಭದಲ್ಲಿ ಸ್ಪರ್ಧೆಗಳು ನಡೆಯುತ್ತವೆ. ಇನ್ನು ಹಬ್ಬ ಹರಿದಿನಗಳಲ್ಲೂ ಈ ಸ್ಪರ್ಧೆಗಳು ನಡೆಯುವದುಂಟು. ನಾಗರಪಂಚಮಿ, ದೀಪಾವಳಿ, ಯುಗಾದಿ, ಕಾರ ಹುಣ್ಣಿಮೆ ಹೀಗೆ ವಿವಿಧ ಸಂದರ್ಭದಲ್ಲಿ ಈ ಸ್ಪರ್ಧೆಗಳು ಏರ್ಪಡುತ್ತವೆ. ಭಾರವಾದ ಕಲ್ಲು ಗಳನ್ನು ಎತ್ತುವುದು, ಗುಂಡು ಕಲ್ಲುಗಳನ್ನು ಎತ್ತುವುದು, ಕುಸ್ತಿ ಆಡುವುದು ಮುಂತಾದ ವೈಯಕ್ತಿಕ ಸ್ಪರ್ಧೆಗಳು ನಡೆಯುತ್ತವೆ. ಗ್ರಾಮದ ಶ್ರೀ ಸಿದ್ಧೇಶ್ವರ ದೇವಸ್ಥಾನದ ಮುಂದೆ ಪೂಜಾರಿ ಓಣಿಯಲ್ಲಿ ಇಂತಹ ಭಾರವಾದ ಕಲ್ಲುಗಳನ್ನು ಕಾಣಬಹುದು.

ಇವುಗಳಲ್ಲದೇ ಜೋಕಾಲಿ ಸ್ಪರ್ಧೆ, ಲಿಂಬೆ ಹಣ್ಣು ಎಸೆಯುವ ಸ್ಪರ್ಧೆಗಳು ನಡೆಯುತ್ತವೆ. ಜೋಕಾಲಿ ಆಡುವಾಗ ಗಿಡದಲ್ಲಿ ಅತ್ಯಂತ ಎತ್ತರದಲ್ಲಿ ಕಟ್ಟಿದ ಕೊಬ್ಬರಿ ಬಟ್ಟಲನ್ನು ತರುವದು, ಕೊಬ್ಬರಿ ಬಟ್ಟಲು ಹರಿದುಕೊಂಡವರು ಗೆದ್ದಂತೆ. ನಿರ್ದಿಷ್ಟ ದೂರವನ್ನು ಲಿಂಬೆ ಹಣ್ಣು ತೆಗೆದುಕೊಂಡು ಮೂರೆ ಎಸೆತದಲ್ಲಿ ತಲುಪುವದು, ಯಾರು ಆ ಸ್ಥಳವನ್ನು ಕಡಿಮೆ ಎಸೆತಗಳಲ್ಲಿ ತಲುಪುವರೋ ಅವರು ಗೆದ್ದಂತೆ. ಕಬಡ್ಡಿ ಆಡುವದು, ಸರಗೇರಿ ಆಡುವದು, ಕಣ್ಣು ಕಟ್ಟುವದು ಹೀಗೆ ವಿವಿಧ ಪಂದ್ಯಗಳನ್ನು ಗ್ರಾಮದಲ್ಲಿ ಕಾಣಬಹುದು.

ಸುಗ್ಗಿಯ ಸಂದರ್ಭದಲ್ಲಿ ಇಂತಿಷ್ಟು ಜೋಳವನ್ನು ಒಂದೇ ದಿನದಲ್ಲಿ ಕೀಳುವದು, ಸೂಡು ಕಟ್ಟುವದು, ಗೂಡು ಒಟ್ಟುವುದು ಮುಂತಾದ ಸ್ಪರ್ಧೆಗಳೂ ನಡೆಯುವದುಂಟು. ಇವು ಒಂದು ರೀತಿಯ ಶಕ್ತಿ ಪ್ರದರ್ಶನದ ಸನ್ನಿವೇಶಗಳೆನ್ನಬಹುದಾಗಿದೆ.

ಇಷ್ಟಲ್ಲದೇ ಹಿಂದೆ ಬಾಯಿಯಲ್ಲಿ ಉಸುಕು (ಮರಳು) ತುಂಬಿದ ಕೊಡವನ್ನು ಎತ್ತುವದು, ಜೋಳದ ಚೀಲಗಳನ್ನು ಎತ್ತುವದು ಮುಂತಾದ ಸ್ಪರ್ಧೆಗಳು ಕೂಡ ನಡೆಯುತ್ತಿದ್ದವು.

ಹೆಣ್ಣು ಮಕ್ಕಳಾಟಗಳು

ಗ್ರಾಮದ ಮಟ್ಟಿಗೆ ಹೇಳುವುದಾದರೆ ಪುರುಷರಷ್ಟೆ ಮಹಿಳೆಯರ ಆಟಗಳು ಇರುವದು ವಿಶೇಷ ಸಂಗತಿಯಾತಿದೆ. ಸಾಮಾನ್ಯವಾಗಿ ಹೆಣ್ಣು ಮಕ್ಕಳನ್ನು ಬೇಗ ಮದುವೆ ಮಾಡಿಕೊಡುವುದು ಹಳ್ಳಿಗಳಲ್ಲಿ ರೂಢಿ. ಹುಡುಗಿಯೊಬ್ಬಳು ದೊಡ್ಡವಳಾದ ಮೇಲೆ ಓಣಿಯಲ್ಲಿ ಕುಂತು ನಿಂತು ಆಡುವುದು ನಮ್ಮ ಜನಪದ ಸಂಸ್ಕೃತಿಗೆ ಸಾಧ್ಯವಿಲ್ಲದ ಮಾತು. ಆದರೆ ಕೊಟ್ಟಲಗಿ ಗ್ರಾಮದ ಮಟ್ಟಿಗೆ ಸಾಕಷ್ಟು ಆಟಗಳಲ್ಲಿ ೧೦ರಿಂದ ೧೬ ವರ್ಷ ವಯಸ್ಸಿನ ಹೆಣ್ಣು ಮಕ್ಕಳು ಪಾಲ್ಗೊಳ್ಳುತ್ತಾರೆ. ಗ್ರಾಮದಲ್ಲಿ ಈ ವಿಷಯಕ್ಕೆ ಪ್ರತ್ಯಕ್ಷ ಸಾಕ್ಷಿ ಎಂಬಂತೆ ಅವುಗಳ ಪ್ರಕಾರ ಹಾಗೂ ವಿವರಗಳನ್ನು ಗಮನಿಸಿದಾಗ ಆಶ್ಚರ್ಯವಾಗುತ್ತದೆ. ಅವುಗಳೆಂದರೆ

೧. ನೀರಡಿಸಿ ಬಂದ್ನಿ ನಿಲ್ದಕಾಯಿ ತಿನ್ನಿ
೨. ಹತ್ತಂಬಳ್ಳ ಹಲಗಿಯ ಒಡ್ಡ
೩. ಜಿಲ್ಪಿ
೪. ಸರಗೇರಿ
೫. ಅಂಡ್ಯಾಳ
೬. ಚಕ್ಕಾ
೭. ಒಡ್ಡಿ
೮. ಹುಲಿ ನರಿ ಆಟ
೯. ಸರಸಾಟ
೧೦. ಜನೇವರಿ ಫೆಬ್ರುವರಿ
೧೧. ಚೀಟಿ ಆಡುವುದು
೧೨. ಇಸ್ಪಾಪ
೧೩. ಮುಟ್ಟಾಟ
೧೪. ಅಡಿಕೆ ಮುಟ್ಟಾಟ (ಆಡಿ–ಮಿಡಿ–ಗಿಡ)
೧೫. ಕೈ ಕೈ ಕೂಡಿಸುವಾಟ
೧೬. ಕರೆಂಟೊ – ಶಾಕೊ
೧೭. ದಪ್ಪೆ ದಿಪ್ಪೆ
೧೮. ಕಣ್ಣು ಮುಚ್ಚಾಲೆ
೧೯. ಲಗ್ಗೋರಿ
೨೦. ಆಟುಣಕಿ ಆಟ
೨೧. ಕಲರ ಕಲರ ವಾಚ್ ಕಲರ

೧) ನೀರಡಿಸಿ ಬಂದ್ರಿ ನೀಲ್ದಕಾಯಿ ತಿನ್ನಿ

ಇಲ್ಲಿ ಮಕ್ಕಳ ಸಂಖ್ಯೆಗೆ ನಿರ್ಬಂಧವಿಲ್ಲ. ಒಂದು ಕಂಬ ಅಥವಾ ಗಿಡಕ್ಕೆ ಒಬ್ಬಳು ಎರಡು ಕೈಗಳಿಂದ ಗಟ್ಟಿಯಾಗಿ ತಬ್ಬಿ ಹಿಡಿದುಕೊಳ್ಳುವರು. ಇನ್ನುಳಿದವರು ಅವಳ ಸೊಂಟವನ್ನು ಒಬ್ಬರ ಹಿಂದೆ ಒಬ್ಬರಂತೆ ಎಷ್ಟು ಬೇಕಾದರೂ ಮಕ್ಕಳು ತಬ್ಬಿಕೊಳ್ಳುತ್ತಾರೆ. ನಂತರ ಒಬ್ಬರು ಕುಂಟುತ್ತ ನೀರಡಿಸಿ ಬಂದ್ನಿ ನೀಲ್ದಕಾಯಿ ತಿನ್ನಿ ಎನ್ನುತ್ತ ಎಲ್ಲರನ್ನು ಒಂದು ಸುತ್ತ ಹಾಕಿ ನಂತರ ಕುಂಬಳಕಾಯಿ ಹಣ್ಣಾಗಿದೆಯೇ ಎಂದು ಕೇಳುತ್ತಾರೆ. ಆವಾಗ ಇಲ್ಲಿ ಇನ್ನು ಎರಡೂ ದಿನ ಬಿಟ್ಟು ಬಾ ಎಂದು ಕಳಿಸುತ್ತಾರೆ. ಇನ್ನೊಂದು ಸುತ್ತು ಹಾಕಿ ಯಥಾ ಪ್ರಕಾರ ಹೇಳುವಳು. ಆವಾಗ ತಂಬಿಗೆಯಷ್ಟು ದೊಡ್ಡದಾಗಿದೆ ಎಂದು ಹೇಳುತ್ತಾಳೆ. ನಂತರ ಸುತ್ತಿಗೆ ಬಂದಾಗ ಬೆಕ್ಕು ತಿಂದು ಹೋಗಿದೆ ಎಂದು ಹೇಳುತ್ತಾರೆ. ಇದಾದ ನಂತರ ಮತ್ತೊಂದು ಸುತ್ತು ಹಾಕಿ ಬಂದು ಕೇಳುತ್ತಾಳೆ. ಹಣ್ಣಾಗಿದೆ ಎಂದು ಹೇಳುತ್ತಾರೆ. ನಂತರ ಕೀಲಿ ಕೈ ಕೇಳುತ್ತಾಳೆ, ಕೀಲಿ ಕೊಡುತ್ತಾರೆ. ನಂತರ ಪ್ರತಿಯೊಬ್ಬರ ತಲೆಗೆ ಕೈಯಿಂದ ಕುಕ್ಕುತ್ತ ಹೋಗಿ ಕೊನೆಗೆ ಇರುವವಳನ್ನು ಹಣ್ಣಾಗಿದೆ ಎಂದು ಅವಳನ್ನು ಎಳೆಯುತ್ತಾರೆ. ಹೀಗೆ ಇನ್ನೊಂದು ಸುತ್ತ ಹಾಕಿ ಒಬ್ಬಳನ್ನು ಎಳೆಯುತ್ತ ಎಲ್ಲರನ್ನೂ ಎಳೆಯುತ್ತಾಳೆ. ಗಿಡ ತಬ್ಬಿಕೊಂಡಿರುವವಳನ್ನು ಎಳೆದರೆ ಪುನಃ ಇವಳೆ ಆಟ ಆರಂಭಿಸುವುದು, ಇಲ್ಲದಿದ್ದರೆ ಕೊನೆಯವಳು ಗಿಡವನ್ನು ಬಿಡದಿದ್ದರೆ ಗಿಡ ತಬ್ಬಿಕೊಂಡವಳು ಆರಂಭಿಸಬೇಕು.

೨) ಹತ್ತಂಬಳ್ಳ ಹಲಗಿ ಒಡ್ಡ

ಸುಮಾರು ಹತ್ತಾರು ಮಕ್ಕಳು ಅದರಲ್ಲಿ ಎರಡು ಮಕ್ಕಳನ್ನು ಬಿಟ್ಟು ಇನ್ನುಳಿದವರು ಕೈಯಲ್ಲಿ ಕೈ ಸೇರಿಸಿ ವೃತ್ತಾಕಾರವಾಗಿ ನಿಲ್ಲುವರು. ಇನ್ನುಳಿದ ಎರಡು ಮಕ್ಕಳಲ್ಲಿ ಒಬ್ಬರು ವೃತ್ತದ ಬಳಿಗೆ ನಿಲ್ಲುತ್ತಾರೆ. ವೃತ್ತದಲ್ಲಿ ಒಬ್ಬರಿಗೊಬ್ಬರು ನಿಂತು ಪರಸ್ಪರ ಕೈ ಸೇರಿಸುತ್ತಾರೆ. ಕೂಡಿದ ಕೈಗಳೊಂದಿಗೆ ವೃತ್ತಾಕಾರದಲ್ಲಿ ಎಲ್ಲರ ತಲೆಯ ಮೇಲೆ ಕೂಡಿದ ಕೈಗಳೊಡನೆ ಸುತ್ತು ಹಾಕುತ್ತಾರೆ. ಸುತ್ತು ಹಾಕುವಾಗ

ಹತ್ತಂಬಳ್ಳ ಹಲಗಿಯ ಒಡ್ಡ
ನಾಯಿಗೆ ನುಚ್ಚ ಹಾಕಲಿಲ್ಲ

ಗಿಣಿಗೆ ಬೆಲ್ಲ ತಿನಸಲಿಲ್ಲ
ಆಕಿನ ಮದುವಿ ಎಂದ ಎಂದ

ನಾಗರ ಪಂಚಮಿ ಮುಂದ ಮುಂದ
ಜೆಂಯ ಜಟಕ, ಎಣ್ಣಿ ತಟಕ, ಕಾರಬ್ಯಾಳಿ ತಟಕ

ಅಲ್ಲೊಂದ ದೆವ್ವ ಕುತ್ತಿತ್ತ ಕುತ್ತಿತ್ತ
ಅವರ ನೋಡಿ ನಗತಿತ್ತ ನಗತಿತ್ತ

ಅಪ್ಪನ ನೋಡಿ ಅಳತಿತ್ತ ಅಳತಿತ್ತ

ಎಂದು ಹೇಳುತ್ತ ಒಬ್ಬರ ಹತ್ತಿರ ಬಂದು ವೃತ್ತದ ಬಳಿಗೆ ಒಳಗಿನವಳು ಬಂದು ಸೇರಿ ಎರಡು ಕೈಗಳಿಂದ ನಿಮ್ಮಮ್ಮನ ಕೊಡ್ತಿನಿ ಕೂಂದ್ರು ಅಂತಾರೆ. ಅವಳು ಕೂಡದೆ ಇದ್ದಾಗ ಅಪ್ಪನ ಕೊಡ್ತಿನ ಕೂಡ್ರು ಎಂದು ಹೇಳುತ್ತಾರೆ. ಆವಾಗಲೂ ಕೂಡದೇ ಇದ್ದಾಗ ಅಣ್ಣನ,

ತಮ್ಮನ, ಅಕ್ಕನ ಅವರಿಗೆ ಮನೆಯಲ್ಲಿ ಇಷ್ಟವಾಗುವ ಹೆಸರು ಹೇಳಿದಾಗ ಅವಳು ಕುಳಿತುಕೊಳ್ಳುತ್ತಾಳೆ. ಹೀಗೆ ಎಲ್ಲರೂ ಕುಳಿತ ಮೇಲೆ ಒಬ್ಬೊಬ್ಬರಾಗಿ ಅವಳ ರಟ್ಟೆಯಲ್ಲಿ ಆ ಕಡೆ ಈ ಕಡೆ ಒಳಗಡೆ ಹೊರಗಡೆ ಇರುವರು ಒಬ್ಬಳ ಕುಳಿತವಳ ಎರಡೂ ರಟ್ಟೆಗಳನ್ನು ಹಿಡಿದುಕೊಂಡು ಜೋಕಾಲಿಯಾಡಿಸುವರು. ಜೋಕಾಲಿ ಆಡಿಸುತ್ತ ಬೀಸಲೋ ಅಥವಾ ಕುಟ್ಟಲೋ ಅಂತ ಕೇಳುತ್ತಾರೆ. ಆವಾಗ ಬೀಸುವಾಗ ಬೀಸು ಎಂದರೆ ಜೋಕಾಲಿ ಆಡಿಸಬೇಕು, ಕುಟ್ಟು ಎಂದರೆ ಮೇಲೆ ಕೆಳಗೆ ಎತ್ತುವದು, ಇಳಿಸುವದು. ಇದೇ ರೀತಿ ಎಲ್ಲರನ್ನು ಮಾಡಿದ ನಂತರ ವೃತ್ತಾಕಾರವಾಗಿ ಎಲ್ಲರೂ ಕುಳಿತುಕೊಳ್ಳುತ್ತಾರೆ. ಆ ನಂತರ ವೃತ್ತದ ಒಳಗಡೆ ಹೊರಗಡೆ ಇದ್ದವರಲ್ಲಿ ಒಬ್ಬೊಬ್ಬಳು ಎಲ್ಲರ ಮುಂದೆ ಒಂದೊಂದು ಬೊಗಸೆ ಮಣ್ಣು ಹಾಕುತ್ತಾಳೆ. ಇನ್ನೊಬ್ಬಳು ತಲೆ ಮೇಲೆ ಎಷ್ಟು ಜನ ಇರುತ್ತಾರೆ ಅಷ್ಟು ಒಳಗೆ ತಂದಿರುತ್ತಾಳೆ. ನಂತರ ಅವುಗಳನ್ನು ಮಾರಾಟ ಮಡುವವಳು ಈ ರೀತಿ ತಲೆಯ ಮೇಲೆ ಹೊತ್ತು ತಿರಗುತ್ತ ಕಟ್ಟಿಗಿ ಬೇಕೆನೋ ಕಟ್ಟಿಗೆ ಎಂದು ಕೇಳುತ್ತಾಳೆ. ಕುಳಿತವರು ಎಲ್ಲರೂ ಕಟ್ಟಿಗೆ ಎಂದಾಗ ಮಾರುವವಳ ತಿಪ್ಪೆಯಲ್ಲಿ ಬಿದ್ದದ್ದು ಎನ್ನುತ್ತಾಳೆ. ಆವಾಗ ಎಲ್ಲರೂ ಥೂ ಥೂ ಎಂದು ಹೇಳುವರು. ನಂತರ ಇನ್ನೊಂದು ಸುತ್ತ ಅದೇ ರೀತಿ ಕೇಳುವಾಗ ಅಡವಿಯಿಂದ ತಂದಿದ್ದು ಎನ್ನುತ್ತಾಳೆ. ಥೂ ಥೂ ಬೇಡ ಎನ್ನುತ್ತಾರೆ. ನಂತರದ ಸುತ್ತಿಗೆ ಬಂದು ಬಂಗಾರದ ಕಟ್ಟಿಗೆ ಎಂದಾಗ ಎಲ್ಲರೂ ತೆಗೆದುಕೊಳ್ಳುತ್ತಾರೆ.

೨) ಜಿಲ್ಪಿಯಾಟ

ಈ ಆಟದಲ್ಲಿ ಚೌಕಾಕಾರದ ನೆಲದ ಹಾಸಿಗೆ, ಹಸನಾದ ಕಲ್ಲಿನ ಮೇಲೆ ಕಲ್ಲು ತುಕಡಿ ತೆಗೆದುಕೊಂಡು ಒಂದೊಂದು ಚೌಕದ ವ್ಯಾಪ್ತಿಯನ್ನು ಕಾಲಿನಿಂದ ದಾಟಿಸುತ್ತ ಹೋಗುತ್ತಾಳೆ. ಹೀಗೆ ಇವರು ತಮಗೆ ಬೇಕಾದ ಜನರು ಆಡುತ್ತ ಹೋಗುತ್ತಾರೆ.

೩) ಸರಗೇರಿ

ಇದರಲ್ಲಿ ಆರು ಜನ ಸೇರಿ ಆಟ ಆಡುತ್ತಾರೆ. ಈ ರೀತಿಯಾಗಿ ೧,೨,೩,೪ ನೇಯ ಮನೆಯಲ್ಲಿರುವ ವ್ಯಕ್ತಿಗಳು ಕಾವಲಾಗಿ ನಿಂತಿರುತ್ತಾರೆ. ಈ ಕಡೆ ವೃತ್ತದಲ್ಲಿರುವ ಆರು ಜನರಲ್ಲಿ ಒಬ್ಬರು ಬಂದು ೫-೬ನೇಯ ಮನೆಯಲ್ಲಿ ಹಾಯ್ದು ಹೊರಗಡೆ ಬಂದು ಅಲ್ಲಿರುವ ಎಲ್ಲವನ್ನು ತೆಗೆದುಕೊಳ್ಳುವರು. ಅದಕ್ಕೆ ಉಪ್ಪು ಎಂದು ಕರೆಯುತ್ತಾರೆ. ಆ ಉಪ್ಪನ್ನು ತೆಗೆದುಕೊಂಡು ಅದೇ ೫-೬ನೇಯ ಮನೆಯಿಂದ ಹಾಯ್ದು ಮರಳಿ ತನ್ನ ಮನೆಗೆ ಹೋದರೆ ಒಂದು ಉಪ್ಪು (ಪಾಯಿಂಟ) ಚೌಕಾದ ಮನೆಯವರ ಮೇಲೆ ಹೀಗೆ ೬ ಜನ ದಾಟುವ ಸಂದರ್ಭದಲ್ಲಿ ಆರು ಜನರಿಗೆ ಮುಟ್ಟದೇ ಇದ್ದರೆ ಅವರು ಔಟ ಆದ ಹಾಗೆ. ಔಟ ಆದರೆ ಹೊರಗಡೆ ಇರುವವರು ಮನೆಯಲ್ಲಿ, ಮನೆಯಲ್ಲಿರುವವರು ಹೊರಗಡೆ ಹೋಗಬೇಕು.

೪) ಅಂಡ್ಯಾಳ

ಇದರಲ್ಲಿ ಇಬ್ಬರು ಹೆಣ್ಣು ಮಕ್ಕಳ ಸೇರಿ ಕೈಯಲ್ಲಿನ ಹರಳುಗಳನ್ನು ಮೇಲೆ ಹಾರಿಸಿ ಎಲ್ಲವನ್ನು ಕೆಳಗೆ ಹಾಕುತ್ತಾಳೆ. ಎದುಗೆ ಕುಳಿತವಳು ಒಂದು ಹಳ್ಳ ಎಂದರೆ ಒಂದನ್ನು ಮೇಲೆ ಹಾರಿಸಿ ಇನ್ನೊಂದನ್ನು ಕೆಳಗಡೆ ಕೈಯಲ್ಲಿ ತೆಗೆದುಕೊಳ್ಳುತ್ತಾರೆ. ಎಲ್ಲ ೫ ಒಂದೊಂದು ಮೇಲೆ ಮರಳಿ ಎಲ್ಲ ಹರಳುಗಳನ್ನು ಹಾರಿಸಿ ಕೆಳಗಡೆ ಹಾಕಿ ಎರಡರಂತೆ, ಮೂರರರಂತೆ,

ನಾಲ್ಕರಂತೆ ಕೊನೆಗೆ ಒಮ್ಮೆಲೆ ೫ ಹರಳುಗಳನ್ನೂ ಕೈಯಲ್ಲಿ ತೆಗೆದುಕೊಂಡು ಅಕ್ಕ ಹಳ್ಳ ಎಂದಾಗ ಗೋಪಟ್ಟು ಎಂದು ಆಡುವರು. ಕಲಾತ್ಮಕತೆಯಿಂದ ಕೂಡಿದ್ದು ಹರಳುಗಳನ್ನು ಮೇಲಕ್ಕೆ ಹಾರಿಸಿ ಕೆಳಗಡೆ ತೆಗೆದುಕೊಳ್ಳುವಾಗ ಕೈಗಳು ಒಂದಕ್ಕೊಂದು ಸೇರಬಾರದು, ಸೇರಿದರೆ ಔಟ.

೫) ಒಡ್ಡಿ

ನಾಲ್ಕು ಹಳ್ಳಗಳನ್ನು ಸೇರಿಸಿದರೆ ಒಂದು ಒಡ್ಡಿ, ಇದರಂತೆ ಹತ್ತು ಗುಂಪು ಸೇರಿಸಿ ಇಬ್ಬರೂ ಅಥವಾ ನಾಲ್ಕು ಜನ ಸೇರಿ ಪಕ್ಷ ಕಟ್ಟಿಕೊಳ್ಳುತ್ತಾರೆ. ಒಂದು ವೇಳೆ ಹಳ್ಳ (ಕಲ್ಲು) ತೆಗೆದುಕೊಂಡು ಮೇಲೆ ಹಾರಿಸುತ್ತ ಎಲ್ಲ ಗುಂಪುಗಳನ್ನು ಸರಿಯಾಗಿ ಗೆದ್ದವರ ಪಕ್ಷದ ಹತ್ತು ಒಡ್ಡ (ಗುಂಪು)ಗಳನ್ನು ಜಯಿಸಬೇಕು.

೬) ಹುಲಿ ನರಿ ಆಟ

ಸುಮಾರು ಹತ್ತಿಪ್ಪತ್ತು ಜನ ಹೆಣ್ಣು ಮಕ್ಕಳು ಸೇರಿ ಕೈಯಲ್ಲಿ ಕೈ ಸೇರಿಸಿ ವೃತ್ತಾಕಾರವಾಗಿ ಸೇರಿಕೊಂಡು ಒಬ್ಬರು ನರಿಯಾಗಿ ವೃತ್ತದ ಒಳಗೆ ಹುಲಿಯಾಗಿ ಇನ್ನೊಬ್ಬಳು ವೃತ್ತದ ಹೊರಗೆ ಹುಲಿ ನರಿಯನ್ನು ಭೇಟಿ ಮಾಡಲು ಬರುವುದು. ಎಲ್ಲರೂ ಹುಲಿಯಿಂದ ನರಿಯನ್ನು ರಕ್ಷಣೆ ಮಾಡುವದು. ಒಂದು ವೇಳೆ ಹುಲಿ ನರಿಯನ್ನು ಹಿಡಿದರೆ ನರಿ ಪಕ್ಷ ಸೋತಂತೆ.

೭) ಜನೇವರಿ-ಫೆಬ್ರುವರಿ

ಸಾಮಾನ್ಯವಾಗಿ ಕನಿಷ್ಠ ೧೪ ಜನರಾದರೂ ಬೇಕು. ಇಬ್ಬರು ವಿರುದ್ಧ ದಿಕ್ಕಿನಲ್ಲಿ ಕೈ ಕೈ ಸೇರಿಸಿ ಇಬ್ಬರ ಮಧ್ಯ ಸ್ಥಳಾವಕಾಶ ಮಾಡಬೇಕು. ಆಗ ಇನ್ನುಳಿದವರು ಒಬ್ಬರ ಹಿಂದೆ ಬಿಟ್ಟಿರುವಂತೆ ಸಾಲಾಗಿ ಆ ಇಬ್ಬರ ಮಧ್ಯದ ಕೈಗಳ ನಡುವಿನಿಂದ ಹಾಯ್ದು ಹೋಗುತ್ತಿರುವಾಗ ಇಬ್ಬರು ಜನೇವರಿಯಿಂದ ಡಿಸೆಂಬರವರೆಗೆ ಹೇಳುತ್ತ ಹೋಗುತ್ತಿರುತ್ತಾರೆ. ನಿಂತಿರುವ ಇಬ್ಬರು ತಮ್ಮದೇಯಾದ ಸ್ವಂತ ಹೂವಿನ ಹೆಸರು ಅಥವಾ ಮರದ ಹೆಸರು ಯಾವುದೇ ವಸ್ತುವಿನ ಹೆಸರನ್ನು ಇಟ್ಟುಕೊಂಡಿರುತ್ತಾರೆ. ಉದಾ: ಒಬ್ಬಳು ಗುಲಾಬಿ ಇನ್ನೊಬ್ಬಳು ಕಮಲ ನಂತರ ಡಿಸೆಂಬರ ಎಂದು ಹೇಳುವಾಗ ಬಂದ ವ್ಯಕ್ತಿಯನ್ನು ಇಬ್ಬರೂ ಸೇರಿ ದೂರಕ್ಕೆ ಕರೆದುಕೊಂಡು ಹೋಗಿ ಗುಲಾಬಿ ಬೇಕೋ ಕಮಲ ಬೇಕೋ ಎಂದು ಕೇಳುವರು. ಆಗ ಯಾವ ಹೂವಿನ ಹೆಸರನ್ನು ಹೇಳುತ್ತಾರೆ ಆ ಪಕ್ಷಕ್ಕೆ ಅವರು ಸೇರುತ್ತಾರೆ. ಹೀಗೆ ಕೇಳುತ್ತ ಒಂದು ಗೆರೆಯನ್ನು ಹಾಕಿ ಗುಲಾಬಿ ಪಕ್ಷ ಒಂದು ಕಡೆ, ಕಮಲದ ಪಕ್ಷ ಇನ್ನೊಂದು ಕಡೆ ಸೇರುತ್ತಾರೆ. ನಂತರ ಎರಡನೆಯವಳು ಮೂರನೆಯವಳು ಕೊನೆಯ ವ್ಯಕ್ತಿಯವರೆಗೂ ಡಿಸೆಂಬರ ಹೇಳುತ್ತ ಆ ಎಲ್ಲರ ಆಯ್ಕೆಯಾದ ಮೇಲೆ ಪರಸ್ಪರ ವಿರುದ್ಧ ಪಕ್ಷ ಅಂದರೆ ಕಮಲ ಮತ್ತು ಗುಲಾಬಿ ಎರಡು ಪಕ್ಷ ಕೈಹಿಡಿದುಕೊಂಡು ಪರಸ್ಪರ ಜಗ್ಗುತ್ತಾರೆ. ಆಗ ಸ್ವಾಭಾವಿಕವಾಗಿ ಕಡಿಮೆ ಇರುವ ವ್ಯಕ್ತಿಯ ಪಕ್ಷದ ಜನ ಹೆಚ್ಚು ಜನೇವರಿ ಇರುವ ಪಕ್ಷದ ಸೆಳೆತಕ್ಕೆ ಸೇರುತ್ತಾರೆ. ಹೀಗೆ ಆಟ ಸಾಗುತ್ತದೆ.

೮) ಚೀಟಿ ಆಡುವದು

ಸಾಮಾನ್ಯವಾಗಿ ನಾಲ್ಕು ಜನ ಸೇರಿ ಈ ಆಟವನ್ನು ಆಡುತ್ತಾರೆ. ಪ್ರತಿಯೊಬ್ಬರು ೪

ರಂತೆ ೪ ಜನ ೧೬ ಖಾಲಿ ಚೀಟಿಯನ್ನು ಹಾಕುತ್ತಾರೆ. ಒಬ್ಬರು ಹಾಕುವ ೪ ಚೀಟಿಯಲ್ಲಿ ಒಂದೇ ರೀತಿ ಒಂದೊಂದು ರೀತಿಯ ಹೆಸರನ್ನು ಅಥವಾ ಒಂದು ಹೂವಿನ ಹೆಸರನ್ನು ಬರೆಯುವರು. ಅಂದರೆ ನಾಲ್ಕು ಜನ ೪ ತರಹದ ಹೆಸರನ್ನು ಬರೆದಿರುತ್ತಾರೆ. ನಂತರ ಹದಿನಾರು ಚೀಟಿಗಳನ್ನು ಮೇಲಕ್ಕೆ ಹಾರಿಸುತ್ತಾರೆ. ನಂತರ ಪ್ರತಿಯೊಬ್ಬರು ೪ ಚೀಟಿಗಳನ್ನು ಆಯ್ದುಕೊಳ್ಳುತ್ತಾರೆ. ನಂತರ ತೆಗೆದು ಓದುವಾಗ ಎಲ್ಲವೂ ಒಂದೇ ರೀತಿಯ ಹೆಸರುಗಳು ಯಾರಿಗೆ ಬಂದಿರುತ್ತದೋ ಅವರು ಮೊದಲ ವಿಜಯಿಗಳು. ಅಂದರೆ ಅವರಿಗೆ ಸಾವಿರ ಅಂಕಗಳು, ಒಂದು ವೇಳೆ ೩ ಒಂದೇ ತರದ ಹೆಸರುಗಳು ಬರದಿದ್ದರೆ ಮುಂದಿನವರಿಗೆ ಆ ಚೀಟಿಯನ್ನು ಕೊಡುತ್ತಾರೆ. ಅವರು ತಮಗೆ ಬೇಕಾಗಿದ್ದರೆ ತಾವು ತೆಗೆದುಕೊಳ್ಳುತ್ತಾರೆ ಇಲ್ಲದಿದ್ದರೆ ಪ್ರತಿಯೊಬ್ಬರು ಮುಂದಿನವರಿಗೆ ಕೊಡುತ್ತ ಹೋದಾಗ ಯಾರಿಗೆ ಮೊದಲು ಒಂದೇ ರೀತಿಯ ೪ ಹೆಸರು ಸೇರುತ್ತವೆಯೋ ಅವರಿಗೆ ೧೦೦೦ ಅಂಕ, ಎರಡನೆಯದಾಗಿ ಬಂದವರಿಗೆ ೯೦೦ ಅಂಕ, ಮೂರನೆಯದವರಾಗಿ ೮೦೦, ನಾಲ್ಕನೆಯದವರಿಗೆ ಮೂರು ಸೊನ್ನೆ ಹೀಗೆ ತಮಗೆ ಸಾಕಾಗುವಷ್ಟು ಬಾರಿ ಆಡಿ ಪ್ರತಿ ಆಟದಲ್ಲಿ ತಾವು ಗಳಿಸಿರುವ ಅಂಕವನ್ನು ತಮ್ಮ ಹೆಸರಿನ ಮುಂದೆ ಪಟ್ಟಿ ಮಾಡುತ್ತ ಹೋಗಿ ಕೊನೆಗೆ ಲೆಕ್ಕ ಮಾಡಿ ಕೂಡಿಸುತ್ತಾರೆ. ಯಾರಿಗೆ ಹೆಚ್ಚು ಅಂಕ ಬರುತ್ತದೆಯೋ ಅವರಿಗೆ ಬಂಗಾರ, ನಂತರದ ಸ್ಥಾನದವರಿಗೆ ಬೆಳ್ಳಿ, ೩ನೆಯ ಸ್ಥಾನ ಹಿತ್ತಾಳೆ, ೪ನೆಯ ಸ್ಥಾನ ಕಬ್ಬಿಣ ಹೀಗೆ ಸ್ಥಾನ ಕೊಡುತ್ತಾರೆ.

೯) ಕೈಕೂಡಿಸುವ ಆಟ

ಈ ಆಟದಲ್ಲಿ ಆರು ಜನ ಸೇರುತ್ತಾರೆ. ಕೈ ಚಕಾಯಿಸುವದು ಅಂದರೆ ಬೆಸ ಸಂಖ್ಯೆ ಜನ ಸೇರಿ ಒಬ್ಬೊಬ್ಬರಂತೆ ಪಾರಾಗುವ ಉಪಾಯ. ಆ ಮೇಲೆ ಯಾರೋ ಒಬ್ಬರು ಇನ್ನೊಂದು ತಂಡದ ೫ ಜನರ ಬೆನ್ನ ತಟ್ಟಿ ಮುಟ್ಟಲು ಬರುತ್ತಾಳೆ. ಆಗ ತಲಾ ಇಬ್ಬರು ಕೈ ಸೇರುತ್ತಾರೆ. ಅವರಲ್ಲಿ ೪ ಜನ ಎರಡು ಗುಂಪುಗಳಂತೆ ಸೇರಿದಾಗ ಒಬ್ಬಳು ಮಾತ್ರ ಉಳಿಯುತ್ತಾಳೆ. ಅವಳನ್ನು ಬೆನ್ನಟ್ಟಿ ಮುಟ್ಟುತ್ತಾಳೆ. ಆಗ ಇನ್ನುಳಿದವರು ಹೋಗಿ ಅವಳಿಗೆ ಕೈ ಸೇರಿಸುತ್ತಾಳೆ. ಹೀಗೆ ಹೋಗುವಾಗ ಬೆಸ ಸಂಖ್ಯೆಯಲ್ಲಿ ಉಳಿದವರನ್ನು ಮುಟ್ಟುವವರೆಗೆ ಅವರು ಸೋತಂತೆ. ಪುನಃ ಅವರು ಉಳಿದವರನ್ನು ಮುಟ್ಟಲು ಹೋಗಬೇಕು.

೧೦) ಕುತ್ತ ಕುತ್ತ ಕೋತಂಬರಿ

ಸುಮಾರು ಜನ ಹೆಣ್ಣು ಮಕ್ಕಳು ಸೇರುತ್ತಾರೆ. ಒಬ್ಬಳು ಅವರಲ್ಲಿ ಇನ್ನುಳಿದವರನ್ನು ಮುಟ್ಟಲು ಹೋಗಿ ಒಬ್ಬರ ತಲೆಯನ್ನು ಮುಟ್ಟುತ್ತ ಕುತ್ತ ಕುತ್ತ ಕೋತಂಬರಿ ಎನ್ನುತ್ತಾಳೆ. ಆಗ ಯಾರ ತಲೆ ಮುಟ್ಟುತ್ತಾಳೋ ಅವಳು ಕೆಳಗಡೆ ಕುಳಿತುಕೊಳ್ಳಬೇಕು. ಆಗ ಇನ್ನುಳಿದವರಲ್ಲಿ ಯಾರಾದರೂ ಒಬ್ಬರು ಒಂದು ಕುಳಿತವಳನ್ನು ಮುಟ್ಟಬೇಕು. ಆಗ ಅವಳು ಕುಳಿತಲ್ಲಿಂದ ಮೇಲಕ್ಕೆ ಎಳೆಯುತ್ತಾಳೆ. ಆದರೆ ಹಾಗೆ ಅವಳನ್ನು ಎಬ್ಬಿಸಲು ಬಂದವಳನ್ನು ಮೊದಲು ಮುಟ್ಟುತ್ತಿರುವವಳು ಮುಟ್ಟುವ ಪ್ರಯತ್ನ ಮಾಡುತ್ತಾಳೆ. ಒಂದು ವೇಳೆ ಮುಟ್ಟಿದರೆ ಅವಳು ಸೋತಂತೆ. ಹೀಗೆ ಆಟ ಸಾಗುತ್ತದೆ.

೧೧) ಕಲರ್ ಕಲರ್ ವಾಚ್ ಕಲರ್

ಒಂದು ಪಕ್ಷ, ಎರಡು ಪಕ್ಷಗಳಾಗಿ ಮಕ್ಕಳು ಗುಂಪು ಸೇರುತ್ತಾರೆ. ಕೆಲವು ಜನರು ಸಾಲಾಗಿ ಕುಳಿತುಕೊಳ್ಳುತ್ತಾರೆ. ಇನ್ನೊಂದು ಪಕ್ಷದವರು ತಮ್ಮಲ್ಲಿ ಒಂದು ಹೂವಿನ ಹೆಸರನ್ನು

ನಿಶ್ಚಯಿಸಿಕೊಂಡಿರುತ್ತಾರೆ. ನಂತರ ಬಂದು ಕುಳಿತ ವ್ಯಕ್ತಿಗಳಿಗೆ ಕಲರ್ ಕಲರ್ ವಾಚ್ ಕಲರ್ ಎಂದು ಹೇಳುತ್ತಾರೆ. ಆಗ ಕುಳಿತವರು ಹೂವೊ ಅಥವಾ ಗಿಡವೊ ಎಂದು ವಿಭಾಗದ ಕುರಿತು ವಿಚಾರಿಸುತ್ತಾರೆ. ಉದಾ: ಆಗ ಇವರು ಹೂವೆಂದು ಹೇಳುತ್ತಾರೆ. ಅವರು ಹೂಗಳ ಹೆಸರನ್ನು ಹೇಳುತ್ತ ಹೋಗುತ್ತಾರೆ. ತಾವು ನಿಶ್ಚಯಿಸಿಕೊಂಡ ಹೂವಿನ ಹೆಸರು ಇವರ ಬಾಯಿಂದ ಬಂದ ತಕ್ಷಣ ಹೂವಿನ ಹೆಸರು ನಿಶ್ಚಯಿಸಿಕೊಂಡವರು ಬಾಡಿ ಹೋಗುತ್ತಾರೆ. ಹೆಸರು ಹೇಳಿದವರು ಬೆನ್ನಟ್ಟಿ ಒಬ್ಬರನ್ನು ಮುಟ್ಟಿದರೆ ಅವರು ಸೋತಂತೆ.[೪]

ಪ್ರಾಣಿ ಸಂಬಂಧಿ ಆಟಗಳು

ಎಷ್ಟೋ ವೇಳೆ ಜನಪದರು ಪ್ರಾಣಿಗಳ ಮುಖಾಂತರವೂ ತಮ್ಮ ಕ್ರೀಡಾಸಕ್ತಿಯನ್ನು ಮೆರೆದಿದ್ದಾರೆ. ತಮ್ಮ ಒಡನಾಟದ ಪ್ರಾಣಿಗಳೆಂದರೆ ತಮ್ಮ ಬದುಕಿನ ಅವಿಭಾಜ್ಯ ಅಂಗವೆಂದೇ ಜನಪದರು ಭಾವಿಸಿದ್ದರು.

ಉತ್ತರ ಕರ್ನಾಟಕದಾದ್ಯಂತ ಪ್ರಚಲಿತವಿರುವಂತೆ ಕೊಟ್ಬಲಗಿ ಗ್ರಾಮದಲ್ಲೂ ಕಾರಹುಣ್ಣಿಮೆ ಸಂದರ್ಭದಲ್ಲಿ 'ಕರಿಹರಿಯುವ' ಆಚರಣೆ ನಡೆಯುತ್ತದೆ. ಕರಿ, ಬಿಳಿ ಅಥವಾ ಕೆಂಪು ಎರಡು ಎತ್ತುಗಳ ಸ್ಪರ್ಧೆ ನಡೆಯುವದುಂಟು. ಬಿಳಿ ಎತ್ತು ಮೊದಲು ಬಂದರೆ ಬಿಳಿ ಜೋಳದ ಬೆಳೆ ಚೆನ್ನಾಗಿ ಬರುತ್ತದೆ, ಕೆಂಪು ಎತ್ತು ಬಂದರೆ ಮುಂಗಾರಿ ಚೆನ್ನಾಗಿ ಬರುತ್ತದೆಂಬ ನಂಬಿಕೆ ಇದೆ.

ನೇಗಿಲ ಸ್ಪರ್ಧೆಯಲ್ಲಿ ಎಂಟೆತ್ತಿನ ಗಳೆ, ಎರಡೆ ಎತ್ತುಗಳು ಎಳೆಯುವದು. ಯಾವ ಎತ್ತುಗಳ ಹೆಚ್ಚು ಚೀಲ ಹೇರಿ ಗಾಡಿ ಎಳೆಯುತ್ತವೋ ಮುಂತಾದ ಸ್ಪರ್ಧೆಗಳು ನಡೆಯುತ್ತವೆ.

ಗ್ರಾಮದ ಹಿರಿಯರು ಹೇಳುವಂತೆ ಹಿಂದೆ ಕರಡಿ ಆಡಿಸುವವರು ಬಂದಾಗ ಕರಡಿ ಜೊತೆ ಕುಸ್ತಿ ಪಂದ್ಯ ನಡೆಯುತ್ತಿತ್ತಂತೆ. ಇಂತಹ ಸ್ಪರ್ಧೆಯಲ್ಲಿ ಶ್ರೀ ಸಿದ್ದಪ್ಪ ರೇವಣಸಿದ್ದಪ್ಪ ದೊಡ್ಡನಿಂಗಪ್ಪಗೋಳ ಕರಡಿ ಜೊತೆ ಕುಸ್ತಿ ಆಡಿ ಗೆದ್ದ ವಿಷಯ ಜ್ಞಾಪಿಸುತ್ತಾರೆ.[೫]

ಹೀಗೆ ಗ್ರಾಮವು ವಿವಿಧ ಜನಪದ ಕ್ರೀಡೆಗಳೊಂದಿಗೆ ಶ್ರೀಮಂತ ಸಂಸ್ಕೃತಿಯನ್ನು ಹೊಂದಿದೆ. ಗ್ರಾಮದ ಜನಪದ ಆಟಗಳು ಜನಪದ ಸಂಸ್ಕೃತಿಯ ಪಡಿಯಚ್ಚುಗಳೆಂದರೂ ತಪ್ಪಾಗಲಾರದು.

೩.೧೧. ಜನಪದ ಕಲೆಗಳು ಮತ್ತು ಕಲಾವಿದರು

ಮನುಷ್ಯನ ಸಾಂಸ್ಕೃತಿಕ ಚರಿತ್ರೆಯನ್ನು ತಿಳಿಸುವ ಪಾಮರದ ಪ್ರತಿಭೆಯ ಫಲ ಜನಪದ ಕಲೆಗಳು. ಗ್ರಾಮೀಣ ಜನಪದರ ಬದುಕಿಗೆ ಅವಿಭಾಜ್ಯ ಅಂಗವಾದ ಈ ಕಲೆಗಳು ಮನೋರಂಜನೆಗೆ ಮಾತ್ರವೇ ಮೀಸಲಾಗಿರದೆ ಮನಸ್ಸಿನ ಉನ್ನತಿಯನ್ನು ಸಾಧಿಸಲು ಸಹ ಸಹಕಾರಿಯಾಗಿವೆ. ಜನಪದ ಕಲೆಗಳು ಗ್ರಾಮ ಜೀವನದ ಉಸಿರು, ಚೈತನ್ಯದ ಚಿಲುಮೆಗಳಾಗಿವೆ.

ಕೊಟ್ಬಲಗಿ ಗ್ರಾಮದಲ್ಲಿ ವಿವಿಧ ಜನಪದ ಕಲೆಗಳಿವೆ.

೧. ಕುದುರೆ ಕುಣಿತ

೨. ಭಜನಾ ಮೇಳ

೩. ಗೀ ಗೀ ಮೇಳ

೪. ಡೊಳ್ಳ ಮೇಳ

೫. ಚೌಡಿಕೆ ಮೇಳ ಹೀಗೆ ವಿವಿಧ ಸಂಘಗಳಿವೆ. ಸಂಘಗಳನ್ನು ಸಂದರ್ಶಿಸಿದಾಗ ಕೊಟ್ಬಲಗಿ ಗ್ರಾಮದಲ್ಲಿ ದೊರೆತ ಜನಪದ ಕಲೆಗಳು ಈ ರೀತಿಯಾಗಿವೆ.

ಕುದುರೆ ಕುಣಿತ: ಹುಟ್ಟು ಸಾವುಗಳ ಮಧ್ಯದಲ್ಲಿ ಮಾನವ ಬದುಕು ಅರಳುತ್ತದೆ. ಸಾಧ್ಯವಾದಷ್ಟು ಬದುಕನ್ನು ಆನಂದೋತ್ಸಾಹಗಳಿಗೆ ಒಗ್ಗಿಸಿಕೊಂಡು ಹಗುರ ಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ಇದಕ್ಕೆ ಅನೇಕ ಮಾಧ್ಯಮಗಳನ್ನು ಹುಡುಕಿಕೊಳ್ಳುತ್ತಾನೆ. ಇವುಗಳಲ್ಲಿ ಕುಣಿತವು ಒಂದು. ಮೊದಮೊದಲು ಸಂತೋಷವಾದಾಗಲೆಲ್ಲ ಸಿಕ್ಕಾಪಟ್ಟೆ ಮಕ್ಕಳಂತೆ ಕುಣಿಯುತ್ತಿದ್ದ ಮನುಷ್ಯ, ಕ್ರಮೇಣ ಈ ಕುಣಿತವನ್ನೇ ತಾಳ ಲಯಗಳಿಗೆ ಹೊಂದಿಸಿಕೊಂಡು ಕಲೆಯನ್ನಾಗಿಸಿದ. ಕುಣಿತ ಒಮ್ಮೆ ಕಲೆಯಾದ ಬಳಿಕ ಇದರ ಅಭಿವ್ಯಕ್ತಿಗೆ ನಿಶ್ಚಿತ ಕಾಲ ಸ್ಥಳ ಗೊತ್ತಾದವು. ಇಂದಿನ ಎಲ್ಲಾ ಬಗೆಗಳ ಶಾಸ್ತ್ರೀಯ ನೃತ್ಯಗಳಿಗೆ ಜನಪದ ಕುಣಿತಗಳೇ ಮೂಲವಾಗಿವೆ.

ಉತ್ತರ ಕರ್ನಾಟಕದಲ್ಲಿ ಅನೇಕ ಬಗೆಯ ಕುಣಿತಗಳಿವೆ. ಪುರವಂತಿಕೆ ಕುಣಿತ, ಕುದುರೆ ಕುಣಿತ, ಜೋಗತಿ ಕುಣಿತ, ಡೊಳ್ಳು ಕುಣಿತ, ದಡ್ಡಿ ಕುಣಿತ ಮೊದಲಾದವು ಇಲ್ಲಿ ಪ್ರಸಿದ್ಧವಾದವು.

ಪ್ರಸ್ತುತ ಕೊಟ್ಬಲಗಿ ಗ್ರಾಮದಲ್ಲಿರುವ ಕುದುರೆ ಕುಣಿತದ ಕುರಿತು ವಿವೇಚಿಸುವದು ಇಲ್ಲಿಯ ಮುಖ್ಯ ಉದ್ದೇಶವಾಗಿದೆ. ಗ್ರಾಮದಲ್ಲಿ ಕುದುರೆ ಕುಣಿತದ ಕಲಾವಿದರಿದ್ದು ಇದು ಗ್ರಾಮದಲ್ಲಿ ಸಾಕಷ್ಟು ಚಿರಪರಿಚಿತ. ಗ್ರಾಮದ ಜನಪದರು ಕುದರಿ ಸೊಂಗ,'ನವಿಲು ಸೊಂಗ'ಎಂದು ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ. ದೇವರ ಜಾತ್ರೆ, ಮೊಹರಂ ಆಚರಣೆ ಮುಂತಾದ ವಿಶೇಷ ಪ್ರಸಂಗಗಳಲ್ಲಿ ಈ ಕಲೆಯನ್ನು ಪ್ರಸ್ತುತಪಡಿಸುತ್ತಾರೆ. ಎರಡು ಕುದುರೆ, ಒಂದು ನವಿಲು ಈ ಕಲೆಯಲ್ಲಿ ಇರುತ್ತದೆ. ಕುದುರೆ ಕುಣಿತದಲ್ಲಿ ಹಲಗೆ ವಾದ್ಯ, ತಾಳಗಳು ಬೇಕು. ಇವುಗಳೊಂದಿಗೆ ಡಗ್ಗಾ"ಎನ್ನುವ ಸಹ ವಾದ್ಯ ಇರುತ್ತದೆ. ಇವರಿಗೆ ಸಹಾಯಕರಾಗಿ ಸುತಿ ಮತ್ತು ಶಹನಾಯಿ ವಾದ್ಯಗಳು ಇರುತ್ತವೆ. ಮಧ್ಯದಲ್ಲಿ ಹಲಗೆ ಮಜಲಿನವರು ಇರುತ್ತಾರೆ. ಕುದುರೆಗಳು ಮಂಡಲಾಕಾರವಾಗಿ ಎದುರು ಬದುರಾಗಿ ಕುಣಿಯುತ್ತವೆ. ಹಲಗಿ ಮಜಲಿನ ಗತ್ತು ಬೇರೆ ಬೇರೆಯಾಗಿರುತ್ತದೆ. ಜಡ್ಡಿ ಜಡ್ಡಿ ಪಂಗ, ಜಡ್ಡಿ ಜಡೆಟ್ಟಪಂಗ ಎಂಬುದು ಒಂದು ರೀತಿಯದಾದರೆ, ಜೆಡ್ಡಿ ಪಂಗ ಪಂಪ ಪಂಗ ಪಂಗ ಪಂಗ ಪಂಗ ನಕ್ ಎಂಬುದು ಇನ್ನೊಂದು ರೀತಿ. ಕಾಲುಗಳಿಗೆ ಮರಗಾಲು ಕಟ್ಟಿಕೊಂಡು ಹಲಗೆ ಬಾರಿಸುವವರ ಗತ್ತಿಗನುಗುಣವಾಗಿ ಸೋಗುದಾರಿಗಳು ಕುಣಿಯುತ್ತಾರೆ. ನೋಡುಗರಿಗೆ ಮನರಂಜನೆಯ ಜೊತೆಗೆ ಮರಗಾಲು ಕಟ್ಟಕೊಂಡು ನಡೆಯುವದು ಆಶ್ಚರ್ಯವನ್ನುಂಟುಮಾಡುತ್ತದೆ. ಇದು ತರಬೇತಿಯಿಂದ, ಸ್ವ ಪ್ರಯತ್ನದಿಂದ ಸಿದ್ದಿಸುವಂಥದು. ಮರಗಾಲು ಇಲ್ಲದಿದ್ದರೆ ಈ ಕುಣಿತಕ್ಕೆ ಅಷ್ಟಾಗಿ ಆಕರ್ಷಣೆ ಕಂಡುಬರುವದಿಲ್ಲ. ಗ್ರಾಮದ ಮೊಹರಂ ಸಂದರ್ಭದಲ್ಲಿ ವಿಶೇಷವಾಗಿ ಈ ಕಲೆ ಪ್ರದರ್ಶನಗೊಳ್ಳುತ್ತದೆ.

ಭಜನೆ: ದೇವರ ಸ್ತುತಿ ಮತ್ತು ಸ್ತೋತ್ರ ರೂಪವಾದ ಹಾಡುಗಳನ್ನು ಭಜನೆ ಎನ್ನಬಹುದು. ಭಜೆ ಎಂಬುದು ದೇವರಿಗೆ ಸಲ್ಲಿಸುವ ಒಂದು ಬಗೆಯ ಸೇವೆಯು ಆಗಿದೆ. ದೇವರನ್ನು ಗುಂಪಾಗಿ ಸ್ತುತಿಸುವ ಕ್ರಮವೇ ಭಜನೆ ಆಗಿದೆ.

ಪ್ರತಿಯೊಂದು ಆರಾಧನಾ ಕಲೆಗಳಿಗೂ ಸಾಹಿತ್ಯ ಪರಂಪರೆಯೊಂದಿರುವಂತೆ ಭಜನೆ ಸಂಪ್ರದಾಯಕ್ಕೂ ಸಾಹಿತ್ಯ ಪರಂಪರೆಯಿದೆ. ಮಧ್ಯಕಾಲೀನ ಭಕ್ತಿ ಪಂಥದ ಪರಂಪರೆಯೇ ಭಜನೆಗೆ ಹಿನ್ನೆಲೆಯಾಗಿದೆ. ಅಷ್ಟೆ ಅಲ್ಲದೇ ದಾಸ ಸಾಹಿತ್ಯದ ನೇತಾರರೂ ಇದೇ ಪರಂಪರೆಯಲ್ಲಿ ಬರುತ್ತಾರೆ. ಇತ್ತೀಚಿನ ದಿನಗಳಲ್ಲಿ ಭಜನೆಯನ್ನು ಜನಪದ ಪರಂಪರೆಗೆ ತಂದು ನಿಲ್ಲಿಸಿದ ಅನೇಕ ಹಿರಿಯ ಕವಿಗಳು ಇಲ್ಲಿ ಆಗಿಹೋಗಿದ್ದಾರೆ. ಕಲಬುರ್ಗಿಯ ಶರಣಬಸಪ್ಪ, ಕಡಕೋಳ ಮಡಿವಾಳಪ್ಪ, ಶಿಸುನಾಳ ಶರೀಫ, ಕಲಬುರ್ಗಿಯ ಕೂಡಲೂರು ಬಸವಲಿಂಗ, ಬಿಜಾಪೂರದ ಸಾರವಾಡ ಚಿಕ್ಕಯ್ಯಪ್ಪ ಇವರೆಲ್ಲ ಉತ್ತರ ಕರ್ನಾಟಕದಲ್ಲಿ ಭಜನೆ ಸಂಪ್ರದಾಯವನ್ನು ಹಿರಿದಾಗಿ ಬೆಳೆಸಿದವರು.[೬]

ಪ್ರಸ್ತುತ ಕೊಟ್ಟಲಗಿ ಗ್ರಾಮದ ಭಜನೆ ಮೇಳಗಳನ್ನು ಗಮನಿಸಿದಾಗ ಭಜನೆಯ ಪದಗಳನ್ನು ಅನುಭಾವ ಪದಗಳೆಂದು, ತತ್ವ ಪದಗಳೆಂದೂ ಕರೆಯುವ ರೂಢಿ. ವಿಶೇಷವಾಗಿ ವೀರಶೈವ ಸಿದ್ಧಾಂತವನ್ನು ಹಿನ್ನೆಲೆಯಾಗಿಟ್ಟುಕೊಂಡು ಹಾಡಿನ ಸಾಹಿತ್ಯವೊಂದು ನಿಜಗುಣರಿಂದೀಚೆಗೆ ಗ್ರಂಥಸ್ಥವಾಯಿತಾದರೂ, ಸಂಪ್ರದಾಯ ವಿಶೇಷವಾಗಿ ನಾಲಗೆಯಲ್ಲಿ ನೆಲೆ ನಿಂತಿತು. ಬಾಯಿಂದ ಬಾಯಿಗೆ ಬೆಳೆದು ಉಳಿದು ಬಂತು. ಇದರಲ್ಲಿ ಭಕ್ತಿ, ನೀತಿ, ಸಾಹಿತ್ಯ, ಸಂಗೀತ, ಆಧ್ಯಾತ್ಮ ಪ್ರಮುಖ ಪಾತ್ರ ವಹಿಸುತ್ತವೆ. ಅದಕ್ಕಾಗಿ ಈ ಪ್ರಮುಖ ವಸ್ತುಗಳನ್ನಿಟ್ಟುಕೊಂಡು ಪ್ರಾಸ, ತಾಳ, ಲಯಬದ್ಧವಾದ ಈ ಹಾಡುಗಬ್ಬಗಳು ಬಹಳಷ್ಟು ಜನ ಜನಿತವಾದವು. ಅಲ್ಲದೇ ಈ ಭಜನೆ ಜನಪದರ ಸಾಮೂಹಿಕ ಬದುಕಿನಲ್ಲಿ ಮಹತ್ವದ ಪಾತ್ರವಹಿಸುವುದರೊಂದಿಗೆ ದೇವರ ಆರಾಧನೆ, ಜಾತ್ರೆ, ಉತ್ಸವಗಳಲ್ಲಷ್ಟೇ ಅಲ್ಲದೆ ಸತ್ತಾಗಲೂ ಭಜನೆ ಮಾಡುವ ರೂಢಿ ಇರುವುದರಿಂದ ಊರಿಗೊಂದು, ಕೇರಿಗೊಂದು ಹಲವಾರು ಭಜನಾ ಮಂಡಳಿಗಳು ಹುಟ್ಟಿಕೊಂಡವು.

ಕೊಟ್ಟಲಗಿ ಗ್ರಾಮದಲ್ಲಿ ಆರು ಭಜನಾ ಮಂಡಳಿಗಳು ಅಸ್ತಿತ್ವದಲ್ಲಿರುವುದು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಕಂಡುಬಂದಿವೆ. ಗ್ರಾಮದಲ್ಲಿರುವ ಹಾಡುಗಾರಿಕೆ, ವಾದ್ಯ, ಕಲಾವಿದರ ಗುಂಪಿನಲ್ಲಿ ಯಾವ ವ್ಯತ್ಯಾಸವೂ ಇಲ್ಲದೆ ಒಂದೇ ರೀತಿಯಾಗಿದೆ.

ಗ್ರಾಮದಲ್ಲಿ ಪ್ರಚಲಿತವಿರುವ ಸಂಘಗಳು ಹಾಗೂ ಕಲೆಯ ವಿವರಣೆ ಈ ರೀತಿಯಾಗಿದೆ.

೧. ಶ್ರೀ ಸಿದ್ಧೇಶ್ವರ ಭಜನಾ ಮಂಡಳಿ

೨. ದುರ್ಗಾದೇವಿ ಭಜನಾ ಮಂಡಳಿ

೩. ರೇಣುಕಾ ಭಜನಾ ಮಂಡಳಿ

೪. ಬಸವಾರೂಢ ಭಜನಾ ಮಂಡಳಿ

೫. ಭರಮದೇವರ ಭಜನಾ ಮಂಡಳಿ

೬. ಭೀಮಾನಂದ ಅವಧೂತ ಭಜನಾ ಮಂಡಳಿ

ಭಜನಾ ಕಲಾವಿದರ ತಂಡದ ವಿನ್ಯಾಸ ಈ ರೀತಿಯಾಗಿದೆ.

ಮುಖ್ಯ ಗಾಯಕ : ಈತನೇ ತಂಡದ ಪ್ರಮುಖ ಆಕರ್ಷಣೆ

ಸಹ ಗಾಯಕ : ಹಿನ್ನಲೆ ಗಾಯನ ಇವನ ಕಾರ್ಯ

ಹಾರ್ಮೋನಿಯಂ : ಪ್ರಮುಖ ವಾದ್ಯ

ದಮ್ಮಡಿ : ಚರ್ಮದಿಂದ ಮಾಡಿದ ವಾದ್ಯ

ತಾಳ : ಕಂಚಿನ ಅಥವಾ ಬೀಡಿನಿಂದ ನಿರ್ಮಿಸಿದ್ದು ಇರುತ್ತದೆ

ಇಲ್ಲಿ ಮುಖ್ಯ ಗಾಯಕ ಹಾಡು ಹಾಡುತ್ತಾನೆ. ಮುಖ್ಯ ಗಾಯಕನ ನಂತರ ಸಹಗಾಯಕ ಪಲ್ಲವಿ ಹಾಡುತ್ತ ಮುಖ್ಯ ಗಾಯಕನಿಗೆ ಸ್ವಲ್ಪ ಬಿಡುವ ಕೊಟ್ಟು ಸಹಕಾರಿಯಾಗುತ್ತ ಹಾಡಿನ ರೂಪವನ್ನು ಮುಂದುವರೆಸಿಕೊಂಡು ಹೋಗುತ್ತಾನೆ. ಹಾರ್ಮೋನಿಯಂ ಪ್ರಮುಖವಾದ ವಾದ್ಯವಾಗಿದ್ದು ಹಾಡಿನ ಧ್ವನಿಗೆ ಏರಿಳಿತಕ್ಕೆ ತಕ್ಕಂತೆ ಸಹಕಾರಿಯಾಗಿ ಮುಂದುವರೆದು ಸಂಗೀತದ ಮಾಧುರ್ಯವನ್ನು ತಂದುಕೊಡುತ್ತದೆ. ಎಲ್ಲ ರಾಗಗಳನ್ನು ಇದರಲ್ಲಿ ನುಡಿಸಲು ಸಾಧ್ಯವಿದೆ. ಅಲ್ಲದೇ ಕೆಲವೊಂದು ಸಂದರ್ಭದಲ್ಲಿ ದಮ್ಮಡಿ ಬಳಸಿದರೆ ಕೆಲವೊಂದು ವೇಳೆ ತಬಲಾ ಬಾರಿಸುವದು ಇಲ್ಲಿಯ ವಿಶೇಷವಾಗಿದೆ. ತಾಳ ನುಡಸಲು ಇಬ್ಬರು ಕಲಾವಿದರಿರುತ್ತಾರೆ. ಹೀಗೆ ವಿವಿಧತೆಯಲ್ಲಿ ಏಕತೆಯೆನ್ನುವಂತೆ ಎಲ್ಲರೂ ಸೇರಿದಾಗ ಸುಮಧುರವಾದ ಭಜನೆ ಹಾಡುಗಳನ್ನು ಕೇಳಲು ಸಾಧ್ಯ.

ಕೈವಲ್ಯ ಪದ್ಧತಿ ಭಜನೆ ಗ್ರಾಮದಲ್ಲಿರುವಂತೆ ಶಿವ ಭಜನೆ ಹಾಗೂ ಪಾರಿಜಾತ ಶೈಲಿ ರಚನೆಯಾಗಿರುವದು ಕೂಡ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಕಂಡುಬರುತ್ತದೆ.

ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಗ್ರಾಮದ ಜನಪದ ಭಜನೆಗಳೆಂದರೆ ಜಾತಿ ಮತಗಳನ್ನು ಮೀರಿದ ದೇಶಿಯ ಆರಾಧನಾ ಗೀತೆಗಳ ಸಂಪ್ರದಾಯ. ಅದರಲ್ಲಿ ಇಲ್ಲಿಯ ಗ್ರಾಮದೇವತೆಗಳ ಸ್ತುತಿಯೇ ಮುಖ್ಯವಾದುದು. ಛಂದಸ್ಸು ಕೂಡ ಶುದ್ಧವಾಗಿರುತ್ತದೆ. ದೇಶಿಯ ದಾಸರು ಬಳಸಿದ ಭಾಷೆ, ಛಂದಸ್ಸುಗಳ ಶಿಷ್ಟ ರೂಪವನ್ನು ಇಲ್ಲಿ ಗುರುತಿಸುವಂತಿಲ್ಲ. ಬಹುತೇಕವಾಗಿ ಅವು ಆಯಾ ಪ್ರಾದೇಶಿಕ ಭಾಷೆಯ ರೂಪವನ್ನು ಪಡೆದುಕೊಳ್ಳುತ್ತವೆ. ಹಿಂದೂ, ಮುಸಲ್ಮಾನ ಎಂಬ ಭೇದವಿಲ್ಲದೆ ಭಜನೆ ಮೇಳಗಳು ಕಂಡುಬರುತ್ತವೆ. ಹಿಂದೂಗಳು ಮುಸಲ್ಮಾನ ಧರ್ಮದ ವಿಚಾರಗಳನ್ನು, ಮುಸಲ್ಮಾನರು ಹಿಂದೂ ಧರ್ಮದ ವಿಚಾರಗಳನ್ನು ಭಜನೆಯಲ್ಲಿ ಪ್ರಸ್ತುತಪಡಿಸುವುದು ವಿಶೇಷ.[೭]

ಗ್ರಾಮದಲ್ಲಿ ಭಜನೆ ವಿವಿಧ ಸಂದರ್ಭಗಳಲ್ಲಿ ಜಾತ್ಯಾತೀತವಾಗಿ ಸಾಗುತ್ತದೆ. ಗ್ರಾಮದ ಶ್ರೀ ಸಿದ್ಧೇಶ್ವರ ಗುಡಿಯಲ್ಲಿ ಶಿವರಾತ್ರಿ ಸಂದರ್ಭದಲ್ಲಿ ಹಾಗೂ ದೀಪಾವಳಿಯ ಸಂದರ್ಭದಲ್ಲಿ, ಶ್ರೀ ಸಿದ್ಧೇಶ್ವರ ಆರಾಧನಾ ಸಂದರ್ಭದಲ್ಲಿ ಎಲ್ಲ ಜಾತಿಯ ಕಲಾವಿದರು ಭಜನಾ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ಹಳ್ಳಿಗನಲ್ಲಿ ಧರ್ಮಕ್ಕಿಂತ ದೇವರ ಭಾವನೆಯೇ ದೊಡ್ಡದು. ಅವನಿಗೆ ಉತ್ಸಾಹ ಬಂದಾಗ, ಭಕ್ತಿಯು ಮೈದುಂಬಿ ನಿಂತು ತಾನು ನಂಬಿದ ಆ ದೇವನನ್ನು ಹಾಡಿಹೊಗಳುತ್ತಾನೆ. ತನ್ನ ಮನಕ್ಕೆ ಯಾವಾಗಲೂ ಶಿವನ ನಾಮವನ್ನು ಮರೆಯಬೇಡ ನೀನೆ ನನಗೆ ಗತಿ ಎಂದು ಬೇಡಿಕೊಳ್ಳುತ್ತಾನೆ.

ಹಲಗಿ ಮಜಲು

ಹಲಗಿ ಮಜಲಿನಲ್ಲಿ ಹಲಗಿ, ತಾಳ, ಟೋಕರಾ ಮುಂತಾದ ವಾದ್ಯಗಳಿರುತ್ತವೆ. ಹಲಗಿ ಪ್ರಮುಖ ವಾದ್ಯವಾಗಿರುವುದರಿಂದ ಮೇಳಕ್ಕೆ ಈ ಹೆಸರು ಪ್ರಾಪ್ತವಾಗಿದೆ. ಸಂಗಡ, ಸುತಿ, ಶಹನಾಯಿಯವರು ಇರುತ್ತಾರೆ. ಹಲಗೆ ಬಾರಿಸುವ ಕಲಾವಿದನು ಹಲಗೆಯನ್ನು ಎದೆ ಮತ್ತು ಎಡಗೈ ಮಧ್ಯ ಹಿಡಿಯುತ್ಥಾನೆ. ಬಲಗೈಯಲ್ಲಿ ಹೆಬ್ಬೆರಗಳು ಗಾತ್ರದ ಗೇಣುದ್ದ ಗುಣಕ ಹಿಡಿದು

ಮೇಲ್ಭಾಗದ ಎಡಗೈಯಲ್ಲಿ ಬಿದಿರು ಕಡ್ಡಿ ಹಿಡಿದು ಬೇರೆ ಬೇರೆ 'ಕೈ' ಬಾರಿಸುತ್ತಾನೆ. ೮, ೧೬ ಹೀಗೆ ಬೇರೆ ಬೇರೆ ಮಾತ್ರಗಳಲ್ಲಿ ಹಲಗೆ ಬಾರಿಸುವಿಕೆಯಿದೆ. ತಾಳ ಟೋಕರಾದವರು ಇವನು ಬಾರಿಸಿದಂತೆಲ್ಲ ಸಹವರ್ತಿಗಳಾಗಿರುತ್ತಾರೆ. ಸನಾದಿ ಆಕರ್ಷಣೆಗಾಗಿ ಮಧ್ಯ ಮಧ್ಯ ಸಿನಿಮಾ ಹಾಡುಗಳನ್ನು ಬಾರಿಸುತ್ತಾರೆ. ದೇವರ ಉತ್ಸವ, ಮದುವೆ, ಕುದುರೆ ಕುಣಿತ, ಮೆರವಣಿಗೆ, ಮರಣ ಮುಂತಾದ ಸಂದರ್ಭಗಳಲ್ಲಿ ಗ್ರಾಮದಲ್ಲಿ ಇವರು ಹಾಜರ ಇರುತ್ತಾರೆ. ಗ್ರಾಮದಲ್ಲಿ ಹಲವವಾರು ಸಂಧರ್ಭಗಳಲ್ಲಿ ದುಂಡಾಗಿ ಹಲಗೆ, ಟೋಕರಾ, ತಾಳದವರು ಸುತ್ತುವರೆದು ಅನೇಕ ಭಂಗಿಯಲ್ಲಿ ತಮ್ಮ ಕಲಾ ವಿದ್ವತ್ತನ್ನು ಪ್ರದರ್ಶಿಸುತ್ತಾರೆ.

ಕುದುರೆ ಪ್ರದರ್ಶನದಲ್ಲಿ ಕಲಾ ಪ್ರದರ್ಶನಕ್ಕೆ ಇವರಿಗೆ ಹೆಚ್ಚಿನ ಅವಕಾಶ ದೊರೆಯುತ್ತದೆ. ಕುದುರೆಗಳಿಗೆದುರಾಗಿ ಬಾರಿಸುತ್ತಾ ಹಿಂದು ಮುಂದು ಸರಿಯುವರು, ಒಮ್ಮೊಮ್ಮೆ ಟೋಕರಾದವರು ಮುಂದೆ ಬಂದು ತಮ್ಮ ಕಲಾ ಪ್ರದರ್ಶನ ಮಾಡುವುದು, ಮಗದೊಮ್ಮೆ ತಾಳಿನವರು ಮುಂದೆ ಬಂದು ಕಲಾ ಪ್ರದರ್ಶನ ಮಾಡುತ್ತಾರೆ. ಒಮ್ಮೊಮ್ಮೆ ಜೋಡು ಹಲಗೆಯವರು ಇರುತ್ತಾರೆ. ಗ್ರಾಮದ ಮೊಹರಂ ಸಂದರ್ಭದಲ್ಲಿ ಜೋಡು ಹಲಗೆ ವಾದನ ಮಾಡುತ್ತಾರೆ.

ಕರಡಿ ಮಜಲು

ಕರಡಿ ಮಜಲು ಗ್ರಾಮದ ಬಹುಮುಖ್ಯ ಜನಪದ ಕಲೆಗಳಲ್ಲಿ ಒಂದು. ಗ್ರಾಮದ ಶ್ರೀ ಸಿದ್ಧೇಶ್ವರ ದೇವಸ್ಥಾನದಲ್ಲಿ ವಾರದಲ್ಲಿ ಕನಿಷ್ಠ ನಾಲ್ಕಾರು ಬಾರಿಯಾದರೂ ಕರಡಿ ಮಜಲಿನ ಶಬ್ದ ಕೇಳು ಬರುತ್ತದೆ.

ಕರಡಿ ಮಜಲಿನಲ್ಲಿ ವಾದ್ಯಗಳು ಹಾಗೂ ಕಲಾವಿದರ ಬಗ್ಗೆ ನೋಡಿದಾಗ ಒಂದು ಕರಡಿ, ಎರಡು ದಿಮ್ಮು, ಎರಡು ತಾಳಗಳನ್ನು ಹೊಂದಿದ್ದು ಸಾಥ ಕೊಡಲು ಸುತಿ ಹಾಗೂ ಸನಾದಿಯವರು ಇರುತ್ತಾರೆ. ಈ ಮಜಲಿನಲ್ಲಿ ಕರಡಿಯವನ ಕಲೆಗಾರಿಕೆಯೇ ಮುಖ್ಯ. ಅವನು ವಿಲಂಬಿತ, ದ್ರುತ್, ಚಾಲ್ತಿ ಎಂದು ಬೇರೆ ಬೇರೆ ನೆಲೆಗಳಲ್ಲಿ ಬಾರಿಸುತ್ತ ತನ್ನ ವಿದ್ವತ್ತನ್ನು ಪ್ರದರ್ಶಿಸುತ್ತಾನೆ. ಎಷ್ಟೆಷ್ಟು ಅಕ್ಷರಗಳನ್ನು ಹೇಗೆ ಹೇಗೆ ಹೊರಡಿಸುತ್ತಾನೆಂಬುದರ ಮೇಲಿಂದ ಇವನ ಕಲಾ ಪರಿಣಿತಿ ನಿರ್ಣಯಿಸಲ್ಪಡುತ್ತದೆ. ಇದು ಹೆಚ್ಚು ಶಾಸ್ತ್ರೀಯವಾದ ವಾದ್ಯ. ಧಾರ್ಮಿಕ ಕಾರ್ಯಗಳಲ್ಲಿ ಕರಡಿಯವರಿಗೆ ವಿಶೇಷ ಪ್ರಾಮುಖ್ಯತೆ ಇದೆ. ವೀರಶೈವ ಧಾರ್ಮಿಕ ಕಾರ್ಯಕ್ರಮಗಳಲ್ಲಿ – ವಿಶೇಷ ಗುಗ್ಗಳ ಕಾರ್ಯಕ್ರಮದಲ್ಲಿ ಕರಡಿ ಬೇರೆ ಬೇಕು. ಕರಟ ಅಪ್ಪಟ ಧಾರ್ಮಿಕ ವಾದ್ಯವೆಂದೇ ಹೇಳಲಾಗುತ್ತಿದೆ.

ಕೊಟ್ಟಲಗಿ ಗ್ರಾಮದಲ್ಲಿ ಶ್ರೀ ಸಿದ್ಧೇಶ್ವರ ದೇವಸ್ಥಾನದಲ್ಲಿ ನಿರಂತರ ಕರಡಿಯು ಬಳಕೆಯಾಗುತ್ತದೆ. ಹೇಗೆಂದರೆ ಸಿದ್ಧೇಶ್ವರ ದೇವರ ವಾದವೆಂದರೆ ಪ್ರತಿ ಸೋಮವಾರ ರಾತ್ರಿ ೯ ಗಂಟೆಗೆ ಪಲ್ಲಕ್ಕಿ ಉತ್ಸವ ನಡೆಸುತ್ತಾರೆ. ಆಗ ಕಡ್ಡಾಯವಾಗಿ ಕರಡಿ ಬೇಕೆ ಬೇಕು. ಇನ್ನು ಸಿದ್ಧೇಶ್ವರನಿಗೆ ಪಂಚಾ ಸಲ್ಲಿಸಲು ಬಂದ ಭಕ್ತರು, ಪೂಜೆ ಗಚ್ಚಿಸುವ ಸಂದರ್ಭದಲ್ಲಿ ಕಡ್ಡಾಯವಾಗಿ ಕರಡಿ ಬೇಕೆ ಬೇಕು ಮತ್ತು ಸಿದ್ಧೇಶ್ವರ ಗುಗ್ಗಳ ತೆಗೆಯುವಾಗ, ದೀಡ ನಮಸ್ಕಾರ ಹಾಕುವಾಗ, ವಿಶೇಷ ಪೂಜೆ, ಪಲ್ಲಕ್ಕಿ ಉತ್ಸವ ಇತ್ಯಾದಿ ಸಂದರ್ಭಗಳಲ್ಲಿ ಕರಡಿ ಮಜಲಿನ ಉಪಯೋಗವಿದೆ. ಸಿದ್ಧೇಶ್ವರ ಪೂಜಾ ಇನ್ನಿತರ ಸಂದರ್ಭದ ವಾದ್ಯಗಳಲ್ಲಿ ಕರಡಿಗೂ ಒಂದು ಮಹತ್ವದ ಸ್ಥಾನವಿದೆ. ಗ್ರಾಮದಲ್ಲಿ ಒಂದು ಕರಡಿ ಮಜಲಿನ ಸಂಘವಿದೆ.

ಗೀ ಗೀ ಮೇಳ

ಜನಪದ ಕಲೆಗಳಿಗೆ ಹವ್ಯಾಸ ಮತ್ತು ದೈವಾರಾಧನೆ ಇವೆರಡು ಮೂಲ ಪ್ರೇರಣೆ. ಗೀ ಗೀ ಹಾಡಿನ ಕಲೆ ಹವ್ಯಾಸವಾಗಿದ್ದರೂ ಜನಪದರು ದೈವ-ದೇವರುಗಳಿಲ್ಲದೇ ತಮ್ಮ ಕೆಲಸ ಸುಗಮವಾಗಿ ಸಾಗದು, ತಮ್ಮ ನಡುವೆ ಯಾವ ವಿಘ್ನಗಳು ಬರಬಾರದೆಂದು ತಮಗೆ ಬರುವ ಹಾಡು, ಲಯ, ದಾಟಿಗಳು ದೈವದತ್ತವಾದವೆಂದು ನಂಬಿಕೊಂಡನು. ಈ ಗೀ ಗೀ ಪದಗಳಲ್ಲಿ ಮೂರು ಭಾಗಗಳಿರುತ್ತವೆ. ಒಂದು ಸಖಿ, ಎರಡು ಪದ್ಯ, ಮೂರು ಖ್ಯಾಲಿ ಪಲ್ಲವೂ ಇರುತ್ತದೆ. ಈ ಮೂರು ಪ್ರಕಾರದ ಹಾಡಿನ ಮುಖ್ಯ ವಿಷಯವನ್ನೊಳಗೊಂಡ ಎರಡು ನುಡಿಗಳು ಇದ್ದೇ ಇರುತ್ತವೆ.

ಗ್ರಾಮದಲ್ಲಿ ಗೀ ಗೀ ಮೇಳವೊಂದಿದ್ದು ಅತ್ಯಂತ ಪ್ರಸಿದ್ಧಿ ಪಡೆದ ಹಾಡುಗಾರರಾಗಿದ್ದಾರೆ. ಅವರು ಸ್ತ್ರೀ ಕಲಾವಿದೆಯಾಗಿರುವುದರಿಂದ ನಾಗೇಶಿ ಪದಗಳನ್ನು ಹಾಡುತ್ತಾರೆ. ಗ್ರಾಮದ ಕಲಾವಿದರು ೧) ಅನುಭವ ೨) ಆಧ್ಯಾತ್ಮ ೩) ಆಕಾರ-ನಿರಾಕಾರ ೪) ದೃಷ್ಟಾಂತ ಮುಂತಾದ ಪ್ರಕಾರದಲ್ಲಿ ಗೀ ಗೀ ಹಾಡುಗಳನ್ನು ಹೇಳುತ್ತಾರೆ. ಗ್ರಾಮದ ಕಲಾವಿದೆ ಗೌಂಡಿ, ಸಖಿ, ಪದ, ಖ್ಯಾಲಿ ಹೀಗೆ ನಾಲ್ಕು ಹಂತದಲ್ಲಿ ಹಾಡುತ್ತಾರೆ. ಈ ರೀತಿಯಾಗಿ ಹಾಡು ಸಾಗಬೇಕಾದರೆ ವಾದ್ಯವು ಕೂಡಾ ಬೇಕು. ಇವರು ಡಪ್ಪ ಬಾರಿಸುತ್ತ ಸ್ವತಃ ಹಾಡುತ್ತಾರೆ, ಜೊತೆಗೆ ಸಹ ವಾದ್ಯಗಾರರಿಂದ ತಾಳ ಮತ್ತು ತುಂತುಣಿಯನ್ನು ಬಳಸುತ್ತಾರೆ.

ಡೊಳ್ಳು ಮೇಳ

ಕೊಟ್ಬಲಗಿ ಗ್ರಾಮದ ಕುರುಬ ಸಮುದಾಯದವರು ವಿಠ್ಠರಾಯ ದೇವರ ಪೂಜೆಯಲ್ಲಿ, ಅಲ್ಲದೇ ಮದುವೆ, ಜಾತ್ರೆ, ಉತ್ಸವ, ಸಿದ್ಧೇಶ್ವರ ದೇವಸ್ಥಾನದ ಜಾತ್ರೆ ಇತರೆ ಮುಂತಾದ ಎಲ್ಲ ಕಾರ್ಯಕ್ರಮಗಳಲ್ಲಿ ಡೊಳ್ಳು ವಾದ್ಯವನ್ನು ನುಡಿಸುತ್ತಾರೆ.

ಗ್ರಾಮದಲ್ಲಿ ಡೊಳ್ಳಿನ ಹಾಡು ಹಾಡುವ ಸಂದರ್ಭದಲ್ಲಿ ಮತ್ತು ಡೊಳ್ಳಿನ ವಾಲಗದ ಸಂದರ್ಭದಲ್ಲಿ ಬಾರಿಸುವ ಪದ್ಧತಿಗಳು ಬೇರೆ ಬೇರೆಯಾಗಿರುತ್ತದೆ. ಡೊಳ್ಳಿನ ಹಾಡು ಹಾಡುವಾಗ ದಿಮ್ಮ, ತಾಳಗಳು ಪಕ್ಕ ವಾದ್ಯಗಳಾಗಿರುತ್ತವೆ. ಹಾಡಿಸಿ ಒಂದು ಸುತ್ತು ಬಾರಿಸಿದ ಮೇಲೆ ಹಾಡು ಪ್ರಾರಂಭವಾಗುತ್ತದೆ. ಹಾಡು ನಡೆದಿರುವಾಗ ಡೊಳ್ಳು ಬಾರಿಸುವಿಕೆ ಒಂದೇ ಗತಿಯಲ್ಲಿದ್ದು ಹೆಚ್ಚಿನ ವೈವಿದ್ಯಕ್ಕೆ ಅವಕಾಶವಿರುವದಿಲ್ಲ. ವಾಲಗದಲ್ಲಿ ಹತ್ತು ಹದಿನೈದು, ಐವತ್ತು, ನೂರು ಹೀಗೆ ಡೊಳ್ಳುಗಳನ್ನು ಒಂದೇ ಸಮನೆ ತಾಸುಗಟ್ಟಲೇ ಬಾರಿಸುವದುಂಟು. ಗ್ರಾಮದಲ್ಲಿ ಸಾಮೂಹಿಕ ಜಾತ್ರೆ ಸಂದರ್ಭದಲ್ಲಿ ಡೊಳ್ಳು ವಾದನವನ್ನು ಕುರುಬ ಸಮುದಾಯದವರು ನಡೆಸಿಕೊಡುತ್ತಾರೆ.

ಚೌಡಿಕೆ ಮೇಳ

ಗ್ರಾಮದ ಎಲ್ಲಮ್ಮನ ಭಕ್ತರು ಚೌಡಿಕೆ ಹಾಡುಗಳನ್ನು ಹಾಡುತ್ತಾರೆ. 'ಚೌಡಿಕೆ' ಎಂಬ ವಾದ್ಯವೇ ಇಲ್ಲಿ ಪ್ರಮುಖವಾಗಿರುವುದರಿಂದ ಈ ಹಾಡುಗಳಿಗೆ ಚೌಡಿಕೆ ಪದ್ಯಗಳು ಹಾಡುಗಳು ಎಂದು ಕರೆಯುವದುಂಟು. ಗ್ರಾಮದ ಎಲ್ಲಮ್ಮನ ಭಕ್ತರಾದ ಜೋಗಮ್ಮಗಳು ಶುಕ್ರವಾರ, ಮಂಗಳವಾರ ಎಲ್ಲಮ್ಮ ದೇವಸ್ಥಾನದಲ್ಲಿ ಹಾಗೂ ಎಲ್ಲಮ್ಮ ಜಾತ್ರೆಯ ಸಂದರ್ಭದಲ್ಲಿ ಮುಂತಾದ ವೇಳೆಯಲ್ಲಿ ಚೌಡಿಕೆ ನುಡಿಸುತ್ತ ಹಾಡು ಹಾಡುತ್ತಾರೆ. ಎಲ್ಲಮ್ಮನ ಚರಿತ್ರೆಯನ್ನು ಕೊಂಡಾಡುತ್ತಾರೆ.

ಇವರು ಅನೇಕ ವೇಳೆ ಜಗವನ್ನು ತಲೆಯ ಮೇಲೆ ಹೊತ್ತು ಕುಣಿದು ಹಾಡುವದುಂಟು.

ಗ್ರಾಮದ ಜನಪದ ಕಲಾವಿದರು

ಗ್ರಾಮದಲ್ಲಿ ಹಲವಾರು ಕಲೆಗಳನ್ನು ರೂಢಿಸಿಕೊಂಡು ಬಂದ ಕಲಾವಿದರು ಕೊಟ್ಬಲಗಿ ಗ್ರಾಮದ ಸಾಂಸ್ಕೃತಿಕ ಆಸ್ತಿಯೆಂದೇ ಹೇಳಬೇಕು. ಜಾನಪದ ಕಲೆಗಳಿಗೆ ಕಲಾವಿದರೇ ಜೀವಾಳ. ಕಲಾವಿದರಿಲ್ಲದೆ ಯಾವೊಂದು ಕಲೆಯು ಭೌತಿಕ ಸ್ವರೂಪವನ್ನು ಪಡೆಯಲಾರದು. ಗ್ರಾಮದ ಸಂಸ್ಕೃತಿಯ ಕುರಿತು ಅಧ್ಯಯನ ಕೈಗೊಂಡ ಈ ಸಂದರ್ಭದಲ್ಲಿ ಕಲಾವಿದರನ್ನು ಗಮನಿಸುವುದು ಅವಶ್ಯವಾಗಿದೆ.

೧. **ಕುದುರೆ ಕುಣಿತ:** ಈ ಕುಣಿತದ ಮೇಳದಲ್ಲಿರುವ ಕೊಟ್ಬಲಗಿ ಕಲಾವಿದರನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

೧. ಕುದುರೆ ಕುಣಿತದ ವೇಷ – ಶ್ರೀ ಹಸನಸಾಬ ಸನದಿ
೨. ಕುದುರೆ ಕುಣಿತದ ವೇಷ ಧರಿಸುವವರು – ಶ್ರೀ ಯಲ್ಲಪ್ಪ ಕರಬಸಪ್ಪ ಕೋಟ್ಯಾಳ
೩. ಕುದುರೆ ಕುಣಿತ – ಶ್ರೀ ದತ್ತು ಕಲಾಲ
೪. ಕುದುರೆ ಕುಣಿತ – ಶ್ರೀ ಗದಿಗೆಪ್ಪ ಸಿದರಾಯ ಅನಂತಪೂರ
೫. ನವಿಲು ವೇಷಧಾರಿ – ಶ್ರೀ ಈರಪ್ಪ ಕೋಟ್ಯಾಳ
೬. ಹಲಗಿ ವಾದ್ಯ ನುಡಿಸುವವರು – ಶ್ರೀ ಹಣಮಂತ ಕೋಟ್ಯಾಳ
೭. ಡಗ್ಗ ವಾದ್ಯ ನುಡಿಸುವವರು – ಶ್ರೀ ಮಹಾದೇವ ಕೋಟ್ಯಾಳ
೮. ತಾಳ ವಾದ್ಯ ನುಡಿಸುವವರು – ಶ್ರೀ ತುಕ್ಕಪ್ಪ ಬಡಿಗೇರ
೯. ತಾಳ ವಾದ್ಯ ನುಡಿಸುವವರು – ಶ್ರೀ ಸಂಗಪ್ಪ ಬನ್ನೂರ

೨. ಭಜನಾ ಮೇಳಗಳು

೧) ಶ್ರೀ ಸಿದ್ಧೇಶ್ವರ ಭಜನಾ ಮಂಡಳಿ

ಮುಖ್ಯ ಗಾಯಕರು – ಶ್ರೀ ಸಂಗಯ್ಯ ಮಲ್ಲಯ್ಯ ಮಂಗಿ
ಹಿನ್ನೆಲೆ ಗಾಯಕರು – ಶ್ರೀ ಸಿದ್ದಪ್ಪ ಗುರಪ್ಪ ಝಳಕಿ
ದಮ್ಮಡಿ – ಶ್ರೀ ಸಂಗಯ್ಯ ಶಿವಮೂರ್ತ ಮಂಗಿ
ತಾಳ – ೧) ಶ್ರೀ ಮಲ್ಲಪ್ಪ ಸಿದಗೊಂಡ ಮುಡೆಪ್ಪಗೋಳ
೨) ಶ್ರೀ ಶಿವಪ್ಪ ಮುರಿಗೆಪ್ಪ ಮುಡೆಪ್ಪಗೋಳ

ಸುಮಾರು ೨೦ ವರ್ಷದಿಂದ ಈ ಸಂಘ ಕಾರ್ಯನಿರ್ವಹಿಸುತ್ತಿದೆ.

೨) ದುರ್ಗಾದೇವಿ ಭಜನಾ ಸಂಘ

ಮುಖ್ಯ ಗಾಯಕರು – ಶ್ರೀ ಸದಾಶಿವ ಚಂದ್ರಪ್ಪ ದೊಡ್ಡಮನಿ
ಹಿನ್ನೆಲೆ ಗಾಯಕರು – ೧) ಶ್ರೀ ಬಸಗೊಂಡ ಚಂದ್ರಪ್ಪ ದೊಡ್ಡಮನಿ
೨) ಶ್ರೀ ಪಾಂಡುರಂಗ ಭೀಮಪ್ಪ ದೊಡ್ಡಮನಿ
೩) ಶ್ರೀ ಮಾಳಪ್ಪ ಚಂದ್ರಪ್ಪ ದೊಡ್ಡಮನಿ

ದಮ್ಮಡಿ – ಶ್ರೀ ಹಣಮಂತ ನಿಂಗಪ್ಪ ಐಹೊಳೆ
ತಾಳ – ಶ್ರೀ ಕಲ್ಲಪ್ಪ ಸಿ. ದೊಡ್ಡಮನಿ
ಹಾರ್ಮೋನಿಯಂ – ಶ್ರೀ ದುಂಡಪ್ಪ ನಿಂಗಪ್ಪ ಐಹೊಳೆ

೩) ಹಲಗಿ ಮಜಲು

ಹಲಗಿ ವಾದಕ : ಶ್ರೀ ಸಿದ್ದಯ್ಯ ಮ. ಮಂಗಿ
ಡಗ್ಗಾ : ಶ್ರೀ ಸಂಗಯ್ಯ ಮ. ಮಂಗಿ
ತಾಳ : ೧) ಶ್ರೀ ಶ್ರೀಶೈಲ ನಾ. ಮುಡೆಪ್ಪಗೋಳ
೨) ಶ್ರೀ ಸಿದ್ದಪ್ಪ ಸಾವಳಗಿ
ಶಹನಾಯಿ : ಶ್ರೀ ಅಣ್ಣಪ್ಪ ಭಜಂತ್ರಿ
ಸುತಿ : ಶ್ರೀ ಚಂದು ಭಜಂತ್ರಿ

೪. ಕರಡಿ ಮಜಲು

ಕರಡಿ ವಾದಕರು : ಶ್ರೀ ಮಲ್ಲಪ್ಪ ಸಿದಗೊಂಡ ಮುಡೆಪ್ಪಗೋಳ
ದಿಮ್ಮ ವಾದಕರು : ೧) ಶ್ರೀ ಸಂಗಯ್ಯ ಶಿ. ಮಂಗಿ
೨) ಶ್ರೀ ಸಿದ್ದಯ್ಯ ಮ. ಮಂಗಿ
ತಾಳ : ೧) ಶ್ರೀ ಸಿದ್ದಪ್ಪ ಸಾವಳಗಿ
೨) ಶ್ರೀ ಅಪ್ಪಾಸಾಬ ಚಪ್ಪರ

೫. ಡೊಳ್ಳಿನ ಮೇಳ

೧. ವಿಠೋಬರಾಯ ಡೊಳ್ಳಿನ ಸಂಘ

ಮುಖ್ಯ ಗಾಯಕರು : ಶ್ರೀ ಸಿದ್ದಪ್ಪ ಹಿರೆಕುರುಬರ
ಶ್ರೀ ಸಂಗಪ್ಪ ಕಟ್ಟಿಮನಿ
ದಿಮ್ಮ : ಶ್ರೀ ವಿಠ್ಠಲ ಹಿರೆಕುರುಬರ
ಶ್ರೀ ನಾಗಪ್ಪ ಜೋಗಿ
ಶ್ರೀ ಮಹಾದೇವ ಜೋಗಿ
ಡಗ್ಗಾ : ಶ್ರೀ ಸುರೇಶ ಕಟ್ಟಿಮನಿ
ತಾಳ : ಶ್ರೀ ಸಿದ್ದಪ್ಪ ಜೋಗಿ

೨. ಮಾಳಿಂಗರಾಯ ಡೊಳ್ಳಿನ ಸಂಘ

ಮುಖ್ಯ ಗಾಯಕರು : ಶ್ರೀ ಸೋಮಣ್ಣ ಕಟ್ಟಿಮನಿ
ಶ್ರೀ ಭೀಮಣ್ಣ ಕಟ್ಟಿಮನಿ
ದಿಮ್ಮ : ಶ್ರೀ ಕಾಸಪ್ಪ ಕಟ್ಟಿಮನಿ
ಹಿಮ್ಮೇಳ : ಶ್ರೀ ವಿಠ್ಠಲ ಜೋಗಿ
ತಾಳ : ಶ್ರೀ ಮುರೆಪ್ಪ ಜೋಗಿ

೬. **ಲಾವಣಿ ಮೇಳ**

೧. ಶ್ರೀ ಬಸಪ್ಪ ಆಳೂರ

೨. ಶ್ರೀ ಯಲ್ಲಪ್ಪ ತಟ್ಟಿ

೩. ಶ್ರೀ ಮಲಕಪ್ಪ ಯಳೆಗಾವಿ

೪. ಶ್ರೀ ಪರಸಪ್ಪ ತಟ್ಟಿ

೭. **ರಿವಾಯತ್ ಮೇಳ**

೧. ಶ್ರೀ ಹಸನಸಾಬ ಅಬ್ಬಾಸ ಸನದಿ

೨. ಶ್ರೀ ಬಂಧು ಮೌಲಾಸಾಬ ಸನದಿ

೩. ಶ್ರೀ ಈರಪ್ಪ ಕೋಟ್ಯಾಳ

೪. ಶ್ರೀ ಮಹಾದೇವ ಕೋಟ್ಯಾಳ

೫. ಶ್ರೀ ಲಕ್ಷ್ಮಣ ನಾಟಿಕಾರ

೬. ಶ್ರೀ ಧರೆಪ್ಪ ಮಾಳಿ

೮. **ನಾಟಕ ಸಂಘಗಳು: ಗ್ರಾಮದ ವಿವಿಧ ಕಲಾವಿದರು ಆಡಿದ ಪೌರಾಣಿಕ ನಾಟಕಗಳು.**

ಸಂಘದ ಹೆಸರು	**ಆಡಿದ ನಾಟಕ**
೧. ಶ್ರೀ ಸಿದ್ಧೇಶ್ವರ ನಾಟ್ಯ ಸಂಘ	೧) ಲವ-ಕುಶ
	೨) ದಸರಾ
	೩) ಪ್ರಾಣ ಹೋದರೂ ಮಾನ ಬೇಕು
೨. ಶ್ರೀ ಮಾಧವಾನಂದ ನಾಟ್ಯ ಸಂಘ	೧) ಸತ್ಯಮೇವ ಜಯತೆ
೩. ರೇಣುಕಾದೇವಿ ನಾಟ್ಯ ಸಂಘ	೧) ಸೌಭಾಗ್ಯದ ಲಕ್ಷ್ಮಿ
	೨) ದೀಪಾವಳಿ
೪. ಶ್ರೀ ಬೀರದೇವರ ನಾಟ್ಯ ಸಂಘ	೧) ಮಾಳಿಂಗರಾಯ ಮಹಾತ್ಮೆ
೫. ಸಂಪೂರ್ಣ ಹೇಮರಡ್ಡಿ ಮಲ್ಲಮ್ಮ ನಾಟ್ಯ ಸಂಘ	೧) ಹೇಮರಡ್ಡಿ ಮಲ್ಲಮ್ಮ
೬. ಭರಮದೇವರ ನಾಟ್ಯ ಸಂಘ	೧) ಭಕ್ತ ಮಾರ್ಕಂಡೆಯ
೭. ರೇಣುಕಾ ನಾಟ್ಯ ಸಂಘ	೧) ರೇಣುಕಾ ಮಹಾತ್ಮೆ

ಪೌರಾಣಿಕ ನಾಟಕಗಳಲ್ಲದೇ ಹವ್ಯಾಸಿ ಕಲಾವಿದರು ಸೇರಿ ಅನೇಕ ನಾಟಕಗಳನ್ನು ಆಡಿದ್ದಾರೆ. ಅವುಗಳೆಂದರೆ

೧. ಪುಂಡರಿಗೆ ಗಂಡುಗಲಿ

೨. ಗರುಡ ರಾಜ್ಯದಲ್ಲಿ ಘಟಸರ್ಪ

೩. ಸೌಭಾಗ್ಯ ಲಕ್ಷ್ಮಿ

೪. ರಾಮರಾಜ್ಯದಲ್ಲಿ ರಾಕ್ಷಸರು

೫. ಗರತಿಯ ಗೆಲುವು

೬. ದಸರಾ

ರಂಗ ಕಲಾವಿದರು: ಗ್ರಾಮದಲ್ಲಿ ಪ್ರತಿಭಾವಂತ ಅನೇಕ ರಂಗಕಲಾವಿದರಿದ್ದಾರೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದೊರೆತ ಕಲಾವಿದರನ್ನು ಈ ಕೆಳಗಿನಂತೆ ಕಾಣಬಹುದಾಗಿದೆ.

೧. ದಿ॥ ಶ್ರೀ ಶಿವಮೂರ್ತಿ ಸ್ವಾಮಿಗಳು ಮಂಗಿ
೨. ಶ್ರೀ ಮಾರುತಿ ಝುಳಕಿ
೩. ಶ್ರೀ ಶಿವಪ್ಪ ಸಿ.ದಾನಪ್ಪಗೋಳ
೪. ಶ್ರೀ ಪವಾಡೆಪ್ಪ ದೊಡ್ಡನಿಂಗಪ್ಪಗೋಳ
೫. ಶ್ರೀ ಮಲ್ಲಪ್ಪ ಮುಡೆಪ್ಪಗೋಳ
೬. ಶ್ರೀ ಸಂಗಯ್ಯ ಮಠಪತಿ
೭. ಶ್ರೀ ಮಹಾದೇವ ಬಡವಗೋಳ
೮. ಶ್ರೀ ಅನೀಲ ಮಂಗಿ
೯. ಶ್ರೀ ಸಿದ್ದಪ್ಪ ಝುಳಕಿ
೧೦. ಶ್ರೀ ಮುದಕಪ್ಪ ಚಿಕ್ಯಾಕೊಂಡಿ
೧೧. ಶ್ರೀ ಸಂಗಪ್ಪ ದಾನಪ್ಪಗೋಳ
೧೨. ಶ್ರೀ ಯಲ್ಲಪ್ಪ ತಟ್ಟಿ
೧೩. ಶ್ರೀ ಸಿದರಾಯ ಸತ್ತಿ
೧೪. ಶ್ರೀ ರಾಮಗೊಂಡ ಸಿದ್ದಪ್ಪ ಪಾಟೀಲ
೧೫. ಶ್ರೀ ಸಿದ್ದಪ್ಪ ಗುಂಡಗೇರಿ
೧೬. ಗುಂಡಪ್ಪ ಆಲೂರ
೧೭. ಶ್ರೀ ಭೀಮಶಿ ಕುಂಬಾರ
೧೮. ಶ್ರೀ ಲಕ್ಷ್ಮಣ ಮಾನಿಂಗಪ್ಪಗೋಳ
೧೯. ಶ್ರೀ ಸದಾಶಿವ ಮುಗ್ಗನವರ
೨೦. ಶ್ರೀ ಗೋಪಾಲ ಝುಳಕಿ
೨೧. ಶ್ರೀ ನಾಗಪ್ಪ ಸಿಂಧೂರ
೨೨. ಶ್ರೀ ಈರಪ್ಪ ಕೋಟ್ಯಾಳ
೨೩. ಶ್ರೀ ಯಲ್ಲಪ್ಪ ಕೋಟ್ಯಾಳ
೨೪. ಶ್ರೀ ಆನಂದ ಕೋಟ್ಯಾಳ
೨೫. ಶ್ರೀ ಅಪ್ಪಾಸಾಬ ಕೋಟ್ಯಾಳ
೨೬. ಶ್ರೀ ಶಿವಪ್ಪ ಆಜೂರ
೨೭. ಶ್ರೀ ನಿಂಗಪ್ಪ ಅನಂತಪೂರ
೨೮. ಶ್ರೀ ಗದಿಗೆಪ್ಪ ಅನಂತಪೂರ
೨೯. ಶ್ರೀ ದತ್ತಾತ್ರೇಯ ಕಲಾಲ
೩೦. ಶ್ರೀ ಬಸಪ್ಪ ಬನಹಟ್ಟಿ
೩೧. ಶ್ರೀ ಚಿದಾನಂದ ಮಾಳಿ
೩೨. ಶ್ರೀ ಸಂಗಪ್ಪ ಮಾಳಿ
೩೩. ಶ್ರೀ ನಿಂಗಪ್ಪ ಮಾಳಿ
೩೪. ಶ್ರೀ ಶ್ರೀಮಂತ ಮಾಳಿ
೩೫. ಶ್ರೀ ಶಿವಾನಂದ ಮಾಳಿ

೩೬. ಶ್ರೀ ಹಣಮಂತ ಮಾಳಿ

೩೭. ಶ್ರೀ ಆನಂದ ಮಾಳಿ

೩೮. ಶ್ರೀ ನಿಂಗಪ್ಪ ಸಿ. ಮಾಳಿ

೩೯. ಸಿದ್ದಪ್ಪ ಮಾಳಿ

ಹಾರ್ಮೋನಿಯಂ ವಾದಕರು

೧. ದಿ॥ ಶ್ರೀ ಸಿದ್ರಾಮಪ್ಪ ದೊಡ್ಡನಿಂಗಪ್ಪಗೋಳ

೨. ಶ್ರೀ ನಿಂಗಪ್ಪ ಮ. ಐಹೊಳೆ

೩. ಶ್ರೀ ದುಂಡಪ್ಪ ಐಹೊಳೆ

೪. ಶ್ರೀ ಮಲ್ಲೇಶಿ ಸಿ. ಕೋಟ್ಯಾಳ

೫. ಶ್ರೀ ಗೌಡಪ್ಪ ಷ. ಆಜೂರ

೬. ಶ್ರೀ ರಾಮಪ್ಪ ಹ. ಜೊಗಳೇಕರ

೭. ಶ್ರೀ ಅರ್ಜುನ ಕುಂಬಾರ

೮. ಶ್ರೀ ಪವಾಡೆಪ್ಪ ಶಿರಗುಪ್ಪಿ

೯. ಶ್ರೀ ಯಮನಪ್ಪ ಸ. ಗಿರಿಸಾಗರ

ತಬಲಾ ವಾದಕರು

೧. ಶ್ರೀ ಗುರುಪಾದ ಗುರವ

೨. ಶ್ರೀ ಮಹಾದೇವ ಕೋಟ್ಯಾಳ

೩. ಶ್ರೀ ಉಮೇಶ ಭೀ. ಗುರವ

೪. ಶ್ರೀ ಸದಾಶಿವ ಸಿದ್ರಾಮ ಕೊಂಗನಳ್ಳಿ

೫. ಶ್ರೀ ಶಿವಪ್ಪ ದಾನಪ್ಪಗೋಳ

ವಿಶೇಷ ಕಲಾವಿದರು

ಗ್ರಾಮದ ಗೀ ಗೀ ಕಲಾವಿದೆ: ಚೌರಮ್ಮ ಕೊಟ್ಟಲಗಿ

೧೯೬೮ ರಿಂದ ಕಲಾವಿದರಾಗಿ ಸೇವೆಯನ್ನು ಆರಂಭಿಸಿದರು. ಆಗ ಇವರಿಗೆ ಕೇವಲ ೧೫ ವರ್ಷ ವಯಸ್ಸು. ಇವರ ಗುರುಗಳು –ಶ್ರೀ ದುರ್ಗಪ್ಪ ಕೊಲಪ್ಪ ಹೊಸಮನಿ ಸಾ॥ ಕನಮಡಿ. ಇವರ ಶಿಕ್ಷಣ: ೪ನೇಯ ವರ್ಗ ನಾಗೇಶಿ ಪದ್ಧತಿಯ ಹಾಡುಗಳನ್ನು ಹಾಡುತ್ತಾರೆ.

೧. ಅನುಭವ ೨. ಆಧ್ಯಾತ್ಮ ೩. ಆಕಾರ–ನಿರಾಕಾರ ೪. ದೃಷ್ಟಾಂತ ಎಲ್ಲ ಉಪಯುಕ್ತ ವಸ್ತುವನ್ನೊಳಗೊಂಡ ಹಾಡು ಹಾಡುವರು.

೧. ಅನುಭವ: ಶಿಸುನಾಳ ಅಂದೇವಾಡಿ ಗುಬಿಸಾಬ
ಎಂಥಾಕಪ್ಪೆ ಹದಿನಾರ ಹಾವಿನಕ ಸರ್ಪ ನುಂಗಿತಾ
ಹರದೇಶಿ ಎಂದರೆ–ಪುರುಷ ನಾಗೇಶಿ ಎಂದರೆ–ಸ್ತ್ರೀ
ನಿರಾಕಾರ (ಶಿವ–ಶಕ್ತಿ)

ಗಂಡು ಹೆಣ್ಣನ್ನು ಸೃಷ್ಟಿ ರಚನೆಗೆ ಕೇಂದ್ರ ಮಾಡಬೇಕೆಂದು ಮಾಡುವ; ಯಾವುದು ಮೊದಲು ನಿರ್ಮಾಣ ಆಯಿತೆನ್ನುವ ರೀತಿಯಲ್ಲಿ ಸಮಸ್ಯೆಯು ಶುರುವಾಗುತ್ತದೆ. ಸಮರ್ಥನೆ ಮಾಡುತ್ತ ಹೋಗಬೇಕು. ಸೃಷ್ಟಿ ಆರಂಭದಿಂದ ಈ ವಿಚಾರದಲ್ಲಿ ಚರ್ಚೆ ಮುಂದೆ ಸಾಗುತ್ತದೆ.

ಅನೇಕ ದೃಷ್ಟಾಂತಗಳು ನಡೆಯುತ್ತವೆ. ಇನ್ನು ಪುರಾಣದ ವಿಚಾರಗಳಾದ ರಾಮಾಯಣ, ಮಹಾಭಾರತದ ಸನ್ನಿವೇಶಗಳ ಆಧಾರದಿಂದ ಚರ್ಚೆ ಮಾಡುತ್ತಾರೆ.

೧. ಶಿವ ಮಹಾಪುರಾಣ
೨. ರಾಮಾಯಣ
೩. ಮಹಾಭಾರತ
೪. ಚಂದ್ರೋದಯ
೫. ವಿವೇಕ ಚಿಂತಾಮಣಿ
೬. ವಿಚಾರ
೭. ಮೂಲಸ್ತಂಭಿ
೮. ವಿಷ್ಣು ಪುರಾಣ
೯. ದೇವಿ ಪುರಾಣ
೧೦. ಜ್ಞಾನ ಸಿಂಧೂ

ಈ ಎಲ್ಲ ಪುಸ್ತಕಗಳ ಆಧಾರದಿಂದ ಎಲ್ಲ ಚರ್ಚೆಗಳಿಗೂ ಆಧಾರಗಳನ್ನು ಒದಗಿಸುತ್ತಾರೆ.

೧) ಡಪ್ಪ ೨) ತಾಳ ೩) ತುಂತುಣಿ ವಾದ್ಯಗಳನ್ನು ಉಪಯೋಗಿಸುತ್ತಾರೆ. ಮೊದಲಿಗೆ ವಾದ್ಯದ ವಾದನ ಮಾಡುತ್ತಾರೆ. ತುಂತುಣಿಯಲ್ಲಿ ತಮ್ಮ ಸ್ವರ ಕೂಡುವ ಹಾಗೆ ಮಾಡಿ ನಾಡಿ ಸರಸ್ವತಿ ಮೇಲೆ ಹಾಡುತ್ತಾರೆ.

ಹರದೇಶಿಯರು ಗಣಪತಿಯ ಮೇಲೆ ಹಾಡುತ್ತಾರೆ. ವಿಶೇಷವಾಗಿ ತಮ್ಮ ಪರಿಚಯ ವಾದ್ಯದ ವಿಷಯವಸ್ತು. ಅದರ ಪರಿಣಾಮದ ಕಡಗಳಲ್ಲಿ ಗಮನ ಸೆಳೆವರು. ನಂತರ ಅದರಲ್ಲಿ ಬರುವ ಬಹಿರಂಗ ಆಂತರಂಗಗಳು ಈ ಕುರಿತಾಗಿ ಗಮನ ಸೆಳೆಯುತ್ತಾರೆ.

ನಾಂದಿ
ಸಖಿ
ಪಾದ
ಖ್ಯಾಲಿ, ಈ ಹಂತದಲ್ಲಿ ಈ ಪದ್ಯ ಸಾಗುತ್ತದೆ.

ಸಖಿ: ದೇವರಿಗೆ ದೆವ್ವಾಗಿ ಕಾಡಿದೆನೋ
ದೇವಿಯಾಗಿ ಅಮೃತ ನೀಡಿದೆನೋ
ದೇವ ದೇವತೆಯರಲ್ಲಿ ಅವ್ವಾ ಅವ್ವಾ ಅಂದರ ನಾಬಾಳ ಕಾಡಿದೆನೋ

ಇಂತಹ ಸುಮಾರು ೪ ನುಡಿಗಳ ಸಖಿ ಇರುತ್ತದೆ.

ಪದ್ಯ: ನಾ ಹೆಚ್ಚು ನೀ ಹೆಚ್ಚು ಅನ್ನುವ ಹರದಾಸ
ನಿನ್ನೆ ಹುಟ್ಟಿ ತೆರದಿದಿ ಕಣ್ಣ
ನನ್ನ ಹಾಡಿನ ಜವಾಬ ಹೇಳದಿದ್ದರ
ನಿನ್ನ ಮೂಗಿಗೆ ಮೂರಬಟ್ಟ ಸುಣ್ಣಾ ॥ ಗೀ ಗೀ

ಮೂರು ಮತ್ತು ನಾಲ್ಕನೇಯ ನುಡಿ ಹಾಗೂ ಇದರ ನಂತರ ಚಾಲ ೩-೪ ನುಡಿ ಇರುತ್ತದೆ.

ಕೂಡಾ ಪಲ್ಲ ಇದರ ನಂತರ ಒಂದು ನುಡಿ ಇರುತ್ತದೆ.

ಸಖಿ ಖ್ಯಾಲಿಗೆ ಸಂಬಂಧಿಸಿದಂಥೆ ಸುಮಾರು ೨೦೦ ಪದ್ಯಗಳನ್ನು ಹಾಡಬಲ್ಲರು.

ಇವರು ಈ ಕೆಳಕಂಡ ಸಾಹಿತಿಗಳ ಸಾಹಿತ್ಯವನ್ನು ಹಾಡುತ್ತಾರೆ.

೧. ಶ್ರೀ ಅಪ್ಪಣ್ಣ ಬಾಳಿಗೇರಿ
೨. ಅಥಣಿ ಶ್ರೀ ಸಿದ್ರಾಮ
೩. ಶ್ರೀ ಖ್ಯಾಮ ಸತ್ಯಣ್ಣ
೪. ಶ್ರೀ ಶಿವನೂರ ಗೋವಿಂದ ಗೂಳಿ
೫. ಗುಲ್ಬುರ್ಗಾ ಬೆಲ್ಲಾ ಸಾವಳಗಿ ಶ್ರೀ ಮಹಮ್ಮದ ಸಾಹೇಬ ಉಸ್ತಾದ
೬. ಶ್ರೀ ಕೊರಳ್ಳಿ ಇಂಗಳಗಿ (ಸಿಂದಗಿ ತಾಲೂಕಾ) ಮಹಮ್ಮದ ಹಸನ (ಇಂಗಳಗಿ) ಮೌಲಾಲಿ
೭. ಇತ್ತೀಚೆಗೆ ಸೋಲಾಪೂರ ಜಿಲ್ಲೆಯ ಶ್ರೀ ಗೈಬಿಸಾಬ ರಾಜಾಸಾಬ ಮಕಾಂದಾರ ಇವರ ರಚನೆಗಳನ್ನು ಹಾಡುತ್ತಾರೆ. ಅಂದೇವಾಡಿ ಅಕ್ಕಲಕೋಟ ತಾಲೂಕಾ ಇಡೀ ರಾತ್ರಿ ಈ ಕಾರ್ಯಕ್ರಮ ನೀಡುತ್ತಾರೆ. ಮಂಗಳಾರತಿಯೊಂದಿಗೆ ಕಾರ್ಯಕ್ರಮ ಮುಗಿಸುತ್ತಾರೆ.

ಒಂದು ವೇಳೆ ಒಂದು ದಿನಕ್ಕೆ ಹಗಲು ಹೊತ್ತಿನಲ್ಲಿ ಮಾತ್ರ ಊಟ ಮಾಡುತ್ತಾರೆ. ರಾತ್ರಿ ಊಟ ಮಾಡದೇ ಕೇವಲ ಚಹಾ ಕುಡಿಯುತ್ತಾರೆ. ಸುಮಾರು ಏಳೆಂಟು ಕಪಗಳಷ್ಟು ಚಹಾ ಕುಡಿಯುತ್ತಾರೆ.

ವೇಷಭೂಷಣ: ಉತ್ತಮವಾದ ಒಳ್ಳೆಯ ಸೀರೆ, ಕುಪ್ಪಸ ಧರಿಸುತ್ತಾರೆ ಹಾಗೂ ಜೊತೆಗೊಂದು ನಲ್ಯಾ ಧರಿಸುವ ಒಳ್ಳೆಯ ಬಟ್ಟೆಯನ್ನು ಧರಿಸುತ್ತಾರೆ.

ಎಲೆ, ಅಡಿಕೆ ಕೊಟ್ಟು ಕಾರ್ಯಕ್ರಮಕ್ಕೆ ಆಹ್ವಾನವನ್ನು ಕೊಡುತ್ತಾರೆ. ನಂತರ ಎಷ್ಟು ದಿನ ಕಾರ್ಯಕ್ರಮ ಇರುತ್ತದೆ ಅದನ್ನಾಧರಿಸಿ ಅವರು ದರವನ್ನು ನಿಗದಿ ಮಾಡುತ್ತಾರೆ. ರಾತ್ರಿ ಕೂಟಕ್ಕೆ ೨ ರಿಂದ ೩ ಸಾವಿರ ಇವರಿಗೆ ಧನರೂಪದಲ್ಲಿ ಒಳಗೊಂಡಿರುವದು.

೧. ಬೌರಮ್ಮ (ಡಪ್ಪ ಮತ್ತು ಹಾಡು)
೨. ಮಾರುತಿ ಶಿವರಾಮ ದನದಮನಿ (ತುಂತಣಿ)
೩. ಸದಾಶಿವ ಸಿದ್ರಾಮ ಕೊಂಗನಹಳ್ಳಿ (ತಾಳ)

ಬೀದರ, ಗುಲ್ಬರ್ಗ, ರಾಯಚೂರು, ಸೋಲಾಪೂರ, ಕೋಲ್ಹಾಪೂರ, ನಿಪ್ಪಾಣಿ, ಸಂಕೇಶ್ವರ, ಬಿಜಾಪೂರ, ಇಂಡಿ, ಜತ್ತ ತಾಲೂಕಾ, ಬೆಳಗಾವಿಯ ಜಿಲ್ಲೆಯಾದ್ಯಂತ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದಾರೆ.

ರಾಜ್ಯಮಟ್ಟದ, ಜಿಲ್ಲಾಮಟ್ಟದ, ತಾಲೂಕಾಮಟ್ಟದ ಸರಕಾರಿ, ಅರೆಸರಕಾರಿ ಹೀಗೆ ಸುಮಾರು ೨೦೦೦ ಕಾರ್ಯಕ್ರಮ ನೀಡಿರುತ್ತಾರೆ.

ಅವರ ಇವರ ಜೊತೆ ಕಲಾವಿದರಿಗೂ ಕೂಡಾ ಸರಕಾರದಿಂದ ಯಾವುದೇ ಸಹಕಾರ, ನೆರವು ಇಲ್ಲಿ ಬೌರಮ್ಮನಿಗೆ ಮಾತ್ರ ರಾಜ್ಯಸರ್ಕಾರದಿಂದ "ಕಲಾವಿದರ ಮಾಶಾಸನ" ಮಾತ್ರ ಬರುತ್ತದೆ. ಜೀವನ ನಿರ್ವಹಣೆ ಕಷ್ಟ ಸಾಧ್ಯ. ಸರಕಾರ ಗುರುತಿಸಿ ಹೆಚ್ಚಿನ ಸಹಕಾರ ನೀಡಲಿ ಎನ್ನುವದು ಇನವರ ಉದ್ದೇಶ, ಹಾರೈಕೆ.

ಈ ರೀತಿಯಾಗಿ ಇವರ ಮತ್ತು ಕಲಾರಂಗದಲ್ಲಿ ಕಂಡುಬರುವಂತ ಕೆಲವೊಂದು ಸಮಸ್ಯೆಗಳು.

ಪ್ರಸ್ತುತ ಟಿ.ವಿ. ಮಾಧ್ಯಮ, ಸಿನೆಮಾಗಳ ಹಾವಳಿ ಹಾಗೂ ಆಧುನಿಕತೆಯ ಕಾರಣ ಇವರ ಕಲೆಯ ಬೇಡಿಕೆ ಕಡಿಮೆ ಆಗುತ್ತಿರುವುದು ಪ್ರಮುಖ ಸಮಸ್ಯೆ. ಈ ಕಾರಣದಿಂದಾಗಿ ಜೀವನ ನಿರ್ವಹಣೆಯು ಕಷ್ಟವಾಗುವದು.

೧. ಗಣಪತಿ ಪ್ರತಿಷ್ಠಾಪನೆ

೨. ಶ್ರಾವಣ ಸೋಮವಾರ

೩. ಮಹಾನವಮಿ ದೇವಿ ಸ್ಥಾಪನೆ ಸಂದರ್ಭ

೪. ದೀಪಾವಳಿಯ ಅಂಗಡಿ ಪೂಜಾ, ಲಕ್ಷ್ಮಿ ಪೂಜಾ, ಅಮವಾಸ್ಯೆ ಪೂಜಾ, ಜಾತ್ರಾ ಕಾರ್ಯಕ್ರಮಗಳಲ್ಲಿ, ಹೋಳಿ ಹುಣ್ಣಿಮೆಯಿಂದ ಕಾರುಹುಣ್ಣಿಮೆಯವರೆಗೆ ಮಾತ್ರ ಬಿಡುವಿಲ್ಲದ ಕಾರ್ಯಕ್ರಮ ನೀಡುತ್ತಾರೆ.

ಶ್ರೀ ಷಣ್ಮುಖಪ್ಪ ಆಜೂರ

ವಯಸ್ಸು: ೫೮

ಉದ್ಯೋಗ: ಭಜನಾ ಕಲಾವಿದರು

ಜಾತಿ: ಹಿಂದೂ ಲಿಂಗಾಯತ

ಸ್ಥಳ: ಕೊಟ್ಟಲಗಿ

ಇವರು ಕೊಟ್ಟಲಗಿ ಗ್ರಾಮದ ಅದ್ವಿತೀಯ ಕಲಾವಿದರು. ಇವರು ತಮ್ಮ ಹತ್ತನೇಯ ವರ್ಷದಿಂದ ಸಂಗೀತದ ಒಲುಮೆ ಇದ್ದದ್ದು ಕಂಡುಬರುತ್ತದೆ. ಚಿಕ್ಕಂದಿನಲ್ಲಿ ಶಿಕ್ಷಣದಲ್ಲಿ ಆಸಕ್ತಿಯನ್ನು ಹೊಂದದೇ ಈ ಕಲೆಯಲ್ಲಿಯೇ ಪೂರ್ಣ ತೊಡಗಿಸಿಕೊಂಡಿದ್ದು ಕಂಡುಬರುತ್ತದೆ.

ಈ ಸಂಗೀತದ ಪ್ರೇರಣೆ ಒಟ್ಟಾರೆ ಅವರ ಕೌಟುಂಬಿಕ ಹಿನ್ನಲೆಯಲ್ಲಿಯೇ ಸಂಗೀತಮಯವೆನ್ನಬಹುದು. ತಂದೆಯವರು ಹಾರ್ಮೋನಿಯಂ ವಾದಕರು, ಚಿಕ್ಕಪ್ಪ ತಬಲಾ ನುಡಿಸುವರು, ತಂದೆ ತಬಲಾ ಮೂಲಗಳನ್ನು ಬಲ್ಲವರು. ಕರಡಿ ವಾದ್ಯವನ್ನು ನುಡಿಸುವರು ಸಂಪ್ರದಾನಿಯನ್ನು ನುಡಿಸುವರು. ಹಾಗೇ ವಿವಿಧ ಕಲೆಗಳನ್ನು ಬಲ್ಲವರೆಂದ ಮೇಲೆ ಜನ್ಮದಾರಬ್ಯದಿಂದ ಈ ಸಂಸ್ಕಾರವಾದದ್ದು ಕಂಡುಬರುತ್ತದೆ. ಕೌಟುಂಬಿಕ ಈ ಪ್ರೇರಣೆಯಿಂದಲೇ ಕಲಾವಿದರಾದದ್ದಾಗಿ ಹೇಳಿದ್ದಾರೆ.

ಇವರು ಶಿವಭಜನೆ ಹಾಗೂ ಪಾರಿಜಾತ ಶೈಲಿಯಲ್ಲಿ ಭಜನಾ ಹಾಡುಗಳನ್ನು ಹಾಡುತ್ತಾರೆ. ಸುಮಾರು ೩೨ ರಾಗಗಳಲ್ಲಿ ಸುಶ್ರಾವ್ಯವಾಗಿ ಹಾಡಬಲ್ಲರು. ಸಂಗೀತಕ್ಕೆ ಇವರಿಗೆ ಇವರ ತಂದೆಯೇ ಗುರುಗಳೆಂದು ಹೇಳಬಹುದು.

೧. ಕಲ್ಯಾಣಿ	೨. ಯಮನ ಕಲ್ಯಾಣಿ	೩. ನೈಂಟಿ
೪. ಶ್ರೀರಾಗ	೫. ಭೀಮಪ್ಲಾಸ	೬. ಮಾಲಕಂಸ
೭. ಚಂದ್ರಕಂಸ	೮. ಮದುಕಂಸ	೯. ಮದುಮಲೆ
೧೦. ಶಂಕರಾ	೧೧. ಶಂಕರಾಭರಣ	೧೨. ಶುದ್ಯಸಾರಂಗ
೧೩. ಗೌಳಸಾರಂಗ	೧೪. ಗೌಡಸಾರಂಗ	೧೫. ಪಿಲ್ಲುರಾಗ
೧೬. ಹಂಸದ್ವನಿ	೧೭. ಬೂಫ	೧೮. ಪಹಡಿ

೧೯. ತೋಡಿ	೨೦. ದುರ್ಗಾಶ್ರೀ	೨೧. ಭಾಗ್ಯಶ್ರೀ
೨೨. ಅಹೀರ ಭೈರವಿ	೨೩. ಬೈರಾಗಿ ಭೈರವಿ	೨೪. ನಟ ಭೈರವಿ
೨೫. ಶಿವಮತ ಭೈರವಿ	೨೬. ಶುದ್ಧ ಭೈರವಿ	೨೭. ಆನಂದ ಭೈರವಿ
೨೮. ಜೋಗಿ	೨೯. ದುರ್ಗಾ	೩೦. ಶತತಾರಾ
೩೧. ಕಾವೆ	೩೨. ತಿಲಂಗ	

ಇಷ್ಟೆಲ್ಲ ರಾಗಗಳಲ್ಲಿ ಸುಶ್ರಾವ್ಯವಾಗಿ ಹಾಡಬಲ್ಲರು.

೧. ನಿಜಗುಣ ಶಿವಯೋಗಿಗಳ ಕೈವಲ್ಯ	೨. ಸರ್ಪಭೂಷಣ ಶಿವಯೋಗಿ ಕೈವಲ್ಯ
೩. ಮಹಾಲಿಂಗ ರಂಗರ ಕೈವಲ್ಯ	೪. ಶಂಕರಾರ್ಯರ ಕೈವಲ್ಯ
೫. ಪುರಂದರದಾಸರ ಕೀರ್ತನೆಗಳು	೬. ಕನಕದಾಸರ ಕೀರ್ತನೆಗಳು
೭. ಶಿಸುನಾಳ ಶರೀಫರು	೮. ಕಡಕೋಳ ಮಡಿವಾಳಪ್ಪನವರ ಗೀತೆಗಳು
೯. ನಿಂಬಾಳ ರಾಮಲಿಂಗರ ಪದ್ಯಗಳು	೧೦. ಗುಡ್ಡದ ಮಹಾಂತೇಶರ ಪದ್ಯಗಳು
೧೧. ನಂದ್ಯಾಳ ರಾಮಲಿಂಗರ ಪದ್ಯಗಳು	೧೨. ಬಸವಣ್ಣನವರ ವಚನಗಳು
೧೩. ಅಕ್ಕಮಹಾದೇವಿ ವಚನಗಳು	೧೪. ಸರ್ವಜ್ಞನ ವಚನಗಳು
೧೫. ಅಂಬಿಗರ ಚೌಡಯ್ಯನ ವಚನಗಳು	೧೬. ಕುಮಾರ ಕಕ್ಕಯ್ಯನ ವಚನ

ಹೀಗೆ ಈ ಎಲ್ಲ ಸಾಹಿತ್ಯದ ಸುಮಾರು ೬೦೦ ಪದ್ಯಗಳನ್ನು ಕಂಠಪಾಠದಿಂದ ಹಾಡುವ ಅದ್ಭುತವಾದ ಪ್ರತಿಭೆ ಇದೆ. ಸುಮಾರು ೨೫೦ ವಚನಗಳನ್ನು ಕಂಠಪಾಠದಿಂದ ಹೇಳಬಲ್ಲರು. ಅಲ್ಲದೇ ಅಶುಕವಿಯು ಹೌದು. ಇವರಿಗೆ –

೧. ಯುವಜನಸೇವಾ ಹಾಗೂ ಕ್ರೀಡಾ ಇಲಾಖೆಯಿಂದ ೧೯೮೫–೮೬ರಲ್ಲಿ ತಾಲೂಕಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

೨. ಜಿಲ್ಲಾಡಳಿತ ಹಾಗೂ ಕನ್ನಡ ಸಂಸ್ಕೃತಿ ಇಲಾಖೆ ಬೆಳಗಾವಿಯ ವತಿಯಿಂದ ಕೊಟ್ಟಲಗಿಯಲ್ಲಿ ನಡೆದ ಗಡಿನಾಡು ಉತ್ಸವ ೧೯೯೮ರಲ್ಲಿ ಪ್ರಶಸ್ತಿ ಬಂದಿದೆ.

೩. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರ ಇವರಿಂದ ಹುಲ್ಯಾಳ ಜಮುಖಂಡಿ ತಾಲೂಕು ಜಿಲ್ಲಾ ಜಾನಪದ ಕಲಾಮೇಳ ೨೦೦೧ ಪ್ರಶಸ್ತಿ ತೆಗೆದುಕೊಂಡಿದ್ದಾರೆ.

೪. ವಿಜಾಪುರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತ ಅಧ್ಯಕ್ಷರು ನೀಡಿದ ಪ್ರಶಸ್ತಿ ೨೦೦೩.

೫. ಕನ್ನಡ ಸಂಸ್ಕೃತಿ ಇಲಾಖೆ ನಿರ್ದೇಶನಾಲಯ, ಬೆಂಗಳೂರು ಕೈವಲ್ಯ ಪದ್ಧತಿಯ ವಿಚಾರ ಸಂಕಿರಣದ ಪ್ರಶಸ್ತಿ ಪತ್ರ.

೬. ಅಸ್ಪೃಶ್ಯತಾ ನಿವಾರಣಾ ಸಮಿತಿ ಅಥಣಿಯವರ ೧೯೯೬ರಲ್ಲಿ ಕೊಟ್ಟಲಗಿ ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ.

೭. ಇನ್ನೂ ೩೦–೪೦ ಸಂಘ ಸಂಸ್ಥೆ, ಗ್ರಾಮದವರು ಗುರುತಿಸಿ ನೀಡಿದ ಪ್ರಮಾಣ ಪತ್ರಗಳಿವೆ.

ಶ್ರೀ ಸಂಗಯ್ಯ ಮಲ್ಲಯ್ಯ ಮಂಗಿ

ಇವರು ಬಾಲ್ಯದಿಂದಲೇ ಕಲೆಯನ್ನು ಕರಗತ ಮಾಡಿಕೊಂಡವರು. ಚಿಕ್ಕಂದಿನಲ್ಲಿ ಲವಕುಶ

ನಾಟಕದಲ್ಲಿ ಲವನ ಪಾತ್ರಮಾಡಿ ವಿಶೇಷವಾಗಿ ಪ್ರತಿಭೆ ಮೆರೆದವರು. ಹಾಗೆಯೇ ಭಜನಾ ಕಾರ್ಯಕ್ರಮಳನ್ನು ನೀಡುವುದರಲ್ಲಿ ಇವರದು ಎತ್ತಿದ ಕೈ ಎಂದೇ ಹೇಳಬೇಕು. ಇವರು ಸುಮಾರು ೩೦-೩೫ ರಾಗಗಳಲ್ಲಿ ಹಾಡಬಲ್ಲರು. ಇವರು ಗ್ರಾಮದ ಪ್ರತಿಷ್ಠಿತ ಕಲಾವಿದರಲ್ಲಿ ಒಬ್ಬರು. ಚಿಕ್ಕಂದಿನಲ್ಲಿಯೇ ಅತೀ ಉನ್ನತ ಸಾಧನೆ ಮಾಡಿದ ಕಲಾವಿದರು. ಅನೇಕ ಭಜನಾ ಸಂಘಗಳನ್ನು ನಿರ್ಮಾಣ ಮಾಡುವುದರಲ್ಲಿ ಇವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರು ಶ್ರೀ ಕ್ಷೇತ್ರ ಇಂಚಗೇರಿ ಮಠದ ಭಜನಾ ಪದಗಳನ್ನು ಹಾಡಿರುವ ಎರಡು-ಮೂರು ಧ್ವನಿ ಸುರಳಿಗಳು ಬಿಡುಗಡೆಯಾದದ್ದು ಕಂಡುಬರುತ್ತದೆ. ಅಲ್ಲದೇ ಗ್ರಾಮಕ್ಕೆ ಇವರು ಕೀರ್ತಿ ತಂದುಕೊಟ್ಟ ವ್ಯಕ್ತಿಗಳೂ ಹೌದು. ರಾಜ್ಯಾದ್ಯಂತ ಅಲ್ಲದಿದ್ದರೂ ಬಿಜಾಪೂರ, ಬೆಳಗಾಂವ, ಬಾಗಲಕೋಟ ಈ ಮುಂತಾದ ಜಿಲ್ಲೆಗಳಲ್ಲಿ ಭಜನಾ ಕಾರ್ಯಕ್ರಮಗಳನ್ನು ನೀಡಿ ಪ್ರತಿಭೆ ಮೆರೆದಿದ್ದಾರೆ. ಸಂಗಯ್ಯ ಸ್ವಾಮಿಗಳು, ಕೊಟ್ಟಲಗಿ ಎಂದರೆ ಎಲ್ಲರೂ ಗುರುತಿಸುವಷ್ಟು ತಮ್ಮ ೩೬ನೇ ವಯಸ್ಸಿನಲ್ಲಿಯೇ ಸಾಧನೆ ಮಾಡಿರುವದು ನಿಜಕ್ಕೂ ಹೆಮ್ಮೆಯ ಸಂಗತಿ. ಆದರೆ ಇವರ ಕಲಾ ಸೇವೆಯನ್ನು ಗುರುತಿಸಿ ಇವರ ಪ್ರತಿಭೆಗೆ ಸರ್ಕಾರ ಗೌರವ ನೀಡಿಲ್ಲವೆನ್ನುವದು ಗ್ರಾಮದ ಜನಪದರ ಭಾವನೆ.

ಜಾನಪದ ಕಲಾವಿದರು

ಶ್ರೀಮತಿ ಯಶೋಧಾ ಸಿ. ದೊಡ್ಡನಿಂಗಪ್ಪಗೋಳ

ಕೊಟ್ಟಲಗಿ ಗ್ರಾಮದ ಜಾನಪದ ಕಲಾವಿದರಲ್ಲಿ ಇವರು ಕೂಡ ಒಬ್ಬರು. ತಮ್ಮ ಜೀವನದ ೪೦-೫೦ ವರ್ಷಗಳಿಂದ ಸತತವಾಗಿ ಜಾನಪದ ಪ್ರಕಾರಗಳಾದ ಹಂತಿ ಹಾಡುಗಳು, ಸೋಬಾನೆ ಪದ, ಜೋಗುಳ ಪದ ಹಾಗೂ ಪುರಂದರದಾಸರ ಹಾಡುಗಳು ಹಾಗೂ ಅನೇಕ ಕಥೆ, ಒಗಟು, ಗಾದೆಗಳನ್ನು ಹೇಳಬಲ್ಲವರಾಗಿದ್ದಾರೆ. ಇವರನ್ನು ಕರ್ನಾಟಕ ಘನ ಸರ್ಕಾರ ಜಾನಪದ ಕಲಾವಿದರಾಗಿ ಗುರುತಿಸಿದೆ. ಇವರಿಗೆ ಅನೇಕ ಸಂಘ ಸಂಸ್ಥೆಗಳು ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಿ ಗೌರವಿಸಿವೆ.

೩.೧೧. ಶೈಕ್ಷಣಿಕ ಸ್ಥಿತಿಗತಿ

ಕೊಟ್ಟಲಗಿಯು ಪ್ರಾಚೀನ ಕಾಲದ ಅಗ್ರಹಾರವಾಗಿದ್ದು ರಾಮತೀರ್ಥದ ಶಾಸನವೊಂದರಿಂದ ತಿಳಿದು ಬರುತ್ತದೆ.೮ ಹೀಗಾಗಿ ಗ್ರಾಮವು ಬ್ರಾಹ್ಮಣ ಶೈಕ್ಷಣಿಕ ಕೇಂದ್ರವಾಗಿತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಇಂತಹ ಶಿಕ್ಷಣ ಕೇಂದ್ರವಾದ ಕೊಟ್ಟಲಗಿ ಕಲ್ಯಾಣಿ ಚಾಲುಕ್ಯರ ಎರಡನೇಯ ಜಯಸಿಂಹನ ಕಾಲಕ್ಕೆ ಗುಲ್ಬರ್ಗ ಜಿಲ್ಲೆಯ ನಾಗಾವಿ ಸತಕ್ಕೆ (ಶಿಕ್ಷಣ ಕೇಂದ್ರಕ್ಕೆ) ಕೊಟ್ಟಲಗಿ ಮೂಲಿಗನು ದಾನರೂಪವಾಗಿ ನೀಡಿದ ಗ್ರಾಮವೆಂದು ಹೇಳಿಕೆಯೂ ಇದೆ.೯ ಹೀಗೆ ಶಿಕ್ಷಣ ನೀಡುವಲ್ಲಿ, ಶಿಕ್ಷಣಕ್ಕೆ ದಾನ ಕೊಡುವಲ್ಲಿ ಗ್ರಾಮವು ಶ್ರೇಷ್ಠತೆಯನ್ನು ಮೆರೆದಿದೆ.

ಇನ್ನು ಗ್ರಾಮದಲ್ಲಿ ೧೮೭೧ರಲ್ಲಿ ಮೊಟ್ಟ ಮೊದಲು ಪ್ರಾಥಮಿಕ ಶಾಲೆ ಆರಂಭಗೊಂಡಿತು. ಅಂದು ಆರಂಭಗೊಂಡ ಆ ಬ್ರಿಟಿಷ ಕಾಲದ ಕಟ್ಟಡದಲ್ಲಿಯೇ ಇಂದಿಗೂ ಶಾಲೆಯು ಮುಂದುವರೆಯುತ್ತಿದೆ. ಶತಮಾನವನ್ನು ಕಂಡ ಶಾಲೆಯು ಇದು ಎಂಬ ಹೆಮ್ಮೆಯು ಇದೆ. ಅಂದಿನ ಕಾಲದ ಶೈಕ್ಷಣಿಕ ಅಗತ್ಯತೆಯನ್ನು ಪೂರೈಸುವಲ್ಲಿ ಗ್ರಾಮದ ಈ ಶಾಲೆ ಯಶಸ್ವಿಯಾಗಿತ್ತು ಎಂದು ಹೇಳಬಹುದು. ಆದರೆ ದಿನಗಳೆದ ಹಾಗೆ ಜನಸಂಖ್ಯೆ ಬೆಳೆದು ಗ್ರಾಮವು ಬೆಳವಣಿಗೆ

ಕಂಡಂತೆ ಅಸಾಧ್ಯವೆಂಬುದನ್ನು ಮನಗಂಡು ಸರ್ಕಾರ ಇವುಗಳ ಸಂಖ್ಯೆ ಹೆಚ್ಚಿಸಿತು. ಗ್ರಾಮದಲ್ಲಿ ಪ್ರಸ್ತುತ ಏಳು ಪ್ರಾಥಮಿಕ ಶಾಲೆಗಳನ್ನು, ಒಂದು ಹೈಸ್ಕೂಲನ್ನು ಕೂಡ ಸ್ಥಾಪಿಸಿದೆ. ಇಷ್ಟಲ್ಲದೆ ಖಾಸಗಿ ಹಿರಿಯ ಪ್ರಾಥಮಿಕ ಶಾಲೆಯು ಕೂಡ ೧೯೯೫ ರಲ್ಲಿ ಪ್ರಾರಂಭವಾಗಿದೆ. ಅಂದರೆ ಗ್ರಾಮವು ಎಷ್ಟೊಂದು ಶೈಕ್ಷಣಿಕವಾಗಿ ಜಾಗೃತವಾಗಿದೆ ಎಂಬುದನ್ನು ಅರಿಯಲು ಸಾಧ್ಯವಾಗುತ್ತದೆ. ಇಷ್ಟಲ್ಲದೆ ಚಿಕ್ಕ ಮಕ್ಕಳಿಗೆ ಶಿಕ್ಷಣ ನೀಡಲು ಗ್ರಾಮದಲ್ಲಿ ಎಂಟು ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳ ವಿವರವನ್ನು ಗಮನಿಸಿದಾಗ–

೧. ಹೂತೋಟ ಅಂಗನವಾಡಿ ಕೇಂದ್ರ
೨. ಕುರುಬರ ಓಣಿ ಅಂಗನವಾಡಿ ಕೇಂದ್ರ
೩. ಮಾಧವಾನಂದ ಸರ್ಕಲ್ ಅಂಗನವಾಡಿ ಕೇಂದ್ರ
೪. ಹೊಲೆಯರ ಓಣಿ ಅಂಗನವಾಡಿ ಕೇಂದ್ರ
೫. ಬೇಡರಟ್ಟಿ ತೋಟದ ಅಂಗನವಾಡಿ ಕೇಂದ್ರ
೬. ಮಾಲಗಾರ ತೋಟ ಅಂಗನವಾಡಿ ಕೇಂದ್ರ
೭. ಸತ್ತಿಗೇರಿ ತೋಟ ಅಂಗನವಾಡಿ ಕೇಂದ್ರ
೮. ಮನಮೀ ಮಹಾರಾಜರ ಮಠದ ಹತ್ತಿರ ಅಂಗನವಾಡಿ ಕೇಂದ್ರ

ಹೀಗೆ ಒಟ್ಟು ೮ ಅಂಗನವಾಡಿಗಳು ಕಾರ್ಯನಿರ್ವಹಿಸುತ್ತಿದ್ದು ಗ್ರಾಮದ ಚಿಕ್ಕ ಮಕ್ಕಳ ಶೈಕ್ಷಣಿಕ ಅಗತ್ಯತೆಯನ್ನು ಪೂರೈಸುತ್ತಿವೆ. ಜೊತೆಗೆ ಸರ್ಕಾರದ ಪೌಷ್ಟಿಕ ಆಹಾರ ನೀಡುವಲ್ಲಿ ತಮ್ಮ ಪಾತ್ರ ನಿರ್ವಹಿಸುತ್ತಿವೆ.

ಇನ್ನು ಗ್ರಾಮದಲ್ಲಿ ಏಳು ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು, ಅವುಗಳಲ್ಲಿ ಎರಡು ಹಿರಿಯ ಪ್ರಾಥಮಿಕ ಶಾಲೆಗಳನ್ನು ಹೊಂದಿದೆ. ಗ್ರಾಮದಲ್ಲಿ ಮೊಟ್ಟ ಮೊದಲು ಸ್ಥಾಪನೆಯಾದ ಸರಕಾರಿ ಶಾಲೆ ಮತ್ತು ಯಲ್ಲಮ್ಮಾ ತೋಟದ ಶಾಲೆ ಇವೆರಡು ಹಿರಿಯ ಪ್ರಾಥಮಿಕ ಶಾಲೆಗಳಾಗಿವೆ. ಇನ್ನುಳಿದವು ಕಿರಿಯ ಸರಕಾರಿ ಪ್ರಾಥಮಿಕ ಶಾಲೆಗಳಾಗಿವೆ. ಅವುಗಳ ವಿವರವನ್ನು ಕೆಳಗಿನಂತೆ ಗಮನಿಸಬಹುದಾಗಿದೆ.

ಅ. ನಂ.	ಶಾಲೆಯ ಹೆಸರು	ಆರಂಭವಾದ ವರ್ಷ	ಪ್ರಧಾನ ಗುರುಗಳು	ಸಿಬ್ಬಂಧಿಯಸಂಖ್ಯೆ	ಕೊಠಡಿಗಳು	ಶಾಲೆಯ ಪ್ರಕಾರ	ಪಟ್ಟದ ಸಂಖ್ಯೆ		
							ಗಂ.	ಹೆ.	ಒಟ್ಟು
೧	ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕೊಟ್ಟಲಗಿ	೧೮೭೧	ಶ್ರೀ ಮಹಾದೇವ ಕರೆಪ್ಪಗೋಳ	೦೮	೧೪	೧ ರಿಂದ ೮	೧೪೦	೩೪	೨೭೪
೨	ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಹೂತೋಟ, ಕೊಟ್ಟಲಗಿ	೨೦೦೫	ಶ್ರೀ ಎಸ್.ಎಮ್. ಆಲಬಾಳ	೦೩	೦೫	೧ ರಿಂದ ೫	೪೦	೪೬	೮೬
೩	ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಯಲ್ಲಮನಗುಡಿ ಕೊಟ್ಟಲಗಿ	೨೦೦೬	ಶ್ರೀ ಎಸ್.ಡಿ. ಪಾಟೀಲ	೦೪	೦೫	೧ ರಿಂದ ೯	೪೦	೪೫	೮೫
೪	ಸರಕಾರಿ ಕಿರಿಯ ಪ್ರಾಥಮಿಕ ಶಾಲೆ	೨೦೦೪	ಶ್ರೀ ಜಿ.ಆರ್. ಹೊನಮೋರೆ	೦೫	೦೫	೧ ರಿಂದ	೧೮	೧೫	೩೩

	ಬಡವಗೋಳ ವಸತಿ ಕೊಟ್ಬಲಗಿ					೫			
೫	ಕಿರಿಯ ಪ್ರಾಥಮಿಕ ಶಾಲೆ, ಕಬ್ಬೂರ ವಸತಿ ಕೊಟ್ಬಲಗಿ	೨೦೦೮	ಶ್ರೀ ಬಿ.ಡಿ. ಕೆಂಪವಾಡ	೦೧	೦೫	೧ ರಿಂದ ೫	೦೮	೦೯	೧೭
೬	ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ಕುಂಬಾರ ವಸತಿ, ಕೊಟ್ಬಲಗಿ	೨೦೦೭	ಶ್ರೀ ಸಿ.ಎಸ್. ಪೂಜಾರಿ	೦೨	೦೩	೧ ರಿಂದ ೫	೧೧	೧೬	೨೭
೭	ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ಕರೆಪ್ಪಗೋಳ ವಸತಿ, ಕೊಟ್ಬಲಗಿ	೨೦೧೧	ಶ್ರೀ ಜೆ.ಬಿ. ಪೊದ್ದಾರ	೦೧	ಶೆಡ್ಡ	೧ ರಿಂದ ೫	೨೩	೧೧	೩೪

ಇನ್ನು ಪ್ರಾಥಮಿಕ ಶಿಕ್ಷಣಕ್ಕಷ್ಟೆ ತೃಪ್ತಿ ಪಡದೇ ಗ್ರಾಮವು ಪ್ರೌಢಶಾಲಾ ಹಂತಕ್ಕೆ ತನ್ನ ದಾಪುಗಾಲು ಹಾಕಿದ್ದು ಇತಿಹಾಸವೇ ಸರಿ. ಗ್ರಾಮದಲ್ಲಿ ಗ್ರಾಮದ ಜನತೆಯ ಒತ್ತಾಸೆಯ ಮೇರೆಗೆ ರಾಜಕೀಯ ನಾಯಕರ ಸಹಾಯದಿಂದ ಸರ್ಕಾರಿ ಪ್ರೌಢಶಾಲೆಯು ಕೊಟ್ಬಲಗಿಯಲ್ಲಿ ೧೯೯೨ರಲ್ಲಿ ಪ್ರಾರಂಭವಾಗಿದೆ.೧೦ ಪ್ರೌಢಶಾಲಾ ವಿವರ ಈ ಕೆಳಗಿನಂತಿದೆ.

ಅ. ನಂ.	ಶಾಲೆಯ ಹೆಸರು	ಆರಂಭ ವಾದ ವರ್ಷ	ಮುಖ್ಯೋಪಾಧ್ಯಾಯರು	ಸಿಬ್ಬಂಧಿಯಸಂಖ್ಯೆ	ಕೊಠಡಿಗಳು	ಶಾಲೆಯ ಪ್ರಕಾರ	ಪಟ್ಟದ ಸಂಖ್ಯೆ		
							ಗಂ.	ಹೆ.	ಒಟ್ಟು
೧	ಸಕರಾರಿ ಪೌಢ ಶಾಲೆ ಕೊಟ್ಬಲಗಿ	೧೯೮೮	ಶ್ರೀ ಸಿ.ಬಿ. ಹುಣಶ್ಯಾಳ	೧೧	೦೭	೮ ರಿಂದ ೧೦	೧೧೪	೧೦೪	೨೧೮

ಖಾಸಗಿ ಶಿಕ್ಷಣ ಸಂಸ್ಥೆಗಳು

ಇನ್ನು ಇಷ್ಟೆಲ್ಲ ಸರ್ಕಾರಿ ಶಾಲೆಗಳು ಶೈಕ್ಷಣಿಕ ಅಗತ್ಯ ಪೂರೈಸುತ್ತಿದ್ದರೂ ಗ್ರಾಮದ ಜನರ ಶಿಕ್ಷಣ ಪ್ರೇಮಿಗಳ ಆಕಾಂಕ್ಷೆಯಿಂದ ಖಾಸಗಿ ಪ್ರಾಥಮಿಕ ಶಾಲೆಯು ಆರಂಭಗೊಂಡಿದೆ. ಶ್ರೀ ಬಸವಾರೂಢ ಶಿಕ್ಷಣ ಸಂಸ್ಥೆಯ ಶ್ರೀ ಬಸವಾರೂಢ ಹಿರಿಯ ಪ್ರಾಥಮಿಕ (ಕಾನ್ವೆಂಟ ಮಾದರಿಯ) ಶಾಲೆಯನ್ನು ಗ್ರಾಮದ ಶಿಕ್ಷಣ ಪ್ರೇಮಿಗಳು ಹಿರಿಯರು ಆದ ಶ್ರೀ ಶಂಕರಪ್ಪ ಬಂಡರಗೋಟಿಯವರು ಕ್ರಿ.ಶ. ೧೯೯೫ರಲ್ಲಿ ಸ್ಥಾಪಿಸಿದರು. ಈ ಶಾಲೆಯು ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಶಿಕ್ಷಣ ಕ್ಷೇತ್ರದಲ್ಲಿ ದಾಪುಗಾಲಿಡುತ್ತ ಉತ್ತಮ ಶಿಕ್ಷಕ ಬಳಗದೊಂದಿಗೆ ಮಕ್ಕಳ ಭವಿಷ್ಯ ರೂಪಿಸುವಲ್ಲಿ ನಿರತವಾಗಿದೆ. ಅಲ್ಲದೇ ಗ್ರಾಮದ ಸರ್ಕಾರಿ ಶಾಲೆಗೆ ತಮ್ಮ ಮಕ್ಕಳನ್ನು ಕಳುಹಿಸಲು ಇಷ್ಟ ಪಡದ ಪಾಲಕರ ಅಗತ್ಯತೆಯನ್ನು ಈ ಶಾಲೆ ಪೂರೈಸುತ್ತಿದೆ. ಅದರ ವಿವರ ಈ ಕೆಳಗಿನಂತಿದೆ.

ಅ. ನಂ.	ಶಾಲೆಯ ಹೆಸರು	ಆರಂಭ ವಾದ ವರ್ಷ	ಪ್ರಧಾನ ಗುರುಗಳು	ಸಿಬ್ಬಂಧಿಯಸಂಖ್ಯೆ	ಕೊಠಡಿಗಳು	ಶಾಲೆಯ ಪ್ರಕಾರ	ಪಟ್ಟದ ಸಂಖ್ಯೆ		
							ಗಂ.	ಹೆ.	ಒಟ್ಟು
೧	ಶ್ರೀ ಬಸವಾರೂಢ ಹಿರಿಯ ಪ್ರಾಥಮಿಕ ಶಾಲೆ	೧೯೯೫	ಶ್ರೀ ಮಹೇಶ ಶಂಕರೆಪ್ಪ ಬಂಡರಗೋಟಿ	೦೯	೦೯	೧ ರಿಂದ ೭	೧೮೦	೮೧	೨೬೧

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣದ ನಂತರ ಗ್ರಾಮದ ಮಕ್ಕಳಿಗೆ ಪದವಿ ಪೂರ್ವ, ಪದವಿ ಕಾಲೇಜಿನ ಅಗತ್ಯ ಕೂಡಾ ಇದೆ. ಏಕೆಂದರೆ ಪದವಿ ಪೂರ್ವ ಹಂತಕ್ಕೆ ಮಕ್ಕಳನ್ನು

ಕಳುಹಿಸಬೇಕಾದರೆ ಗ್ರಾಮದ ಮಕ್ಕಳು ಅನ್ಯ ಗ್ರಾಮಗಳಿಗೆ ತೆರಳಬೇಕು. ನೆರೆಯ ಬಿಜಾಪೂರ ಜಿಲ್ಲೆಯ ತಿಕೋಟಾ, ಬಿಜಾಪೂರ, ಗ್ರಾಮದ ಹೋಬಳಿಯಾದ ತೇಲಸಂಗ, ತಾಲೂಕು ಕೇಂದ್ರವಾದ ಅಥಣಿಗಳನ್ನೇ ಆಶ್ರಯಿಸುವದು ಅನಿವಾರ್ಯವಾಗಿದೆ. ಗ್ರಾಮದಿಂದ ಕನಿಷ್ಠ ೩೦ ಕಿ.ಮೀ. ಗರಿಷ್ಠ ೫೦ ಕಿ.ಮೀ. ದೂರ ಕ್ರಮಿಸಿ ತಮ್ಮ ಮಕ್ಕಳಿಗೆ ಅದರಲ್ಲೂ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸಲು ಎಷ್ಟೊ ಪಾಲಕರು ಹಿಂಜರಿಯುತ್ತಿರುವದು ಕಂಡುಬರುತ್ತದೆ. ಇದರಿಂದ ಸ್ತ್ರೀ ಶಿಕ್ಷಣ ಕುಂಠಿತಗೊಳ್ಳುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಆಧನಿಕತೆಯ ಹಿನ್ನಲೆಯಲ್ಲಿ ಸಂಪ್ರದಾಯಸ್ಥ ಜನ ತಮ್ಮ ಹೆಣ್ಣು ಮಕ್ಕಳನ್ನು ಗ್ರಾಮದಿಂದ ಹೊರಗಡೆ ಕಳುಹಿಸಲು ಹಿಂಜರಿಯುತ್ತಾರೆ.

ಶೈಕ್ಷಣಿಕ ಪ್ರಗತಿಯ ನೋಟ

ಇಷ್ಟೆಲ್ಲಾ ಅಡೆತಡೆಗಳಿದ್ದರೂ ಗ್ರಾಮದ ಶೈಕ್ಷಣಿಕ ಸಾಧನೆಯೇನೂ ಕಡಿಮೆಯದಲ್ಲ. ಇಂತಹ ಗ್ರಾಮವೊಂದರಲ್ಲಿ ಜನಿಸಿದ ಅನೇಕರು ಪ್ರಾಥಮಿಕ ಶಾಲಾ ಶಿಕ್ಷಕರು, ಪ್ರೌಢಶಾಲಾ ಶಿಕ್ಷಕರು, ಪದವಿ ಪೂರ್ವ ಇಲಾಖೆಯಲ್ಲಿ ಉಪನ್ಯಾಸಕರು, ನ್ಯಾಯವಾದಿಗಳು, ಬ್ಯಾಂಕ ಉದ್ಯೋಗಿಗಳು, ಪದವಿ ಕಾಲೇಜಿನ ಪ್ರಾಂಶುಪಾಲರು, ಭಾರತೀಯ ಸೈನ್ಯದಲ್ಲಿ, ಪೊಲೀಸ ಇಲಾಖೆಯಲ್ಲಿ, ರಸ್ತೆ ಸಾರಿಗೆ ನಿಗಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇಷ್ಟೆ ಅಲ್ಲದೇ ಗ್ರಾಮದ ಶ್ರೀ ರಮೇಶ ಸಿದ್ದಪ್ಪ ಅಥಣಿ ಇವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದು ಕರ್ನಾಟಕ ಆಡಳಿತ ಸೇವೆಯ (ಕೆ.ಎ.ಎಸ್) ಪರೀಕ್ಷೆಯಲ್ಲಿ ೨೦೧೧ರಲ್ಲಿ ಉತ್ತೀರ್ಣರಾಗಿ ರಾಜ್ಯ ಲೆಕ್ಕಪತ್ರ ಇಲಾಖೆಯಲ್ಲಿ ಸರ್ಕಾರಿ ಸೇವೆಗೆ ಸೇರಿದ್ದಾರೆ. ೨೦೧೨ನೇ ಸಾಲಿನಲ್ಲಿ ಆಯ್ಕೆ ಆದದ್ದು ಹೆಮ್ಮೆಯ ಸಂಗತಿಯಾಗಿದೆ. ಇವರು ಅತೀ ಕಿರಿಯ ವಯಸ್ಸಿನಲ್ಲಿ ಹಿರಿಯ ಸಾಧಕರಾಗಿ ಗ್ರಾಮದ ಕೀರ್ತಿಯನ್ನು ರಾಜ್ಯಮಟ್ಟಕ್ಕೆ ಕೊಂಡೊಯ್ದಿದ್ದಾರೆ.

ಹೀಗೆ ಕಿರಿದರೊಳ್ ಪಿರಿದೆನ್ನವಂತೆ ಗ್ರಾಮವು ತನ್ನ ಒಡಲಿನಲ್ಲಿ ಅನೇಕ ಸಾಧನೆಯ ಸಾಧಕರನ್ನು ಹುದುಗಿಸಿಟ್ಟುಕೊಂಡಿದೆ.

ಹೀಗೆ ಗ್ರಾಮವು ಸಾಮಾಜಿಕ ವಿವಿಧ ಸ್ತರದಲ್ಲಿ ಬೆಳವಣಿಗೆ ಹೊಂದುತ್ತಾ ಪ್ರಾಚೀನ ಪರಂಪರೆಯ ದಾರಿಯಲ್ಲಿ ಆಧುನಿಕ ಬದುಕನ್ನು ಅನಿವಾರ್ಯವಾಗಿ ಸ್ವೀಕರಿಸುವ ಮನೋಸ್ಥಿತಿಯಲ್ಲಿ ಗ್ರಾಮದ ಜನರಿದ್ದಾರೆ. ಬದಲಾವಣೆ ಜಗತ್ತಿನ ನಿಯಮವಾಗಿರುವುದರಿಂದ ಗ್ರಾಮದಲ್ಲಿ ಜನಪದರು ಒಂದು ಕಾಲದಲ್ಲಿ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂಜರಿಯುತ್ತಿದ್ದವರು ಇಂದು ತಾವೇ ಮುಂದಾಗಿ ಶಿಕ್ಷಣ ಕೊಡಿಸುತ್ತಿದ್ದಾರೆ, ಪ್ರಜ್ಞಾವಂತ ರಾಗಿದ್ದಾರೆ. ಅನಿವಾರ್ಯವಾದ ಬದುಕಿನ ಬದಲಾವಣೆಗಳನ್ನು ಮಕ್ತ ಮನಸ್ಸಿನಿಂದಲೇ ಸ್ವೀಕರಿ ಸುತ್ತಿದ್ದಾರೆ. ಹಲವಾರು ಪಾರಂಪರಿಕ ಉದ್ಯೋಗಗಳು ಇಂದು ಹೊಸರೂಪ ಪಡೆದುಕೊಂಡಿವೆ. ಇನ್ನು ಹೊಸ ಹೊಸ ಉದ್ಯೋಗಗಳು ಗ್ರಾಮದಲ್ಲಿ ಮೈದಾಳಿ ನಿಂತಿವೆ. ಎಷ್ಟೋ ಕಠಿಣ ಸಂಪ್ರದಾಯದ ಕಠೋರ ಬಂಧನ ಕೊಂಡಿಗಳಿಂದು ಸಡಿಲುಗೊಳ್ಳುತ್ತಿವೆ. ಇಷ್ಟೆಲ್ಲಾ ಬದಲಾವಣೆಯ ಕಾಲದಲ್ಲಿ ಪ್ರಾಚೀನ ಪರಂಪರೆಯ ಬದುಕು ಇಂದು ಕೇವಲ ಸವಿ ನೆನಪು ಮಾತ್ರ ಆಗುತ್ತಿದೆ. ಪರಂಪರೆಯ ಸತ್ವ, ವಿಜ್ಞಾನದ ಸತ್ಯ ಎರಡು ಆಧುನಿಕ ಬದುಕನ್ನು ಗಟ್ಟಿಯಾಗಿ ನೆಲೆಗೊಳಿಸಿವೆ.

ಅಡಿಟಿಪ್ಪಣಿಗಳು

೧. ಜಾನಪದ ಕೈಪಿಡಿ ಪ್ರಸಂ. ಡಾ.ಎಚ್.ಜೆ. ಲಕ್ಕಪ್ಪಗೌಡ ಕನ್ನಡ ಪುಸ್ತಕ ಪ್ರಾಧಿಕಾರ, ಪಂಪಮಹಾಕವಿ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು ೫೬೦೦೧೮

೨. ಭಾರತೀಯ ಸಮಾಜ (ಸಂರಚನೆ ಮತ್ತು ಪರಿವರ್ತನೆ) ಲೇಖಕರು: ಚ.ನ. ಶಂಕರರಾವ ಜೈ ಭಾರತ ಪ್ರಕಾಶನ, ಮಂಗಳೂರು ಪುಟ:೧೩೧

೩. ಕುಮಾರಿ ಸುನಂದಾ ಸಂಗಪ್ಪ ಬಡವಗೋಳ ವಯಸ್ಸು: ೧೬ ವರ್ಷ ಜ್ಯಾತಿ: ಲಿಂಗಾಯತ ಉದ್ಯೋಗ: ವಿದ್ಯಾರ್ಥಿನಿ ಸಾ॥ ಕೊಟ್ಟಲಗಿ

೪. ಕುಮಾರಿ ಭಾಗ್ಯಶ್ರೀ ಭೀಮಪ್ಪ ಅಥಣಿ ವಯಸ್ಸು: ೧೬ ವರ್ಷ ಜ್ಯಾತಿ: ಲಿಂಗಾಲಯತ ಉದ್ಯೋಗ: ವಿದ್ಯಾರ್ಥಿನಿ ಸಾ॥ಕೊಟ್ಟಲಗಿ

೫. ಶ್ರೀ ಸಿದರಾಯಪ್ಪ ಸಿದ್ದಪ್ಪ ದೊಡ್ಡನಿಂಗಪ್ಪಗೋಳ ವಯಸ್ಸು: ೮೫ ಉದ್ಯೋಗ: ವಿಶ್ರಾಂತಿ ಜಾತಿ: ಲಿಂಗಾಯತ ಸಾ॥ ಕೊಟ್ಟಲಗಿ

೬. ಕರ್ನಾಟಕ ಜನಪದ ಕಲೆಗಳ ಕೋಶ, ಸಂಪಾದಕರು: ಶ್ರೀ ಹಿ.ಚಿ. ಬೋರಲಿಂಗಯ್ಯ ಪು–೩೫ ಕನ್ನಡ ವಿ.ವಿ. ಹಂಪಿ ೧೯೯೬

೭. ಅದೇ ಪುಟ–೧೩೮

೮. ಕ.ಇ. ೨ ಶಾ.ಸಾ. ೨೪ ರಾಮತೀರ್ಥ ತಾ॥ಅಥಣಿ

೯. ಕ.ಇ. ೨ ಶಾ.ಸಾ. ೦೬ ರಾಮತೀರ್ಥ ತಾ॥ಅಥಣಿ

೧೦. ಶ್ರೀ ಎಸ್.ಎಮ್. ಕೋಣದೆ, ಸಹಶಿಕ್ಷಕರು, ಸರಕಾಗಿ ಪೌಢಶಾಲೆ, ಕೊಟ್ಟಲಗಿ

ಅಧ್ಯಾಯ–೪

ರಾಜಕೀಯ ಪರಂಪರೆ

ಅಧ್ಯಾಯ ೪

ರಾಜಕೀಯ ಪರಂಪರೆ

ಈ ಅಧ್ಯಾಯದಲ್ಲಿ ವಿಶೇಷವಾಗಿ ಕೊಟ್ಟಲಗಿ ಗ್ರಾಮದ ರಾಜಕೀಯ ನೆಲೆಗಳನ್ನು ಎರಡು ವಿಭಾಗಗಳಲ್ಲಿ ಗಮನಿಸಲಾಗಿದೆ. ಒಂದು ಸ್ವಾತಂತ್ರ ಸಂಗ್ರಾಮದ ಕುರಿತಾದರೆ ಇನ್ನೊಂದು ಆಧುನಿಕ ರಾಜಕೀಯ ಹಿನ್ನಲೆಯನ್ನು ಗಮನಿಸಲಾಗಿದೆ.

೪.೧. ಸ್ವಾತಂತ್ರ ಸಂಗ್ರಾಮದಲ್ಲಿ ಕೊಟ್ಟಲಗಿ ಪಾತ್ರ

ಕೊಟ್ಟಲಗಿ ಗ್ರಾಮದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಅಭಿಮಾನದ ಬುಗ್ಗೆ ಉಕ್ಕಿ ಹರಿದದ್ದು ಇತಿಹಾಸ. ಈ ಇತಿಹಾಸದಲ್ಲಿ ಅನೇಕ ಜನ ಗ್ರಾಮದ ಸ್ವಾತಂತ್ರ್ಯ ಯೋಧರ ನಿಸ್ವಾರ್ಥ ಬದುಕಿನ ಬಲವಾದ ಸಮರ್ಥನೆಯ ಜೊತೆಗೆ ಅವರ ಸಾರ್ಥಕ ಬದುಕನ್ನು ಮುಖ್ಯ ವಾಹಿನಿಗೆ ತರುವ ಧ್ಯೇಯವೂ ಇದೆ. ಏಕೆಂದರೆ ಬಹಳ ದಿನಗಳಿಂದಲೂ ಗಮನಿಸಿದಾಗ ಗ್ರಾಮದ ಸ್ವಾತಂತ್ರ್ಯ ಯೋಧರ ತಲಸ್ಪರ್ಶಿ ಅಧ್ಯಯನ ನಡೆಯದೇ ಇರುವುದರಿಂದ ಹಾಗೂ ಗ್ರಾಮದ ಸ್ವಾತಂತ್ರ್ಯ ಸಂಗ್ರಾಮದಲ್ಲಿಯ ಅವರ ಪಾತ್ರ ಸರಿಯಾಗಿ ಇತಿಹಾಸ ಪುಟದಲ್ಲಿ ದಾಖಲಾಗದೇ ಉಳಿದಿದ್ದರಿಂದ ನನ್ನ ಅಧ್ಯಯನದಲ್ಲಿ ಸೇರಿಸಿಕೊಳ್ಳಬೇಕಾದ ಅವಶ್ಯಕತೆ ಕಂಡುಬಂತು. ಈ ಮೂಲಕ ಗ್ರಾಮದ ಸ್ವಾತಂತ್ರ್ಯ ಯೋಧರ ಉದಾತ್ತ ಬದುಕಿಗೆ ಭಕ್ತಿಯ ನುಡಿ ನಮನಗಳ ಕಿರು ಕಾಣಿಕೆಯಾದಿತೆಂದು ನನ್ನ ಭಾವನೆ. ಏಕೆಂದರೆ ಸಮಾಜದಲ್ಲಿ ಎಲೆಮರೆಯ ಕಾಯಿಯಂತೆ ಎಂದೂ ತಮ್ಮ ಪ್ರಚಾರವನ್ನು ಬಯಸದೇ ಸರ್ಕಾರ ಕೊಡುವ ಮಾಸಾಶನ ನಿರಾಕರಿಸಿದ ಮಹಾನ್ ಚೇತನಗಳ ಅಧ್ಯಯನವೊಂದು ಆಧುನಿಕ ಪೀಳಿಗೆಗೆ ಮಾರ್ಗದರ್ಶಕವೂ ಹೌದು.

ಭವ್ಯ ಭಾರತದ ಚರಿತ್ರೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟವಾದ ಸ್ಥಾನವಿದೆ. ಅದು ಅಮರ ಇತಿಹಾಸ. ವೀರಾಧಿವೀರರು, ಧೀರರು, ತ್ಯಾಗಮಯಿಗಳು ದೇಶವನ್ನು ಸ್ವತಂತ್ರಗೊಳಿಸುವಲ್ಲಿ ವಹಿಸಿದ ಪಾತ್ರ ಅದ್ವಿತೀಯ, ಅವಿಸ್ಮರಣೀಯವಾದುದು. ಹಲವಾರು ಧೀರ ಯೋಧರು ತನು, ಮನ, ಧನ, ಪ್ರಾಣ ಹೀಗೆ ಅನೇಕ ರೀತಿಯಲ್ಲಿ ತ್ಯಾಗ ಮಾಡಿದ ಸಂಗತಿಯನ್ನು ಸ್ಮರಿಸುವುದೇ ಅಮೃತಗಳಿಗೆ.

ಸ್ವಾತಂತ್ರ ಸಂಗ್ರಾಮವೆಂಬ ಅಗಾಧವಾದ ಸಾಗರದಲ್ಲಿ "ಕೊಟ್ಟಲಗಿ ಒಂದು ಚಿಕ್ಕ ಬಿಂದು"ವಾದರೂ ತನ್ನದೇ ಆದ ಹಲವಾರು ಚಿಕ್ಕ ಚಿಕ್ಕ ಝುರಿಗಳನ್ನು ಸೇರಿಸಿದೆ. ತಾಲೂಕಿನ ಸತ್ತಿ, ಜುಗೂಳ, ಕೊಟ್ಟಲಗಿ, ಐನಾಪೂರ, ಕೊಟಕನೂರ, ಅಡಹಳ್ಳಿ, ರಾಮತೀರ್ಥ, ಕಕಮರಿ, ಖವಟಕೊಪ್ಪ, ಉಗಾರಖುರ್ದ, ಶೇಡಬಾಳ, ಮಂಗಸೂಳಿ, ಶಂಕರಹಟ್ಟಿ, ಸವದಿ, ಸಪ್ತಸಾಗರ ಮುಂತಾದ ಗ್ರಾಮಗಳು ಸ್ವಾತಂತ್ರ ಸಂಗ್ರಾಮದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿವೆ.

ಕೊಟ್ಟಲಗಿ ಗ್ರಾಮವು ದಿಟ್ಟ, ಧೀರ, ವೀರ, ನಿಸ್ವಾರ್ಥಿಗಳಾದ ಸ್ವಾತಂತ್ರ ಯೋಧರ ಬೀಡು ಎಂದು ಕರೆದರೆ ಅತಿಶಯೋಕ್ತಿಯಾಗುವುದಿಲ್ಲ. ಗ್ರಾಮವು ತಾಲೂಕಿನಲ್ಲಿಯೇ ಅತ್ಯಂತ ಶಕ್ತಿಯುತವಾದ ಸಾಮರ್ಥ್ಯವಂತರಾದ ಯೋಧರನ್ನು ಹೊಂದಿ; ಎಲೆ ಮರೆಯ ಕಾಯಿಯಂತೆ ಇರುವದು ಸರ್ವವಿದಿತ. ತಾಲೂಕಿನಲ್ಲಿ ನಡೆದ ಸ್ವಾತಂತ್ರ ಸಂಗ್ರಾಮದಲ್ಲಿ ವಿಶೇಷವಾದ ಕೊಡುಗೆ ನೀಡಿದ ಯೋಧರು; ಇಂದು ಇತಿಹಾಸ ಪುಟಗಳಿಂದ ದೂರವಿರುವದು ನಿಜಕ್ಕೂ ವಿಚಿತ್ರವಾದರೂ ಸತ್ಯವೆನ್ನುವ ಮಾತಿಗೆ ಸಮೀಪವಾಗಿದೆ.

ಗ್ರಾಮದ ಸ್ವಾತಂತ್ರಯೋಧರಿಗೆ ಚೈತನ್ಯ ಶಕ್ತಿಯಾಗಿ, ಮಾರ್ಗದರ್ಶಕರಾಗಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕುವಂತೆ ಮಾಡಿದವರೆ ಶ್ರೀಮಾಧವಾನಂದ ಪ್ರಭೂಜೀಯವರು. ಇವರು ಬಿಜಾಪೂರ ಜಿಲ್ಲೆಯ ಇಂಡಿ ತಾಲೂಕಿನ ಇಂಚಗೇರಿ ಮಠದ ಅಧಿಪತಿಗಳಾಗಿ ತಮ್ಮ ಭಕ್ತ ಸಮೂಹದೊಂದಿಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗೈದ ಸೇವೆ ಅವಿಸ್ಮರಣೀಯವಾದುದು. ಹೀಗಾಗಿ ಕರ್ನಾಟಕ, ಮಹಾರಾಷ್ಟ್ರದಾದ್ಯಂತ ಸ್ವಾತಂತ್ರ್ಯ ಸಂಗ್ರಾಮದ ಕಿಚ್ಚು ಹಚ್ಚಿ ಪ್ರಜ್ವಲಿಸುವಂತೆ ಮಾಡಿ; ಬ್ರಿಟಿಷರಿಗೆ ಸಿಂಹ ಸ್ವಪ್ನವಾಗಿ ಹೋರಾಡಿದವರು ಧೀಮಂತರಾದ ಶ್ರೀ ಸದ್ಗುರು ಮಾಧವಾನಂದರು. ಅವರು ಅಥಣಿ ತಾಲೂಕಿನ ಕೊಟ್ಟಲಗಿ, ತೆಲಸಂಗ, ಕಕಮರಿ, ಅಥಣಿ, ಸಂಕೋನಟ್ಟಿ, ಖವಟಕೊಪ್ಪ, ಶೇಗುಣಸಿ, ಐನಾಪೂರ, ಮೋಳೆ, ಉಗಾರ ಜೊತೆಗೆ ಮಹಾರಾಷ್ಟ್ರದ ಸಾಂಗಲಿ ಜಿಲ್ಲೆಯ ಜತ್ತ ತಾಲೂಕಿನ ಖೋಜನವಾಡಿ, ಜತ್ತ, ಬಿಳ್ಳೂರ, ಉಮರಾಣಿ, ಸಂಖ, ಸೊನ್ಯಾಳ, ಉಟಗಿ, ಗಿರೀಶಫಾರ್ಮ, ಅಂಕಲಗಿ, ಜಾಡರ ಬೊಬಲಾದ, ಉಮದಿ, ಹಳ್ಳಿ ಬಾಲಗಾವ ಈ ಎಲ್ಲ ಕಡೆಗೆ ತಮ್ಮ ಭಕ್ತರನ್ನು ಒಂದುಗೂಡಿಸಿ ಹೋರಾಟಕ್ಕೆ ಪ್ರೇರೇಪಿಸಿದರು. ಈ ಹೋರಾಟದಲ್ಲಿ ಜತ್ತ ತಾಲೂಕಿನ ಖೋಜನವಾಡಿ ಹಾಗೂ ಅಥಣಿ ತಾಲೂಕಿನ ಕೊಟ್ಟಲಗಿ ಗ್ರಾಮಗಳ ಭಕ್ತಾದಿಗಳನ್ನು ಸ್ವಾತಂತ್ರ ಸಂಗ್ರಾಮದಲ್ಲಿ ಧುಮುಕಿಸಿದರು. ಹೀಗೆ ಕರ್ನಾಟಕ ಮಹಾರಾಷ್ಟ್ರ ಗಡಿ ಭಾಗದಲ್ಲಿರುವ ಕೊಟ್ಟಲಗಿ; ವಿಶಿಷ್ಟವಾದ ಹೋರಾಟವನ್ನು ಕೈಗೊಂಡ ಗ್ರಾಮವಾಗಿದೆ. ಇಲ್ಲಿರುವ ಗ್ರಾಮದ ಜನ ಮಾಧವಾನಂದರ ಪ್ರೇರಣೆಯಿಂದ ಜಾತಿ ಮತ ಪಂಥವೆನ್ನದೇ ಸರ್ವ ಸಮರ್ಪಣಾ ಮನೋಭಾವದಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದ್ದು ಅವಿಸ್ಮರಣೀಯವಾದುದು.

ಕರನಿರಾಕರಣೆ, ಮದ್ದುಗುಂಡುಗಳ ತಯಾರಿಕೆ, ಫೋನ ವೈರ ಕತ್ತರಿಸುವುದು, ಪೋಸ್ಟ ಬ್ಯಾಗ ಕಸಿದುಕೊಳ್ಳುವುದು ಹೀಗೆ ಹತ್ತು ಹಲವಾರು ಬ್ರಿಟೀಷ ವಿರೋಧಿ ಕಾರ್ಯಗಳು ಕೊಟ್ಟಲಗಿಯಲ್ಲಿ ಜರುಗಿವೆ. ಜೊತೆಗೆ ಶ್ರೀ ಸದ್ಗುರು ಮಾಧವಾನಂದ ಪ್ರಭೂಜಿಯವರ ನೇತೃತ್ವದಲ್ಲಿ ಇಚಲಕರಂಜಿಯ ರತ್ನಪ್ಪಣ್ಣ ಕುಂಬಾರರಂತಹ ನೇತಾರರು ಸೇರಿ; ಸ್ವಾತಂತ್ರ್ಯ ಯೋಧರ ಶಿಬಿರಗಳನ್ನು ಕೊಟ್ಟಲಗಿಯಲ್ಲಿ ಸಂಘಟಿಸಿದ್ದು ಇಂದಿಗೂ ಮೈನವಿರೇಳಿಸುವ ವಿಚಾರಗಳಾಗಿವೆ. ಅಲ್ಲದೇ ಸ್ವಾತಂತ್ರ್ಮ ಸೈನಿಕರಿಗೆ ತರಬೇತಿ ನೀಡುವುದು, ಸಮವಸ್ತ್ರ ಧರಿಸುವ, ಶಿಸ್ತನ್ನು ಕಲಿಸುವ ಜೊತೆಗೆ ನಿತ್ಯ ಸ್ವಾತಂತ್ರ್ಯದ ಕಿಚ್ಚನ್ನು ಹಚ್ಚುವ ಕೆಲಸದಲ್ಲಿ ಗ್ರಾಮ ನಿರಂತರ ಭಾಗಿಯಾಗಿತ್ತು. ಹಲವಾರು ಸ್ವಾತಂತ್ರ್ಯ ಯೋಧರಿಗೆ ಅನ್ನ, ಆಹಾರ, ಆಶ್ರಯ ನೀಡುವ ತಾಣವಾಗಿತ್ತು ಕೊಟ್ಟಲಗಿ ಗ್ರಾಮ. ಇಂದಿಗೂ ಈ ವಿಚಾರಗಳು ಮನೆ ಮನೆಗಳಲ್ಲಿ ಹಚ್ಚ ಹಸುರಾಗಿವೆ.

೪.೨. ಕರ ನಿರಾಕರಣೆ ಚಳುವಳಿ

ಭಾರತ ಸ್ವಾತಂತ್ರ್ಯದ ನೇತಾರರು ನೀಡುವ ಪ್ರತಿಯೊಂದು ಕರೆಯ ಕೂಗು ಭಾರತದ ಮನೆ ಮನೆಗಳಲ್ಲಿ ಪ್ರತಿಧ್ವನಿಸುತ್ತಿತ್ತು. ಹೀಗಾಗಿ ಕೊಟ್ಟಲಗಿ ಗ್ರಾಮವು; ನೇತಾರರ ಕರೆಗೆ ನಿರಂತರ ಸ್ಪಂದಿಸುತ್ತ ಬಂದದ್ದು ಕಂಡುಬರುತ್ತದೆ.

ಬಾರ್ಡೋಲಿಯಲ್ಲಿ ಸರದಾರ ವಲ್ಲಭಭಾಯಿ ಪಟೇಲರು ಕರೆ ನೀಡಿದ ತೆರಿಗೆ ನಿರಾಕರಣೆ ಸಿಂಹಗರ್ಜನೆಯು ೧೯೨೪ರಲ್ಲಿ ಅಥಣಿ ತಾಲೂಕಿನ ಕೊಟ್ಟಲಗಿ ಗ್ರಾಮದಲ್ಲಿಯೂ ಮೊಳಗಿದೆ. ಅದು ಎಷ್ಟರ ಮಟ್ಟಿಗೆ ಎಂದರೆ ಇಡೀ ಗ್ರಾಮವೇ ಒಕ್ಕಟ್ಟಾಗಿ ಬ್ರಿಟೀಷ ಸರಕಾರಕ್ಕೆ ತೆರಿಗೆ ಕೊಡುವುದನ್ನೇ ನಿರಾಕರಿಸಿದ ಘಟನೆ ನಡೆದಿದೆ. ಇಂತಹ ಅಪೂರ್ವ ಘಟನೆಗೆ ಕೊಟ್ಟಲಗಿ ಗ್ರಾಮವು ಸಾಕ್ಷಿಯಾಗಿದೆ. ಅಷ್ಟೇ ಅಲ್ಲದೆ ರಾಷ್ಟ್ರೀಯ ನೇತಾರರಿಗೂ ಕೊಟ್ಟಲಗಿ ಗ್ರಾಮವು ಚಿರಪರಿಚಿತವಾಗಿತ್ತು. ಹಾಗೆಂದೇ ೧೯೨೪ರಲ್ಲಿ ಬೆಳಗಾವಿಯಲ್ಲಿ ಜರುಗಿದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಸಂದರ್ಭದಲ್ಲಿ ಕೊಟ್ಟಲಗಿ ಗ್ರಾಮಸ್ಥರನ್ನು ಅಭಿನಂದಿಸಲಾಯಿತು. ೧೯೨೮ರಲ್ಲಿ ಸರದಾರ ವಲ್ಲಭಭಾಯಿ ಪಟೇಲರು ಅಥಣಿಗೆ ಭೇಟಿ ನೀಡಿದಾಗ ಈ ಘಟನೆಯನ್ನು ಸ್ಮರಿಸಿದರು. ಇದರಿಂದಲೇ ನಮ್ಮ ಗ್ರಾಮವು ಎಷ್ಟೊಂದು ತೀವ್ರತರವಾದ ಹೋರಾಟವನ್ನು ಕೈಗೊಂಡಿತ್ತೆಂಬುದನ್ನು ತಿಳಿಯಬಹುದು. ಇನ್ನು ಪ್ರತಿಯೊಂದು ಕಾರ್ಯಕ್ಕೂ ಮಾಧವಾನಂದ ಪ್ರಭೂಜೀಯವರ ಪ್ರೇರಣೆಯಿಂದ ಕೊಟ್ಟಲಗಿ ಗ್ರಾಮವು ಬ್ರಿಟೀಷರ ಎದೆ ನಡುಗುವಂತೆ ಸೆಟೆದು ನಿಂತಿತ್ತು.

೪.೩. ಮದ್ದುಗುಂಡುಗಳ ತಯಾರಿಕೆ

ಗಾಂಧೀಜಿಯವರ ಅಹಿಂಸಾವಾದ ಹಾಗೂ ನೇತಾಜಿಯವರ ಉಗ್ರ ಹೋರಾಟ ಎರಡೂ ತತ್ವಗಳನ್ನು ಅಳವಡಿಸಿಕೊಂಡು ತನ್ನ ಗರ್ಭದಲ್ಲಿ ವಿಶಿಷ್ಟ ಇತಿಹಾಸವನ್ನು ಉಳಿಸಿಕೊಂಡು ಬಂದ ಗ್ರಾಮ ಕೊಟ್ಟಲಗಿ. ಬ್ರಿಟಿಷರು ಕೇವಲ ಸತ್ಯಾಗ್ರಹದಿಂದ ಮಾತ್ರ

ಬಗ್ಗುವದಿಲ್ಲ. ಅವರಿಗೆ ಸಂಘರ್ಷದ ಉತ್ತರವನ್ನೂ ನಾವು ಕೊಡಲೇಬೇಕು ಎನ್ನುವ ದಿಟ್ಟ ನಿಲುವು ಸದ್ಗುರು ಮಾಧವಾನಂದರದಾಗಿತ್ತು. ಹೀಗಾಗಿ ಅವಶ್ಯ ಬಿದ್ದರೆ ಯುದ್ಧಕ್ಕೂ ಸೈ ಎನ್ನುವಂತೆ ಸೈನಿಕ ಪಡೆಗಳನ್ನು ರಚಿಸಿ; ಅವರಿಗೆ ತರಬೇತಿ ನೀಡಿ ಸಮವಸ್ತ್ರದ ಜೊತೆಗೆ ಬಂದೂಕು, ಪಿಸ್ತೂಲುಗಳನ್ನು ಕೂಡ ನೀಡುವ ವ್ಯವಸ್ಥೆಯನ್ನು ಮಾಡಿರುವ ವಿಚಾರವು ಇಂದಿಗೂ ಕೊಟ್ಟಲಗಿಯ ಮನೆ ಮನೆಗಳಲ್ಲಿ ಹಾಸುಹೊಕ್ಕಾಗಿದೆ. ಅಲ್ಲದೆ ಶ್ರೀ ಸದ್ಗುರು ಮಾಧವಾನಂದರ ದೂರದೃಷ್ಟಿ ಹೋರಾಟವನ್ನು ನಿರೂಪಿಸುವ ಶೈಲಿ, ಸಂಘಟನಾ ಚತುರತೆಯನ್ನು ಅರಿಯಬಹುದು.

ಗ್ರಾಮದ ಶ್ರೀ ರ‍್ಯಾವಣ್ಣ ಬಡವಗೋಳ, ಶ್ರೀ ಸಿದ್ದಪ್ಪ ಝಳಕಿ, ಗುರುಪಾದಪ್ಪ ಜತ್ತಿ, ಖೋಜನವಾಡಿಯ ಶ್ರೀ ರಾಮಗೊಂಡಪ್ಪ ಬಸರಗಿ, ಇನ್ನೂ ಮುಂತಾದವರು ಗಿರಣಿ ಮನೆಯಲ್ಲಿ ಶ್ರೀ ಸದ್ಗುರು ಮಾಧವಾನಂದರ ನಿರ್ದೇಶನದಂತೆ ಬಂದೂಕು, ಮದ್ದು ಗುಂಡು, ಪಿಸ್ತೂಲುಗಳನ್ನು ತಯಾರಿಸುತ್ತಿದ್ದರು.

ಹಗಲು ಹೊತ್ತಿನಲ್ಲಿ ಜೋಳ, ಗೋಧಿ ಮುಂತಾದ ಧಾನ್ಯ ಬೀಸುವ ಕೆಲಸ ಮಾಡಿದರೆ, ರಾತ್ರಿಯಿಡೀ ಬಂದೂಕು, ಮದ್ದು ಗುಂಡು, ಪಿಸ್ತೂಲು ತಯಾರಿಸುವ ಕೆಲಸ ಮಾಡುತ್ತಿದ್ದರು. ನೋಡಿದವರಿಗೆ ಸಂಶಯ ಬರದ ರೀತಿಯಲ್ಲಿ ಈ ಕಾರ್ಯ ನಡೆಯುತ್ತಿತ್ತು. ಮೇಲ್ನೋಟಕ್ಕೆ ಗಿರಣಿ ಮನೆ ಆದರೆ ಒಳಗಡೆ ಬಂದೂಕು, ಪಿಸ್ತೂಲುಗಳನ್ನು ತಯಾರಿಸುವ ಕಾರ್ಖಾನೆ. ಈ ಬಂದೂಕು, ಪಿಸ್ತೂಲುಗಳನ್ನು ಶ್ರೀ ಸದ್ಗುರು ಮಾಧವಾನಂದರ ಶಿಷ್ಯರಾದ ಶ್ರೀ ಮಲ್ಲೇಶ ಮತ್ತು ಶಾಂತಪ್ಪಾ ಇವರು ತಯಾರಿಸುತ್ತಿದ್ದರು. ಈ ಕಾರ್ಯದಲ್ಲಿ ಇವರು ವಿಶೇಷ ಪರಿಣಿತಿ ಪಡೆದಿದ್ದರು. ಶ್ರೀ ಮಾಧವಾನಂದರ ಆದೇಶದಂತೆ ಈ ಎಲ್ಲ ಕಾರ್ಯಗಳ ನೇತೃತ್ವವನ್ನು ಶ್ರೀ ಸಿದ್ದಲಿಂಗಪ್ಪ ಮುತ್ಯಾ ಬಡವಗೋಳ ಇವರು ವಹಿಸುತ್ತಿದ್ದರು.

ಬ್ರಿಟೀಷರಿಂದ ಗ್ರಾಮದ ಘೇರಾವ

ಮದ್ದು ಗುಂಡುಗಳ ನಿರ್ಮಾಣ ಮಾಡುವ ವಿಷಯ ಅದ್ಹೆಗೋ ಬ್ರಿಟೀಷರ ಕಿವಿಗೆ ತಲುಪಿತು. ಕೆಂಡಾಮಂಡಲರಾದ ಬ್ರಿಟೀಷರು ಗ್ರಾಮದಲ್ಲಿರುವ ಮದ್ದು ಗುಂಡುಗಳ ಹುಡುಕಾಟಕ್ಕೆ ಸರ್ಚ ವಾರಂಟ ಪಡೆದುಕೊಂಡು ಬಂದಿದ್ದರು. ಅವರು ಬಿಜಾಪೂರ ಕಡೆಯಿಂದ ಕನಮಡಿ ರಸ್ತೆ ಮುಖಾಂತರ ಕೊಟ್ಟಲಗಿಗೆ ನಸುಕಿನ ಜಾವ ೪ ಗಂಟೆಗೆ ಬಂದು ಗ್ರಾಮವನ್ನು ಸುತ್ತುವರೆದರು. ಗ್ರಾಮದಲ್ಲಿರುವ ಯಾವೊಂದು ಪ್ರಾಣಿಯು ಹೊರಹೋಗದಂತೆ ನಸುಕಿನ ಜಾವವೇ ಸುತ್ತುವರೆದು ಬಂದೋಬಸ್ತ ಹಾಕಿದ್ದರು. ಇದರಿಂದಾಗಿ ಗ್ರಾಮವನ್ನು ತಮ್ಮ ವಶಕ್ಕೆ ಪಡೆದುಕೊಂಡಿದ್ದರು. ಊರ ಪೂರ್ವಕ್ಕಿರುವ ಹನುಮಾನ ದೇವಾಲಯದ ಕಟ್ಟೆಯ ಮೇಲೆ "ಗನ್ ಮಶಿನ" ಇಟ್ಟಿದ್ದರು. ಗ್ರಾಮದ ಜನತೆಗೆ ಒಂದೇ ಒಂದು ಬಂದೂಕು, ಪಿಸ್ತೂಲು, ಮದ್ದು ಗುಂಡು ಗ್ರಾಮದಲ್ಲಿ ದೊರೆತರೆ ಊರನ್ನೇ ಸುಟ್ಟು ಬಿಡುವುದಾಗಿ ಹೆದರಿಸಿದ್ದರು.

ಊರಿಗೆ ಊರೆ ಮದ್ದುಗುಂಡುಗಳ ಆವಾಸಸ್ಥಾನವಾಗಿತ್ತು. ಇವುಗಳನ್ನು ಮನೆಗಳಿಂದ ಬ್ರಿಟೀಷರಿಗೆ ಸಿಗದಂತೆ ಗ್ರಾಮದಿಂದ ಹೊರಗೆ ಕೊಂಡೊಯ್ಯುವದು ಕಷ್ಟದ ವಿಚಾರ. ಆದರೆ ಗ್ರಾಮದ ಮಹಿಳೆಯರು ಅತ್ಯಂತ ದಿಟ್ಟರು, ಧೈರ್ಯಶಾಲಿಗಳು ಆಗಿದ್ದರು. ಅವರು ನೀರು ತರುವ ಪಾತ್ರೆಗಳಲ್ಲಿ, ಬಟ್ಟೆತೊಳೆಯುವ ಪಾತ್ರೆಗಳಲ್ಲಿ ಬಾವಿಗೆ ಹೋಗುವ ನೆಪದಲ್ಲಿ ಎಲ್ಲ ಮದ್ದುಗುಂಡುಗಳನ್ನು ಒಯ್ದು ಊರ ಪಶ್ಚಿಮದ ಹೂ ತೋಟದಲ್ಲಿರುವ "ಆನಂದಿ" ಬಾವಿಗೆ ಎಸೆದರು.

ಬ್ರಿಟೀಷರು ಗ್ರಾಮದಲ್ಲಿ ಎಷ್ಟು ಹುಡುಕಿದರೂ ಒಂದು ತುಣುಕು ಮದ್ದು ಗುಂಡುಗಳು ಸಿಗಲಿಲ್ಲ. ನಿರಾಶರಾದ ಬ್ರಿಟೀಷರು ನಿರ್ವಾಹವಿಲ್ಲದೇ "ಬಂದ ದಾರಿಗೆ ಸುಂಕವಿಲ್ಲ"ವೆಂಬಂತೆ ಮರುಳಿದರು. ಆದರೆ ಹಸಿದ ಹೊಟ್ಟೆಯಿಂದ ಬಂದಿದ್ದ ಬ್ರಿಟೀಷರು ಗ್ರಾಮಸ್ಥರ ಬಳಿ ಆಹಾರ ಬೇಡಿ ತಿಂದು ಹೋದ ಘಟನೆ ಚಿರಸ್ಮರಣೀಯವಾಗಿದೆ.

ಗ್ರಾಮಕ್ಕೆ ಪ್ರವೇಶ ಮಾಡುವ ದಿನಕ್ಕೂ ಮೊದಲೇ ಕನಮಡಿ, ಕೊಟ್ಟಲಗಿ ರಸ್ತೆಯಲ್ಲಿ ಗ್ರಾಮದಿಂದ ೩ಕಿ.ಮೀ. ದೂರದಲ್ಲಿ ಒಲೆಗಳನ್ನು ಹೂಡಿಕೊಂಡು ರಾತ್ರಿ ಅಡುಗೆ ಮಾಡಿಕೊಂಡು ಬ್ರಿಟೀಷರು ಊಟ ಮಾಡಿದ್ದರು. ಸುಮಾರು ಒಂದು ಎರಡು ಕಿ.ಮೀ.ಗಳವರೆಗೆ ಅಡಿಗೆ ಮಾಡಿಕೊಂಡ ಒಲೆಗಳು ಇದ್ದುದನ್ನು ಹಾಗೂ ಇಂದಿಗೂ ಆ ಒಲೆಗಳನ್ನು ಪ್ರತ್ಯಕ್ಷವಾಗಿ ಕಂಡ ಬಗ್ಗೆ ಗ್ರಾಮದಲ್ಲಿ ಹಲವಾರು ಜನ ನೆನಪಿಸಿಕೊಳ್ಳುತ್ತಾರೆ.

೪.೪. ಶ್ರೀ ಸದ್ಗುರು ಮಾಧವಾನಂದ ಪ್ರಭೂಜೀಯವರು

ಇಂಚಗೇರಿ ಮಠ ಹಾಗೂ ಕೊಟ್ಟಲಗಿ ಗ್ರಾಮದ ಸಂಬಂಧ:

ಕನ್ನಡ ನಾಡು ನವ್ಹೆಂಬರ ೧ ರಾಜ್ಯೋತ್ಸವದ ಸಂಭ್ರಮದಲ್ಲಿ ಮುಳುಗುತ್ತದೆ. ಅದರಂತೆ ನವ್ಹೆಂಬರ ೨ ರಂದು ಕರ್ನಾಟಕ ಮಹಾರಾಷ್ಟ್ರದ ಅನೇಕ ಶ್ರೀ ಕ್ಷೇತ್ರ ಇಂಚಗೇರಿ ಸಂಪ್ರದಾಯದ ಸದ್ಭಕ್ತರು ಎಲ್ಲಿಲ್ಲದ ಸಂಭ್ರಮದಲ್ಲಿ ಮುಳುಗಿರುತ್ತಾರೆ. ಕಾರಣ ಶ್ರೀ ಸದ್ಗುರು ಮಾಧವಾನಂದರು ನವ್ಹೆಂಬರ ೨, ೧೯೧೫ರಂದು ಜನ್ಮ ತಾಳಿದರು. ಶಾಂತಪ್ರಿಯರಾದ ಶ್ರೀ ಸ.ಸ. ಶಿವಪ್ರಭು ಮಹಾರಾಜರ ಹಾಗೂ ಅವರ ಧರ್ಮಪತ್ನಿ ವಿಶ್ವಮಾತಾ ಕಾಳಮ್ಮ ತಾಯಿಯವರು. ಈ ದಂಪತಿಗಳ ಪುಣ್ಯ ಉದರದಿಂದ ಹುಬ್ಬಳ್ಳಿಯ ವೀರಾಪೂರ ಓಣಿಯಲ್ಲಿ ಜನಿಸಿದರು. ಇವರನ್ನು ನಮ್ಮ ಗ್ರಾಮದಲ್ಲಿ ಮಹಾದೇವರು, ದೇವರು ಎಂಬ ಹೆಸರುಗಳಿಂದ ಕರೆಯುತ್ತಿದ್ದರು.

ಶ್ರೀ ಮಹಾದೇವರು ಶ್ರೀ ಕ್ಷೇತ್ರ ಇಂಚಗೇರಿ ಮಠದ ಗುರುಗಳು. ಮನೆತನದ ಗುರುಗಳು ಆದ ಶ್ರೀ ಸದ್ಗುರು ಸಮರ್ಥ ಗಿರಿಮಲ್ಲೇಶ್ವರ ಮಹಾರಾಜರಿಂದ ಅನುಗ್ರಹಿತರಾಗಿ ನಾಡಿನ ಹಲವೆಡೆಗಳಲ್ಲಿ ಸಂಚರಿಸಿ ಆಧ್ಯಾತ್ಮಿಕ ಅತ್ಯುನ್ನತವಾದ ಗುರಿಯನ್ನು ಮುಟ್ಟಿ ಮಹಾ ದೇವರಾದರು. ತಮ್ಮ ಗುರುಗಳಿಂದಲೇ ಮಹಾದೇವರೆಂದು ಸಂಬೋಧಿಸಲ್ಪಟ್ಟರು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗ್ರಾಮವು ಬ್ರಿಟೀಷರ ಎದೆ ನಡುಗುವ ರೀತಿಯಲ್ಲಿ ಸೆಟೆದು ನಿಂತದ್ದು ಇತಿಹಾಸದ ಪುಟಗಳಲ್ಲಿ ಚಿರಾಯುವಾದ ಸಂಗತಿಯಾಗಿದೆ. ಮಹಾದೇವರು ವ್ಯಕ್ತಿಯಾಗಿರದೇ ಒಂದು ಶಕ್ತಿಯಾಗಿದ್ದರು. ಅವರು "ಬಾಲಬ್ರಹ್ಮಚಾರಿಯಾಗಿದ್ದರು." ಅವರು ಜಾತ್ಯಾತೀತ ಮನೋಭಾವದ ವ್ಯಕ್ತಿಗಳಾಗಿದ್ದರು. ಅವರು ಹನ್ನೆರಡನೇಯ ಶತಮಾನದಲ್ಲಿ ಬಸವಣ್ಣನವರು ಕಂಡ ನವಸಮಾಜದ ಕನಸನ್ನು ಸಾಕಾರಗೊಳಿಸಿದ ಮಹಾನ್ ಚೇತನ. ಅವರು ಹಲವಾರು ವಿಚಾರಗಳನ್ನು ನಿತ್ಯಜೀವನದಲ್ಲಿ ಆಚರಣೆಗೆ ತಂದು, ಹಲವಾರು ವಿಚಾರಗಳನ್ನು ಸಮಾಜಕ್ಕೆ ಬೋಧಿಸಿದ ದಾರ್ಶನಿಕರು ಹೌದು.

ಸಾಮೂಹಿಕ ಜೀವನ, ಸಾಮೂಹಿಕ ಕೃಷಿ, ಸಾಮೂಹಿಕ ಭೋಜನ, ಸಾಮೂಹಿಕ ಪ್ರಾರ್ಥನೆ, ಜಾತ್ಯಾತೀತ ಸಮಾಜ ರಚನೆಯ ಆಧಾರದಲ್ಲಿ ಇವೆಲ್ಲವನ್ನು ಆಚರಣೆಗೆ ತಂದರು. ಅವರು ಬಿಜಾಪೂರ ಜಿಲ್ಲೆಯ ಇಂಡಿ ತಾಲೂಕಿನ ಶ್ರೀ ಕ್ಷೇತ್ರ ಇಂಚಗೇರಿ ಮಠದ ಅಧಿಪತಿಗಳಾಗಿದ್ದು; ಕರ್ನಾಟಕ ಮಹಾರಾಷ್ಟ್ರದಾದ್ಯಂತ ತಮ್ಮ ಭಕ್ತ ಸಮೂಹವನ್ನು ಹೊಂದಿದ್ದಾರೆ. ಶ್ರೀ ಕ್ಷೇತ್ರ ಇಂಚಗೇರಿ ಮಠವನ್ನು ಕರ್ಮಭೂಮಿಯ ಕೇಂದ್ರವನ್ನಾಗಿಟ್ಟುಕೊಂಡು ರಾಜ್ಯಾದ್ಯಂತ ಹಲವಾರು ಶಾಖಾ ಮಠಗಳನ್ನು ಸ್ಥಾಪಿಸಿದರು. ಶಾಖಾ ಮಠಗಳ ಮೂಲಕ ಭಕ್ತರ ಸಂಘಟನೆಯನ್ನು ಮಾಡಿ ಹಲವಾರು ಸಾಮಾಜಿಕ ಸುಧಾರಣಾ ಕಾರ್ಯದಲ್ಲಿ ತಮ್ಮ ಭಕ್ತರು ಪಾಲ್ಗೊಳ್ಳುವಂತೆ ಪ್ರೇರೇಪಿಸಿದ ಕಾರ್ಯವನ್ನು ಮಾಡಿದ ಮಹಾನ್ ಧೀಮಂತ ನಾಯಕರಾಗಿದ್ದವರು ಮಹಾದೇವರು.

ಮಹಾದೇವರು ಸರಳ ಖಾದಿ ವಸ್ತ್ರಧಾರಿಗಳಾಗಿದ್ದು; ಸಾಮಾಜಿಕ ಜೀವನದಲ್ಲಿ ಅತ್ಯಂತ ಸಾಮಾನ್ಯರಲ್ಲಿ ಸಾಮಾನ್ಯ ವ್ಯಕ್ತಿಯಾಗಿ ಬದುಕಿದವರು. ವೇದಾಂತವನ್ನು ಬರೀ ಬೋಧಿಸದೇ ನಿತ್ಯ ಜೀವನದಲ್ಲಿ ಆಧರಿಸಿ, ಆಚರಿಸಿ, ಆದರ್ಶಪ್ರಾಯರಾದವರು ಮಹಾದೇವರು. ಸಮಾಜದ ಜನರ ಕಷ್ಟ ಸುಖಗಳಲ್ಲಿ ಭಾಗಿಯಾಗುವದೇ ಅವರ ನಿತ್ಯ ಕಾರ್ಯವಾಗಿತ್ತು. ಅವರಿವರೆನ್ನದೇ ಎಲ್ಲ ಜನರ ಜೀವನದಲ್ಲಿ ಬೆರೆತು ಬಿಡುತ್ತಿದ್ದರು. ಹೀಗಾಗಿ ಸರ್ವಜನಪ್ರಿಯರಾಗಿದ್ದರು. ಹಾಗೆಂದೇ ಲಕ್ಷಾಂತರ ಭಕ್ತಸಮೂಹವನ್ನು ಅವರು ಹೊಂದಿದ್ದರು. ಅವರು ಕರ್ನಾಟಕ ಹಾಗೂ ಮಹಾರಾಷ್ಟ್ರದ ಹಲವಾರು ಲಕ್ಷೋಪಲಕ್ಷ ಜನ ಭಕ್ತ ದೃಷ್ಟಿಯಲ್ಲಿ 'ದೇವರೆ' ಹೌದು; ಹಾಗೆಂದೇ ಅವರನ್ನು ಎಲ್ಲ ಜನ ದೇವರು ಎಂದು ಸಂಬೋಧಿಸುತ್ತಿದ್ದರು.[೧] ಅವರನ್ನು ಎಂದಿಗೂ ಹೆಸರಿನಿಂದ ಕರೆದ ಭಕ್ತರು ಇಲ್ಲವೆಂದೇ ಹೇಳಬಹುದು.

ಅವರು ಮಾಡಿದ ಹೋರಾಟಗಳು ಒಂದೇ ಎರಡೇ; ಅಸಂಖ್ಯಾತ. ಅವರ ಚರಿತ್ರೆಯು ಓದುಗರಿಗೆ ವಿಶ್ವರೂಪದರ್ಶನ ಮಾಡಿಸುವಂಥಹುದು. ಆಧ್ಯಾತ್ಮಿಕ ಪ್ರವಾದಿಯಾಗಿದ್ದು; ಸಮಕಾಲೀನ ಸಮಸ್ಯೆಗಳೊಂದಿಗೆ ಸ್ಪಂದಿಸುತ್ತ ಸ್ವಾತಂತ್ರ್ಯ ಸಂಗ್ರಾಮ, ಚಲೇಜಾವ ಸತ್ಯಾಗ್ರಹವನ್ನು ವೈಯಕ್ತಿಕವಾಗಿ ಎರಡು ಬಾರಿ ಹಮ್ಮಿಕೊಂಡಿದ್ದರು. ಒಮ್ಮೆ ಬಿಜಾಪೂರ ಜಿಲ್ಲೆ ಇಂಡಿ ತಾಲೂಕಿನ ಶ್ರೀ ಕ್ಷೇತ್ರ ಇಂಚಗೇರಿ ಮಠದಲ್ಲಿ, ಒಮ್ಮೆ ಬಾಗಲಕೋಟ ಜಿಲ್ಲೆಯ ಜಮುಖಂಡಿ ತಾಲೂಕಿನ ಹಿಪ್ಪರಗಿ

ಗ್ರಾಮದಲ್ಲಿ ಹೀಗೆ ಎರಡು ಬಾರಿ ವೈಯಕ್ತಿಕ ಸತ್ಯಾಗ್ರಹ ಹಮ್ಮಿಕೊಂಡಿದ್ದರು. ರಜಾಕಾರರ ಹಾವಳಿ, ಅದರಂತೆ ಜತ್ತ ಹಾಗೂ ಉಮರಾಣಿ ಸಂಸ್ಥಾನ ಮತ್ತು ಜಮುಖಂಡಿ ಸಂಸ್ಥಾನಗಳ ವಿಲೀನೀಕರಣ; ಕರ್ನಾಟಕ ಏಕೀಕರಣ, ಅದವಾಗಿ, ಆಲೂರು, ರಾಮದುರ್ಗ ಚಳುವಳಿ, ಗೋವಾ ವಿಮೋಚನೆ, ಅಲ್ಲದೇ ಗೋದಾನ ಭೂದಾನ, ಗೋಹತ್ಯಾ ಬಂಧಿ, ದಾರುಬಂಧಿ, ಸರ್ವೋದಯ ಆಂದೋಲನಗಳು, ರೈತ ಚಳುವಳಿ, ಪ್ರಜಾ ಪರಿಷತ್ತು, ಲೋಕ ಸೇವಕ ಸಂಘ, ಕಾರ್ಮಿಕ ಸತ್ಯಾಗ್ರಹಗಳಲ್ಲೆಲ್ಲ ಇವರ ಪಾತ್ರ ಮಹತ್ವದ್ದಾಗಿದೆ. ಸಾಮೂಹಿಕ ಬೇಸಾಯ, ಅಂತರ ಜಾತಿಯ, ಅಂತರ ಧರ್ಮೀಯ ವಿವಾಹಗಳು, ವಿಧವಾ ವಿವಾಹಗಳು ಮುಂತಾದ ಕ್ರಾಂತಿಕಾರಿ ಪ್ರಯೋಗಗಳನ್ನು ಯಶಸ್ವಿಯಾಗಿ ಮಾಡಿದ್ದಾರೆ.[೨]

ಜ್ಞಾನಿಗಳು ಸಾಂಕೇತಿಕವಾಗಿ ಒಂದು ಮಾತು ಹೇಳುತ್ತಾರೆ. "ಬುದ್ಧಿವಂತ ಮನುಷ್ಯ ಜನ್ಮಕ್ಕೆ ಬಂದ ಮೇಲೆ ಜಗದ ಮೇಲೆ ಮೂರ್ತಿಯಾದರೂ ಆಗಬೇಕು, ಇಲ್ಲ ಕೀರ್ತಿಯಾದರೂ ಹೊಂದಬೇಕು." ತಾವು ಬದುಕಿರುವಾಗಲೇ 'ದೇವರೆಂದು' ಪೂಜಿತರಾದ ಜಗದ್ವಂದ್ಯ ಮಹಾದೇವರ ಕೀರ್ತಿ ಅಜರಾಮರ. ಹಳ್ಳಿ ಹಳ್ಳಿಗಳಲ್ಲೂ ಅವರ ಹೆಸರಿನ ಆಶ್ರಮ, ಭಜನಾ ಮಂದಿರಗಳಿದ್ದು; ಅಲ್ಲೆಲ್ಲಾ ಅವರ ಪ್ರತಿಮೆಯ ಪ್ರತಿಷ್ಠಾಪನೆಯೊಂದಿಗೆ ನಿತ್ಯ ಪೂಜೆ, ಭಜನೆ, ಜೈಕಾರದೊಂದಿಗೆ ಹಾಡಿಕೊಂಡಾಡುವದುಂಟು. ಪ್ರತಿಯೊಬ್ಬ ಭಕ್ತರ ಕೊರಳಲ್ಲಿ ಅವರ ಭಾವಚಿತ್ರದ ಲಾಕೇಟುಗಳನ್ನು ಅಭಿಮಾನದಿಂದ ಧರಿಸುತ್ತಾರೆ. ಮಹಾದೇವರ ಹುಟ್ಟುಹಬ್ಬ ಪುಣ್ಯತಿಥಿಗಳನ್ನು ಊರೂರಿಗೆ ಜಾತ್ರೆ-ಸಪ್ತಾಹದ ರೂಪದಲ್ಲಿ ಆಚರಿಸುತ್ತಾರೆ.

ಕ್ರಾಂತಿಯೋಗಿ ಬಸವಣ್ಣ, ಮಹಾತ್ಮಾಗಾಂಧಿ, ಸಂತ ವಿನೋಭಾ ಭಾವೆ ಅವರ ತತ್ವಗಳ ನಿಷ್ಠಾವಂತ ಅನುಯಾಗಿಗಳಾಗಿದ್ದರು ಶ್ರೀ ಮಹಾದೇವರು. ಅವರು ಇಂಚಗೇರಿ ಸಂಪ್ರದಾಯದ ಮೂಲ ಪುರುಷರಾದ ಶ್ರೀ ಕಾಡಸಿದ್ಧೇಶ್ವರರಿಂದ ಉಪದೇಶ ಪಡೆದ ಶ್ರೀ ಸದ್ಗುರು ಗುರುಲಿಂಗ ಜಂಗಮ ಮಹಾರಾಜರು ಅವರ ಶಿಷ್ಯರು ಶ್ರೀ ಸಮರ್ಥ ಸದ್ಗುರು ಭಾಹು ಸಾಹೇಬ ಮಹಾರಾಜರು ಉಮದಿಕರರು. ಇವರ ಶಿಷ್ಯರು ಶ್ರೀ ಸಮರ್ಥ ಸದ್ಗುರು ಗಿರಿ ಮಲ್ಲೇಶ್ವರ ಮಹಾರಾಜರು ತಮ್ಮ ಆಸ್ತಿಯನ್ನು ಶ್ರೀ ಮಠಕ್ಕೆ ಧಾರೆಯೆರೆದು ಅದಕ್ಕೊಂದು ಮೂರ್ತ ಸ್ವರೂಪ ನೀಡಿದರು. ಶ್ರೀ ಗಿರಿಮಲ್ಲೇಶ್ವರರ ಶಿಷ್ಯಗೆ ಶ್ರೀ ಸದ್ಗುರು ಮಾಧವಾನಂದರು. ಹೀಗಾಗಿ ಶ್ರೀ ಗಿರಿಮಲ್ಲೇಶ್ವರ ಮಹಾರಾಜರ ಶಿಷ್ಯರಾಗಿ ಅವರ ಆದರ್ಶ ಆಧ್ಯಾತ್ಮದ ಬೆಳಕನ್ನು ಪ್ರತಿ ಮನೆ ಮನೆ ಮುಟ್ಟಿಸಲು; ಅರಮನೆಯಿಂದ ಗುಡಿಸಲುವರೆಗೂ ಸಂಚರಿಸಿದರು. ತಮ್ಮ ಹಿತಾಸಕ್ತಿ ಸುಖಭೋಗಗಳನ್ನು ತ್ಯಜಿಸಿ ಆಜನ್ಮ ಬ್ರಹ್ಮಚಾರಿಯಾಗಿ ನಿಂತು; ಜೈ ಜಗತ್ ಎಂದು ವಿಶ್ವ ಕಲ್ಯಾಣದ ಹೊಣೆ ಹೊತ್ತು; ದುಡಿಯುವ ದಲಿತ ವರ್ಗದಲ್ಲಿ ಅಗತ್ಯ ಅರಿವು-ಜಾಗೃತಿ, ಸಂಘಟನೆ-ನೈತಿಕ ಧೈರ್ಯ, ಬಲ ಮೂಡಿಸಲು ಅವಿಶ್ರಾಂತವಾಗಿ ಶ್ರಮಿಸಿದರು. ತಮ್ಮೆಡೆಗೆ ಸಮಸ್ಯೆ ಸಂದಿಗ್ಧಗಳಿಂದ ಶಾಂತಿ ನೆಮ್ಮದಿಯಲ್ಲದೇ, ಹಸಿದು ಬಾಯಾರಿ ಬರುವ ಯಾವ ಅಪರಿಚಿತರೇ ಆಗಲಿ ಪ್ರತಿಯೊಬ್ಬರನ್ನು ಅತ್ಯಂತ ಆತ್ಮೀಯ; ಆದರ ಭಾವದಿಂದ

ಕಂಡು ಅನನ್ಯ ಕಳಕಳಿಯ, ವಾತ್ಸಲ್ಯದ ನುಡಿಗಳಿಂದ ಮಾತನಾಡಿಸಿ–ಸಂತೈಸಿ ತಣಿಸುವ ಪ್ರೇಮದ ಮೂರ್ತಿಯೇ ಅವರಾಗಿದ್ದರು.

ಇಷ್ಟಲ್ಲದೇ ಬಸವಣ್ಣನವರ ಕಾಲಕ್ಕೆ ಒಂದು ಅಂತರ ಜಾತಿಯ ಮದುವೆ; ಸಮಾಜದಲ್ಲಿ ಅಲ್ಲೋಲ ಕಲ್ಲೋಲವನ್ನೇ ಸೃಷ್ಟಿಸಿತು. ಆದರೆ ಶ್ರೀ ಮಹಾದೇವರು ಸಾವಿರಾರು ಅಂತರ ಜಾತಿಯ ಅಂತರ ಧರ್ಮೀಯ ವಿವಾಹ ಮಾಡಿದ ಮಹಾಪುರುಷರು. ಸ್ವತಃ ತಮ್ಮ ಮೊಮ್ಮಗಳನ್ನು (ಅಂದರೆ ಅಣ್ಣನ ಮಗನ ಮಗಳನ್ನು) ಮುಸ್ಲಿಂನಿಗೆ ಕೊಟ್ಟು ಮದುವೆ ಮಾಡಿಸಿದರು. ಸ್ವತಃ ಜ್ಯಾತ್ಯಾತೀತ ತತ್ವದ ಪಾಲಕರಾದರು. ಹೀಗೆ ನಿತ್ಯವು ಅನೇಕ ಸರಳ ವಿವಾಹಗಳನ್ನು ಏರ್ಪಡಿಸಿ ಯಾವುದೇ ವರದಕ್ಷಿಣೆ, ವರೋಪಚಾರದಂತಹ ಪಿಡುಗಿಗೆ ಅವಕಾಶ ನೀಡದೇ ಸುಂದರ ಸಮಾಜ ನಿರ್ಮಾಣದ ಸಾಕಾರ ಮೂರ್ತಿಗಳಾದರು. ದೀನ ದಲಿತರ ಮನೆಗಳಲ್ಲಿ ಅವರ ವಾಸ್ತವ್ಯ, ಅವರ ಖಾದಿ ಉಡುಗೆಯ ವೇಷದಿಂದ ದೇಶ ಭಕ್ತರಾಗಿ ಸದಾ ಕಂಗೊಳಿಸುತ್ತಿದ್ದರು.

ತಮ್ಮ ಲಕ್ಷಗಟ್ಟಲೇ ಪಿತ್ರಾರ್ಜಿತ ಆಸ್ತಿಯನ್ನು ದಲಿತೋದ್ಧಾರಕ್ಕಾಗಿ ಸಮರ್ಪಿಸಿದರು. ಶ್ರೀ ಮಠದಲ್ಲಿ ನಿತ್ಯ ದಾಸೋಹ ಏರ್ಪಡಿಸಿದರು. ಇಂಚಗೇರಿ ಮಠದ ನೂರಾರು ಏಕರೆ ಜಮೀನನ್ನು ಕೃಷಿ ಯೋಗ್ಯ ಭೂಮಿಯನ್ನಾಗಿ ಮಾರ್ಪಡಿಸಿ, ಬಾವಿ ತೋಡಿ, ಒಡ್ಡುಗಳನ್ನು ಹಾಕಿ, ಬೋರವೆಲ್ ಕೊರೆಸಿ ನೀರಾವರಿ ಕ್ಷೇತ್ರವಾಗಿ ಮಾರ್ಪಡಿಸಿದಷ್ಟೇ ಅಲ್ಲದೇ ನಂದನವನವನ್ನಾಗಿ ಪರಿವರ್ತಿಸಿದರು. ಇಷ್ಟೆಲ್ಲ ಆಸ್ತಿಯಿದ್ದರೂ ಅವರು ತಮ್ಮ ಹೆಸರಿನಲ್ಲಿ ಏನೊಂದೂ ಇಡದೇ ಎಲ್ಲವನ್ನೂ ಆಶ್ರಮದ ದುಡಿಯುವ ಜನಗಳ ಹೆಸರಿನಲ್ಲೇ ಇರಿಸಿದ್ದು ಗಮನಾರ್ಹ.

ತಮ್ಮೆಲ್ಲ ಐತಿಹಾಸಿಕ ಹೋರಾಟಗಳಲ್ಲಿ ಪ್ರತ್ಯಕ್ಷ ಪಾಲ್ಗೊಂಡು ಮಹಾದೇವರು ಜಮೀನ್ದಾರಿ, ಪುರೋಹಿತಶಾಹಿಗಳ ವಿರುದ್ಧ ಜನಸಾಮಾನ್ಯ ವರ್ಗದ ಹಿತಾಸಕ್ತಿಗಳ ಪೋಷಕರಾಗಿದ್ದರು. ಅವರೆಲ್ಲರ ನೋವಿನ ಪ್ರತಿಭಟನೆಯ ಸಂಘಟನೆಯ ಪ್ರಾತಿನಿಧಿಕ ಪ್ರತಿಬಿಂಬವಾಗಿ ಬೆಳೆದು ನಿಲ್ಲುತ್ತಾರೆ. ಯಾವ ಅಧಿಕಾರ, ಅಂತಸ್ತು ಹುದ್ದೆಯಿಲ್ಲದಿದ್ದರೂ ಮಹಾದೇವರ ಜನಪ್ರಿಯತೆ ಸಾಹುಕಾರಿ ಹಾಗೂ ಸರಕಾರಿಗೂ ಆತಂಕಕಾರಿಯಾಗಿತ್ತು. ಟೆನೆಂಟ ಕಾಯ್ದೆಗಾಗಿ, ನೌಕರವರ್ಗದ ತುಟ್ಟಿಭತ್ಯೆಗಾಗಿ, ಸುಂಕ ಬೆಲೆ ಏರಿಕೆಗಳೆಲ್ಲದರ ಕುರಿತು ನಿರಂತರ ಸತ್ಯಾಗ್ರಹ ಕೈಗೊಂಡ ಇವರು ಶೋಷಿತ ಜನಾಂಗದ ಪರವಾಗಿ, ಎಡಪಂಥಿಯರು ನಡೆಸುವ ಎಲ್ಲ ನಮೂನೆಯ ಹೋರಾಟಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನು ನೀಡಿದ್ದರು. ಹಲವಾರು ಸಲ ತಮ್ಮ ಸಮಸ್ತ ಶಕ್ತಿ ಸಂಘಟನೆಯ ಬೆಂಬಲವಿತ್ತು, ತಾವು ನಾಯಕತ್ವದ ಆಸೆ, ಹೆಸರು ಬಯಸದೇ ಅವ್ಯಕ್ತವಾಗಿಯೇ ಉಳಿದರು. ಅವರು ಪ್ರಚಾರ ಪ್ರಿಯರೂ ಆಗಿರಲಿಲ್ಲ. ಹೀಗಾಗಿ ಸಮಾಜದ ಮುಖ್ಯ ವಾಹಿನಿಗೆ ಅವರು ಬರಲಿಲ್ಲ. ಅಷ್ಟೇ ಏಕೆ ತಮ್ಮ ಪಾದಗಳಿಗೆ ನಮಸ್ಕರಿಸಲು ಬರುವ ಭಕ್ತರಿಂದ ನಮಸ್ಕಾರ ಮಾಡಿಸಿಕೊಳ್ಳುತ್ತಿರಲಿಲ್ಲ. ಅಷ್ಟೇ ಅಲ್ಲದೇ 'ನನ್ನ ಮಠ, ನನ್ನ

ಆಶ್ರಮವೆಂದರೆ ಅದು ಬಂಗಾರ ಬಟ್ಟಲಲ್ಲಿಯ ವಿಷ' ಎಂದು ಹೇಳುತ್ತಿದ್ದರು. ಇದರಿಂದ ಅವರ ಮನೋಭಾವವನ್ನು ನಾವು ಅರಿಯಬಹುದಾಗಿದೆ.

ಮೂಢನಂಬಿಕೆ-ಡಾಂಭಿಕತೆ, ಸೋಮಾರಿತನ, ವಂಚನೆ ಎಳ್ಳಷ್ಟೂ ಸಹಿಸದ ಅವರು; ಸರಳ ನಿರಾಡಂಬರ ಕರ್ತವ್ಯಶೀಲ ಜೀವನ ಮೆಚ್ಚುತ್ತಿದ್ದರು. ಗಾಂಧೀಜಿಯ ಗ್ರಾಮ ಸ್ವರಾಜ್ಯ ಸ್ವಾವಲಂಬನೆಯಲ್ಲಿ ಅಪಾರ ಆಸಕ್ತಿ ಹೊಂದಿದ ಇವರು ಒಕ್ಕಲುತನದ ಮಹತ್ವ, ಸ್ತ್ರೀ ಶಿಕ್ಷಣವನ್ನು ಬೆಂಬಲಿಸಿದರು. ಗ್ರಾಮೋದ್ಯೋಗಗಳನ್ನು ಬೆಳೆಸಿದರು. ಜನತಂತ್ರದಲ್ಲಿ ಪತ್ರಿಕಾ ಸ್ವಾತಂತ್ರ್ಯದಲ್ಲಿ ಮಾನವೀಯತೆಯನ್ನು ಅದಮ್ಯ ವಿಶ್ವಾಸ ಹಾಗೂ ಕಳಕಳಿ ಹೊಂದಿದ್ದರು. "ಅಶಕ್ತರಿಗೆ ಶಕ್ತರಾಗಿ, ನಿರಾಶ್ರಿತರಿಗೆ ಆಶ್ರಿತರಾಗಿ ದೀನ ದುಃಖಿಗಳಿಗೆ, ಶೋಷಿತರಿಗೆ ಒಂದು ದಿಟ್ಟ ಧ್ವನಿಯಾಗಿದ್ದರು."[೩] ಇವರ ಆಧ್ಯಾತ್ಮಿಕ ತತ್ವಗಳು, ರಾಜಕೀಯ, ಸಾಮಾಜಿಕ ಸಿದ್ಧಾಂತಗಳು, ಆರ್ಥಿಕ, ಧಾರ್ಮಿಕ ಸ್ತೋತ್ರಗಳು, ಜ್ಯಾತ್ಯಾತೀತ ಸರ್ವ ಸಮಾನತಾ ಸಮಾಜವಾದ ವಿಚಾರಗಳು ಆದರ್ಶವಾದವು.

ಮಹಾದೇವರು ಒಂದೆಡೆ ಹೇಳುತ್ತಾರೆ "ನನ್ನೆದುರು ನನ್ನನ್ನು ದ್ವೇಷಿಸುವ ಪರಮ ವೈರಿಯೇ ಬಂದರೂ ಸರಿ ನನಗೋ ಅವನ ಉದ್ಧಾರ ಎಂತಾದೀತೆಂಬ ಚಿಂತೆ" ಎನ್ನುವ ಜನನಾಯಕರೇ ಸರಿ. ಇಂತಹ ಮಹೋನ್ನತ ಜೀವನವನ್ನು ಸಾಗಿಸಿ; ಬದುಕಿ ಬಾಳಿದ ನಮ್ಮ ಸಮಕಾಲೀನ ವ್ಯಕ್ತಿಗಳು ಮತ್ತು ಅವರ ಶಿಷ್ಯಕೋಟಿ "ಅವತಾರಿ" ಎಂದು ಕರೆದು ಸ್ವಾನುಭವದಿಂದ ಅರ್ಥಮಾಡಿಕೊಂಡ ಆ ಜನ ಅವರನ್ನು 'ದೈವತ್ವ'ಕ್ಕೇರಿಸಿ ಜೋಗುಳ ಸುಪ್ರಭಾತ, ಮಂಗಳಾರತಿ ಪದಮಾಡಿ ಹಾಡಿ ಹರಿಸಿದ್ದು ಆಶ್ಚರ್ಯವಲ್ಲ. ಈ ಹಿನ್ನಲೆಯಲ್ಲಿ ರಾಷ್ಟ್ರಕ್ಕೆ, ಸಮಾಜಕ್ಕೆ ಮಹಾದೇವರ ಕೊಡುಗೆ ಕಡಿಮೆಯೇನಲ್ಲ.

ಇಷ್ಟೆಲ್ಲ ಶ್ರೇಷ್ಠತೆ, ಹಿರಿಮೆಯನ್ನು ಹೊಂದಿದ ಶ್ರೀ ಸದ್ಗುರು ಮಾಧವಾನಂದರು ಕೊಟ್ಟಲಗಿ ಗ್ರಾಮದ ಜೊತೆಗಿನ ಸಂಬಂಧ ಅನನ್ಯ. ಅವರು ಕೊಟ್ಟಲಗಿ ಹಾಗೂ ನೆರೆಯ ಜತ್ತ ತಾಲೂಕಿನ ಖೋಜನವಾಡಿ ಗ್ರಾಮಗಳು ನನ್ನ ತವರು ಮನೆ ಎಂದು ಅವರು ಹೇಳುತ್ತಿದ್ದರು. ಅವರ ಈ ಆದರದ ನುಡಿಗೆ ಕಾರಣ ತಮಗಿಷ್ಟರಾದ ಅವರ ಅನುಯಾಯಿಗಳು. ಕೊಟ್ಟಲಗಿ ಮತ್ತು ಖೋಜನವಾಡಿ ಗ್ರಾಮದ ಹಲವಾರು ಭಕ್ತರನ್ನು ಸೇರಿಸಿಕೊಂಡು ಭಕ್ತ ಸಮೂಹದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಕಿಚ್ಚನ್ನು ಹಚ್ಚಿದರು. ಅಂತಹ ಭಕ್ತಾದಿಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮ ತನು, ಮನ, ಧನಗಳಿಂದ ಸಹಾಯ ಮಾಡುವುದಲ್ಲದೇ ಪ್ರಾಣದ ಹಂಗು ತೊರೆದು ಹೋರಾಡುವ ನಿಷ್ಠೆಯುಳ್ಳವರಾಗಿದ್ದರು.

ಸುಭಾಸಚಂದ್ರ ಭೋಸರು ಕರ್ನಾಟಕಕ್ಕೆ ಬಂದಾಗ ಹುಬ್ಬಳ್ಳಿಯ ಗಿರೀಶ ಆಶ್ರಮಕ್ಕೆ ಕರೆತಂದು ಮಹಾದೇವರು ಅವರನ್ನು ಸನ್ಮಾನಿಸಿದರು.[೪] ಸಶಸ್ತ್ರ ಯುದ್ಧದಿಂದ ಗೆದ್ದು ಸ್ವಾತಂತ್ರ್ಯ ಪಡೆಯಬೇಕೆಂಬ ಉತ್ಕಟ ಅಪೇಕ್ಷೆ ಅವರದು. ಮಹಾರಾಷ್ಟ್ರದ ಜತ್ತ ತಾಲೂಕಿನ

ಸೊನ್ಯಾಳ ಮತ್ತು ಅಥಣಿ ತಾಲೂಕಿನ ಕೊಟ್ಟಲಗಿ ಊರುಗಳಲ್ಲಿ ಶಸ್ತ್ರಾಸ್ತ್ರ ತಯಾರಿಕಾ ಕೇಂದ್ರಗಳನ್ನು ಸ್ಥಾಪಿಸಿದರು. ಗ್ರಾಮದ ಯೋಧರಲ್ಲಿ ಕೆಚ್ಚೆದೆ ಧೈರ್ಯ ಸಮರ್ಪಣಾ ಮನೋಭಾವ ಬರಲು ಅವರು ಕೇವಲ ಲೌಕಿಕ ಆಚಾರ ವಿಚಾರಗಳನ್ನು ಮಾತ್ರ ಬೋಧಿಸಲಿಲ್ಲ. ಮಾನವ ಜನ್ಮದ ಅಂತಿಮ ಗುರಿಯಾದ ಮೋಕ್ಷದ ಕುರಿತು; ಆತ್ಮಕಲ್ಯಾಣದ ದಾರಿಯನ್ನು ಬೋಧಿಸುತ್ತಿದ್ದರು. ನಿತ್ಯ ನಸುಕಿನ ಜಾವ ೪ ಗಂಟೆಗೆ ಕಾಕಡಾರತಿ (ಪ್ರಾರ್ಥನೆ) ಮುಂಜಾನೆ ೧೦ ಗಂಟೆಗೆ ಭಜನೆ, ಸಾಯಂಕಾಲ ೫ ಗಂಟೆಗೆ ಭಜನೆ, ರಾತ್ರಿ ೮ ಗಂಟೆಗೆ ಭಜನೆ; ಸರ್ವಧರ್ಮ ಪ್ರಾರ್ಥನೆ ಹೀಗೆ ಆಧ್ಯಾತ್ಮಿಕ ಕಾರ್ಯಕ್ರಮಗಳನ್ನು ನಿತ್ಯ ನಡೆಸಿಕೊಡುತ್ತಿದ್ದರು. ಅಲ್ಲದೇ ಸಪ್ತಾಹ, ಪುಣ್ಯತಿಥಿ ಕಾರ್ಯಕ್ರಮಗಳಲ್ಲಿ ಆಧ್ಯಾತ್ಮಿಕ ಪ್ರವಚನವನ್ನು ನೀಡುತ್ತಿದ್ದರು. ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಒಟ್ಟು ೧೦೦೦ಕ್ಕೂ ಮೇಲ್ಪಟ್ಟು ಸಪ್ತಾಹಗಳು, ವರ್ಷದ ಪ್ರತಿ ದಿನಕ್ಕೆ ಎರಡರಂತೆ ನಡೆಯುತ್ತಲೇ ಇರುತ್ತವೆ. ಮಹಾದೇವರ ಕಾಲದ ಸಪ್ತಾಹವೆಂದರೆ, ಗಾಂಧೀಜಿ ನಡೆಸುತ್ತಿದ್ದ ವಾರದ ಶಿಬಿರಗಳನ್ನು ನೆನಪಿಸುತ್ತದೆ. ಗಾಂಧೀಜಿ ಶಿಬಿರವಾಗಲಿ, ಆಶ್ರಮವಾಗಲಿ ದಿನಕ್ಕೆರಡು ಸಲ ಪ್ರಾರ್ಥನೆ, ಶ್ರಮದಾನ, ನೂಲುವದು, ಬೌದ್ಧಿಕ ತಿಳುವಳಿಕೆ ನೀಡುವ ಕಾರ್ಯ ನಡೆಸುತ್ತಿದ್ದರು.

ಹೀಗೆ ಇಂಚಗೇರಿ ಸಂಪ್ರದಾಯದ ಪ್ರತಿ ಆಶ್ರಮದಲ್ಲೂ ನಡೆಸಿಕೊಂಡು ಹೋಗುತ್ತಿದ್ದರು. ಹೀಗಾಗಿ ಕೊಟ್ಟಲಗಿ ಗ್ರಾಮವೂ ಇದರಿಂದಾಗಿ ಹೊರತಾಗಿರಲಿಲ್ಲ. ನಿತ್ಯ ಭಜನೆ, ಧ್ಯಾನ, ಎಲ್ಲ ಆಚರಣೆಗಳಿಂದಾಗಿ ಸಮಾನ ಮನಸ್ಕರ ಸಂಘಟನೆಯಾಗಿ ಸಾಮಾಜಿಕ ಹೋರಾಟಕ್ಕೆ ಸಿದ್ಧವಾಗುವಂತೆ ಪ್ರೇರಣೆ ದೊರೆಯಿತು. ಹೀಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಯಶಸ್ಸು ಕಾಣಲು ಸಾಧ್ಯವಾಯಿತು. ಮಹಾದೇವರೆಂದರೆ ಪ್ರತ್ಯಕ್ಷ "ದೇವರೆಂದು" ನಂಬಿರುವ ಭಕ್ತರು ಅವರು ಹಾಕಿದ ಗೆರೆಯನ್ನು ದಾಟುತ್ತಿರಲಿಲ್ಲ. ಮಹಾದೇವರಲ್ಲಿ ಅದಮ್ಯ ವಿಶ್ವಾವಿತ್ತು. ಮಹಾದೇವರು ಆತ್ಮದ ಸಂಬಂಧಗಳನ್ನು ಬೆಸೆಯುವ ಕಾರ್ಯ ಮಾಡುತ್ತಿದ್ದರು. ಹೀಗಾಗಿ ಜಾತಿ ಮತ ಪಂಥವೆನ್ನದೇ ಎಲ್ಲ ಭಕ್ತರು ಮಹಾದೇವರೆಡೆಗೆ ಹಂಬಲಿಸಿ ಬರುತ್ತಿದ್ದರು. ಕೊಟ್ಟಲಗಿ ಗ್ರಾಮಕ್ಕೆ ಗ್ರಾಮವೇ ಇಂದಿಗೂ ಸಂಪ್ರದಾಯದ ಭಕ್ತರೇ ನಿಜ. ಸಪ್ತಾಹ, ಪುಣ್ಯ ಕಾರ್ಯಗಳಲ್ಲಿ ಶ್ರೀ ಮಠದ ಸೇವಾ ಕಾರ್ಯದಲ್ಲಿ ಗ್ರಾಮದ ಜನತೆ ಪಾಲ್ಗೊಳ್ಳುತ್ತಾರೆ. ಮನೆ ಮನೆಯು ಸಂಪ್ರದಾಯದ ಸದ್ಭಕ್ತರೇ ಇರುವದು ವೈಶಿಷ್ಟ್ಯ. ಈ ಎಲ್ಲ ಹಿನ್ನೆಲೆಯಲ್ಲಿ ಗ್ರಾಮದ ಅನೇಕರು ತಮ್ಮ ತನು, ಮನ, ಧನಗಳಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದ್ದು ಅವಿಸ್ಮರಣೀಯ ಘಟನೆಯೇ ಸರಿ.

ಕರ್ನಾಟಕ ಏಕೀಕರಣದಲ್ಲಿ ಶ್ರೀ ಮಹಾದೇವರ ಪಾತ್ರ

ಕರ್ನಾಟಕ ಏಕೀಕರಣ ಸಮಯದಲ್ಲಿ ಮಹಾದೇವರು ಆಜೀವ ನಿರಶನ ಘೋಷಿಸಿ; ಸರ್ವಪಕ್ಷಗಳು ಸಮಾವೇಶಗೊಂಡು ಏಕೀಕರಣ ಮಾಡಲು ಕರೆ ಕೊಟ್ಟರು. ಹುಬ್ಬಳ್ಳಿಯ ಗಿರೀಶ ಆಶ್ರಮದಲ್ಲಿ ಮಹಾದೇವರು ೨೧ ದಿನ ನಿರಶನ ಮಾಡಿದರು. ಸರ್ವ ಪಕ್ಷದವರು

ಸಭೆ ಸೇರಿ ಅವರ ಉಪವಾಸ ಬಿಡಿಸಿದರು. ಆಗ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣವೆಂಬ ಸಂಘಟನೆಯನ್ನು ಸ್ಥಾಪಿಸಿದರು. ಮೊದಲ ಪರಿಷತ್ತು ದಾವಣಗೆರೆಯಲ್ಲಿ ಸೇರಿತ್ತು, ಅಧ್ಯಕ್ಷತೆ ಕಾರಂತರದು. ಈ ಸಮಿತಿಯಲ್ಲಿ ಶಾಂತವೇರಿ ಗೋಪಾಲಗೌಡರು, ಅಳವಂಡಿ ಶಿವಮೂರ್ತಿ ಸ್ವಾಮಿಗಳು, ಮುಖ್ಯಮಂತ್ರಿಗಳಾಗಿದ್ದ ಕಡಿದಾಳ ಮಂಜಪ್ಪ, ಮಹಾದೇವರು, ವಾಲಿ ಚನ್ನಪ್ಪ, ಚಿನ್ಮಯ ಸ್ವಾಮಿ, ಓಂಕಾರ ಮಠ, ಮಾಸ್ತಿ ಸುಬ್ರಹ್ಮಣ್ಯಂ ಸ್ವಾಮಿ ಇವರೆಲ್ಲರೂ ಕೂಡಿ ಅವಿಶ್ರಾಂತವಾಗಿ ದುಡಿದರು. ಗಿರೀಶ ಆಶ್ರಮವೇ ಸಂಘಟನೆಯ ಕೇಂದ್ರ ಸ್ಥಾನ ಕಛೇರಿಯಾಗಿ; ಮಹಾದೇವರೇ ಕೇಂದ್ರ ಶಕ್ತಿಯಾಗಿ ಏಕೀಕರಣಕ್ಕಾಗಿ ಹೋರಾಡಿ ಕರ್ನಾಟಕ ರಾಜ್ಯ ನಿರ್ಮಾಣ ಮಾಡಿದರು. ಮಹಾತ್ಮಾಗಾಂಧೀಜಿಯವರ ಮೊಮ್ಮಗ ಅರುಣ ಗಾಂಧಿಯವರು ಇಂಚಗೇರಿ ಮಠಕ್ಕೆ ಭೆಟ್ಟಿ ನೀಡಿದಾಗ ಇದೊಂದು ಅದ್ಭುತ ಲೋಕವೆಂದು ವಿಸ್ಮಯ ಪಟ್ಟುಕೊಂಡರು. ಅಷ್ಟೇ ಅಲ್ಲದೇ ತಾವೆ "ಇಂಪ್ರಿಂಟ" ಎಂಬ ಪತ್ರಿಕೆಯಲ್ಲಿ ಈ ವಿಚಾರವನ್ನು ಕೂಡ ಪ್ರಸ್ತಾಪಿಸಿದರು. ಹೀಗೆ ಒಂದೇ ಎರಡೇ ಅವರ ಸಮಾಜಸೇವೆಯ ಮುಖಗಳು ವರ್ಣಿಸಲಸಾಧ್ಯ.

ಗೋವಾ ವಿಮೋಚನೆಯಲ್ಲಿ ಮಹಾದೇವರು:

ಭಾರತ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದರೂ ಗೋವಾ ರಾಜ್ಯವು ಇನ್ನೂ ಪೋರ್ಚುಗೀಸರ ದುಷ್ಟ ಕಪಿಮುಷ್ಠಿಯಲ್ಲಿತ್ತು. ಹೀಗಾಗಿ ನಮ್ಮ ಕರ್ನಾಟಕದ ಹಲವಾರು ಸ್ವಾತಂತ್ರ್ಯ ಸೈನಿಕರು ಹಲವಾರು ತಂಡಗಳಲ್ಲಿ ಗೋವೆಯನ್ನು ೧೯೫೫ರಲ್ಲಿ ಪ್ರವೇಶಿಸಿ; ಗೋವೆಯನ್ನು ಪೋರ್ಚುಗೀಸರಿಂದ ಬಿಡಿಸಲು ಹೋರಾಟ ಕೈಗೊಂಡರು.

ಈ ಹೋರಾಟದಲ್ಲಿ ಮಹಾದೇವರು ತಮ್ಮ ಹಲವಾರು ಅನುಯಾಯಿಗಳೊಂದಿಗೆ ಈ ಹೋರಾಟಕ್ಕೆ ಧುಮುಕಿದರು. ಹೋರಾಟದಲ್ಲಿ ಗ್ರಾಮದವರೇ ಆದ ಶ್ರೀ ಸಿದರಾಯಪ್ಪ ಸಿದ್ದಪ್ಪಾ ದೊಡ್ಡನಿಂಗಪ್ಪಗೋಳ ಅವರು ಪಾಲ್ಗೊಂಡಿದ್ದರು. ಇದರಿಂದ ಗ್ರಾಮವು ಕೂಡ ಗೋವಾ ವಿಮೋಚನೆಯಲ್ಲಿ ತಮ್ಮ ಅಳಿಲು ಸೇವೆಯನ್ನು ಸಲ್ಲಿಸಿದೆಯೆಂಬುವದನ್ನು ಗ್ರಾಮದ ಜನ ಹೆಮ್ಮೆಯಿಂದ ಹೇಳುತ್ತಾರೆ.

೪.೫. ಕೊಟ್ಟಲಗಿ ಗ್ರಾಮದ ಸ್ವಾತಂತ್ರ್ಯ ಯೋಧರು

ಭಾರತದ ಸ್ವಾತಂತ್ರ್ಯ ಪ್ರೇಮಿ ಜನತೆ, ತನ್ನ ಮೇಲೆ ಪರಕೀಯರು ಮಾಡಿದ ಆಕ್ರಮಣವನ್ನು ಸಹಿಸದೆ ಪರಕೀಯ ಸತ್ತೆಯನ್ನು ಕಿತ್ತೊಗೆದು ಸ್ವತಂತ್ರವಾಗಬೇಕೆಂಬ ಉತ್ಕಟೇಚ್ಛೆಯಿಂದ ಬ್ರಿಟೀಷರ ಮೇಲೆ ಶಸ್ತ್ರ ಹಿಡಿದು ಹೋರಾಟಕ್ಕಣಿಯಾದರು. ಇಂಥ ಪರಿಸ್ಥಿತಿಯಲ್ಲಿ ಭಾರತದ ರಾಷ್ಟ್ರನಾಯಕರ ಅವಿರತ ಪರಿಶ್ರಮದಿಂದ ಜನತೆಯಲ್ಲಿ ಅದ್ಭುತ ಜಾಗೃತಿಯುಂಟಾಯಿತು. ಈ ಶತಮಾನದ ಪ್ರಥಮ ದಶಕದಲ್ಲಿ ಸ್ವಾತಂತ್ರ್ಯ ಸಂಪಾದನೆಗಾಗಿ ದೇಶದಲ್ಲಿ ಅಲ್ಲಲ್ಲಿ ಕ್ರಾಂತಿಕಾರಿ ಚಟುವಟಿಕೆಗಳು ಪ್ರಾರಂಭವಾದವು. ಎರಡನೆಯ ದಶಕದ ಕೊನೆಗೆ ಮಹಾತ್ಮಾಗಾಂಧಿ ಅವರ ಅಸಹಕಾರ ಆಂದೋಲನವು ಭಾರತೀಯರಲ್ಲಿ ಹೊಸ

ಚೈತನ್ಯವನ್ನು ಉಂಟುಮಾಡಿತು. ಅವರ ನೇತೃತ್ವದಲ್ಲಿ ಮತ್ತೆ ಸ್ವಾತಂತ್ರ್ಯ ಸಂಗ್ರಾಮದ ಸಿದ್ಧತೆಗಳು ನಡೆದವು.

ಈ ಮಹಾಸಂಗ್ರಾಮದಲ್ಲಿ ಭಾಗವಹಿಸಿದ ಕೊಟ್ಟಲಗಿ ಗ್ರಾಮದ ಸ್ವಾತಂತ್ರ್ಯ ಹೋರಾಟಗಾರರು ತಮ್ಮದೆನ್ನುವ ಸರ್ವಸ್ವಕ್ಕೂ ತಿಲಾಂಜಲಿ ಕೊಟ್ಟು ಈ ಹೋರಾಟದಲ್ಲಿ ಭಾಗವಹಿಸಿದರು. ಈ ಹೋರಾಟ ನಡೆಸುವಾಗ ಮುಂದೆ ಸ್ವಾತಂತ್ರ್ಯ ದೊರೆತ ನಂತರ ತಮಗೆ ಮಂತ್ರಿ ಪದವಿಯಾಗಲಿ, ಶಾಸನ ಸಭೆಗಳ ಸದಸ್ಯತ್ವವಾಗಲಿ, ಇಲ್ಲವೇ ಯಾವುದೊಂದು ಅಧಿಕಾರ ಪದವಾಗಲಿ ದೊರಕಿತೆಂಬ ಆಮಿಷಗಳನ್ನವರು ಇಟ್ಟುಕೊಂಡಿರಲಿಲ್ಲ. ಕೇವಲ ಸ್ವಾತಂತ್ರ್ಯ ಸಂಪಾದನೆಯೊಂದೆ ಅವರ ಹೆಗ್ಗುರಿಯಾಗಿತ್ತು. ಆ ಗುರಿ ಮುಟ್ಟುವದಕ್ಕಾಗಿ ಜನ ಸಾಮಾನ್ಯರು ತಮ್ಮ ಮನೆ ಮಾರುಗಳನ್ನು, ಮಡದಿ, ಮಕ್ಕಳನ್ನು ಬಿಟ್ಟು ಈ ಸ್ವಾತಂತ್ರ್ಯ ಯಜ್ಞದಲ್ಲಿ ಧುಮುಕಿದರು. ಈ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಕೊಟ್ಟಲಗಿ ಗ್ರಾಮದ ಅನೇಕ ಅನಾಮಧೇಯ ನಿರ್ಲಕ್ಷಿಸಲ್ಪಟ್ಟ ಸ್ವಾತಂತ್ರ್ಯ ವೀರರನ್ನು ಪರಿಚಯಿಸುವುದು ಕೂಡ ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿದೆ.

೧. ಶ್ರೀ ಸಿದ್ದಲಿಂಗಪ್ಪಮುತ್ಯಾ ಬಡವಗೋಳ

ಶ್ರೀ ಸಿದ್ದಲಿಂಗಪ್ಪಮುತ್ಯಾರವರು ಗ್ರಾಮದ ಹಿರಿಯ ಜೀವ, ಜೊತೆಗೆ ಸ್ವಾತಂತ್ರ ಸಂಗ್ರಾಮದ ಕಾರ್ಯಕ್ಕೆ ಪ್ರೇರಕರಾದ ಶ್ರೀ ಮಾಧವಾನಂದರ ಆಪ್ತರು. ಅವರು ಶ್ರೀ ಗಿರಿಮಲ್ಲೇಶ್ವರ ಮಹಾರಾಜರ ಪರಮ ಶಿಷ್ಯರು ಹೌದು. ಅವರು ಮಾಧವಾನಂದರ ತತ್ವ ಸಿದ್ಧಾಂತಗಳನ್ನು ನಂಬಿದ ನಂತರ; ಗ್ರಾಮದ ಜನತೆಯಲ್ಲಿ ಭಕ್ತಿಯ ಹೊಳೆಯೇ ಹರಿಯಿತು. ಶ್ರೀ ಸಿದ್ದಲಿಂಗಪ್ಪ ಮುತ್ಯಾರವರ ಮುಖಾಂತರ ಮಹಾದೇವರು ಸ್ವಾತಂತ್ರ್ಯ ಸಂಗ್ರಾಮದ ಕಾರ್ಯವನ್ನು ನೆರವೇರಿಸುತ್ತಿದ್ದರು. ಹೀಗಾಗಿ ಗ್ರಾಮದಲ್ಲಿ ಮದ್ದು ಗುಂಡು ತಯಾರಿಕೆಯಂತಹ ಕಾರ್ಯವು ಇವರ ಮುಖಾಂತರವೇ ನೆರವೇರುತ್ತಿತ್ತು. ಹೀಗಾಗಿ ಗ್ರಾಮದ ಸ್ವಾತಂತ್ರ್ಯ ಸೈನಿಕರ ನೇತಾರರೆಂದರು ತಪ್ಪಾಗಲಿಕ್ಕಿಲ್ಲ. ಇವರು ಮಹಾದೇವರ ಅನುಯಾಯಿಗಳು; ಸಂಪ್ರದಾಯದ ಭಕ್ತರಲ್ಲಿ ಹಿರಿಯರು ಆಗಿದ್ದಾರೆ.

೨. ತಮ್ಮಣ್ಣ ಮಲ್ಲಪ್ಪ ನಂದಗೌಡ

ಇವರು ೧೨.೦೨.೧೯೧೬ ರಂದು ಸ್ವಗ್ರಾಮ ಕೊಟ್ಟಲಗಿಯಲ್ಲಿ ಜನಿಸಿದರು. ೩ನೇ ತರಗತಿವರೆಗೆ ಶಿಕ್ಷಣವನ್ನು ಪಡೆದು ಒಕ್ಕಲುತನ ಕಾರ್ಯ ಮಾಡಲಾರಂಭಿಸಿದರು. ಇವರು ಕೊಟ್ಟಲಗಿಗೆ ಬರುವ ಬಸ್ಸಿನಲ್ಲಿದ್ದ ಟಪಾಲ ಲೂಟಿ ಮಾಡಿದರು. ಬಿಜ್ಜರಗಿಯಿಂದ ಕನಮಡಿಯವರೆಗೆ ೨ಕಿ.ಮೀ. ಉದ್ದದ ತಂತಿ ಕಡಿದು ಹಾಕಿದರು. ಅರಟಾಳದಿಂದ ಅಥಣಿಗೆ ಹೋಗುವ ಸಿಂದಿ ಕಪಾಲಿ ಲೂಟಿ ಮಾಡಿದರು. ಈ ವಿಷಯ ಅರಿತ ಬ್ರಿಟೀಷರು ಕೆಂಡಾಮಂಡಲರಾದರು. ಇವರನ್ನು ಬಂಧಿಸಿ ಸಾಂಗಲಿ ಜಿಲ್ಲೆಯ ಜತ್ತ ಸೇಶನ್ಸ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ವಿಚಾರಣೆ ನಡೆದು ಇವರಿಗೆ ೫ ವರ್ಷ ಶಿಕ್ಷೆ, ೧೦೦ ರೂ. ದಂಡ ವಿಧಿಸಿದರು. ದಂಡ

ತುಂಬಲು ತಪ್ಪಿದರೆ ಬದಲಿಗೆ ಮತ್ತೆ ಆರು ತಿಂಗಳು ಶಿಕ್ಷೆ ಅನುಭವಿಸಬೇಕೆಂದು ಶಿಕ್ಷೆ ವಿಧಿಸಿದರು. ಇಂತಹ ಸ್ವಾತಂತ್ರ ಯೋಧರು ದಿನಾಂಕ ೦೮.೦೭.೧೯೯೮ರಂದು ನಿಧನರಾದರು.

ಗುರುಪಾದಪ್ಪ ಜತ್ತಿ

ಇವರು ಶ್ರೀ ಸದ್ಗುರು ಮಾಧವಾನಂದ ಪರಮ ಶಿಷ್ಯರು. ತಮ್ಮ ಮನೆಯಲ್ಲಿಯೇ ಬಂದೂಕು, ಪಿಸ್ತೂಲು ಮಾಡಲು ಅವಕಾಶ ಕಲ್ಪಿಸಿದರು. ಗಿರಣಿ ಮನೆಯೆಂದು ಕರೆಯಿಸಿಕೊಳ್ಳುವ ಸ್ಥಳದಲ್ಲಿಯೇ ಶ್ರೀ ಮಹಾದೇವರು ಮದ್ದು ಗುಂಡುಗಳನ್ನು ತಯಾರಿಸಲು ಪ್ರೇರೆಪಿಸಿದ್ದರು. ಇವರನ್ನು ಜತ್ತ, ಖೋಡಿ, ಕೊಟ್ಟಲಗಿ ಮಧ್ಯದಲ್ಲಿ ಬಂಧಿಸಿದರು. ಸ್ವಾತಂತ್ರ ಸಂಗ್ರಾಮದಲ್ಲಿ ಬ್ರಿಟಿಷರು ಕಬ್ಬಿಣದ ಹಾರೆಯನ್ನು ಇವರು ಮೈಮೇಲೆ ಉರುಳಿಸಿ ಇವರನ್ನು ಬಡಿಗೆಗಳಿಂದ ಹೊಡಿ ಬಡಿ ಮಾಡಿದರು, ಸಾಕಷ್ಟು ಹಿಂಸೆ ಅನುಭವಿಸಿದರು.

ಇವರು ರೇವಣ್ಣ ಬಡವಗೋಳ, ಸಿದ್ದಪ್ಪ ಝುಳಕಿ, ರಾಮಗೊಂಡ ಬಸರಗಿ, ಮಲ್ಲೇಶ ಮತ್ತು ಶಾಂತಪ್ಪ ಇಟಗಿ ಮುಂತಾದವರ ಜೊತೆಗೂಡಿ ಮದ್ದುಗುಂಡು ತಯಾರಿಸುತ್ತಿದ್ದರು. ಅನೇಕ ಸ್ವಾತಂತ್ರ್ಯ ಯೋಧರಿಗೆ ಅನ್ನ ನೀರು ಹೀಗೆ ವಿವಿಧ ಸಹಾಯ ಮಾಡುತ್ತಿದ್ದರು.

ರೇವಣ್ಣ ಬಡವಗೋಳ

ಇವರು ಗ್ರಾಮದ ಸ್ವಾತಂತ್ರ್ಯ ಯೋಧರಲ್ಲಿ ಅತ್ಯಂತ ನಿಷ್ಠಾವಂತ ನಿಸ್ವಾರ್ಥ ಮನೋಭಾವದವರು. ಶ್ರೀ ಮಹಾದೇವರ ಆಜ್ಞಾಧಾರಕರು ಆಗಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕುವಂತೆ ಅನೇಕ ಗ್ರಾಮದ ಸಹಪಾಠಿಗಳಿಗೆ ಪ್ರೇರೇಪಿಸಿದರು. ಅಲ್ಲದೇ ಬ್ರಿಟೀಷರ ವಿರುದ್ಧ ಸೈನ್ಯ ಕಟ್ಟುವಲ್ಲಿ ವಿಶೇಷವಾಗಿ ಶ್ರಮಿಸಿದರು.

ಇವರು ಜತ್ತ, ವಿಜಾಪೂರ ರಸ್ತೆಯಲ್ಲಿರುವ ಸುಮಾರು ೨-೩ ಕಿ.ಮೀ. ಫೋನ ವೈರಗಳನ್ನು ಕಡಿದರು. ಈ ಎಲ್ಲ ಅಪರಾಧಗಳಿಂದಾಗಿ ಬ್ರಿಟೀಷರ ಜತ್ತ ಸೇಶನ್ಸ ನ್ಯಾಯಾಲಯದಲ್ಲಿ ೩ ವರ್ಷ ಕಾರಾಗ್ರಹ ಶಿಕ್ಷೆಯನ್ನು ವಿಧಿಸಿದರು. ಇವರು ಶಿಕ್ಷೆಗೊಳಗಾದ ಮೇಲೆ ಇವರ ಪತ್ನಿ ನಿಂಬೆವ್ವ ಎನ್ನುವವರು ವಿಚ್ಛೇದನ ನೀಡಿದರು. ಆದರೂ ಸಹ ಬಿಡದೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದ ವೀರರಿವರು. ಇಷ್ಟಲ್ಲದೇ ಕರ್ನಾಟಕ ಏಕೀಕರಣದಲ್ಲಿ ಭಾಗವಹಿಸಿ ದೇಶಭಕ್ತಿ ಮೆರೆದ ಮಹಾನ್ ವ್ಯಕ್ತಿ ಇವರು. ಸರಕಾರದಿಂದ ಯಾವುದೇ ಪಿಂಚಣಿ ಕೂಡ ಪಡೆಯಲು ನಿರಾಕರಿಸಿದ್ದು ಅವರ ದೇಶಭಕ್ತಿಗೆ ಹಿಡಿದ ಕೈಗನ್ನಡಿಯಾಗಿದೆ.

ಶ್ರೀ ಸಿದ್ದಪ್ಪ ಝುಳಕಿ

ಇವರು ಗ್ರಾಮದಲ್ಲಿ ಶ್ರೀ ರ್‍ಯಾವಣ್ಣ ಬಡವಗೋಳ, ಖೋಜನವಾಡಿಯ ರಾಮಗೊಂಡ ಬಸರಗಿ, ಗುರುಪಾದಪ್ಪ ಜತ್ತಿ ಮುಂತಾದವರ ಜೊತೆಯಾಗಿದ್ದು; ಸ್ವಾತಂತ್ರ್ಯ ಹೋರಾಟ ಮಾಡಿದವರು. ಇವರು ಮದ್ದು ಗುಂಡು ತಯಾರಿಕೆಯಲ್ಲಿ ವಿಶೇಷ ಪಾತ್ರ ವಹಿಸಿದ್ದರು.

ಶ್ರೀ ಮಾಧವಾನಂದ ಪ್ರಭೂಜಿಯವರ ಆಜ್ಞಾಧಾರಕರಾಗಿದ್ದುಕೊಂಡು ಚಳುವಳಿಯಲ್ಲಿ ಧುಮುಕಿದರು. ಬ್ರಿಟೀಷರು ಕೊಟ್ಟಲಗಿ ಗ್ರಾಮವನ್ನು ಸುತ್ತುವರೆದಾಗ ಇವರ ಗುಡಿಸಿಲಿನ ಮನೆಯಲ್ಲಿ ಸಂದು ಸಂದಿಗಳಲ್ಲೆಲ್ಲಾ ಮದ್ದು ಗುಂಡುಗಳನ್ನು ಅಡಗಿಸಿಡಲಾಗಿತ್ತು. ಸುದೈವವಶಾತ ಬ್ರಿಟೀಷರ ಕೈಗೆ ದೊರೆಯದೇ ಗ್ರಾಮದ ಮಹಿಳೆಯರು ಊರ ಹೊರಗಿನ ಬಾವಿಗೆ ಸಾಗಿಸಿದರು. ಅನೇಕ ಯೋಧರಿಗೆ ಅನ್ನ, ನೀರು ನೀಡಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಹಾಯ ಮಾಡಿದರು. ಕರ್ನಾಟಕ ಏಕೀಕರಣ, ಸಂಸ್ಥಾನ ವಿಲಿನೀಕರಣ ಚಳುವಳಿಗಳಲ್ಲಿ ಧುಮುಕಿದರು.

ಶ್ರೀ ಸಿದರಾಯ ಸತ್ಯಪ್ಪ ನಾಟಿಕಾರ

ಗ್ರಾಮದ ಸ್ವಾತಂತ್ರ್ಯ ಹೋರಾಟದಲ್ಲಿ ಇವರು ಕೂಡಾ ಜತ್ತದಿಂದ ಬಿಜ್ಜರಗಿವರೆಗಿನ ಫೋನ ವೈರ ಕಡಿಯುವದು ಮುಂತಾದ ಚಟುವಟಿಕೆಗಳಲ್ಲಿ ಇವರು ಭಾಗವಹಿಸಿದ್ದರು. ಜತ್ತದಿಂದ ಬರುವ ಪೋಷ್ಟಬ್ಯಾಗ ಕಸಿದುಕೊಂಡು ಬ್ರಿಟೀಷರಿಗೆ ಪ್ರತಿಭಟಿಸಿದರು.

ಶ್ರೀ ಸಿದರಾಯ ಅವರು ಮತ್ತು ಇತರೆ ಸ್ವಾತಂತ್ರ್ಯ ಹೋರಾಟಗಾರರು ರಾಯಭಾಗ ಗುಡ್ಡದಲ್ಲಿ ಗಣಪತಿ ಮಂದಿರವಿತ್ತು. ಅಲ್ಲಿ ಒಬ್ಬ ಮಹಿಳೆಯಿಂದ ರೊಟ್ಟಿ ಕೇಳಿ ಪಡೆದು ಅವಳಿಗೆ ಬಂಗಾರದ ಬೋರಮಳ ಕೊಟ್ಟರಂತೆ. ಆ ವಿಚಾರ ಬ್ರಿಟೀಷರಿಗೆ ಹೇಗೋ ಗೊತ್ತಾಗಿ ಆ ಹೆಣ್ಣು ಮಗಳನ್ನು ಎಷ್ಟು ಶಿಕ್ಷಿಸಿದರೂ ಅವಳು ಇವರ ಹೆಸರು ಹೇಳಲಿಲ್ಲವಂತೆ. ಇವರನ್ನು ಜತ್ತ ಜೈಲು, ಬೆಳಗಾವಿ ಜೈಲು, ಮುಂತಾದ ಕಡೆಗಳಲ್ಲಿ ಬಂಧಿಸಿಟ್ಟಿದರು. ಜತ್ತ ಸರಕಾರ ಹಾಗೂ ರಾಣಿ ಸರಕಾರ ಜತ್ತ ಜೈಲಿನಲ್ಲಿ ನನ್ನ ಖೈದಿ ಹೆಚ್ಚು ನಿನ್ನ ಖೈದಿ ಹೆಚ್ಚು ಎಂದು ಸ್ಪರ್ಧೆ ಇಟ್ಟು ಮನರಂಜನೆ ಪಡೆಯುತ್ತಿದ್ದರು. ಇವರಿಗೆ ಮುಚ್ಚಂಡಿ ಗುಡ್ಡದಲ್ಲಿ ಶಿದರಾಯ ಸ. ನಾಟಿಕರ ಅವರನ್ನು ಬೆನ್ನತ್ತಿ ಹೋಗಿ ಇವರು ಬದುಕಿ ಉಳಿಯಲು ಕಾರಣವಾಯಿತು. ಬ್ರಿಟೀಷರು ಗುಂಡು ಹಾರಿಸಿದಾಗ ಇವರ ತಲೆಯ ಮೇಲಿಂದ ಗುಂಡು ಹಾಯ್ದು ಹೋಯಿತಂತೆ. ಹೀಗೆ ಮಾಧವಾನಂದರ ನೇತೃತ್ವದಲ್ಲಿ ಇವರು ಅವರ ಅನುಯಾಗಿಗಳಾಗಿ ಸೇವೆ ಸಲ್ಲಿಸಿದರು.

ಬಸಪ್ಪ ಮಲಕಪ್ಪ ಆಜೂರ

ಇವರು ಗ್ರಾಮದಲ್ಲಿ ಶ್ರೀ ಮಾಧವಾನಂದರ ಪ್ರೇರಣೆಯಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದರು. ಫೋನ ವೈರ ಕತ್ತರಿಸುವದು, ಪೋಸ್ಟ ಬ್ಯಾಗ ಕಸಿದುಕೊಳ್ಳುವದು ಇಂತಹ ಹಲವಾರು ಕಾರ್ಯಗಳಲ್ಲಿ ಶ್ರಮಿಸಿದರು. ಅಲ್ಲದೇ ಸಂಸ್ಥಾನ ವಿಲಿನೀಕರಣ ಮುಂತಾದ ಕಾರ್ಯಗಳಲ್ಲಿ ಭಾಗವಹಿಸಿ ದುಡಿದ ಹಿರಿಮೆ ಶ್ರೀ ಬಸಪ್ಪ ಆಜೂರವರದು. ಗ್ರಾಮಕ್ಕೆ ಬರುವ ಸ್ವಾತಂತ್ರ ಸೈನಿಕರಿಗೆ ಅನ್ನ, ನೀರು, ಸಹಾಯ ಸಹಕಾರ ನೀಡುವಲ್ಲಿ ಇವರು ಮಹತ್ವದ ಪಾತ್ರ ವಹಿಸಿದ್ದಾರೆ.

ಇಬ್ರಾಹಿಂ ಗುಡು ಮುಲ್ಲಾ

ಇವರು ಗ್ರಾಮದ ಇತರೆ ಎಲ್ಲ ಸ್ವಾತಂತ್ರ್ಯ ಸೈನಿಕರ ಜೊತೆಯಲ್ಲಿ ಸೇರಿ ಹೋರಾಟ ಮಾಡಿದರು. ಕನಮಡಿ, ಬಿಜ್ಜರಗಿ ಮಾರ್ಗದ ವೈರ ಕತ್ತಿರಿಸುವದು ಹಾಗೂ ಜತ್ತದಿಂದ ಗ್ರಾಮಕ್ಕೆ ಬರುವ ಪೋಸ್ಟ ಬ್ಯಾಗ ಕಸಿದುಕೊಳ್ಳುವದು ಹೀಗೆ ವಿವಿಧ ಕಾರ್ಯಗಳಲ್ಲಿ ಭಾಗಿಯಾಗಿದ್ದಾರೆ. ಕರ್ನಾಟಕ ಏಕೀಕರಣ ಚಳುವಳಿ, ಸಂಸ್ಥಾನ ವಿಲಿನೀಕರಣ ಚಳುವಳಿಗಳಲ್ಲಿ ಭಾಗವಹಿಸಿದ್ದಾರೆ.

ವೆಂಕಟೇಶ ಗೋಪಾಲ ಕುಲಕರ್ಣಿ

ಇವರು ಗ್ರಾಮದ ತಮ್ಮಣ್ಣ ನಂದಗೌಡ, ಬಸಪ್ಪ ಅಜೂರ, ಸಿದರಾಯ ನಾಯಿಕ, ಇಬ್ರಾಹಿಂ ಗುಡು ಮುಲ್ಲಾ ಇವರ ಜೊತೆ ಸೇರಿ ತಂತಿ ಕತ್ತರಿಸುವದು, ಪೋಸ್ಟ ಬ್ಯಾಗ ಕಸಿದುಕೊಳ್ಳುವದು ಮುಂತಾದ ಕಾರ್ಯಗಳಲ್ಲಿ ಭಾಗಿಯಾಗಿದ್ದಾರೆ.

ಕೊಟ್ಟಲಗಿ ಗ್ರಾಮದಲ್ಲಿ ಗೋವಾ ವಿಮೋಚನಾ ಹೋರಾಟಗಾರರು

೧೯೫೫ರಲ್ಲಿ ಗೋವಾ ವಿಮೋಚನಾ ಚಳುವಳಿ ನಡೆಯಿತು. ಮಾಜಾಳಿ ಮೂಲಕ ಮಾಧವಾನಂದರು ತಮ್ಮ ಭಕ್ತರೊಂದಿಗೆ ಗೋವೆಯನ್ನು ಪ್ರವೇಶಿಸಿದರು. ಈ ಸನ್ನಿವೇಶದಲ್ಲಿ ರಾಜ್ಯದ ನಾನಾ ಜಿಲ್ಲೆಗಳಿಂದ ಮಹಾದೇವರ ಶಿಷ್ಯಂದಿರು ಪಾಲ್ಗೊಂಡಿದ್ದರು. ಇದರಲ್ಲಿ ಗ್ರಾಮದ ಶ್ರೀ ಸಿದರಾಯಪ್ಪ ಸಿದ್ದಪ್ಪ ದೊಡ್ಡನಿಂಗಪ್ಪಗೋಳ ಇವರು ಪಾಲ್ಗೊಂಡಿದ್ದರು. ಇವರು ಶ್ರೀ ಮಹಾದೇವರ ಜೊತೆಯಲ್ಲಿ ಗೋವಾ ವಿಮೋಚನಾ ಚಳುವಳಿಯಲ್ಲಿ ಪಾಲ್ಗೊಂಡು ಗೋವಾ ವಿಮೋಚನೆಗಾಗಿ ಶ್ರಮಿಸಿದರು. ಇವರು ಚಿಕ್ಕಂದಿನಿಂದಲೇ ಗ್ರಾಮದಲ್ಲಿ ರೇವಣ್ಣ ಬಡವಗೋಳ ಅವರ ನೇತೃತ್ವದ ಸ್ವಾತಂತ್ರ ಸೈನಿಕರ ಸೈನ್ಯದಲ್ಲಿ ಒಬ್ಬರಾಗಿದ್ದು, ನಿಸ್ವಾರ್ಥದಿಂದ ಜತ್ತ ಸಂಸ್ಥಾನದ ವಿಲಿನೀಕರಣದ ಸಂದರ್ಭದ ಹೋರಾಟದಲ್ಲಿ ಪಾಲ್ಗೊಂಡವರು. ಅಷ್ಟೇ ಅಲ್ಲದೇ ಶ್ರೀ ಮಾಧವಾನಂದರ ಜೊತೆಗೆ ಇದ್ದು ಅವರ ಆಜ್ಞೆಯ ಮೇರೆಗೆ ಇಂಚಗೇರಿ ಮಠದಲ್ಲಿ ೪೦ ವರ್ಷದಿಂದ ಮಠದ ಕೃಷಿ ಕಾರ್ಯಗಳ ಉಸ್ತುವಾರಿ ನೋಡಿಕೊಂಡು ಅವರ ಆಜ್ಞಾಧಾರಕರಾಗಿದ್ದವರು.

ಸ್ವಾತಂತ್ರ ಸಂಗ್ರಾಮದಲ್ಲಿ ಯುವಕರ ಪಾತ್ರ

ಗ್ರಾಮದಲ್ಲಿ ಸ್ವಾತಂತ್ರ್ಯ ಸಂಗ್ರಾಮವು ಪ್ರತಿಯೊಬ್ಬ ಯುವ ಪೀಳಿಗೆಯಲ್ಲಿ ಸ್ವಾತಂತ್ರ್ಯದ ಕಿಚ್ಚನ್ನು ಹಚ್ಚುವಂತೆ ಚಟುವಟಿಕೆಗಳು ನಡೆಯುತ್ತಿದ್ದವು.

ಕೊಟ್ಟಲಗಿಯಲ್ಲಿ ಸ್ವಾತಂತ್ರ್ಯ ಸೈನಿಕರು ತಮ್ಮದೇಯಾದ ಸೈನಿಕರ ಪಡೆಯನ್ನು ರಚಿಸಿದ್ದರು. ಅಲ್ಲದೇ ಗ್ರಾಮದಲ್ಲಿ ಯುವಕರಿಗೆ ತರಬೇತಿ ನೀಡುವ ಪರೇಡಗಳನ್ನು ನಿತ್ಯ ನಡೆಸುತ್ತಿದ್ದರು.

ನಿತ್ಯ ಸಾಯಂಕಾಲ ೫ ಘಂಟೆಗೆ ಪರೇಡ ಶುರುವಾಗುತ್ತಿತ್ತು. ತರಬೇತಿಗಾಗಿ ಒಬ್ಬ ಡ್ರಿಲ್ ಮಾಸ್ತರರನ್ನು ನಿಯಮಿಸಿದ್ದರು. ನಿತ್ಯ ಆ ಡ್ರಿಲ್ ಮಾಸ್ತರರಿಗೆ ಶ್ರೀಮತಿ ನೀಲವ್ವ

ಮುಗ್ಗನವರ ಇವರು ಊಟದ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು. ಪ್ರತಿಯೊಬ್ಬರು ಬೂಟು, ಕಾಲಚೀಲು, ಮಿಲಿಟರಿ ಸಮವಸ್ತ್ರ ಧರಿಸುತ್ತಿದ್ದರು. ಅರ್ಧಮಟ್ಟದ ಚಡ್ಡಿ, ಹಾಫ್ ಶರ್ಟ, ಕೈಯಲ್ಲಿ ಲಾಟಿ ಹೀಗೆ ವೇಷಭೂಷಣದೊಂದಿಗೆ ತರಬೇತಿ ನಡೆಯುತ್ತಿತ್ತು. ಈ ತರಬೇತಿಯಲ್ಲಿ ಗಾಂಧೀಜಿ ಮತ್ತು ಭಾರತಾಂಬೆಗೆ ಜೈಕಾರ ಹಾಕುತ್ತಿದ್ದರು. ಸುಭಾಸಚಂದ್ರ ಭೋಸರ "ಆಜಾದ ಹಿಂದ್" ಸೈನ್ಯ ಇವರಿಗೆ ಪ್ರೇರಣೆಯಾಗಿತ್ತು. ನಿತ್ಯ ಸುಭಾಸಚಂದ್ರರಿಗೆ ಜೈಕಾರ ಹಾಕುತ್ತಿದ್ದರು. ಸ್ವಂತ ಖರ್ಚಿನಿಂದ ಸಮವಸ್ತ್ರವನ್ನು ಪ್ರತಿಯೊಬ್ಬರೂ ಖರೀದಿಸುತ್ತಿದ್ದರು.

ಈ ಸೈನ್ಯದಲ್ಲಿ ಗ್ರಾಮದವರೇ ಆದ ಶ್ರೀ ರೇವಣ್ಣ ಬಡವಗೋಳ, ಶ್ರೀ ಮಲ್ಲಪ್ಪ ಝುಳಕಿ, ಶ್ರೀ ಸಿದ್ದಪ್ಪ ಈಶ್ವರಪ್ಪಗೋಳ, ಶ್ರೀ ಸಿದರಾಯಪ್ಪ ಸಿದ್ದಪ್ಪ ದೊಡ್ಡನಿಂಗಪ್ಪಗೋಳ, ಶ್ರೀ ಗುರುಪಾದಪ್ಪ ಬಡವಗೋಳ, ಶ್ರೀ ಕಂಠೆಪ್ಪ ಡುಮ್ಮನವರ, ಶ್ರೀ ಮಲ್ಲಯ್ಯ ಮಂಗಿ, ಶ್ರೀ ಸಿದರಾಯ ಅರಳಿಹಟ್ಟಿ, ಶ್ರೀ ಶ್ರೀಶೈಲ ಜಾಲವಾದಿ, ಶ್ರೀ ವೆಂಕಪ್ಪ ಕುಲಕರ್ಣಿ, ಶ್ರೀ ಸಿದರಾಯ ನಾಟಿಕಾರ, ಶ್ರೀ ಧರೆಪ್ಪ ತಳವಾರ, ಶ್ರೀ ತಮ್ಮಣ್ಣ ಜಾಲವಾದಿ, ಶ್ರೀ ಇಬ್ರಾಹಿಂ ಮುಲ್ಲಾ, ಶ್ರೀ ಬಸಪ್ಪ ಆಜೂರ, ಶ್ರೀ ಗುರುಬಸು ದಾನಪ್ಪಗೋಳ ಹೀಗೆ ಹಲವಾರು ಜನ ಯುವಕರು, ಹಿರಿಯರು ಪಾಲ್ಗೊಂಡಿದ್ದರು.

ಗ್ರಾಮದಲ್ಲಿ ನಡೆದ ಸ್ವಾತಂತ್ರ್ಯ ಶಿಬಿರಗಳು

ದೇಶದಲ್ಲಿ ಸ್ವಾತಂತ್ರ್ಯ ಸಂಗ್ರಾಮಗಳು ನಾಯಕರ ಆದೇಶದ ಮೇಲೆ ವಿವಿಧ ಸ್ವರೂಪ ಪಡೆಯುತ್ತಿದ್ದವು.. ಇಲ್ಲಿ ಮಾಧವಾನಂದರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿವಿಧ ರೀತಿಯ ಹೋರಾಟಗಳನ್ನು ಕೈಗೊಂಡರು. ಅದರಲ್ಲಿ ಗ್ರಾಮದಲ್ಲಿ ನಡೆದ ಸ್ವಾತಂತ್ರ್ಯ ಶಿಬಿರಗಳ ಬಗ್ಗೆ ಹೇಳಲೇಬೇಕು. ದೇಶಭಕ್ತ ಇಚಲಕರಂಜಿಯ ರತ್ನಪ್ಪಣ್ಣಾ ಕುಂಬಾರ ಹಾಗೂ ಗ್ರಾಮದ ಸ್ವಾತಂತ್ರ್ಯ ಯೋಧರು ಎಲ್ಲರೂ ಸೇರಿ ವಿಚಾರ ವಿನಿಮಯ ಮಾಡುತ್ತಿದ್ದರು. ಒಮ್ಮೆ ಪೂಜಾರಿ ಓಣಿಯಲ್ಲಿ; ಒಮ್ಮೆ ವಿಠ್ಠಲರಾಯನ ಗುಡಿಯ ಹತ್ತಿರ ಸಭೆ ಸೇರಿದ್ದ ಸಂಗತಿ ಗ್ರಾಮದ ಜನತೆಯ ಮನದಲ್ಲಿ ಹಾಸುಹೊಕ್ಕಾಗಿದೆ.

ಸಂಸ್ಥಾನ ವಿಲಿನೀಕರಣದಲ್ಲಿ ಕೊಟ್ಟಲಗಿ ಪಾತ್ರ

ಸಾಂಗಲಿ ಜಿಲ್ಲೆಯ ಜತ್ತ ಸಂಸ್ಥಾನ ವಿಲೀನ ಕಾರ್ಯದಲ್ಲಿ ಕೊಟ್ಟಲಗಿಯು ವಿಶಿಷ್ಟ ಪಾತ್ರ ನಿರ್ವಹಿಸಿದೆ. ಗ್ರಾಮದ ಕೊಡುಗೆ ಅಪಾರವಾಗಿದೆ. ದೇಶ ಸ್ವತಂತ್ರವಾದರೂ ಸಂಸ್ಥಾನಿಕರು ತಮ್ಮ ಸಂಸ್ಥಾನದ ಸಿಂಹಾಸನವನ್ನು ಬಿಟ್ಟುಕೊಡಲು ಸಿದ್ಧರಿರಲಿಲ್ಲ. ಉದಾ: ಜಮುಖಂಡಿ ಸಂಸ್ಥಾನ, ಉಮರಾಣಿ, ಜತ್ತ ಹೀಗೆ ಹಲವಾರು ಸಂಸ್ಥಾನಿಕರು ಗಟ್ಟಿಯಾಗಿ ನೆಲೆಯೂರಿದ್ದರು. ಜತ್ತ ಸರಕಾರವನ್ನು ಪದಚ್ಯುತಗೊಳಿಸಿ ಸ್ವಾತಂತ್ರ್ಯ ಸಾರುವದು ಇವರ ಉದ್ದೇಶವಾಗಿತ್ತು. ಹೀಗಾಗಿ ಇಚಲಕರಂಜಿಯ ದೇಶಭಕ್ತ ರತ್ನಪ್ಪಣ್ಣ ಕುಂಬಾರ, ಬಾಪು ಅರಳೆ, ರಾಯಪ್ಪ ಬೆಳಗಲಿ, ಖೋಜಾನವಾಡಿಯ ಶ್ರೀ ಚನವೀರಪ್ಪ ಬಸರಗಿ ಹಾಗೂ ಗ್ರಾಮದ ಎಲ್ಲ ಸ್ವಾತಂತ್ರ್ಯ ಸೈನಿಕರು ಉಮರಾಣಿಯಲ್ಲಿ ಸೇರಿದರು. ಉಮರಾಣಿಯಲ್ಲಿ ಧ್ವಜ

ಹಾರಿಸಿಕೊಂಡು ಅಲ್ಲಿಂದ ಎತ್ತಿನ ಗಾಡಿಗಳಲ್ಲಿ ಹಾಗೂ ಕಾಲು ನಡುಗೆಯಲ್ಲಿ ಹೀಗೆ ಅನೇಕ ಜನ ಸೇರಿಕೊಂಡು ಜತ್ತಿ ಸರಕಾರನ ಅರಮನೆಗೆ ಎಲ್ಲ ಕಡೆಯಿಂದ ಜನ ಸೇರಿಕೊಂಡು ನುಗ್ಗಿದರು. ಅರಮನೆಯ ಮೇಲೆ ಧ್ವಜಾರೋಹಣ ಮಾಡಿದರು. ಜತ್ತ ಸರಕಾರನು ಜನಸಾಗರ ಕಂಡು ದಿಗ್ಭ್ರಾಂತನಾದನು; ಮೂಕ ಪ್ರೇಕ್ಷಕನಾದನು. ಹೋರಾಟಗಾರರ ಮೇಲೆ ಯಾವ ಕ್ರಮ ಕೈಗೊಳ್ಳಲು ಜತ್ತಿ ಸರಕಾರನಿಗೆ ಸಾಧ್ಯವಾಗಲಿಲ್ಲ. ಏಕೆಂದರೆ ಜನಸ್ತೋಮದ ಮುಂದೆ ಭೀತಿಯಿಂದ ಸೋತು ಹೋದನು. ಹೀಗೆ ಸಂಸ್ಥಾನ ಏಕೀಕರಣದಲ್ಲಿ ಗ್ರಾಮದ ಕೊಡುಗೆಯು ಅಪಾರವಾಗಿದೆ.

೪.೬. ಆಧುನಿಕ ರಾಜಕೀಯ ಪರಂಪರೆ

ರಾಜಕೀಯ ಪಕ್ಷಗಳು

ಗ್ರಾಮದಲ್ಲಿ ವಿವಿಧ ರಾಜಕೀಯ ಪಕ್ಷಗಳು ಜಾರಿ ಇವೆ. ಕಾಲಕ್ರಮದಲ್ಲಿ ತಮ್ಮದೇ ಆದ ಅಸ್ತಿತ್ವವನ್ನು ಉಳಿಸಿಕೊಂಡಿರುವುದು ಕಂಡುಬರುತ್ತದೆ.

ಗ್ರಾಮದಲ್ಲಿ ಪ್ರಸ್ತುತ ೧) ಭಾರತೀಯ ಜನತಾ ಪಕ್ಷ ೨) ಜಾತ್ಯಾತೀತ ಜನತಾದಳ ೩) ಕಾಂಗ್ರೆಸ್ ಪಕ್ಷಗಳು ಅಸ್ತಿತ್ವದಲ್ಲಿವೆ. ನಿರಂತರವಾಗಿ ಒಂದೇ ಪಕ್ಷ ಅಧಿಕಾರದಲ್ಲಿರದಿದ್ದರೂ ಹಿಂದೆ ಜನತಾ ಪಕ್ಷ ಪ್ರಸ್ತುತ ಜಾತ್ಯಾತೀತ ಜನತಾದಳ, ಭಾರತೀಯ ಜನತಾ ಪಕ್ಷ ಪ್ರಬಲವಾಗಿ ಅಸ್ತಿತ್ವ ಉಳಿಸಿಕೊಂಡಿವೆ. ಶ್ರೀಮತಿ ಲೀಲಾದೇವಿ ಪ್ರಸಾದ ಅಧಿಕಾರಾವಧಿಯಲ್ಲಿ ಜನತಾ ಪಕ್ಷ ಪ್ರಬಲವಾಗಿತ್ತು. ನಂತರ ಶ್ರೀ ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿ ಅವಧಿಯಲ್ಲಿ ಜಾತ್ಯಾತೀತ ಜನತಾದಳ ಪ್ರತಿಷ್ಠೆಯನ್ನು ಕಾಯ್ದುಕೊಂಡು ಬಂದಿತ್ತು. ಪ್ರಸ್ತುತ ಗ್ರಾಮಾಧಿಕಾರದಲ್ಲಿ ಭಾರತೀಯ ಜನತಾ ಪಕ್ಷ ಅಸ್ತಿತ್ವದಲ್ಲಿರುವುದು ಕಂಡುಬರುತ್ತದೆ.

ಆಧುನಿಕತೆಯ ಅಡಿಯಲ್ಲಿ ಎಷ್ಟೇ ಬೌದ್ಧಿಕ ಬದಲಾವಣೆ ಹೊಂದಿದರೂ ಗ್ರಾಮವು ರಾಜಕೀಯ ದೃಷ್ಟಿಯಲ್ಲಿ ವೈಶಿಷ್ಟ್ಯಪೂರ್ಣವಾದ ನೀತಿಯನ್ನು ಹೊಂದಿದೆ.

ಭಾರತ ದೇಶವು ೧೯೪೭ರಲ್ಲಿ ಸ್ವಾತಂತ್ರ ಪಡೆದುಕೊಂಡಿತು. ೧೯೫೦ರಲ್ಲಿ ದೇಶವು ತನ್ನದೇ ಸಂವಿಧಾನ ಅಳವಡಿಸಿಕೊಂಡಿತ್ತು. ತಾಲೂಕಿನ ವಿಚಾರದಲ್ಲಿ ಸ್ವಾತಂತ್ರ್ಯಾನಂತರ ಅವಧಿಯಿಂದ ಇತ್ತೀಚಿನವರೆಗೂ ತಕ್ಕಮಟ್ಟಿಗೆ ಸುಧಾರಣೆಯನ್ನು ಕಾಣುತ್ತ ಬಂದಿದೆ. ೧೯೫೨ ರಲ್ಲಿ ಪ್ರಥಮ ಸಾರ್ವತ್ರಿಕ ಚುನಾವಣೆ ಜರುಗಿತು. ಅಥಣಿ ತಾಲೂಕು ಎರಡು ಮತಕ್ಷೇತ್ರಗಳನ್ನು ಹೊಂದಿದೆ. ೧) ಅಥಣಿ ಮತಕ್ಷೇತ್ರ ೨) ಕಾಗವಾಡ ಮತಕ್ಷೇತ್ರ. ಕೊಟ್ಟಲಗಿ ಗ್ರಾಮವು ಅಥಣಿ ಮತಕ್ಷೇತ್ರದಲ್ಲಿ ಹಂಚಿಕೆಯಾಗಿದೆ. ಈ ಮತಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾದ ಸದಸ್ಯರು ವಿಶೇಷವಾಗಿ ಮತಕ್ಷೇತ್ರದ ಸುಧಾರಣೆಗೆ ಕೈಗೊಂಡ ಕ್ರಮದಿಂದಾಗಿ ತಕ್ಕಮಟ್ಟಿಗೆ ಅಭಿವೃದ್ಧಿ ಕಾಣಲು ಸಾಧ್ಯವಾಗಿದ್ದರಿಂದ ಅಥಣಿ ಮತಕ್ಷೇತ್ರದ ಶಾಸಕರಲ್ಲಿ ಕೆಲವರ ಪರಿಚಯವನ್ನು ಮಾಡಿಕೊಳ್ಳುವದು ಅತೀ ಅವಶ್ಯಕವಾಗಿದೆ. ಏಕೆಂದರೆ ಗ್ರಾಮಕ್ಕೆ ಕೊಡುಗೆ ನೀಡಿದ ವ್ಯಕ್ತಿಗಳನ್ನು ಇಲ್ಲಿ ಹೆಸರಿಸುವದು ಅವಶ್ಯಕ.

ಅಥಣಿ ಮತಕ್ಷೇತ್ರದಲ್ಲಿ ಇದುವರೆಗೆ ಆಗಿಹೋದ ಶಾಸಕರುಗಳ ವಿವರ ಇಂತಿದೆ

೧. ಶ್ರೀ ಜೆ.ಬಿ. ಪವಾರ

ಅವಧಿ : ಒಂದು ಬಾರಿ ಮಾತ್ರ

ಚುನಾವಣಾ ವರ್ಷ: ೧೯೫೭ ರಿಂದ ೧೯೬೨ ರವರೆಗೆ

ಮತಕ್ಷೇತ್ರ : ಅಥಣಿ ವಿಧಾನಸಭಾ ಕ್ಷೇತ್ರ

ಸ್ವಗ್ರಾಮ : ಅಥಣಿ

ಇವರು ೧೯೫೭ರಲ್ಲಿ ಅಥಣಿ ಕ್ಷೇತ್ರದಿಂದ ಪ್ರಥಮ ಬಾರಿಗೆ ಐ.ಎನ್.ಸಿ. (ಇಂಡಿಯನ್ ನ್ಯಾಶನಲ್ ಕಾಂಗ್ರೆಸ್) ವತಿಯಿಂದ ಆಯ್ಕೆಯಾದರು. ತಾಲೂಕಿನಲ್ಲಿಯೇ ಇವರು ಹಿರಿಯ ರಾಜಕಾರಣಿಯಾಗಿದ್ದರು. ಕೊಟ್ಟಲಗಿ ಗ್ರಾಮಕ್ಕೆ ಇವರ ಅವಧಿಯಲ್ಲಿ ಯಾವುದೇ ಕಾರ್ಯಗಳು ಆಗಲಿಲ್ಲ.

೨. ಡಿ.ಬಿ. ಪವಾರ

ಸ್ವಗ್ರಾಮ : ಅಥಣಿ

ಅವಧಿ : ಮೂರು ಬಾರಿ ಆಯ್ಕೆಯಾದರು

ಚುನಾವಣೆಯ ವರ್ಷ: ೧೯೬೨ ರಿಂದ ೧೯೬೭, ೧೯೭೮ ರಿಂ ೧೯೮೩ ಮತ್ತು ೧೯೮೩ ರಿಂದ ೧೯೮೫

ಮತಕ್ಷೇತ್ರ:ಅಥಣಿ ವಿಧಾನಸಭಾ ಕ್ಷೇತ್ರ

ಇವರು ಜೆ.ಬಿ. ಪವಾರ ಅವರ ಕಿರಿಯ ಸಹೋದರರು. ೧೯೬೨ರ ಚುನಾವಣೆಯಲ್ಲಿ ಆಯ್ಕೆಯಾದರು. ಮುಂದೆ ೧೯೭೮ ಮತ್ತು ೧೯೮೩ರ ಚುನಾವಣೆಯಲ್ಲಿ ಅಥಣಿ ಮತಕ್ಷೇತ್ರದಿಂದ ಮೂರು ಬಾರಿ ಆರಿಸಿ ಬಂದರು. ಇವರದು ದಾಖಲೆಯ ಆಯ್ಕೆಯಾಗಿದೆ. ಇಲ್ಲಿಯವರೆಗೆ ಮೂರು ಬಾರಿ ಈ ಮತಕ್ಷೇತ್ರದಿಂದ ಯಾರೂ ಆಯ್ಕೆಯಾಗಿಲ್ಲ. ಇವರ ಅವಧಿಯಲ್ಲಿ ಅಥಣಿ ಮತಕ್ಷೇತ್ರದಲ್ಲಿ ಹಲವಾರು ಸುಧಾರಣಾ ಕಾರ್ಯಗಳು ಜರುಗಿದವು. ಅಥಣಿ ಸರಕಾರಿ ಆಸ್ಪತ್ರೆಯನ್ನು ಸ್ಥಾಪಿಸಿದ್ದು, ಮಂಗಸೂಳಿ ಗ್ರಾಮದಲ್ಲಿ ಸರಕಾರಿ ಪ್ರೌಢ ಶಾಲೆ, ಐಗಳಿ ಪೊಲೀಸ ಸ್ಟೇಶನ್, ಮುರಗುಂಡಿ ಹಳ್ಳಕ್ಕೆ ಬ್ಯಾರೇಜ ಕಟ್ಟಿಸಿದ್ದು ಇವರ ಕಾಲಾವಧಿಯ ಕೆಲವು ಪ್ರಮುಖ ಸಾಧನೆಗಳಾಗಿವೆ. ಆದರೆ ಇವರಿಂದಲೂ ಯಾವುದೇ ಕಾರ್ಯಗಳು ಕೊಟ್ಟಲಗಿ ಗ್ರಾಮಕ್ಕೆ ಆಗಿರುವದಿಲ್ಲ.

೩. ಶ್ರೀ ಎ.ಎ. ದೇಸಾಯಿ

ಚುನಾವಣೆಯ ವರ್ಷ : ೧೯೭೨ ರಿಂದ ೧೯೭೮

ಅವಧಿ : ಒಂದು ಬಾರಿ

ಪಕ್ಷ : ಕಾಂಗ್ರೆಸ್

ಸ್ವಗ್ರಾಮ : ಅಥಣಿ

ಮತಕ್ಷೇತ್ರ : ಅಥಣಿ ವಿಧಾನಸಭಾ ಕ್ಷೇತ್ರ

ಎ.ಎ. ದೇಸಾಯಿಯವರು ಅಥಣಿಯಲ್ಲಿಯೇ ಪ್ರಮುಖವಾಗಿ ಹೆಸರು ಮಾಡಿದವರು. ಇವರು ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾದರು. ಇವರು ತಮ್ಮ ಅವಧಿಯಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಪ್ರಮುಖವಾಗಿ ಡಿ. ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದಾಗ ಅವರಿಂದ ಹಿಪ್ಪರಗಿ ಹತ್ತಿರ ಕೃಷ್ಣಾ ನದಿಗೆ ಅಣೆಕಟ್ಟು ಅಡಿಗಲ್ಲು ಸಮಾರಂಭ ಮಾಡಿಸಿದರು. ಈ ಅಣೆಕಟ್ಟಿನ ಕಾರ್ಯ ೧೯೭೨ ರಿಂದ ಪ್ರಾರಂಭವಾಗಿ ಇವತ್ತಿಗೆ ಕಾರ್ಯಾರಂಭಗೊಂಡಿರುವದು ಸರ್ವವಿಧಿತ ವಿಷಯವಾಗಿದೆ. ಅನೇಕ ದೇವಾಲಯಗಳ ನಿರ್ಮಾಣ ಮತ್ತು ಜೀರ್ಣೋದ್ಧಾರದ ಜೊತೆಗೆ ಅನೇಕ ಸಾರ್ವಜನಿಕ ಕಾರ್ಯಗಳನ್ನು ಮಾಡಿದರು. ಈ ಕಾರ್ಯದಿಂದ ಅಥಣಿ ತಾಲೂಕಿನ ನೀರಾವರಿಗೆ ಇದೊಂದು ವರದಾನವಾಗಿದೆ.

೪. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ

ಸ್ವಗ್ರಾಮ	:	ಐಗಳಿ
ಚುನಾವಣೆಯ ವರ್ಷ	:	೧೯೮೫ ರಿಂದ ೧೯೮೯ ಮತ್ತು ೧೯೯೪ ರಿಂದ ೧೯೯೯ರ ವರೆಗೆ
ಆಯ್ಕೆಯಾದ ಅವಧಿ	:	ಎರಡು ಬಾರಿ
ಮತಕ್ಷೇತ್ರ	:	ಅಥಣಿ ವಿಧಾನಸಭಾ ಕ್ಷೇತ್ರ
ಪಕ್ಷ	:	ಜನತಾ ಪಾರ್ಟಿ ಮತ್ತೊಮ್ಮೆ ಜನತಾದಳ

ಸಚಿವ ಖಾತೆ ಇವರು ಎರಡನೆಯ ಅವಧಿಗೆ ಆಯ್ಕೆಯಾದಾಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿ ಅಧಿಕಾರವಹಿಸಿಕೊಂಡಿದ್ದರು.

ಶ್ರೀಮತಿ ಲೀಲಾದೇವಿ ಪ್ರಸಾದರವರು ಅಥಣಿ ಮತಕ್ಷೇತ್ರದಿಂದ ಒಮ್ಮೆ ಜನತಾ ಪಾರ್ಟಿಯ ವತಿಯಿಂದ ಇನ್ನೊಂದು ಬಾರಿ ಜನತಾದಳದ ವತಿಯಿಂದ ಆಯ್ಕೆಯಾದರು. ಎರಡನೇಯ ಬಾರಿ ಆಯ್ಕೆಯಾದಾಗ ಇವರಿಗೆ ಕನ್ನಡ ಮತ್ತು ಸಂಸ್ಕೃತಿ ಸಚಿವೆಯ ಸ್ಥಾನ ಸಿಕ್ಕಿತು. ಇವರು ಅಥಣಿ ಸಾರ್ವಜನಿಕ ಕ್ಷೇತ್ರದಲ್ಲಿ ಹಲವಾರು ಜನಪರ ಕಾರ್ಯಗಳನ್ನು ಮಾಡಿದ್ದಾರೆ. ಅಥಣಿಯಲ್ಲಿ ಪ್ರತ್ಯೇಕವಾದ ಪೊಲೀಸ ಇಲಾಖೆಯ ಕಟ್ಟಡ ವ್ಯವಸ್ಥೆ, ಅದು ತಹಶೀಲ್ದಾರ ಆಫಿಸಿಗೆ ಹೊಂಡಿಕೊಂಡೆ ಇತ್ತು. ಲೀಲಾದೇವಿ ಪ್ರಸಾದರ ಅವಧಿಯಲ್ಲಿ ಹೊಸ ಕಟ್ಟಡ ನಿರ್ಮಾಣ ಮಾಡಿಸಿ ಉದ್ಘಾಟಿಸಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ಅಥಣಿಯ ಪೊಲೀಸ ಸಮುದಾಯ ಭವನ ಸ್ಥಾಪಿಸಿದರು. ಕೋಹಳ್ಳಿ ಕೆರೆಯನ್ನು ಅಭಿವೃದ್ಧಿಪಡಿಸಿ ಮೀನುಗಾರಿಕೆಗೆ ಅವಕಾಶ ಮಾಡಿಕೊಟ್ಟರು. ಖಿಳೇಗಾಂವ ಬಸವಣ್ಣ ದೇವಾಲಯಕ್ಕೆ ಸರಕಾರದಿಂದ ಹಣ ಮಂಜೂರು ಮಾಡಿಸಿ ಜೀರ್ಣೋದ್ಧಾರಕ್ಕೆ ಶ್ರಮಿಸಿದರು. ಹಿಪ್ಪರಗಿ ಅಣೆಕಟ್ಟಿನ ಕಾರ್ಯಕ್ಕೆ ಹೆಚ್ಚುವರಿ ಹಣ ಮಂಜೂರು ಮಾಡಿಸಿದರು. ಮೊದಲಬಾರಿ ಆಯ್ಕೆಯಾದಾಗ ಸಮುದಾಯ ಭವನ (ಹನುಮಂತ ದೇವರ), ಖೋಜನವಾಡಿ ರಸ್ತೆಯಲ್ಲಿ ಕುಡಿಯುವ ನೀರಿನ ಭಾವಿ, ಅಥಣಿಯಿಂದ ಕೊಟ್ಟಲಗಿ ಡಾಂಬರೀಕರಣವನ್ನು ಮಾಡಿಸಿದರು.

ಎರಡನೆಯ ಬಾರಿ ಆಯ್ಕೆಯಾದಾಗ

೧. ಹೈಸ್ಕೂಲ ಕಟ್ಟಡ
೨. ಮೆಟ್ರಿಕ್ ಪೂರ್ವ ಹಾಸ್ಟೆಲ್ ಮಂಜೂರಾತಿ ಮತ್ತು ಕಟ್ಟಡ
೩. ಆಯುರ್ವೇದ ದವಾಖಾನೆ
೪. ದಾದಿಯರ ಶೂಶ್ರುಷಾಲಯ ಮಂಜೂರು ಮತ್ತು ಕಟ್ಟಡ ನಿರ್ಮಾಣ
೫. ಸಂಪೂರ್ಣ ಗ್ರಾಮಕ್ಕೆ ಎರಡು ಬಾರಿ ಪೈಪ ಲೈನ್ ಮುಖಾಂತರ ನೀರಿನ ವ್ಯವಸ್ಥೆ, ಒಂದು ಬಾವಿ, ೨ ಓವರ ಹೆಡ್ ಟ್ಯಾಂಕರ ಹಾಗೂ ಗ್ರಾಮಕ್ಕೆ ಸಂಪೂರ್ಣ ಕುಡಿಯುವ ನೀರಿನ ನಳದ ವ್ಯವಸ್ಥೆ
೬. ಮೂರು ಅಂಗನವಾಡಿಗಳು
೭. ಹೈಸ್ಕೂಲ ಹತ್ತಿರ, ಗಣಿಯವರ ತೋಟದ ಹತ್ತಿರ, ಕನ್ನಡ ಶಾಳೆ ಹತ್ತಿರ, ಕೊರವರ ಓಣಿ ಹತ್ತಿರ, ಹರಿಜನ ಕೇರಿ, ಮಾಧವಾನಂದ ಸರ್ಕಲ ಹತ್ತಿರ, ಕವಟಗಿ ಸಾಧು ಮುತ್ಯಾನ ಮಠದ ಹತ್ತಿರ, ಹಿರೇಮಠದ ಹತ್ತಿರ, ಮಾಳಿ ಓಣಿಯಲ್ಲಿ, ಕನಮಡಿ ರಸ್ತೆ ಖಡಕಿ ತೋಟ, ಹೂ ತೋಟದ ಭಾವಿಯಲ್ಲಿ ಹೀಗೆ ತಲಾ ಒಂದೊಂದರಂತೆ ಹನ್ನೆರಡು ಬೋರವೆಲ್ ಕೊರೆಸಿದ್ದಾರೆ.

೫. ಶ್ರೀ ಆಯ್.ಎಮ್. ಶೇಡಶಾಳ

ಸ್ವಗ್ರಾಮ	:	ಹಲ್ಯಾಳ
ಚುನಾವಣೆಯ ವರ್ಷ	:	೧೯೮೯ ರಿಂದ ೧೯೯೪
ಆಯ್ಕೆಯಾದ ಅವಧಿ	:	ಒಂದು ಬಾರಿ
ಮತಕ್ಷೇತ್ರ	:	ಅಥಣಿ ವಿಧಾನಸಭಾ ಕ್ಷೇತ್ರ
ಪಕ್ಷ	:	ಕಾಂಗ್ರೆಸ್

ಇವರ ಅವಧಿಯಲ್ಲಿ ಖೋಜನವಾಡಿ–ಕೊಟ್ಟಲಗಿ ಕಚ್ಚಾ ರಸ್ತೆ ನಿರ್ಮಾಣವಾಯಿತು.

೬. ಶಹಾಜಹಾನ ಇಸ್ಮಾಯಿಲ್ ಡೋಂಗರಗಾಂವ

ಆಯ್ಕೆಯಾದ ವರ್ಷ	:	೧೯೯೯
ಅವಧಿ	:	ಒಂದು ಬಾರಿ
ಮತಕ್ಷೇತ್ರ	:	ಅಥಣಿ ವಿಧಾನಸಭಾ ಕ್ಷೇತ್ರ
ಪಕ್ಷ	:	ಕಾಂಗ್ರೆಸ್
ಸ್ವಗ್ರಾಮ	:	ಐಗಳಿ

ಖೋಜನವಾಡಿ ರಸ್ತೆ ರಿಪೇರಿ, ಹಟಗಾರ ತೋಟದ ಹತ್ತಿರ ಹಾಗೂ ಕುಲಕರ್ಣಿ ಜಮೀನದಲ್ಲಿ ತಲಾ ಒಂದೊಂದು ಬಾಂದಾರ ನಿರ್ಮಾಣ, ಕಕಮರಿ ರಸ್ತೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಎರಡು ಬೋರವೆಲ್, ಮುಚ್ಚಂಡಿ ಬೌಂಡ್ರಿ ಹತ್ತಿರ ಒಂದು ನೀರಿನ ಕೊಳವೆ ಬಾವಿ.

೭. ಲಕ್ಷ್ಮಣ ಸಂಗಪ್ಪ ಸವದಿ

ಆಯ್ಕೆಯಾದ ವರ್ಷ : ೨೦೦೮

ಮತಕ್ಷೇತ್ರ : ಅಥಣಿ ವಿಧಾನಸಭಾ ಕ್ಷೇತ್ರ

ಪಕ್ಷ : ಭಾರತೀಯ ಜನತಾ ಪಾರ್ಟಿ

ಸ್ವ ಗ್ರಾಮ : ನಾಗನೂರು ಪಿ.ಕೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿಯವರು ಅಥಣಿ ಮತಕ್ಷೇತ್ರದ ಶಾಸಕರಾಗಿ ತಾಲೂಕಿನಲ್ಲಿ ಅನೇಕ ಕಾರ್ಯಗಳನ್ನು ಮಾಡಿ ಜನನಾಯಕರಾಗಿರುವುದು ಕಂಡುಬರುತ್ತದೆ. ಗ್ರಾಮದ ಮಟ್ಟಿಗೆ ಹೇಳುವುದಾದರೆ ಕೊಟ್ಟಲಗಿಯಲ್ಲಿ ಅನೇಕ ಕೆಲಸ ಕಾರ್ಯಗಳಾಗಿರುವುದು ಕಂಡುಬರುತ್ತದೆ. ಬಹುತೇಕ ತಾಲೂಕಿನಲ್ಲಿ ಇವರ ಅವಧಿಯಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿರುವುದು ಕಂಡುಬರುತ್ತದೆ. ತಾಲೂಕಿನಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳು ನಡೆದಿದ್ದರೂ ಗ್ರಾಮಕ್ಕಂತೂ ವಿಶೇಷವಾಗಿ ಅವರ ಕೊಡುಗೆ ಅಪಾರವೆಂದೇ ಹೇಳಬೇಕು.

ಮೊಟ್ಟ ಮೊದಲಿಗೆ ಹೇಳಬೇಕಾದ ವಿಷಯವೆಂದರೆ ಗ್ರಾಮವನ್ನು ಸುವರ್ಣ ಗ್ರಾಮ ಯೋಜನೆಯಲ್ಲಿ ಕರ್ನಾಟಕ ಸರಕಾರದಿಂದ ಆಯ್ಕೆ ಮಾಡಿ ಗ್ರಾಮವನ್ನು ನಿಜಕ್ಕೂ ಸುವರ್ಣಮಯ ಸನ್ನಿವೇಶದಲ್ಲಿ ತಂದು ನಿಲ್ಲಿಸಿದರು. ಅವರು ಕೇವಲ ಶಾಸಕರಾಗಿರದೇ ಶ್ರೀ ಬಿ.ಎಸ್. ಯಡಿಯೂರಪ್ಪ ಹಾಗೂ ಶ್ರೀ ಸದಾನಂದಗೌಡ ಅವರ ಕಾಲದಲ್ಲಿ ಸಹಕಾರ ಸಚಿವರೂ ಆಗಿ ಅಧಿಕಾರದಲ್ಲಿದ್ದವರು. ಹೀಗಾಗಿ ಅತ್ಯಂತ ಪ್ರಭಾವಿ ವ್ಯಕ್ತಿಗಳು ಹೌದು. ಕೊಟ್ಟಲಗಿ ಗ್ರಾಮಕ್ಕಷ್ಟೆ ಅಲ್ಲದೇ ಅಥಣಿ ತಾಲೂಕಿಗೂ ಅನೇಕ ಅನುಕೂಲತೆಗಳು ಆಗಿರುವುದು ಕಂಡುಬರುತ್ತದೆ. ಗ್ರಾಮದಲ್ಲಿ ಸುವರ್ಣ ಗ್ರಾಮ ಯೋಜನೆಯಲ್ಲಿ.

೧. ಹನುಮಾನ ಸಮುದಾಯ ಭವನ

೨. ಭರಮದೇವರ ದೇವಾಲಯ

೩. ವಿಠ್ಠರಾಯ ದೇವಸ್ಥಾನ

೪. ದುರ್ಗಾದೇವಿ ದೇವಸ್ಥಾನ

೫. ಸಿದ್ದಾರೂಢರ ಮಠ

೬. ವಾಡೆದ ಲಕ್ಷ್ಮೀ ಹೀಗೆ ವಿವಿಧ ದೇವಾಲಯಗಳು ಅಭಿವೃದ್ಧಿಯನ್ನು ಕಂಡಿವೆ. ಅಷ್ಟೆ ಅಲ್ಲದೆ ಗ್ರಾಮದ ಎಲ್ಲ ಓಣಿ ಓಣಿಗೂ ಸಿಮೆಂಟ ರೋಡುಗಳು ಕಂಗೊಳಿಸುತ್ತಿವೆ. ಗ್ರಾಮದ ಕುಡಿಯುವ ನೀರು ಫ್ಲೋರಾಯಿಡಯುಕ್ತವಾಗಿ ಸೇವಿಸಲು ಯೋಗ್ಯವಿಲ್ಲವೆಂದು ಡಾಕ್ಟರ ದೃಢೀಕರಿಸಿದ್ದರು. ಅವೇ ನೀರನ್ನು ಕುಡಿದು ಇದುವರೆಗೆ ಸಂದಿನೋವು, ಕೈ, ಕಾಲು, ಸೊಂಟ, ಹಲ್ಲು ನೋವುಗಳಿಂದ ಬಳಲುತ್ತಿದ್ದರು. ಸವದಿಯವರು ಶಾಸಕರಾಗಿ ಮಂತ್ರಿಯಾದ ಮೇಲೆ ಗ್ರಾಮಕ್ಕೆ ಸ್ವ ಜಲಧಾರ ಯೋಜನೆಯ ಮೂಲಕ ಕೃಷ್ಣಾ ನದಿಯಿಂದ ತಾಲೂಕಿನ ಜುಂಜರವಾಡ ಗ್ರಾಮದಿಂದ ಪೈಪಲೈನ ಮುಖಾಂತರ ನೀರಿನ ಸೌಲಭ್ಯ ಒದಗಿಸಲಾಗಿದೆ.

೭. ಹಳ್ಳದ ಎಲ್ಲಮ್ಮ ದೇವಸ್ಥಾನ ಹತ್ತಿರ ಒಂದು ಸುಮಾರು ಹತ್ತು ಏಕರೆ ವಿಸ್ತೀರ್ಣವಾದ ಕೆರೆಯನ್ನು ನಿರ್ಮಿಸಿದ್ದಾರೆ. ಇದುವರೆಗೆ ಗ್ರಾಮಕ್ಕೆ ಒಂದೂ ವಿಶಾಲವಾದ ಕೆರೆ ಇರಲಿಲ್ಲ.

೮. ಕೊಟ್ಟಲಗಿಯಿಂದ ನೆರೆಯ ಸೀಮೆ ಮಹಾರಾಷ್ಟ್ರದ ರಾವಳಗುಂಡವಾಡಿ ಸೀಮೆಯವರೆಗೆ ಡಾಂಬರು ರಸ್ತೆ ಮಾಡಿಸಲಾಗಿದೆ.

೯. ಕೊಟ್ಟಲಗಿ ಗ್ರಾಮದಿಂದ ಡೋಣಿ ನದಿಯವರೆಗೆ ಕಚ್ಚಾ ರಸ್ತೆಯನ್ನು ನಿರ್ಮಿಸಲಾಗಿದೆ.

೧೦. ಭರಮದೇವರ ದೇವಸ್ಥಾನಕ್ಕೆ ಹಾಗೂ ಅಂಬೇಡ್ಕರ ಭವನಕ್ಕೆ ತಲಾ ಎರಡು ಲಕ್ಷ ಶಾಸಕರ ನಿಧಿಯಲ್ಲಿ ಹಣ ಮಂಜೂರಿಸಿ ಪೂರ್ಣಗೊಳಿಸಿದ್ದಾರೆ.

೧೧. ಗ್ರಾಮದ ಸರಕಾರಿ ಪ್ರೌಢಶಾಲೆಗೆ ನಬಾರ್ಡ ಯೋಜನೆಯಲ್ಲಿ ೨ ಕೋಣೆಗಳನ್ನು ಮಂಜೂರು ಮಾಡಿಸಿದರು.

೧೨. ಕರೆಪ್ಪಗೋಳ ವಸ್ತಿ, ಮಠಪತಿ ವಸ್ತಿ, ಖೋಜನವಾಡಿ ರಸ್ತೆ ಹೀಗೆ ಇನ್ನೂ ಕೊಳವೆ ಬಾವಿಗಳನ್ನು ಕೊರೆಸಲಾಗಿದೆ.

ಇನ್ನು ತಾಲೂಕಿನ ವಿಷಯದಲ್ಲಿ ಹೇಳುವುದಾದರೆ ನೆನೆಗುದಿಗೆ ಬಿದ್ದ ಕರಿಮಸೂತಿ ನೀರಾವರಿ ಯೋಜನೆಯನ್ನು ಪೂರ್ಣಗೊಳಿಸಿ ತಾಲೂಕಿನ ಬರಡು ಭೂಮಿಗೆ ನೀರು ಹರಿಸಿದ್ದಾರೆ. ಈ ನೀರು ಭೌಗೋಳಿಕ ವ್ಯತ್ಯಾಸದಿಂದ ಕೊಟ್ಟಲಗಿ ಗ್ರಾಮಕ್ಕೆ ಬರದೇ ಇರುವುದು ವಿಷಾದನೀಯ. ಅಲ್ಲದೇ ತಾಲೂಕಿನಲ್ಲಿ ಕೊಕಟನೂರ, ಅಥಣಿ, ಕೊಟ್ಟಲಗಿ ಹೋಬಳಿಯಾದ ತೆಲಸಂಗ ಗ್ರಾಮಗಳಿಗೆ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳ ಮಂಜೂರು ಮಾಡಲಾಗಿದೆ. ಅಥಣಿಯಲ್ಲಿ ಮಹಿಳಾ ಪದವಿ ಪೂರ್ವ ಕಾಲೇಜು ಮತ್ತು ಸರಕಾರಿ ಪಾಲಿಟೆಕ್ನಿಕ್ ಕಾಲೇಜನ್ನು ಮಂಜೂರು ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಶೈಕ್ಷಣಿಕ ವಿಚಾರದಲ್ಲಿ ಕ್ರಾಂತಿಯೇ ಆಗಿದೆ. ಹೇಗೆಂದರೆ ತಾಲೂಕಿನಲ್ಲಿ ಕೊಕಟನೂರ ಗ್ರಾಮದಲ್ಲಿ ಶ್ರೀ ಭಾವುರಾವ ದೇಶಪಾಂಡೆಯವರ ಹೆಸರಿನಲ್ಲಿ ಪಶುವೈದ್ಯಕೀಯ ಮಹಾವಿದ್ಯಾಲಯ ಮಂಜೂರಾಗಿದ್ದು ಐತಿಹಾಸಿಕ ವಿಷಯವೇ ಹೌದು. ತಾಲೂಕಿನ ಅನೇಕ ರಸ್ತೆಗಳು ಪುನರುಜ್ಜೀವನಗೊಂಡು ಸುಸಜ್ಜಿತವಾಗಿವೆಯೆಂದರೆ ತಪ್ಪಾಗಲಾರದು. ತಾಲೂಕಿನ ಅನೇಕ ಗ್ರಾಮಗಳಿಗೆ ಕೃಷ್ಣಾ ನದಿಯಿಂದ ಕುಡಿಯುವ ನೀರು ಪೂರೈಸುವ ಯೋಜನೆಗಳಿಗೆ ಹಣ ಮಂಜೂರು ಮಾಡಿಸಿದ್ದಾರೆ. ತಾಲೂಕಿನ ಅನೇಕ ಗ್ರಾಮಗಳಿಂದ ತಮ್ಮ ಸಮಸ್ಯೆಗಳನ್ನು ತೆಗೆದುಕೊಂಡು ಬಂದ ಯಾವೊಬ್ಬ ವ್ಯಕ್ತಿಯನ್ನು ನಿರಾಶೆ ಮಾಡದೇ ಕೈಲಾದ ಸಹಾಯ ಮಾಡುವ ಸ್ವಭಾವ ಶ್ರೀ ಸವದಿ ಇವರದಾಗಿದೆ.

೪.೭. ಗ್ರಾಮ ಪಂಚಾಯಿತಿ

ಗ್ರಾಮವೊಂದರ ಅಧ್ಯಯನ ಕೈಗೊಂಡಾಗ ಆಡಳಿತದ ಕೇಂದ್ರಸ್ಥಾನ ಪಂಚಾಯಿತಿ. ಹೀಗಾಗಿ ಪಂಚಾಯಿತಿ ಮಹತ್ವ ಪಡೆದುಕೊಳ್ಳುತ್ತದೆ. ಏಕೆಂದರೆ ಗ್ರಾಮದ ರಾಜಕೀಯ

ಕೇಂದ್ರವಾಗಿ ಸರಕಾರದ ಪಾಲುದಾರ ಪ್ರತಿನಿಧಿಯಾಗಿ ಸಾರ್ವಜನಿಕ ಸಮಸ್ಯಾ ಪರಿಹಾರದ ನ್ಯಾಯ ಕೇಂದ್ರವಾಗಿ ಪಂಚಾಯಿತಿಗೆ ವಿಶೇಷ ಸ್ಥಾನವಿದೆ.

ಕೊಟ್ಟಲಗಿ ಗ್ರಾಮದಲ್ಲಿ ಕ್ರಿ.ಶ. ೧೯೫೮ರಲ್ಲಿ ಪಂಚಾಯಿತಿ ಸ್ಥಾಪನೆಯಾಗಿದೆ. ಗ್ರಾಮದ ಪ್ರಥಮ ಪ್ರಜೆಯಾಗಿ ಶ್ರೀ ಕೃಷ್ಣಾಜೀ ಭಾ. ಕುಲಕರ್ಣಿ ಆಯ್ಕೆಯಾದರು. ಅವರ ನಂತರ ಗ್ರಾಮ ಪಂಚಾಯಿತಿಗೆ ಅಧ್ಯಕ್ಷರಾಗಿ ಗ್ರಾಮದ ಹಿರಿಯ ವ್ಯಕ್ತಿಗಳಾದ ಶ್ರೀ ರಾವಸಾಬಗೌಡ ಪರಸಗೌಡ ಪಾಟೀಲ ಎರಡನೇಯ ಬಾರಿ ಆಯ್ಕೆಯಾಗಿ ನಿರಂತರವಾಗಿ ಐದು ಅವಧಿಗೆ ಅವಿರೋಧ ಆಯ್ಕೆಯಾಗಿದ್ದು ಹೆಮ್ಮೆಯ ಸಂಗತಿಯೇ ಹೌದು. ೧೯೮೭-೮೮ರಲ್ಲಿ ಮಂಡಳ ಪಂಚಾಯಿತಿ ವ್ಯವಸ್ಥೆ ಜಾರಿಗೆ ಬಂದಿತು. ಅಥಣಿ ತಾಲೂಕಿನ ಕೊಟ್ಟಲಗಿ ಗ್ರಾಮದ ನೆರೆಯ ಕಕಮರಿ ಗ್ರಾಮದ ಮಂಡಳದಲ್ಲಿ ಕೊಟ್ಟಲಗಿ ಸೇರ್ಪಡೆ ಮಾಡಲಾಗಿತ್ತು. ಕಕಮರಿ ಮಂಡಳ ಪಂಚಾಯಿತಿಯಲ್ಲಿ ೧) ಕೋಹಳ್ಳಿ ೨) ಕಕಮರಿ ೩) ರಾಮತೀರ್ಥ ೪) ಕೊಟ್ಟಲಗಿ ನಾಲ್ಕು ಗ್ರಾಮಗಳು ಸಮ್ಮಿಲಿತವಾಗಿದ್ದವು. ಆ ಸಂದರ್ಭದಲ್ಲಿ ಗ್ರಾಮದ ಈ ಕೆಳಕಂಡ ಸದಸ್ಯರು ಕಕಮರಿ ಮಂಡಳ ಪಂಚಾಯಿತಿಗೆ ಆಯ್ಕೆಯಾದರು.

ಅ.ನಂ.	ಹೆಸರು	ಹುದ್ದೆ
೧.	ಶ್ರೀ ರಾವಸಾಬಗೌಡ ಪರಸಗೌಡ ಪಾಟೀಲ	ಸದಸ್ಯರು
೨.	ಶ್ರೀ ಗಿರಿಮಲ್ಲ ಸಿದರಾಯ ಬಡವಗೋಳ	ಸದಸ್ಯರು
೩.	ಶ್ರೀ ಇಮಾಮಸಾಬ ಅಬ್ಬಾಸಾಬ ಸನದಿ	ಸದಸ್ಯರು
೪.	ಶ್ರೀ ಸಿದ್ದಣ್ಣ ಗುರಬಸು ಲೊಗಾಂವಿ	ಸದಸ್ಯರು
೫.	ಶ್ರೀ ಸಿದರಾಯ ರುದ್ರಪ್ಪ ಖಡಕಿ	ಸದಸ್ಯರು
೬.	ಶ್ರೀ ಶ್ರೀಕಾಂತ ತಿಪ್ಪಣ್ಣ ಕಾಂಬಳೆ	ಸದಸ್ಯರು
೭.	ಶ್ರೀ ಬೌರವ್ವ ಶ್ರೀಶೈಲ ಆಲಬಾಳ	ಸದಸ್ಯರು
೮.	ಶ್ರೀ ಮಹಾದೇವಿ ಕಾಡಪ್ಪ ಹಂಜಿ	ಸದಸ್ಯರು

ಮುಂದೆ ೧೯೯೩ ರಿಂದ ಗ್ರಾಮಪಂಚಾಯಿತಿಗೆ ಒಂದು ಅವಧಿಗೆ ಅವಿರೋಧ ಆಯ್ಕೆ ನಡೆಯಿತು. ಆಯ್ಕೆಯಾದ ಪದಾದಿಕಾರಿಗಳು ಈ ರೀತಿಯಾಗಿದ್ದಾರೆ.

ಅ.ನಂ.	ಸದಸ್ಯರ ಹೆಸರು	ಹುದ್ದೆ	ಅವಧಿ
೧.	ಶ್ರೀ ವಿಠ್ಠಲ ಸಿ. ಬಡವಗೋಳ	ಅಧ್ಯಕ್ಷರು	೧೯೯೪-೧೯೯೯
೨.	ಶ್ರೀಮತಿ ಬಸವ್ವ ಅ. ಬಸನಕ್ಕಿ	ಉಪಾಧ್ಯಕ್ಷರು	೧೯೯೪-೧೯೯೯
೩.	ಶ್ರೀ ಗುರಪ್ಪ ಸಿ. ಸತ್ತಿ	ಸದಸ್ಯರು	೧೯೯೪-೧೯೯೯
೪.	ಶ್ರೀ ಸಿದಗೊಂಡ ಮ. ಬಿರಾದಾರ	ಸದಸ್ಯರು	೧೯೯೪-೧೯೯೯
೫.	ಶ್ರೀ ಪೀರಗೊಂಡ ಬ. ಬ್ಯಾಳಿ	ಸದಸ್ಯರು	೧೯೯೪-೧೯೯೯
೬.	ಶ್ರೀ ಶಾಮು ಸಿ. ಕಟ್ಟಿಮನಿ	ಸದಸ್ಯರು	೧೯೯೪-೧೯೯೯

೭.	ಶ್ರೀಮತಿ ಮಹಾದೇವಿ ಶ್ರೀ. ಡುಮ್ಮನವರ	ಸದಸ್ಯರು	೧೯೯೪-೧೯೯೯
೮.	ಶ್ರೀಮತಿ ಮಾಲಾ ರಾ. ಕಾಂಬಳೆ	ಸದಸ್ಯರು	೧೯೯೪-೧೯೯೯
೯.	ಶ್ರೀಮತಿ ಸೋನವ್ವ ಶಿ. ನಾಟಿಕರ	ಸದಸ್ಯರು	೧೯೯೪-೧೯೯೯
		ಒಟ್ಟು ಸದಸ್ಯರ ಸಂಖ್ಯೆ : ೧೦	

೧೯೯೯ ರಿಂದ ೨೦೦೦ ರವರೆಗೆ ಸರಕಾರ ಇದೇ ಸದಸ್ಯರನ್ನು ನಾಮನಿರ್ದೇಶನ ಮಾಡಿತ್ತು.

ಮುಂದೆ ೧೯೯೯-೨೦೦೧ ಅವಧಿಯಲ್ಲಿ ಚುನಾವಣೆಯಾಗಿ ಆಯ್ಕೆಯಾದ ಸದಸ್ಯ ಪದಾಧಿಕಾರಿಗಳು ಈ ರೀತಿಯಾಗಿದ್ದಾರೆ.

ಅ.ನಂ.	ಸದಸ್ಯರ ಹೆಸರು	ಹುದ್ದೆ	ಅವಧಿ
೧.	ಶ್ರೀ ಅಣ್ಣಾಸಾಬ ರಾ. ಪಾಟೀಲ	ಅಧ್ಯಕ್ಷರು	೩೦ ತಿಂಗಳು
೨.	ಶ್ರೀಮತಿ ಚಂದ್ರವ್ವ ಶಿ. ಬನಹಟ್ಟಿ	ಉಪಾಧ್ಯಕ್ಷರು	೩೦ ತಿಂಗಳು
೩.	ಶ್ರೀ ಗುರಪ್ಪ ಶಿ. ಸತ್ತಿ	ಸದಸ್ಯರು	೧೯೯೯-೨೦೦೧
೪.	ಶ್ರೀ ವಿಠ್ಠಲ ಶಿ. ಬಡವಗೋಳ	ಸದಸ್ಯರು	೧೯೯೯-೨೦೦೧
೫.	ಶ್ರೀ ಚಿದಾನಂದ ರೇ. ಮಾಳಿ	ಸದಸ್ಯರು	೧೯೯೯-೨೦೦೧
೬.	ಶ್ರೀ ಸದಾಶಿವ ನಾ. ಗೇರಡಿ	ಸದಸ್ಯರು	೧೯೯೯-೨೦೦೧
೭.	ಶ್ರೀಮತಿ ಶೀಲಾ ಲ. ಜೋಗಳೇಕರ	ಸದಸ್ಯರು	೧೯೯೯-೨೦೦೧
೮.	ಶ್ರೀಮತಿ ತಂಗೆವ್ವ ಶಿ. ಹರಾಳೆ	ಸದಸ್ಯರು	೧೯೯೯-೨೦೦೧
೯.	ಶ್ರೀಮತಿಮಾಲತಿಬಾಯಿ ಮಾ. ಕುಲಕರ್ಣಿ	ಸದಸ್ಯರು	೧೯೯೯-೨೦೦೧
೧೦.	ಶ್ರೀಮತಿ ಕಮಲಾ ಸಿ. ಬಡಿಗೇರ	ಸದಸ್ಯರು	೧೯೯೯-೨೦೦೧
		ಒಟ್ಟು ಸದಸ್ಯರ ಸಂಖ್ಯೆ : ೧೦	

೩೦ ತಿಂಗಳು ಶ್ರೀ ಅಣ್ಣಾಸಾಬ ರಾ. ಪಾಟೀಲ ಅಧ್ಯಕ್ಷರಾಗಿ, ಶ್ರೀಮತಿ ಚಂದ್ರವ್ವ ಶಿ. ಬನಹಟ್ಟಿ ಇವರು ಉಪಾಧ್ಯಕ್ಷರಾಗಿ ಆಯ್ಕೆಯಾದರು. ನಂತರ ೩೦ ತಿಂಗಳು ಅಧ್ಯಕ್ಷರಾಗಿ ೨೦೦೧ ರಿಂದ ೨೦೦೪ರ ವರೆಗೆ ಶ್ರೀಮತಿ ಚಂದ್ರವ್ವ ಶಿ. ಬನಹಟ್ಟಿ ಅಧ್ಯಕ್ಷರಾಗಿ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಚಿದಾನಂದ ಮಾಳಿ ಅವರು ಕೆಲಸ ನಿರ್ವಹಿಸಿದ್ದು ಕಂಡುಬರುತ್ತದೆ.

೨೦೦೪ ರಿಂದ ೨೦೦೯ರವರೆಗೆ ಅಧಿಕಾರ ನಿರ್ವಹಿಸಿದ ಗ್ರಾಮಪಂಚಾಯಿತಿ ಸದಸ್ಯರ ವಿವರಗಳು ಈ ರೀತಿಯಾಗಿವೆ.

ಅ.ನಂ.	ಸದಸ್ಯರ ಹೆಸರು	ಹುದ್ದೆ	ಅವಧಿ
೧.	ಶ್ರೀ ಶಿವಾನಂದ ನಾಗಪ್ಪ ಮಾಳಿ	ಅಧ್ಯಕ್ಷರು	೨೦೦೪-೨೦೦೭
೨.	ಶ್ರೀಮತಿ ಕಮಲಾಬಾಯಿ ಭೀ. ಕುಲಕರ್ಣಿ	ಉಪಾಧ್ಯಕ್ಷರು	೨೦೦೪-೨೦೦೭
೩.	ಶ್ರೀ ಅಣ್ಣಾಸಾಬ ರಾ. ಪಾಟೀಲ	ಸದಸ್ಯರು	೨೦೦೪-೨೦೦೯

೪.	ಶ್ರೀ ಶಿವಾನಂದ ಮೋ. ಪಾಟೀಲ	ಸದಸ್ಯರು	೨೦೦೪-೨೦೦೯
೫.	ಶ್ರೀ ಲಾಖಿತ ಅ. ಮುಲ್ಲಾ	ಸದಸ್ಯರು	೨೦೦೪-೨೦೦೯
೬.	ಶ್ರೀ ಮಾಯಪ್ಪ ಪಿ, ಕಟ್ಟಿಮನಿ	ಸದಸ್ಯರು	೨೦೦೪-೨೦೦೯
೭.	ಶ್ರೀ ಸುರೇಶ ಸಾ. ಶಿವಶರಣ	ಸದಸ್ಯರು	೨೦೦೪-೨೦೦೯
೮.	ಶ್ರೀ ಸದಾಶಿವ ಗು. ಬಡವಗೋಳ	ಸದಸ್ಯರು	೨೦೦೪-೨೦೦೯
೯.	ಶ್ರೀ ರಾಜು ಸಿದ್ದಪ್ಪ ಮಾಳಿ	ಸದಸ್ಯರು	೨೦೦೪-೨೦೦೯
೧೦.	ಶ್ರೀಮತಿ ಚನ್ನವ್ವ ಭೀ. ಬಾಗಪ್ಪಗೋಳ	ಸದಸ್ಯರು	೨೦೦೪-೨೦೦೯
೧೧.	ಶ್ರೀ ನಾಗಪ್ಪ ಶಿ. ಮಲಮೆ	ಸದಸ್ಯರು	೨೦೦೪-೨೦೦೯
೧೨.	ಶ್ರೀಮತಿ ದೊಡ್ಡವ್ವ ರಾಜಶೇಖರ ನಾವ್ಹಿ	ಸದಸ್ಯರು	೨೦೦೪-೨೦೦೯
೧೩.	ಶ್ರೀಮತಿ ತಿಪ್ಪವ್ವ ಧರೆಪ್ಪ ತಳವಾರ	ಸದಸ್ಯರು	೨೦೦೪-೨೦೦೯
೧೪.	ಶ್ರೀಮತಿ ಐರಾವತಿ ಸಾ. ಬನ್ನೂರ	ಸದಸ್ಯರು	೨೦೦೪-೨೦೦೯
೧೫.	ಶ್ರೀಮತಿ ಮಹಾದೇವಿ ಕ. ಬನ್ನೂರ	ಸದಸ್ಯರು	೨೦೦೪-೨೦೦೯

ಸರಕಾರ ಈ ಅವಧಿಯಲ್ಲಿ ಐದು ಜನ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿದ್ದು ಕಂಡುಬರುತ್ತದೆ. ೨೦೦೭ ರಿಂದ ೨೦೦೯ ರವರೆಗೆ ಶ್ರೀಮತಿ ಚನ್ನವ್ವ ಭಾಗಪ್ಪಗೋಳ ಇವರು ಅಧ್ಯಕ್ಷರಾಗಿ, ಶ್ರೀ ಶಿವಾನಂದ ಮೋ. ಪಾಟೀಲ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಪ್ರಸ್ತುತ ೨೦೦೯ ರಿಂದ ಆಯ್ಕೆಯಾದ ಪದಾಧಿಕಾರಿಗಳು.

ಅ.ನಂ.	ಸದಸ್ಯರ ಹೆಸರು	ಹುದ್ದೆ	ಅವಧಿ
೧.	ಶ್ರೀಮತಿ ಸುಖದೇವಿ ಶ್ರೀ. ಸಿಂಧೂರ	ಅಧ್ಯಕ್ಷರು	೨೦೦೯ ರಿಂದ
೨.	ಶ್ರೀ ಧರೆಪ್ಪ ಸಿದ್ರಾಮ ಕಾಂಬಳೆ	ಉಪಾಧ್ಯಕ್ಷರು	೨೦೦೯ ರಿಂದ
೩.	ಶ್ರೀ ಸಿದ್ದಪ್ಪ ಸ. ಗಾಣಿಗೇರ	ಸದಸ್ಯರು	೨೦೦೯ ರಿಂದ
೪.	ಶ್ರೀ ಮಹಾದೇವ ಗಿ. ಬಡವಗೋಳ	ಸದಸ್ಯರು	೨೦೦೯ ರಿಂದ
೫.	ಶ್ರೀ ಸಿದರಾಯ ಈ. ಅವಟಿ	ಸದಸ್ಯರು	೨೦೦೯ ರಿಂದ
೬.	ಶ್ರೀ ಬಸಗೊಂಡ ಭೀ. ಅನಂತಪೂರ	ಸದಸ್ಯರು	೨೦೦೯ ರಿಂದ
೭.	ಶ್ರೀ ಅನೀಲ ಸಿ. ಸಂಖ	ಸದಸ್ಯರು	೨೦೦೯ ರಿಂದ
೮.	ಶ್ರೀ ಸುರೇಶ ಸೊ. ಹರಾಳೆ	ಸದಸ್ಯರು	೨೦೦೯ ರಿಂದ
೯.	ಶ್ರೀ ಸಿದ್ದಣ್ಣ ಮ. ತೇಲಿ	ಸದಸ್ಯರು	೨೦೦೯ ರಿಂದ
೧೦.	ಶ್ರೀಮತಿ ನಾಗವ್ವ ಶಿ. ಮಲಮೆ	ಸದಸ್ಯರು	೨೦೦೯ ರಿಂದ
೧೧.	ಶ್ರೀಮತಿ ಮಾಬೂಬಿ ಇ. ಸನದಿ	ಸದಸ್ಯರು	೨೦೦೯ ರಿಂದ
೧೨.	ಶ್ರೀಮತಿ ಸುಜಾತಾ ಸು. ಖಡಕಿ	ಸದಸ್ಯರು	೨೦೦೯ ರಿಂದ
೧೩.	ಶ್ರೀಮತಿ ಶೇಖವ್ವ ಶಿವಪ್ಪ ಭಜಂತ್ರಿ	ಸದಸ್ಯರು	೨೦೦೯ ರಿಂದ

೧೪.	ಶ್ರೀಮತಿ ರತ್ನವ್ವ ಗುರುಬಾಳ ಮಾಲಗಾರ	ಸದಸ್ಯರು	೨೦೧೯ ರಿಂದ
೧೫.	ಶ್ರೀಮತಿ ವಿಜಯಲಕ್ಷ್ಮಿ ಹ. ರಜಪೂರ	ಸದಸ್ಯರು	೨೦೧೯ ರಿಂದ
		ಒಟ್ಟು ಸದಸ್ಯರ ಸಂಖ್ಯೆ : ೧೫	

ಶ್ರೀಮತಿ ಸುಖದೇವಿ ಸಿಂಧೂರ ಕೇವಲ ೧೦ ತಿಂಗಳ ಅಧ್ಯಕ್ಷ ಹುದ್ದೆ ನಿರ್ವಹಿಸಿದ್ದು; ಅವರ ನಂತರ ಪ್ರಸ್ತುತ ಶ್ರೀಮತಿ ವಿಜಯಲಕ್ಷ್ಮಿ ಹ. ರಜಪೂತ ಅವರು ಅಧ್ಯಕ್ಷರಾಗಿ, ಶ್ರೀ ಧರೆಪ್ಪ ಸು. ಕಾಂಬಳೆ ಉಪಾಧ್ಯಕ್ಷರಾಗಿದ್ದು ಕಂಡುಬರುತ್ತದೆ.

೪.೮. ಜಿಲ್ಲಾ ಪರಿಷತ್ ಸದಸ್ಯರು

ಶ್ರೀ ವಿಶ್ವನಾಥ ಶಿ. ಗಣಿ

ಆಯ್ಕೆಯಾದ ಕ್ಷೇತ್ರ : ತೇಲಸಂಗ

ಪಕ್ಷ : ಜನತಾ ಪಕ್ಷ

ಸ್ವ ಗ್ರಾಮ : ಕೊಟ್ಟಲಗಿ

೧೯೮೭-೧೯೯೨ರ ವರೆಗೆ ಗ್ರಾಮದವರಾದ ಶ್ರೀ ವಿಶ್ವನಾಥ ಶಿವಪ್ಪ ಗಣಿ ಇವರು ತೇಲಸಂಗ ಜಿಲ್ಲಾ ಪರಿಷತ್ ಮತಕ್ಷೇತ್ರದಿಂದ ಬೆಳಗಾವಿ ಜಿಲ್ಲಾ ಪರಿಷತಗೆ ಆಯ್ಕೆಯಾಗಿದ್ದಾರೆ. ಆ ಸಂದರ್ಭದಲ್ಲಿ ಮೂರು ಹಂತದ ಗ್ರಾಮ ಪಂಚಾಯತ, ತಾಲೂಕ ಪಂಚಾಯತ, ಜಿಲ್ಲಾ ಪಂಚಾಯತ ಈ ವ್ಯವಸ್ಥೆ ಜಾರಿಯಲ್ಲಿರಲಿಲ್ಲ. ಹೀಗಾಗಿ ಮಂಡಳ ಪಂಚಾಯತ ನಂತರ ನೇರವಾಗಿ ಜಿಲ್ಲಾ ಪರಿಷತ್ ಹೀಗೆ ಎರದು ಹಂತದ ವ್ಯವಸ್ಥೆಯಿತ್ತು. ಈ ಸಂದರ್ಭದಲಿ ಶ್ರೀ ವಿಶ್ವನಾಥ ಗಣಿ ಅವರು ಗಡಿಭಾಗದ ಪ್ರತಿನಿಧಿಯಾಗಿ, ಕನ್ನಡ ಸಂಘಟನೆಗಳ ಬೆನ್ನೆಲುಬಾಗಿ ನಿಂತ ಹೋರಾಟಗಾರರೂ ಆಗಿದ್ದರು. ಗ್ರಾಮದಲ್ಲಿ ಹಾಗೂ ತಮ್ಮ ಮತಕ್ಷೇತ್ರದಲ್ಲಿ ಇವರು ಕೈಗೊಂಡ ಅಭಿವೃದ್ಧಿ ಕಾರ್ಯಗಳು.

೧. ಜಿಲ್ಲಾ ಪರಿಷತನಿಂದ ಪೌಢಶಾಲೆ ಮಂಜೂರಾತಿ ಪಡೆಯಲು ಶ್ರಮಿಸಿದ್ದು

೨. ಶ್ರೀಮತಿ ಲೀಲಾದೇವಿ ಪ್ರಸಾದ ಅವರ ಮೂಲಕ ಸಮಾಜ ಕಲ್ಯಾಣ ಇಲಾಖೆಯಿಂದ ಎಸ್.ಸಿ./ಎಸ್.ಟಿ. ಹಾಸ್ಟೆಲ್ ಮಂಜೂರಾತಿ

೩. ಹರಿಜನ ವಾಡಾ ಸ್ಕೀಮನಲ್ಲಿ ಗ್ರಾಮದಲ್ಲಿ ಮುಖ್ಯ ರಸ್ತೆ ಡಾಂಬರೀಕರಣ, ಹರಿಜನಕೇರಿ ಮತ್ತು ಮಾದರ ಓಣಿಯಲ್ಲಿ ರಸ್ತೆ ನಿರ್ಮಾಣ

೪. ಈ ಮೊದಲೆ ಮಂಜೂರಾದ ಊರಲ್ಲಿ ಓವರಹೆಡ್ ಟ್ಯಾಂಕ ನಿರ್ಮಾಣದಲ್ಲಿ ಶ್ರಮಿಸಿದರು

೫. ಆಯುರ್ವೇದ ಆಸ್ಪತ್ರೆ ಮಂಜೂರಾತಿಗೆ ಶ್ರಮಿಸಿದ್ದು

೬. ಅಲ್ಲದೇ ರೇಷನ್ ವ್ಯವಸ್ಥೆಯಲ್ಲಿ ರಾಕೆಲ್ (ಸೀಮೆ ಎಣ್ಣೆ)ನ್ನು ತಾಲೂಕಾ ಮಟ್ಟದಲ್ಲಿ ವಿತರಿಸುವ ವ್ಯವಸ್ಥೆ ಇತ್ತು. ನೆರೆಯ ಮಹಾರಾಷ್ಟ್ರಕ್ಕೆ ಒಂದು ಸಮಿತಿಯನ್ನು ಕಳುಹಿಸಿ ಅಧ್ಯಯನ ಮಾಡಿ ಬಂದ ನಂತರ; ಗ್ರಾಮಗಳಿಗೆ ಈ ವ್ಯವಸ್ಥೆ ಮೂಲಕ ನೇರವಾಗಿ

ರೇಶನ ಸೀಮೆ ಎಣ್ಣೆ ಸಿಗುವಂತೆ ಮಾಡುವಲ್ಲಿ ಜಿಲ್ಲಾಧಿಕಾರಿಗಳ ಜೊತೆಗೂಡಿ ಹೋರಾಡಿದ ಹೋರಾಟಗಾರರೂ ಅವರಾಗಿದ್ದಾರೆ.

೭. ಐಗಳಿ, ಕಕಮರಿ ಗ್ರಾಮಗಳಿಗೆ ಕನ್ನಡ ಶಾಳೆಗಳು, ತೇಲಸಂಗ ಗ್ರಾಮಕ್ಕೆ ಪಿ.ಎಚ್.ಇ. ಸೆಂಟರ ಅನೇಕ ಕಡೆ ಜಿಲ್ಲಾ ಪರಿಷತ್ ಸಮುದಾಯ ಭವನಗಳು ನಿರ್ಮಿಸುವಲ್ಲಿ ಪ್ರಯತ್ನ ಮಾಡಿದ್ದಾರೆ.

೮. ಇವರು ಎಲ್ಲ ಸಮುದಾಯದೊಂದಿಗೆ ಸಮನ್ವಯ ಸಾಧಿಸಿ ಒಂದು ಕೇಸು ಪೋಲಿಸ ಸ್ಟೇಶನವರೆಗೆ ಹೋಗದಂತೆ ಗ್ರಾಮದ ಜನತೆಯ ಸಾಮರಸ್ಯಕ್ಕೆ ಪ್ರಯತ್ನಪಟ್ಟಿದ್ದಾರೆ.

ಇವರು ಪ್ರಸ್ತುತ ಕರ್ನಾಟಕ ರಾಜ್ಯ ಸಹಕಾರಿ ವಸತಿ ನಿಗಮ ಫೆಡರೇಶನದ ೨೦೦೯–೧೦ ರಿಂದ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನಿಗಮದ ವತಿಯಿಂದ ೧) ಚೈನಾ ೨) ಯುರೋಪ ೩) ಅಮೇರಿಕಾ ಮುಂತಾದೆಡೆಗಳಲ್ಲಿ ಪ್ರವಾಸ ಕೂಡ ಮಾಡಿದವರಾಗಿದ್ದಾರೆ. ಇವರನ್ನು ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಇಡೀ ಗ್ರಾಮಕ್ಕೆ ಗ್ರಾಮವೆಲ್ಲ ಸಂಪೂರ್ಣ ಒಗ್ಗಟ್ಟಿನಿಂದ ಇವರಿಗೇ ಮತದಾನ ಮಾಡಿದ್ದು ವೈಶಿಷ್ಟ್ಯವಾದ ವಿಚಾರ.

೪.೯. ಜಿಲ್ಲಾ ಪಂಚಾಯತ್ ಸದಸ್ಯರು

ಶ್ರೀ ಸಿದರಾಯ ಈ. ಯಲ್ಲಡಗಿ

ಮತಕ್ಷೇತ್ರ : ತೇಲಸಂಗ

ಪಕ್ಷ : ಭಾರತೀಯ ಜನತಾ ಪಕ್ಷ

ಸ್ವ ಗ್ರಾಮ : ಕೊಟ್ಟಲಗಿ

ಆಯ್ಕೆಯಾದ ವರ್ಷ : ೨೦೦೬–೨೦೧೧

ಗ್ರಾಮದವರೆ ಆದ ಶ್ರೀ ಸಿದರಾಯ ಯಲ್ಲಡಗಿ ಇವರು ೨೦೦೬ರಲ್ಲಿ ಜಿಲ್ಲಾ ಪಂಚಾಯತ ತೇಲಸಂಗ ಮತಕ್ಷೇತ್ರದಿಂದ ಆಯ್ಕೆಯಾದರು. ಇವರೂ ಕ್ರಿಯಾಶೀಲ, ಉತ್ಸಾಹಿ ಯುವ ನಾಯಕರಾಗಿ ಗ್ರಾಮದ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ.

೪.೧೦. ತಾಲೂಕ ಪಂಚಾಯತ್ ಸದಸ್ಯರು

ಶ್ರೀ ಅಪ್ಪಾಸಾಬ ಸಿ. ಬಿರಾದಾರ

ತಾಲೂಕ ಪಂಚಾಯತ ಮತಕ್ಷೇತ್ರ : ಕೊಟ್ಟಲಗಿ

ಪಕ್ಷ : ಭಾರತೀಯ ಜನತಾ ಪಕ್ಷ

ಅಧಿಕಾರಾವಧಿ : ೨೦೦೬–೨೦೧೧

ಶ್ರೀ ಅಪ್ಪಾಸಾಬ ಬಿರಾದಾರವರು ೨೦೦೬ರಲ್ಲಿ ಅಥಣಿ ತಾಲೂಕ ಪಂಚಾಯಿತಿಗೆ ಆಯ್ಕೆಯಾದರು. ಗ್ರಾಮದಲ್ಲಿ ಯುವ ನಾಯಕರಾಗಿ ಅಭಿವೃದ್ಧಿ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಗ್ರಾಮದ ಪ್ರತಿನಿಧಿಯಾಗಿ ಗ್ರಾಮದ ಅಭಿವೃದ್ಧಿಗೆ ವಿಶೇಷ ಶ್ರಮ ವಹಿಸಿದ್ದಾರೆ.

ಶ್ರೀ ಗುರುಬಸು ಶಂಕರಪ್ಪ ಬಂಡರಗೋಟಿ

ತಾಲೂಕ ಪಂಚಾಯತ ಮತಕ್ಷೇತ್ರ : ಕೊಟ್ಟಲಗಿ

ಪಕ್ಷ : ಭಾರತೀಯ ಜನತಾ ಪಕ್ಷ

ಅಧಿಕಾರ ಅವಧಿ : ೨೦೧೧-ಪ್ರಸ್ತುತ ಕಾರ್ಯ ನಿರ್ವಹಿಸುತ್ತಿದ್ದಾರೆ

ಉತ್ಸಾಹಿ ನವತರುಣರು ಹಾಗೂ ಕ್ರಿಯಾಶೀಲ ವ್ಯಕ್ತಿಗಳು ಹೌದು. ಗ್ರಾಮ, ತಾಲೂಕು, ಶಾಸಕರು ಹೀಗೆ ವಿವಿಧ ಮಟ್ಟದಲ್ಲಿ ಗ್ರಾಮದ ಕೊಂಡಿಯಾಗಿ, ಸಹವರ್ತಿಯಾಗಿ ಗ್ರಾಮದ ಅಭಿವೃದ್ಧಿ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಸರ್ಕಾರದ ವಿವಿಧ ಕಾರ್ಯಕ್ರಮಗಳು ಗ್ರಾಮದಲ್ಲಿ ಜಾರಿಯಾಗುವುದಕ್ಕೆ ಶ್ರಮಿಸಿದ್ದಾರೆ. ನಿರಂತರ ಪ್ರಯತ್ನದ ಮೂಲಕ ಗ್ರಾಮವು ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿದೆ.

೪.೧೧. ತಾಲೂಕ ಕೃಷಿ ಹುಟ್ಟುವಳಿ ಮಾರಾಟ ಮಂಡಳಿಯಲ್ಲಿ (ಎ.ಪಿ.ಎಂ.ಸಿ) ಕೊಟ್ಟಲಗಿ

ತಾಲೂಕ ಎ.ಪಿ.ಎಂ.ಸಿ. ಚುನಾವಣೆಯಲ್ಲಿ ಗ್ರಾಮದವರಾದ **ಶ್ರೀ ಸಣ್ಣಪ್ಪ ದಾನಪ್ಪಗೋಳ** ಇವರು ಭಾರತೀಯ ಜನತಾ ಪಕ್ಷದ ಅಭ್ಯರ್ಥಿಯಾಗಿ ಆಯ್ಕೆಯಾಗುವುದಲ್ಲದೇ ಅಧ್ಯಕ್ಷರಾಗಿ ಕೂಡ ಆಯ್ಕೆಯಾದದ್ದು ವಿಶೇಷ. ತಾಲೂಕಿನ ಐಗಳಿ ಮಾರುಕಟ್ಟೆ ಸ್ಥಾಪನೆಗೆ ವಿಶೇಷವಾಗಿ ಶ್ರಮಿಸಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ಅತ್ಯಂತ ಕಿರಿಯ ವಯಸ್ಸಿನಲ್ಲಿ ತಾಲೂಕ ಮಟ್ಟದ ಅಧ್ಯಕ್ಷರಾಗುವುದರ ಜೊತೆಗೆ ಕೊಟ್ಟಲಗಿ ಕೀರ್ತಿ ಪತಾಕೆಯನ್ನು ತಾಲೂಕ ಮಟ್ಟದಲ್ಲಿವರೆಗೆ ಕೊಂಡೊಯ್ದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ.

ಶ್ರೀ ಪಿರಗೊಂಡ ಬ್ಯಾಳಿ

ಶ್ರೀ ಪಿರಗೊಂಡ ಬ್ಯಾಳಿಯವರು ಗ್ರಾಮದ ಮುತ್ಸದ್ದಿ ರಾಜಕಾರಣಿಯಾಗಿದ್ದಾರೆ. ಅವರು ತಾಲೂಕಾ ಜಾತ್ಯಾತೀತ ಜನತಾ ದಳದ ಅಧ್ಯಕ್ಷರಾಗಿ ಇಸ್ವಿ ಸನ್ ೨೦೦೫-೨೦೧೦ರ ವರೆಗೆ ಕಾರ್ಯನಿರ್ವಹಿಸಿದ್ದಾರೆ.

ಇದು ಅಲ್ಲದೇ ಸಾಮಾಜಿಕ, ರಾಜಕೀಯ ರಂಗದಲ್ಲಿ ಇವರು ಅನೇಕ ಹುದ್ದೆಗಳನ್ನು ನಿರ್ವಹಿಸಿದ್ದಾರೆ.

೧. ಗ್ರಾಮ ಪಂಚಾಯತ ಸದಸ್ಯರಾಗಿ ೧೯೯೪-೨೦೦೧ರವರೆಗೆ ಕಾರ್ಯ ನಿರ್ವಹಿಸಿದ್ದಾರೆ

೨. ಭೂ ಅಭಿವೃದ್ಧಿ ಬ್ಯಾಂಕಿನ ನಿರ್ದೇಶಕರಾಗಿ ೧೯೯೫ ರಿಂದ ೨೦೦೦ರವರೆಗೆ ಕಾರ್ಯ ನಿರ್ವಹಿಸಿದ್ದಾರೆ.

೩. ಧರಿದೇವರ ಜಲಾನಯನ ಅಭಿವೃದ್ಧಿ ಕಮಿಟಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ

೪. ಎಸ್.ಡಿ.ಎಮ್.ಸಿ. ಸದಸ್ಯರಾಗಿ ಹತ್ತು ವರ್ಷ ಸೇವೆ

೫. ಸಿದ್ಧಾರೂಢ ಜಲಾನಯನ ಅಭಿವೃದ್ಧಿ ಸಮಿತಿ ಅಧ್ಯಕ್ಷರಾಗಿದ್ದಾರೆ

ಹೀಗೆ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೇ

ಗ್ರಾಮದಲ್ಲಿ ಶಾಂತಿ ಸುವ್ಯವಸ್ಥೆ ಕಾಯ್ದುಕೊಂಡು ಹೋಗುವಲ್ಲಿ ಜಾತ್ಯಾತೀತ ಜನತಾದಳದ ರಾಜಕೀಯ ನಾಯಕರಾಗಿ ಸಾಮರಸ್ಯ ಸಾಧಿಸಿದ್ದಾರೆ. ತಾಲೂಕಾ ಮಟ್ಟದಲ್ಲಿ ಗ್ರಾಮದ ಹೆಸರು ಗುರುತಿಸುವಂತೆ ರಾಜಕೀಯ ವಲಯದಲ್ಲಿ ಇವರ ಸೇವೆ ಅಪೂರ್ವವಾದುದು.

ಶ್ರೀ ಶ್ರೀಶೈಲ ಭೀಮರಾಯ ಮಾಳಿ

ಬಿ.ಎಸ್.ಪಿ. ಪಕ್ಷದ ತಾಲೂಕಾ ಅಧ್ಯಕ್ಷರು. ಕ್ರೀಯಾಶೀಲರಾಗಿ ರಾಜಕೀಯದಲ್ಲಿ ತೊಡಗಿಸಿಕೊಂಡದ್ದು ನಾಲ್ಕು ವರ್ಷದಿಂದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಹೀಗೆ ಸ್ವಾತಂತ್ರ್ಯ ಸಂಗ್ರಾಮದ ಭವ್ಯ ನೆನಪಿನಿಂದ ಆರಂಭವಾಗಿ ಆಧುನಿಕ ರಾಜಕೀಯದವರೆಗೆ ಅನೇಕ ತಿರುವುಗಳನ್ನು ಪಡೆಯುತ್ತ ಗ್ರಾಮವು ತನ್ನದೇ ಆದ ರಾಜಕೀಯ ನೆಲೆಯನ್ನು ಹೊಂದಿದೆ.

ಅಡಿಟಿಪ್ಪಣಿಗಳು:

೧. ಮಾಧವ ಜೀವನ ದರ್ಶನ, ಸಂಪಾದಕರು: ಶ್ರೀ ಮಹಾಲಿಂಗ ಮಂಗಿ ಪುಟ-೪

೨. ಅದೇ ಪುಟ-೬

೩. ಅದೇ

೪. ಅದೇಪುಟ-೧೪೧

ಅಧ್ಯಾಯ – ೫

ಧಾರ್ಮಿಕ ಪರಂಪರೆ

೫.೧. ಪ್ರಮುಖ ದೇವಾಲಯಗಳು
೫.೨. ಕೊಟ್ಟಲಗಿ ದೇವಾಲಯಗಳು ಸೂಚಿಸುವ ಸಾಂಸ್ಕೃತಿಕ ಸಂಬಂಧಗಳು

ಅಧ್ಯಾಯ ೫

ಧಾರ್ಮಿಕ ಪರಂಪರೆ

ದೇವನಿಲ್ಲದೆ ಮಾನವ ಬದುಕಲಾರ; ಬಾಳಲಾರನೆಂದು ಮಾನವಕುಲದ ಚರಿತ್ರೆಯಿಂದ ಮತ್ತು ಮಾನವನ ಸ್ವಭಾವದ ಅಧ್ಯಯನದಿಂದ ತಿಳಿದುಬರುವ ಸತ್ಯ. ಮಾನವನ ಸಾಂಸ್ಕೃತಿಕ ಬೆಳವಣಿಗೆಯಲ್ಲಿ; ದೇವಾಲಯಗಳ ನಿರ್ಮಾಣ, ಮೂರ್ತಿ ಶಿಲ್ಪಗಳ ಪ್ರತಿಷ್ಠಾಪನೆ ನಿರಂತರವಾಗಿ ನಡೆದು ಬಂದಿದೆ. ದೇವರ ಆರಾಧನೆ ಪ್ರಾಗೈತಿಹಾಸ ಕಾಲದಷ್ಟು ಹಳೆಯದು. ಪ್ರಾಗೈತಿಹಾಸ ಕಾಲದಲ್ಲಿ ಮಾನವನು ಗುಡ್ಡುಗಾಡುಗಳಲ್ಲಿ ವಾಸಮಾಡುತ್ತಿದ್ದ. ನಿಸರ್ಗದಲ್ಲಿ ಅನಿರೀಕ್ಷಿತವಾಗಿ ಸಂಭವಿಸುತ್ತಿದ್ದ ಮಳೆ, ಗುಡುಗು, ಸಿಡಿಲು, ಕಾಳ್ಗಿಚ್ಚು ಅಂತಹ ಅನೇಕ ಘಟನೆಗಳಿಂದ ಆತ ಭಯಭೀತನಾಗಿ ಅವುಗಳಿಂದ ರಕ್ಷಿಸಿಕೊಳ್ಳಲು ಬಂಡೆಗಲ್ಲು; ಗವಿಗಳನ್ನು ಆಶ್ರಯ ಮಾಡಿಕೊಂಡನು. ನಿಸರ್ಗ ನಿಯಮಗಳೆಂದು ಅರಿಯದ ಅವನು ಆಕಸ್ಮಿಕವಾಗಿ ನಡೆಯುವ ಇಂತಹ ವಿಕೋಪಗಳು ಪೂಜಾರ್ಹವೆಂದು ನಂಬಿದನು. ಅಜ್ಞಾತವಾದುದರ ಜಿಜ್ಞಾಸೆಯಲ್ಲಿಯೇ ದೇವರ ಕಲ್ಪನೆ ಅಥವಾ ಶಕ್ತಿಯ ಅರಿವು ಮಾಡಿತು. ಸೃಷ್ಟಿಯಲ್ಲಿ ಗೋಚರವಾಗುವ ವಸ್ತುಗಳೆಲ್ಲವೂ ಅವನಿಗೆ ಉಪಾಸನಾಯೋಗ್ಯ ದೇವತೆಗಳಾದವು. ಜೊತೆಗೆ ಇಂತಹ ಶಕ್ತಿಗಳ ಬೆಂಬಲ, ಆಶೀರ್ವಾದ ಅವಶ್ಯವೆಂದು ಭಾವಿಸಿದ. ಕಾರಣ ಆ ಶಕ್ತಿಗೆ ಒಂದು ರೂಪ ನೀಡಿ; ಅದನ್ನು ಪ್ರತಿಮೆಯ ರೂಪದಲ್ಲಿ ಪೂಜಿಸುವ ಪದ್ಧತಿ ಆರಂಭವಾಯಿತು.

ಮಾನವನು ತನ್ನ ನಿತ್ಯ ಜೀವನದಲ್ಲಿ ಬದಲಾವಣೆ ಕಂಡುಕೊಳ್ಳುತ್ತ ಒಂದೆಡೆ ವಾಸಿಸಲು ಪ್ರಾರಂಭಿಸಿದ. ಆಗ ನಿಸರ್ಗ ನಿರ್ಮಿತ ವಸ್ತುಗಳನ್ನು ಬಳಸಿಕೊಂಡು ಅನೇಕ ಉಪಕರಣಗಳನ್ನು ತಯಾರಿಸುತ್ತ ಫಲವತ್ತಾದ ಭೂಮಿಯನ್ನು ಕೃಷಿಗೆ ಒಳಪಡಿಸಿ; ವಾಸಕ್ಕಾಗಿ ಗುಡಿಸಲುಗಳನ್ನು ನಿರ್ಮಿಸಿಕೊಂಡನು. ಹೀಗೆ ತನಗಾಗಿ ನಿರ್ಮಿಸಿಕೊಂಡ ಗುಡಿಸಲು ಗೃಹವಸ್ತುವಾದರೆ, ಇತರ ಶಕ್ತಿಗಳಿಗಾಗಿ ರಚಿಸಿದ ಕಟ್ಟಡ ದೇವಾಲಯ; ಧಾರ್ಮಿಕ ವಸ್ತುವಾಗಿ ರೂಪಾಂತರಗೊಂಡವು. ಚಾರಿತ್ರಿಕ ಯುಗದಲ್ಲಿ ಅರಸರು, ಮಾಂಡಲಿಕರು, ಅಧಿಕಾರಿಗಳು ತಮ್ಮ ಹೆಸರಿನಲ್ಲಿ ತಮ್ಮ ಹಿರಿಯರ ಹೆಸರಿನಲ್ಲಿ ದೇವಾಲಯಕ್ಕಷ್ಟೇ ಮೂರ್ತಿ ಪ್ರತಿಷ್ಠಾಪನೆ ಮಾಡಿರುವ ಉದ್ದೇಶವನ್ನು ಗಮನಿಸಿದಾಗ ಪ್ರಾಚೀನ ಕಾಲದ ನಂಬಿಕೆಗಳು ಸ್ಪಷ್ಟಗೊಳ್ಳುತ್ತವೆ.

ದೇವಾಲಯಗಳ ನಿರ್ಮಾಣದಲ್ಲಿ ಸಂಸ್ಕೃತಿಯ ಆಧ್ಯಾತ್ಮಿಕ ಚಿಂತನೆಗೆ ಅಥವಾ ಧಾರ್ಮಿಕ ಮೂಲ ಕಲ್ಪನೆಗೆ ಹೆಚ್ಚು ಪ್ರಾಮುಖ್ಯತೆ ಇದ್ದರೂ ಅದಕ್ಕೆ ವಿರುದ್ಧವಾದ ಕಾಮ, ಕರ್ಮಾಚರಣೆ ಹಾಗೂ ಲೌಕಿಕ ಸುಖಗಳನ್ನು ಶಿಲ್ಪಗಳಲ್ಲಿ ಅಳವಡಿಸಿ ಜೋಡಿಸಲಾಗಿದೆ. ಶಿಲ್ಪಿಯೂ ಕೂಡಾ ಆಧ್ಯಾತ್ಮಿಕ, ಸಾಂಕೇತಿಕ ಸೌಂದರ್ಯಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ತನ್ನ ಕಲ್ಪನೆ, ಆದರ್ಶಗಳಿಗೆ ಕೊರತೆಯಾಗದಂತೆ ಅಭಿವ್ಯಕ್ತಿಸಿ; ಕಲೆಯ ಶ್ರೀಮಂತಿಕೆಯನ್ನು ವೃದ್ಧಿಪಡಿಸಿದನು.

ಗ್ರಾಮೀಣರ ಜೀವನದಲ್ಲಿ ಅನಾದಿ ಕಾಲದಿಂದಲೂ ಹಾಸುಹೊಕ್ಕಾಗಿ ಬೆರೆತು ಬಂದಿರುವ ಗ್ರಾಮದೇವತೆಗಳು ಜನಪದ ಬದುಕಿಗೆ ಒಂದು ಭಾಗವಾಗಿದೆ. ಗ್ರಾಮವೊಂದರ ಅಧ್ಯಯನ ಸಂದರ್ಭದಲ್ಲಿ ಗ್ರಾಮದೇವತೆಗಳನ್ನು ಅಗತ್ಯವಾಗಿ ಗಮನಿಸಬೇಕಾಗುತ್ತದೆ.

ಗ್ರಾಮದೇವತೆಗಳು ಗ್ರಾಮೀಣರ ಮಾನಸಿಕ ಅಗತ್ಯ ಎನ್ನಬಹುದು. ದೇವತೆಯಿಲ್ಲದೆ ಅವರು ಯಾವುದನ್ನು ಆರಂಭಿಸುವುದಿಲ್ಲ. ಬೆಳಗಿನಿಂದ ಸಂಜೆಯತನಕ ದುಡಿಮೆಯಲ್ಲಿ, ಇನ್ನಿತರ ಸಮಯದಲ್ಲಿ ಅವರಿಗೆ ದೇವರ ಆಸರೆ ಬೇಕು. ಅವರ ಎಲ್ಲ ಚಿಂತನೆಗಳು, ಕ್ರಿಯೆಗಳು, ಆಣೆ ಪ್ರಮಾಣಗಳು ದೇವತೆಯ ಸಾಕ್ಷಿಯಲ್ಲಿ ಸಾಗುತ್ತವೆ. ಗ್ರಾಮ ದೇವತೆಗೆ ಸಂಬಂಧಿಸಿದಂತೆ ಊರಿನ ಎಲ್ಲ ಸಮುದಾಯಗಳ ಜನಕ್ಕೂ ಒಂದೊಂದು ಜವಾಬ್ದಾರಿ ವಿತರಣೆಯಾಗಿರುತ್ತದೆ. ಇಡೀ ಗ್ರಾಮದ ಐಕ್ಯತೆ; ಸಾಮರಸ್ಯದ ಜೀವಾಳ ಈ ಗ್ರಾಮದೇವತೆಯೇ ಆಗಿರುತ್ತದೆ. ಆದ್ದರಿಂದ ಪರೋಕ್ಷವಾಗಿ ವ್ಯಕ್ತಿಯ ಮತ್ತು ಗ್ರಾಮ ಸಮೂಹದ ಮಾನಸಿಕ ನಿಯಂತ್ರಣ ಈ ದೇವತೆಯದೇ ಆಗಿರುತ್ತದೆ.

ಗ್ರಾಮದೇವತೆ ಎಂದರೆ ಕೇವಲ ಧಾರ್ಮಿಕ ಆಚರಣೆ ಮಾತ್ರವೇ ಆಗಿರದೇ; ಗ್ರಾಮ ಜೀವನದ ಹತ್ತು ಹಲವು ಮುಖಗಳನ್ನು ತೆರೆದು ತೋರಿಸುವ ಸಾಧನವು ಆಗಿದೆ ಎನ್ನಬಹುದು. ಗ್ರಾಮೀಣರು ಗ್ರಾಮದೇವತೆಗಳನ್ನು ಅಚಲವಾಗಿ ನಂಬಿದ್ದಾರೆ. ಅದರ ಅಂಗವಾಗಿ ದೇವತೆಗಳ ಹಬ್ಬ, ಜಾತ್ರೆ ಆಚರಿಸಿ; ಸಂತೋಷ ಪಡುತ್ತಾರೆ. ತಮ್ಮ ಕಂಟಕಗಳ ನಿವಾರಣೆಗೆ ವಿಧಿ ವಿಧಾನಗಳನ್ನು ನೆರವೇರಿಸುತ್ತಾರೆ.

ಡಾ॥ ಗದ್ದಗೀಮಠ ಅವರು ಕರ್ನಾಟಕದಲ್ಲಿರುವ ಜನಪದ ದೇವತೆಗಳನ್ನು ಆರು ರೀತಿಗಳಲ್ಲಿ ವಿಭಜಿಸಿದ್ದಾರೆ.

೧. ದೇವರು

೨. ದೇವತೆಗಳು

೩. ಸಮುದಾಯ ದೇವತೆಗಳು

೪. ಶಿವಶರಣರು

೫. ಸಾಧು ಸತ್ಪುರುಷರು

೬. ಭೂತಾದಿಗಳು[೧]

ಎಂದು ಅವರು ಹೇಳುತ್ತಾರೆ. ಇವುಗಳಲ್ಲಿ ಎರಡು ವರ್ಗಗಳು ದೇವತೆಗಳಲ್ಲದಿದ್ದರೂ ಜನಪದದಿಂದ ದೇವರಿಗೆ ಸಮಾನವಾಗಿ ಪೂಜೆ ಸಂದಾಯವಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ದೇವರುಗಳ ವರ್ತನೆ, ನಡುವಳಿಕೆ, ರೂಪ ವಿನ್ಯಾಸಗಳಿಗೆ ಆಯಾ ಪ್ರಾದೇಶಿಕ ಮಹತ್ವ ಕಾರಣಗಳಾಗಿವೆ. ದೇವತೆಗಳ ಉಡುಪು, ಆಹಾರ, ಭಾಷೆ ಎಲ್ಲ ಆ ಪ್ರದೇಶದ್ದೇ ಆಗಿರುತ್ತದೆ. ದೇವತೆಯ ದೈಹಿಕ ಸ್ವರೂಪ ಕೂಡ ಆಯಾ ಜನರನ್ನೆ ಹೋಲುತ್ತದೆ. ಆದ್ದರಿಂದ ಪ್ರಾದೇಶಿಕತೆಯನ್ನು ಕಡೆಗಣಿಸಿದರೆ ದೇವತೆಗಳ ಅಧ್ಯಯನಕ್ಕೆ ಅನ್ಯಾಯ ಮಾಡಿದಂತಾಗುತ್ತದೆ.

ಕರ್ನಾಟಕದ ಕೆಲವೊಂದು ದೇವತೆಗಳು ಒಂದೇ ಬಗೆಯ ಆಚರಣೆ, ಒಂದೇ ಬಗೆಯ ಪುರಾಣಗಳನ್ನು ಹೊಂದಿವೆ. ಕೆಲವು ಸಣ್ಣ ವಿವರಗಳಲ್ಲಿ ವ್ಯತ್ಯಾಸವಾದರೂ ಅವುಗಳ ಮೂಲ ಆಶಯ ಒಂದೇ ಆಗಿರುತ್ತದೆ. ಇನ್ನು ಕೆಲವು ದೇವತೆಗಳು ಸಂಪೂರ್ಣವಾಗಿ ಸ್ಥಳೀಯವಾಗಿದ್ದು; ಅವುಗಳನ್ನು ಅಧ್ಯಯನ ಮಾಡಲು ಆಯಾ ಪ್ರಾದೇಶಿಕ ವೈಲಕ್ಷಣಗಳನ್ನೇ ನಾವು ಅವಲಂಬಿಸಬೇಕಾಗಿದೆ. ಇನ್ನು ಕೆಲವು ದೇವತೆಗಳು ಹಲವು ಜಿಲ್ಲೆಗಳಲ್ಲಿ ಪ್ರಚಾರದಲ್ಲಿದ್ದು ಕರ್ನಾಟಕದ ಹೊರಗೆ ಅವು ಅಪರಿಚಿತವಾಗಿರುತ್ತವೆ. ಆದ್ದರಿಂದ ಪ್ರಾದೇಶಿಕತೆಗೆ ಅನುಗುಣವಾಗಿ ದೇವತೆಗಳನ್ನು ವಿಭಜನೆ ಮಾಡುವುದು ಅತ್ಯಂತ ಸಮಂಜಸವಾಗುತ್ತದೆ.

ಗ್ರಾಮದಲ್ಲಿರುವ ದೇವಾಲಯಗಳನ್ನು ಧರ್ಮದ ಹಿನ್ನಲೆಯಲ್ಲಿ ವಿಂಗಡಿಸಬಹುದು.

೧. ಶೈವ ದೇವಾಲಯಗಳು

೨. ವೈಷ್ಣವ ದೇವಾಲಯಗಳು

೩. ವೀರಶೈವ ದೇವಾಲಯಗಳು

೪. ಶಾಕ್ತ ದೇವಾಲಯಗಳು[1]

ಅಲ್ಲದೇ ವಿವಿಧ ಹಿನ್ನಲೆಯಲ್ಲಿ ವಿಂಗಡಿಸಿದಾಗ

ಮೂಲದ ಹಿನ್ನಲೆಯಲ್ಲಿ

ಅ. ೧. ಗ್ರಾಮ ದೇವತೆಗಳು

೨. ಗ್ರಾಮ್ಯೇತರ ದೇವತೆಗಳು

೩. ಗದ್ದುಗೆ ಅಥವಾ ತಡಿಗಳು

ಬ. ಇರುವಿಕೆ; ಉಡುಗೆ ತೊಡುಗೆಯನ್ನು ಆಧರಿಸಿ

೧. ಬಡ ದೇವತೆಗಳು

೨. ಶ್ರೀಮಂತ ದೇವತೆಗಳು

ಕ. ಆಹಾರ ಪಾನೀಯವನ್ನಾಧರಿಸಿ

೧. ಸಸ್ಯಾಹಾರಿ ದೇವತೆಗಳು

೨. ಮಾಂಸಾಹಾರಿ ದೇವತೆಗಳು

ಡ. ಗುಣ ಸ್ವಭಾವವನ್ನು ಆಧರಿಸಿ

೧. ಉಗ್ರ ದೇವತೆಗಳು

೨. ಸೌಮ್ಯ ದೇವತೆಗಳು[2]

ಅ) ಶೈವ ದೇವಾಲಯಗಳು

೧) ಕೋಟಿಲಿಂಗ ೨) ಕಲಾಲಿಂಗ ೩) ಶ್ರೀ ಸಿದ್ಧೇಶ್ವರ ದೇವಸ್ಥಾನ ೪) ಜ್ಯೋತಿರ್ಲಿಂಗ ೫) ಪಾವಡಸಿದ್ಧ ದೇವಾಲಯಗಳು ಶೈವ ದೇವಾಲಯಗಳ ವಿಂಗಡನೆಯಲ್ಲಿ ಬರುತ್ತಿವೆಯಾದರೂ ಗ್ರಾಮ ದೇವತೆಗಳು, ಸಸ್ಯಾಹಾರಿ, ಸೌಮ್ಯ ದೇವತೆಗಳನ್ನು ಸೇರಿಸಬಹುದಾಗಿದೆ.

ಆ) ವೈಷ್ಣವ ದೇವಾಲಯ

ಶ್ರೀ ಹನುಮಾನ ದೇವಸ್ಥಾನವನ್ನು ವೈಷ್ಣವ ದೇವಾಲಯಕ್ಕೆ ಸೇರಿಸಿದರೂ ಸಸ್ಯಾಹಾರಿ ದೇವತೆ ಹಾಗೂ ಸೌಮ್ಯ, ಶ್ರೀಮಂತ ದೇವತೆಗಳ ಈ ಗುಂಪಿಗೂ ಸೇರಿಸಬಹುದಾಗಿದೆ.

ಇ) ವೀರಶೈವ ದೇವಾಲಯಗಳು

೧) ಶ್ರೀ ಸಿದ್ಧಾರೂಢರ ದೇವಸ್ಥಾನ ೨) ಶ್ರೀ ಬಸವಾರೂಢರ ದೇವಸ್ಥಾನ ೩) ಶ್ರೀ ಗಿರಿಮಲ್ಲೇಶ್ವರ ಆಶ್ರಮ ೪)ಮಲ್ಲಯ್ಯ ದೇವಸ್ಥಾನ ೫) ಭರಮದೇವರ ದೇವಸ್ಥಾನ ೬) ಕವಟಗಿ ಮುತ್ಯಾ(ವಿಠ್ಠಲಸಿಂಗ ಮಹಾರಾಜರು) ೭) ಶ್ರೀ ಬಸವೇಶ್ವರ ದೇವಸ್ಥಾನ ೮) ಶ್ರೀ ಬಸವೇಶ್ವರ ದೇವಸ್ಥಾನ ೯) ಶ್ರೀ ಬಿಸಲ ಸಿದ್ಧೇಶ್ವರ

ಈ) ಶಾಕ್ತ ದೇವಾಲಯಗಳು

೧) ಲಕ್ಷ್ಮಿ ದೇವಾಲಯ ೨) ಯಲ್ಲಮ್ಮಾದೇವಿ ದೇವಸ್ಥಾನ ೩) ಮುದ್ದವ್ವ ೫) ದುರ್ಗಾದೇವಿ ೬) ವಾಡೇದ ಲಕ್ಷ್ಮಿ ಹೀಗೆ ವಿಂಗಡಿಸಿ ಅಧ್ಯಯನ ಕೈಗೊಂಡಿದ್ದೇನೆ.

ಪ್ರಮುಖ ದೇವಾಲಯಗಳು

ಶ್ರೀ ವಿಠ್ಠರಾಯ ದೇವಸ್ಥಾನ

ಈ ದೇವಾಲಯವನ್ನು ಸಸ್ಯಾಹಾರಿ, ಸೌಮ್ಯ ದೇವತೆಯ ಗುಂಪಿಗೆ ಸೇರಿಸಬಹುದು. ಕೊಟ್ಟಲಗಿಯ ಪಶ್ಚಿಮ ಭಾಗದಲ್ಲಿ ಶ್ರೀ ವಿಠ್ಠರಾಯ ದೇವಸ್ಥಾನವಿದ್ದು; ಸುಮಾರು ಐದು ಆರು ತಲೆಮಾರುಗಳ ಹಿಂದೆಯೇ ಸ್ಥಾಪಿತವಾಗಿರುವ ಕುರಿತು ತಿಳಿದುಬರುತ್ತದೆ. ದೇವಸ್ಥಾನದ ಸ್ಥಾಪನೆಯ ಕುರಿತು ಐತಿಹ್ಯವೊಂದಿದೆ.

ಕೊಟ್ಟಲಗಿ ಗ್ರಾಮದ ಪೂರ್ವಕ್ಕೆ 'ದಿವಾಳದ ಹರಿ' ಎನ್ನುವ ಪ್ರದೇಶವೊಂದಿದೆ. ಕುರಿ, ದನಗಳನ್ನು ಮೇಯಿಸುವ ಬಯಲು ಪ್ರದೇಶ. ಇಲ್ಲಿ ನಾಲ್ಕು ಜನ ಕೊಟ್ಟಲಗಿಯ ಕುರುಬರು ಕುರಿ ಮೇಯಿಸುವುದರ ಜೊತೆಗೆ ಇದೇ ಪ್ರದೇಶದಲ್ಲಿ ವಾಸವಾಗಿದ್ದರು. ೧) ಪರಸಪ್ಪ ದೇವರಸಿ ೨) ಭರಮಣ್ಣ ಜೋಗಿ ೩) ದುಂಡಪ್ಪ ತೊಗಿ ೪) ನಿಂಗಪ್ಪ ಜೋಗಿ ಈ ನಾಲ್ಕು ಜನರೇ ಅಲ್ಲಿ ವಾಸವಾಗಿದ್ದವರು. ತಾವು ವಾಸವಾಗಿರುವ ಕಡೆ ನಾಲ್ಕಾರು ಕಲ್ಲುಗಳನ್ನು ಇಟ್ಟು ಪೂಜಿಸಿ, ಕುರಿ ಹಾಲು ಹಿಂಡಿ ಆ ಕಲ್ಲುಗಳ ಮೇಲೆ ಸುರಿಯುತ್ತಿದ್ದರು, ನೈವೇದ್ಯ ಮಾಡುತ್ತಿದ್ದರು. ನಂತರ ರಾತ್ರಿ ಹಾಡು ಹಾಡುತ್ತ ಕಾಲ ಕಳೆಯುತ್ತಿದ್ದರು. ಕಾಲಾಂತರದಲ್ಲಿ ಈ ಪ್ರದೇಶವನ್ನು ಬಿಟ್ಟು ಹೋಗುವ ಪ್ರಸಂಗ ಬಂದಿತು. ಆಗ ದೇವ ಸ್ವರೂಪಿ ಕಲ್ಲುಗಳನ್ನೇನು ಮಾಡುವದೆಂದು ಅವರಿಗೆ ತೋಚದಾಯಿತು. ಆ ಕಲ್ಲುಗಳನ್ನು ಜೊತೆಯಲ್ಲಿ ಒಯ್ಯಲು ಮನಸ್ಸಿಲ್ಲದೇ; ಅಲ್ಲಿಯೇ ನೀರಿನ ಹೊಂಡವಿತ್ತು, ಆ ಹೊಂಡದಲ್ಲಿ ಕಲ್ಲುಗಳನ್ನು

ಎಸೆದರು. ಎಸೆದು ಅಲ್ಲಿಂದ ಹೋಗುವ ತಯಾರಿ ನಡೆಸಿದಾಗ; ಅವರ ಕಣ್ಣುಗಳು ಹೋದವು. ಅವರಲ್ಲಿ ಒಬ್ಬನು ನಾವು ದೇವರುಗಳನ್ನು ನೀರಲ್ಲಿ ಎಸೆದಿದ್ದೇವೆ, ಅದಕ್ಕಾಗಿ ನಮಗೆ ಈ ಕಷ್ಟ ಬಂದಿದೆ ಎಂದು ಹೇಳಿದನಂತೆ. ಆಗ ಆಗಿರುವ ಪ್ರಮಾದವನ್ನು ಸರಿಪಡಿಸುವ ಸಲುವಾಗಿ ಅವುಗಳನ್ನು ಪುನಃ ಪ್ರತಿಷ್ಠಾಪಿಸುವ ಕುರಿತು ಬೇಡಿಕೊಂಡಾಗ; ಅವರಿಗೆ ಕಣ್ಣುಗಳು ಮರಳಿ ಕಾಣಲಾರಂಭಿಸಿದವಂತೆ.

ಇಷ್ಟೆಲ್ಲ ನಡೆದ ಮೇಲೆ ಆ ದೇವರ ಕಲ್ಲುಗಳನ್ನು ತಂದು ಗ್ರಾಮದ ಪಶ್ಚಿಮದಲ್ಲಿ ಪೂರ್ವದ ಅಭಿಮುಖವಾಗಿ ಮಾಡಿ ಪ್ರತಿಷ್ಠಾಪಿಸಿದರು. ಅಲ್ಲಿ ವಿಠ್ಠರಾಯನೆಂದು ನಾಮಕರಣ ಮಾಡಿದರು.[೪]

ಈ ದೇವಸ್ಥಾನದ ಮೂಲ ಕಟ್ಟಡವು ಚಿಕ್ಕ ದೇವಸ್ಥಾನವಾಗಿದೆ. ಈ ದೇವಸ್ಥಾನವನ್ನು ೩೦೦ ವರ್ಷಗಳ ಹಿಂದೆ ಪರಸಪ್ಪ ದೇವರಸಿ ಎನ್ನುವರು ನಿರ್ಮಾಣ ಮಾಡಿದರು. ಮುಂದೆ ಇವರ ಮೊಮ್ಮಗ; ವಿಠ್ಠಪ್ಪ ದೇವಾಲಯದ ಮುಂಭಾಗದಲ್ಲಿ ಚಿಕ್ಕ ಮಂಟಪವನ್ನು ಕಟ್ಟಿಸಿದ. ಈ ಮಂಟಪವನ್ನು ಸಂಪೂರ್ಣವಾಗಿ ತೆಗೆದು ಈಗ ಕಲ್ಲಿನಿಂದ ಸಮುದಾಯ ಭವನ ನಿರ್ಮಾಣ ಮಾಡಿದ್ದಾರೆ. ಅಲ್ಲದೇ ಶಾಸಕರಾದ ಶ್ರೀ ಲಕ್ಷ್ಮಣ ಸವದಿಯವರ ಅನುದಾನದಲ್ಲಿ ದೇವಸ್ಥಾನ ಊರ್ಜಿತಗೊಳಿಸಲಾಗಿದೆ.

ವಿಠ್ಠರಾಯನ ಪೂಜೆ, ಆಭರಣ, ಉಡುಗೆ, ತೊಡುಗೆ ಕುರಿತು ಜನಪದ ಹಾಡಿನಲ್ಲಿ ಕಾಣಬಹುದು.

ಮರ್ತ್ಯಕ ಕರ್ತಾದ ಸುತ್ತೆಲ್ಲ ಸರಪಾದ
ನಾಗ ಬಂದಿಗೆಂದ ಇಟ್ಟಪ್ಪನೋ
ಕಂಠೀಯ ಸರಮಾಲಿ ಹಾಕ್ಯಾನೋ ಕೊರಳಲ್ಲಿ
ಕಿವಿಯಲ್ಲಿ ಕುಂದಲ ಇಟ್ಟಪ್ಪನೋ
ಕುತ ನೀರು ಉಟ್ಟಾನ ಕಸಿಗೋಳ ಕಟ್ಯಾನ
ಗೊಂಡೆದ ನಡಕಟ್ಟೊ ಇಟ್ಟಪ್ಪನೋ
ಮುಡಿಯ ಮುಂಡಾಸ, ಹೂವಿನ ಉಲ್ಲಾಸ
ಮಾಡಿವ ನಿನ್ನ ದ್ಯಾಸ ಇಟ್ಟಪ್ಪನೋ
ಗೆಜ್ಜೆಯ ಉಡದಾರ ಬೆರಳಲ್ಲಿ ಉಂಗರ
ಆದಾನ ಶೃಂಗಾರ ಇಟ್ಟಪ್ಪನೋ
ನಂಬಿದ ಭಕ್ತರ ಗಿರಿಯೇರಿ ಬಂದರ
ಆದಾನೊ ಸಾತಿರ ಇಟ್ಟಪ್ಪನೋ[೫]

ಹೀಗೆ ನಿತ್ಯ ಕುರುಬ ಜನಾಂಗದವರಿಗೆ ಮನೆ ದೇವರಾಗಿದ್ದಾನೆ. ದಿನಾಲು ಪೂಜೆ, ದೀಪ, ನೈವೇದ್ಯದೊಂದಿಗೆ ಆರಂಭಿಸುತ್ತಾರೆ.

ಪವಾಡಗಳು: ೧) ಪರಸಪ್ಪ ದೇವರಸಿಯವರ ಮೊಮ್ಮಗ ವಿಠ್ಠಪ್ಪನು ಮಕ್ಕಳಿಲ್ಲದ ಕಾರಣ ವಿಠ್ಠರಾಯನಿಗೆ ಬೇಡಿಕೊಂಡ ಹಿನ್ನಲೆಯಲ್ಲಿ ಗಂಡು ಮಗುವಾಯಿತಂತೆ. ನಂತರ ತನ್ನ ಹರಕೆ ನೆರವೇರಿದ ಕಾರಣಕ್ಕಾಗಿ ವಿಠ್ಠರಾಯ ದೇವಸ್ಥಾನದ ಮುಂದೆ ಮಂಟಪ ಕಟ್ಟಿಸಿದನು.[೬]

೨) ಕೊಟ್ಟಲಗಿ ಗ್ರಾಮದ ಭೀಮಣ್ಣ ಹರಾಳೆ ಎನ್ನುವ ವ್ಯಕ್ತಿ ಮೂರು ತಿಂಗಳಿನಿಂದ ನಡೆಯಲು ಸಾಧ್ಯವಿಲ್ಲದಂತೆ ಕಾಲುಗಳಲ್ಲಿ ನಿಶಕ್ತಿ ಆವರಿಸಿ ತೊಂದರೆಯಲ್ಲಿದ್ದರಂತೆ. ಆಗ ಅವರನ್ನು ನಾಲ್ಕು ಜನ ಶ್ರೀ ವಿಠ್ಠರಾಯ ದೇವರ ಜಾತ್ರೆಗೆ ಹೊತ್ತುಕೊಂಡು ಬಂದರು. ಭೀಮಣ್ಣನು ಶ್ರೀ ವಿಠ್ಠರಾಯ ದೇವರಿಗೆ ದೀಪಸ್ತಂಭ ಕಟ್ಟಿಸುವುದಾಗಿ ಹರಕೆ ಹೊತ್ತು ಬೇಡಿಕೊಂಡರಂತೆ. ಆಗ ಅವರಿಗೆ ಕಾಲುಗಳಿಂದ ನಡೆಯಲು ಪುನಃ ಸಾಧ್ಯವಾಯಿತಂತೆ. ಅವರು ಮರಳಿ ಮನೆಗೆ ನಡೆದುಕೊಂಡೆ ಹೋದರಂತೆ. ಈ ಘಟನೆಯನ್ನು ಪ್ರತ್ಯಕ್ಷದರ್ಶಿಗಳು ಇಂದಿಗೂ ಸ್ಮರಿಸುತ್ತಾರೆ. ಭೀಮಣ್ಣ ಈಗ ವಿಧಿವಶರಾಗಿದ್ದಾರೆ.

ಹನುಮಂತ ದೇವಸ್ಥಾನ

ಈ ದೇವಾಲಯವು ವೈಷ್ಣವ ಪಂಥಕ್ಕೆ ಸೇರಿದ ಗ್ರಾಮದೇವತೆಯಾಗಿದೆ. ಈ ದೈವವನ್ನು ಸಸ್ಯಾಹಾರಿ, ಸೌಮ್ಯ ದೇವತೆಯ ಸಾಲಿಗೆ ಸೇರಿಸಬಹುದು. ಇದು ಗ್ರಾಮದ ಪ್ರಾಚೀನ ದೇವಸ್ಥಾನವಾಗಿದೆ. ಗಚ್ಚು ಹಾಗೂ ಕಲ್ಲಿನಿಂದ ನಿರ್ಮಾಣವಾಗಿದೆ. ಇದು ಕೂಡ ಕಲ್ಯಾಣಿ ಚಾಲುಕ್ಯರ ಕಾಲದ್ದೇ ಆಗಿರಬಹುದಾದರೂ ಕಾಲ ಕಾಲಕ್ಕೆ ಊರ್ಜಿತಗೊಂಡು ನಿರ್ದಿಷ್ಟವಾಗಿ ಗುರುತಿಸಲು ಲಕ್ಷಣಗಳು ಲಭ್ಯವಿಲ್ಲ. ಅದರಂತೆ ದೇವಸ್ಥಾನದ ಗೋಡೆಗಳ ಮುಂದೆ ವೀರಗಲ್ಲುಗಳು, ಗಣಪತಿ ವಿಗ್ರಹ, ನಾಗಶಿಲ್ಪ ಮುಂತಾದವುಗಳು ಇರುವುದು ವೈಶಿಷ್ಟ್ಯವಾಗಿದೆ. ಇವುಗಳು ಈ ಮೊದಲು ದೇವಸ್ಥಾನದ ಗೋಡೆಯಲ್ಲಿ ಹಾಕಲ್ಪಟ್ಟಿದ್ದು; ೧೯೮೧ ರ ಸಮಯದಲ್ಲಿ ದೇವಸ್ಥಾನ ಊರ್ಜಿತಗೊಳಿಸುವಾಗ ತೆಗೆದಿಡಲಾಗಿದೆ ಎಂದು ಹೇಳಲಾಗಿದೆ. ಈ ಎಲ್ಲಾ ಹಿನ್ನಲೆಯಿಂದ ಇದೊಂದು ಪ್ರಾಚೀನ ದೇವಾಲಯವೆನ್ನುವುದು ನಿರ್ವಿವಾದ.

ಪೂಜಾ ವಿಧಾನ: ಸುಮಾರು ಸಾಲು ದೀಪಗಳನ್ನು ಹಚ್ಚಲಾಗುತ್ತದೆ. ಹೂವಿನ ಮಾಲೆಯಿಂದ ಹನುಮಂತನನ್ನು ಶೃಂಗರಿಸಲಾಗುತ್ತದೆ. ಎಲೆ, ತಟ್ಟೆಯು ಬಿದಿರಿನಿಂದ ತಯಾರಿಸಲಾಗಿದೆ. ಇದು ಕಮಾನು ಆಕಾರದಲ್ಲಿದೆ. ಇದಕ್ಕೆ ಸುಮಾರು ಒಂದು ಸಾವಿರ ಎಲೆಗಳಿಂದ ಶೃಂಗರಿಸಿ ಹನುಮಂತ ದೇವರಿಗೆ ಆನಿಸಿ ಇಡಲಾಗುತ್ತದೆ. ಇದರಿಂದ ಹನುಮಂತನ ಮೂರ್ತಿಯ ಸುತ್ತ ಸಂಪೂರ್ಣ ಎಲೆಯಿಂದ ಅವೃತವಾಗಿರುತ್ತದೆ. ಇದರ ಜೊತೆಗೆ ಬಣ್ಣ ಬಣ್ಣದ ಹಾಳೆಗಳಿಂದ ಹನುಮಂತನ ವಸ್ತ್ರ, ಶಲ್ಯ, ಧೋತರ ಹೀಗೆ ಎಲ್ಲವನ್ನು ನಿರ್ಮಿಸಿರುತ್ತಾರೆ. ಹನುಮಂತನಿಗೆ ಬೆಳ್ಳಿಯ ಉಡದಾರ, ಕಣ್ಣ ಬಟ್ಟು, ಜನಿವಾರ ಧರಿಸಲಾಗಿರುತ್ತದೆ. ಪ್ರಸಾದವನ್ನು ಕೊಬ್ಬರಿ ಸಕ್ಕರೆಯಿಂದ ನೈವೇದ್ಯ ತಯಾರಿಸಲಾಗಿರುತ್ತದೆ. ಧೂಪ ಕರ್ಪೂರದಿಂದ ಆರತಿ ಮಾಡಲಾಗುತ್ತದೆ. ಬಾಳೆಹಣ್ಣುಗಳೊಂದಿಗೆ ನೈವೇದ್ಯ ಮಾಡಲಾಗುತ್ತದೆ. ರಾಶಿಯ ಸಂದರ್ಭದಲ್ಲಿ ಪೂಜಾರಿಗಳಿಗೆ ಭಕ್ತರು ತಾವು ಬೆಳೆದ ಜೋಳ,

ಕಡಲೆ, ಗೋಧಿ ಇನ್ನಿತರ ದವಸಧಾನ್ಯಗಳನ್ನು ದಾನರೂಪವಾಗಿ ನೀಡುತ್ತಾರೆ. ಹನುಮಂತನ ಪೂಜೆಯನ್ನು ಗೊರವ (ಹೂಗಾರ) ಸಮುದಾಯದವರು ಮಾಡುತ್ತಾರೆ. ಹನುಮಂತ ದೇವರ ಪೂಜೆಯಿಂದ ಬಂದ ಕಾಣಿಕೆ ಪೂಜಾರಿಗಳ ಬದುಕಿಗೆ ಪೂರಕವಾಗಿದೆ.

ವಿಠ್ಠಲಸಿಂಗ ಮಹಾರಾಜರು

ಗ್ರಾಮ್ಯೇತರ ದೈವ. ಸಸ್ಯಾಹಾರಿ, ಉಗ್ರ ದೇವತೆಯ ಗುಂಪಿಗೆ ವಿಠ್ಠಲಸಿಂಗ ಮಹಾರಾಜರನ್ನು ಸೇರಿಸಬಹುದು.

ವಿಠ್ಠಲಸಿಂಗ ಮಹಾರಾಜರ ಸ್ವಂತ ಊರು : ಮನಮಿ ತಾ॥ಜಿ॥ ಸೋಲಾಪೂರ

ಇವರ ಗುರುಗಳು : ಇಂಡಿ ತಾಲೂಕಿನ ನಿಂಬಾಳದ ರಾಮಲಿಂಗ ಮಹಾರಾಜರು

ಶಿಕ್ಷಣ : ೯ನೇ ತರಗತಿ

ಪೂರ್ವಾಶ್ರಮದ ಆರಂಭಿಕ ವೃತ್ತಿ : ಇವರ ಪೂರ್ವಾಶ್ರಮದ ವೃತ್ತಿ ಸ್ವಂತ ಊರಿನಲ್ಲಿ ಒಬ್ಬ ಹೋಟೆಲ್ ಯಜಮಾನನಲ್ಲಿ ಯಾವುದೇ ಒಂದು ಪೈಸೆ ಕೂಡ ಹಣ ತೆಗೆದುಕೊಳ್ಳದೇ ಚಹಾ ತಯಾರಿಸುವದು. ಸೇವೆ ಮಾಡಿ ವ್ಯಾಪಾರ ಮಾಡಿ ಯಜಮಾನನಿಗೆ ಹಣ ಕೊಟ್ಟು ತಾವು ಮಾತ್ರ ಬರಿಗೈಯಲ್ಲಿ ಇರುತ್ತಿದ್ದರು. ಇವರಿಗೆ ಒಬ್ಬ ಸಹೋದರ ಹಾಗೂ ತಾಯಿ ಮಾತ್ರವೇ ಇವರ ಬಂಧು ಬಳಗ. ತಂದೆ ಮೊದಲೇ ತೀರಿಹೋಗಿದ್ದರು.

ಗುರುಗಳ ಭೇಟಿ: ಪರಿಸ್ಥಿತಿ ಹೀಗಿರುವಾಗ ಒಮ್ಮೆ ರಾಮಲಿಂಗ ಮಹಾರಾಜರು ಇವರು ಕೆಲಸ ಮಾಡುವ ಹೋಟೆಲಿಗೆ ಆಗಮಿಸಿದ್ದರು. ಆವಾಗ ಗುರುಗಳು ವಿಠ್ಠಲಸಿಂಗರನ್ನು ಉದ್ದೇಶಿಸಿ ನಿನ್ನನ್ನು ಕಂಡರೆ ಸಂತನಾಗುವ ಹಾಗೆ ಕಾಣುತ್ತಿಯಾ, ನಿನಗೆ ಉಪದೇಶ ಕೊಡುತ್ತೇನೆ ಎಂದು ಕೇಳಿದರು. ಆವಾಗ ವಿಠ್ಠಲಸಿಂಗರು ಈ ವಿಚಾರವನ್ನು ತಿರಸ್ಕರಿಸಿದರು. ಮುಂದೆ ಕೆಲವೊಂದು ದಿವಸದ ತರುವಾಯ ಅಣ್ಣ ಹಾಗೂ ತಾಯಿ ಇಬ್ಬರೂ ಒಂದೇ ತಿಂಗಳಿನಲ್ಲಿ ತೀರಿಹೋದರು. ಅಲ್ಲದೇ ಆಗಲೇ ಇವರಿಗೆ ಮದುವೆಯಾಗಿದ್ದರೂ ಕೂಡ ಮಡದಿಯನ್ನು ಮನೆಗೆ ಕರೆದುಕೊಂಡು ಬರದೇ ಇರವಂತ ವ್ಯಕ್ತಿಗಳು ಇವರು. ಹೀಗಾಗಿ ಸಂಪೂರ್ಣವಾಗಿ ಲೌಕಿಕ ಜೀವನದ ಬಗ್ಗೆ ವೈರಾಗ್ಯದ ಭಾವನೆಯನ್ನು ತಾಳಿದರು.

ಮುಂದೆ ಗುರುಗಳು ಹೇಳಿದ ಮಾತು ಜ್ಞಾಪಕಕ್ಕೆ ಬಂತು. ಬಹುಶಃ ಗುರುಗಳ ಬಳಿಗೆ ಹೋದರೆ ನನ್ನನ್ನು ತಿಸ್ಕರಿಸಬಹುದೆಂದು ಭಾವಿಸಿದರು. ಆಗ ಅವರು ಮನವಿಯಿಂದ ನಿಂಬಾಳದ ಗುರು ಸ್ಥಾನದವರೆಗೆ ದೀಡನಮಸ್ಕಾರ (ದಂಡವಾತ) ಹಾಕುತ್ತ ಹೋದರು. ಆವಾಗ ಗುರುಗಳು ಅವರಿಗೆ ಗುರುಮಂತ್ರ ಭೋದಿಸಿ ಆಶೀರ್ವದಿಸಿದರು. ನಂತರ ನಾಲ್ಕೈದು ತಿಂಗಳು ಗುರುಗಳ ಹತ್ತಿರವಿದ್ದು; ಆಧ್ಯಾತ್ಮಿಕ ಅಭ್ಯಾಸ ಮಾಡಿ ಗುರು ಸೇವೆಯನ್ನು ಮಾಡಿದರು. ಮುಂದೆ ಗುರುಗಳು ನೀನು ದೇಶ ಸಂಚಾರ ಮಾಡಬೇಕು ಎಂದು ಆದೇಶಿಸಿದರು. ನೀನು ಕಡ್ಡಾಯವಾಗಿ ಒಣಗಿದ ತಂಗಳ ರೊಟ್ಟಿ ಖಾರ ಮಾತ್ರ ಸೇವಿಸಬೇಕೆಂದು ಹೇಳಿದರು. ಅವರು ತಮ್ಮ ಜೀವಿತ ಅವಧಿಯಲ್ಲಿ ಹಲ್ಲು ಗಟ್ಟಿಯಾಗಿರುವರೆಗೂ ಈ ವ್ರತವನ್ನು ಪಾಲಿಸಿದರು.

ಅವರು ತಮ್ಮ ಜೀವನದಾದ್ಯಂತ ಮೌನ ಅನುಷ್ಠಾನ ಮಾಡುವ ಸಂಪ್ರದಾಯ ಬೆಳೆಸಿಕೊಂಡಿದ್ದರು. ಅನುಷ್ಠಾನದ ಸಂದರ್ಭದಲ್ಲಿ ದಿನನಿತ್ಯ ಒಂದು ಬಾಳೆ ಹಣ್ಣು ಹಾಗೂ ಒಂದು ಕಪ್ಪು ಹಾಲು ತೆಗೆದುಕೊಂಡು ಮೌನ ಆಚರಣೆ ಹಾಗೂ ಧ್ಯಾನ ಮಾಡುವದು ಇವರ ಪದ್ಧತಿ. ಜನಹಿತದ ಜೊತೆ ಲೋಕ ಕಲ್ಯಾಣದ ಗುರಿಯನ್ನು ಇವರು ಹೊಂದಿದ್ದರು. ಹೀಗೆ ಕರ್ನಾಟಕ, ಮಹಾರಾಷ್ಟ್ರದ ವಿವಿಧ ಪ್ರದೇಶಗಳಲ್ಲಿ ಅನುಷ್ಠಾನ ಕೈಗೊಂಡಿದ್ದರು.

ಅವರು ಅನುಷ್ಠಾನ ಕೈಗೊಂಡ ಸ್ಥಳಗಳೆಂದರೆ

೧. ೧೯೭೫ರಲ್ಲಿ ಸಾದಾಪುರ – ದಕ್ಷಿಣ ಸೋಲಾಪುರದಲ್ಲಿ ೩೦ ದಿವಸ

೨. ೧೯೭೬ರಲ್ಲಿ ಶ್ರೀ ಸಾಳುಂಕೆ ಅವರ ಮನೆಯಲ್ಲಿ ಎರಡು ಬಾರಿ

೩. ೧೯೭೮ರಲ್ಲಿ ಯತ್ನಾಳ ಬಿಜಾಪೂರ ತಾ॥ಜಿ॥ ೩೦ ದಿವಸ

೪. ೧೯೮೦ರಲ್ಲಿ ಮಹಾರಾಷ್ಟ್ರದ ಸಾಂಗಲಿಯಲ್ಲಿ ಶ್ರೀ ರಜಪೂತ ಅವರ ಮನೆಯಲ್ಲಿ ೩೦ ದಿವಸ

೫. ೧೯೮೨–೮೩ ಕೊಟ್ಟಲಗಿ ಹಂಜಿ ಸಿದ್ದಪ್ಪನವರ ತೋಟದಲ್ಲಿ ೨೫ ದಿವಸ

೬. ೧೯೮೮ರಲ್ಲಿ ಶ್ರೀ ಭೀಮಶಿ ಹಣಮಂತಸಿಂಗ ರಜಪೂತ ಅವರ ಮನೆಯಲ್ಲಿ ೪೦ ದಿವಸ

೭. ಜೂನ ೧೯೮೮ರಲ್ಲಿ ಸಿದ್ದಣ್ಣ ಸಂಖನವರ ಮನೆ ಕೊಟ್ಟಲಗಿಯಲ್ಲಿ ೩೦ ದಿವಸ

೮. ೧೯೮೭ರಲ್ಲಿ ಕೊಟ್ಟಲಗಿಯಲ್ಲಿ ಯಳಿಗಾವಿಯವರ ಮನೆಯಲ್ಲಿ ೨೧ ದಿವಸ

೯. ಪುನಃ ಸಿದ್ದಣ್ಣ ಸಂಖನವರ ಮನೆಯಲ್ಲಿ ೧೯೯೨ರಲ್ಲಿ ೧೪ ದಿನ. ಇದೇ ಅವರ ಕೊನೆಯ ಅನುಷ್ಠಾನವಾಗಿತ್ತು. ಇದೇ ಅನುಷ್ಠಾನದ ವೇಳೆ ಅವರು ಕೊನೆಯುಸಿರೆಳೆದರು.

ಅವರು ಜೀವಿತಾವಧಿಯಲ್ಲಿ ಯಾವುದೇ ಪುರಾಣ, ಪ್ರವಚನ ನೀಡುತ್ತಿರಲಿಲ್ಲ. ಆದರೆ ಭಜನಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸುಮಧುರ ಕಂಠದಿಂದ ಸ್ವರಚಿತ ಕವಿತೆಗಳನ್ನು (ಭಜನಾ ಪದಗಳನ್ನು) ಹಾಡುತ್ತಿದ್ದರು. ಸಂಗೀತ ಜ್ಞಾನವಿದ್ದು ರಾಗ, ತಾಳ, ಲಯಬದ್ಧವಾಗಿ ಹಾಡುತ್ತಿದ್ದರು. ಇವರು ತಮ್ಮ ಸ್ವರಚಿತ ಹಾಡುಗಳಲ್ಲಿ

೧. ಜ್ಞಾನ ಪ್ರತಿಪಾದನ ಸ್ಥಳ

೨. ನೀತಿ ಕ್ರಿಯಾ ಸ್ಥಳ

೩. ಜೀವ ಸಂಬೋಧನೆ

ಮುಂತಾದ ಎಲ್ಲ ಸ್ಥಳಗಳಲ್ಲಿಯೂ ಸ್ವರಚಿತ ಪದ್ಯಗಳನ್ನು "ಬಿಡಪದ" ಪದ್ಧತಿಯಲ್ಲಿ ಹಾಡುತ್ತಿದ್ದರು. "ಕೈವಲ್ಯ ಮತ್ತು ಬಿಡಪದ" ಎಂಬ ಭಜನಾ ಹಾಡುಗಳಲ್ಲಿ ಪ್ರಕಾರಗಳುಂಟು. ಗ್ರಾಮದಲ್ಲಿಯ ಜನ ಕೈವಲ್ಯ ಪದ್ಧತಿಯಲ್ಲಿ ಹಾಡುತ್ತಿದ್ದಾರೆ. ಇವರು ಬಿಡಪದ ಪದ್ಧತಿಯಲ್ಲಿ ಹಾಡುತ್ತಿದ್ದದು ವಿಶೇಷ. ಇವರು ಪಂಚೇಂದ್ರಿಯಗಳು ಹಾಗೂ ಅವುಗಳ ಗುಣಗಳ ಕುರಿತು ಪದ್ಯಗಳನ್ನು ರಚಿಸಿದ್ದಾರೆ. ಒಂದು ಭಜನಾವಳಿ ಪುಸ್ತಕವನ್ನು ರಚಿಸಿದ್ದಾರಂತೆ, ಆದರೆ ಇದು ಪ್ರಸ್ತುತ ಲಭ್ಯವಿಲ್ಲ.

ಇವರು ಸಿದ್ಧಿಪುರುಷರಂತೆ ಭಕ್ತರಿಂದ ಗುರುತಿಸಲ್ಪಡುತ್ತಾರೆ. ಇದಕ್ಕೆ ಒಂದು ಉದಾಹರಣೆ ಸ್ಮರಿಸಬಹುದು, ಇವರು ಮಹಾರಾಷ್ಟ್ರದ ಜತ್ತ ತಾಲೂಕಿನ ತಿಕ್ಕೊಂಡಿ ಜಿ॥ಸಾಂಗಲಿ ಇಲ್ಲಿ ಸಂಚಾರದ ಸಂದರ್ಭದಲ್ಲಿ; ಒಂದು ದಿನ ಮೊದಲಿಗೆ ಊರ ಹನುಮಂತ ದೇವರ ಗುಡಿಯಲ್ಲಿ ಕುಳಿತಿದ್ದರು. ಆಗ ಇವರು ಕುಳಿತಲ್ಲಿಗೆ ಸಾಳುಂಕೆ ಎನ್ನುವವರು ಬಂದು ಇವರನ್ನು ವಿಚಾರಿಸಿದರು. ಆಗ ಸಾಳುಂಕೆ ಅವರು ತಮ್ಮ ತೋಟ ಇಲ್ಲಿಯೇ ಸಮೀಪ ಇದೆ ಗುರುಗಳೆ; ನೀವು ನಮ್ಮ ತೋಟಕ್ಕೆ ಬರಬೇಕೆಂದು ಭಿನ್ನವಿಸಿದಾಗ ಒಪ್ಪಿ ಅಲ್ಲಿಗೆ ಹೋದರು. ಸಾಳುಂಕೆ ಅವರ ತೋಟದಲ್ಲಿ ನೀರೆ ಇರಲಿಲ್ಲ. ನೀರಿನ ಕೊರತೆಯ ಸಮಸ್ಯೆ ಇತ್ತು. ಈ ಕುರಿತು ಗುರುಗಳಿಗೆ ಬೇಡಿಕೆಯನ್ನು ತಿಳಿಸಿದರು. ಆಗ ಗುರುಗಳು ಬಾವಿಯಲ್ಲಿ ಸ್ಥಳ ತೋರಿಸಿ ಬೋರವೆಲ್ ಕೊರೆಸಲು ಹೇಳಿದರು. ಕೇವಲ ಹದಿನೆಂಟು ಫೂಟ ಆಳದ ಬೋರವೆಲ್ ಕೊರೆಯುವದರೊಳಗೆ ಸಾಕಾಗುವಷ್ಟು ನೀರು ಬರಲಾರಂಭಿಸಿತು. ನೀರು ಬಂದಾಗ ಸಾಳುಂಕೆ ಅವರು ಸಂತಸದಿಂದ ಕುಣಿದಾಡಿದರು. ಅವರು ಈ ಬೋರವೆಲ್ ಕೊರೆಸುವದಕ್ಕಿಂತ ಮುಂಚೆ ಗುರುಗಳು ೨೧ ದಿವಸ ಅವರ ತೋಟದ ಮಾವಿನಗಿಡದ ಕೆಳಗೆ ಅನುಷ್ಠಾನ ಮಾಡಿ ಪ್ರಸಾದ ನೀಡಿ ಬೋರವೆಲ್ ಕೊರೆಸಲು ಹೇಳಿದ್ದರು.

ಶ್ರೀ ಸಾಳುಂಕೆ ಇವರು ತೋಟದಲ್ಲಿ ಒಂದು ಮಠ ಕಟ್ಟಲು ಸ್ಥಳ ಕೊಡುತ್ತೇನೆಂದು ಹೇಳಿದರು. ಕಬ್ಬಿಣದ ತಗಡಿನಿಂದ ಕೊಟ್ಟಲಗಿ ಭಕ್ತರ ಸಹಾಯದಿಂದ ಅಲ್ಲಿ ತಗಡು ಶೆಡ್ಡಿನ ಮಠವನ್ನು ನಿರ್ಮಾಣ ಮಾಡಿದರು. ನಂತರ ಸಾಳುಂಕೆ ಅವರಿಗೆ ನಾನು ೩ ತಿಂಗಳು ಅನುಷ್ಠಾನ ಮಾಡುತ್ತೇನೆ, ನೀನು ನನಗೆ ಎಲ್ಲ ವ್ಯವಸ್ಥೆ ಮಾಡುತ್ತಿಯಾ? ಎಂದು ಕೇಳಿದಾಗ ಅವರು ಒಪ್ಪಿಕೊಂಡರು. ಅವರಿಗೆ ಅನುಷ್ಠಾನ ಕುಳಿತುಕೊಳ್ಳಲು ಪ್ರೇರಣೆ ನೀಡಿ ನಂತರ ಅವರಿಗೆ ಯಾವುದೇ ವ್ಯವಸ್ಥೆ ಮಾಡಲಿಲ್ಲ. ಹದಿನೈದು ದಿನ ನಿರಾಹಾರಿಗಳಾಗಿ ಕಾಲ ಕಳೆದರು. ಬಂದ ಭಕ್ತರಿಗೆ ವ್ಯವಸ್ಥೆ ಇಲ್ಲದಂತಾಯಿತು. ಆಗ ಅವರು ಕೊಟ್ಟಲಗಿಯ ಎಲ್ಲ ಭಕ್ತರಿಗೆ ಹೇಳಿ ಕಳುಹಿಸಿ ಎಲ್ಲ ವ್ಯವಸ್ಥೆ ಮಾಡುವಂತೆ ಕೇಳಿದರು.

ಆವಾಗ ಶ್ರೀ ಸಿದರಾಯ ಖಡಕಿ ಹಾಗೂ ಶ್ರೀ ಭೀಮಸಿಂಗ ರಜಪೂತ ಎಲ್ಲ ಸಹಾಯ ನೀಡಿ ಅವರ ಅನುಷ್ಠಾನಕ್ಕೆ ಸಹಾಯ ಮಾಡಿದರು. ಇದರಿಂದ ಗುರುಗಳ ಮನಸ್ಸಿಗೆ ಸಾಳುಂಕೆ ಅವರ ಕುರಿತು ನೋವು ಉಂಟಾಗಿ "ನಿನಗೆ ನೀರು ಇಲ್ಲದಂತಾಗಲಿ" ಎಂದು ಶಾಪ ಕೊಟ್ಟಾಗ ಅವರ ಶಾಪದಿಂದ ಅವರ ಭಾವಿಯ ಜಲವೆಲ್ಲ ಬತ್ತಿ ಹೋಯಿತು.

ಇನ್ನೊಂದು ಸಂದರ್ಭ ಕೊಟ್ಟಲಗಿಯಲ್ಲಿ ಜರುಗಿತು. ಕೊಟ್ಟಲಗಿಯಲ್ಲಿ ಶ್ರೀ ಸಿದ್ದಣ್ಣ ಸಂಖ ಅವರ ಮನೆಯಲ್ಲಿ ಅನುಷ್ಠಾನ ಮಾಡುವಾಗ ಬಿಡದೆ ಒಂದು ದಿನ ಮಳೆ ಶುರುವಾಯಿತು. ಹೊರಗೆ ಹೋಗಲು ಅವಕಾಶವೇ ಇಲ್ಲದಾಯಿತು. ಗುರುಗಳಿಗೆ ಬಾಳೆಹಣ್ಣು ಇಲ್ಲವೆಂಬ ಕೊರಗಿನಿಂದ ಡಾ॥ ಸಿದ್ದಣ್ಣ ಸಂಖ ಹಾಗೂ ಅವರ ಧರ್ಮಪತ್ನಿ ಮಹಾದೇವಿ ಮತ್ತು ಇನ್ನೊಬ್ಬ ಭಕ್ತರಾದ ಶ್ರೀ ಮಹಾದೇವ ಹಟಗಾರ ಆಲೋಚನಾ ಮಗ್ನರಾಗಿದ್ದರು. ಇದೇ ಆಲೋಚನೆ ಮಾಡುತ್ತ ಗುರುಗಳು ಅನುಷ್ಠಾನಕ್ಕೆ ಕುಳಿತ ಸ್ಥಳಕ್ಕೆ ಬರುತ್ತಾರೆ. ಅವರಿಗೆ ಆಗಾಧ ಆಶ್ಚರ್ಯವೊಂದು ಕಾದಿತ್ತು. ಅದೇನೆಂದರೆ ಯಾವ ಗುರುಗಳಿಗೆ ಒಂದು ಹೊತ್ತಿಗೆ

ಬಾಳೆಹಣ್ಣು ದೊರೆಯಲಿಲ್ಲವೆಂದು ವ್ಯಥೆ ಪಡುತ್ತಿದ್ದರೋ ಅವರ ಮುಂದೆಯೇ ತುಂಬಿದ ಒಂದು ಬುಟ್ಟಿಯಲ್ಲಿ ಬಾಳೆಹಣ್ಣುಗಳು ಪ್ರತ್ಯಕ್ಷವಾಗಿದ್ದವು. ಗುರುಗಳಿಗೆ ಈ ಸಮಯದಲ್ಲಿ ಆಶ್ಚರ್ಯದ ಈ ಸನ್ನಿವೇಶದ ಕುರಿತು ಪ್ರಶ್ನಿಸಿದಾಗ ಗುರುಗಳು ಲಕ್ಷ್ಮಿಯೇ ತಂದು ಕೊಟ್ಟಳು ಎಂದು ಉತ್ತರಿಸಿದರು. ಎಲ್ಲರಿಗೂ ಪರಮಾಶ್ಚರ್ಯವಾಯಿತು.

ಅವರು ಅತ್ಯಂತ ಸರಳ ಜೀವನ ನಡೆಸುವ ವ್ಯಕ್ತಿಗಳಾಗಿದ್ದರು. ಇವರ ವೇಷ, ಭೂಷಣವೆಂದರೆ ಖಾದಿ ಅಂಗಿ, ಲುಂಗಿ, ರುಮಾಲು ಧರಿಸುತ್ತಿದ್ದರು. ಜಾತಿಮತ ಪಂಥವೆನ್ನದೇ ಎಲ್ಲರೊಡನೆ ಬೆರೆಯುತ್ತಿದ್ದರು.

ಬೋಧನೆಗಳು: "ಪುಸ್ತಕದಲ್ಲಿಂದ ಮಸ್ತಕದಲ್ಲಿಟ್ಟುಕೊಂಡು ಹಾಳಾಗಬೇಡಿ; ಸ್ವತಃ ಅನುಭವ ಪಡೆಯಿರಿ" ಎಂದು ಬೋಧಿಸುತ್ತಿದ್ದರು. ದೇವರು ಎಲ್ಲಿಯೂ ಇಲ್ಲ; ನಿನ್ನಲ್ಲಿಯೇ ಇದ್ದಾನೆ. ನಿನ್ನ ಬಿಟ್ಟು ದೇವರಿಲ್ಲ. ಒಳ್ಳೆಯ ನಡತೆ ರೂಢಿಸಿಕೊಳ್ಳಿ. ದಾನ ಧರ್ಮ ಮಾಡಿರಿ. ಧಾರ್ಮಿಕ ಕಾರ್ಯಗಳಿಗೆ ಧಾರಾಳವಾಗಿ ದಾನಮಾಡಿ; ಜಿಪುಣತನ ಮಾಡಬೇಡಿ. ಪುರಾಣ ಸಪ್ತಾಹ ಕಾರ್ಯಗಳಿಗೆ ಹೋಗಿ ಎಂದು ಬೋಧಿಸುತ್ತಿದ್ದರು.

ಆಹಾರ ವಿಹಾರ ಪದ್ಧತಿ: ಸರಳ ಜೀವಿಗಳಾಗಿದ್ದರು. ಗುರುಗಳ ಆದೇಶದ ಪ್ರಕಾರ ರೊಟ್ಟಿ ಮತ್ತು ಖಾರನ್ನು ಸೇವಿಸುತ್ತಿದ್ದರು. ದ್ರಾಕ್ಷಿ, ಬಾಳೆಹಣ್ಣು ಏನೂ ಸೇವಿಸುತ್ತಿರಲಿಲ್ಲ. ಹಾಲೂ ಕೂಡ ವರ್ಜ್ಯವಾಗಿತ್ತು. ಕೇವಲ ಎಂದೋ; ಒಮ್ಮೆ ಯಾರೋ ಕೊಟ್ಟರೆ ಒಂದು ಗ್ಲಾಸು ಮಜ್ಜಿಗೆ ಮಾತ್ರ ಸ್ವೀಕರಿಸುತ್ತಿದ್ದರು.

ಎಲ್ಲಿಯೇ ಪ್ರವಾಸಕ್ಕೆ ಹೋದರೂ ಎಂದೂ ಯಾರಿಂದಲೂ ಹಣ ಹೆಚ್ಚಿಗೆ ಪಡೆಯುತ್ತಿರಲಿಲ್ಲ. ಕೇವಲ ಮುಂದಿನ ಊರಿಗೆ ಹೋಗುವಷ್ಟು ಹಣ ಕೇಳಿ ಪಡೆಯುತ್ತಿದ್ದರು. ಹೆಚ್ಚಿಗೆ ಯಾರೇ ಹಣ ಕೊಟ್ಟರೂ ಒಂದು ರೂಪಾಯಿ ಕೂಡ ಸಂಗ್ರಹಿಸುತ್ತಿರಲಿಲ್ಲ. ಸಂಸಾರಿಕರು ತಪ್ಪು ಮಾಡಿದ ವಿಚಾರ ಗುರುಗಳ ಗಮನಕ್ಕೆ ತಂದರೆ; ನೀನು ಎಷ್ಟು ದಿನ ತಪ್ಪು ಮಾಡಾಂವ, ಒಂದ ದಿನಾ ನೀನ ತಿಳದ ಎಲ್ಲಾ ಬಿಡತಿ, ದೇವರ ಎಲ್ಲಾ ಚೊಲೊ ಮಾಡ್ತಾನ ಅಂತ ಹೇಳುತ್ತಿದ್ದರು.

ಕ್ರಿ.ಶ. ೧೯೬೨ ರಲ್ಲಿ ಅವರು ಕೊನೆಯುಸಿರೆಳೆದ ಮೇಲೆ; ಅವರ ಸಮಾಧಿಯನ್ನು ಖವಟಗಿ ಮುತ್ಯಾರವರ ಮಠದ ಹತ್ತಿರ ಮಾಡಲಾಯಿತು. ಏಕೆಂದರೆ ತಮ್ಮ ಜೀವಿತಾವಧಿಯಲ್ಲಿ ಖವಟಗಿ ಮುತ್ಯಾರವರ ಮಠದಲ್ಲಿಯೇ ಸುಮಾರು ಹತ್ತು ವರ್ಷಗಳವರೆಗೆ ವಾಸವಾಗಿದ್ದರು. ಅವರ ಮಠದ ನಿರ್ಮಾಣ ಕಾರ್ಯ ಡಾ॥ ಸಿದ್ದಣ್ಣ ಸಂಖ ಹಾಗೂ ಶ್ರೀ ಭೀಮಸಿಂಗ ರಜಪೂತ ಸಾ॥ ಕೊಟ್ಟಲಗಿ ಇವರಿಬ್ಬರೂ ನೆರವೇರಿಸಿದ್ದಾರೆ.

ದೇವಾಲಯ ನಿರ್ಮಾಣದ ನಂತರ ಅವರು ಮಹಾರಾಷ್ಟ್ರದ ರಾಜಾರಾಮ ಕಾಪಸಗಡ; ವ್ಹಾಳವಾ ತಾಲೂಕದಲ್ಲಿರುವ ಭಕ್ತರ ಸ್ವಪ್ನದಲ್ಲಿ ನೀನು ಶಿವಲಿಂಗ ಹಾಗೂ ಬಸವಣ್ಣನನ್ನು ತಂದು ಕೂಡಿಸು ಎಂದಾಗ; ಆತ ಗಡಬಡಿಸಿ ಅವರೆಲ್ಲ ಒಂದು ಶಿವಲಿಂಗ ಬಸವಣ್ಣನನ್ನು ತಂದು ಕೂಡ್ರಿಸಿದ್ದು ಪವಾಡವೇ ಸರಿ.[೮]

ಶ್ರೀ ಕವಟಗಿ ಮುತ್ಯಾ

ಶ್ರೀ ಕವಟಗಿ ಮುತ್ಯಾ ಎಂದು ರೂಢನಾಮವನ್ನು ಹೊಂದಿದ ಇವರ ನಿಜನಾಮ ಭೀಮಣ್ಣ, ಇವರ ಸ್ವ ಗ್ರಾಮ ಬಿಜಾಪೂರ ತಾಲೂಕಿನ ಕವಟಗಿ ಗ್ರಾಮ. ಹೀಗಾಗಿ ಇವರನ್ನು ಕವಟಗಿ ಮುತ್ಯಾ ಎಂದೇ ಗುರುತಿಸಿರುವದು ಕಂಡುಬರುತ್ತದೆ. ಇವರ ಗುರುಗಳು ಶ್ರೀ ಕುಬೇರಪ್ಪ ಗುರುಸಿದ್ದಪ್ಪ ಕುಂಬಾರ ಸಾ॥ ಕೋಟ್ಯಾಳ ತಾ॥ಜಿ॥ ಬಿಜಾಪೂರ. ಇವರ ವೈಶಿಷ್ಟ್ಯಪೂರ್ಣ ನಡುವಳಿಕೆಯೆಂದರೆ ಜಾತ್ಯಾತೀತ ಮನೋಭಾವ. ಈ ಹಿನ್ನಲೆಯನ್ನು ಸಮರ್ಥಿಸುವಂತೆ ಇವರು ಉಪ್ಪಾರ ಜನಾಂಗದವರಾಗಿದ್ದರೂ; ಕುಂಬಾರ ಜನಾಂಗದ ಶ್ರೀ ಕುಬೇರಪ್ಪರವರನ್ನು ಗುರುಗಳನ್ನಾಗಿ ಸ್ವೀಕರಿಸಿದರು.

ಶ್ರೀ ಕವಟಗಿ ಮುತ್ಯಾರವರು ದೇಶ ಸಂಚಾರಿಗಳಾಗಿದ್ದವರು. ಕೇವಲ ಕೌಪೀನ ದಾರಿಗಳಾಗಿ, ಸ್ಮಶಾನವಾಸಿಗಳಾಗಿದ್ದವರು. ಶವ ಸುಟ್ಟ ನಂತರ ಸಿಗುವ 'ಬೂದಿಯನ್ನು' ಮೈಗೆ ಬಳಿದುಕೊಂಡು ವಾಸಮಾಡುವ ವಿಶಿಷ್ಟ ವಿಚಿತ್ರ ಸ್ವಭಾವದವರು ಮತ್ತು ಪವಾಡ ಪುರುಷರಾಗಿದ್ದರು.

ಅವರು ಮಾಡಿದ ಪವಾಡವೊಂದನ್ನು ವಕ್ತೃಗಳಿಂದ ಸಂಗ್ರಹಿಸಲಾಗಿದೆ. ಅವರು ಕೊಟ್ಟಲಗಿಯ ಭಕ್ತರನ್ನು ಶ್ರೀಶೈಲ ಯಾತ್ರೆಗೆ ಹೋಗುವ ಸಲುವಾಗಿ ಎಲ್ಲರನ್ನು ಬೀಳ್ಕೊಟ್ಟು ಕಳುಹಿಸಿದರು. ಗ್ರಾಮದ ಜನರು ಒಟ್ಟಿಗೆ ಬಸ್ಸಿಗೆ ಹೋಗಿದ್ದವರು; ಆಶ್ಚರ್ಯ ಪಡುವಂತ ಘಟನೆಯೊಂದು ಶ್ರೀಶೈಲದಲ್ಲಿ ಕಾದಿತ್ತು. ಅದೇಂದರೆ ಊರಲ್ಲಿಯೇ ಇದ್ದು ಇವರೆಲ್ಲರನ್ನು ಬೀಳ್ಕೊಟ್ಟ ಕವಟಗಿ ಮುತ್ಯಾ ಶ್ರೀಶೈಲದಲ್ಲಿ ಇವರಿಗಿಂತಲೂ ಮೊದಲು ಪ್ರತ್ಯಕ್ಷವಾಗಿದ್ದರು. ಕಂಡವರೆಲ್ಲರೂ ಆಶ್ವರ್ಯಪಡುವಂತ ಪವಾಡವೊಂದನ್ನು ಅವರು ಮಾಡಿದ್ದರು.

ಕೊಟ್ಟಲಗಿಯಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ಹಳೆಯ ದೇವಾಲಯ. ಕಲಾಲಿಂಗೇಶ್ವರ ದೇವಾಲಯದಲ್ಲಿ ಯಾವತ್ತೂ ವಾಸವಿರುತ್ತಿದ್ದರು. ಇವರು ವಾಕ್ ಸಿದ್ದಿ ಪುರುಷರು ಹೌದು. ಅವರು ಹೇಳಿದಂತೆ ಹಲವು ಘಟನೆಗಳು ನಡೆದ ಉದಾಹರಣೆಗಳು ಕೊಟ್ಟಲಗಿ ಗ್ರಾಮದಲ್ಲಿ ಜೀವಂತ ನಿದರ್ಶನಗಳಾಗಿವೆ. ಇವರು ಪ್ರತ್ಯಕ್ಷ ಕಂಡವರು ಹೇಳುವಂತೆ ನಿತ್ಯ ಪೂಜೆ ಮಾಡುವಾಗ ಕುಳಿತ ಸ್ಥಳದಿಂದ ಕನಿಷ್ಠ ಮೂರು ಫೂಟ ಎತ್ತರದವರೆಗೆ ಕೇವಲ ಕಾಲುಗಳ ಹೆಬ್ಬೆರುಳುಗಳನ್ನು ಊರಿ ಧ್ಯಾನಾಸಕ್ತರಾಗಿರುತ್ತಿದ್ದರು.

ಇನ್ನೊಂದು ಪವಾಡ ಇವರಿಂದ ಜರುಗಿದ್ದು ಪ್ರಚಲಿತವಿದೆ. ಬಿಜಾಪೂರ ತಾಲೂಕಿನ ಕಾಖಂಡಕಿ ಗ್ರಾಮದಿಂದ ಒಂದು ಸಾರಿ ಬಬಲೇಶ್ವರದ ಮುಖಾಂತರ ಜಮುಖಂಡಿ ಮಾರ್ಗದಲ್ಲಿರುವ ಎಕ್ಕುಂಡಿ ಗ್ರಾಮಕ್ಕೆ ಹೋಗುವ ಸಂದರ್ಭ ಇವರಿಗೆ ಬಂದಿತ್ತು. ಆವಾಗ ಬಸ್ಸಿನಲ್ಲಿರುವ ನಿರ್ವಾಹಕನಿಗೆ ತನ್ನನ್ನು ಕರೆದೊಯ್ಯುವಂತೆ ವಿನಂತಿಸಿದರು. ಇವರ ಸ್ವರೂಪವನ್ನು ಕಂಡು ಕರೆದೊಯ್ಯಲು ನಿರಾಕರಿಸಿದನು. ಆಗ ಇವರಿಗೆ ಕೋಪ ಬಂತು. ಕವಟಗಿ ಮುತ್ಯಾರವರ ಕೋಪದಿಂದ ನಿನ್ನ ಗಾಡಿಗೆ ಬೆಂಕಿ ಹತ್ತುತ್ತದೆ ಎಂದು ಶಾಪ ಕೊಟ್ಟರು ಮತ್ತು ನಿನಗಿಂತ ನಾನು ಮುಂದೆ ಹೋಗುತ್ತೇನೆಂದು ಶಪಥ ಮಾಡಿದರು. ಹಾಗೆಯೇ ಬಸ್ಸಿನ ಹಿಂದೆ ಓಡಲು ಆರಂಭಿಸಿದರು. ವಿಚಿತ್ರವೆಂದರೆ ಯಾರೋ ಒಬ್ಬ ವ್ಯಕ್ತಿ ಬಸ್ಸಿನಲ್ಲಿ ಸ್ಫೋಟಕ

ವಸ್ತುವಾದ ಸುಣ್ಣವನ್ನು ತಂದಿದ್ದನಂತೆ. ಅದಕ್ಕೆ ನೀರು ತಗಲಿ ಬೆಂಕಿ ಉದ್ಭವವಾಗಿ ಬಸ್ಸಿಗೆ ಬೆಂಕಿ ತಗುಲಿತು. ಉರಿಯಲು ಆರಂಭಿಸಿತು. ಆಗ ಇವರು ಮುಂದೆ ದಾಟಿ ಹೋದ ಪ್ರಸಂಗವು ಇಂದಿಗೂ ಪ್ರಚಲಿತವಿದೆ.

ಇವರು ಕರ್ನಾಟಕವಷ್ಟೆ ಅಲ್ಲದೇ, ಹಿಮಾಲಯವನ್ನು ಒಳಗೊಂಡಂತೆ ಇಡೀ ಭಾರತದಾದ್ಯಂತ ದೇಶ ಸಂಚಾರ ಮಾಡಿದ್ದು ಕಂಡುಬರುತ್ತದೆ. ಹಲವಾರು ಬಾರಿ ದೇಶದೆಲ್ಲೆಡೆ ಪ್ರದಕ್ಷಿಣೆ ಮಾಡಿ ಬಂದಿದ್ದರೆಂಬ ಪ್ರತೀತಿ ಇದೆ.

ಇವರ ಮರಣದ ಸನ್ನಿವೇಶವು ಕೂಡ ವಿಚಿತ್ರವಾಗಿತ್ತು. "ಶರಣರನ್ನು ಮರಣದಲ್ಲಿ ನೋಡಾ" ಎನ್ನುವಂತೆ ಇಚ್ಚಾ ಮರಣಿಗಳಂತೆ ಮೊಹರಂ ಹಬ್ಬ, ಹೋಳಿ ಹುಣ್ಣಿಮೆ ಎರಡೂ ಕೂಡಿ ಆಚರಿಸುವ ಸಂದರ್ಭ ಒದಗಿ ಬಂದಿತ್ತು. ಅವರು ಈ ಸಂದರ್ಭವನ್ನು ತಮ್ಮದೇ ಆದ ಭಾಷೆಯಲ್ಲಿ 'ಮಂಡ್ಯಾ, ಲೆಂಡ್ಯಾ, ಜೇಂಡ್ಯಾ ಕೂಡ್ಯಾವ ನಾನು ಹೋಗುತ್ತೇನೆಂದು' ಹೇಳಿ ಈ ಸಂದರ್ಭದಲ್ಲಿ ನೀವು ಅಲಾಬ ದೇವರ ಎಬ್ಬಿಸುದಿಲ್ಲ, ನನ್ನ ಸೇವಾನ ನೀವು ಮಾಡಬೇಕು ಎಂದು ಹೇಳಿ ಮುಂಚೆಯೇ ಸಾವಿನ ಸುಳಿವನ್ನು ನೀಡಿದ್ದು ಕಂಡುಬರುತ್ತದೆ. ಅಲ್ಲದೆ ಇದೇ ಸಂದರ್ಭದಲ್ಲಿ ದೇಹ ತ್ಯಾಗವನ್ನು ಮಾಡಿದರು. ವಿಚಿತ್ರವೆಂದರೆ ಮೂರು ಹಗಲು, ಮೂರು ರಾತ್ರಿ ಇವರ ಶವವನ್ನು ಇಟ್ಟರೂ ಶವವು ಒಂದು ಸ್ವಲ್ಪವೂ ಬಾಧಿತವಾಗದೇ ಇದ್ದದ್ದೂ ಗ್ರಾಮದ ಜನರಿಗೆ ಆಶ್ವರ್ಯದ ಸಂಗತಿಯೇ ಆಗಿತ್ತು. ಕೇವಲ ಇಪ್ಪತ್ನಾಲ್ಕು ಗಂಟೆಯಲ್ಲಿ ಶವಗಳು ಕೆಡುವ ಸಂದರ್ಭವಿದ್ದರೂ ಇಲ್ಲಿ ಕೆಡದೇ ಇರುವದು ಅದ್ಭುತ ಆಶ್ವರ್ಯದ ಸಂಗತಿಯೇ ಆಗಿದೆ. ಈಗ ಸುಮಾರು ೪೦ ವರ್ಷದ ಹಿಂದೆಯೇ ವಿಧಿವಶರಾದದ್ದು ಕಂಡುಬರುತ್ತದೆ.

ಪೂರ್ವಾಶ್ರಮದ ಜೀವನ: ಪೂರ್ವಾಶ್ರಮದಲ್ಲಿ ಇವರು ಊರಿನ ಗೌಡರಾಗಿದ್ದು; ಊರಲ್ಲಿ ಎಲ್ಲಿಯೇ ಹೊರಟರು ರಾಜ ಮರ್ಯಾದೆಯಂತೆ ಕತ್ತಿ, ಕಟಾರಿ, ಹಗಲು ದಿವಟಿಗೆ ಹೀಗೆ ಗೌರವಸ್ಥ ಮನೆತನದ ಭೀಮಣ್ಣ ಗೌಡರಾಗಿದ್ದವರು. ಇವರ ತಂದೆ ಬಾಪುಗೌಡ. ಇವರಿಗೆ ಇಬ್ಬರು ಸಹೋದರ, ಒಬ್ಬ ಸಹೋದರಿಯರಿದ್ದರು. ಸಹೋದರ ಶಿವಪ್ಪ, ತಂಗಿಯ ಹೆಸರು ಐರಾವತಿ. ೬೦೦ ಎಕರೆ ಜಮೀನು ಹೊಂದಿದ್ದರು. ಇಷ್ಟೆಲ್ಲ ಆಸ್ತಿ, ಆಧಿಕಾರ ಇದ್ದರೂ ಜೀವನದಲ್ಲಿ ವಿರಕ್ತಿಯನ್ನು, ನಿರಾಶಾ ಭಾವವನ್ನು ತಾಳಿ ಸಾಧುಗಳಾಗಿದ್ದು ಕಂಡುಬರುತ್ತದೆ.

ಇವರ ದೇವಾಲಯಕ್ಕೆ ಶ್ರೀ ರಾವಸಾಬಗೌಡ ಪರಸಗೌಡ ಪಾಟೀಲ ಅವರು ಸ್ಥಳ ದಾನ ನೀಡಿದ್ದಾರೆ. ೧೯೯೨ ರಲ್ಲಿ ನಿರ್ಮಾಣ ಮಾಡಿದ ದೇವಾಲಯವು ನೆಲಮಾಳಿಗೆಯಲ್ಲಿ ಗರ್ಭಗುಡಿ ಮುಖಮಂಟಪ ಹೊಂದಿದ್ದು, ಗರ್ಭಗುಡಿಯಲ್ಲಿ ಶಿವಲಿಂಗದ ಸ್ಥಾಪನೆಯಿದೆ.

ವಾಡೆದ ಲಕ್ಷ್ಮಿ ದೇವಾಲಯ

ಈ ದೇವಾಲಯವು ಕೂಡ ಗ್ರಾಮದ ಮುಖ್ಯ ಅಡಳಿತಗಾರರ ಮನೆಯ ದೇವತೆಯಾಗಿದೆ. ಹೆಸರೇ ಸೂಚಿಸುವಂತೆ 'ವಾಡೆ' ಎಂದರೆ ಆಳುವ ನಾಯಕರ ಅರಮನೆ ಎಂದು ಅರ್ಥವಾಗುತ್ತದೆ. ಈ ಹಿನ್ನೆಲೆಯಲ್ಲಿ "ವಾಡೆದ ಲಕ್ಷ್ಮಿ" ಅರಮನೆಗೆ ಸಂಬಂಧಿಸಿದ ದೇವತೆ ಎನ್ನುವುದು ಸ್ಪಷ್ಟವಾಗುತ್ತದೆ.

ಗೌಡರ ಮನೆಯ ದೇವತೆಯಾಗಿದೆ ಎನ್ನುವದನ್ನು ಆ ಮನೆಯವರು ಗೌರವಾದರದಿಂದ ನಡೆದುಕೊಳ್ಳುವುದರಿಂದಲೇ ತಿಳಿದುಕೊಳ್ಳಬಹುದಾಗಿದೆ. ಗೌಡರ ಮನೆತನದ ದೈವವಾಗಿದ್ದ ಲಕ್ಷ್ಮಿಯ ದೇವಸ್ಥಾನ ಇಂದು ಸಾಕಷ್ಟು ಊರ್ಜಿತಗೊಂಡಿದೆ. ಕಲ್ಲಿನಿಂದ ನಿರ್ಮಾಣವಾದ ದೇವಾಲಯದಲ್ಲಿ ಲಕ್ಷ್ಮಿ ದೇವಿಯ ಕಲ್ಲಿನ ವಿಗ್ರಹ ಸ್ಥಾಪಿಸಲಾಗಿದೆ. ಇತ್ತೀಚೆಗೆ ಸುವರ್ಣ ಗ್ರಾಮೋದಯ ಯೋಜನೆಯಲ್ಲಿ ದೇವಾಲಯದ ಮುಂದೆ ಮಂಟಪವನ್ನು ನಿರ್ಮಿಸಲಾಗಿದೆ. ಇದು ಗೌಡರ ಓಣಿಯಲ್ಲಿ ಊರಿನ ಎಲ್ಲಮ್ಮ ದೇವಸ್ಥಾನದ ಹತ್ತಿರ ಸ್ಥಾಪಿತವಾಗಿದೆ. ಊರಿನ ಗೌಡರ ಓಣಿಯಲ್ಲಿನ ಎಲ್ಲ ಜನ ಭಯ ಭಕ್ತಿಯಿಂದ ಈ ದೇವಿಗೆ ನಡೆದುಕೊಳ್ಳುವುದು ಕಂಡುಬರುತ್ತದೆ.

ಶ್ರೀ ಸಿದ್ಧಾರೂಢ ಸ್ವಾಮಿಗಳ ಮಠ

ಸಿದ್ಧಾರೂಢ ಸ್ವಾಮಿಗಳ ದೇವಾಲಯವು ೧೯೮೦ರಲ್ಲಿ ಸ್ಥಾಪನೆಯಾಗಿದ್ದು ಕಂಡುಬರುತ್ತದೆ. ಈ ದೇವಾಲಯ ನಿರ್ಮಾಣ ಮಾಡಿದ ಶ್ರೀ ಹಣಮಂತಪ್ಪ ಮಹಾರಾಜರು ಮೂಲತಃ ಜಮುಖಂಡಿ ತಾಲೂಕ ಬಿದರಿ ಗ್ರಾಮದವರು. ತಮ್ಮ ಸ್ವತಃ ಅಕ್ಕನವರಾದ ಯಲ್ಲವ್ವ ಸುಬ್ರಾವ ಬಿದರಿಯವರಿಗೆ ಗಂಡು ಸಂತಾನವಿರದ ಕಾರಣ; ಅವರ ಮನೆಗೆ ಮಗನಾಗಿ ಬಂದು ಅವರ ಆಸ್ತಿ ನೋಡಿಕೊಳ್ಳಲು ೧೯೨೫ರಲ್ಲಿ ಆಗಮಿಸಿದರು. ಅದರ ನಂತರ ಯಲ್ಲವ್ವನವರ ಇಬ್ಬರು ಹೆಣ್ಣು ಮಕ್ಕಳು ೧) ಬಾಯಕ್ಕ ೨) ಬಾಳವ್ವನವರು. ಇಬ್ಬರಲ್ಲಿ ಕಿರಿಯವರಾದ ಬಾಳವ್ವನವರನ್ನು ಶ್ರೀ ಹನುಮಂತಪ್ಪನವರಿಗೆ ಮದುವೆ ಮಾಡಿಕೊಟ್ಟರು. ಹಣಮಂತಪ್ಪನವರಿಗೆ ಕೊಟ್ಟಲಗಿಯಲ್ಲಿರುವ ಶ್ರೀ ಬಸವಾರೂಢರ ಜೊತೆ ಪರಿಚಯವಾಯಿತು. ಇವರಿಗೆ ಆಧ್ಯಾತ್ಮದ ಕಡೆಗೆ ಒಲವು ಮೂಡಿತು. ಶ್ರೀ ಬಸವಾರೂಢರು ಸಿದ್ಧಾರೂಢರ ಸಂಪ್ರದಾಯ ಆಚರಣೆ, ಸಿದ್ಧಾಂತಗಳಲ್ಲಿ ಒಲವು ಇಟ್ಟುಕೊಂಡು ಶಾಸ್ತ್ರ, ಪುರಾಣ, ಪ್ರವಚನ ಮುಂತಾದ ಕಾರ್ಯಕ್ರಮಗಳನ್ನು ಶ್ರೀ ಬಸವಾರೂಢರು ಆಚರಿಸಿಕೊಂಡು ಬರುತ್ತಿದ್ದರು. ಆ ಎಲ್ಲ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಆ ಮೂಲಕ ಪ್ರೇರಿತರಾಗಿ ಆಧ್ಯಾತ್ಮದಲ್ಲಿ ಹಣಮಂತಪ್ಪನವರು ಒಲವು ಬೆಳೆಸಿಕೊಂಡರು.

ಬಸವಾರೂಢರ ಮರಣಾ ನಂತರ ಶ್ರೀ ಹಣಮಂತಪ್ಪನವರು ಚಿಕ್ಕಲಕಿ, ಕವಟಗಿ, ತೊದಲಬಾಗಿ, ಅಡಿಹುಡಿ, ಆಲಬಾಳ, ಹುಲ್ಯಾಳ, ಸಿಂದಗಿ ತಾಲೂಕ ಪಡಗಾನೂರ, ಇಂಡಿ, ಅಥಣಿ ತಾಲೂಕ ಪಾರ್ಥನಳ್ಳಿ ಹೀಗೆ ಹಲವಾರು ಊರುಗಳನ್ನು ಸಂಚರಿಸಿ ಭಕ್ತಿ ಪ್ರಚಾರ ಕೈಗೊಂಡರು. ಈ ಹಿನ್ನಲೆಯಲ್ಲಿ ಆಧ್ಯಾತ್ಮಿಕ ಹಂಬಲವುಳ್ಳ ಹಣಮಂತಪ್ಪನವರು ಶ್ರೀ ಸಿದ್ಧಾರೂಢರನ್ನು ದೈವವಾಗಿರಿಸಿಕೊಂಡವರು. ಹೀಗೆ ಸಿದ್ಧಾರೂಢರ ಕುರಿತ ಅದ್ವಿತೀಯ ಪ್ರೇಮವನ್ನಿಟ್ಟುಕೊಂಡ ಇವರು ಶ್ರೀ ಸಿದ್ಧಾರೂಢರ ಮಂದಿರವನ್ನು ೧೭.೦೮.೧೯೮೦ರಲ್ಲಿ ಸ್ಥಾಪಿಸಿದರು. ಈ ಮಂದಿರ ಸ್ಥಾಪನೆಗೆ ಕೊಟ್ಟಲಗಿ ಹಾಗೂ ಮಹಾರಾಷ್ಟ್ರದ ಮಿರಜ ಗ್ರಾಮದ ಭಕ್ತರ ಸಹಾಯ ಹಾಗೂ ತಮ್ಮ ಆಧ್ಯಾತ್ಮಿಕ ಸೇವೆಯಲ್ಲಿ ಬಂದ ಕಾಣಿಕೆ ಎಲ್ಲವನ್ನು ಮಠದ ಜೀರ್ಣೋದ್ಧಾರಕ್ಕಾಗಿ ವಿನಿಯೋಗಿಸಿದರು. ಶ್ರೀ ಹಣಮಂತಪ್ಪನವರು ನಿರ್ಮಿಸಿದ ಮಂದಿರದ ಹೊರತಾಗಿ ಇಂದು ಸುವರ್ಣ ಗ್ರಾಮೋದಯ ಯೋಜನೆಯಲ್ಲಿ ದೇವಸ್ಥಾನ ಸಾಕಷ್ಟು ಊರ್ಜಿತಾವಸ್ಥೆಗೆ ಬರುತ್ತಿದೆ. ಈ ದೇವಾಲಯ ಗರ್ಭಗುಡಿ ಸಿದ್ಧಾರೂಢರ ಮೂರ್ತಿ ಮತ್ತು

ಮಂಟಪ, ಶಿಖರ ಹೀಗೆ ಭೌತಿಕವಾಗಿ ಸುಂದರವಾದ ಭವ್ಯ ಮಂದಿರವಾಗಿ ಇಂದು ನಿರ್ಮಾಣಗೊಂಡಿದೆ.

ಶ್ರೀ ಮಠಕ್ಕೆ ಶ್ರೀ ಹಣಮಂತಪ್ಪನವರ ಹಿರಿಯ ಸಹೋದರಿ ಯಲ್ಲವ್ವನವರು ಒಂದು ಏಕರೆ ಜಮೀನು ಕಾಣಿಕೆ ಕೂಡ ನೀಡಿದ್ದಾರೆ. ಈ ಕಾರಣದಿಂದ ದೇವಾಲಯ ಅಭಿವೃದ್ಧಿ ಹೊಂದಲು ಕಾರಣವಾಯಿತು. ಆಧ್ಯಾತ್ಮಿಕ ಕೇಂದ್ರವಾಗಿ ಶ್ರೀಮಠ ನಿರಂತರ ಗ್ರಾಮಕ್ಕೆ ತನ್ನ ಕೊಡುಗೆಯನ್ನು ನೀಡುತ್ತಲಿದೆ.

ಶ್ರೀ ಮಲ್ಲಿಕಾರ್ಜುನ ದೇವಸ್ಥಾನ

ಈ ದೇವಸ್ಥಾನವು ಶ್ರೀಶೈಲ ಮಲ್ಲಿಕಾರ್ಜುನನ ಶಾಖೆಯಾಗಿದೆ. ರೂಢಿಯಲ್ಲಿ ಮಲ್ಲಯ್ಯ ಮಲ್ಲಯ್ಯ ಎಂದು ಕರೆಯುವುದು ಉಂಟು. ಈ ದೇವಾಲಯ ಸ್ಥಾಪನೆ ೩೧.೦೯.೨೦೦೨ರಲ್ಲಿ ಆಗಿದೆ. ಈ ದೇವಾಲಯವು ಗ್ರಾಮದ ಆಯಗಾರ ಓಣಿಯಲ್ಲಿದೆ. ಇಟ್ಟಿಗೆ ಸಿಮೆಂಟನಿಂದ ಗ್ರಾಮದ ಭಕ್ತರು ಸೇರಿಕೊಂಡು ಗರ್ಭಗುಡಿ, ಶಿಖರ ನಿರ್ಮಿಸಿದ್ದು ಕಂಡುಬರುತ್ತದೆ. ಸ್ಥಳೀಯ ಶಾಸಕರ ಅನುದಾನದಲ್ಲಿ ಮುಂದಿನ ಮಂಟಪ ಊರ್ಜಿತಗೊಳಿಸಿದ್ದು ಕಂಡುಬರುತ್ತದೆ. ಗ್ರಾಮದ ಮಠಪತಿ ಬಾಂಧವರು ಈ ದೇವಾಲಯದ ಅರ್ಚಕರಾಗಿದ್ದಾರೆ.

ಈ ದೇವಾಲಯವು ಗರ್ಭಗುಡಿ, ಗರ್ಭಗುಡಿಯಲ್ಲಿ ಶಿವಲಿಂಗ, ಗರ್ಭಗುಡಿಯ ಮೇಲೆ ಶಿಖರ ಹಾಗೂ ಗರ್ಭಗುಡಿಯ ಮುಂದೆ ಮಂಟಪವನ್ನು ಹೊಂದಿದೆ. ಗರ್ಭಗುಡಿಯ ಎದುರಿಗೆ ನಂದಿಯ ವಿಗ್ರಹವನ್ನು ಹೊಂದಿದೆ.

ಹಳ್ಳದ ರೇಣುಕಾ (ಯಲ್ಲಮ್ಮದೇವಿ) ದೇವಸ್ಥಾನ

ಹಲವಾರು ತಲೆಮಾರುಗಳ ಹಿಂದೆ ಚನ್ನಮ್ಮ ಮತ್ತು ಬಸಪ್ಪ ಎಂಬ ದಂಪತಿಗಳು ಕುಂದನಾಳ ತಾ॥ ಸೌದತ್ತಿ ಜಿ॥ ಬೆಳಗಾವಿ ಇಲ್ಲಿ ವಾಸವಾಗಿದ್ದರು. ಅವರಿಗೆ ಆರು ಜನ ಗಂಡು ಮಕ್ಕಳಿದ್ದರು ೧) ಭದ್ರಪ್ಪ ೨) ನಾಗಪ್ಪ ೩) ಶಿವಪ್ಪ ೪)ನಿಂಗಪ್ಪ ೫) ರಾಮಣ್ಣ ೬) ಪರಸಪ್ಪ ಇವರು ರೇಣುಕಾ ದೇವಿಯ ಪರಮ ಭಕ್ತರಾಗಿದ್ದರು.

ಇವರುಗಳಿಗೆ ಕುಂದನಾಳ ಗ್ರಾಮದಲ್ಲಿ ನಿಲ್ಲಲು ಅವಕಾಶ ನೀಡದೆ ಇದ್ದಾಗ ಹಾಗೆಯೇ ಸಂಚಾರಿಗಳಾಗಿ ಕಾರಾಜನಗಿ ತಾ॥ ಜತ್ತ ಜಿ॥ ಸಾಂಗಲಿ ಹಾಗೂ ಅಲ್ಲಿಂದ ತೆಲಸಂಗ ತಾ॥ ಅಥಣಿ ಹೀಗೆ ವಿವಿಧ ಕಡೆ ಸಂಚರಿಸಿದರು. ಕೊನೆಗೆ ದೇವಿಯು ಅಲ್ಲಿಯೂ ನಿಲ್ಲಲು ಅವಕಾಶ ನೀಡದೇ ಇದ್ದಾಗ ಕೊಟ್ಟಲಗಿಗೆ ಬಂದು ನೆಲೆಸಿದರು. ನಂತರ ಊರಾಚೆ ಕಂಬಾರ ದಿಬ್ಬ (ಬನ್ನೂರ ಗ್ರಾಮದ ರಸ್ತೆ ಪಕ್ಕ) ಇರುವ ಸ್ಥಳದಲ್ಲಿ ಬಂದು ವಾಸವಾಗಿದ್ದರು. ಊರಿನ ಜನ ನೀವು ಗ್ರಾಮದಲ್ಲಿ ಒಳಗೆ ಬನ್ನಿ ಇಲ್ಲೇಕೆ ವಾಸವಾಗಿರುವಿರಿ ಎಂದು ಕೇಳಿದಾಗ ದೇವಿಯ ಆಜ್ಞೆಯಾಗದೇ ಯಾವ ಸ್ಥಳಕ್ಕೂ ಅಲುಗಾಡುವದಿಲ್ಲ ಎಂದು ಅವರು ಹೇಳಿದರು. ಊರಿನ ಜನ ಒಪ್ಪಿಕೊಂಡು ಅವರಿಗೆ ಅಲ್ಲಿಯೇ ಸಹಾಯ ಮಾಡಿ ಅನುಕೂಲ ಕಲ್ಪಿಸಿಕೊಟ್ಟರು. ನಂತರದಲ್ಲಿ ದೇವಿಯು ಚನ್ನಮ್ಮ ತಾಯಿಯ ಮೈಯಲ್ಲಿ ಉದ್ಭವವಾಗಿ ಈ ಸಹೋದರರಿಗೆ ಊರ ಮುಂದಿನ ಹಳ್ಳ ಹಾಗೂ ದಕ್ಷಿಣದಿಂದ ಬರುವ ಚಿಕ್ಕ ಹಳ್ಳ ಸೇರಿ

ಸಂಗಮವಾದ ಕೂಡಲಸಂಗಮದಲ್ಲಿ ಎಲ್ಲಮ್ಮ ತನ್ನ ಮಂದಿರ ಸ್ಥಾಪನೆ ಮಾಡಲು ಅವಕಾಶ ನೀಡಿದಳು. ಅದರಂತೆ ಅಲ್ಲಿ ಎಲ್ಲಮ್ಮ ದೇವಾಲಯ ಸ್ಥಾಪನೆ ಆಯಿತು.

ಹೀಗೆ ಹಳ್ಳದಲ್ಲಿ ದೇವಾಲಯದ ಸ್ಥಾಪನೆ ಆದ ಮೇಲೆ ಎಷ್ಟೋ ವೇಳೆ ಮಳೆಯಿಂದ ನೀರಲ್ಲಿ ದೇವಾಲಯ ಮುಳುಗುವುದರಿಂದ ಸಮೀಪ ಎತ್ತರದ ಸ್ಥಳದಲ್ಲಿ "ಜಗ" (ದೇವಿಯ ಮೂರ್ತಿ)ದ ಸ್ಥಾನವೆಂದು ಇನ್ನೊಂದು ಪೂಜಾ ಮೂರ್ತಿಯ ಸ್ಥಾಪನೆ ಆಗಿದೆ. ಇದಕ್ಕೆ ಕಾರಣವೆಂದರೆ ಮೇಲಿಂದ ಮೇಲೆ ಮಳೆ ಆಗಿ ಪೂಜಾ ಕಾರ್ಯಕ್ಕೆ ತೊಂದರೆ ಆಗುವುದರಿಂದ; ದೇವಸ್ಥಾನದಲ್ಲಿ ಪೂಜೆಗೆ ಹಳ್ಳದ ನೀರು ತೊಂದರೆ ಮಾಡಬಾರದೆಂಬ ಮುಖ್ಯ ಉದ್ದೇಶವಾಗಿತ್ತು. ಅಲ್ಲದೇ ಪೂಜಾರಿ ವಂಶದ ಜನರೆಲ್ಲ ನವರಾತ್ರಿ ದೀಪಗಳನ್ನು ದೇವಸ್ಥಾನದಲ್ಲಿ ಹಾಕುವುದರಿಂದ ದೇವಸ್ಥಾನದ ಪೂಜಾ ಕೈಂಕರ್ಯಗಳಿಗೆ ನೀರು ತೊಂದರೆ ಮಾಡುತ್ತಿತ್ತು. ಅಕ್ಟೋಬರ-ನವ್ಹಂಬರ ಸಂದರ್ಭದಲ್ಲಿ ಇದು ಸಾಮಾನ್ಯವಾಗಿತ್ತು. ಈ ಕಾರಣ ಪೂಜೆ ಪುನಸ್ಕಾರ ಮಾಡಲು ಅಡ್ಡಿಯಾಗಬಾರದೆಂದು ಈ ತೊಂದರೆ ನೀಗಿಸಲು ಜಗದ ಮನೆಯ ಸ್ಥಾಪನೆ ಮಾಡಲಾಯಿತು.

ದೇವಿ ಸ್ಥಾಪನೆ ಹಾಗೂ ಜಗದ ಮನೆ ಸ್ಥಾಪನೆ ಇರುವ ಸ್ಥಳವನ್ನು ಗ್ರಾಮದ ಜನ ಕಾಣಿಕೆ ನೀಡಿರುವ ವಿಚಾರ ತಿಳಿಯುತ್ತದೆ.

ದೇವಿಯಲ್ಲದೆ ಇನ್ನೂ ಕೆಲವು ದೇವತೆಗಳು ಇಲ್ಲಿ ಪೂಜೆಗೊಳ್ಳುವುದು ಕಂಡುಬರುತ್ತದೆ.

೧. ಮಾತಂಗಿ
೨. ಹುರಕವ್ವ
೩. ಅಗ್ನಿಕುಂಡ (ಹೋಮದ ಕುಂಡ)
೪. ಡಂಗಿ ದೇವರು
೫. ಶಟಕವ್ವ
೬. ಪಾದಗಟ್ಟಿ (ಗ್ರಾಮದಿಂದ ಯಲ್ಲಮ್ಮ ದೇವಸ್ಥಾನಕ್ಕೆ ಬರುವಾಗ ದೇವಿ ನಿಂತುಹೋದ ಸ್ಥಳ)
೭. ಜೋಗುಳ ಬಾವಿ (ಮಳಿ ತೋಟ)

ಊರ ಯಲ್ಲಮ್ಮ

ಗ್ರಾಮದ ಪೂರ್ವಕ್ಕೆ ಮೂರು ಕಿಲೋಮೀಟರ ದೂರದಲ್ಲಿ ಯಲ್ಲಮ್ಮ ದೇವಸ್ಥಾನವಿರುವುದು. ಜನರ ದರ್ಶನಕ್ಕೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಕೊಟ್ಬಲಗಿ ಗ್ರಾಮದ ಗೌಡರ ಓಣಿಯಲ್ಲಿ ರೇಣುಕಾದೇವಿ ದೇವಸ್ಥಾನ ಸ್ಥಾಪನೆಯಾಗಿರುವುದು ಕಂಡುಬರುತ್ತದೆ.

ಹಳ್ಳದ ಯಲ್ಲಮ್ಮ ದೇವಸ್ಥಾನದ ಪೂಜಾ ಕಾರ್ಯದ ನಂತರ ಪೂಜೆಯ ಸಾಮಾನುಗಳನ್ನೆಲ್ಲ ಬನ್ನೂರ ಮನೆತನದ ಜನ ತಮ್ಮ ಮನೆಗಳಲ್ಲಿ ಇಟ್ಟುಕೊಳ್ಳುತ್ತಿದ್ದರು. ದೇವತೆಯ ಪೂಜಾ ಪರಿಕರಗಳನ್ನು ವ್ಯವಸ್ಥಿತವಾಗಿ ಇಡಲು ಸೂಕ್ತ ಸ್ಥಳ ಇಲ್ಲದ ಕಾರಣ, ಮನೆಲ್ಲಿಟ್ಟುಕೊಳ್ಳುವ ಸಂದರ್ಭ ಒದಗಿ ಬಂತು, ಇದರಿಂದ ಕಷ್ಟವಾಗುತ್ತಿತ್ತು. ಶ್ರೀ ಈರಣ್ಣಗೌಡ ಬ. ಪಾಟೀಲ,

ಗುಂಡಪ್ಪ ಆಳೂರ, ಮಲಕಪ್ಪ ಯಳೆಗಾಂವಿ, ಯಲ್ಲಪ್ಪ ತಟ್ಟಿ, ಪೂಜಾರಿಗಳಾದ ಬಸಗೊಂಡ ರಾ. ಬನ್ನೂರ, ಶ್ರೀ ರಾಮಣ್ಣ ಬನ್ನೂರ, ಶ್ರೀ ಸಿದ್ರಾಮ ಬನ್ನೂರ, ಶ್ರೀ ಈರಪ್ಪ ನಾ. ಬನ್ನೂರ, ಶ್ರೀ ಶಂಕರಪ್ಪ ಯ. ಬನ್ನೂರ, ಶ್ರೀ ಈರಪ್ಪ ಬಸಗೊಂಡ ಬನ್ನೂರ, ಶ್ರೀ ಮಲ್ಲಪ್ಪ ಬ. ಬನ್ನೂರ, ಶ್ರೀ ದ್ಯಾವಪ್ಪ ಶಿ. ಬನ್ನೂರ, ಶ್ರೀ ಶಿವಪ್ಪ ಬನ್ನೂರ, ಶ್ರೀ ಅಪ್ಪಾಸಾಬ ಬ. ಬನ್ನೂರ ಇವರೆಲ್ಲ ಸೇರಿ ಜೊತೆಗೆ ಪೂಜಾರಿಗಳು ನೀಡಿದ ದಾನ ರೂಪದ ಜಾಗದಲ್ಲಿ ಈ ದೇವಸ್ಥಾನವನ್ನು ಎಲ್ಲರ ಸಹಕಾರದಿಂದ ನಿರ್ಮಿಸಿರುವದು ಕಂಡುಬರುತ್ತದೆ. ಈ ದೇವಾಲಯ ಕರಿಕಲ್ಲಿನಿಂದ ಪೂರ್ವಾಭಿಮುಖವಾಗಿ ನಿರ್ಮಿಸಿರುವದು ಕಂಡುಬರುತ್ತದೆ.

ದುರ್ಗಾದೇವಿ ದೇವಸ್ಥಾನ

ದುರ್ಗಾದೇವಿಯ ದೇವಸ್ಥಾನ ತುಂಬಾ ಹಳೆಯ ಕಾಲದ ದೇವಸ್ಥಾನವೆಂದು ಕಂಡುಬರುತ್ತದೆ. ಆದರೆ ಇತ್ತೀಚೆಗೆ ಊರ್ಜಿತಗೊಳಿಸಿದ್ದಾರೆ. ಈ ದೇವಸ್ಥಾನವು ಕೊಟ್ಟಲಗಿಯ ದಕ್ಷಿಣ ಭಾಗಕ್ಕೆ ಮಾದರ ಓಣಿಯಲ್ಲಿರುವದು. ಇದನ್ನು ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದೆ. ಕಲ್ಲು ಮಣ್ಣಿನಿಂದ ನಿರ್ಮಿಸಿ ಮೇಲೆ ಸಿಮೆಂಟಿನಿಂದ ಗಿಲಾವ ಮಾಡಲಾಗಿದೆ. ಒಂಬತ್ತು ಸುಂದರವಾದ ಬಣ್ಣದಿಂದ ಅಲಂಕರಿಸಲಾಗಿದೆ. ಗೌರವ್ವ ಭೀಮಪ್ಪ ಮನೆಗೆನಿ ಅರ್ಚಕಿಯಾಗಿ ಕೆಲಸ ಮಾಡುತ್ತಾಳೆ. ದುರ್ಗಾದೇವಿಯು ಮಾದರ ಓಣಿಯ ಆರಾಧ್ಯದೈವವಾಗಿದ್ದಾಳೆ.

ಬ್ರಹ್ಮದೇವರ ದೇವಸ್ಥಾನ

ಈ ದೇವಸ್ಥಾನವು ಬಹಳ ಪ್ರಾಚೀನವಾದುದೆಂದು ತಿಳಿದು ಬರುತ್ತದೆ. ನಿರ್ದಿಷ್ಟ ಸ್ಥಾಪನೆಯ ವರ್ಷವನ್ನು ನಿಖರವಾಗಿ ಹೇಳಲು ಯಾವುದೇ ಮೂಲಾಧಾರಗಳು ಲಭ್ಯವಾಗುತ್ತಿಲ್ಲ. ಸ್ಥಳಿಯ ಜನರ ಪ್ರಕಾರ; ಸಾವಿರಾರು ವರ್ಷದ ಹಳೆಯ ದೇವಸ್ಥಾನವಾಗಿರಬಹುದೆಂದು ಅನಿಸುತ್ತದೆ. ಜನರು ಭರಮದೇವರು ಎಂದು ಕರೆಯುವದು ರೂಢಿ. ಇದು ಗ್ರಾಮದ ಉತ್ತರ ಭಾಗಕ್ಕೆ ಇದೆ. ಕೋಟ್ಯಾಳ ಓಣಿಯ ಜನ, ಮಾಳಿ ಜನಾಂಗದವರು, ಲಿಂಗಾಯತ ಜನರು, ಮುಸ್ಲಿಂ ಜನರು ಎಲ್ಲರೂ ಸೇರಿ ದೇವಾಲಯ ಊರ್ಜಿತಗೊಳಿಸಿದ್ದು ವೈಶಿಷ್ಟ್ಯಪೂರ್ಣವಾಗಿದೆ. ಪೂರ್ವಾಭಿಮುಖವಾಗಿರುವ ದೇವಸ್ಥಾನ ಒಂದು ವಿಶಾಲವಾದ ಕೋಣೆ ಹೊಂದಿದ್ದು ದೇವರ ಗರ್ಭ ಸ್ಥಾನದಲ್ಲಿ ನಿರ್ಮಿಸಿದ ಗದ್ದುಗೆ ಇರುತ್ತದೆ. ಕಲ್ಲು ಮಣ್ಣುಗಳಿಂದ ನಿರ್ಮಿತವಾಗಿದ್ದು; ಇತ್ತೀಚೆಗೆ ಸಿಮೆಂಟ ಬಳಸಿ ಊರ್ಜಿತಗೊಳಿಸಿದ್ದಾರೆ.

ಲಕ್ಷ್ಮಿ ದೇವಸ್ಥಾನ

ಈ ದೇವಸ್ಥಾನವು ಹಳೆಯ ಕಾಲದ್ದಾಗಿದ್ದು; ನಡುಊರ ಲಕ್ಷ್ಮಿ ಎಂದು ಗಾಮದ ಜನ ಕರೆಯುವದು ವಾಡಿಕೆ. ಹೀಗಾಗಿ ಊರ ಜನ ಭಯ ಭಕ್ತಿಯಿಂದ ನಡೆದುಕೊಳ್ಳುವ ದೇವಸ್ಥಾನವು ಆಗಿದೆ. ಈ ದೇವಸ್ಥಾನವು ಕೂಡ ಸುಮಾರು ಏಳೆಂಟು ತಲೆಮಾರುಗಳಷ್ಟು ಪ್ರಾಚೀನತೆಯನ್ನು ಹೊಂದಿದೆ. ಮೊದಲು ತಡಿಗೆ ತೆರನಾಗಿ ಇದ್ದ ಈ ದೇವಾಲಯವನ್ನು ಗ್ರಾಮದ ಬಣಜಿಗ ಜನಾಂಗದವರು ಹಾಗೂ ಗ್ರಾಮದ ಜನರ ಸಹಾಯದಿಂದ ನಿರ್ಮಾಣ ಮಾಡಲಾಗಿದೆ. ಗ್ರಾಮದ ಹಳೆಯ ಚಾವಡಿಯ ಹತ್ತಿರ ಪೂರ್ವಾಭಿಮುಖವಾಗಿ ಈ

ದೇವಸ್ಥಾನವಿದೆ. ಕಲ್ಲಿನಿಂದ ಗರ್ಭಗುಡಿ ಕಟ್ಟಿದ್ದು ಒಳಗಡೆ ಲಕ್ಷ್ಮಿದೇವಿಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಹಾಗೆಯೇ ಇತ್ತೀಚೆಗೆ ಗರ್ಭಗುಡಿಯ ಮುಂಭಾಗದಲ್ಲಿ ಮಂಟಪ ನಿರ್ಮಾಣ ಮಾಡಲಾಗಿದೆ. ಗರ್ಭಗುಡಿಯ ಮೇಲ್ಭಾಗದಲ್ಲಿ ಶಿಖರ ನಿರ್ಮಿಸಲಾಗಿದೆ. ವಿಶೇಷವಾಗಿ ಗ್ರಾಮದ ಬಣಜಿಗ ಜನಾಂಗದವರು ನಿತ್ಯ ಭಯ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಲಕ್ಷ್ಮಿದೇವಿಯ ನಿತ್ಯ ಪೂಜಾ ಕಾರ್ಯಕ್ರಮಗಳನ್ನು ಶ್ರೀಮತಿ ಕಸ್ತೂರಿ ಸಿದ್ದಣ್ಣ ಪೊಪಡಿ ಇವರು ನೆರವೇರಿಸುತ್ತಾರೆ. ಗ್ರಾಮದ ಹಿರಿಯರು ಸೇರಿ ಸಮಿತಿ ರಚಿಸಿಕೊಂಡು; ಎಲ್ಲರೂ ಕಾಣಿಕೆ ಸಂಗ್ರಹಿಸಿ ಜಾತ್ರೆ ನೆರವೇರಿಸುತ್ತಾರೆ.

ಕೋಟಲಿಂಗ ದೇವಾಲಯ

ಈ ದೇವಾಲಯವು ಪ್ರಾಚೀನ ಚಾರಿತ್ರಿಕ ದೇವಾಲಯವಾಗಿದೆ. ಈ ದೇವಾಲಯಕ್ಕೂ ಕೊಟ್ಟಲಗಿ ಇತಿಹಾಸಕ್ಕೂ, ಸ್ಥಳನಾಮಕ್ಕೂ ಅವಿನಾಭಾವ ಸಂಬಂಧ ಇರುವುದು ಕಂಡುಬರುವುದು. ಈ ದೇವಾಲಯದಲ್ಲಿ ಕ್ರಿ.ಶ. ೧೦೨೨ನೇ ಇಸ್ವಿಯ ಕಲ್ಯಾಣಿ ಚಾಲುಕ್ಯರ ಎರಡನೆಯ ಜಯಸಿಂಹನ ಶಾಸನ ಇರುವುದು. ಕೋಟಿಲಿಂಗ ದೇವಸ್ಥಾನದಿಂದ ಕೊಟ್ಟಲಗಿ ಗ್ರಾಮಕ್ಕೆ ಹೆಸರು ಬಂತೆಂಬ ಸ್ಥಳಿಯ ಜನರ ನಂಬಿಕೆಯಾಗಿದೆ. ಅಲ್ಲದೇ ಈ ದೇವಾಲಯವು ಕ್ರಿ.ಶ. ೧೦೨೨ರ ಶಾಸನಕ್ಕೂ ಮತ್ತು ದೇವಾಲಯಕ್ಕೂ ಯಾವದೇ ಸಂಬಂಧವನ್ನು ಹೊಂದಿಲ್ಲವಾದರೂ ದೇವಾಲಯದಲ್ಲಿ ಸ್ಥಾಪಿಸಿರುವುದನ್ನು ಕಂಡಾಗ ಈ ದೇವಾಲಯವು ಕಲ್ಯಾಣ ಚಾಲುಕ್ಯರ ಕಾಲಕ್ಕಿಂತ ಹಿಂದೆಯೇ ಸ್ಥಾಪನೆ ಆಗಿರುವುದು ಕಂಡುಬರುತ್ತದೆ. ಸಂಪೂರ್ಣ ಜೀರ್ಣಾವಸ್ಥೆಯಲ್ಲಿರುವದರಿಂದ ದೇವಸ್ಥಾನದ ಕಲೆ, ವಾಸ್ತುಶಿಲ್ಪ ಗುರುತಿಸಲು ತೊಡಕು ಉಂಟಾಗಿದೆ. ಗರ್ಭಗೃಹ, ಮುಖಮಂಟಪವನ್ನು ಹೊಂದಿದ್ದು ಗರ್ಭಗುಡಿಯಲ್ಲಿ ಎರಡು ಜೋಡಿ ಲಿಂಗಗಳಿವೆ. ಇದೊಂದು ವಿಶೇಷವೇ ಸರಿ. ಈ ದೇವಾಲಯದಲ್ಲಿ ಮತ್ತೊಂದು ಲಿಂಗವಿದ್ದಿತ್ತೆಂಬ ಪ್ರತೀತಿ ಇದೆ. ಈ ಮೂರು ಲಿಂಗಗಳನ್ನು ಬ್ರಹ್ಮ, ವಿಷ್ಣು, ಮಹೇಶ್ವರರ ಪ್ರತಿರೂಪವೆಂದು ಕರೆದ ತ್ರೈ ಪುರುಷ ದೇವಾಲಯ ಎಂದು ಕಂಡುಬರುತ್ತದೆ. ಆದರೆ ಒಂದು ಲಿಂಗವು ಸ್ಥಳಾಂತರಗೊಂಡಿರುವ ಸಾಧ್ಯತೆ ಇದೆ. ನಂದಿ ವಿಗ್ರಹ ಮತ್ತು ನಾಗಶಿಲ್ಪ ದೇವಾಲಯದಲ್ಲಿವೆ.

ಐತಿಹ್ಯ

ಒಂದು ಐತಿಹ್ಯದ ಪ್ರಕಾರ ರಾಮನು ವನವಾಸದ ಸಂದರ್ಭದಲ್ಲಿ ಗ್ರಾಮಕ್ಕೆ ಆಗಮಿಸಿದನಂತೆ. ಆತ ಅನೇಕ ಲಿಂಗಗಳನ್ನು ಸ್ಥಾಪಿಸುತ್ತ ಬಂದು; ಗ್ರಾಮಕ್ಕೆ ಸರಿಯಾಗಿ ಒಂದು ಕೋಟಿಲಿಂಗವುಳ್ಳ ದೇವಾಲಯಗಳಾದುವುದಂತೆ. ಅದಕ್ಕೆ ಗ್ರಾಮದ ಈ ದೇವಾಲಯಕ್ಕೆ ಕೋಟಿಲಿಂಗ ದೇವಾಲಯವೆಂದು ಕರೆಯುತ್ತಾರೆ ಎಂಬ ಐತಿಹ್ಯವಿದೆ.

ಅಥಣಿ ತಾಲೂಕಿನ ಸತ್ತಿ ಗ್ರಾಮದಲ್ಲಿಯೂ ಕೂಡ ಒಂದು ಕೋಟಿಲಿಂಗ ದೇವಾಲಯವಿದೆ. ಅಲ್ಲಿಯ ಶಿಲ್ಪಕಲೆ ಹಾಗೂ ವಾಸ್ತುವನ್ನು ಗಮನಿಸಿದಾಗ ಅದು ಕಲ್ಯಾಣಿ ಚಾಲುಕ್ಯರ ಶಿಲ್ಪಶೈಲಿಯನ್ನು ಹೊಂದಿದೆ. ಈ ಕಾರಣದಿಂದ ದೇವಾಲಯವು ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದಾಗಿದೆ.

ಶ್ರೀ ಗಿರಿಮಲ್ಲೇಶ್ವರ ಆಶ್ರಮ

ಶ್ರೀ ಸದ್ಗುರು ಸಮರ್ಥ ಗಿರಿಮಲ್ಲೇಶ್ವರ ಮಹಾರಾಜರು ಮೂಲತಃ ಜಮಖಂಡಿಯವರು. ಜಮಖಂಡಿ ಪೇಟೆಯಲ್ಲಿ ಅವರು ಒಂದು ಕಾಲದಲ್ಲಿ ಬಟ್ಟೆ ವ್ಯಾಪಾರಿಗಳಾಗಿ 'ಕಾಟನ್ ಕಿಂಗ್' ಎಂದು ಹೆಸರು ಪಡೆದವರು. ಅವರು ಜತ್ತ ತಾಲೂಕಿನ ಉಮದಿಯ ಶ್ರೀ ಸದ್ಗುರು ಬಾಹುಸಾಹೇಬ ಮಹಾರಾಜರ ಶಿಷ್ಯರು. ಶ್ರೀ ಗಿರಿಮಲ್ಲೇಶ್ವರರ ಗುರುಗಳಾದ ಭಾವುಸಾಹೇಬ ಮಹಾರಾಜರಿಂದ ಉಪದೇಶ ಪಡೆದಂದಿನಿಂದ ಆಧ್ಯಾತ್ಮದ ಕಡೆಗೆ ಒಲವು ಬೆಳೆಸಿಕೊಂಡರು. ಮುಂದೆ ಲೌಕಿಕವಾಗಿ ವ್ಯಾಪಾರ ವ್ಯವಹಾರಗಳನ್ನೆಲ್ಲ ತ್ಯಜಿಸಿ ಆಧ್ಯಾತ್ಮದಲ್ಲಿ ಉನ್ನತಿಯನ್ನು ಸಾಧಿಸಿದರು. ತಾವೇ ಸ್ವತಃ ಲಕ್ಷಾವಧಿ ಖರ್ಚು ಮಾಡಿ ಶ್ರೀ ಕ್ಷೇತ್ರ ಇಂಚಗೇರಿ ಮಠದಲ್ಲಿ ಶ್ರೀ ಭಾಹುಸಾಹೇಬ ಮಹಾರಾಜರ ದೇವಸ್ಥಾನವನ್ನು ನಿರ್ಮಿಸಿ ಇಂಡಿ ತಾಲೂಕಿನ ಇಂಚಗೇರಿ ಮಠಕ್ಕೆ ಭೌತಿಕ ಸ್ವರೂಪವನ್ನು ನೀಡಿದರು. ಮಹಾನ್ ತ್ಯಾಗಿಗಳು ಇವರು. ಇಂತಹ ಮಹಾನ್ ತಪಸ್ವಿಯ ಶಿಷ್ಯರೆ ಶ್ರೀ ಸದ್ಗುರು ಮಾಧವಾನಂದ ಪ್ರಭೂಜೀಯವರು.

ಶ್ರೀ ಮಾಧವಾನಂದರು ತಾವು ಮಠಾಧೀಶರಾದ ಅವಧಿಯಲ್ಲಿ ಕರ್ನಾಟಕ, ಮಹಾರಾಷ್ಟ್ರದಾದ್ಯಂತ ಸಾವಿರಾರು ಮಠಗಳನ್ನು ನಿರ್ಮಿಸಿದರು. ಹಾಗೆಯೇ ನಿರ್ಮಾಣ ಮಾಡಿದ ಮಠಗಳಲ್ಲಿ ಕೊಟ್ಟಲಗಿ ಗ್ರಾಮದ ಶ್ರೀ ಗಿರಿಮಲ್ಲೇಶ್ವರ ಜ್ಞಾನ ಯೋಗಾಶ್ರಮವೂ ಒಂದು. ಈ ಆಶ್ರಮವನ್ನು ಮಾಧವಾನಂದರ ಗುರುಗಳು ಶ್ರೀ ಗಿರಿಮಲ್ಲೇಶ್ವರರಾದುದರಿಂದ ಗುರುಗಳ ಹೆಸರು ನಾಡಿನಾದ್ಯಂತ ಪಸರಿಸಲಿ ಎಂಬ ಉದ್ದೇಶದಿಂದ ಶ್ರೀ ಸಿದ್ಧಲಿಂಗಪ್ಪ ಮುತ್ಯಾ ಬಡವಗೋಳ ಇವರು ಗ್ರಾಮದ ಸದ್ಭಕ್ತರ ಸಹಕಾರದೊಂದಿಗೆ ಸ್ಥಾಪನೆ ಮಾಡಿದರು.

ಶ್ರೀ ಮಾಧವಾನಂದರ ತಂದೆಯವರಾದ ಶ್ರೀ ಶಿವಪ್ರಭು ಮಹಾರಾಜರು ಶಾಂತಮೂರ್ತಿಗಳು ಆತ್ಮಜ್ಞಾನಿಗಳಾಗಿದ್ದರು. ಅವರು ಪ್ರೀತಿ, ವಾತ್ಸಲ್ಯದ ಮೂರ್ತಿಗಳಾಗಿದ್ದರು, ಜ್ಞಾನದ ಸ್ಥಿತಿಯಲ್ಲಿರುತ್ತಿದ್ದರು. ಇವರ ಅಪಾರ ಪ್ರಭಾವ ಮಾಧವಾನಂದರ ದಿವ್ಯ ಪ್ರೇರಣಾ ಶಕ್ತಿಯಿಂದ ಗ್ರಾಮದಲ್ಲಿ ನಿಷ್ಠಾವಂತ ಶಿಷ್ಯರು ನಿರ್ಮಾಣವಾದರು. ಶ್ರೀ ಸಿದ್ಧೇಶ್ವರ ದೇವಾಲಯದಲ್ಲಿ ಮೊದಲು ಶ್ರೀ ಗಿರಿಮಲ್ಲೇಶ್ವರ ಜ್ಞಾನ ಯೋಗಾಶ್ರಮ ಸ್ಥಾಪನೆ ಮಾಡಲಾಗಿತ್ತು. ಈ ಸ್ಥಳಕ್ಕೆ 'ಬಡೋಲಿ' ಎಂದು ಕರೆಯಲಾಗುತ್ತಿತ್ತು.

ಈ ಆಶ್ರಮದಲ್ಲಿಯೇ ಇಂಚಗೇರಿ ಸಂಪ್ರದಾಯದ ನಿಷ್ಠಾವಂತ ಶಿಷ್ಯರಲ್ಲಿ ಗ್ರಾಮದ ಮಹಿಳಾ ಭಕ್ತ ಶಿರೋಮಣಿಗಳು, ಸಾಧಕರು ಕೂಡ ಇದ್ದರು. ಮಾತೋಶ್ರೀ ದೊಡ್ಡವ್ವ ಬಡವಗೋಳ, ತಿಪ್ಪವ್ವ ದೊಡ್ಡನಿಂಗಪ್ಪಗೋಳ, ಕಾಸವ್ವ ಸಾತಪ್ಪಗೋಳ ಹಾಗೂ ಸುಗಲವ್ವ ಡುಮ್ಮನವರ ಇವರುಗಳೇ ಆ ಸಾಧಕರು. ನಿತ್ಯವೂ ಕಾಕಡಾರತಿ, ರಾತ್ರಿ ಭಜನೆ, ಸಪ್ತಾಹ ಕಾರ್ಯಕ್ರಮ ಎಲ್ಲ ನಿತ್ಯನೇಮದಲ್ಲಿ ಭಾಗಿಯಾಗುತ್ತಿದ್ದರು. ಮಾಧವಾನಂದರ ನಂತರ ಗುರುಪುತ್ರಪ್ಪ ಮಹಾರಾಜರು ಇದೇ ಸ್ಥಳದಲ್ಲಿ ಹಲವಾರು ವಾರ್ಷಿಕ ಸಪ್ತಾಹ ನಡೆಸಿಕೊಟ್ಟ ಉದಾಹರಣೆಗಳಿವೆ.

ಕಾಲಾಂತರದಲ್ಲಿ ಆ ಆಶ್ರಮವನ್ನು ವಿಶಾಲವಾಗಿ ವಿಸ್ತರಿಸುವ ಉದ್ದೇಶವನ್ನಿಟ್ಟುಕೊಂಡು ಗ್ರಾಮದ ಹೂತೋಟಕ್ಕೆ ಸ್ಥಳಾಂತರಿಸಲಾಯಿತು. ಗ್ರಾಮದ ಪೂಜಾರಿ ಓಣಿಯ ಹಿರಿಯರ ಒತ್ತಾಸೆ, ಸಹಾಯ, ಸಹಕಾರದಿಂದ ಇಲ್ಲಿ ಆಶ್ರಮ ನಿರ್ಮಾಣ ಮಾಡಿದರು. ಶ್ರೀ ಸಿದರಾಯ ಅಥಣಿ ಈ ನಿರ್ಮಾಣ ಕಾರ್ಯದಲ್ಲಿ ತಮ್ಮ ಭಕ್ತಿ ಸೇವೆಯಿಂದ ಈ ಕಾರ್ಯ ಕೈಗೊಂಡರು. ಗ್ರಾಮದ ಶ್ರೀ ಸಿದರಾಯ ಅಥಣಿಯವರ ಶ್ರೀ ಗಿರಿಮಲ್ಲೇಶ್ವರ ಮಹಾರಾಜರ ಶಿಷ್ಯರಾದ ಕಲ್ಮೇಶ್ವರ ಮಹಾರಾಜರಿಂದ ಉಪದೇಶ ಪಡೆದವರು. ಇವರು ಭಕ್ತಿಯಿಂದ ಆಶ್ರಮದ ಕಟ್ಟಡ ಕೆಲಸ ನಿರ್ಮಾಣ ಮಾಡಿದರು. ಇವರ ಜೊತೆ ಶ್ರೀ ಸಿದ್ದಪ್ಪ ಕುಂಬಾರ ಸಹಕರಿಸಿದರು.

ನಿತ್ಯ ಗ್ರಾಮದ ಇಂಚಗೇರಿ ಸಂಪ್ರದಾಯದ ಜನರ ಹೃದಯ ಸ್ಥಾನವಾಗಿ ಪೂಜಾ ಮಂದಿರ, ಆರಾಧನಾ ಸ್ಥಳವಾಗಿ ಆಶ್ರಮವು ಮಹತ್ವ ಪಡೆದಿದೆ. ನಿತ್ಯ ಕಾಕಡಾರತಿ, ಮುಂಜಾನೆ ಮಧ್ಯಾಹ್ನ ಭಜನೆ, ಸಾಯಂಕಾಲ ರಾತ್ರಿ ಭಜನೆ ಮಾಡುತ್ತ ಸಂಪ್ರದಾಯದ ಸದ್ಭಕ್ತರು ನಿತ್ಯ ಈ ಆಶ್ರಮದಲ್ಲಿ ಆರಾಧನೆ ಮಾಡುತ್ತಾರೆ.

ಶ್ರೀ ಬಸವಾರೂಢರು

ಇವರು ಮೂಲತಃ ಬಿಜಾಪೂರ ತಾಲೂಕಿನ ಸಾರವಾಡ ಗ್ರಾಮದವರು. ಇವರು ಗೃಹಸ್ಥರಾಗಿದ್ದು ಆಧ್ಯಾತ್ಮದಲ್ಲಿ ಉನ್ನತಿಯನ್ನು ಸಾಧಿಸಿದ ಮಹಾನ್ ಪುರುಷರು. ಇವರಿಗೆ ನಾಲ್ಕು ಜನ ಗಂಡು ಮಕ್ಕಳು, ಒಬ್ಬಳು ಹೆಣ್ಣು ಮಗಳು ಇದ್ದರು. ಪೂರ್ವದಲ್ಲಿ ಗ್ರಾಮಕ್ಕೆ ತಮ್ಮ ಉಪಜೀವನಕ್ಕಾಗಿ ಆಗಮಿಸಿದರು. ಅತೀ ಬಡತನದಲ್ಲಿ ಸರಳ ಜೀವನ ಮಾಡಿದವರು.

ಬಸವಾರೂಢರು ಕೇವಲ ಮೂರನೆಯ ತರಗತಿಯವರೆಗೆ ಮಾತ್ರ ಶಿಕ್ಷಣ ಪಡೆದವರು. ಇವರಿಗೆ ಆಧ್ಯಾತ್ಮದಲ್ಲಿ ಒಲವು ಮೂಡಿ ಶ್ರೀ ನಿಜಗುಣ ಶಿವಯೋಗಿಗಳು ಬರೆದ ೧) ಪರಮಾನುಭವ ಬೋಧೆ ೨) ಅನುಭವ ಸಾರ ೩) ವಿವೇಕ ಚಿಂತಾಮಣಿ ೪) ಕೈವಲ್ಯ ಪದ್ಧತಿ ಅಭ್ಯಾಸ ಮಾಡಿದ್ದರು. ಭಗವದ್ಗೀತೆಯ ಅಧ್ಯಯನ ಕೂಡಾ ಮಾಡಿದ್ದರು. ಈ ಸಂದರ್ಭದಲ್ಲಿ ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಮಹಾಸ್ವಾಮಿಗಳ ಪರಮ ಶಿಷ್ಯರಾದ ಅಕ್ಕಲಕೋಟೆಯ ಶಿವಶರಣರು ಇವರಿಗೆ ವಚನ ಉಪದೇಶವನ್ನು ನೀಡಿದರು. ಇವರು ಗುರುವಿನ ಕೃಪೆಯಿಂದ ನಿಜಗುಣರ ಎಲ್ಲ ಗ್ರಂಥಗಳನ್ನು ಅಭ್ಯಾಸ ಮಾಡಿ ಕಂಠಪಾಠ ಮಾಡಿದರು. ಇವರು ಪ್ರವಚನ ನೀಡಿ ಜನರನ್ನು ಜಾಗೃತರನ್ನಾಗಿ ಮಾಡುತ್ತಿದ್ದರು. ಬದುಕಿನ ನಶ್ವರತೆಯನ್ನು ಕುರಿತು ವಿವರಿಸುತ್ತ ಜಾತ್ಯಾತೀತ ತತ್ವದ ಪ್ರತಿಪಾದಕರಾಗಿದ್ದರು. ಇವರು ಪ್ರೇಮಪೂರ್ವಕ ಮಾತುಗಳಿಂದ ಜನರ ಮನ ಪರಿವರ್ತನೆಗೆ ಯತ್ನಿಸಿ ಅಜ್ಞಾನ, ಅಂಧಕಾರ ಹೊಡೆದೋಡಿಸಿದರು. ದುಶ್ಚಟಗಳಿಂದ ಮುಕ್ತಿ ಪಡೆಯಲು ಸೂಚಿಸುತ್ತಿದ್ದರು.

ಜಾತಿ, ಮತ, ಪಂಥವೆನ್ನದೇ ಶೋಷಿತರನ್ನು ಜಾಗೃತಗೊಳಿಸುವಲಿ, ಆಧ್ಯಾತ್ಮಿಕ ಭೋದನೆ ಭೋದಿಸುವಲ್ಲಿ ಅತ್ಯಂತ ಶ್ರಮವಹಿಸಿದರು.

ಸಮಾಜೋಪಯೋಗಿ ಕೆಲಸಗಳು

ದುಶ್ಚಟಗಳನ್ನು ಬಿಡಿಸುವದು; ಮಾಂಸಾಹಾರ ತ್ಯಜಿಸುವಂತೆ ಪ್ರೇರಣೆ ನೀಡಿ ಅಹಿಂಸಾಮಾರ್ಗ

ಅನುಸರಿಸುವಂತೆ ಪ್ರೋತ್ಸಾಹಿಸಿದರು. ನೈತಿಕ ಸಂಸ್ಕಾರಗಳನ್ನು ಹೆಚ್ಚಿಸುವಲ್ಲಿ ತುಂಬಾ ಪರಿಶ್ರಮವಹಿಸಿ; ಬಹುದೊಡ್ಡ ಸಾಧನೆಯನ್ನೇ ಮಾಡಿದ್ದಾರೆ.

ಇವರು ಸೋಲಾಪುರದಲ್ಲಿ ದೇಹತ್ಯಾಗ ಮಾಡಿದರು. ರಾಮವಾಡಿಯಲ್ಲಿ ಬಸವಾರೂಢರ ಮಠವೆಂದು ಪ್ರಸಿದ್ಧಿ ಪಡೆದಿದೆ. ಇವರ ಹೆಸರಿನಲ್ಲಿ ಕೊಟ್ಟಲಗಿಯಲ್ಲಿ ಸ್ಮಾರಕಕ್ಕಾಗಿ ದೇವಾಲಯವನ್ನು ನಿರ್ಮಿಸಿದ್ದಾರೆ. "ಶ್ರೀ ಬಸವಾರೂಢ ಶಿಕ್ಷಣ ಸಂಸ್ಥೆ"ಯನ್ನು ಸ್ಥಾಪಿಸಿ ಅವರ ಹೆಸರನ್ನು ಶಾಶ್ವತಗೊಳಿಸುವಂತೆ ಇವರ ನಿಷ್ಕಾಮ ಕರ್ಮಕ್ಕೆ ಮಾರುಹೋಗಿ; ಹಲವಾರು ಜನರು ಇವರ ಶಿಷ್ಯಂದಿರಾದರು. ಇಂದು ತನ್ನ ಕಂಪನ್ನು ಗ್ರಾಮದಲ್ಲಿ ಬೀರುತ್ತಿದೆ. ಅವರ ಹೆಸರನ್ನು ಚಿರಸ್ಥಾಯಿಯಾಗಿ ನಾಡಿನಲ್ಲಿ ಬೆಳೆಸುತ್ತಿದೆ.

ಶಿಷ್ಯ ಬಳಗ

ಇವರ ನಿಷ್ಠಾವಂತರಾದ ಗ್ರಾಮದ ಈಶ್ವರಾನಂದ ಸ್ವಾಮಿಗಳು, ಶ್ರೀ ಹಣಮಂತಪ್ಪ ಮಹಾರಾಜರು, ಶ್ರೀ ಶಂಕರೆಪ್ಪ ಬಂಡರಗೋಟಿ ಇವರುಗಳಲ್ಲದೆ ಇನ್ನೂ ಹಲವಾರು ಗ್ರಾಮದ ಹಿರಿಯರಿಗೆ ಉಪದೇಶಿತ ಗುರುಗಳೂ ಹೌದು.

ಶ್ರೀ ಶಿವತ್ರಯ ಸಿದ್ಧಾಶ್ರಮ

ಶ್ರೀ ಶಿವತ್ರಯ ಸಿದ್ಧಾಶ್ರಮವು ಕ್ರಿ.ಶ. ೧೯೮೮-೮೯ರಲ್ಲಿ ಸ್ಥಾಪನೆಯಾಗಿದೆ. ಈ ಆಶ್ರಮವು ಬಿಜಾಪೂರ ತಾಲೂಕಿನ ಪರಿಸರದಲ್ಲಿ ಬರುತ್ತದೆ. ಈ ಆಶ್ರಮ ಕೊಟ್ಟಲಗಿ ಸೀಮೆಯ ಪೂರ್ವ ಭಾಗದಲ್ಲಿದ್ದು ನೆರೆಯ ಕನಮಡಿ ಸರಹದ್ದಿನಲ್ಲಿದೆ. ಆದರೆ ಆಶ್ರಮ ಸ್ಥಾಪನೆ ಮಾಡಿರುವ ಶ್ರೀ ಈಶ್ವರಾನಂದ ಸ್ವಾಮೀಜಿಯವರು ಕೊಟ್ಟಲಗಿ ಗ್ರಾಮದವರು. ಆಶ್ರಮದ ಸುತ್ತಮುತ್ತ ವಾಸವಾಗಿರುವ ಜನರೆಲ್ಲ ಕೊಟ್ಟಲಗಿ ಗ್ರಾಮದವರೇ ಆಗಿದ್ದಾರೆ. ಆ ಕಾರಣದಿಂದ ಈ ಆಶ್ರಮವನ್ನು ಅಧ್ಯಯನಕ್ಕೆ ಒಳಪಡಿಸುವ ಅವಶ್ಯಕತೆ ಕಂಡುಬಂತು.

ಈ ಆಶ್ರಮವನ್ನು ಶ್ರೀ ಈಶ್ವರಾನಂದ ಸ್ವಾಮೀಜಿಯವರು ತಮ್ಮ ಒಂದು ಏಕರೆ ಏಳು ಗುಂಟಾ ಜಮೀನಿನಲ್ಲಿ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಜ್ಞಾನಯೋಗಾಶ್ರಮ, ಬಿಜಾಪೂರ ಇವರ ಅಮೃತ ಹಸ್ತದಿಂದ ಗುದ್ದಲಿ ಪೂಜೆಯೊಂದಿಗೆ ನೆರವೇರಿಸಿದರು.

ಈಶ್ವರಾನಂದರಿಗೆ ಶ್ರೀ ಸಾರವಾಡದ ಬಸವಾರೂಢರು ೧೮ ವರ್ಷದವರಿದ್ದಾಗ ಉಪದೇಶ ನೀಡಿದರು. ಇವರು ಬಾಲ್ಯದಿಂದಲೇ ಆಧ್ಯಾತ್ಮದಲ್ಲಿ ಆಸಕ್ತಿ ಹೊಂದಿ; ಸತ್ಸಂಗದಲ್ಲಿ ಇರುತ್ತಿದ್ದರು. ತಮ್ಮ ಗುರುಗಳಂತೆ ಇವರೂ ಕೂಡ ಶ್ರೀ ನಿಜಗುಣ ಶಿವಯೋಗಿಗಳ ೧) ಕೈವಲ್ಯ ಪದ್ಧತಿ ೨) ಪರಮಾನುಭವ ಬೋಧ ೩) ಅನುಭವಸಾರ ೪) ಪರಮಾರ್ಥ ಗೀತೆ ೫) ವಿವೇಕ ಚಿಂತಾಮಣಿ ೬) ವಿವೇಕ ಚೂಡಾಮಣಿ ಮುಂತಾದ ಅದ್ವೈತ ಶಾಸ್ತ್ರಗಳನ್ನು ಅಭ್ಯಾಸ ಮಾಡಿದರು. ಹಾಗೆಯೇ ಕೌಟುಂಬಿಕ ಜೀವನದಲ್ಲಿ ಜಿಗುಪ್ಸೆ ಹೊಂದಿ ಆಧ್ಯಾತ್ಮಿಕತೆಯಲ್ಲಿ ಮುಂದುವರೆಯುತ್ತಾ ಬಂದು; ಈ ಆಶ್ರಮದ ಸ್ಥಾಪನೆ ಮಾಡಿದರು. ಪ್ರಸ್ತುತ ಇವರು ಆಶ್ರಮದಲ್ಲಿಯೇ ವಾಸವಾಗಿರುವುದು ಕಂಡುಬರುತ್ತದೆ.

"ಶಿವತ್ರಯ ಎಂದರೆ" ಬಿಜಾಪೂರದ ೧) ಶಿವಪುತ್ರ ಸ್ವಾಮಿಗಳು ೨) ಶ್ರೀ ಶಿವಕುಮಾರ ಮಹಾಸ್ವಾಮಿಗಳು, ಬೀದರ ೩) ಶ್ರೀ ಶಿವಾನಂದ ಭಾರತಿ ಮಹಾಸ್ವಾಮಿಗಳು ಇಂಚಲ. ಈ ಮಹಾತ್ಮರ ಮೇಲಿರುವ ಭಕ್ತಿಗಾಗಿ ಮಹಾತ್ಮರ ಹೆಸರನ್ನು ನಾಮಕರಣ ಮಾಡಿದ್ದು ಕಂಡುಬರುತ್ತದೆ. ಈ ಮೂರು ಜನ ಮಹಾತ್ಮರು; ಇಲ್ಲಿ ನಡೆಯುವ ಹಲವಾರು ಕಾರ್ಯಕ್ರಮಗಳಿಗೆ ಆಗಮಿಸಿದ ಉದಾಹರಣೆಗಳಿವೆ. ಶ್ರೀ ಶಿವಾನಂದ ಭಾರತಿ ಸ್ವಾಮಿಗಳ 'ಕಿರೀಟ ಪೂಜಾ' ಕಾರ್ಯಕ್ರಮ ನಡೆಯುತ್ತದೆ. ಅಲ್ಲದೇ ಮೂರು ಜನ ಪೂಜ್ಯರ ತುಲಾಭಾರ ಕಾರ್ಯಕ್ರಮವು ಇಲ್ಲಿ ನಡೆದಿದೆ. ವೇದಾಂತ ಪರಿಷತ್ತು ಸಂಘಟಿಸುವ ಶ್ರೀ ಈಶ್ವರಾನಂದರು ಇದುವರೆಗೆ ಹನ್ನೆರಡು ವೇದಾಂತ ಪರಿಷತ್ತನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ.[೯]

ವಿಠ್ಠಲ ದೇವರ ದೇವಾಲಯ

ಗ್ರಾಮದ ಕುರುಬರ ಓಣಿಯಲ್ಲಿ ಶ್ರೀ ವಿಠ್ಠಲ ದೇವರ ದೇವಾಲಯವಿದೆ. ಸುಮಾರು ಏಳು ತಲೆಮಾರುಗಳ ಹಿಂದೆ ಈ ದೇವಾಲಯ ಸ್ಥಾಪಿಸಿದ್ದಾರೆ. ಈ ದೇವಾಲಯ ಕಟ್ಟಿಮನಿ ಬಂಧುಗಳು ಪೂಜಾರಿಗಳಾಗಿ ಕಾರ್ಯನಿರ್ವಹಿಸುತ್ತಾರೆ. ಈ ದೇವಾಲಯದ ಆಡಳಿತವನ್ನು ಟ್ರಸ್ಟ ಕಮೀಟಿ ನಿರ್ವಹಿಸುತ್ತಿದೆ.

ಜೋಗಿ ಬಂಧುಗಳು, ಹರಾಳೆ ಬಂಧುಗಳು, ಸಿಂಧೂರ ಬಂಧುಗಳು, ಮುಚ್ಚಂಡಿ ಬಂಧುಗಳು, ತೇಲಿ ಬಂಧುಗಳು, ಕೋಟ್ಯಾಳ ಓಣಿ ಭಕ್ತರು, ಮಾಳಿ ಸಮಾಜದವರು ಇನ್ನುಳಿದ ಗ್ರಾಮದ ಎಲ್ಲ ಜನರು ನಡೆದುಕೊಳ್ಳುತ್ತಾರೆ. ದೇವಸ್ಥಾನದಲ್ಲಿ ಕಂಚಿನ ಪುತ್ಥಳಿ, ನಾಗರ ಹೆಡೆ, ಸಿಂಹದ ಮುಖವಿದೆ. ಕುದುರೆ ಶಿಲ್ಪ, ಧೂಪಾರತಿ ಇವೆ. ಗಂಟೆ, ಜಾಗಟೆ, ಡೊಳ್ಳು ಕುಣಿತ, ತಾಳ, ಡಗ್ಗ ಪೂಜೆ ವೇಳೆಯಲ್ಲಿ ವಾದ್ಯಗಳನ್ನು ಬಳಸುತ್ತಾರೆ.

ದುರ್ಗಾದೇವಿ ದೇವಸ್ಥಾನ

ಈ ದೇವಾಲಯವು ಕೊಟ್ಟಲಗಿಯ ಪೂರ್ವ ಭಾಗದ ಪ್ರಾಥಮಿಕ ಶಾಲೆಯ ಹತ್ತಿರ ಕೊರವರ ಓಣಿಯಲ್ಲಿ ಸ್ಥಾಪಿತವಾಗಿದೆ. ನಾಲ್ಕು ತಲೆಮಾರುಗಳ ಹಿಂದೆ ಸ್ಥಾಪಿತವಾಗಿದೆ ಎಂದು ತಿಳಿದುಬರುತ್ತದೆ. ಮೊದಲು ಚಿಕ್ಕ ಗರ್ಭಗುಡಿ ಮಾತ್ರವಿತ್ತು. ಇತ್ತೀಚೆಗೆ ಸುವರ್ಣಗ್ರಾಮದ ಯೋಜನೆಯ ಸಂದರ್ಭದಲ್ಲಿ ಮುಂದಿನ ಮಂಟಪ ನಿರ್ಮಾಣವಾಗಿದೆ.

ಈ ದೇವಾಲಯವನ್ನು ಕಲ್ಲಿನಿಂದ ಕಟ್ಟಲಾಗಿದೆ. ದುರ್ಗಾದೇವಿಯು ಕೊರವ ಜನಾಂಗದ ಆರಾಧ್ಯ ದೈವ ಆಗಿದೆ. ಶ್ರೀ ತಿಪ್ಪಣ್ಣ ಶಿ. ಭಜಂತ್ರಿಯವರು ಪೂಜಾರಿಗಳಾಗಿ ಪೂಜಾ ಕೈಂಕರ್ಯ ನೆರವೇರಿಸುತ್ತಾರೆ.

ಶ್ರೀ ಬಸವೇಶ್ವರ ದೇವಾಲಯ

ಈ ದೇವಾಲಯವನ್ನು ಶ್ರೀ ಗಿರಿಮಲ್ಲೇಶ್ವರ ಮಹಾರಾಜರು ಕೊಟ್ಟಲಗಿ, ಇವರು ಸ್ಥಾಪಿಸಿದರು. ಗ್ರಾಮದವರೇ ಆದ ಶ್ರೀ ಗಿರಿಮಲ್ಲೇಶ್ವರರು ಹಾಗೂ ಶ್ರೀ ಚನ್ನಯ್ಯ ಸ್ವಾಮಿಗಳು ಸೇರಿಕೊಂಡು ಗ್ರಾಮದಲ್ಲಿ ಈ ಸ್ಥಳವನ್ನು ವಿಶೇಷವಾಗಿ ಬೆಳವಣಿಗೆ ಮಾಡಿದರು. ಗ್ರಾಮದ

ಬಸವಜಯಂತಿ ಕಾರ್ಯಕ್ರಮದ ಆಚರಣೆಯ ದಿವಸ ಈ ದೇವಸ್ಥಾನದಲ್ಲಿ ವಿಶೇಷ ಆಚರಣೆ, ಪೂಜಾ ಕಾರ್ಯಕ್ರಮಗಳು ಜರುಗುತ್ತವೆ. ಈ ದೇವಾಲಯವು ಕೊಟ್ಟಲಗಿ-ಅಥಣಿ ರಸ್ತೆಯ ಪಕ್ಕಕ್ಕಿದ್ದು ಹತ್ತಿರದಲ್ಲೇ ಅಂಬೇಡ್ಕರ ಭವನ ಇದೆ. ಕಲ್ಲಿನಿಂದ ನಿರ್ಮಾಣವಾದ ಈ ದೇವಾಲಯ ಉತ್ತರಾಭಿಮುಖವಾಗಿದೆ. ಗ್ರಾಮದ ಕೆಳಸಮುದಾಯದ ಅಲ್ಲದೇ ಸಮಾನ ಮನಸ್ಕ ಅನೇಕ ಜನರ ಆರಾಧನಾ ಸ್ಥಳವಾಗಿದೆ.

ಶ್ರೀ ಸಿದ್ಧೇಶ್ವರ ದೇವಾಲಯ

ಶ್ರೀ ಸಿದ್ಧೇಶ್ವರ; ಗ್ರಾಮ ದೈವ ಮತ್ತು ಗ್ರಾಮಕ್ಕೆ ಗ್ರಾಮವೇ ಆರಾಧಿಸುವ ದೈವವೂ ಆಗಿದೆ. ಕರ್ನಾಟಕದಲ್ಲಿ ವಿಶಿಷ್ಟ ಪರಂಪರೆ ಹೊಂದಿದ ಗ್ರಾಮವಾಗಿದೆ. ದೇವಾಲಯ ಶಿಲ್ಪಕಲೆಯ ಕುರಿತು ಕಲ್ಯಾಣಿ ಚಾಲುಕ್ಯರ ಕೊಡುಗೆಯಲ್ಲಿ ವಿವರಿಸಲಾಗಿದೆ. ಇನ್ನು ದೇವಾಲಯವು ಕಲ್ಯಾಣಿ ಚಾಲುಕ್ಯ ಶಿಲ್ಪಕಲೆಯ ಮಾದರಿಯಲ್ಲಿದೆ. ಹೀಗಿರುವಾಗ ದೇವಾಲಯವು ಸಾವಿರ ವರ್ಷದಷ್ಟು ಸುದೀರ್ಘ ಇತಿಹಾಸವನ್ನು ನಮ್ಮ ಮುಂದೆ ಬಿಚ್ಚಿಡುತ್ತದೆ. ಕಲ್ಯಾಣಿ ಚಾಲುಕ್ಯರು ಹಲವಾರು ಏಕಕೂಟ, ದ್ವಿಕೂಟ, ತ್ರಿಕೂಟ ಮಾದರಿಯ ದೇವಾಲಯಗಳ ಸ್ಥಾಪನೆ ಮಾಡಿರುವುದು ಇತಿಹಾಸದಿಂದ ತಿಳಿದುಬರುತ್ತದೆ. ಅಂತೆಯೇ ಶ್ರೀ ಸಿದ್ಧೇಶ್ವರ ದೇವಾಲಯ ಏಕಕೂಟ ಮಾದರಿಯ ಶೈವ ದೇವಾಲಯವೆಂದು ಸ್ಪಷ್ಟವಾಗುತ್ತದೆ.

ಅಲ್ಲದೇ ದೇವಾಲಯದಲ್ಲಿ ಇನ್ನೊಂದು ವಿಶಿಷ್ಟವಾದ ಆಕರ್ಷಣೆ ಇದೆ. ಅದು ದೀಪಸ್ತಂಭ. ಈ ದೀಪಸ್ತಂಭವು ಅಲುಗಾಡುವುದು. ಇದು ಅಲುಗಾಡುವುದನ್ನು ಕಂಡು ಆದಿಲಷಾಹಿ ಬಂದು ಹಿರಿಯರ ಸಮ್ಮುಖದಲ್ಲಿ ನೋಡಲೇಬೇಕು. ಇದರಲ್ಲೇನಾದರೂ ಅಲುಗಾಡುವ ವಸ್ತುಗಳನ್ನು ಹಾಕಿರಬಹುದೆಂದು ತೆಗೆಯಿಸಿದಾಗ ಅಲ್ಲಿ ಯಾವುದು ಇರಲಿಲ್ಲ. ಆದಿಲಷಾಹಿ ಬೆರಗಾದ ವಿಷಯ ಇಲ್ಲಿ ಪ್ರಚಲಿತದಲ್ಲಿದೆ. ಪುನಃ ಹೊಸದಾಗಿ ನಿರ್ಮಿಸಿದ ದೀಪಸ್ತಂಭವೂ ಅಲುಗಾಡಲಾರಂಭಿಸಿತು. ಇಂದಿಗೂ ಇದನ್ನು ನೋಡಲು ಲಭ್ಯವಿದೆ. ಹೀಗೆ ಇದು ಅಲುಗಾಡಿ ಅದಕ್ಕೆ ಹಾನಿಯಾಗಬಾರದೆಂದು ಪಕ್ಕದಲ್ಲಿ ಒಂದು ಗೋಪುರ ನಿರ್ಮಿಸಿ; ಅದಕ್ಕೆ ಆಧಾರವಾಗಿ ಒಂದು ಕಲ್ಲನ್ನು ನಿಲ್ಲಿಸಿದ್ದಾರೆ. ಇಷ್ಟೆಲ್ಲ ಅದ್ಭುತದ ಕೇಂದ್ರವಾದ ದೈವ. ಶ್ರೀ ಸಿದ್ಧೇಶ್ವರನನ್ನು, ಶ್ರೀ ರೇವಣಸಿದ್ಧೇಶ್ವರ ಎಂದೂ ಕರೆಯುತ್ತಾರೆ. ಇದಕ್ಕೆ ಪೂರಕವೆನ್ನುವಂತೆ ಗ್ರಾಮದಲ್ಲಿ ಅನೇಕರ ಮನೆಗಳಲ್ಲಿ ಸಿದ್ದಪ್ಪ, ಸಿದ್ದಣ್ಣ, ರೇವಣಸಿದ್ದ, ರೇವಣಸಿದ್ದಪ್ಪ ಎಂದು ನಾಮಕರಣ ಮಾಡಿದ್ದಾರೆ. ಶ್ರೀ ಸಿದ್ಧೇಶ್ವರ ಎಂಬ ಪದವನ್ನು ಸಿದ್ದ+ಈಶ್ವರ ಎಂಬುದಾಗಿ ಬಿಡಿಸಿ ಗಮನಿಸಿದಾಗ ಉದ್ಭವಲಿಂಗವಿರಬಹುದೇ ಎಂಬ ವಿಚಾರ ಸುಳಿದು ಹೋಗುತ್ತದೆ. ಅದರ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಇದಕ್ಕೆ ಪೂರಕವೆನ್ನುವಂತೆ ಜನಪದರ ಹಾಡಿನಲ್ಲಿ ಗಮನಿಸಬಹುದು.

ಕೊಟ್ಟಲಗಿ ಊರಾಗ ಹಾಡ ಕಲಿವ ಜಾಗ
ಶಿವಗೇರಿ ಪಟ್ಟಣ ಶಿಸ್ತಿನಿಂದ ಜನಮಸ್ತ
ಕೇಳರಿ ಮನಸಿಗಿ ಆಗುವದಾನಂದ ॥ಪ॥

ಕೃತಾಯುಗ ಮುಗಿದು ತ್ರೇತಾಯುಗದಾಗ
ತೆತ್ತಿಸಕೋಟಿ ದೇವತೆಗಳ ಹುಟ್ಟಿಬಂದಾರೊ
ತೆತ್ತಿಸಕೋಟಿ ದೇವತೆಗಳು ನವಕೋಟಿಮಂದಿ
ಸಿದ್ದರು ಹುಟ್ಟಿಬಂದಾರಾ ॥೧॥

ಸಣ್ಣ ಹಳ್ಳಿ ಇತ್ತು ದೋಣಿಯ ದಂಡಿಲಿ
ಊರ ಇದ್ದಿತೊ ಸತ್ಯ ಕುರುಬರ
ದೊಡ್ಡಿ ಹಾಕಿ ಹಟ್ಟಿ ಬೆಳಸಿದರಾ ॥೨॥

ಶರಣರ ಹಟ್ಯಾಗ ಹುಟ್ಟ ಕುಮಾರಿ
ಆಡ ಹುಟ್ಟಿತು ಹುಟ್ಟು ಕುಮಾರಿ ಹಾಲ
ಹೊತ್ತಿಗಿ ಕರದುಂಡ ಪಟ್ಟದ ಗುರುವಾದ

ಕರಿಕಣ್ಣಿನ ಗುಂತಿ ಕಾತರ ಕಂಟ್ಯಾಗ
ಜ್ಯೋತಿಯಾಗಿ ಉದಿಯಾಗಿ ಸೊಸಿ ನಡದವರಿಗೆ
ಈಶ್ವರಲಿಂಗ ಕಂಡ ಬಂದಿದ್ದ ॥೩॥

ರುದ್ರಾಕ್ಷಿ ಪದ್ಮ ರೂಪದವ ಇದ್ದ
ಲೀಲವತೋರಿದ್ದೊ ಸೊಸಿ ನಡದವರಿಗಿ
ಈಶ್ವಲಿಂಗ ಕಂಡ ಬಂದಿದ್ದ ॥೪॥

ಮಡಿ ಉಟ್ಟ ಪೂಜೇರಿ, ದಿಡದಿಂದ ಬರುವಾಗ
ಗುರುತವ ಹಿಡಿಬೇಕೊ ಕ್ಯಾಂಬಿ ಪಾವಡ
ಕರಿಯ ಗೊಂಗಡಿ ಅವಗ ಇರುವದೊ ॥೫॥

ಮೂರ ಹೊತ್ತಿನ ಪೂಜಿ ದೂರಿಂದ ಕೇಳಿ
ಕಾಳಿಯ ಕೂಗುವದೊ ನಗಾರಿ ನೊಗೊತ್ತ ಜಾಂಗಟಿ
ಕೈತಾಳ ಜಣ ಜಣ ಎನ್ನುವದು ॥೬॥

ಒಪ್ಪುಳ ಗುರುವಿಗಿ ತುಪ್ಪದ ದೀವಿಗಿ
ತೆಪ್ಪಲಾರದವಗೊ ಸುತ್ತಿನ ಭಕ್ತರ ನೇಮಿಟ್ಟ
ಬರತಾರ ಕೊಟ್ಟಲಗಿ ಊರಿಗೊ ॥೭॥[೧೦]

ಸಿದ್ಧೇಶ್ವರ; ಸಿದ್ಧರಲ್ಲಿ ಒಬ್ಬರಾಗಿರಬಹುದಾಗಿದೆ. ಈಶ್ವರಲಿಂಗ ಉದ್ಭವಾಗಿರುವ ವಿಚಾರ ತಿಳಿಯುತ್ತದೆ. ಗರ್ಭಗುಡಿಯಲ್ಲಿರುವ ಲಿಂಗವು ಕಟೆದು ಮಾಡಿದ ಲಿಂಗದಂತಿಲ್ಲ, ವಿಶೇಷವಾಗಿ ಅದು ಸಹಜ ಲಿಂಗದಂತಿಲ್ಲ–ಉದ್ಭವಲಿಂಗವಿರಬಹುದೆಂಬ ಊಹೆಗೆ ಅವಕಾಶ ಮಾಡಿಕೊಡುತ್ತದೆ. ಕಾಡುಗಲ್ಲಿನಲ್ಲಿ ನಿರ್ಮಾಣವಾದಂತಿದೆ. ನವನಾಥರಲ್ಲಿ ರೇವಣನಾಥರು ಒಬ್ಬರು. ಅವರು ರೇವಾ ನದಿಯ ದಡದಲ್ಲಿ ವಿಷ್ಣುವಿನಿಂದ ಜನಿಸಿದರು. ರೆವೆ ಅಂದರೆ ನದಿಯ ಉಸುಕು. ರೇವಣನಾಥರು ನಾಡಿನಾದ್ಯಂತ ಸಂಚಾರ ಕೈಗೊಂಡು ಅಲ್ಲಲ್ಲಿ ಉಸುಕಿನಿಂಗ ಲಿಂಗಗಳನ್ನು ಮಾಡಿ ಸ್ಥಾಪನೆ ಮಾಡಿದರೆಂದು ತಿಳಿದುಬರುತ್ತದೆ.[೧೧] ಕೊಲ್ಹಾಪುರದ ಸಮೀಪದ ಬೆಟ್ಟದಲ್ಲಿ

ಅವರು ಈ ರೀತಿ ಲಿಂಗ ಸ್ಥಾಪನೆ ಮಾಡಿರುವದು ಕಂಡುಬರುತ್ತದೆ. ಇದಲ್ಲದೇ ಬೇರೆ ಕಡೆಗೂ ಈ ರೀತಿ ಲಿಂಗ ಸ್ಥಾಪನೆ ಮಾಡಿರಬಹುದಾದ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಇದಕ್ಕೆ ಪೂರಕವೆನ್ನುವಂತೆ ಅಥಣಿ ತಾಲೂಕಿನಲ್ಲಿ ಶ್ರೀ ರೇವಣನಾಥರು ಗುಂಡೇವಾಡಿಗೆ ಬಂದು ಕಾಡಿನಲ್ಲಿ ತಪಸ್ಸು ಮಾಡಿದರು. ಇಲ್ಲಿ ಸಿದ್ದಗೌಡ ಎಂಬುವರಿಗೆ ಉಪದೇಶ ನೀಡಿದರು. ಹೀಗಾಗಿ ಕೊಟ್ಟಲಗಿಯಿಂದ ಗುಂಡೇವಾಡಿಯು ಅತ್ಯಂತ ಸಮೀಪವಿರುವ ಸ್ಥಳವಾಗಿದೆ. ಕಾರಣ ರೇವಣನಾಥರು ಬಂದು ಕೊಟ್ಟಲಗಿಯಲ್ಲಿ ಲಿಂಗ ಸ್ಥಾಪನೆ ಮಾಡಿರಬಹುದೆಂದು ಸಾಧ್ಯತೆಯು ಇರಬಹುದಾಗಿದೆ. ಹೀಗೆ ರೇವಣಸಿದ್ಧರು ನಿರ್ಮಾಣ ಮಾಡಿದ ಲಿಂಗವೇ ಸಿದ್ಧೇಶ್ವರ, ರೇವಣಸಿದ್ಧೇಶ್ವರವಾಗಿರಬಹುದು. ಉದಾಹರಣೆಗೆ ರಾಮನು ಬಂದು ಹೋದ ಸ್ಥಳವು ಇಂದು ರಾಮತೀರ್ಥವಾದಂತೆ ಇಲ್ಲಿಯೂ ಕೂಡ ರೇವಣಸಿದ್ಧೇಶ್ವರರು ಬಂದಿರುವ ಸಾಧ್ಯತೆ ಇದೆ.

ಇಲ್ಲಿಯ ಪೂಜಾರಿಗಳು ಮಡಿಯಿಂದ ಕಂಬಳಿ ಹೊದ್ದಿರುತ್ತಾರೆ. ಲಂಗೋಟಿ (ಪುಟಗೋಸಿ) ಧರಿಸುತ್ತಾರೆ. ದೇವಾಲಯದಲ್ಲಿ ಯಾವಾಗಲು ಐದು ತುಪ್ಪದ ದೀಪಗಳು ಉರಿಯುತ್ತವೆ. ಇದರ ಕುರಿತು ಐತಿಹ್ಯವೊಂದು ಇದೆ.

ಹಿಂದೆ ಬಹಳಷ್ಟು ಬರಗಾಲ ಆವರಿಸಿ; ಜನ ಬೇರೆ ಬೇರೆ ಕಡೆಗೆ ಗುಳೆ ಹೋಗುವ ಪ್ರಸಂಗ ಬಂತು. ಆಗ ದೇವರ ದೀಪಕ್ಕೆ ಹಾಕಲು ತುಪ್ಪವಿಲ್ಲ. ಆಗ ದೇವರು; ಪೂಜಾರಿಗಳ ಸ್ವಪ್ನದಲ್ಲಿ ಬಂದು ಹೇಳಿದನಂತೆ. 'ನೀವು ನೀರು ಹಾಕಿ ಹೋಗಿ ನೀವು ಬರುವವರೆಗೆ ದೀಪಗಳು ಉರಿಯುತ್ತವೆ' ಎಂದು, ಆಗ ಅದೇ ರೀತಿ ನೀರು ಹಾಕಿದಾಗ; ಮರಳಿ ಜನ ಬರುವವರೆಗೂ ದೀಪ ಉರಿಯುತ್ತಿದ್ದವಂತೆ. ನೀರು ಬೇಕಾದರೆ ಉರಿಯಲಿ ಆದರೆ ಅನ್ಯ ತೈಲ ಬಳಸಬೇಡ ಎಂದು ಸಿದ್ಧೇಶ್ವರರು ಹೇಳಿದ್ದು ಕಂಡುಬರುತ್ತದೆ. ಇಂದಿಗೂ ತುಪ್ಪದ ದೀಪವನ್ನೇ ಬಳಸುತ್ತಿರುವುದು ವಿಶಿಷ್ಟವಾಗಿದೆ.[೨]

ಇಲ್ಲಿ ನಿತ್ಯ ಪ್ರಾತಃಕಾಲ ನಾಲ್ಕು ಗಂಟೆಗೆ ಹಾಗೂ ಮಧ್ಯಾಹ್ನ ಹನ್ನೆರಡು ಗಂಟೆಗೆ ಮತ್ತು ರಾತ್ರಿ ಒಂಭತ್ತು ಗಂಟೆಗೆ ಮೂರು ವೇಳೆ ಪೂಜೆ ನಡೆಯುತ್ತದೆ. ಗಂಟೆ, ಜಾಗಟೆ, ನಗಾರಿ, ತಾಳ ವಿವಿಧ ವಾದ್ಯಗಳೊಂದಿಗೆ ವಿಶಿಷ್ಟ ರೀತಿಯ ಪೂಜೆಗಳು ನೇರವೇರುತ್ತವೆ.

ಶ್ರೀ ಸಿದ್ಧೇಶ್ವರ ಪೂಜೆಗೆ ಗ್ರಾಮದ ಪಶ್ಚಿಮಕ್ಕಿರುವ ಹೂತೋಟದಲ್ಲಿನ ಶೀತಲ ಬಾವಿಯಿಂದ ನಿತ್ಯವೂ ತೀರ್ಥವನ್ನು ತರುತ್ತಾರೆ. ಅಲ್ಲಿಯೇ ಜ್ಯೋತಿರ್ಲಿಂಗ, ಮುದ್ದವ್ವ, ಹಿರೋಡ್ಯಾ ದೇವಸ್ಥಾನಗಳಿವೆ. ಶ್ರೀ ಸಿದ್ಧಲಿಂಗಪ್ಪ ಮುತ್ಯಾರವರ ಸಮಾಧಿ ಇದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮದ್ದುಗುಂಡುಗಳನ್ನು ಬ್ರಿಟಿಷರಿಗೆ ಗೊತ್ತಾಗದಂತೆ ತಂದು ಹಾಕಿದ ಐತಿಹಾಸಿಕ ಆನಂದಿ ಬಾವಿಯು ಹೂತೋಟದಲ್ಲಿಯೇ ಇದೆ. ಶ್ರೀ ಸಿದ್ಧೇಶ್ವರ ಹರಕೆ ಸಲ್ಲಿಸುವವರು ಬಾವಿಯ ತೀರ್ಥ ನೀರನ್ನು ಮೈಮೇಲೆ ಹಾಕಿಕೊಳ್ಳುತ್ತಾರೆ. ಇಲ್ಲಿಂದಲೇ ದೀಡ ನಮಸ್ಕಾರ ಹಾಕುತ್ತಾ ಸಿದ್ಧೇಶ್ವರ ದೇವಸ್ಥಾನದವರೆಗೆ ಹೋಗುತ್ತಾರೆ.

ಶ್ರೀ ಸಿದ್ಧೇಶ್ವರ ಪೂಜಾರಿಗಳ ವಂಶಗಳಲ್ಲಿ ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ

೧. ಬಾರಾಬಾಯಿ ಬಡ್ಡಿ (ವಂಶ)
೨. ದೊಡ್ಡನಿಂಗಪ್ಪಗೋಳ ಬಡ್ಡಿ (ವಂಶ)
೩. ಮಾನಿಂಗಪ್ಪಗೋಳ ಬಡ್ಡಿ (ವಂಶ)
೪. ಡುಮ್ಮನವರ ಬಡ್ಡಿ (ವಂಶ)

ಈ ರೀತಿಯಾಗಿ ನಾಲ್ಕು ವರ್ಗಗಳಿದ್ದು ಮತ್ತು ಅವುಗಳಲ್ಲಿ ಅನೇಕ ಮನೆತನಗಳು ಸೇರಿರುವುದುಂಟು. ಹೀಗೆ ಇನ್ನೂ ವಿವಿಧ ಸಿದ್ಧೇಶ್ವರ ದೇವರ ಕುರಿತಾದ ಆಚರಣೆಗಳನ್ನು 'ಆಚರಣೆಗಳು' ಎಂಬ ಅಧ್ಯಾಯದಲ್ಲಿ ಗಮನಿಸಲಾಗಿದೆ.

ಮುದ್ದವ್ವ

ಮುದ್ದವ್ವ ದೇವಾಲಯವು ಕೊಟ್ಟಲಗಿಯ ಪಶ್ಚಿಮ ಭಾಗದಲ್ಲಿರುವ ಹೂತೋಟದಲ್ಲಿದೆ. ಇತ್ತೀಚೆಗೆ ಕಲ್ಲಿನಿಂದ ಭವ್ಯ ಮಂದಿರವನ್ನು ನಿರ್ಮಾಣ ಮಾಡಲಾಗಿದೆ. ಒಳಗಡೆ ಮುದ್ದವ್ವ ತಾಯಿಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ.

ಮುದ್ದವ್ವ ಶ್ರೀ ಸಿದ್ಧೇಶ್ವರನ ಸಹೋದರಿ ಎಂದು ಹಲವರು ಹೇಳುವದುಂಟು. ಆದರೆ ಸಿದ್ಧೇಶ್ವರನು ವ್ಯಕ್ತಿಯಾಗಿರದೇ ಒಂದು ಉದ್ಭವ ಲಿಂಗದ ಹಿನ್ನಲೆಯಲ್ಲಿ ಗಮನಿಸುವ ಅಂಶಕ್ಕೆ ಗ್ರಾಮದಲ್ಲಿ ಹೆಚ್ಚು ಪ್ರಾಧಾನ್ಯತೆ ಇದೆ. ಈ ಕಾರಣಕ್ಕಾಗಿ ಬಹುಶಃ ಮುದ್ದವ್ವ ಪೂಜಾರಿ ವಂಶದ ಹೆಣ್ಣುಮಗಳು; ಸಹೋದರಿಯಾಗಿರುವ ಸಾಧ್ಯತೆಯೇ ಹೆಚ್ಚು ಎನ್ನುವದು ಸ್ಪಷ್ಟವಾಗುತ್ತದೆ. ಹೆಣ್ಣುಮಗಳೆಂದು ಭಾವಿಸಿ ಶುಭ ಕಾರ್ಯಗಳಲ್ಲಿ ಹಾಗೂ ನಿತ್ಯ ಮನೆಯಲ್ಲಿ ಪೂಜಾರಿ ವಂಶದವರು ಪೂಜಿಸುವುದುಂಟು. ಪೂಜಾರಿಗಳ ಮನೆಯಲ್ಲಿ ಮುದ್ದವ್ವನ ಮೂರ್ತಿಯನ್ನು ಈಗಲೂ ಪೂಜಿಸುತ್ತಾರೆ.

ಶ್ರೀ ಬಿಸಲಸಿದ್ಧೇಶ್ವರ ದೇವಸ್ಥಾನ

ಬಿಸಲಸಿದ್ಧೇಶ್ವರ ದೇವಸ್ಥಾನವು ಕೊಟ್ಟಲಗಿಯಿಂದ ಹಳೆ ಕನಮಡಿ ದಾರಿಯಲ್ಲಿ ಸುಮಾರು ೩ ಕಿ.ಮೀ. ಅಂತರದ ಮೇಲೆ ಸ್ಥಾಪಿತವಾಗಿದೆ. ದೇವಸ್ಥಾನಕ್ಕೆ ಸುಮಾರು ೩೦೦ ವರ್ಷಗಳ ಇತಿಹಾಸವಿದೆ. ಇದು ಜತ್ತ ತಾಲೂಕಿನ ಅಚಕನಳ್ಳಿ ಗ್ರಾಮದ ಶ್ರೀ ಸಿದರಾಯ ದೇವರ ಶಾಖಾ ದೇವಸ್ಥಾನವಾಗಿದೆ. ಕಲ್ಲಿನಿಂದ ಕಟ್ಟಿದ ಗರ್ಭಗುಡಿಯು ಇದೆ. ಪೂರ್ವಾಭಿಮುಖವಾಗಿ ಇರುವ ದೇವಾಲಯವು ಬಿಜಾಪೂರ ತಾಲೂಕಿನ ಕನಮಡಿ ಸರಹದ್ದಿನಲ್ಲಿ ನಿರ್ಮಿಸಲಾಗಿದೆ. ಇಲ್ಲಿ ದೇವಸ್ಥಾನಕ್ಕೆ ನಡೆದುಕೊಳ್ಳುವ ಭಕ್ತಾದಿಗಳು ಕೊಟ್ಟಲಗಿಯವರು. ಶ್ರೀ ಅಪ್ಪಯ್ಯ ಮುತ್ಯಾರವರ ದೇವಸ್ಥಾನದಲ್ಲಿ (ಗದ್ದುಗೆಯ) ಮಲ್ಲಯ್ಯನ ಸೇವೆ ಮಾಡುವ ಕೊಟ್ಟಲಗಿ ಭಕ್ತಾದಿಗಳೇ ಇಲ್ಲಿಯೂ ಸೇವೆ ಮಾಡುತ್ತಾರೆ. ಜಾತ್ರೆ ಮುಂತಾದ ಕಾರ್ಯಗಳೆಲ್ಲವನ್ನು ನೆರವೇರಿಸುತ್ತಾರೆ. ಕೊಟ್ಟಲಗಿ ಗ್ರಾಮದ ಮಂಗಿ ಬಾಂಧವರು ಶ್ರೀ ಬಿಸಲಸಿದ್ಧೇಶ್ವರ ಪೂಜಾರಿಗಳಾಗಿ ಕಾರ್ಯನಿರ್ವಹಿಸುತ್ತಾರೆ.

ಇನ್ನು ಗ್ರಾಮದಲ್ಲಿ ದೇವಾಲಯಗಳಲ್ಲದೇ ಅನೇಕ ಗದ್ದುಗೆಗಳು ಇರುತ್ತವೆ. ಅವುಗಳನ್ನು ಕೂಡ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಲಭ್ಯವಾದ ಮಾಹಿತಿಯನ್ನು ವಕ್ತ್ರಗಳಿಂದ ಸ್ಥಳ ಸಂದರ್ಶನದಿಂದ ಕಂಡುಬಂದ ಅಂಶಗಳನ್ನು ವಿವರಿಸಲಾಗಿದೆ.

ಕೊರೆವ್ವ

ಗ್ರಾಮದ ಪಶ್ಚಿಮ ದಿಕ್ಕಿಗೆ ಡೋಣಿ ನದಿಗೆ ಹೋಗುವ ಹಾದಿಯು ಎರಡು ಭಾಗಗಳಾಗಿ ವಿಂಗಡನೆ ಆಗುತ್ತದೆ. ಎಡಗಡೆ ಡೋಣಿ ನದಿಕಡೆಗೆ ಹೋದರೆ ಬಲಗಡೆ ಹೋಗುವ ದಾರಿಯಲ್ಲಿ ಕೊರೆವ್ವ ದೇವಿಯ ಗದ್ದುಗೆಯಿದೆ. ಇಲ್ಲಿಯೂ ಕೂಡ ಸುತ್ತಮುತ್ತಲಿನ ಜಮೀನದಲ್ಲಿ ಬಿತ್ತುವ ಸಂದರ್ಭ, ರಾಶಿ ಮಾಡುವ ಸಂದರ್ಭ, ಹಬ್ಬ ಹರಿದಿನಗಳಲ್ಲೆಲ್ಲಾ ವಿಶೇಷವಾಗಿ ನೈವೇದ್ಯ ಅರ್ಚನೆ ಮಾಡದೇ ಹೋಗುವಂತಿಲ್ಲ. ಇನ್ನು ಹಲವಾರು ಗ್ರಾಮದ ಜನ ಕೂಡ ದೇವಿಗೆ ಭಯ ಭಕ್ತಿಯಿಂದ ನಡೆದುಕೊಳ್ಳುವದುಂಟು.

ಗೊಂಬೆವ್ವ

ಇದು ಕೂಡ ಕೊರೆವ್ವ ದೇವಿಯ ಗದ್ದುಗೆಯಿಂದ ದಕ್ಷಿಣಕ್ಕೆ ಒಂದು ಕಿ.ಮೀ. ಅಂತರದಲ್ಲಿದೆ. ಈ ದೇವಿಯ ಕಾರಣದಿಂದ ಸುತ್ತಮುತ್ತಲಿನ ಪ್ರದೇಶದ ಹೊಲಗಳಿಗೆ ಗೊಂಬಿ ಹೊಲ ಎಂದು ಕರೆಯುವದುಂಟು. ಎಲ್ಲ ಕೃಷಿ ಕಾರ್ಯಗಳ ಸಂದರ್ಭದಲ್ಲಿ ದೇವಿಯನ್ನು ಪೂಜಿಸಿ ನೈವೇದ್ಯ ನೀಡುವುದುಂಟು.

ಶೆಟ್ಟಿತಾಯಿ ಗದ್ದುಗೆ

ಗ್ರಾಮದ ದುರ್ಗಾದೇವಿ ದೇವಸ್ಥಾನವಿರುವ ಮಾದರ ಓಣಿಯಲ್ಲಿ ತಾಯಿಯ ಗದ್ದುಗೆಯಿದೆ. ಓಣಿಯ ಜನ ಭಯ ಭಕ್ತಿಯಿಂದ ನಡೆದುಕೊಳ್ಳುವುದುಂಟು.

ಮಾತಂಗಿ ಗದ್ದುಗೆ

ಮಾತಂಗಿ ಗದ್ದುಗೆಯನ್ನು ಮಾದರ ಓಣಿಯಲ್ಲಿಯೆ ನಿರ್ಮಿಸಲಾಗಿದೆ. ಈ ಗದ್ದುಗೆಯ ಸಮೀಪ ಯಲ್ಲಮ್ಮನ ಜಾತ್ರೆಯ ಸಂದರ್ಭದಲ್ಲಿ ಇಲ್ಲಿ ವಿಶೇಷ ಆಚರಣೆ ಜರುಗುತ್ತದೆ. ಅಲ್ಲಿ ಯಲ್ಲಮ್ಮ ದೇವಿಯ ಮೂರ್ತಿಯನ್ನು ವಾದ್ಯಗಳೊಂದಿಗೆ ತೆಗೆದುಕೊಂಡು ಬರುತ್ತಾರೆ. ಬಂದು ಗ್ರಾಮದ ಜೋಗತಿಯರಿಗೆ ಹಾಗೂ ದೇವಿಗೆ ಉಡಿ ತುಂಬುವ ಕಾರ್ಯಕ್ರಮ ಜರುಗುತ್ತದೆ. ಗ್ರಾಮದ ಸದ್ಭಕ್ತರು ದೇವಿಗೆ ಮತ್ತು ಜೋಗತಿಯರಿಗೆ ಸೀರೆ, ಜಂಪರ, ಅರಿಷಿಣ, ಕುಂಕುಮದೊಂದಿಗೆ, ಹತ್ತಿಕಾಯಿಯನ್ನು ನೀಡಿ ಜೊತೆಗೆ ಪರಶುರಾಮನ ರುಮಾಲನ್ನು ಸಹ ನೀಡುತ್ತಾರೆ.

ಬಟಗೂರ ದುರ್ಗವ್ವ

ಇದು ಗ್ರಾಮದ ಮಾದರ ಓಣಿಯಲ್ಲಿಯೇ ಇದೆ. ಮಾದರ ಓಣಿಯ ಭಕ್ತರು ವಿಶೇಷವಾಗಿ ಭಯ ಭಕ್ತಿಯಿಂದ ನಡೆದುಕೊಳ್ಳುವುದು ಉಂಟು.

ಮರಗವ್ವ ತಾಯಿಯ ಪೂಜಾ ಸ್ಥಾನ

ಗ್ರಾಮದ ಪೂರ್ವಕ್ಕೆ ಮೂರು ಕಿಲೋಮೀಟರ ಅಂತರದ ಮೇಲೆ ಕನಮಡಿ ಗ್ರಾಮದ ಸರಹದ್ದಿನಲ್ಲಿ ಈ ಪೂಜಾ ಸ್ಥಳವಿದೆ. ಶ್ರೀ ಬಿಸಲಸಿದ್ಧೇಶ್ವರ ದೇವಸ್ಥಾನದ ಪಕ್ಕದಲ್ಲಿ ಈ ಸ್ಥಳವಿದೆ. ಗ್ರಾಮದಲ್ಲಿ ವರ್ಷಕ್ಕೊಮ್ಮೆ ಬಂಡಿ ಬಿಡುವ ಕಾರ್ಯಕ್ರಮ ನಡೆಯುತ್ತದೆ. ಆ ಸಂದರ್ಭದಲ್ಲಿ ಗ್ರಾಮಕ್ಕೆ ಮಳೆ ಬೆಳೆ ಚೆನ್ನಾಗಿ ಆಗಲಿ ಎಂದು ಮರಗಮ್ಮನನ್ನು ಆರಾಧಿಸುತ್ತಾರೆ. ಶಕ್ತಿ ದೇವತೆಯಾದ ಮರಗಮ್ಮನ ಬಂಡಿ ತಯಾರಿಸಿ ಬಂಡಿಯನ್ನು ಗ್ರಾಮದ ಸೀಮೆ ದಾಟಿಸಿ ಒಯ್ದು ಬಿಡುವುದುಂಟು. ಗ್ರಾಮದ ಮರಗಮ್ಮನ ಬಂಡಿಯನ್ನು ಇದೇ ಸ್ಥಳದಲ್ಲಿ ಪ್ರತಿ ವರ್ಷ ಬಿಡುವುದರಿಂದ ಮರಗಮ್ಮನ ಆರಾಧನಾ ಸ್ಥಳವಾಗಿದೆ. ಅಲ್ಲದೇ ಪ್ರತಿ ಶುಕ್ರವಾರ, ಮಂಗಳವಾರ ಪೂಜೆ, ಉಡಿತುಂಬುವ ಕಾರ್ಯಗಳು ನಡೆಯುತ್ತವೆ.

ಶ್ರೀ ಅಪ್ಪಯ್ಯಸ್ವಾಮಿ ಗದ್ದುಗೆ

ಅಪ್ಪಯ್ಯ ಸ್ವಾಮಿಗಳು ಅಥಣಿ ತಾಲೂಕಿನ ಐಗಳಿಯವರು. ಇವರು ಮಹಾನ್ ತಪಸ್ವಿಗಳು. ಪುಣ್ಯ ಪುರುಷರಾಗಿದ್ದರು. ಅವರು ಬಂದು ಸಂದರ್ಶಿಸಿ ಹೋದಂತಹ ಸ್ಥಳದ ಸವಿನೆನಪಿಗಾಗಿ ಭಕ್ತಿಯಿಂದ ಈ ಗದ್ದುಗೆ ನಿರ್ಮಿಸಿದ್ದಾರೆ. ಈ ಗದ್ದುಗೆಯು ಕನಮಡಿ ಸರಹದ್ದಿನಲ್ಲಿದೆ. ಆದರೆ ಕೊಟ್ಟಲಗಿಯವರೇ ಆದ ಶ್ರೀ ಶಿವಗೊಂಡ ಬ್ಯಾಳಿಯವರ ತೋಟದಲ್ಲಿ ಇರುವುದರಿಂದ ಕೊಟ್ಟಲಗಿಗೆ ಸಾಂಸ್ಕೃತಿಕ ಸಂಬಂಧ ಹೊಂದಿದೆ. ಸುಮಾರು ೭೫ ವರ್ಷಗಳಿಂದಲೂ ಇಲ್ಲಿ ಅನೇಕ ಆಚರಣೆಗಳು ನಡೆಯುತ್ತಿವೆ.

ಕೊಟ್ಟಲಗಿ ಗ್ರಾಮದಿಂದ ಶ್ರೀಶೈಲಕ್ಕೆ ಪಾದಯಾತ್ರೆ ಮೂಲಕ ಕಂಬಿ ಜೊತೆ ಭಕ್ತಾದಿಗಳು ಹೋಗುತ್ತಾರೆ. ಹೋಗುವ ದಿವಸ ಈ ಸ್ಥಳಕ್ಕೆ ಬಂದು ಮಂಗಳಾರತಿ ಮಾಡಿ; ಪೂಜೆ ಸಲ್ಲಿಸಿ ಪ್ರಯಾಣ ಬೆಳೆಸುತ್ತಾರೆ. ಶ್ರೀಶೈಲದಿಂದ ಮರಳಿ ಗ್ರಾಮಕ್ಕೆ ಬರುವಾಗ ಸುಮಾರು ಹತ್ತು ಹದಿನೈದು ದಿವಸ ಈ ಸ್ಥಳದಲ್ಲಿ ವಾಸ್ತವ್ಯ ಮಾಡುತ್ತಾರೆ. ಮಲ್ಲಯ್ಯನ ಕಂಬಿಯ ಜೊತೆ ಶ್ರೀಶೈಲಕ್ಕೆ ಹೋಗಿ ಬಂದಿರುವ ಸ್ವಾಮಿಗಳು ವಾಸ್ತವ್ಯದಲ್ಲಿರುತ್ತಾರೆ. ಹೀಗಾಗಿ ನಿತ್ಯವೂ ಕೊಟ್ಟಲಗಿ ಗ್ರಾಮದ ತೋಟಗಳ ಹಾಗೂ ಸುತ್ತಮುತ್ತಲಿನ ಎಲ್ಲ ಭಕ್ತಾದಿಗಳು ಇಲ್ಲಿ ಸೇರುತ್ತಾರೆ. ಪೂಜೆ, ಮಂಗಳಾರತಿ ಕಾರ್ಯಕ್ರಮಗಳು ಜರುಗುತ್ತವೆ. ಈ ಭಾಗದಲ್ಲಿರುವ ಕೊಟ್ಟಲಗಿ ಗ್ರಾಮದ ತೋಟಗಳ ಜನರು ಕಂಬಿಯ ಜೊತೆಗೆ ವಾಸ್ತವ್ಯವಿರುವ ಸ್ವಾಮಿಗಳಿಗೆ ಪ್ರಸಾದದ ವ್ಯವಸ್ಥೆ ಮಾಡಿರುತ್ತಾರೆ. ಇಲ್ಲಿ ಸುಮಾರು ೧೧೦ ಕೊಟ್ಟಲಗಿ ಗ್ರಾಮದ ಜನರ ಮನೆಗಳಿವೆ. ಕೊಟ್ಟಲಗಿ ಗ್ರಾಮದ ಮನೆತನಗಳೆಂದರೆ ೧) ಬ್ಯಾಳಿಯವರ ಮನೆತನ ೨) ಮುಗ್ಗನವರ ೩) ಮಂಗಿ ೪) ಆಜೂರ ೫) ದಾನಪ್ಪಗೋಳ ೬) ಕೋಟ್ಯಾಳ ೭) ಪಾಟೀಲ ೮) ಯಲ್ಲಡಗಿ ೯) ಬಂಡರಗೋಟ ೧೦) ಕೊಂಡಿ ೧೧) ಮುಳಸಿದ್ದನವರ ೧೨) ದೊಡ್ಡನಿಂಗಪ್ಪಗೋಳ ೧೩) ಬಬಲೇಶ್ವರ ೧೪) ಸತ್ತಿಗೇರಿ ೧೫) ಅನಂತಪೂರ ೧೬) ಮುಡಸಿ ೧೭) ಮಾಳಿ ೧೮) ಹಂಜಿ ೧೯) ಕವಟಿ ೨೦) ನ್ಯಾಮಗೌಡ ಎಲ್ಲ ಕುಟುಂಬಗಳು ಕೊಟ್ಟಲಗಿ ಗ್ರಾಮದವಾಗಿದ್ದು; ಇವರೆಲ್ಲ ಮಲ್ಲಯ್ಯನ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ.

ಅಕ್ಕಮಹಾದೇವಿ ದೇವಸ್ಥಾನ

ಈ ದೇವಸ್ಥಾನವು ಪ್ರಸ್ತುತ ಕಟ್ಟಡ ನಿರ್ಮಾಣ ಹಂತದಲ್ಲಿದ್ದು, ಮಾರುಕಟ್ಟೆ ಸಮೀಪದಲ್ಲಿ ಈ ದೇವಸ್ಥಾನವಿದೆ. ನವರಾತ್ರಿಯ ಸಂದರ್ಭದಲ್ಲಿ ವಿಶೇಷ ಪೂಜೆ-ಪುನಸ್ಕಾರಗಳು ಜರುಗುತ್ತವೆ.

ಬಸವೇಶ್ವರ

ಈ ದೇವಸ್ಥಾನವು ಅಥಣಿ ದಾರಿಯಲ್ಲಿ ಡೋಣಿ ನದಿಯ ಸಮೀಪದಲ್ಲಿದೆ. ಗ್ರಾಮದ ಭಕ್ತಾದಿಗಳು ಸೇರಿ ದೇವಸ್ಥಾನ ನಿರ್ಮಿಸಿದ್ದಾರೆ. ನಿತ್ಯ ಪೂಜೆ-ಪುನಸ್ಕಾರ ಜರುಗುತ್ತವೆ.

ಹಿರಡೇಶ್ವರ

ಈ ದೇವಸ್ಥಾನವು ಗ್ರಾಮದ ಪೋಸ್ಟ್ ಆಫೀಸ್ ಹತ್ತಿರ ಇದ್ದು, ಗ್ರಾಮದ ಜನರ ಆರಾಧ್ಯ ದೈವವಾಗಿದ್ದು, ವಿಶೇಷ ಆಚರಣೆಗಳು ಜರುಗುತ್ತವೆ.

ಮುಸ್ಲಿಂ ಧರ್ಮದ ಸಮಾಧಿಗಳು

ಮುಸ್ಲಿಂ ಧರ್ಮದ ಸಮಾಧಿಗಳಲ್ಲಿ ಎರಡು ಪ್ರಕಾರದವು ಇವೆ. ೧) ಛಿಲ್ಲಾ ಮತ್ತು ೨) ಲಾಶ ಎಂದು ಇವೆ.

೧)ಲಾಶ: ಇದರ ವೈಶಿಷ್ಟ್ಯವೆಂದರೆ ಶವವನ್ನು ಯಾವ ಸ್ಥಳದಲ್ಲಿ ಪ್ರತ್ಯಕ್ಷವಾಗಿ ಹೂತು ಹಾಕಿರುತ್ತಾರೋ ಆ ಸ್ಥಳವೇ ಲಾಶ.

೨)ಛಿಲ್ಲಾ: ಬೇರೆ ಕಡೆಗೆ ಎಲ್ಲೋ ಸಮಾಧಿ ಮಾಡಿದ ಸ್ಥಳದಿಂದ ಕೆಲವು ಚಿಕ್ಕ ಹರಳು ಅಥವಾ ಬೂದಿ ಏನಾದರೂ ವಸ್ತುಗಳನ್ನು ತಂದು ಯಾವುದೇ ಊರಿನಲ್ಲಿ ಸ್ಥಾಪಿಸಿ ಸಮಾಧಿ ಮಾಡುವುದು.

ಕೊಟ್ಟಲಗಿ ಗ್ರಾಮದಲ್ಲಿ ಸುಮಾರು ನಾಲ್ಕು ಛಿಲ್ಲಾಗಳಿವೆ.

೧. ಲಾಡ್ಲೆ ಮಶಾಕ : ಮಾವಿನ ಮಳ

೨. ಹಾಜಿಮಸ್ತಾನ : ಹಿರೆಮಸೂತಿ ಹತ್ತಿರ

೩. ಯಮನೂರ ಪೀರ : ಕಂಟ್ಯಾನ ಓಣಿ

೪. ಅನಾಮಿಶ : ಲೆಂಡೆನ್ ಹಳ್ಳದ ಪಶ್ಚಿಮ ದಿಕ್ಕಿಗೆ

ಈ ರೀತಿಯಾಗಿ ನಾಲ್ಕು ಛಿಲ್ಲಾಗಳಿದ್ದು ವಿವಿಧ ಜನರಿಗೆ ಆರಾಧನಾ ಸ್ಥಳಗಳಾಗಿವೆ.

ಗ್ರಾಮದಲ್ಲಿ ಮುಸ್ಲಿಂ ಬಾಂಧವರು ಪ್ರಾರ್ಥನೆಗಾಗಿ ಇತ್ತೀಚೆಗೆ ಹೊಸದಾಗಿ ಒಂದು ಮಸ್ಜಿದ(ಮಸೀದಿ) ನಿರ್ಮಿಸಲಾಗಿದೆ. ಇದಕ್ಕೂ ಮೊದಲು ಲಕ್ಷ್ಮಿ ದೇವಾಲಯದ ಪಕ್ಕದಲ್ಲಿರುವ ಮಸೀದಿಯಲ್ಲಿ ನಮಾಜು ಮಾಡಲಾಗುತ್ತಿತ್ತು. ಇಂದು ವಿಶಾಲವಾದ ಸುಸಜ್ಜಿತ ಕಟ್ಟಡದಲ್ಲಿ ಪ್ರಾರ್ಥನೆ ಸಲ್ಲಿಸಲು ಅನುಕೂಲವಾಗಿದೆಯೆಂದೇ ಹೇಳಬಹುದು.

ಹೀಗೆ ಗ್ರಾಮದಲ್ಲಿ ಅನೇಕ ಧರ್ಮಗಳ ದೇವಾಲಯಗಳು ಸಮೃದ್ಧ ಸಂಸ್ಕೃತಿಯ ನೆಲೆಗಳಾಗಿವೆ. ಗ್ರಾಮದ ಹಲವಾರು ಆಚರಣೆಗಳ ಕೇಂದ್ರ ಸ್ಥಳಗಳಾಗಿವೆ. ಮನುಷ್ಯನಿಗೆ ಮಾನಸಿಕ ಶಾಂತಿ ಸಮಾಧಾನ ನೀಡುವ ಸ್ಥಳಗಳಾಗಿವೆ. ವಿವಿಧತೆಯಲ್ಲಿ ಏಕತೆಯನ್ನು

ಬಿಂಬಿಸುವ ತಾಣಗಳಾಗಿವೆ. ಗ್ರಾಮದ ಜನಪದರು ಅಂತರಂಗದ ದೇವರಿಗೆ ಯಾವ ರೀತಿ ಮೂರ್ತ ಸ್ವರೂಪವನ್ನು ನೀಡಿದ್ದಾರೆ ಎನ್ನುವದನ್ನು ಅರಿಯಲು ಈ ದೇವಾಲಯಗಳು ಸಹಾಯಕವಾಗಿವೆ. ಒಟ್ಟಿನಲ್ಲಿ ಕೊಟ್ಟಲಗಿ ಪರಿಸರದಲ್ಲಿನ ಧಾರ್ಮಿಕ ತಾಣಗಳ ಶಿಲ್ಪಕಲಾ ವೈಭವಗಳನ್ನು ಗಮನಿಸಿದಾಗ ಅವು ಈ ಪ್ರದೇಶದ ಗತಕಾಲದ ಸಾಂಸ್ಕೃತಿಕ ಶ್ರೀಮಂತಿಕೆಯಿಂದ ತುಂಬಿ ತುಳುಕುತ್ತಿದ್ದವು ಎಂಬುದನ್ನು ಊಹಿಸಬಹುದಾಗಿದೆ. ಕೊಟ್ಟಲಗಿಯ ಶ್ರೀ ಸಿದ್ಧೇಶ್ವರ ದೇವಾಲಯ, ಜ್ಯೋತಿರ್ಲಿಂಗ ದೇವಾಲಯ, ಪವಾಡಸಿದ್ದ ದೇವಾಲಯ, ಕೋಟಿಲಿಂಗ ದೇವಾಲಯ, ಕಲಾಲಿಂಗ ದೇವಾಲಯ ಮೊದಲಾದವು ಇತಿಹಾಸಕ್ಕೆ ಮೂಕ ಸಾಕ್ಷಿಯಾಗಿ ನಿಂತಿವೆ. ಈ ದೇವಾಲಯಗಳು, ಮಠ ಮಂದಿರ, ಮಸೀದಿಗಳು ಜನತೆಯ ಸಂಸ್ಕೃತಿಯನ್ನು ಧಾರ್ಮಿಕ ಮನೋಭಾವವನ್ನು ಬೆಳೆಸಿಕೊಂಡು ಎಲ್ಲ ಧರ್ಮಿಯರೂ ಪರಸ್ಪರ ಪ್ರೀತಿ ವಿಶ್ವಾಸದೊಂದಿಗೆ ಅನ್ಯೋನ್ಯವಾಗಿ ಯಾವ ಮತೀಯ ಗಲಭೆಗಳಿಲ್ಲದೆ ಬದುಕುವುದಕ್ಕೆ ಪ್ರೇರಕಗಳಾಗಿ ನಿಂತಿವೆ. ಅಲ್ಲದೇ ಇವುಗಳು ಕನ್ನಡ ನಾಡಿನ ದೊಡ್ಡ ಆಸ್ತಿಗಳಾಗಿ ಉಳಿದಿವೆ.

೫.೨. ಕೊಟ್ಟಲಗಿ ದೇವಾಲಯಗಳು ಸೂಚಿಸುವ ಸಾಂಸ್ಕೃತಿಕ ಸಂಬಂಧಗಳು

ವಿಭಿನ್ನ ಸಂಸ್ಕೃತಿಯ ಜನ ಒಂದೇ ಪ್ರದೇಶದಲ್ಲಿ ಅಥವಾ ದೇಶದಲ್ಲಿ ಬದುಕಬೇಕಾಗಿ ಬಂದಾಗ ಪರಸ್ಪರ ಹೊಂದಾಣಿಕೆಯಿಂದ ಕೊಡು ಕೊಳ್ಳುವುದರ ಮೂಲಕ ಪರಸ್ಪರ ಗೌರವದ ಮೂಲಕ ಬದುಕುವುದು ಅನಿವಾರ್ಯವಾಗುತ್ತದೆ. ಸಾಮಾನ್ಯವಾಗಿ ಗ್ರಾಮವೊಂದರಲ್ಲಿರುವ ದೇವಾಲಯಗಳು ವಿವಿಧ ಧರ್ಮ, ಸಮುದಾಯದ ಹಿನ್ನೆಲೆಯಲ್ಲಿ ವೈಯಕ್ತಿಕ ಭಿನ್ನತೆಗಳು ಆಚರಣೆಯಲ್ಲಿ ಇರುವುದು ಸಹಜ. ಆದರೆ ಒಂದು ನಿರ್ದಿಷ್ಟ ಸಮುದಾಯದ ಆಚರಣೆಯಲ್ಲಿ ಅನ್ಯ ಸಮುದಾಯದವರು ಪಾಲ್ಗೊಳ್ಳುವದು ಸಾಂಸ್ಕೃತಿಕ ದೃಷ್ಟಿಯಿಂದ ವಿಶೇಷವೆಂದೇ ಹೇಳಬಹುದು. ಹಲವಾರು ಸಂದರ್ಭಗಳಲ್ಲಿ ಇಂತಹ ಸನ್ನಿವೇಶಗಳು ಕೊಟ್ಟಲಗಿ ಗ್ರಾಮದಲ್ಲಿವೆ. ಅವುಗಳನ್ನು ಹೊಳಹೊಕ್ಕು ಪರಿಶೀಲಿಸಿದಾಗ ಅವು ಈ ರೀತಿಯಾಗಿ ಕಂಡುಬಂದಿವೆ.

ಸಾಮಾನ್ಯವಾಗಿ ಗ್ರಾಮದೇವತೆಯೆಂದರೆ ಶ್ರೀ ಸಿದ್ಧೇಶ್ವರ. ಶ್ರೀ ಸಿದ್ಧೇಶ್ವರ ದೇವಸ್ಥಾನದಲ್ಲಿ ನಡೆಯುವ ಹಲವಾರು ಕಾರ್ಯಕ್ರಮಗಳಲ್ಲಿ ಜಾತಿ, ಮತ, ಪಂಥದ ಭೇದವಿಲ್ಲದೇ ಎಲ್ಲ ಸಮುದಾಯದ ಜನ ಪಾಲ್ಗೊಳ್ಳುತ್ತಾರೆ. **ಆ ಸಂದರ್ಭಗಳೆಂದರೆ**

೧. ಶ್ರೀ ಸಿದ್ಧೇಶ್ವರ ಆರಾಧನಾ ಮಹೋತ್ಸವಗಳಲ್ಲಿ ಎಲ್ಲ ಸಮುದಾಯಗಳ ಜನರು ಪಾಲ್ಗೊಂಡು ತನು ಮನ ಧನದಿಂದ ಸೇವೆ ಸಲ್ಲಿಸುತ್ತಾರೆ.

೨. ಶಿವರಾತ್ರಿಯ ದಿನದಂದು ರಾತ್ರಿಯಿಡೀ ಹಾಗೂ ದೀಪಾವಳಿಯಲ್ಲಿ ಜಾಗರಣೆ ಕಾರ್ಯಕ್ರಮ ನಡೆಯುತ್ತದೆ. ಈ ಕಾರ್ಯಕ್ರಮದಲ್ಲಿ ಎಲ್ಲ ಸಮುದಾಯದ ಕಲಾವಿದರು ಪಾಲ್ಗೊಂಡು ಭಜನಾ ಹಾಡುಗಳನ್ನು, ಡೊಳ್ಳಿನ ಹಾಡುಗಳನ್ನು, ಚೌಡಿಕೆ ಪದಗಳನ್ನು ಹಾಡುತ್ತಾರೆ. ಹೀಗೆ ವಿವಿಧ ಕಾರ್ಯಕ್ರಮಗಳಲ್ಲಿ ಎಲ್ಲ ಜನ ಭಯ ಭಕ್ತಿಯಿಂದ ಪಾಲ್ಗೊಳ್ಳುವುದು ವಿಶೇಷವಾಗಿದೆ.

೩. ಗ್ರಾಮ ಚಾವಡಿಯ ಹತ್ತಿರವಿರುವ ಲಕ್ಷ್ಮಿ ದೇವಾಲಯದ ವಾರ್ಷಿಕ ಜಾತ್ರೆಯ ಸಂದರ್ಭದಲ್ಲಿ ಎಲ್ಲ ಸಮುದಾಯದ ಜನರು ಪಾಲ್ಗೊಳ್ಳುತ್ತಾರೆ.

೪. ಇನ್ನು ಮೊಹರಂ ಸಂದರ್ಭದಲ್ಲಿ ಹಳೆ ಮಸೂತಿಯಲ್ಲಿ ಪಂಜಿ ದೇವರುಗಳ ಮೆರವಣಿಗೆ ಹೊರಡಿಸಬೇಕಾದರೆ ಹಿಂದೂಗಳಾಗಿರಬಹುದು, ಮುಸ್ಲಿಂರಾಗಿರಬಹುದು ಊರ ಹಿರಿಯರು ಬಂದು ಪೂಜೆ ಸಲ್ಲಿಸಿದ ನಂತರವೇ ಮೆರವಣಿಗೆ ಹೊರಡುತ್ತದೆ. ಅಲ್ಲದೇ ಮೊಹರಂ ಸಂದರ್ಭದಲ್ಲಿ ವಿವಿಧ ಸಮುದಾಯದವರು ಒಂದೊಂದು ಓಣಿಯಿಂದ ಕಲಾ ತಂಡಗಳು ಆಗಮಿಸಿ ಸೇವಾ ಮನೋಭಾವದಿಂದ ಲೇಜಿಮ ತಂಡ, ನವಿಲು ಕುಣಿತ, ಕೀಲು ಕುದುರೆ ಕುಣಿತ, ಹಲಗಿ ವಾದನ, ಡೊಳ್ಳು ಕುಣಿತ, ಕರಬಲ ಹಾಡುವುದು ಅವರಿವರೆನ್ನದೇ ಎಲ್ಲ ಸಮುದಾಯಗಳು ಭಾಗವಹಿಸುವದು ವಿಶೇಷವಾಗಿದೆ.

ಇಷ್ಟಲ್ಲದೇ ಗ್ರಾಮದ ಶ್ರೀ ಮಾಧವಾನಂದರ ಸ್ಮರಣಾರ್ಥ ನಡೆಯುವ ಸಪ್ತಾಹ ಕಾರ್ಯಕ್ರಮಗಳಲ್ಲಿ ಎಲ್ಲ ಸಮುದಾಯದ ಜನ ಕಾಣಿಕೆ ಕೊಡುವದು, ಮೆರವಣಿಗೆಯಲ್ಲಿ ಭಾಗವಹಿಸುವುದು, ಪುರಾಣ, ಪ್ರವಚನ ಕೇಳುವುದು, ಪುಷ್ಪವೃಷ್ಟಿ ಕಾರ್ಯಕ್ರಮದಲ್ಲಿ ಭಾಗವಹಿಸುವುದು. ಹೀಗೆ ವಿವಿಧ ಸಂದರ್ಭದಲ್ಲಿ ಪರಸ್ಪರ ಬೆರೆಯುತ್ತಾರೆ.

ಇನ್ನು ಮಹಾನವಮಿಯ ಸಂದರ್ಭದಲ್ಲಿ ಬನ್ನಿ ಮುಡಿಯುವಾಗ ಪೂಜಾರಿ ಓಣಿಯ ಜನ ಹೂತೋಟದಲ್ಲಿ ಬನ್ನಿ ಮುಡಿಯುತ್ತಾರೆ. ಉಳಿದ ಜನ ಹನುಂತದೇವರ ಗುಡಿಯ ಹತ್ತಿರ ಬನ್ನಿ ಮುಡಿಯುತ್ತಾರೆ. ಆದರೆ ಎಲ್ಲರೂ ಶ್ರೀ ಸಿದ್ಧೇಶ್ವರ ಗುಡಿಗೆ ಬಂದು ಬನ್ನಿ ನೀಡಿದ ನಂತರವೇ ಎಲ್ಲ ಕಡೆ ಬನ್ನಿ ವಿನಿಮಯ ಮಾಡುವುದು. ಈ ಕಾರ್ಯದಲ್ಲಿ ಹಿಂದೂ ಮುಸ್ಲೀಮರಾದಿಯಾಗಿ ಎಲ್ಲ ಜನರೂ ಭಾಗಿಯಾಗುತ್ತಾರೆ.

ಅದರಂತೆ ರಮಜಾನ್ ಕೊನೆಯ ದಿನದಂದು ಗ್ರಾಮದ ಮುಸಲ್ಮಾನ ಬಾಂಧವರೆಲ್ಲ ಹಿಂದೂಗಳನ್ನು ತಮ್ಮ ಮನೆಗಳಿಗೆ ಆಹ್ವಾನಿಸಿ ಊಟ ಮಾಡಿಸುತ್ತಾರೆ. ಇದು ಗ್ರಾಮದ ವಿವಿಧ ಸಮುದಾಯಗಳ ಸಾಮರಸ್ಯದ ಬದುಕು. ಅನೇಕತೆಯಲ್ಲಿ ಏಕತೆಯನ್ನು ಬಿಂಬಿಸುವಂತೆ ಪರಸ್ಪರ ಬಂಧುತ್ವದೊಂದಿಗೆ ಬದುಕುತ್ತಿರುವುದು ವಿಶಿಷ್ಟವಾಗಿದೆ. ದೇಶದ ಐಕ್ಯತೆ, ಸಮಗ್ರತೆ, ಭಾವೈಕ್ಯತೆ, ಸಾಮರಸ್ಯದ ದ್ರುಷ್ಟಿಯಿಂದ ಎಲ್ಲ ಸಮುದಾಯದವರು ಇರಬೇಕೆಂಬ ಮೇಲುಪಂಕ್ತಿಯನ್ನು ನಮ್ಮ ಗ್ರಾಮ ತೋರಿಸುತ್ತಿರುವದು ಭಾರತೀಯ ಸಾಂಸ್ಕೃತಿಕತೆಗೊಂದು ಹಿಡಿದ ಕನ್ನಡಿಯೆಂಬುದೇ ನನ್ನ ಭಾವನೆ.

ಹೀಗೆ ಗ್ರಾಮದ ರಾಜಕೀಯ ಪರಂಪರೆಯನ್ನು ಕೆದಕುತ್ತ ಹೋದಂತೆ ಮೈನವಿರೇಳುತ್ತದೆ. ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದ ಘಟನೆಗಳನ್ನು ಮೆಲುಕು ಹಾಕುವುದೇ ಒಂದು ಅಮೃತ ಗಳಿಗೆ. ಹೀಗೆ ವಿವಿಧ ಸಂಗತಿಗಳನ್ನು ಸ್ವಾತಂತ್ರ್ಯ ಸಂಗ್ರಾಮದಿಂದ ಆಧುನಿಕ ರಾಜಕೀಯದವರೆಗೆ ಎರಡು ನೆಲೆಗಳಲ್ಲಿ ವಿಭಿನ್ನ ಶ್ರೇಷ್ಠ ಸಂಸ್ಕೃತಿಯನ್ನು ಗ್ರಾಮವು ಪ್ರತಿಬಿಂಬಿಸುತ್ತದೆ. ಈ ಪರಂಪರೆಯು ಗ್ರಾಮದ ರಾಜಕೀಯ ಹಿರಿಮೆಯನ್ನು ಪ್ರಚುರಪಡಿಸುವದಲ್ಲದೇ ಎಲ್ಲ ಸಂಗತಿಗಳನ್ನು ಸದಾ ಜೀವಂತವಾಗಿಡಲು ಸಹಾಯಕವಾಗಿದೆ.

ಅಡಿಟಿಪ್ಪಣಿಗಳು

೧. ಡಾ. ಬಿ.ಎಸ್. ಗದ್ದಗೀಮಠ, ಕನ್ನಡ ಜನಪದ ಗೀತೆಗಳು, ಪುಟ-೧೨

೨. ಪ್ರೊ. ವಿಲಾಸ ಕಾಂಬಳೆ, ಅಥಣಿ ಪ್ರದೇಶದ ಸಾಂಸ್ಕೃತಿ ಅಧ್ಯಯನ, ಕ.ವಿ.ವಿ. ಧಾರವಾಡಕ್ಕೆ ಸಲ್ಲಿಸಿದ ಎಮ್.ಫಿಲ್. ಪ್ರಬಂಧ

೩. ಡಾ. ಅರ್ಜುನ ಗೋಳಸಂಗಿ, ಗೋಳಸಂಗಿ ಗ್ರಾಮ ಒಂದು ಸಾಂಸ್ಕೃತಿಕ ಅಧ್ಯಯನ

೪. ಶ್ರೀ ಪರಸಪ್ಪ ಸಿದ್ದಪ್ಪ ಹಿರೇಕುರುಬರ, ವಯಸ್ಸು-೮೫ ಜಾತಿ-ಕುರುಬ ಊರು-ಕೊಟ್ಟಲಗಿ

೫. ಅದೇ

೬. ಅದೇ

೭. ಭೀಮಸಿಂಗ ಹಣಮಂತಸಿಂಗ ರಜಪೂತ, ವಯಸ್ಸು-೬೪ ಜಾತಿ-ರಜಪೂತ ಉದ್ಯೋಗ-ಒಕ್ಕಲುತನ ಊರು-ಕೊಟ್ಟಲಗಿ

೮. ಶ್ರೀ ಕಲ್ಲಪ್ಪ ಶಿವಪ್ಪ ಮಾದರ, ವಯಸ್ಸು-೫೦ ಉದ್ಯೋಗ-ಚಮ್ಮಾರಿಕೆ ಊರು-ಕೊಟ್ಟಲಗಿ

೯. ಶ್ರೀ ಈಶ್ವರಾನಂದ ಸ್ವಾಮಿಗಳು, ಶಿವತ್ರಯ ಸಿದ್ಧಾಶ್ರಮ, ಕೊಟ್ಟಲಗಿ

೧೦. ಶ್ರೀ ಪರಸಪ್ಪ ಸಿ. ಹಿರೆಕುರುಬರ ವಯಸ್ಸು:೮೫ ಜ್ಯಾತಿ: ಕುರುಬ ಸ್ಥಳ: ವಿಠ್ಠರಾಯನ ದೇವಸ್ಥಾನ ಊರು- ಕೊಟ್ಟಲಗಿ

೧೧. ಮಹಾಯೋಗಿ ರೇವಣನಾಥ, ಲೇಖಕರು-ಶ್ರೀ ವೆಂಕಟೇಶ ಶ್ರೀಪಾದ ದತ್ತಾತ್ರೆಯ ಯಜಮಾನ, ಪುಟ-೫

೧೨. ಶ್ರೀಮತಿ ಕಲಾವತಿ ಅ. ಕೋಟ್ಯಾಳ ಜ್ಯಾತಿ: ಲಿಂಗಾಯತ ಉದ್ಯೋಗ: ವಿಶ್ರಾಂತಿ ವಯಸ್ಸು: ೮೦ ಊ॥ ಕೊಟ್ಟಲಗಿ)

ಅಧ್ಯಾಯ–೬

ಕೃಷಿ ಪರಂಪರೆ

೬.೧. ಮುಂಗಾರು ಮತ್ತು ಹಿಂಗಾರು ಕೃಷಿ ಕ್ಷೇತ್ರ ಹಾಗೂ ಬೆಳೆಗಳು
೬.೨. ಕೃಷಿ ಉಪಕರಣಗಳು
೬.೩. ಪ್ರಮುಖ ವಾಣಿಜ್ಯ ಬೆಳೆಗಳು
೬.೪. ಸಾಕು ಪ್ರಾಣಿಗಳು
೬.೫. ಹೈನುಗಾರಿಕೆ
೬.೬. ತೋಟಗಾರಿಕೆ
೬.೭. ಕೃಷಿಗೆ ಪೂರಕವಾದ ಇತರ ಚಟುವಟಿಕೆಗಳು
೬.೮. ಗ್ರಾಮೀಣ ಸಮಾಜ ಮತ್ತು ಆಧುನಿಕ ಕೃಷಿ
೬.೯. ಯಂತ್ರೋಪಕರಣಗಳ ಬಳಕೆ
೬.೧೦. ರಾಸಾಯನಿಕ ಗೊಬ್ಬರದ ಬಳಕೆ
೬.೧೧. ವಿದ್ಯುತ್ ಯಂತ್ರಗಳ ಬಳಕೆ
೬.೧೨. ದೂರವಾಣಿ ಬಳಕೆ

ಅಧ್ಯಾಯ ೬

ಕೃಷಿ ಪರಂಪರೆ

ಮಾನವನ ವಿಕಾಸದ ದಾರಿಯನ್ನು ಶೋಧಿಸುತ್ತ ಹೋದಂತೆ; ನಮಗೆ ಸಹಜವಾಗಿ ಅವನ ವಿಕಾಸ ಕ್ರಮದ ಕುರುಹು ಅಥವಾ ಹಂತಗಳನ್ನೇ "ಮಂಗನಿಂದ ಮಾನವ"ನ ಹಂತವೆನ್ನಬಹುದು.

ಮಾನವ ಸಮಾಜದ ಸಂಸ್ಕೃತಿಯ ವಿಕಾಸವನ್ನು ಮೂರು ಹಂತಗಳಲ್ಲಿ ಗುರುತಿಸಲಾಗಿದೆ.

೧. ಆದಿವಾಸಿ ಸಂಸ್ಕೃತಿ (Primitive Culture)
೨. ಗ್ರಾಮೀಣ ಸಂಸ್ಕೃತಿ (Rural Culture)
೩. ನಗರ ಸಂಸ್ಕೃತಿ (Urban Culture)

ಈ ಮೂರು ಅವಸ್ಥೆಗಳಲ್ಲಿ ಮನುಷ್ಯನ ವೃತ್ತಿ ಬದುಕು ಬೇರೆ ಬೇರೆ ನೆಲೆಗಳಲ್ಲಿ ರೂಪಿತಗೊಂಡಿರುತ್ತದೆ. ಆದಿವಾಸಿ ಸಂಸ್ಕೃತಿಯಲ್ಲಿ ಮಾನವನು ತನ್ನ ಜೀವನಕ್ಕೆ ಗೆಡ್ಡೆ, ಗೆಣಸು, ಬೇಟೆ ಮೊದಲಾದವುಗಳನ್ನು ಆಶ್ರಯಿಸಿ ಕಾಡಿನಲ್ಲಿ ಜೀವಿಸುತ್ತಿದ್ದನಾದ್ದರಿಂದ ಅವನ ಸಂಸ್ಕೃತಿಯು ಸಹ ಅಲ್ಲಿನ ಜೀವನ ಕ್ರಮವನ್ನಾಧರಿಸಿ ರೂಪಿತವಾಗಿತ್ತು.

ಗ್ರಾಮೀಣ ಸಂಸ್ಕೃತಿ ರೂಪ ತಳೆಯುವ ಕಾಲಕ್ಕೆ ಮನುಷ್ಯ; ಕಾಡನ್ನು ತೊರೆದು ಅಥವಾ ಕಾಡನ್ನೇ ನಾಡನ್ನಾಗಿ ಪರಿವರ್ತಿಸಿ ಒಂದೆಡೆ ನೆಲೆನಿಂತು ತನ್ನ ಬದುಕಿಗೆ ಪಶುಪಾಲನೆ ಮತ್ತು ಕೃಷಿಯನ್ನು ಆಧರಿಸಿ ಜೀವನ ಕ್ರಮವನ್ನು ರೂಪಿಸಿಕೊಂಡನು. ಹೀಗೆ ವ್ಯವಸಾಯ ಅಥವಾ ಕೃಷಿಯನ್ನು ಅವಲಂಬಿಸಿದ ಮಾನವನ ಇತಿಹಾಸದಲ್ಲಿ ಗ್ರಾಮಸಮುದಾಯಗಳು ಏಳಿಗೆಯನ್ನು ಪಡೆದು; ವಿವಿಧ ರೀತಿಯ ಸಾಮಾಜಿಕ ಲಕ್ಷಣಗಳು ಕಾಣಿಸಿಕೊಂಡವು. ವೃತ್ತಿ ವಿವರಗಳು, ವೈಯಕ್ತಿಕ ಸುಖ-ದುಃಖಗಳು, ಕೌಟುಂಬಿಕ ರೀತಿ, ನೀತಿಗಳು, ಸಹಕಾರ, ಸಂಬಂಧಗಳು, ಧಾರ್ಮಿಕ ಅಂಶಗಳು ಮುಂತಾದವು ಗ್ರಾಮೀಣ ಸಂಸ್ಕೃತಿಯನ್ನು ಹೆಚ್ಚು ಸಮೃದ್ಧಗೊಳಿಸಿದವು. ಇಂತಹ ಗ್ರಾಮ ಸಂಸ್ಕೃತಿ ಪ್ರಧಾನವಾಗಿ ಕೃಷಿಗೆ ಸಂಬಂಧಿಸಿರುವುದು ಸಹಜವೇ. ಆದರೆ ಕೃಷಿ ಪದ್ಧತಿಯು ಭೌಗೋಳಿಕವಾಗಿ ಬೇರೆ ಬೇರೆ ಪ್ರದೇಶಗಳ ಪ್ರಾಕೃತಿಕ ಸನ್ನಿವೇಶ, ಸಂದರ್ಭಗಳನ್ನು ಅನುಸರಿಸಿ ಮತ್ತು ಸಾಮಾಜಿಕ ಸ್ವರೂಪವನ್ನಾಧರಿಸಿ ರೂಪಿತವಾಗಿರುತ್ತದೆ. ಆದುದರಿಂದ ಕೃಷಿ ಸಂಸ್ಕೃತಿಯ ಸ್ವರೂಪವನ್ನು ಆಯಾ ಪ್ರಾದೇಶಿಕ ಪರಿಸರವನ್ನು ಅನುಸರಿಸಿ ಅವುಗಳ ವಿಶಿಷ್ಟತೆಯನ್ನು ಗುರುತಿಸುವುದು ಅವಶ್ಯಕವೆನಿಸುತ್ತದೆ.

ಪ್ರಸ್ತುತ ಅಧ್ಯಯನವಾದ ಕೊಟ್ಟಲಗಿಯು ಗ್ರಾಮೀಣ ಪ್ರದೇಶದಿಂದ ಕೂಡಿದ್ದು ತಗ್ಗು, ದಿನ್ನೆ ಪ್ರದೇಶವನ್ನು, ಮಿಶ್ರ ಬೇಸಾಯವನ್ನು ಅನುಸರಿಸಿಕೊಂಡು ಬರುತ್ತಿರುವ ವೈಶಿಷ್ಟ್ಯತೆಯನ್ನು ಪಡೆದಿದೆ. ಇಂತಹ ಪರಿಸ್ಥಿತಿ ಕರ್ನಾಟಕದ ಇತರೆ ಪ್ರದೇಶಗಳಲ್ಲಿ ಕಂಡುಬರುತ್ತದೆಯಾದರೂ ಜಾನಪದೀಯವಾಗಿ ಅನೇಕ ಸಾಂಸ್ಕೃತಿಕ ವೈಶಿಷ್ಟ್ಯಗಳು ಪ್ರತಿಯೊಂದು ಪ್ರದೇಶಕ್ಕೆ ಭಿನ್ನವಾದ ಆಯಾಮವನ್ನು ತಂದುಕೊಟ್ಟಿರುತ್ತವೆ. ಹೀಗಾಗಿ ಇಲ್ಲಿನ ಕೃಷಿ ಪದ್ಧತಿಯ ಮೂಲಕ ಜಾನಪದ ವಿವರಗಳನ್ನು ಪರಿಶೀಲಿಸಬಹುದಾಗಿದೆ.

"ಗ್ರಾಮ" ಎಂಬುದಾಗಿ ಕರೆಯಲು ಮುಖ್ಯವಾದ ಕಾರಣ ವ್ಯವಸಾಯ ಎಂಬುದನ್ನು ಮಾರ್ಕಂಡೆಯ ಪುರಾಣದಲ್ಲಿನ ಉಲ್ಲೇಖದಿಂದ ತಿಳಿಯುತ್ತದೆ. ಶೂದ್ರರು; ಹೆಚ್ಚು ಸಂಖ್ಯೆಯಲ್ಲಿರುವ ರೈತರು ಸಮೃದ್ಧವಾಗಿದ್ದು; ಸಾಗುವಳಿ ಯೋಗ್ಯವಾದ ಭೂಮಿಯ ಮಧ್ಯದಲ್ಲಿರುವ ಜನವಸತಿಯ ಭಾಗವನ್ನು 'ಗ್ರಾಮ' ಎಂಬುದಾಗಿ ಹೆಸರಿಸಲಾಗಿದೆ. ಕೌಟಿಲ್ಯನು ಗ್ರಾಮಗಳ ಸ್ವರೂಪವನ್ನು ಕುರಿತು "ನೂರಕ್ಕೆ ಕಡಿಮೆಯಿಲ್ಲದಷ್ಟು ಆದರೆ ೫೦೦ಕ್ಕೆ ಮೀರದ ಶೂದ್ರರಾದ ಕೃಷಿಕರ ಕುಟುಂಬಗಳಿರುವ ಒಂದು ಕ್ರೊಶ ಅಳತೆಯ ದೂರದವರೆಗೆ ಹರಡಿರುವ ನದಿ, ಪರ್ವತ, ಕಾಡು, ಹೂ ಬಿಡುವ ಮರಗಳಿಂದ ಕೂಡಿದ ಮೇರೆಗಳೆನ್ನುವ ಮತ್ತು ತಮ್ಮನ್ನು ತಾವೆ ಸಂರಕ್ಷಿಸಿಕೊಳ್ಳಬಲ್ಲ ಜನವಸತಿಯನ್ನು 'ಗ್ರಾಮ' ಎಂದು ಹೇಳಿದ್ದಾನೆ. ಕ್ರೊಶ ಎಂದರೆ ಜನಪದ ಪರಿಭಾಷೆಯಲ್ಲಿ ಒಂದು ಕೂಗಳತೆಯ ದೂರವನ್ನು ಹೇಳುವ ಮಾನದಂಡ. ಇದಕ್ಕೆ "ಹರದಾರಿ" ಎಂಬುದಾಗಿಯು ಕರೆಯಲಾಗುತ್ತದೆ. ಸುಮಾರ ನಾಲ್ಕು ಮೈಲು ದೂರದ ಅಳತೆಯನ್ನು "ಕ್ರೊಶ" ಎನ್ನಲಾಗುತ್ತದೆ. ಇಲ್ಲಿ ಗ್ರಾಮದ ವಿಸ್ತಾರಕ್ಕಿಂತಲೂ ಪ್ರಧಾನವಾಗಿ ವ್ಯವಸಾಯ ಮತ್ತು ವ್ಯವಸಾಯಗಾರರು ಗ್ರಾಮದ ಬಹುಮುಖ್ಯ ಅಂಶವಾಗಿರುವುದರಿಂದ ಗ್ರಾಮೀಣ ಪರಿಸರದ ಜನಪದ ಕೃಷಿ ಪ್ರಧಾನವಾದುದೇ ಆಗಿದೆ.

ಕೊಟ್ಟಲಗಿ ಭಾಗದಲ್ಲಿ ಕೃಷಿ ಕಾರ್ಯ ಮಾಡುವ ಕಸುಬುದಾರರನ್ನು ರೈತ, ಒಕ್ಕಲಿಗ, ವ್ಯವಸಾಯಗಾರ ಎಂಬುದಾಗಿ ಕರೆಯುತ್ತಾರೆ. ಅಥಣಿ ತಾಲೂಕಿನಲ್ಲಿಯೇ ಕೃಷ್ಣಾನದಿ ಹರಿದಿದ್ದರೂ ಗ್ರಾಮಕ್ಕೆ ನೀರಾವರಿ ಯೋಜನೆಗಳು ಯಾವುವು ಕಾರ್ಯರೂಪಕ್ಕೆ ಬರದೇ ಇರುವುದರಿಂದ ಬಾವಿ, ಕೊಳವೆ ಬಾವಿ, ಹಳ್ಳ ಆಶ್ರಯಿಸಿದರೂ; ಹೆಚ್ಚಿನ ವ್ಯವಸಾಯ ಮಳೆಯನ್ನಾಧರಿಸಿದೆ. ಗ್ರಾಮದಲ್ಲಿ ಮುಂಗಾರು, ಹಿಂಗಾರು ಮಳೆ, ಮಾರುತಗಳನ್ನಾಧರಿಸಿ ಬೆಳೆ ಬೆಳೆಯುವ ಪದ್ಧತಿ ರೂಢಿಯಲ್ಲಿದೆ. ನೀರಾವರಿ ಪ್ರದೇಶಗಳಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರಾದರೂ ಬೇಸಾಯದ ಬಹುಭಾಗ ಸಾಂಪ್ರದಾಯಿಕ ಮಾದರಿಯಲ್ಲೇ ನಡೆಯುತ್ತದೆ. ಇವುಗಳನ್ನು ಖುಷ್ಕಿ, ಭಾಗಾಯತ ಎಂಬುದಾಗಿ ವಿಂಗಡಿಸಲಾಗಿದೆ. ಇದನ್ನು ಹೊಲ ಹಾಗೂ ತೋಟ ಎಂದು ಕರೆಯುತ್ತಾರೆ.

೬.೧. ಮುಂಗಾರು ಮತ್ತು ಹಿಂಗಾರು ಕೃಷಿ ಕ್ಷೇತ್ರ ಹಾಗೂ ಬೆಳೆಗಳು

ಸಾಮಾನ್ಯವಾಗಿ ಗ್ರಾಮದ ಒಟ್ಟು ಕ್ಷೇತ್ರ ಮುಂಗಾರು ಹಿಂಗಾರು ಕೃಷಿ ಕ್ಷೇತ್ರ ಹಾಗೂ ಮುಂಗಾರು ಹಿಂಗಾರು ಬೆಳೆಗಳನ್ನು ಗಮನಿಸುವುದು ಇಲ್ಲಿ ಅತಿ ಅವಶ್ಯಕವಾಗಿದೆ.

ಗ್ರಾಮವು ೧೦೮೧೬ ಎಕರೆ ೧ ಗುಂಟಾ ಭೂಮಿ ವಿಸ್ತಾರವನ್ನು ಹೊಂದಿದೆ. ಇದರಲ್ಲಿ ಸಾಗುವಳಿ ಕ್ಷೇತ್ರ ೧೦೧೫೧ ಎಕರೆ ೩ ಗುಂಟಾ ಹೊಂದಿದೆ. ಇನ್ನು ಸಾಗುವಳಿ ಆಗದೇ

ಇರುವ ಪೋಟ ಖರಾಬ ಜಮೀನು ೬೮೪.೩೮ ಗುಂಟಾ ಇರುತ್ತದೆ. ಗ್ರಾಮದ ಮುಂಗಾರಿ ಕ್ಷೇತ್ರ ೩೧೦೦ ಎಕರೆಯಷ್ಟು ಇದೆ. ಇನ್ನು ೭೦೩೧ ಎಕರೆಯಷ್ಟು ಹಿಂಗಾರಿ ಕ್ಷೇತ್ರವನ್ನು ಹೊಂದಿದೆ. ಎಂದರೆ ಹಿಂಗಾರಿ ಕ್ಷೇತ್ರಕ್ಕೆ ಸಿಂಹಪಾಲು ಆಗಿರುವುದು ಗೊತ್ತಾಗುತ್ತದೆ.

ಅದರಂತೆ ಗ್ರಾಮದ ನೀರಾವರಿ ಕ್ಷೇತ್ರ ೩೦೦೦ ಎಕರೆಯಷ್ಟು ಹೊಂದಿದ್ದರೆ ೭೧೩೧ ಎಕರೆಯಷ್ಟು ಖುಷ್ಕಿ ಒಣ ಬೇಸಾಯದ ಭೂಮಿಯನ್ನು ಹೊಂದಿದೆ. ಇನ್ನು ದನಕರುಗಳನ್ನು ಮೇಯಿಸಲು ೨೧೯ ಎಕರೆ ಗಾಯರಾಣಾ ಹೊಂದಿದೆ. ಒಟ್ಟು ಖಾತೆದಾರರು ೧೫೧೬ ಜನರಿದ್ದರೆ; ಅದರಲ್ಲಿ ಚಿಕ್ಕ ಹಿಡುವಳಿದಾರರು ೭೨೭ ಹಾಗು ಅತಿ ಚಿಕ್ಕ ಹಿಡುವಳಿದಾರರು ೩೬ ಜನರಿದ್ದಾರೆ.

ಮುಂಗಾರು ಬೆಳೆಗಳು: ಗ್ರಾಮದಲ್ಲಿ ಅನೇಕ ಮುಂಗಾರು ಬೆಳೆಗಳನ್ನು ಬೆಳೆಯುತ್ತಾರೆ. ಭೂಮಿ ಗುಣಧರ್ಮಗಳ ಹಿನ್ನಲೆಯಲ್ಲಿ ಮಳೆಯ ಪ್ರಮಾಣವನ್ನು ಅನುಸರಿಸಿ ಬೆಳೆಯನ್ನು ತೆಗೆಯುತ್ತಾರೆ.

ಸಾಮಾನ್ಯವಾಗಿ ಹೆಸರು, ಉದ್ದು, ಅಲಸಂದಿ, ಶೇಂಗಾ, ಸೂರ್ಯಕಾಂತಿ, ಮುಕಣಿ, ಹುರುಳಿ ಸಜ್ಜೆ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ.

ಹಿಂಗಾರಿ ಬೆಳೆಗಳು: ಪ್ರಮುಖವಾಗಿ ಜೋಳ, ಕಡಲೆ, ಗೋಧಿ, ಶೇಂಗಾ, ತೊಗರಿ, ಅಗಸಿ, ಸೂರ್ಯಕಾಂತಿ, ಬಿಳಿಕುಸುಬಿ, ಮುಸುಕಿನ ಜೋಳ, ಕಾರ್‍ಯಾಳ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ.

ನೀರಾವರಿ ಬೆಳೆಗಳು ಸಾಮಾನ್ಯವಾಗಿ ಮುಸುಕಿನ ಜೋಳ, ಹತ್ತಿ, ಸೂರ್ಯಕಾಂತಿ, ಸಾಸಿವೆ, ಗೋಧಿ, ಕಬ್ಬು, ತೋಟಗಾರಿಕೆ ಬೆಳೆಗಳಾದ ದ್ರಾಕ್ಷಿ, ದಾಳಿಂಬೆ ಇತರ ಬೆಳೆಗಳನ್ನು ನೀರಾವರಿ ಭೂಮಿಯಲ್ಲಿ ಬೆಳೆಯುತ್ತಾರೆ. ಹೀಗಾಗಿ ಇವು ಮುಂಗಾರಿ, ಹಿಂಗಾರಿ ಎರಡು ಸಂದರ್ಭದಲ್ಲಿ ಬೆಳೆಯುವ ಬೆಳೆಗಳಾಗಿವೆ.

ಖುಷ್ಕಿ ಅಥವಾ ಒಣ ಬೇಸಾಯ

ಒಣಭೂಮಿಯ ಬೇಸಾಯ ಅಥವಾ ಮಳೆಯನ್ನಾಧರಿಸಿ ಬೆಳೆಯುವ ಬೆಳೆಗಳಿಗೆ ಖುಷ್ಕಿ ಬೆಳೆಗಳು ಎಂದು ಕರೆಯುತ್ತಾರೆ. ಸರ್ಕಾರಿ ದಾಖಲೆಗಳಲ್ಲಿ ಖುಷ್ಕಿ ಭೂಮಿ, ಬೇಸಾಯ ಮುಂತಾದ ವಿವರಗಳು ದೊರೆಯುತ್ತವೆ. ಇದನ್ನು ಜನಪದರು 'ಹೊಲ' ಅಥವಾ ಹೊಲದ ಬೇಸಾಯ ಎಂದು ಕರೆಯುವುದರ ಜೊತೆಗೆ 'ಮೇಲ್ವಾಟಿ' ಎಂದು ಕರೆಯುತ್ತಾರೆ. ಹೊಲಗಳಲ್ಲಿ ಪ್ರಮುಖವಾಗಿ ಬೆಳೆ ಜೋಳವನ್ನು ಬೆಳೆಯುತ್ತಾರೆ. ಉಳಿದಂತೆ ಗೋಧಿ, ಕಡಲೆ, ಅವರೆ, ತೊಗರಿ, ಹೆಸರು, ಹುರುಳಿ, ಮುಕಣಿ, ಶೇಂಗಾ, ಉದ್ದು, ಹವಿಜ, ನವಣೆ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ.

ಮಿಶ್ರ ಬೆಳೆಗಳು: ವಿಶೇಷವಾಗಿ ಮಿಶ್ರ ಬೆಳೆಗಳಾದ ಜೋಳ, ಕಡಲೆಯನ್ನು ಮತ್ತು ಅಗಸಿ, ಗೋಧಿ, ಸಾಸುವೆಯನ್ನು ಮಿಶ್ರ ಬೆಳೆಯಾಗಿ ಬೆಳೆಯುತ್ತಾರೆ. ಜೋಳ ಮತ್ತು ಬಿಳಿ ಕುಸುಬೆಯನ್ನು ಕೂಡ ಬೆಳೆಯುತ್ತಾರೆ. ಅದರಂತೆ ಶೇಂಗಾ, ತೊಗರಿ, ಹಾಗೂ ಮುಕಣಿ,

ಹುರಳಿ ಮುಂತಾದವುಗಳನ್ನು ಬೆಳೆಯುತ್ತಾರೆ. ಹೀಗೆ ಮಿಶ್ರ ಬೆಳೆಯನ್ನು ಬೆಳೆಯುವುದು ಏಕೋದ್ದೇಶದಿಂದ ಕೂಡಿದ್ದಲ್ಲ. ಆಹಾರ ಪದಾರ್ಥಗಳ ಜೊತೆಗೆ ಪಶುಗಳಿಗೆ ಮೇವನ್ನು ಪಡೆಯುವ ಉದ್ದೇಶವನ್ನು ಹೊಂದಿದೆ. ಆದುದರಿಂದ ಸಾಂಪ್ರದಾಯಿಕ ಉತ್ಪನ್ನಗಳು ಬಹುಪಯೋಗಿ ಉತ್ಪನ್ನಗಳಾಗಿವೆ.

ಹೀಗಾಗಿ ಮಳೆಯ ಆಶ್ರಿತವಾದ ಭೂಮಿಯೆ ಗ್ರಾಮಸ್ಥರಿಗೆ ಜೀವನಾಧಾರವಾಗಿದ್ದು; ಜೋಳದ ನಾಡು ಎಂದು ಪ್ರಸಿದ್ಧಿ ಪಡೆದಿದೆ. ಎಲ್ಲದಕ್ಕೂ ಮಳೆಯೇ ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತದೆ. ಹೀಗಾಗಿ ಖುಷ್ಕಿ ಭೂಮಿಯೆ ಗ್ರಾಮದ ಜೀವನಾಡಿಯೆಂದರು ತಪ್ಪಾಗಲಾರದು.

ನೀರಾವರಿ ಅಥವಾ ಬಾಗಾಯತ

ಹೊಲ ಅಥವಾ ಮೆಲ್ವಾಟಿ ಹೊರತಾಗಿ ಬೆಳೆ ಬೆಳೆಯುವದು ನೀರಾವರಿ ಅಥವಾ ಬಾಗಾಯತ ಜಮೀನಿನಲ್ಲಿಯೇ ಹೌದು. ಇಲ್ಲಿ ಗೋಧಿ, ಜೋಳ, ಮುಸುಕಿನ ಜೋಳ, ಕಡಲೆ, ಸಜ್ಜೆ, ಕಬ್ಬು, ಬಾಳೆಗಿಡ, ಪೇರಲ, ದ್ರಾಕ್ಷಿ, ದಾಳಿಂಬೆ ಹೀಗೆ ವಿವಿಧ ಬೆಳೆಗಳ ಜೊತೆ ಕಾಯಿಪಲ್ಯೆ ಬೆಳೆಯನ್ನು ಕೂಡ ಬೆಳೆಯುತ್ತಾರೆ.

೬.೨. ಉಪಕರಣಗಳು

ಬೇಸಾಯಕ್ಕಾಗಿ ಬಳಸುವ ಪರಿಕರಗಳು, ಅವುಗಳ ಸ್ವರೂಪ ಮತ್ತು ವೈಶಿಷ್ಟ್ಯವನ್ನು ಕುರಿತು ಈ ಭಾಗದಲ್ಲಿ ವಿವೇಚಿಸಲಾಗಿದೆ.

ನೇಗಿಲು: ಭೂಮಿಯ ಉಳುಮೆಗಾಗಿ ಬಳಸುವ ಸಾಧನ. ಇದಕ್ಕೆ ಗ್ರಾಮದ ರೈತರು ಗಳೆ ಹೊಡೆಯುವುದು (ಉಳುಮೆ ಮಾಡುವುದು) ಎನ್ನುತ್ತಾರೆ. ಈ ನೇಗಿಲಿನಲ್ಲಿ ಮೂರು ರೀತಿಗಳಿವೆ. ೧) ಕಟ್ಟಿಗೆ ಗಳೆ ೨)ಬಲರಾಮ ಗಳೆ ೩) ಕಬ್ಬಿಣ ಗಳೆ ಇವುಗಳು ಹೆಸರೆ ಸೂಚಿಸುವಂತೆ ನೇಗಿಲಿನ ತಯಾರಿಕೆಯಲ್ಲಿ ಬಳಸಿದ ವಸ್ತುಗಳನ್ನಾಧರಿಸಿ ಈ ರೀತಿ ವಿಭಜನೆ ಮಾಡಲಾಗಿದೆ. ಆದರೆ ನೇಗಿಲು ಅಖಂಡವಾದುದಲ್ಲ. ಮರದ ಹಾಗೂ ಕಬ್ಬಿಣದ ಉಪಯೋಗ ಕಂಡುಬರುತ್ತದೆ. ಕಬ್ಬಿಣದ ಗಳೆಯಲ್ಲಿ ಎರಡೆತ್ತಿನ ಗಳೆ, ನಾಲ್ಕತ್ತಿನ ಗಳೆ, ಆರೆತ್ತಿನ ಗಳೆ, ಹೀಗೆ ಅದರಲ್ಲು ಪ್ರಕಾರಗಳುಂಟು. ಬಲರಾಮನ ಆಯುಧದಂತಿರುವದರಿಂದ ಇದಕ್ಕೆ ಬಲರಾಮಗಳೆ ಎಂದು ಕೂಡ ಕರೆಯಲಾಗಿದೆ.

ಕಟ್ಟಿಗೆ ನೇಗಿಲು: ಮೂರು ಅಡಿ ಮರ ಕೆತ್ತಿ ಒಂದು ತುದಿ ಚೂಪಾಗಿದ್ದು, ತಲೆಯ ಭಾಗದಲ್ಲಿ ಚಪ್ಪಟೆಯಾಗಿದ್ದು; ಮೇಳಿ ಸೇರಿಸಲು ಅದರಲ್ಲಿ ತೂತು (ಕುಳಿ) ಮಾಡಿರುತ್ತಾರೆ.

ಪಾಳ: ಕಟ್ಟಿಗೆ ಅಥವಾ ಕಬ್ಬಿಣ ನೇಗಿಲಿನ ತುದಿಗೆ ಎರಡು ಬೆರಳು ಅಂಗುಲ ಅಗಲದ; ಒಂದು ಗೇಣು ಉದ್ದದ ಕಬ್ಬಿಣದ ಚೂಪಾದ ತುಂಡು ಇರುತ್ತದೆ. ಇದಕ್ಕೆ ಪಾಳ ಎನ್ನುವರು. ಇದು ಬಿರುಸಾದ ಭೂಮಿಯಲ್ಲಿ ಉಳುಮೆಗೆ ಬಳಸಲು ಸಹಾಯ ಮಾಡುತ್ತದೆ.

ಮೇಳಿ: ನೇಗಿಲನ್ನು ಹಿಡಿದು ಉಳುಮೆ ಮಾಡುವುದಕ್ಕೆ; ನೇಗಿಲನ್ನು ಆಧಾರವಾಗಿ ಹಿಡಿದುಕೊಳ್ಳುವುದಕ್ಕೆ ಸಹಾಯ ಮಾಡುತ್ತದೆ. ಇಂಗ್ಲೀಷಿನ ಐ ಆಕಾರದಲ್ಲಿ ಇರುತ್ತದೆ. ಇದು ಹರಗುವ ದಿಂಡು, ಬಿತ್ತುವ ಕೂರಿಗೆ, ಬಲರಾಮಗಳೆ ಮುಂತಾದ ಎಲ್ಲ ಸಾಧನಗಳಿಗೂ ಕೂಡ ಅತೀ ಅವಶ್ಯಕವಾಗಿ ಬೇಕಾಗಿರುವದಾಗಿದೆ.

ಈಸ: ನೇಗಿಲು ಉಳುಮೆಗೆ ಅಥವಾ ಕುಂಟೆ ದಿಂಡಿಗೆ, ಎಡಿ ಹೊಡೆಯುವ ದಿಂಡಿಗೆ, ಬಿತ್ತುವ ಕೂರಿಗೆಗೆ, ಎತ್ತಿನ ಬಂಡಿಗೆ ಎತ್ತುಗಳು ಹೊತ್ತಿರುವ ನೊಗಕ್ಕೆ ಬಂಧಿಸುವ ಉದ್ದನೆಯ ದಂಡವನ್ನು "ಈಸ" ಎಂದು ಕರೆಯುತ್ತಾರೆ. ಮೇಲೆ ಹೇಳಿರುವ ವಿವಿಧ ಪರಿಕರಗಳಿಗೆ ಹೆಚ್ಚು ಕಡಿಮೆ ಉದ್ದವನ್ನು ಹೊಂದಿರುವ ಸಾಧ್ಯತೆಗಳಿವೆ.

ಜಂತಿಗೆ: ಎತ್ತುಗಳ ಹೆಗಲ ಮೇಲಿರುವ ನೊಗಕ್ಕೂ ಎತ್ತುಗಳಿಗೂ ಬಂಧಿಸುವದಕ್ಕೆ ಸಹಾಯ ಮಾಡುವ ಚರ್ಮದ ಅಥವಾ ಹಗ್ಗದಿಂದ ಮಾಡಲ್ಪಟ್ಟ ಸಾಧನ ಇದಾಗಿದೆ.

ಕಳಕಿಲ: ನೊಗಕ್ಕೆ ತೂತು (ರಂಧ್ರಗಳು)ಗಳಿದ್ದು ಅದರಲ್ಲಿ ಸಿಕ್ಕಿಸುವ ಕಟ್ಟಿಗೆಯ ಕೋಲು ಇದಾಗಿದ್ದು; ಜಂತಿಗೆಯನ್ನು ತಂದು ಇದಕ್ಕೆ ಗಂಟು ಹಾಕುವದುಂಟು.

ನೊಗ: ಪ್ರಮುಖವಾಗಿ ಆಚೆ, ಇಚೆ ಇರುವ ಎರಡು ಎತ್ತುಗಳ ಹೆಗಲ ಮೇಲೆ ಈ ನೊಗವನ್ನು ಇಡುತ್ತಾರೆ. ಈ ನೊಗಕ್ಕೆ ಎಲ್ಲ ಎತ್ತುಗಳ ಸಹಾಯದಿಂದ ಕೆಲಸ ಮಾಡುವ ಉಪಕರಣಗಳನ್ನು ಬಂಧಿಸುತ್ತಾರೆ.

ಹಗ್ಗ: ಇನ್ನು ಕೃಷಿ ಚಟುವಟಿಕೆಯ ಉಪಕರಣಗಳನ್ನು ಬಳಸಲು; ಒಂದಕ್ಕೊಂದು ಬಂಧಿಸಲು ಸಹಾಯಕವಾದ ಉಪಕರಣವೇ ಹಗ್ಗ. ಇದನ್ನು ನಾರಂಜಿ ಎನ್ನುವ ಸಸ್ಯದ ದೊಡ್ಡದಾದ ರೆಕ್ಕೆಗಳಿಂದ ನಿರ್ಮಿಸಿರುತ್ತಾರೆ.

ಈ ನಾರಿನಲ್ಲಿ ಪುಂಡಿ ನಾರು ಮತ್ತು ಕಲ್ಲು ನಾರು ಎಂದು ಎರಡು ವಿಧಗಳುಂಟು.

ಕುಂಟಿ ಅಥವಾ ಹರಗು ದಿಂಡು: ಇದು ಕಟ್ಟಿಗೆ ಕೊರಡಿನಿಂದ ನಿರ್ಮಿಸಿದ್ದು ಸುಮಾರು ಎರಡರಿಂದ ಮೂರು ಅಡಿ ಉದ್ದವಾಗಿರುತ್ತದೆ. ಇದಕ್ಕೆ ಮಧ್ಯದಲ್ಲಿ ಎರಡು ರಂಧ್ರಗಳನ್ನು ಮಾಡಿ ಈಸುಗಳನ್ನು ಸಿಕ್ಕಿಸುತ್ತಾರೆ. ನಂತರ ಈಸುಗಳಿಗೆ ನೊಗವನ್ನು ಕಟ್ಟಿರುತ್ತಾರೆ. ಅದರಂತೆ ಇದಕ್ಕೆ ಆಚೆ ಈಚೆ ದಿಂಡಿನ ಕೊನೆಗಿಂತ ಸ್ವಲ್ಪ ಹತ್ತಿರದಲ್ಲಿ ಎಡಕ್ಕೆ ಬಲಕ್ಕೆ ಎರಡು ರಂದ್ರಗಳನ್ನು ಕೊರೆದಿರುತ್ತಾರೆ. ನಂತರ ಆ ರಂಧ್ರಗಳಲ್ಲಿ ಕಬ್ಬಿಣದ ತಾಳನ್ನು ಹಾಕಿರುತ್ತಾರೆ. ನಂತರ ಇದರಿಂದ ಬಿತ್ತಿದ ಮೇಲೆ ಬಳಸಾಲು ಹೊಡೆದು ಬಿತ್ತಿದ್ದ ಸಾಲಿನ ಮೇಲೆ ಮಣ್ಣು ಹಾಕಲು ಉಪಯೋಗಿಸುತ್ತಾರೆ. ಇದಕ್ಕೆ "ಬಳಸಾಲು ಹೊಡೆಯುವುದು" ಎಂದು ಕರೆಯುತ್ತಾರೆ. ಅದರಂತೆ ಖಾಲಿ ಭೂಮಿಯಲ್ಲಿ ಎತ್ತುಗಳಿಂದ ಮಣ್ಣನ್ನು ಸಡಿಲಗೊಳಿಸಲು ಉಪಯೋಗಿಸುತ್ತಾರೆ. ಸುಮಾರು ಸಂದರ್ಭದಲ್ಲಿ ಮಳೆ ಆಶ್ರಿತ ಭೂಮಿಯಲ್ಲಿ ಗಳೆ ಹೊಡೆಯುವ ಬದಲು ಇದರಿಂದ ಕನಿಷ್ಠ ಎರಡು ಮೂರು ಬಾರಿ ಕುಂಟಿ ಹೊಡೆಯುತ್ತಾರೆ. ಇದರಿಂದ ಭೂಮಿಯನ್ನು ಬಿತ್ತಲು ಹದಗೊಳಿಸುತ್ತಾರೆ.

ಪಾಳ: ಇದು ಕಬ್ಬಿಣದ ತೆಳುವಾದ ಹಾಗೂ ಹರಿತವಾದ ಸಾಧನ. ಕುಂಟಿಯ ಕೊಂಡಿಗೆ ಇದನ್ನು ಅಳವಡಿಸುತ್ತಾರೆ. ನಂತರ ಭೂಮಿಯ ಉಳುಮೆಗೆ ಬೀಜ ಬಿತ್ತಿದ ನಂತರ ಮಣ್ಣನ್ನು ಸಮಗೊಳಿಸಲು ಉಪಯೋಗಿಸುತ್ತಾರೆ.

ಕೂರಿಗೆ: ಇದು ಜೋಳ, ಗೋಧಿ, ಕಡಲೆ, ಸೂರ್ಯಕಾಂತಿ, ಹೆಸರು, ಅಲಸಂದಿ, ಮುಕಣಿ, ತೊಗರಿ, ಹುರುಳಿ, ಗೋವಿನ ಜೋಳ, ಸಜ್ಜೆ, ಶೇಂಗಾ ಈ ಎಲ್ಲ ಧಾನ್ಯಗಳನ್ನು ಮಣ್ಣಿನ ಒಳಗೆ ಬಿತ್ತನೆ ಮಾಡಲು ಬಳಸುತ್ತಾರೆ.

ಇದರಲ್ಲಿ ಹದಿನಾರು ಇಂಚಿನ ಕೂರಿಗೆಯಿಂದ ಬಿಳಿ ಜೋಳ, ಕಡಲೆ, ಹೆಸರು, ಅಲಸಂದಿ, ಸಜ್ಜೆ, ಮುಂಗಾರಿ ಜೋಳ, ಉಳ್ಳಾಗಡ್ಡಿ, ಕುಸುಬಿ, ಸರ್ವಧಾನ್ಯ ಬಿತ್ತಲಿಕ್ಕೆ ಬಳಸುತ್ತಾರೆ. ಇನ್ನು ಹೆಚ್ಚಿನ ಇಳುವರಿ ತೆಗೆಯಲು ಬಯಸುವವರು ೧೯ ಇಂಚಿನ ಕೂರಿಗೆಯನ್ನು ಉಪಯೋಗಿಸುತ್ತಾರೆ. ಸಾಲಿನಿಂದ ಸಾಲಿಗೆ ಹೆಚ್ಚಿನ ಅಂತರ ಉಂಟಾಗಿ ಹೆಚ್ಚು ಬೆಳೆ ಬೆಳೆಯುತ್ತದೆ. ೧೨ ಇಂಚಿನ ಕೂರಿಗೆಯನ್ನು ಗೋಧಿ ಬಿತ್ತಲು ಉಪಯೋಗಿಸುತ್ತಾರೆ.

ಇದಕ್ಕ ಬೇಕಾದ ಸಾಮಾನುಗಳು: ದಿಂಡು, ಕೂರಿಗೆಯ ಮೆಳೆ ಕಟ್ಟಿದ ಮೂರು ತಾಳುಗಳು, ಮೆಳಿ, ಎರಡು ಈಸು, ಶೆಕ್ಕೆ, ಹಿಂಗೀಲು ಮಿಣಿ (ಮೂರು ಕೋಲು, ಒಂದು ಮಂಡಿ, ನೂಲಿನ ದಾರ, ಬಿಗಿಯಲಿಕ್ಕೆ ತೊಗಲಿನ ಬಾರು ಆಕಾರದ ಒಂದು ಬಳೆ, ನಗ, ಜತ್ತಿಗೆ, ಎಡದಿಂದ (ಕುಂಟೆ) ಮೇಲೆ ಹೇಳಿದ ಕೂರಿಗೆಗಳಿಗೆ ತಕ್ಕಂತೆ ಎಡೆ ಕುಂಟೆಗಳನ್ನು ಬಳಸುತ್ತಾರೆ. ೧೬ ಇಂಚಿನ ಕೂರಿಗೆಯಿಂದ ಬಿತ್ತಿದಾಗ ಪಟ್ಟಿಗುಂಟೆ ಬಳಸುತ್ತಾರೆ.

ಸಾಮಗ್ರಿಗಳು: ದಿಂಡು, ತಾಳು, ಜೋಡ ಈಸು, ಮೇಳಿ, ಬಳೆ, ಕುಡ, ಸಕ್ಕಿ, ಹೀಂಗಿಲು, ಎಡೆ, ಮಿಣಿ, ಬ್ಯಾಕೀಲು, ಚಿಕ್ಕ ನೊಗ, ಒಂದು ಕುಂಟೆ ಹೊಡೆಯುವಾಗ ೯ ಗೇಣು, ೧ ಸಾಲು, ಬಿಟ್ಟು ಹೊಡೆಯುವಾಗ ೧೩ ಗೇಣಿನ ನಗ, ೧೯ ಇಂಚಿನ ಕೂರಿಗೆಗೆ ೧೧ ಗೇಣಿನ ನೊಗ, ಎಲ್ಲಾ ನಗಗಳಿಗೆ ಕಳೆ, ಜತ್ತಿಗೆ ಎಲ್ಲಾ ಕುಂಟೆಗಳಿಗೆ ಯಾವುದೇ ಬೆಳೆ ಹಾಕಿದಾಗ ಪಡೆಯುವ ಉದ್ದೇಶ ಸಾಲಿನ ಮಧ್ಯದಲ್ಲಿದ್ದ ಕಳೆ ಕಿತ್ತುಹೋಗಿ ಬೆಳೆಗಳ ಬೇರುಗಳಿಗೆ ಮಣ್ಣು ಸಂಗ್ರಹವಾಗಿ ತೇವಾಂಶ ಆರದಂತೆ ಭುಮಿಯಲ್ಲಿಯೇ ಉಳಿದು ಸಮಗ್ರ ಬೆಳೆ ಬರುತ್ತದೆ. ಹೀಗೆ ಬೆಳೆ ಬರುವುದರೊಳಗಾಗಿ ಒಂದು ಬಾರಿ ಹೀಗೆ ಹೊಡೆಯುವುದರಿಂದ ಬೀಡು ಬಿಟ್ಟ ನೆಲದ ರಂದ್ರಗಳನ್ನು ಮುಚ್ಚಿಕೊಂಡು ತೇವಾಂಶ ಆರದಂತೆ ತಡೆಯುತ್ತದೆ. ಎಡೆ ಕುಂಟೆ ಒಂದು ಸಾಲನ್ನು ಮಧ್ಯ ಮಾಡಿಕೊಂಡು ಇನ್ನುಳಿದ ಮೂರು ಸಾಲುಗಳ ಮಧ್ಯ ಬರುವ ಎರಡು ಬೀದಿಗಳಲ್ಲಿ ಹಾದುಹೋಗುತ್ತದೆ.

ಡುಮ್ಮ ದಿಂಡು: ಎಡೆ ಕುಂಟೆಯನ್ನು ಬಿತ್ತಿದ ನಂತರ ಒಂದು ಬಾರಿ ಮಾತ್ರ ಉಳುಮೆ ಮಾಡಿದರೆ ಡುಮ್ಮ ಕುಂಟೆ ಎರಡು ಮೂರು ಬಾರಿ ಹೊಡುಯುವುದುಂಟು. ಏಕೆಂದರೆ ಇದು ಎರಡು ಸಾಲಿನ ಮಧ್ಯ ಹಾಯ್ದು ಹೋಗುತ್ತದೆ. ಇಂಗ್ಲೀಷಿನ ಗ ಆಕಾರದಲ್ಲಿರುತ್ತದೆ. ಇದು ಕೂಡ ಒಣಭೂಮಿಯ ತೇವಾಂಶ ಆರದಂತೆ ಕಾಪಾಡುತ್ತದೆ.

ಬಾರುಕೋಲು: ಎತ್ತುಗಳನ್ನು, ದನಗಳನ್ನು, ಎತ್ತಿನಗಾಡಿ ಸಂದರ್ಭದಲ್ಲಿ ಎತ್ತುಗಳನ್ನು ಹದ್ದು ಬಸ್ತಿನಲ್ಲಿಡಲು ನಾರಿನ ಹಗ್ಗದಿಂದ ಮಾಡಿದ ಭಾವಟಿ. ಇದನ್ನು ಅತ್ಯಂತ ಸುಂದರವಾದ ಕುಚ್ಚುಗಳಿಂದ ಬುಡದಲ್ಲಿ ಶೃಂಗರಿಸುತ್ತಾರೆ. ಹೆಸರೇ ಸೂಚಿಸುವಂತೆ ಇದು ಬಾರು-ಎಂದರೆ ತೊಗಲಿನಿಂದ ಮಾಡಿದ ಉದ್ದನೆಯ ಭಾವಟಿ ಕೋಲು ಎಂದರೆ ಅದಕ್ಕೆ ತೊಡಕು ಹಾಕಿದ ಕಟ್ಟಿಗೆ.

ಗುದ್ದಲಿ: ಇದು ನೆಲವನ್ನು ಅಗೆಯಲು ಬಳಸುವ ಸಾಧನ. ಅತ್ಯಂತ ಕಠಿಣವಾದ ನೆಲವನ್ನು ಅಗೆಯಲು ಇದು ಸಹಾಯಕ. ಇದು ಎರಡು ಕಡೆಯಲ್ಲಿ ಚೂಪಾದ ಹರಿತವಾದ ಮುಖವನ್ನು ಹೊಂದಿರುತ್ತದೆ. ಒಂದೊಂದು ಗುದ್ದಲಿಯಲ್ಲಿ ಒಂದು ಕಡೆ ಅಗಲವಾದ ಇನ್ನೊಂದು ಕಡೆ ಚೂಪಾದ ಮುಖ ಹೊಂದಿರುತ್ತದೆ. ನಡುವೆ ಕಟ್ಟಿಗೆಯ

"ಕಾಂವ" ಅಂದರೆ ಕೈಯಲ್ಲಿ ಹಿಡಿಯಲು ಸಹಾಯಕವಾದ ಕಟ್ಟಿಗೆ ಇರುತ್ತದೆ. ಭೂಮಿಯಲ್ಲಿ ಆಳವಾಗಿ ಬೇರುಬಿಟ್ಟ ಕರಿಕೆಯನ್ನು ಅಗೆದು ತೆಗೆಯಲು ಸಹಾಯಕ. ಇದು ೬ ಆಕಾರ ಇರುತ್ತದೆ. ಆದ್ದರಿಂದ ಟಿಕಾಂವ ಎಂದೂ ಕರೆಯುತ್ತಾರೆ.

ಬೆಡಗ: ಇದು ಕೂಡ ನೆಲವನ್ನು ಅಗೆಯುವ ಸಾಧನ. ಇದು ಹಣ್ಣಿನ ಗಿಡದ ತೋಟದಲ್ಲಿ ಅಥವಾ ಇತರೆ ನೆಲವನ್ನು ಅಗೆದು ಹದಗೊಳಿಸಲು ಇದನ್ನು ಬಳಸುತ್ತಾರೆ.

ಸನಿಕೆ: ಇದು ಮಣ್ಣನ್ನು ಹಾಗೂ ಕೆಸರು ಇತರೆ ವಸ್ತುಗಳನ್ನು ಕೂಡಿಹಾಕಲು ಇದು ಸಹಾಯಕ. ಕಬ್ಬಿಣದ ಅಗಲವಾದ ತಗಡಿನಿಂದ ಮಾಡಿದ್ದಿರುತ್ತದೆ.

ಕುರುಪಿ: ಇದು ಬೆಳೆಯಲ್ಲಿ ಬೆಳೆದಿರುವ ಕಸ (ಕಳಿ) ತೆಗೆಯಲು ಬಳಸುವ ಇಂಗ್ಲೀಷಿನ ಐ ಆಕಾರದ ಕಬ್ಬಿಣದ ಸಾಧನ. ಇದರ ಹಿಂದೆ ಇರುವ ಭಾಗವನ್ನು ಹಿಡಿಕೆ ಎಂದು ಕರೆಯುತ್ತಾರೆ. ಏಕೆಂದರೆ ಕಟ್ಟಿಗೆಯಿಂದ ಮಾಡಿದ್ದು ಇರುತ್ತದೆ. ಕೈಗೆ ಕಬ್ಬಿಣದ ಅಂಚು ಚುಚ್ಚಬಾರದು ಎಂದು ಮತ್ತು ಹಿಡಿತಕ್ಕಾಗಿ ಈ ರೀತಿ ಮಾಡಿರುತ್ತಾರೆ.

ಕುಡುಗೋಲು: ಇದು ಕೂಡ ಜೋಳ, ಗೋಧಿ, ಗೊಂಜಾಳ ಇತರೆ ವಸ್ತುಗಳನ್ನು ಕತ್ತರಿಸಲು (ಕೊಯ್ಲು ಮಾಡಲು) ಉಪಯೋಗಿಸುತ್ತಾರೆ.

ಬಾಯಿ ಜಾಳಿಗೆ: ಎತ್ತು ಹಾಗೂ ದನಗಳ ಬಾಯಿಗೆ ಹಾಕುವ ಸಾಧನ. ಅಂದರೆ ಹೆಸರೆ ಸೂಚಿಸುವಂತೆ ಜಾಳಿಗೆ ಚಚ್ಚೌಕದ ಹಲವಾರು ತೂತುಗಳನ್ನು ಅಂದರೆ ಉಸಿರಾಡಲು ಸಹಾಯಕವಾಗುವ ರೀತಿಯಲ್ಲಿ ಇದು ಇರುತ್ತದೆ. ಆದರೆ ಇದನ್ನು ಬಾಯಿಗೆ ಹಾಕಿದ ಮೇಲೆ ದನಕರುಗಳಿಗೆ ಎತ್ತುಗಳಿಗೆ ಯಾವುದೇ ಬೆಳೆಗಳನ್ನು ತಿನ್ನಲು ಬರುವದಿಲ್ಲ.

ಗೂಟ: ರಾತ್ರಿ ಹೊತ್ತು ದನಕರುಗಳನ್ನು ಹಗ್ಗದಿಂದ ಕಟ್ಟುವ ಸಾಧನಕ್ಕೆ ಗೂಟ ಎನ್ನುತ್ತಾರೆ. ಇದು ಕಟ್ಟಿಗೆಯಿಂದ ಮಾಡಿದ್ದು ೩ ರಿಂದ ೪ ಅಡಿ ಇರುವ ಕಟ್ಟಿಗೆಯನ್ನು ಭೂಮಿಯಲ್ಲಿ ತಗ್ಗು ತಗೆದು ಅರ್ಧಭಾಗ ಮಣ್ಣಲ್ಲಿ ಹೂತಿರುತ್ತಾರೆ. ನಂತರ ಉಳಿದ ಅರ್ಧ ಭಾಗಕ್ಕೆ ಹಗ್ಗದಿಂದ ದನಗಳನ್ನು ಕಟ್ಟುತ್ತಾರೆ.

ಹಾರೆ: ಕಬ್ಬಿಣದ ನಾಲ್ಕರಿಂದ ಐದು ಅಡಿ ಉದ್ದ ಹಾಗೂ ದುಂಡನೆಯ ಗಟ್ಟಿಯಾದ ಕಬ್ಬಿಣದ (ರಾಡು) ವಸ್ತುವಿಗೆ ಹಾರೆ ಎನ್ನುತ್ತಾರೆ. ಇದನ್ನು ನೆಲದಲ್ಲಿ ಗುಳಿ (ತಗ್ಗು) ತೋಡಲು ಉಪಯೋಗಿಸುತ್ತಾರೆ.

ಕೊಡಲಿ: ಹೊಲದಲ್ಲಿ ಬೆಳೆದಿರುವ ಗಿಡಮರದ ಟೊಂಗೆಗಳನ್ನು ಕಡಿಯಲು ಸಹಾಯಕವಾದ ಚಪ್ಪಟೆಯಾದ ಕಬ್ಬಿಣದ ಹರಿತವಾದ ವಸ್ತು. ಕಟ್ಟಿಗೆಯ (ಕಾಂವ) ತುದಿಗೆ ಸಿಕ್ಕಿಸಿ ಉಪಯೋಗಿಸಲು ಸುಲಭವಾಗುವಂತೆ ರಚಿಸಿರುತ್ತಾರೆ.

ಜಾಳಿಗೆ: ಜಾಳಿಗೆ ಹೆಸರೇ ಸೂಚಿಸುವಂತೆ ಇದು ನಾರಿನಿಂದ ತಯಾರಿಸಿದ್ದು. ಇದು ಸಾಮಾನ್ಯವಾಗಿ ಶೇಂಗಾ ಹೊಟ್ಟು (ಒಣ ಮೇವು) ಸಂಗ್ರಹಣೆಗೆ ಉಪಯೋಗಿಸುತ್ತಾರೆ. ಶೇಂಗಾ ಹೊಟ್ಟು, ಜೋಳದ ಹೊಟ್ಟು, ಮುಕಣಿ, ಹುರುಳಿ ರಾಶಿ ನಂತರ ಒಣ ಮೇವನ್ನು ಸಂಗ್ರಹಿಸಲು ಉಪಯೋಗಿಸುತ್ತಾರೆ.

ಎತ್ತಿನಗಾಡಿ: ಎತ್ತುಗಳ ಸಹಾಯದಿಂದ ಅನೇಕ ಕೃಷಿ ಸಲಕರಣೆ, ದವಸಧಾನ್ಯ, ಜನರನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸಲು ಕಟ್ಟಿಗೆಯಿಂದ ನಿರ್ಮಿಸಿದ ಗಾಡಿಯನ್ನು ಬಳಸುತ್ತಾರೆ.

ಮುಯ್ಯಾಳು: ಜೋಳ, ಗೋಧಿ, ಕಡಲೆ, ಸೂರ್ಯಕಾಂತಿ ಇತರ ಯಾವುದೇ ಧಾನ್ಯಗಳು ತಮ್ಮ ಹೊಲದಲ್ಲಿ ಬೆಳೆಯುವ ಸಂದರ್ಭದಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡಿ ಕಳೆ ತೆಗೆಯುವದು ಅಥವಾ ಯಾವುದೇ ಕೃಷಿ ಚಟುವಟಿಕೆಗೆ ಕೂಲಿಗೆ ಬದಲಾಗಿ ಶ್ರಮ ಬದಲಾವಣೆ ಮಾಡಿಕೊಳ್ಳುವ ಪದ್ಧತಿಯಾಗಿದೆ. ಇದು ಸಹಕಾರ ಪದ್ಧತಿಯ ಮಾದರಿಯಾಗಿದೆ.

ಅಂಟ: ಇದು ಸಾಕಷ್ಟು ಹಕ್ಕಿಗಳು ಬೆಳೆದ ಪೈರನ್ನು ನಾಶಮಾಡಬಾರದು ಎಂದು ಹಕ್ಕಿಗಳಿಂದ ರಕ್ಷಿಸಲು ಎತ್ತರವಾದ ಮೂರು ಅಥವಾ ನಾಲ್ಕು ಕಟ್ಟಿಗೆಗಳನ್ನು ತೆಗೆದುಕೊಂಡು ಅದರ ಮೇಲೆ ಒಬ್ಬ ವ್ಯಕ್ತಿ ನಿಲ್ಲುವಂತೆ ಕಟ್ಟಿಗೆಗಳಿಂದ ಸ್ಥಳಾವಕಾಶ ಮಾಡಿ ಕವಣಿಗಳಿಂದ ಕಲ್ಲು ಹೊಡೆಯುವ ಸ್ಥಳಕ್ಕೆ ಅಂಟ ಎನ್ನುತ್ತಾರೆ. ಶಿಷ್ಟಭಾಷೆಯಲ್ಲಿ ಅಟ್ಟ ಎಂದೂ ರಚಿಸಿಕೊಂಡಿರುವರು. ಅಟ್ಟ ಎಂದರೆ ಇಲ್ಲಿ ಎತ್ತರವಾದ ಸ್ಥಳ ಎಂದರ್ಥ.

ಸೂಡು: ಸಾಮಾನ್ಯವಾಗಿ ಕೊಯ್ಲು ಮಾಡಿದ ಜೋಳದ ದಂಟುಗಳನ್ನು ಮತ್ತು ಗೋಧಿ ಹುಲ್ಲನ್ನು ಅಥವಾ ಗೋವಿನ ಜೋಳವನ್ನು ಒಟ್ಟಿಗೆ ಸೇರಿಸಿ ಚಿಕ್ಕ ಚಿಕ್ಕ ಗುಂಪುಗಳಾಗಿ ವಿಂಗಡಿಸುವುದಕ್ಕೆ ಸುಡು ಎನ್ನುತ್ತಾರೆ.

ಮೆದಿ: ಮೇಲೆ ಹೇಳಿದ ಅನೇಕ ಸುಡುಗಳನ್ನು ಸೇರಿಸಿದಾಗ ಮೆದಿ ಆಗುತ್ತದೆ.

ಇಕ್ಕಲು: ಅನೇಕ ಮೆದಿಗಳನ್ನು ಸೇರಿಸಿ ಒತ್ತಟ್ಟಿಗೆ ತೆನೆ ಮೇಲೆ ಮಾಡಿ ನಿಲ್ಲಿಸಿ ಸಂಗ್ರಹಿಸುವುದಕ್ಕೆ ಇಕ್ಕಲು ಎನ್ನುವರು. "ಗೂಡ" ಬಡಿಯುವುದು ಎಂದು ಕರೆಯುತ್ತಾರೆ.

ಹಕ್ಕಲು: ಬೆಳೆಯನ್ನು ಕೊಯ್ಲು ಮಾಡಿ ಆದ ಮೇಲೆ; ದನಕರುಗಳಿಗೆ ಮೇಯಲು ಬಿಡುವ ಹೊಲಕ್ಕೆ ಹಕ್ಕಲು ಎಂದು ಹೆಸರು. ಅಲ್ಲದೇ ಹಕ್ಕಲದಲ್ಲಿ ಅಳಿದುಳಿದ ಸಾಕಷ್ಟು ತೆನೆಗಳು ಉಳಿದಿರುವುದುಂಟು.

ಸಾಮಾನ್ಯವಾಗಿ ಬಯಸಿದ್ದಕ್ಕಿಂತಲೂ ಹೆಚ್ಚಿನದೇನೋ ದೊರೆತಾಗ ವ್ಯಂಗ್ಯವಾಗಿ ಈ ಭಾಗದಲ್ಲಿ "ಹಕ್ಕಲಕ್ಕಂತ ಹೋದಾಗ ಇಕ್ಕೆಲ ಸಿಕ್ಕೈತಿ ಹೋಗು" ಎಂದು ಹೇಳುವದುಂಟು.

ಕಣ: ಧಾನ್ಯದ ರಾಶಿ ಮಾಡುವುದಕ್ಕಾಗಿ ಸಮನಾಗಿ ಅನುಕೂಲವಾದ ಸ್ಥಳವನ್ನು ನೋಡಿ ವೃತ್ತಾಕಾರವಾಗಿ ಕೆತ್ತಿ, ಸಾರಿಸಿ ತಯಾರಿಸುವ ಸ್ಥಳಕ್ಕೆ ಕಣ ಎನ್ನುತ್ತಾರೆ. ಕಣದಲ್ಲಿ ಚಪ್ಪಲಿ ಧರಿಸಿ ತಿರುಗಾಡುವದಿಲ್ಲ. ಇದು ಪವಿತ್ರ ಸ್ಥಳ ಎಂದು ರೈತರ ಭಾವನೆ.

ಮೇಟಿ: ವೃತ್ತಾಕಾರವಾದ ಕಣದ ಮಧ್ಯದಲ್ಲಿ ೧೦-೧೨ ಅಂಗುಲ ವ್ಯಾಸವಿರುವ ಎಂಟು-ಹತ್ತು ಅಡಿ ಉದ್ದವಿರುವ ಕಟ್ಟಿಗೆ ಕಂಬವನ್ನು ನಿಲ್ಲಿಸಿರುತ್ತಾರೆ. ಇದಕ್ಕೆ 'ಮೇಟಿ' ಎಂದು ಕರೆಯುತ್ತಾರೆ. ಈ ಕಂಬಕ್ಕೆ ಎತ್ತು ದನಗಳನ್ನು ಕಟ್ಟಿ 'ಹಂತಿ' ಅಂದರೆ ದನಗಳಿಂದ ತೆನೆಗಳನ್ನು ತುಳಿಸಲು ಅನುಕೂಲವಾಗುತ್ತಿತ್ತು.

ರಾಗೊಲ: ಕಣದಲ್ಲಿರುವ ತೆಗೆಗಳನ್ನು ಒತ್ತಟ್ಟಿಗೆ ಕೈಯಿಂದ ಬಾಚಲು ಆಗುವದಿಲ್ಲ. ಅವುಗಳನ್ನು ಒಟ್ಟುಗೂಡಿಸಲು ನಿರ್ದಿಷ್ಟವಾದ ಉಪಕರಣವೇ ರಾಗೊಲ. ಇದು ನಾಲ್ಕು-ಐದು

ಚೂಪಾದ ಒಂದರ ಪಕ್ಕಾ ಒಂದರಂತೆ ಮೂರು ನಾಲ್ಕು ಅಂಗುಲ ಬಿಟ್ಟು ಒಂದರಂತೆ ಹಾಕಿರುತ್ತಾರೆ.

ಪಾವಡ: ಇದು ರಾಗೊಲದಂತೆ ಉದ್ದನೆಯ ಕೋಲಿಗೆ ಅಡ್ಡವಾಗಿ ಹಾಕಿರುವ ಕೊರೆದ ಕಟ್ಟಿಗೆಯ ತೆಳುವಾದ ಭಾಗದಿಂದ ಇದನ್ನು ತಯಾರಿಸುತ್ತಾರೆ. ಇದು ನೋಡಿದರೆ ಸನಿಕೆಯಂತೆ ಕಂಡರೂ ಕಣದಲ್ಲಿರುವ ಧಾನ್ಯಗಳನ್ನು ಒಟ್ಟಿಗೆ ಸೇರಿಸಲು ಅನುಕೂಲಕರವಾದ ಉಪಕರಣ.

ರಾಶಿ ಪೂಜೆ: ಸಾಮಾನ್ಯವಾಗಿ ಯಾವತ್ತು ರಾಶಿ ಮಾಡುವದು ಎಂದು ನಿಶ್ಚಯಿಸಿರುತ್ತಾರೊ ಅವತ್ತು ಕೊಯ್ಲಿಗಾಗಿ, ಒಕ್ಕಲಾಗಿ ತೆನೆ ಸಂಗ್ರಹಿಸಿರುತ್ತಾರೆ. ಅದಕ್ಕೆ ರಾಶಿ ಮಾಡಲು ನಿಶ್ಚಯಿಸಿರುತ್ತಾರೆ. ಹಾಗಾಗಿ ರಾಶಿ ದಿನ ದೇವತಾ ಆರಾಧನೆ ಜೊತೆಗೆ ಕಣದ ಪೂಜೆ ಹಾಗೂ ಧಾನ್ಯದ ಪೂಜೆ ನಡೆಯುತ್ತದೆ. ತಮ್ಮ ಊರ ಸುತ್ತಲೂ ಇರುವ ಎಲ್ಲ ದೇವತೆಗಳ ಜೊತೆಗೆ ತಮ್ಮ ಹೊಲದ ಸುತ್ತಲೂ ಇರುವ ಎಲ್ಲ ದೇವರುಗಳಿಗೆ ನೈವೇದ್ಯ ಕೊಡುತ್ತಾರೆ. ನಂತರ ಕಣಕ್ಕೆ ಪೂಜೆ ಸಲ್ಲಿಸುತ್ತಾರೆ. ಈ ಸಂದರ್ಭದಲ್ಲಿ ಕುಂಕುಮ, ಅರಿಷಿಣ, ವಿಭೂತಿ ಧರಿಸಿ ಪೂಜಿಸುತ್ತಾರೆ. ನೈವೇದ್ಯಕ್ಕಾಗಿ ಹೋಳಿಗೆ, ಸಂಡಿಗೆ, ತುಪ್ಪ, ಅನ್ನ, ಸಾಂಬಾರು ಹೀಗೆ ವಿವಿಧ ರೀತಿ ಖಾದ್ಯ ತಯಾರಿಸಿರುತ್ತಾರೆ. ಅದರಿಂದ ನೈವೇದ್ಯ ಮಾಡುತ್ತಾರೆ. ತೆಂಗಿನಕಾಯಿ ಒಡೆಯುತ್ತಾರೆ. ಉದಬತ್ತಿ, ಕರ್ಪೂರ ಬೆಳಗುತ್ತಾರೆ. ನಂತರ ರಾಶಿ ಆರಂಭಿಸುತ್ತಾರೆ.

ಬೆಳೆಗಳಿಗೆ ಆವರಿಸುವ ರೋಗಗಳು

ಒಣ ಬೇಸಾಯ ಮಾಡುವ ರೈತನ ಬದುಕು ಎಂದೂ ಸೂಸುತ್ರವೆಂದು ಹೇಳಲು ಸಾಧ್ಯವಿಲ್ಲ. ಎಲ್ಲವೂ ಪರಾವಲಂಬಿ ಎಂದೇ ಹೇಳಬೇಕು. ಏಕೆಂದರೆ ಮಳೆ ಆದರೆ ಬೆಳೆ ಬರುವದು, ಬೆಳೆ ಬಂದ ಮೇಲೆ ಕೀಟ ರೋಗಗಳ ಬಾಧೆ. ಹೀಗೆ ಎಲ್ಲದರಲ್ಲೂ ಪಾರಾಗಿ ಬಂದ ಮೇಲೆ ರೈತನಿಗೆ ಉಳಿದ ಬೆಳೆ ಲಭ್ಯವಾಗುವದು.

ಜೋಳಕ್ಕೆ: ಸಾಮಾನ್ಯವಾಗಿ ಜೋಳಕ್ಕೆ ಜಿಗಿ ರೋಗ ಬರುವದು. ಇದರಿಂದ ಜೋಳದ ದಂಟಿಗೆ ಜಿಗಿ ಆವರಿಸಿ; ದಂಟು ಕಣಿಕೆ ಹಾಳಾಗುವ ಸಾಧ್ಯತೆ ಇರುತ್ತದೆ. ಇದರಿಂದ ಇಳುವರಿ ಕಡಿಮೆ ಆಗುತ್ತದೆ.

ಕಡಲೆಗೆ: ಕೀಟ ಬಾಧೆ, ಅಂದರೆ ಕೀಟಗಳಿಂದ ಕಡಲೆ ಬೆಳೆ ನಾಶವಾಗುವ ಸಾಧ್ಯತೆ ಬಹಳಷ್ಟು. ಒಮ್ಮೊಮ್ಮೆ ಇಡೀ ಕಡಲೆ ಬೆಳೆಯನ್ನೇ ತಿಂದು ಮುಗಿಸುತ್ತವೆ. ಒಣ ಬೇಸಾಯ ಇರುವುದರ ಜೊತೆಗೆ ದೂರ ದೂರದ ಪ್ರದೇಶದಲ್ಲಿ ಹೊಲಗಳು ಇರುವುದರಿಂದ ನೀರು ಸಮೀಪ ಇರದೇ ಇರುವುದರಿಂದ ಔಷಧಿ ಸಿಂಪಡಿಸುವುದೂ ಕಷ್ಟದ ಕಾರ್ಯ.

ಗೋಧಿ: ಇಟ್ಟಂಗಿ ರೋಗ ಬರುವುದರಿಂದ ಹಳದಿ ವರ್ಣಕ್ಕೆ ತಿರುಗಿ ಗೋಧಿ ಬೆಳೆಯಲ್ಲಿ ಇಳುವರಿ ಕುಂಠಿತವಾಗುತ್ತದೆ.

ಸೂರ್ಯಕಾಂತಿ: ಸರಿಯಾದ ಸಮಯಕ್ಕೆ ಬಿತ್ತುವ ಕಾರ್ಯ ನಡೆಯದೇ ಇದ್ದಾಗ ಕೀಟ ಬಾಧೆ ಹೆಚ್ಚಾಗಿ; ಕೀಡೆಗಳಿಂದ ಸಾಕಷ್ಟು ತೊಂದರೆಯಾಗುವ ಸಾಧ್ಯತೆ ಬಹಳ. ಅದರ ಜೊತೆಗೆ ಒಮ್ಮೊಮ್ಮೆ ಹತ್ತಾರು ಏಕರೆಯಲ್ಲಿ ಕೇವಲ ಒಂದೋ–ಎರಡೋ ಚೀಲದವರೆಗೆ ಮಾತ್ರ ಧಾನ್ಯಗಳು ಬೆಳೆದ ಉದಾಹರಣೆಗಳಿವೆ.

ಮಳೆಯ ವಿಚಾರ

ಜನಪದರ ಕೃಷಿ ಕಾರ್ಯ ಚಟುವಟಿಕೆಯು ಮಳೆಯನ್ನೇ ಅವಲಂಬಿಸಿರುವುದರಿಂದ ಪ್ರಕೃತಿಯ ವೈಪರಿತ್ಯಗಳು ಮತ್ತು ಋತು ಚಕ್ರದ ಗತಿಯನ್ನು ಅನುಸರಿಸಿ ಕೃಷಿ ಸಂಸ್ಕೃತಿ ಬೆಳೆಯುತ್ತದೆ. ಆಧುನಿಕ ಮಾನವನ ವಾರ್ಷಿಕ ಚಟುವಟಿಕೆಗಳು ಕ್ಯಾಲೆಂಡರ ಲೆಕ್ಕಾಚಾರದಲ್ಲಿದ್ದರೆ ಸಾಂಪ್ರದಾಯಿಕವಾಗಿ ಕೃಷಿಕನ ಕ್ಯಾಲೆಂಡರ ಗೋಡೆಯಲ್ಲಿ ನೇತಾಡುವುದಿಲ್ಲ. ಬದಲಾಗಿ ಆಕಾಶದ ನಕ್ಷತ್ರಗಳಲ್ಲಿ ಅಡಗಿರುತ್ತದೆ. ಮಳೆಯ ಮಾರುತಗಳನ್ನು ಮಾಪನದ ಮಾನದಂಡದಿಂದ ಅಳೆಯದೆ ತಮ್ಮ ಅನುಭವದ ಪರಿಧಿಯಲ್ಲಿ ಬಂಧಿಸುತ್ತಾನೆ. ಮಳೆಯ ಲಕ್ಷಣಗಳಲ್ಲಿ; ಆಯಾ ಕಾಲದ ಬೆಳೆಯ ಪರಿಸ್ಥಿತಿಯನ್ನು ತನ್ನ ಕ್ಯಾಲೆಂಡರಿಗೆ ಅಂಟಿಸಿದ್ದಾನೆ. ಹೀಗೆ ಈ ಭಾಗದ ರೈತ ಜೀವನದಲ್ಲಿ ಮಳೆಗೆ ಸಂಬಂಧಿಸಿದ ನಂಬಿಕೆಗಳು, ಅವರ ಆಚರಣೆಗಳನ್ನು ಕಾಣಬಹುದು.

ಮಳೆಗಳು

ಹಿಂದೂ ಪಂಚಾಂಗದ ಪ್ರಕಾರ ೨೩ ಮಳೆ ನಕ್ಷತ್ರಗಳನ್ನು ಗುರುತಿಸಿ; ಅವುಗಳ ಕ್ರಮಬದ್ಧ ನಡಿಗೆಯನ್ನು ಗುರುತಿಸಲಾಗಿದೆ. ಆದರೆ ಜನಪದರಿಗೆ ೨೩ ಮಳೆಗಳ ಬಗ್ಗೆ ಕರಾರುವಕ್ಕಾದ ಜ್ಞಾನವಿಲ್ಲ. ತಾನು ಬೆಳೆಯುವ ಬೆಳೆಯ ಅವಧಿಯಲ್ಲಿನ ಮಳೆ, ನಕ್ಷತ್ರಗಳು ಮತ್ತು ಬೆಳೆಗಳು ಕೊನೆಗೊಳ್ಳುವ ದಿನದವರೆಗೂ ವರ್ತನೆಯನ್ನಷ್ಟೇ ಗಮನಿಸಿ ಜನಪದ ಪಂಚಾಂಗವನ್ನು ರಚಿಸಿಕೊಂಡು ತನ್ನ ಅನುಭವ ಕೋಶದಲ್ಲಿ ಅಡಗಿಸಿಟ್ಟುಕೊಂಡಿದ್ದಾರೆ. ಶಿಷ್ಟ ಪಂಚಾಂಗದ ಹೆಸರುಗಳನ್ನು ಇಲ್ಲಿ ಜನ ತಮ್ಮ ಸುಲಬೋಚ್ಚಾರಗಳಿಗೆ ಹೊಂದಿಸಿಕೊಂಡು ಅವುಗಳ ಸ್ವಭಾವವನ್ನು ಗಮನಿಸಿ ನುಡಿಗಟ್ಟುಗಳನ್ನು, ಗಾದೆಗಳನ್ನು ಒಳಸುತ್ತಾರೆ. ಈ ಮೂಲಕ ತಮ್ಮ ತೀಕ್ಷ್ಣವಾದ ಗ್ರಹಿಕೆಗಳು, ಅಭಿವ್ಯಕ್ತಿಗಳು ಪ್ರಕಟವಾಗಿ ಭಿನ್ನವಾಗಿ ಕಾಣುತ್ತವೆ. ಉತ್ತರಾಷಾಢದಿಂದ ಪೂರ್ವಾಷಾಢದವರೆಗಿನ ೨೩ ಮಳೆ ನಕ್ಷತ್ರಗಳಲ್ಲಿ ಹೆಚ್ಚು ಮಳೆ ಬಾರದ ಬೆಳೆ ತೆಗೆಯಲಾರದ ಆರಂಭಿಕ ಆರು ನಕ್ಷತ್ರಗಳು ಕೊನೆಯ ಪೂರ್ವಾಷಾಢ ನಕ್ಷತ್ರಗಳು ಜನಪದರಿಗೆ ಅವಶ್ಯವೆನಿಸಲಿಲ್ಲ. ಮಳೆಗಾಲ ಪ್ರಾರಂಭದಿಂದ ಅಂತ್ಯದವರೆಗಿನ ಮಳೆಗಳು ನೆನಪಿನಲ್ಲಿ ಉಳಿದಿದ್ದು, ಅವುಗಳ ವರ್ತನೆಗಳ ಬಗ್ಗೆ ಖಂಡಿತವಾಗಿ ಮಾತನಾಡುವ ರೀತಿ ವೈಶಿಷ್ಟ್ಯಪೂರ್ಣವಾಗಿದೆ.

ಶಿಷ್ಟ ಪಂಚಾಂಗದಲ್ಲಿನ ಮಳೆ ನಕ್ಷತ್ರಗಳನ್ನು ಅವುಗಳು ಇಂಗ್ಲೀಷ ಕ್ಯಾಲೆಂಡರಿನ ಪ್ರಕಾರ ಯಾವ ಅವಧಿಯಲ್ಲಿ ಬರುತ್ತವೆಯೆಂಬುದನ್ನು ಗಮನಿಸಿದ ನಂತರ ಇಲ್ಲಿನ ಜನಪದರ ವೈಶಿಷ್ಟ್ಯಗಳನ್ನು ಕಾಣಬಹುದಾಗಿದೆ.

ಕ್ರಸಂ.	ಮಳೆ ನಕ್ಷತ್ರ	ಚಾಲನೆಯಲ್ಲಿರುವ ಅವಧಿ	
		ಇಂದ	ವರೆಗೆ
೧	ಉತ್ತರಾಷಾಢ	ಜನವರಿ ೧೧	ಜನವರಿ ೨೩
೨	ಶ್ರಾವಣ	ಜನವರಿ ೨೪	ಫೆಬ್ರವರಿ ೦೫
೩	ಧನಿಷ್ಠ	ಫೆಬ್ರವರಿ ೦೬	ಫೆಬ್ರವರಿ ೧೮
೪	ಶತತಾರಾ	ಫೆಬ್ರವರಿ ೧೯	ಮಾರ್ಚ ೦೨

೫	ಪೂರ್ವಭಾದ್ರಪದ	ಮಾರ್ಚ ೦೩	ಮಾರ್ಚ ೧೬
೬	ಉತ್ತರಭಾದ್ರಪದ	ಮಾರ್ಚ ೧೭	ಮಾರ್ಚ ೨೯
೭	ರೇವತಿ	ಮಾರ್ಚ ೩೦	ಏಪ್ರಿಲ ೧೨
೮	ಅಶ್ವಿನಿ	ಏಪ್ರಿಲ ೧೩	ಏಪ್ರಿಲ ೨೫
೯	ಭರಣಿ	ಏಪ್ರಿಲ ೨೬	ಮೇ ೦೯
೧೦	ಕೃತ್ತಿಕಾ	ಮೇ ೧೦	ಮೇ ೨೩
೧೧	ರೋಹಿಣಿ	ಮೇ ೨೪	ಜೂನ ೦೬
೧೨	ಮೃಗಶಿರಾ	ಜೂನ ೦೭	ಜೂನ ೨೦
೧೩	ಆರಿದ್ರಾ	ಜೂನ ೨೧	ಜುಲೈ ೦೪
೧೪	ಪುನರ್ವಸು	ಜುಲೈ ೦೫	ಜುಲೈ ೧೮
೧೫	ಪುಷ್ಯ	ಜುಲೈ ೧೯	ಅಗಸ್ಟ ೦೧
೧೬	ಆಶ್ಲೇಷಾ	ಅಗಸ್ಟ ೦೨	ಅಗಸ್ಟ ೧೫
೧೭	ಮಾಘ	ಅಗಸ್ಟ ೧೬	ಅಗಸ್ಟ ೨೯
೧೮	ಹುಬ್ಬ	ಅಗಸ್ಟ ೩೦	ಸಪ್ಟೆಂಬರ ೧೨
೧೯	ಉತ್ತರಾ	ಸಪ್ಟೆಂಬರ ೧೩	ಸಪ್ಟೆಂಬರ ೨೫
೨೦	ಹಸ್ತ	ಸಪ್ಟೆಂಬರ ೨೬	ಅಕ್ಟೋಬರ ೦೯
೨೧	ಚಿತ್ತಾ	ಅಕ್ಟೋಬರ ೧೦	ಅಕ್ಟೋಬರ ೨೨
೨೨	ಸ್ವಾತಿ	ಅಕ್ಟೋಬರ ೨೩	ನವೆಂಬರ ೦೪
೨೩	ವಿಶಾಖ	ನವೆಂಬರ ೦೫	ನವೆಂಬರ ೧೮
೨೪	ಅನುರಾಧ	ನವೆಂಬರ ೧೯	ಡಿಸೆಂಬರ ೦೧
೨೫	ಜೇಷ್ಠ	ಡಿಸೆಂಬರ ೦೨	ಡಿಸೆಂಬರ ೧೪
೨೬	ಮೂಲಾ	ಡಿಸೆಂಬರ ೧೫	ಡಿಸೆಂಬರ ೨೭
೨೭	ಪೂರ್ವಾಷಾಢ	ಡಿಸೆಂಬರ ೨೮	ಜನೇವರಿ ೦೯

ಇಲ್ಲಿನ ಎಲ್ಲ ಬೆಳೆಗಳ ಬಗ್ಗೆ ಅನಕ್ಷರಸ್ಥ ರೈತ ತಿಳಿದುಕೊಳ್ಳುವ ಗೋಜಿಗೆ ಹೋಗುವದಿಲ್ಲ. ಮಳೆಗಾಲ, ಚಳಿಗಾಲ, ಬೇಸಿಗೆಕಾಲ ಈ ಮೂರು ಕಾಲಮಾನಗಳ ಪರಿಚಿತ ಅನುಭವ ಹೊಂದಿರುವ ರೈತ ತನ್ನ ಬೆಳೆಯ ಚಟುವಟಿಕೆಗಳು ಮತ್ತು ಅದರ ಅವಶ್ಯಕತೆಯನ್ನು ಕುರಿತಷ್ಟೇ ಯೋಚಿಸುವ ಪ್ರಾಯೋಗಿಕ ಕರ್ಮಿ. ಬೇಸಿಗೆಯ ಬಿಡುವನ್ನು ತನ್ನ ಕೃಷಿ ಸಿದ್ಧತೆಗಳಿಗೆ, ಪದಾರ್ಥಗಳ ಶೇಖರಣೆ, ಹಬ್ಬ, ಜಾತ್ರೆ, ಮದುವೆ ಚಟುವಟಿಕೆಗಳಲ್ಲಿ ಕಳೆದರೆ; ಮಳೆಗಾಲ ಮತ್ತು ಚಳಿಗಾಲಗಳಲ್ಲಿ ತನ್ನ ಕೃಷಿ ಕೆಲಸಗಳಲ್ಲಿ ಕೇಂದ್ರೀಕರಿಸಿಕೊಂಡಿರುತ್ತಾನೆ. ಹೀಗಾಗಿ ಗ್ರಾಮದ ಸುತ್ತಮುತ್ತಲಿನ ರೈತರಿಗೆ ಮಳೆನಕ್ಷತ್ರದ ಆರಂಭ ರೋಹಿಣಿಯಿಂದ ಆರಂಭವಾಗುತ್ತದೆ. ಇನ್ನು ಕೆಲವು ಹೊಲದಲ್ಲಿನ ಬೆಳೆಗಳು ಮೇಲಿಂದ ಮೇಲೆ ಬರುವ ಮಳೆಗಳಿಂದ ನಷ್ಟ ಕೇಡು ಅಶುಭಗಳೆಂಬ ನಂಬಿಕೆಗಳಿವೆ.

ರೋಹಿಣಿ ಮಳೆಯನ್ನು 'ರೋಣಿ' ಎಂದು ಗ್ರಾಮ್ಯ ಭಾಷೆಯಲ್ಲಿ ಕರೆಯುತ್ತಾರೆ. "ರೋಣಿ ಆದರೆ ಓಣೆಲ್ಲ ಕಾಳು" ಎಂಬ ಗಾದೆ ಮಾತು ಪ್ರಚಲಿತವಿದೆ. ಈ ಮಳೆಯ

ಅವಧಿಯಲ್ಲಿ ಸಜ್ಜೆ, ಹೆಸರು, ಉದ್ದು, ಮುಕಣಿ, ಹುರುಳಿ, ಶೇಂಗಾ ಮುಂತಾದ ಬೆಳೆಗಳನ್ನು ಬಿತ್ತುತ್ತಾನೆ.

ಮೃಗಶಿರಾ ಮೆಳೆಗೆ 'ಮಿರಗಾ' ಮಳೆ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಸಾಕಷ್ಟು ಬಿಸಿಲು ಬೇಗೆಯಿಂದ ಬೆಯ್ದು ರೋಹಿಣಿ ಮಳೆಯೊಂದಿಗೆ ತಂಪಾದ ಭೂಮಿ ಮೃಗಶಿರಾ ಮಳೆಗೆ ಸಂಪೂರ್ಣವಾಗಿ ತಂಪಾಗುತ್ತದೆ. ಬಿತ್ತಿದ ಬೆಳೆಗೆ ಹನಿ ಹನಿ (ಚಿಟಿ ಚಿಟಿ) ಮಳೆಯಾಗುವುದರಿಂದ ಸಾಕಷ್ಟು ಅನುಕೂಲ ಹಾಗೂ ಬೆಳವಣಿಗೆಗೆ ಸಹಾಯಕ ಕೂಡಾ ಹೌದು. ಬಿಸಿಲು ಬೇಗೆ ಕಡಿಮೆಯಾಗಿ ಚಳಿ ವಾತಾವರಣ ನಿರ್ಮಾಣವಾಗುತ್ತದೆ. ಮಿರಗ ಮಳೆ ಮಿಂಚಬಾರದು, ಆರಿದ್ರ ಗದ್ರರಿಸಬಾರದು ಎಂಬ ನಂಬಿಕೆ ಇದೆ. ಮೃಗಶಿರಾ ಮಳೆಯು ಜೋರಾಗಿ ಸುರಿಯದೇ ಚಿಟಿ ಚಿಟಿ ಎಂದು ಸಣ್ಣಗೆ ಸುರಿಯುವುದರಿಂದ ಈ ಮಳೆಯು ಸ್ವಲ್ಪವಾದರೂ ಆಗಬಹುದು. ಈ ಹಿನ್ನಲೆಯಲ್ಲಿ ಗಾದೆ ರೂಢಿಯಲ್ಲಿದೆ. "ಮಿರಗ ಮಿಂಚಿದರೆ ಆರಿದ್ರ ಸಾಗಮಾಡತೈತಿ" ಇದು ಸ್ವಲ್ಪ ಸುರಿದರೂ ಪೂರ್ಣವಾಗಿ ಆಗುತ್ತದೆ.

ಆರಿದ್ರಾ ಮಳೆ ಎಲ್ಲ ರೀತಿಯ ಬಿತ್ತನೆಗೂ ಸೂಕ್ತ ಎನ್ನುವ ನಂಬಿಕೆಯಿದೆ. ಈ ಮಳೆ ರಾತ್ರಿ ವೇಳೆ ಬಿದ್ದರೆ ಶುಭ ಸೂಚಕವೆಂದು ನಂಬಿಕೆ. ಏಕೆಂದರೆ ಫಸಲಿಗೆ ಉತ್ತಮವಾಗಿ ತೇವಾಂಶ ಒದಗಿ ಒಳ್ಳೆಯ ಬೆಳೆ ಬರುತ್ತದೆ. ವಿವಿಧ ಕಾಯಿಪಲ್ಯೆ, ಬೀಜಗಳನ್ನು ಈ ಸಂದರ್ಭದಲ್ಲಿ ಬಿತ್ತುತ್ತಾರೆ. ಒಂದು ಮಳೆಗೆ ನಾಲ್ಕು ಪಾದಗಳೆಂದು ವಿಂಗಡಿಸಿರುತ್ತಾರೆ. ಮೊದಲ ಮೂರು ಪಾದದಲ್ಲಿ ಗುಡುಗಿದರೆ ಆರು ಮಳೆ ಮುಗಿಯುವ ತನಕ ಮಳೆ ಬರುವುದಿಲ್ಲವೆಂಬ ನಂಬಿಕೆಯಿದೆ. ಈ ಮಳೆ ಗುಡುಗಬಾರದು. ಗುಡುಗಿದರೆ ಉತ್ತರ ಮಳೆ ಬರುವ ತನಕ ಮಳೆ ಬರುವದಿಲ್ಲವೆನ್ನುವ ನಂಬಿಕೆ. ಆದ್ದರಿಂದ ಆರಿದ್ರಾ ಮಳೆಯ ಆರಂಭದ ೯-೧೦ ದಿನಗಳು ಇಡೀ ವರ್ಷದ ಬದುಕನ್ನು ನಿರ್ಧರಿಸುತ್ತದೆ. ಹೀಗಾಗಿ "ಆರಿದ್ರಾ ಮಳೆ ಬರದಿದ್ದರೆ ದರಿದ್ರ" ಎಂಬ ಗಾದೆ ಇದೆ.

ಪುನರ್ವಸು ಮಳೆಯನ್ನು ರೈತರು "ದೊಡ್ಡ ಅಸಲಿ" ಮಳೆ ಎಂದು ಕರೆಯುತ್ತಾರೆ. ಪುಷ್ಯ ಮಳೆಯನ್ನು "ಸಣ್ಣ ಅಸಲಿ" ಮಳೆ ಎಂದೂ ಕರೆಯುತ್ತಾರೆ. ಈ ಮಳೆಯ ನಂತರ ಬಿತ್ತುವ ಬೆಳೆಗಳು ಬರುವದಿಲ್ಲ. ಕಾರಣಕ್ಕಾಗಿ ಈ ಮಳೆಯ ನಂತರ ರೈತರು ಬಿತ್ತನೆ ಕಾರ್ಯ ಮಾಡುವುದೇ ಇಲ್ಲ. ಬುಧವಾರ "ಭೂಮಿ ಬಿತ್ತಬಾರದು" ಸೋಮವಾರ ಎತ್ತು ಕೊರಳ ಕಟ್ಟಬಾರದು ಎಂಬ ನಿಷೇಧಗಳಿವೆ.

"ಆಶ್ಲೇಷಾ" ಮಳೆಯಲ್ಲಿ ಬಿತ್ತಿದರೆ ಖಂಡಿತವಾಗಿ ಬೆಳೆ ಬರುತ್ತದೆಯೆಂಬ ನಂಬಿಕೆ ಇಲ್ಲ. ಏಕೆಂದರೆ ರೋಗ-ರುಜಿನಗಳಿಗೆ ಈಡಾಗುತ್ತದೆ ಎನ್ನುವ ಈ ಕಾರಣದಿಂದ ಭರವಸೆಯಿಲ್ಲ.

"ಮಾಘ" ಮಳೆಯನ್ನು "ಮಘಿ" ಮಳಿ ಎಂದು ಕರೆಯುತ್ತಾರೆ. ಮಘಿ ಮಳೆ ಮಗಿಯಿಂದ ಸುರುವಿದಂತೆ ಅತಿ ಜೋರಾಗಿ ಆಗುತ್ತದೆ ಎಂಬ ನಂಬಿಕೆ. "ಆದರ ಮಗಿ ಆಗದಿದ್ದರ ಹೊಗಿ" ಎನ್ನುವದು ಈ ಮಳೆಯ ಮಹತ್ವ ತಿಳಿಯುತ್ತದೆ. ಇದು ವಿಶ್ವಾಸಾರ್ಹ ಮಳೆ ಎನ್ನುವ ನಂಬಿಕೆ ಕೂಡ. ಈ ಮಳೆ ಬರದಿದ್ದರೆ ಅಶುಭವೆಂದು ಭಾವಿಸುವುದುಂಟು.

"ಹುಬ್ಬಾ" ಮಳೆಯನ್ನು ಹುಬ್ಬಿ, ಹುಬ್ಬಿ ಮಳೆ ಎಂದು ಕರೆಯುತ್ತಾರೆ. "ಹುಬ್ಬಿ ಆದರೆ ಹಳ್ಳ ಕೊಳ್ಳ ಹರಿತಾವು, ಇಲ್ಲಂದ್ರ ಗುಬ್ಬಿ ತಲಿ ತೊಯ್ಯುದಿಲ್ಲ" ಎಂಬ ಗಾದೆ ಪ್ರಚಲಿತದಲ್ಲಿದೆ.

ಏಕೆಂದರೆ ಒಂದು ರೀತಿಯಲ್ಲಿ ಹಿಂದಿನ ಮಳೆಗಳು ಸರಿಯಾಗಿ ಆದದ್ದಾದರೆ ಈ ಮಳೆಯ ಅವಶ್ಯಕತೆಯೇ ಇಲ್ಲವೆಂಬ ನಂಬಿಕೆ.

"ಉತ್ತರಾ" ಮಳೆಗೆ ರೈತರು "ಉತ್ತರಿ" ಮಳೆ ಎನ್ನುತ್ತಾರೆ. ಈ ಭಾಗದಲ್ಲಿ ಉತ್ತರಾ ಮಳೆಯ ಹಿಂಗಾರಿ ಆರಂಭದ ಮಳೆ. ಈ ಕಾರಣದಿಂದ ಜೋಳ, ಗೋಧಿ, ಕಡಲೆ, ಸೂರ್ಯಕಾಂತಿ ಮುಂತಾದ ಬೆಳೆಗಳಿಗೆ ವಿಶೇಷವಾಗಿ ಅತ್ಯಂತ ಅನುಕೂಲಕರವಾದ ಮಳೆಯಾಗಿದೆ.

"ಉತ್ತರಿ ಗೋಧಿ, ಕಡಲೆ, ಜೋಳ ಬಿತ್ತರಿ" ಎಂಬ ಗಾದೆ ಉತ್ತರ ಕರ್ನಾಟಕದ ಈ ಭಾಗದಲ್ಲಿ ವಿಶೇಷವಾಗಿದೆ. "ಉತ್ತರಿ ಮಳಿ ಆದರೆ ಬಿತ್ತಿದ್ದೆಲ್ಲ ಮುತ್ತರಿ" ಎಂಬ ಗಾದೆಯು ಇದೆ. ಅಲ್ಲದೇ "ಉತ್ತರ್‍ಯಾಗ ಉತ್ತಿದ ಎತ್ತು ನೀರಿಗೆ ಬಿತ್ತು" ಎನ್ನುವ ಗಾದೆ ಕೂಡ ಜೋಳ ಬಿತ್ತಿ ದಣಿದ ಎತ್ತು ಬಿಸಿಲಿನ ಶಾಖದಿಂದ ತಂಪನ್ನು ಬಯಸಿ ನೀರಿಗಿಳಿಯುವ ಮಾತು ಪ್ರಚಲಿತವಾಗಿದೆ. ಏಕೆಂದರೆ ಮಳೆ ಬರುವ ಕಾರಣಕ್ಕೆ ಬಿಸಿಲಿನ ಝಳ ಜಾಸ್ತಿಯಾಗಿರುತ್ತದೆ. "ಆದರೆ ಹಸ್ತ, ಆಗದಿದ್ದರೆ ರೈತ ಹಲ್ಲು ಕಿಸ್ತ" ಎಂಬ ಗಾದೆ ಹಸ್ತ ಮಳೆಯ ಮಹತ್ವ ತಿಳಿಸುತ್ತದೆ. "ಹಸ್ತ" ಮಳೆಯು ರೈತನ ಭರವಸೆಯ ಮಳೆಯಾಗಿದೆ. ಕೆರೆ, ಕಟ್ಟೆ ತುಂಬಿ ಹರಿಯುತ್ತವೆ. ಅಲ್ಲದೆ ಬಿತ್ತಿದ ಬೆಳೆಗೂ ಅತ್ಯಂತ ಪ್ರಯೋಜನಕಾರಿಯಾಗಿದೆ. "ಹಸ್ತಾ ಮಳೆ ಆಗದಿದ್ದರೆ ಹೆತ್ತ ತಾಯಿ ಸಹ ಮಕ್ಕಳಿಗೆ ಊಟ ಕೊಡುವುದಿಲ್ಲ" ಎಂಬ ನಾಣ್ನುಡಿ ಇದೆ. ಈ ಅವಧಿಯಲ್ಲಿ ಗಾಳಿ ಬೀಸಿದರೆ ಮಳೆ ಬೀಳುವದಿಲ್ಲವೆಂದು ನಂಬಿಕೆ. "ಯತ್ತಿಂದಾದರೂ ಹಸ್ತಾ ಬರತೈತಿ" ಎನ್ನುವ ನಂಬಿಕೆ ಕೂಡಾ ಇದೆ. "ಹಸ್ತಾ ಮಳೆಯಲ್ಲಿ ಎಲೆ ಅಲ್ಲಾಡಿದರೂ, ಚಿತ್ತಿಯಲ್ಲಿ ಬಂದ ಹನಿ ಮಳಿ ಬರೋದಿಲ್ಲ" ಎಂಬ ಮಾತು ಕೂಡ ಇದೆ. ಇದರಿಂದ ಮಾರುತಗಳ ಬಗ್ಗೆ ಕೂಡ ರೈತರಿಗೆ ಪೂರ್ಣ ಅರಿವು ಇತ್ತು ಎನ್ನುವುದು ಸ್ಪಷ್ಟವಾಗುತ್ತದೆ.

"ಚಿತ್ತ" ಮಳೆಯನ್ನು 'ಕುಡ್ಡಿ' ಮಳೆ ಎಂದು ಕರೆಯುವುದು ಉಂಟು. ಈ ಮಳೆಯು ಅಲ್ಲಲ್ಲಿ ಕೆಲವು ಕಡೆ ಎಲ್ಲೆಲ್ಲೋ ಹನಿ ಹನಿಯಾಗಿ ಆಗುವುದರಿಂದ ಕುಡ್ಡಿ ಮಳೆ ಕಣ್ಣು ತೆರೆದಲ್ಲಿ ಮಾತ್ರ ಆಗುತ್ತದೆಂದೂ ಈ ಮಳೆ ಕುರಿತು ಆಡುವ ಮಾತಿದೆ.

ಇನ್ನು "ಸ್ವಾತಿ" ಮಳೆ ಮುತ್ತಿನಂತಹ ಹನಿಗಳನ್ನುಳ್ಳದ್ದು. ಈ ಭಾಗದಲ್ಲಿ "ಸ್ವಾತಿ ಮಳೆ ಹೇತಿನೆಂದರೂ ಬಿಡುವುದಿಲ್ಲ" ಎಂದರೆ ಬಹಿರ್ದೆಸೆಗೆ ಹೋಗಲು ಕೂಡ ಬರುವದಿಲ್ಲ ಎನ್ನುವ ಗಾದೆಮಾತು ಪ್ರಚಲಿತವಿದೆ. ಎಂದರೆ ಅಷ್ಟೊಂದು ಈ ಮಳೆ ನಿರಂತರವಾಗಿ ತೀವ್ರತರವಾಗಿ ಸುರಿಯುತ್ತದೆ ಎನ್ನುವುದು ಅರ್ಥವಾಗುತ್ತದೆ.

"ವಿಶಾಖಾ" ಮಳೆಗೆ ರೈತರು "ಇಸಕ್ಕಿ" ಮಳೆ ಎಂದೂ ಕರೆಯುವುದುಂಟು. ಸಾಮಾನ್ಯವಾಗಿ ಇದು ಜೋಳ, ಗೋಧಿ, ಕಡಲೆ ಬೆಳೆಗಳಿಗೆ ಅತ್ಯಂತ ಒಳ್ಳೆಯ ಅನುಕೂಲಕರವಾದುದು. ಕಾಳು ಕಟ್ಟುವ ಹಂತಕ್ಕೆ ಬರುತ್ತಿರುವಾಗ ಜೋಳ ಹಾಗೂ ಇತರ ಬೆಳೆಗಳಿಗೆ ಮಳೆಯಾದರೆ ರೋಗ, ಕ್ರಿಮಿ ಕೀಟಗಳು ಸಾಯುತ್ತವೆ.

ಸಾಮಾನ್ಯವಾಗಿ ಈ ಭಾಗದಲ್ಲಿ ಜನವರಿ ಮಧ್ಯಭಾಗದಿಂದ ಫೆಬ್ರುವರಿಯವರೆಗೆ ಜೋಳ, ಗೋಧಿ, ಸೂರ್ಯಕಾಂತಿ ಇತರೆ ಬೆಳೆಗಳ ಕಟಾವು ಮಾಡುತ್ತಾರೆ. ಹೀಗಾಗಿ ಮೇವು ಸಂಗ್ರಹಣೆ ಕಾರ್ಯವು ಅತ್ಯಂತ ಅವಶ್ಯಕವಾಗಿರುತ್ತದೆ. ಈ ಸಂದರ್ಭದಲ್ಲಿ ಬರುವ

ಉತ್ತರಾಷಾಢ, ಶ್ರಾವಣ, ಧನಿಷ್ಠ, ಶತತಾರಾ, ಪೂರ್ವ ಭಾದ್ರಪದ, ಉತ್ತರ ಭಾದ್ರಪದ ಯಾವು ಯಾವು ಅಷ್ಟೊಂದು ಮಳೆಗಳು ಪ್ರಯೋಜನಕಾರಿಯಾಗುವುದಿಲ್ಲ. ಇನ್ನು "ಅಶ್ವಿನಿ ಮಳೆಯಾದರೆ ಶಿಸುವಿಗೆ ನೀರಿ ಸಿಗುವದಿಲ್ಲ" ಎಂಬ ನಂಬಿಕೆಯಿದೆ. ಈ ಮಾರ್ಚ, ಏಪ್ರಿಲನಲ್ಲಿ ಮಳೆ ಗರ್ಭ ಕಟ್ಟುತ್ತದೆ. ಅಶ್ವಿನಿ ಮಳೆ ಸಂದರ್ಭದಲ್ಲಿ ಮಳೆ ಆದರೆ ಗರ್ಭಪಾತವಾದಂತೆ ಎನ್ನುವ ನಂಬಿಕೆ ಕೂಡ ಇದೆ. ಈ ರೀತಿಯಾಗಿ ಮಳೆ ನಕ್ಷತ್ರದ ಬಗ್ಗೆ ತಮ್ಮದೇ ಆದ ಪಂಚಾಂಗವನ್ನು ಜನಪದರು ತಮ್ಮ ಅನುಭವದ ಗೂಡಿನಲ್ಲಿ ಬಚ್ಚಿಟ್ಟುಕೊಂಡಿರುವುದು ಸತ್ಯವಾಗಿದೆ.

ಪ್ರಮುಖ ವಾಣಿಜ್ಯ ಬೆಳೆಗಳು

ಇಂದಿನ ದಿನಮಾನಗಳಲ್ಲಿ ಸರ್ವಸಾಮಾನ್ಯವಾಗಿ ಮಳೆ ಕಡಿಮೆ ಆಗುತ್ತಿರುವುದು ಸರ್ವವಿಧಿತ. ಹೀಗಾಗಿ ನೀರಿನ ಮಟ್ಟವು ದಿನದಿಂದ ದಿನಕ್ಕೆ ಕೆಳಮಟ್ಟಕ್ಕೆ ಸರಿಯುತ್ತಿದೆ. ಹೀಗಾಗಿ ನೀರಾವರಿ ಭೂಮಿ ಹಾಗೂ ಕೃಷಿ ಚಟುವಟಿಕೆ ಎಂದರೆ ಮರೀಚಿಕೆ ಎನ್ನುವಂತಿದೆ.

"ಅವಶ್ಯಕತೆ ಅನುಕೂಲತೆಗಳ ತಾಯಿ" ಎನ್ನುವಂತೆ ಭೂಮಿಯಲ್ಲಿರುವ ನೀರಿನ ಪ್ರಮಾಣ ತೆರೆದ ಬಾವಿಗಳಿಗೆ ಲಭ್ಯವಾಗುತ್ತಿಲ್ಲ. ಬದಲಿಗೆ ಕೊಳವೆ ಬಾವಿಗಳು ಅನಿವಾರ್ಯವಾಗುತ್ತಿವೆ. ಹೀಗಾಗಿ ಲಭ್ಯವಾಗುವ ಕೊಳವೆ ಬಾವಿಗಳ ನೀರು ಅತ್ಯಲ್ಪ. ಎಷ್ಟೆ ಆಗಲಿ ಒಕ್ಕಲುತನ ಎನ್ನುವುದು ರೈತನ ಅವಿಭಾಜ್ಯ ಅಂಗ. 'ಒಕ್ಕಲಿಗ ಒಕ್ಕದಿದ್ದರೆ ಬಿಕ್ಕುವುದು ಜಗವೆಲ್ಲ' ಎನ್ನುವಂತೆ; ಗ್ರಾಮದಲ್ಲಿ ನೀರಿನ ಅನುಕೂಲತೆ ಇಲ್ಲದವರು ಒಣ ಬೇಸಾಯ ಮಾಡಿದರೆ; ನೀರಿನ ಅನುಕೂಲತೆ ಮಾಡಿಕೊಂಡವರು ವಿಶೇಷವಾಗಿ ತೋಟಗಾರಿಕಾ ಬೆಳೆಗಳಿಗೆ ಆದ್ಯತೆ ಕೊಡುತ್ತಾರೆ. ಹೇಗೆಂದರೆ ದೊರೆಯುವ ಅಲ್ಪ ಸ್ವಲ್ಪ ನೀರನ್ನು ಹನಿ ನೀರಾವರಿ ಅಳವಡಿಸಿ ಪ್ರಮುಖ ವಾಣಿಜ್ಯ ಬೆಳೆಗಳಾದ ದ್ರಾಕ್ಷಿ, ದಾಳಿಂಬೆಯಂತಹ ಬೆಳೆಗಳನ್ನು ಬೆಳೆಯುತ್ತಾರೆ.

ದಾಳಿಂಬೆ

ಸಾಮಾನ್ಯವಾಗಿ ವಾಣಿಜ್ಯ ಬೆಳೆಗಳಲ್ಲಿ ದಾಳಿಂಬೆ ಕೂಡ ಅತ್ಯಂತ ಪ್ರಯೋಜನಕಾರಿಯಾದ ಬೆಳೆಯಾಗಿದೆ. ಇದು ಹನಿ ನೀರಾವರಿ ಮೂಲಕ ಕಡಿಮೆ ನೀರಿನಲ್ಲಿ ಹೆಚ್ಚಿನ ಇಳುವರಿ ಪಡೆಯಬಹುದಾದ ಬೆಳೆಯಾಗಿದೆ.

ಒಂದು ಏಕರೆ ಭೂಮಿಯಲ್ಲಿ ೩೪೦ ಸಸಿಗಳನ್ನು ೧೨*೧೨ ಅಳತೆಯಲ್ಲಿ ದಾಳಿಂಬೆ ನಾಟಿ ಮಾಡುತ್ತಾರೆ. ನಾಟಿ ಮಾಡಿದ ಎರಡು ವರ್ಷಕ್ಕೆ ಬಲಿತು ಫಲ ಕೊಡಲು ಸಿದ್ಧವಾಗುತ್ತವೆ. ಇದು ಹೆಚ್ಚಾಗಿ ಉಷ್ಣವಲಯದ ವಾತಾವರಣಕ್ಕೆ ಹೊಂದಿಕೊಳ್ಳುವಂತಹದ್ದಾದಲ್ಲಿ ಸಹಜವಾಗಿ ಕಡಿಮೆ ಖರ್ಚು ಮತ್ತು ಹೆಚ್ಚು ಆದಾಯ ನೀಡುವಂತಹದ್ದಾಗಿದೆ. ದಾಳಿಂಬೆಯಲ್ಲಿ ಮೂರು ಪ್ರಕಾರಗಳಿವೆ.

೧) ಕೇಸರ

೨) ಗಣೇಶ

೩) ಆರಕ್ತ

ಗಣೇಶ ದಾಳಿಂಬೆಯು ಬೇಸಗೆಯಲ್ಲಿ ಕೆಂಪಗೆ ಬಣ್ಣ ಬರುವದಿಲ್ಲ. ಆದರೆ ಕೇಸರಿ ತಳಿಗಳು ಯಾವುದೇ ಸಂದರ್ಭದಲ್ಲಿ ಬೆಳೆಯಲು ಸೂಕ್ತ.

ಆದರೆ ಕೇಸರ ತಳಿಯ ಹಣ್ಣಿಗೆ ಸ್ವಲ್ಪ ಹೆಚ್ಚಿಗೆ ಆದಾಯ ದೊರೆಯುತ್ತದೆ. ಅಲ್ಲದೇ ಗಣೇಶ ಒಂದು ಬೆಳೆ ತೆಗೆಯಲು ಐದು ತಿಂಗಳು ಸಮಯಾವಕಾಶ ಬೇಕಾಗುತ್ತದೆ. ಕೇಸರ ಮತ್ತು ಆರಕ್ತ ೬ ರಿಂದ ೭ ತಿಂಗಳು ಸಮಯಾವಕಾಶ ಬೇಕಾಗುತ್ತದೆ. ಇನ್ನು ಗಣೇಶ ಎಕರೆಗೆ ಒಂದರಿಂದ ಒಂದೂವರೆ ಲಕ್ಷ ಆದಾಯ ಪಡೆಯಲು ಸಾಧ್ಯ. ಕೇಸರ ಮತ್ತು ಆರಕ್ತ ಎರಡರಿಂದ ಎರಡೂವರೆ ಲಕ್ಷದವರೆಗೆ ಪಡೆಯಲು ಸಾಧ್ಯ. ಅದು ಯೋಗ್ಯ ಬೆಲೆ ದೊರೆತಾಗ ಮಾತ್ರ. ಇಲ್ಲಿಯ ರೈತರು ದಾಳಿಂಬೆ ಹಣ್ಣನ್ನು ಬೆಂಗಳೂರು, ಮೈಸೂರು, ಆಂಧ್ರ, ನಾಗಪುರ, ಬೆಳಗಾವಿ ಮುಂತಾದ ಕಡೆಗಳಿಗೆ ಸ್ವತಃ ಕಳಿಸಿಕೊಡುತ್ತಾರೆ. ಒಮ್ಮೊಮ್ಮೆ ದಲ್ಲಾಳಿಗಳ ಮುಖಾಂತರ ಮಾರಾಟ ಮಾಡುತ್ತಾರೆ.

ತೋಟಗಾರಿಕಾ ಬೆಳೆಗಳಿಗೆ ನೀರಾವರಿಯ ಮೂಲವೆಂದರೆ ಕೊಳವೆಬಾವಿ ಅಥವಾ ತೆರೆದ ಬಾವಿ. ನೀರಾವರಿಯ ಇನ್ನೊಂದು ತೀವ್ರ ಸಮಸ್ಯೆಯೆಂದರೆ ಇತ್ತೀಚಿನ ದಿನಗಳಲ್ಲಿ ಮಳೆಯೆಂದರೆ ಮರೀಚಿಕೆಯಾಗುತ್ತಿದೆ. ಹೀಗಾಗಿ ಕೊಳವೆ ಬಾವಿಗಳು ಕೂಡಾ ಬತ್ತುತ್ತಿರುವ ಸಮಯದಲ್ಲಿ ತೆರೆದ ಬಾವಿಗಳಿಂದ ನೀರು ಪಡೆಯುವದು ಅಸಾಧ್ಯವಾದ ಮಾತು. ಏಕೆಂದರೆ ನೀರಿನ ಮಟ್ಟ ದಿನೇ ದಿನೇ ಕುಸಿಯುತ್ತಿದೆ. ಈ ಕಾರಣಕ್ಕಾಗಿ ಅನಿವಾರ್ಯವಾಗಿ ಹನಿ ನೀರಾವರಿ ಕ್ರಮವನ್ನ ಅನುಸರಿಸಬೇಕಾಗಿದೆ. ಇರುವ ಅಲ್ಪ ಸ್ವಲ್ಪ ನೀರಿನ ಮೂಲವನ್ನು ವ್ಯರ್ಥಗೊಳಿಸದಂತೆ ಕಾಳಜಿಯಿಂದ ನೇರವಾಗಿ ಗಿಡಗಳಿಗೆ ತಲುಪಿಸುವ ವ್ಯವಸ್ಥೆಯಾದ್ದರಿಂದ ಹೇಗೊ ಅಲ್ಪ ಸ್ವಲ್ಪ ಅನುಕೂಲವಾಗಿದೆಯೆಂದು ಹೇಳಬಹುದು. ಇನ್ನು ರೈತರು ಆಧುನಿಕ ಕೃಷಿಗೆ ಅವಶ್ಯಕವಾದ ರಸಾಯನಿಕ ಗೊಬ್ಬರವನ್ನು ಬಳಕೆ ಮಾಡುತ್ತಾರೆ.

ಇಷ್ಟಲ್ಲದೇ ಪ್ರಮುಖವಾಗಿ ದಾಳಿಂಬೆಗೆ ಸಮಸ್ಯೆ ಕಾಡುತ್ತಿದೆ. ಅದೇನೆಂದರೆ "ದುಂಡಾಣು ಕಜ್ಜಿ ರೋಗ" (ಕ್ಯಾರ ರೋಗ) ಇದರಿಂದ ಸಂಪೂರ್ಣ ಗಿಡಗಳು ನಾಶವಾಗುತ್ತವೆ. ೨೦೦೮ರಲ್ಲಿ ಸುಮಾರು ೮೦೦ ಎಕರೆಯಷ್ಟಿದ್ದ ದಾಳಿಂಬೆ ಈ ರೋಗಕ್ಕೆ ತುತ್ತಾಗಿ ಸರ್ವಪಥನವಾಯಿತು. ಆದರೆ ಇತ್ತೀಚಿನ ದಿನಗಳಲ್ಲಿ ಪುನಃ ನಾಟಿ ಮಾಡಿ ತಕ್ಕ ಮಟ್ಟಿಗೆ ಸುಧಾರಿಸಿಕೊಳ್ಳುತ್ತಿರುವದು ಕಂಡುಬರುತ್ತದೆ. ಹೀಗಾಗಿ ಈ ಭಾಗದ ರೈತರು ಪೂರ್ಣ ಮನೋಧೈರ್ಯ ಕಳೆದುಕೊಂಡಂತೆ ಕಂಡುಬರುತ್ತದೆ. ಗ್ರಾಮದ ರೈತರ ಆರ್ಥಿಕ ಬದುಕಿಗೆ ಚೈತನ್ಯ ನೀಡಿದೆ. ಈ ಬೆಳೆ ೧೯೯೦ಕ್ಕಿಂತಲೂ ಮುಂಚೆಯೇ ಗ್ರಾಮದಲ್ಲಿ ಈ ಬೆಳೆ ಆರಂಭವಾಯಿತು. ಬ್ಯಾಂಕುಗಳು ಸಾಲ ಸೌಲಭ್ಯ ನೀಡಿವೆ. ಡ್ರಿಪ್ (ಹನಿ ನೀರಾವರಿ) ಸಾಲ ಸೌಲಭ್ಯಕ್ಕಾಗಿ ಸರಕಾರವು ಸಹಾಯಧನ ನೀಡುತ್ತಿದೆ.

೧. ಗ್ರಾಮೀಣ ವಿಕಾಸ ಬ್ಯಾಂಕ, ತೆಲಸಂಗ

೨. ಆಕ್ಸಿಸ್ ಬ್ಯಾಂಕ, ಅಥಣಿ

೩. ಪಿ.ಎಲ್.ಡಿ. ಬ್ಯಾಂಕ, ಅಥಣಿ

೪. ಸ್ಟೇಟ ಬ್ಯಾಂಕ ಆಫ್ ಮೈಸೂರ, ಜಮಖಂಡಿ ಶಾಖೆ

೫. ಪಿ.ಕೆ.ಪಿ.ಎಸ್. ಕೊಟ್ಟಲಗಿ

ಮುಂತಾದ ಬ್ಯಾಂಕುಗಳು ಆರ್ಥಿಕ ಸಾಲ ಸಹಾಯ ಒದಗಿಸಿರುವದು ಕಂಡು ಬರುತ್ತದೆ. ತೋಟಗಾರಿಕಾ ಇಲಾಖೆಯಿಂದ ಹನಿ ನೀರಾವರಿ, ದ್ರಾಕ್ಷಿ ಮನುಕ (ಒಣ ದ್ರಾಕ್ಷಿ) ತಯಾರಿಸುವ ಮಂಟಪಕ್ಕೆ ಸಹಾಯಧನ ನೀಡಿರುತ್ತದೆ.

ದ್ರಾಕ್ಷಿ ಬೆಳೆ

ಗ್ರಾಮದ ತೋಟಗಾರಿಕಾ ಬೆಳೆಗಳಲ್ಲಿ ದ್ರಾಕ್ಷಿ ಬೆಳೆಯು ಪ್ರಮುಖವಾದ ಬೆಳೆಯಾಗಿದೆ. ದ್ರಾಕ್ಷಿ ಬೆಳೆಗಳ ಪ್ರಕಾರಗಳು:

೧. ಸೀಡಲೆಸ್
೨. ಸೋನಾಕಾ
೩. ಕೃಷ್ಣ ಸೋನಾಕಾ
೪. ಕ್ಲೋನ ಟು.ಎ.
೫. ಶರದ ಸೋನಾಕಾ
೬. ಅಂಬಾ ಸೋನಾಕಾ

ಸೀಡಲೆಸ್ ಪ್ರಕಾರದ ಹಣ್ಣನ್ನು ದ್ರಾಕ್ಷಿ, ಒಣದ್ರಾಕ್ಷಿ (ಮನುಕ) ತಯಾರಿಕೆಗೆ ಹೆಚ್ಚು ಸಹಾಯಕವಾಗಿದೆ. ಇನ್ನುಳಿದ ಪ್ರಕಾರದ ದ್ರಾಕ್ಷಿ ಹಣ್ಣು ಮಾರಾಟಕ್ಕಾಗಿ ಸಹಾಯಕವಾಗಿದೆ. ಸೀಡಲೆಸ್ ಬಿಟ್ಟು ಇನ್ನುಳಿದ ಎಲ್ಲ ಪ್ರಕಾರಗಳ ದ್ರಾಕ್ಷಿಯಿಂದ ಒಣ ದ್ರಾಕ್ಷಿ ತಯಾರಿಸಬಹುದಾದರೂ ಹೆಚ್ಚು ಇಳುವರಿ ಪಡೆಯಲು ಆಗುವದಿಲ್ಲ.

ಈ ಬೆಳೆಯು ನಾಟಿ ಮಾಡಿದ ಒಂಭತ್ತು ತಿಂಗಳಿಗೆ ಕಸಿ ಮಾಡಲು ಸಿದ್ಧವಾಗುತ್ತದೆ. ಮೊದಲು ನಾಟಿ ಮಾಡಿದ ದ್ರಾಕ್ಷಿ ಗಿಡಕ್ಕೆ "ಡಾಗ್ರಜ" ಎಂದು ಕರೆಯುತ್ತಾರೆ. ಕಸಿ ಮಾಡಿದ ನಂತರ ಒಂದು ವರ್ಷಕ್ಕೆ ದ್ರಾಕ್ಷಿ ಬೆಳೆ ಉತ್ಪಾದನೆಗೆ ಗಿಡವು ಸಿದ್ಧವಾಗುತ್ತದೆ. ಒಂದು ಎಕರೆಗೆ ೧೦-೫ ಅಂತರದಲ್ಲಿ ೮೪೦ ಸಸಿ ನಾಟಿ ಮಾಡುತ್ತಾರೆ. ಇಲ್ಲಿಯೂ ದಾಳಿಂಬೆ ಬೆಳೆಯುವಂತೆ ಹನಿ ನೀರಾವರಿ ಅಳವಳಡಿಸಿದ್ದು ಕಾಣಸಿಗುತ್ತದೆ. ಗ್ರಾಮದಲ್ಲಿ ಸುಮಾರು ೪೦೦ ಎಕರೆಯಷ್ಟು ದ್ರಾಕ್ಷಿ ನಾಟಿ ಮಾಡಿರುವುದು ಕಂಡುಬರುತ್ತದೆ. ಐದು ತಿಂಗಳಿಗೆ ಒಂದು ಸಂಪೂರ್ಣ ಬೆಳೆ ಸಿದ್ಧವಾಗುತ್ತದೆ. ಬೆಳೆಗೆ ನೂರಾ ಐವತ್ತು ಅವಧಿಯು ಬೇಕಾಗುತ್ತದೆ. ವರ್ಷಕ್ಕೆ ಒಂದೇ ಬೆಳೆ ತೆಗೆಯಲು ಸಾಧ್ಯವಾಗುತ್ತಿರುವದು ಕಂಡು ಬರುತ್ತದೆ. ಒಂದು ಎಕರೆ ದ್ರಾಕ್ಷಿ ನಾಟಿ ಮಾಡಿ ಸಿದ್ಧಪಡಿಸಲು ಎರಡು ಲಕ್ಷದವರೆಗೆ ವೆಚ್ಚ ತಗಲುತ್ತದೆ. ಒಂದು ಬೆಳೆ ತೆಗೆಯಲು ಒಂದರಿಂದ ಒಂದೂವರೆ ಲಕ್ಷ ವೆಚ್ಚವಾಗುತ್ತದೆ. ನಿರಂತರ ಒಂದು ಎಕರೆಗೆ ಎಂಟು ಜನರವರೆಗೆ ಕೆಲಸ ನಿರ್ವಹಿಸಬೇಕಾಗುತ್ತದೆ. ಇಷ್ಟಾದ ಮೇಲೆ ಇಳುವರಿ ಎರಡರಿಂದ-ಮೂರು ಲಕ್ಷದವರೆಗೆ ಬರಬಹುದು. ಏಕೆಂದರೆ ಹವಾಮಾನ ವೈಪರಿತ್ಯವಾದರೆ ಸಹಿಸಿಕೊಳ್ಳುವ ಸಾಮರ್ಥ್ಯ ಈ ಬೆಳೆಗೆ ಇಲ್ಲದಿರುವದು ಬಹುದೊಡ್ಡ ದೋಷವಾಗಿದೆ. ಇಷ್ಟಾಗಿಯೂ "ಡೌಣಿ ಮಿಲ್ಡಿವ" ಎನ್ನುವ ರೋಗವು ಅತಿಯಾಗಿ ಬಾಧಿಸುತ್ತದೆ. ಇಷ್ಟೆಲ್ಲ ಕಷ್ಟಗಳಿಂದ ಪಾರಾಗಿ ಬೆಳೆ ಬಂದ ಮೇಲೆ ಇನ್ನೊಂದು ಬೃಹತ್ ಸಮಸ್ಯೆ ಎದುರಾಗುತ್ತದೆ. ಅದೇನೆಂದರೆ ಒಂದು ವೇಳೆ ಬೆಲೆ ಸಿಕ್ಕರೆ ಮಾತ್ರ ರೈತ ಉದ್ಧಾರವಾದ ಹಾಗೆ; ಇಲ್ಲದಿದ್ದರೆ ಸಾಲಗಾರನಾಗುವದು ಖಚಿತ. ಈ ಭಾಗದಲ್ಲಿ ದ್ರಾಕ್ಷಿ ಬೆಳೆಯ ಹಿನ್ನಲೆಯಲ್ಲಿ ಒಂದು ಗಾದೆಯಿದೆ. "ಆದರೆ ದ್ರಾಕ್ಷಿ,

ಆಗದಿದ್ದರೆ ರುದ್ರಾಕ್ಷಿ". ಏಕೆಂದರೆ ಖರ್ಚು ವೆಚ್ಚ ಮಾಡಿ ಪ್ರತಿಫಲ ಬರದೆ ಇದ್ದಾಗ ಖಂಡಿತ ರುದ್ರಾಕ್ಷಿ ಮಾಲೆ ಧರಿಸಿ ಸನ್ಯಾಸಿಯಾಗಬೇಕು ಎಂಬುದು ಇದರ ಅರ್ಥ. ಅಕ್ಷರಶಃ ಇದು ಈ ಗ್ರಾಮದಲ್ಲಿ ನಿಜವೆಂದೇ ಹೇಳಬಹುದು.

ಇದಕ್ಕೆ ಪೂರಕವೆನ್ನುವಂತೆ ಈ ಮಾತಿಗೆ ಇತ್ತೀಚಿನ ವರ್ಷದ ಪರಿಸ್ಥಿತಿ ಪುಷ್ಟಿಕೊಡುತ್ತದೆ. ೨೦೧೧ರಲ್ಲಿ ೧೫೦ರೂ. ಕೆ.ಜಿ ಮಾರಿದ ದ್ರಾಕ್ಷಿ ೨೦೧೨ರಲ್ಲಿ ೬೦ ರಿಂದ ೭೦ ರೂ.ಗೆ ಮಾರಾಟವಾಗುತ್ತಿದೆ. ಹೀಗಾಗಿ ರೈತರು ಸಂಕಷ್ಟ ಎದುರಿಸಬೇಕಾಗುತ್ತದೆ. ಒಮ್ಮೊಮ್ಮೆ; ಮಾಡಿದ ಖರ್ಚು ದೊರೆಯದೇ ಇರುವ ಸಂದರ್ಭಗಳಿವೆ.

ಇನ್ನು ಮಾವು, ಚಿಕ್ಕು, ಪೆರಲ, ನಿಂಬೆ ಹೀಗೆ ಕೆಲವೊಂದು ಹಣ್ಣಿನ ಗಿಡಗಳನ್ನು ಮಿಶ್ರ ಬೆಳೆ ರೂಪದಲ್ಲಿ ಬೆಳೆದರೂ ಅಷ್ಟೊಂದು ಮಾರಾಟದ ಮಟ್ಟಕ್ಕೆ ಅವುಗಳು ಉತ್ಪಾದನೆಯಾಗುತ್ತಿಲ್ಲವೆಂದು ಹೇಳಬಹುದು.[೨]

೬.೪. ಸಾಕು ಪ್ರಾಣಿಗಳು

ಗ್ರಾಮದಲ್ಲಿ ನಿತ್ಯದ ಬದುಕಿಗೆ ಪೂರಕವಾದ ಹಲವಾರು ಸಾಕು ಪ್ರಾಣಿಗಳನ್ನು ಕಾಣಬಹುದಾಗಿದೆ. ಅವುಗಳಲ್ಲಿ ಹಸು, ಎಮ್ಮೆ, ಎತ್ತು, ಆಡು, ಕುರಿ, ನಾಯಿ, ಬೆಕ್ಕು, ಕೋಣ, ಕೋಳಿ ಮುಂತಾದವುಗಳನ್ನು ಕಾಣಬಹುದು.

ಎತ್ತುಗಳು

ಗ್ರಾಮದ ಪ್ರಮುಖ ಉದ್ಯೋಗ ಕೃಷಿಯಾಗಿರುವುದರಿಂದ ಸಹಜವಾಗಿ ಎತ್ತುಗಳಿಗೆ ಪ್ರಾಧಾನ್ಯತೆ ಇದೆ. ಕಾರಣ ಎತ್ತುಗಳ ಜೊತೆಗಳು ಮನೆ ಮುಂದಿದ್ದರೇನೆ ನಿಜವಾದ ರೈತ ಎನ್ನುವ ಭಾವನೆ ಊರಿನವರದ್ದಾಗಿದೆ. ಹೀಗಿರುವಾಗ ಎತ್ತು ಮತ್ತು ಹಸುಗಳು ಬೇಕೇ ಬೇಕು. ಆಕಳುಗಳು ಮಾತೆಯಂತೆಯೇ ಎಂಬ ಭಾವನೆ ಇದೆ ಮತ್ತು ಹಾಲಿಗೂ ಮೂಲವಾಗಿವೆ. ಗ್ರಾಮದಲ್ಲಿ ದೊರೆಯುವ ಪ್ರಾಣಿಗಳ ವಿವರವನ್ನು ಈ ಕೆಳಗಿನಂತೆ ನೋಡಬಹುದು.

ಅ.ಸಂ.	ಪ್ರಾಣಿಗಳ ಹೆಸರು	ಗಂಡು	ಹೆಣ್ಣು	ಒಟ್ಟು
೧	ದನಗಳು	೧೧೦೫(ಎತ್ತುಗಳು)	೧೨೦೭(ಆಕಳು)	೨೩೯೨
೨	ಹೋರಿ(ಕರುಗಳು)	೧೬	೦೨	೧೮
೩	ಎಮ್ಮೆ	೩೫೭(ಕೋಣ)	೧೬೨೩(ಎಮ್ಮೆ)	೧೯೮೦
೪	ಆಡು	೬೭(ಹೋತ)	೧೨೫(ಆಡು)	೧೯೨
೫	ಕುರಿ	೬೦೨(ಟಗರು)	೨೨೭೪(ಕುರಿ)	೨೮೭೬
೬	ನಾಯಿ	೪೫೫(ಗಂಡು)	೨೭(ಹೆಣ್ಣು)	೪೮೨
೭	ಕೋಳಿ	೨೯೩(ಹುಂಜ)	೧೨೧(ಕೋಳಿ)	೪೧೪[೩]

(ಗ್ರಾಮದಲ್ಲಿ ೨೦೧೧-೧೨ನೇ ಸಾಲಿನಲ್ಲಿ ಕ್ಷೇತ್ರ ಕಾರ್ಯ ಮಾಡಿದಾಗ ಸಿಕ್ಕಿದ ಅಂಕಿ ಅಂಶಗಳಾಗಿವೆ. ಕಾಲಾನಂತರದಲ್ಲಿ ಈ ಅಂಕಿ ಅಂಶಗಳಲ್ಲಿ ಬದಲಾವಣೆಯಾಗುವ ಸಂಭವವಿದೆ)

ಎಮ್ಮೆ, ಕೋಣ

ಸಹಜವಾಗಿ ಹಸುವಿನಂತೆ ಎಮ್ಮೆ, ಕೋಣಗಳು ರೈತರ ಬದುಕಿಗೆ ಅವಿಭಾಜ್ಯ ಅಂಗವೆನಿಸಿವೆ. ಹೈನುಗಾರಿಕೆಯ ಜೊತೆಗೆ ಕೃಷಿ ಚಟುವಟಿಕೆಗಳಿಗೆ ಒಮ್ಮೊಮ್ಮೆ ಗೊಡ್ಡು ಎಮ್ಮೆ ಹಾಗೂ ಕೋಣಗಳನ್ನು ಎತ್ತುಗಳಂತೆ ಹೂಡಿ ಉಪಯೋಗಿಸುವದು ಕಂಡುಬರುತ್ತದೆ.

ಆಡುಗಳು

ಆಡುಗಳು ಚಿಕ್ಕ ಸಾಧು ಪ್ರಾಣಿ. ಜೊತೆಗೆ ಬಹು ಉಪಯುಕ್ತ ರೈತನ ಮಿತ್ರ ಹೇಗೆಂದರೆ ಇದು ಹಾಲು ಕೊಡುತ್ತದೆ. ಜೊತೆಗೆ ಇದರ ಗೊಬ್ಬರ ರೈತರಿಗೆ ಬಹು ಉಪಯುಕ್ತವಾಗಿದೆ. ಜೊತೆಗೆ ರೈತ ಕೂಲಿಕಾರರೆನ್ನದೇ ಎಲ್ಲರೂ ಈ ಪ್ರಾಣಿಯನ್ನು ಸಾಕಲು ಕಾರಣ ಇದರ ಮರಿಗಳು ಮಾಂಸಕ್ಕಾಗಿ ಮಾರಾಟವಾಗುತ್ತದೆ. ಕಾರಣ ಕೂಲಿಕಾರ, ರೈತ ಸಾಮಾನ್ಯರೆಲ್ಲರೂ ಆಡು ಸಾಕಣೆ ಮಾಡುವದು ಸರ್ವೇ ಸಾಮಾನ್ಯವಾದ ಸಂಗತಿಯಾಗಿದೆ. ಆಕಳು, ಎಮ್ಮೆಯಷ್ಟು ಹೆಚ್ಚಿನ ಶ್ರಮ ಇವುಗಳ ರಕ್ಷಣೆಗೆ ಬೀಳದು. ಜೊತೆಗೆ ಎಲ್ಲ ವಾತಾವರಣದಲ್ಲಿ ಹೊಂದಿಕೊಳ್ಳುವ ಪ್ರಾಣಿಯಾಗಿದೆ.

ಹಸುಗಳು

ಹಸು ಒಕ್ಕಲುತನ ಕಾರ್ಯಕ್ಕೆ ಪ್ರಾಣವಿದ್ದಂತೆ. ಏಕೆಂದರೆ ಕೃಷಿ ಭೂಮಿ ಉಳುಮೆಗೆ ಬೇಕಾದ ಎತ್ತುಗಳ ತಾಯಿ ಹಸು. ಜೊತೆಗೆ ಹೈನುಗಾರಿಕೆಗೂ ಹಸು ಪ್ರಮುಖವಾಗಿದೆ. ಇವುಗಳಲ್ಲಿ ಕ್ರಾಸ್‌ಬಿಡ ಮತ್ತು ಲೋಕಲ್ (ದೇಶಿ) ತಳಿಗಳು ಗ್ರಾಮದಲ್ಲಿವೆ. ಅಲ್ಲದೇ ಹಸುವು "ಗೋಮಾತೆ" ಎಂಬ ಪವಿತ್ರ ಭಾವನೆ ಗ್ರಾಮದ ಜನತೆಯಲ್ಲಿದ್ದು; ಪೂಜ್ಯನೀಯ ಪ್ರಾಣಿಯಾಗಿದೆ. ಹೊಸ ಮನೆ (ಗೃಹ ಪ್ರವೇಶ) ಪ್ರವೇಶದ ಸಂದರ್ಭದಲ್ಲಿ ಆಕಳನ್ನು ಪೂಜಿಸಿ ಒಳಗಡೆ ಒಯ್ದು ಅದಕ್ಕೆ ಸೀರೆ ಕುಪ್ಪಸ, ಅರಿಷಿಣ ಕುಂಕುಮ ನೀಡಿ ಪೂಜೆ ಸಲ್ಲಿಸುವ ಕಾರ್ಯಕ್ರಮ ನಡೆಯುತ್ತದೆ. ಹೀಗೆ ಪೂಜಿಸಲು ಇನ್ನೊಂದು ಪ್ರಮುಖ ಕಾರಣ ೩೩ ಕೋಟಿ ದೇವತೆಗಳು ಆಕಳ ಹೊಟ್ಟೆಯಲ್ಲಿದ್ದರೆಂದು ನಂಬಿರುವ ಹಾಗೂ ಪೂಜ್ಯನೀಯ ಪ್ರಾಣಿಯಾಗಿ ಆಕಳು ಗ್ರಾಮದಲ್ಲಿ ಮಹತ್ವ ಪಡೆದುಕೊಂಡಿದೆ.

ಕುರಿಗಳು

ಗ್ರಾಮದ ಕುರುಬ ಜನಾಂಗದವರು ಕುರಿಗಳನ್ನು, ಟಗರುಗಳನ್ನು ಸಾಕುತ್ತಾರೆ. ಸಾಮಾನ್ಯವಾಗಿ ಪೂರ್ವಜರಿಂದಲೂ ಅವರು ಈ ಉದ್ಯೋಗವನ್ನೇ ಆಶ್ರಯಿಸಿರುವುದರಿಂದ ಜೊತೆಗೆ ಒಳ್ಳೆಯ ಲಾಭದಾಯಕ ಉದ್ಯೋಗವೂ ಕೂಡಾ ಆಗಿರುತ್ತದೆ. ಉಣ್ಣೆ ವ್ಯಾಪಾರ ಅಷ್ಟಕಷ್ಟೆ ಆದರೆ ಇವುಗಳ ಗೊಬ್ಬರ ಒಳ್ಳೆಯ ಬೆಲೆಗೆ ಮಾರಾಟವಾಗುತ್ತದೆ. ಇತ್ತೀಚಿಗೆ ಈ ಉದ್ಯೋಗ ಕಡಿಮೆಯಾಗುತ್ತಿದೆ. ಸಾಕಷ್ಟು ಕುರಿ ಮೇಯಲು ಬಯಲು ಪ್ರದೇಶವಿಲ್ಲದಿರುವುದು ಇದಕ್ಕೆ ಪ್ರಮುಖ ಕಾರಣ. ಜೊತೆಗೆ ಕುರಿಗಾರ ಜನರು ಕೃಷಿ ಕಾರ್ಯದ ಕಡೆಗೆ ಒಲವು ತೋರಿಸುತ್ತಿರುವುದು ಕಂಡುಬರುತ್ತದೆ.

ನಾಯಿ

ನಾಯಿಯು ಬಲು ನಂಬಿಗಸ್ಥ ಪ್ರಾಣಿ. ಗ್ರಾಮದ ತೋಟಗಳಲ್ಲಿ, ಹೊಲದಲ್ಲಿ ವಾಸ್ತವ್ಯವಿರುವವರು ಕಳ್ಳಕಾರರ ಹಾಗೂ ತೋಳ ಇನ್ನಿತರ ಪ್ರಾಣಿಗಳಿಂದ ರಕ್ಷಣೆಗಾಗಿ ನಾಯಿ ಸಾಕುವುದು ಕಂಡುಬರುತ್ತದೆ. ಕುರಿಗಾರರು ಕುರಿಗಳ ರಕ್ಷಣೆಗಾಗಿ ಹೆಚ್ಚಾಗಿ ನಾಯಿ ಸಾಕುತ್ತಾರೆ. ಇತ್ತೀಚೆಗೆ ಕೆಲವರು ಪಟ್ಟಣದ ಚಿಕ್ಕ ಪಾಮೆಲಿಯನ್ ತಳಿಯ ನಾಯಿಗಳನ್ನು ಮನೆಯಲ್ಲಿ ಸಾಕಿರುವದು ಕಂಡುಬರುತ್ತದೆ.

ಬೆಕ್ಕು

ಗ್ರಾಮದ ಮನೆ ಮನೆಗಳಲ್ಲಿ ಬೆಕ್ಕು ಬಲು ಅಚ್ಚುಮೆಚ್ಚು. ಹೀಗಾಗಿ ಹಿಂದಿನಿಂದಲೂ ಬೆಕ್ಕು ಸಾಕುವದು ಪ್ರೀತಿಯ ದ್ಯೋತಕವೂ ಹೌದು. ಕೃಷಿ ಕಾರ್ಯಕ್ಕೆ ಅಂದರೆ ಕಾಳುಗಳ ಚೀಲಗಳಿಗೆ ತೊಂದರೆಕೊಡುವ ಇಲಿಗಳ ನಾಶಕ್ಕೆ ಬೆಕ್ಕು ಪ್ರಯೋಜನಕಾರಿಯೆಂದು ಭಾವಿಸಿ ಸಾಕುವದು ಕೂಡಾ ಸಹಜವಾಗಿದೆ. ಇನ್ನು ಜನಪದ ನಂಬಿಕೆಗೂ ಬೆಕ್ಕು ಕಾರಣವಾಗಿದೆ. ಹೀಗಾಗಿ ಶುಭ ಅಶುಭಗಳ ಚಿನ್ಹೆಯಾಗಿ ಬೆಕ್ಕು ಗ್ರಾಮದಲ್ಲಿ ತನ್ನ ಸ್ಥಾನ ಉಳಿಸಿಕೊಂಡಿದೆ.

ಹೈನುಗಾರಿಕೆ

ಕೊಟ್ಟಲಗಿ ಗ್ರಾಮವು; ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ಹಲವಾರು ರೈತ ಸಾಮಾನ್ಯ ಜನತೆಯನ್ನು ಹೊಂದಿರುವ ಗ್ರಾಮ. ಹೇಗೆಂದರೆ ಹೈನುಗಾರಿಕೆ ಕೇವಲ ಹಾಲಿನ ವ್ಯಾಪಾರವಾಗಿರದೆ, ಜನತೆಯ ಬದುಕಿಗೆ ಅವಿಭಾಜ್ಯ ಅಂಗವಾಗಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಬಹುತೇಕ ಗ್ರಾಮದಲ್ಲಿ ದನಕರು, ಎಮ್ಮಿ, ಆಡು, ಕುರಿ ಇಲ್ಲದೇ ಇರುವ ಮನೆಗಳು ಕಡಿಮೆ. ಒಂದಿಲ್ಲೊಂದು ರೀತಿಯ ಸಾಕು ಪ್ರಾಣಿ ಮನೆಯಲ್ಲಿರಲೇ ಬೇಕು.

ಮುಖ್ಯವಾಗಿ ಗ್ರಾಮದಲ್ಲಿ ಹಸು, ಎಮ್ಮಿಗಳು ಹೈನುಗಾರಿಕೆಯ ಕೇಂದ್ರ ಬಿಂದುಗಳು. ಇಂದು ಅಷ್ಟೊಂದು ನೀರಾವರಿ ಕ್ಷೇತ್ರವನ್ನು ಹೊಂದಿರದ ಗ್ರಾಮವಾದ್ದರಿಂದ ಕೊಟ್ಟಲಗಿಯಲ್ಲಿ ಪೂರಕ ನೆಲೆಗಳಿಂದ ಬದುಕನ್ನು ನಡೆಸಲು ಗ್ರಾಮದ ಜನತೆ ದಾರಿ ಕಂಡುಕೊಂಡಿದ್ದು ಕಾಣಸಿಗುತ್ತದೆ. ಸರಿಯಾದ ಸಮಯದಲ್ಲಿ ಮಳೆಯಾಗದೇ ಇರುವುದರಿಂದ ಬೆಳೆ ಬರದೆ ಬದುಕು ಸಂಕಷ್ಟದಲ್ಲಿ ಸಿಲುಕಿದಾಗ ಜನ ಹೈನುಗಾರಿಕೆ ಮೂಲಕ ಬದುಕನ್ನು ನಡೆಸುತ್ತಾರೆ. ಹೈನುಗಾರಿಕೆ ಉಪ ಉದ್ಯೋಗವಾಗಿದೆಯೆಂದರೂ ತಪ್ಪಾಗಲಾರದು. ದನಗಳ ಹಾಲು, ಎಮ್ಮೆಯ ಹಾಲು ಈ ಮೊದಲು ಗೌಳಿಗರಾದ ಗ್ರಾಮಸ್ಥರು ಹಾಲು ಸಂಗ್ರಹಿಸುತ್ತಿದ್ದರು. ಅವರು ಗ್ರಾಮದಲ್ಲಿನ ಹಾಲನ್ನು ಮಾರಾಟ ಮಾಡಿ ಜನರಿಗೆ ಹಣ ಕೊಡುತ್ತಿದ್ದರು. ಆದರೆ ಆಗ ಗ್ರಾಮದಲ್ಲಿ ಹಾಲಿನ ಡೈರಿ ಇರಲಿಲ್ಲ.

ಇತ್ತೀಚೆಗೆ ಗ್ರಾಮದಲ್ಲಿ ಮೂರು ಹಾಲಿನ ಡೈರಿಗಳು ಸ್ಥಾಪನೆಯಾಗಿವೆ.

ಅ.ನಂ.	ಡೈರಿಯ ಹೆಸರು	ಹಾಲಿನ ಸಂಗ್ರಹ ಸಾಮರ್ಥ್ಯ
೧	ಶ್ರೀ ಸಿದ್ದಾರೂಢ ಹಾಲಿನ ಡೈರಿ	೬೦೦ ಲೀಟರ
೨	ಶ್ರೀ ಸಿದ್ಧೇಶ್ವರ ಹಾಲಿನ ಡೈರಿ	೩೦೦ ಲೀಟರ
೩	ರೇಣುಕಾದೇವಿ ಹಾಲಿನ ಡೈರಿ	೧೦೦ ಲೀಟರ

ಹೀಗೆ ನೇರವಾಗಿ ಗ್ರಾಮದ ಜನರು ಹಾಲು ತೆಗೆದುಕೊಂಡು ಹಾಲು ಸಂಸ್ಕರಣಾ ಕೇಂದ್ರಕ್ಕೆ ಹೋಗಿ ಹಾಲು ಹಾಕಿ ಬರುವುದು ಸರ್ವೇ ಸಾಮಾನ್ಯ. ಫ್ಯಾಟ (ಕೊಬ್ಬಿನ ಅಂಶದ) ಆಧಾರದ ಮೇಲೆ ಹಾಲಿನ ಬೆಲೆ ನಿಗದಿಯಾಗಿ ರೈತರಿಗೆ ಒಳ್ಳೆಯ ಲಾಭ ಬರುವಂತಾಗಿದೆ. ಹೀಗಾಗಿ ಸಾಕಷ್ಟು ಜನ ಸಾಮಾನ್ಯವಾಗಿ ಡೈರಿಗಳಿಗೆ ಹಾಲು ಹಾಕಿ ಉಪಜೀವನ ಸಾಗಿಸುತ್ತಿವದು ಕಂಡುಬರುತ್ತದೆ. ಶೋಷಣೆ ರಹಿತ ಪಾರದರ್ಶಕ ಹಾಲಿನ ಉದ್ಯೋಗಕ್ಕೆ ಎಲ್ಲರೂ ಮನ ಸೋತು ಡೈರಿಗಳ ಮೊರೆ ಹೋಗುತ್ತಿರುವುದರಿಂದ ಗ್ರಾಮಗಳ ಜನತೆಗೆ ಹಾಲು ಮರೀಚಿಕೆಯಾಗುತ್ತಿದೆ.

ಇತ್ತೀಚಿನ ದಿನಗಳಲ್ಲಿ ಎಲ್ಲ ಹಾಲನ್ನು ಡೈರಿಗಳಿಗೆ ಹಾಕುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಇದರಿಂದ ಹಾಲಿನ ಬೆಲೆ ದುಬಾರಿಯಾಗಿ ಮೂವತ್ತು-ಮೂವತ್ತೈದು ರೂ.ಗೆ ಲೀಟರ ತಲುಪಿದೆ. ಈ ಕಾರಣದಿಂದ ಹಲವಾರು ಸಾಮಾನ್ಯ ಜನರಿಗೆ ಹಾಲು ಗಗನಕುಸುಮವಾಗಿದೆ. ಹಾಲು ನೇರವಾಗಿ ಡೈರಿಗಳಿಗೆ ಹೋಗುತ್ತಿರುವುದರಿಂದ ಗುಣಮಟ್ಟದ ಹಾಲು ಮರಳಿ ಸಿಗುತ್ತಿಲ್ಲ. ಇದರಿಂದಾಗಿ ಗ್ರಾಮದಲ್ಲಿ ಆರೋಗ್ಯಕ್ಕೆ ಪೂರಕವಾದ ಉತ್ತಮ ಹಾಲು ಮಾತ್ರ ಲಭ್ಯವಾಗುತ್ತಿಲ್ಲ. ಇದನ್ನು ಕಂಡು ಗ್ರಾಮದ ಹಿರಿಯರಲ್ಲಿ ಅಸಮಾಧಾನದ ಹೊಗೆಯಾಡುತ್ತಿದೆ. ಸರಿಯಾಗಿ ಹಾಲು ಉಣ್ಣದೇ ಯುವಜನತೆ ಸಶಕ್ತ ಶರೀರವನ್ನು ಹೊಂದಲು ಸಾಧ್ಯವಾಗುತ್ತಿಲ್ಲವೆಂಬ ಕೊರಗನ್ನು ವ್ಯಕ್ತಪಡಿಸುತ್ತಾರೆ.

೬.೬ ತೋಟಗಾರಿಕೆ

ಗ್ರಾಮದ ಬಹುತೇಕವಾಗಿ ಮಳೆ ಆಶ್ರಿತ ಬೆಳೆ ಬೆಳೆಯುತ್ತಿದ್ದರೂ ತಕ್ಕಮಟ್ಟಿಗೆ ನೀರಾವರಿ ಆಶ್ರಿತ ಬೆಳೆ ಬೆಳೆಯುತ್ತಾರೆ. ಹಾಗೆಯೇ ನೀರಾವರಿ ಆಶ್ರಿತ ಭೂಮಿಯಲ್ಲಿ ದ್ರಾಕ್ಷಿ, ದಾಳಿಂಬೆ ಜೊತೆಗೆ ದ್ರಾಕ್ಷಿ, ದಾಳಿಂಬೆ ಸಸ್ಯಗಳನ್ನು ತಯಾರಿಸುವ ಕಾರ್ಯ ಮಾಡುತ್ತಾರೆ. ಹೀಗಾಗಿ ತೋಟಗಾರಿಕೆಗೆ ಬೇಕಾದ ಸಸಿಗಳನ್ನು ತಯಾರಿಸುವ ಪ್ರಕ್ರಿಯೆಯು ಕೂಡ ಗ್ರಾಮದಲ್ಲಿ ನಡೆಯುತ್ತಿದೆ. ಜೊತೆಗೆ ದ್ರಾಕ್ಷಿ ಹಣ್ಣುಗಳನ್ನು ಒಣ ದ್ರಾಕ್ಷಿಯಾಗಿ ಮಾರ್ಪಡಿಸುವ ಕಾರ್ಯವೂ ಗ್ರಾಮದಲ್ಲಿ ನಡೆಯುತ್ತಿದೆ. ತೋಟಗಾರಿಕಾ ಬೆಳೆಗಳಿಗೆ ಬೆಲೆ ಸಿಗದೇ ಇರುವಾಗ ಅವು ಸಂರಕ್ಷಣೆಗೆ ಇಡಲು "ಕೋಲ್ಡ ಸ್ಟೋರೆಜ" ನಂಥಹ ಆಧುನಿಕ ಉಪಕರಣಗಳ ನಿರೀಕ್ಷೆಯಲ್ಲಿ ಜನರಿದ್ದಾರೆ.

೬.೭ ಕೃಷಿಗೆ ಪೂರಕವಾದ ಇತರ ಚಟುವಟಿಕೆಗಳು

ಭೂಮಿ ಹಿಡುವಳಿದಾರರಾದ ರೈತರು ಸ್ವತಃ ನಿರ್ವಹಿಸಲು ಸಾಧ್ಯವಾಗದೇ ಹೋಗುವ ಸಂದರ್ಭಗಳು ಹಲವು ಉಂಟು. ಹೀಗಾಗಿ ಕೃಷಿ ಕಾರ್ಮಿಕರಾಗಿ, ಕೃಷಿ ಗೇಣಿದಾರರಾಗಿ, ಸಮಪಾಲು ಕೃಷಿಯಲ್ಲಿ ಪಾಲ್ಗೊಳ್ಳುವುದು ಹೀಗೆ ಪೂರಕವಾದ ಮೂಲದಿಂದ ಕೃಷಿ ಕಾರ್ಯ ಜರುಗುತ್ತದೆ. ಜೊತೆಗೆ ಕೃಷಿ ಕಾರ್ಮಿಕರಾಗಿ ಗ್ರಾಮದ ಅನೇಕ ಸ್ತ್ರೀ ಪುರುಷರು ಈ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಅಲ್ಲದೇ ವಾಣಿಜ್ಯ ಬೆಳೆಗಳಾದ ದ್ರಾಕ್ಷಿ, ದಾಳಿಂಬೆ ಮುಂತಾದವುಗಳನ್ನು ಆರಂಭ ಹಂತದಿಂದಲೂ ಕಟಾವು ಮಾಡುವುದು, ಪ್ಯಾಕಿಂಗ ಮಾಡುವುದರವರೆಗೆ ಪೂರಕವಾದ ಎಲ್ಲ ಉದ್ಯೋಗಗಳಲ್ಲಿ ಪಾಲ್ಗೊಳ್ಳುತ್ತಾರೆ.

ಅಲ್ಲದೇ ಗ್ರಾಮದ ಇನ್ನೊಂದು ನೈಜ ಪರಿಸ್ಥಿತಿಯೆಂದರೆ ಮೇಲ್ನೋಟಕ್ಕೆ ಭೂಮಿಯಿದ್ದು, ಭೂ ಹಿಡುವಳಿದಾರನಾಗಿದ್ದರೂ ಮಳೆ ಆಶ್ರಿತ ಭೂಮಿಯಲ್ಲಿ ನಿರೀಕ್ಷಿತ ಬೆಳೆ ತೆಗೆಯಲಾಗುತ್ತಿಲ್ಲ. ಹೀಗಾಗಿ ಬದುಕಿಗೆ ಅವಶ್ಯಕವೆನ್ನುವಷ್ಟು ಸಂಪಾದಿಸಲಾಗದೇ ಕೃಷಿ ಕಾರ್ಮಿಕರಾಗಿ ಅನೇಕ ಜನ ಕೂಲಿ ನಾಲಿ ಮಾಡುವುದು ಕಂಡುಬರುತ್ತದೆ. ಇತ್ತೀಚೆಗೆ ಸರಕಾರದ "ಉದ್ಯೋಗ ಖಾತ್ರಿ" ಯೋಜನೆಯಿಂದ ಸ್ವಲ್ಪ ಮಟ್ಟಿಗೆ ಸಹಾಯವಾದರೂ ಸಂಪೂರ್ಣ ಈ ಸಮಸ್ಯೆಗೆ ಪರಿಹಾರ ಒದಗಿರುವದು ಸಾಧ್ಯವಾಗಿಲ್ಲವೆಂದೇ ಹೇಳಬಹುದು. ಹೀಗಾಗಿ ೧) ಕುರಿಸಾಕಾಣಿಕೆ ೨) ಹೈನುಗಾರಿಕೆ ೩) ಕೋಳಿ ಸಾಕಾಣಿಕೆ ೪) ಗೊಬ್ಬರ ವ್ಯಾಪಾರ ೫) ಔಷಧಿ ವ್ಯಾಪಾರ ಮುಂತಾದ ಕಾರ್ಯಗಳ ಮೂಲಕ ಕೃಷಿಗೆ ಸಹಾಯಕವಾಗಿ ಅನೇಕ ಉದ್ಯೋಗಗಳಿಂದ ಜನ ಬೆನ್ನೆಲುಬಾಗಿದ್ದಾರೆ.

೬.೮ ಗ್ರಾಮೀಣ ಸಮಾಜ ಮತ್ತು ಆಧುನಿಕ ಕೃಷಿ

ಗ್ರಾಮಗಳು ಭಾರತದ ಆಧಾರಸ್ತಂಭಗಳು. ಕೃಷಿಕನೇ ರಾಷ್ಟ್ರದ ಬೆನ್ನೆಲುಬು. ಅವನೇ ಅದರ ಅಡಿಗಲ್ಲೂ ಕೂಡ ಆಗಿರುವುದರಿಂದ ಇವರ ಬದುಕನ್ನು ಮುಖ್ಯವಾಗಿ ಭದ್ರಪಡಿಸಬೇಕು. ನಮ್ಮ ನಾಡು ನೂರಕ್ಕೆ ೭೦ರಷ್ಟು ವ್ಯವಸಾಯವನ್ನು ಅವಲಂಬಿಸಿರುವ ದೇಶ. ಗ್ರಾಮಗಳೇ ಇಲ್ಲಿಯ ಐಶ್ವರ್ಯಕ್ಕೆ ಆಧಾರ. ರೈತನ ಭಾಗ್ಯವೇ ದೇಶದ ಭಾಗ್ಯ. ಅವನ ಉದ್ಧಾರವೇ ದೇಶೋದ್ಧಾರ, ಇಂಥ ರೈತನಲ್ಲಿ ಸುಖ, ಸಂಪತ್ತು ಸಮೃದ್ಧಿಯಾಗಿದ್ದರೆ ದೇಶದಲ್ಲಿ ನೆಲವೂ ಬಲವೂ ಸಂಪತ್ತೂ ಪ್ರವಾಹ ಬಂದ ನದಿಯಂತೆ ಉಕ್ಕಿ ಉಕ್ಕಿ ಹರಿಯುತ್ತದೆ; ಎಂದು ಗ್ರಾಮೀಣ ಪ್ರದೇಶದ ಮಹತ್ವ ಹಾಗೂ ರೈತರ ಮೌಲ್ಯವನ್ನು ಮನಗಂಡ ಕಾಲವೊಂದಿತ್ತು.

ಇಂದಂತು ನಮ್ಮ ಗ್ರಾಮಗಳ ಸ್ಥಿತಿಯಂತೂ ತುಂಬಾ ಚಿಂತಾಜನಕವಾಗಿದೆ. ಸಾಮಾಜಿಕ ರೀತಿಯಲ್ಲಿಯೂ ಮತ್ತು ಆರ್ಥಿಕ ಅಂಶಗಳಿಂದಲೂ ಒಂದು ರೀತಿಯ ಸ್ವಯಂಪೂರ್ಣತೆಯಿಂದ ಕೂಡಿಕೊಂಡು ಪುಟ್ಟ ಪುಟ್ಟ ಪ್ರಜಾಪ್ರಭುತ್ವಗಳೆನಿಸಿಕೊಂಡಿದ್ದಂತಹ ಗ್ರಾಮಗಳು ಈಗ ಏನಾಗುತ್ತಿವೆ ಎಂಬುದಕ್ಕಿಂತ ಏನಾಗಿವೆ? ಯಾವ ಸ್ಥಿತಿಯಲ್ಲಿವೆ? ಎಂಬುದನ್ನು ಪರೀಶಿಲಿಸುವುದು ಅವಶ್ಯಕವೆನಿಸುತ್ತದೆ.

ಶತಶತಮಾನಗಳಿಂದ ಸಮಾಜದ ಶ್ರೇಷ್ಠತೆ ಹಾಗೂ ಸಂಸ್ಕೃತಿಯ ಸಂರಕ್ಷಕರೆಂದು ತಿಳಿದು ಸಾಮಾಜಿಕವಾಗಿ ಹಾಗೂ ಮಿಕ್ಕ ಕ್ಷೇತ್ರಗಳಲ್ಲಿಯೂ ಸುರಕ್ಷಿತವಾಗಿಯೇ ಬಾಳಿದಂತಹ ಬ್ರಾಹ್ಮಣರು; ಇಂದು ತಮ್ಮ ಜವಾಬ್ದಾರಿಯುತವಾದಂತಹ ಪ್ರಮುಖ ಸ್ಥಾನಗಳನ್ನು ಕಳೆದುಕೊಂಡು ಗ್ರಾಮದ ತಮ್ಮ ಒಡನಾಡಿಗಳಿಂದ ಬೇರೆಯಾಗುತ್ತಿದ್ದಾರೆ. ಕ್ಷತ್ರಿಯರು, ವೈಶ್ಯರು ಹಾಗೂ ಶೂದ್ರರು ಕೂಡ ತಮ್ಮ ತಮ್ಮ ಮುಖ್ಯ ವೃತ್ತಿಯನ್ನು ಸಂಪೂರ್ಣವಾಗಿ ಕೈಬಿಟ್ಟು ಬೇರೆ ಬೇರೆ ಉದ್ಯೋಗಗಳನ್ನರಸಿ ತೊಡಗಿಕೊಳ್ಳುತ್ತಿರುವುದು; ಸ್ವ ಪ್ರತಿಷ್ಠೆಯಿಂದ ಜೀವನ ನಡೆಸಲು ಪ್ರಾರಂಭಿಸಿದ ನಂತರ ಸಮಾಜದ, ಗ್ರಾಮದ ಹಿತದಿಂದ ದುಡಿಯುವರು ಬಿಟ್ಟರೆನ್ನಬಹುದು. ಹೀಗಾಗಿ ಕೃಷಿ ಕಾರ್ಯವನ್ನು ಅನಿವಾರ್ಯವಾಗಿ ಸಾಮಾನ್ಯವಾಗಿ ಎಲ್ಲ ವರ್ಗದ ಬಡ ಸಾಮಾನ್ಯ ಜನ ಅನುಸರಿಸಿಕೊಂಡು ಬರುತ್ತಿರುವದು ಕಂಡುಬರುತ್ತದೆ.

ಗ್ರಾಮದ ಕೃಷಿ ಚಟುವಟಿಕೆಗಳಲ್ಲಿ ಆಧುನಿಕತೆ ಎಲ್ಲೆಡೆ ಗೋಚರಿಸುತ್ತದೆ. ಇಂದು ಗ್ರಾಮದಲ್ಲಿ ಉಳುಮೆಗೆ ಎತ್ತುಗಳಿದ್ದರೂ; ತಕ್ಕಮಟ್ಟಿಗೆ ಬಳಕೆಯಾಗುವದು ಟ್ರ್ಯಾಕ್ಟರಗಳ ಯಂತ್ರಗಳು ಇಂದು ಗ್ರಾಮೀಣ ಹೊಲಗಳಲೆಲ್ಲಾ ವ್ಯಾಪಿಸಿವೆ. ಇಂದು ಯಂತ್ರೋಪಕರಣಗಳ ಬಳಕೆ ಎಲ್ಲೆಡೆಯಲ್ಲಿ ಕಂಡು ಬರುತ್ತಿದೆ.

೬.೯ ಯಂತ್ರೋಪಕರಣಗಳ ಬಳಕೆ

ಇಂದು ಭೂಮಿ ಉಳುಮೆಗಾಗಿ ರೈತರು ಟ್ರ್ಯಾಕ್ಟರಗಳನ್ನೇ ಹೆಚ್ಚಾಗಿ ಅವಲಂಬಿಸುತ್ತಿರುವುದು ಕಂಡುಬರುತ್ತಿದೆ. ಅಷ್ಟೇ ಅಲ್ಲದೇ ಇತ್ತೀಚಿನ ದಿನಗಳಲ್ಲಿ ಬಿತ್ತನೆ ಕಾರ್ಯವೂ ಕೂಡ ಟ್ರ್ಯಾಕ್ಟರಗಳಿಂದಲೇ ನಡೆಯುತ್ತಿರುವದು ವಿಶೇಷವಾಗಿದೆ. ಇನ್ನು ಎಡೆ ಹೊಡೆಯುವದು, ಡುಮ್ಮ ಹೊಡೆಯುವದು ಇಂತಹ ಕೆಲಸಗಳಿಗೆ ಟ್ರ್ಯಾಕ್ಟರ ಬಳಸಲಾಗುತ್ತಿಲ್ಲ; ಎತ್ತುಗಳನ್ನೆ ಬಳಸಬೇಕಾಗಿದೆ. ಎಷ್ಟೆಲ್ಲ ಯಂತ್ರಗಳಿದ್ದರೂ ಅನಿವಾರ್ಯವಾಗಿ ಕೃಷಿಗೆ ಮೂಲ ದೈವವಾದ ಎತ್ತುಗಳನ್ನು ಸಂಪೂರ್ಣವಾಗಿ ತ್ಯಜಿಸುವುದು ಸಾಧ್ಯವಾಗಿಲ್ಲವೆಂದೇ ಹೇಳಬೇಕು. ಇನ್ನು ಔಷಧಿ ಸಿಂಪಡಣೆ, ಇಂದು ಆಧುನಿಕರು ಎಲ್ಲ ಬೆಳೆಗಳಿಗೂ ಔಷಧಿ ಸಿಂಪಡಣೆ ಮಾಡುತ್ತಿದ್ದಾರೆ. ಕೀಟ ನಿಯಂತ್ರಣ ಮುಂತಾದ ಕ್ರಮಗಳ ಬಗ್ಗೆ ಇಂದು ರೈತ ಜಾಗೃತನಾಗಿ ಮಳೆ ಆಶ್ರಿತ ಭೂಮಿಯಲ್ಲೂ ಸಿಂಪಡಣೆ ಮಾಡುತ್ತಿದ್ದಾನೆ. ಹೀಗಾಗಿ ಸಾಧ್ಯವಾದ ಮಟ್ಟಿಗೆ ಕೀಟಬಾಧೆ ನಿಯಂತ್ರಣಕ್ಕೆ ಬಂದರೂ ಒಮ್ಮೊಮ್ಮೆ ನಷ್ಟ ಅನುಭವಿಸುವುದು ಸರ್ವೇ ಸಾಮಾನ್ಯವಾಗಿದೆ. ರಾಶಿ ಮಶಿನು, ಮಿಶ್ರತಳಿ ಬೀಜ, ನೀರೆತ್ತುವ ಪಂಪು, ಔಷಧಿ ಸಿಂಪಡಣೆ ಪಂಪು ಮುಂತಾದ ಸಾಮಗ್ರಿಗಳನ್ನು ಕೃಷಿಯಲ್ಲಿ ಬಳಸುತ್ತಾರೆ.

೬.೧೦ ರಾಸಾಯನಿಕ ಗೊಬ್ಬರದ ಬಳಕೆ

ರಾಸಾಯನಿಕ ಗೊಬ್ಬರವನ್ನು ಅಧಿಕ ಪ್ರಮಾಣದಲ್ಲಿ ಉಪಯೋಗಿಸುತ್ತಾರೆ. ಅಧಿಕ ಇಳುವರಿಗಾಗಿ ಮಿಶ್ರತಳಿ ಬೀಜಗಳನ್ನು ಉಪಯೋಗಿಸುತ್ತಿದ್ದಾರೆ. ಸರ್ಕಾರವು ರಾಷ್ಟ್ರೀಯ ಬೀಜ ನಿಗಮವನ್ನು (National Seed Corporation) ಸ್ಥಾಪಿಸಿದ್ದು; ಅಧಿಕ ಇಳುವರಿ ನೀಡುವ ಮತ್ತು ರೋಗ ಪ್ರತಿಬಂಧಕ ಶಕ್ತಿಯುಳ್ಳ ಬೀಜಗಳನ್ನುತ್ಪಾದಿಸುವ ವಿತರಣೆ ಮಾಡುವ ಹೊಣೆ ಹೊತ್ತಿರುತ್ತದೆ. ಕೃಷಿ ಇಲಾಖೆ ಮತ್ತು ಭಾರತೀಯ ಕೃಷಿ ಸಂಶೋಧನೆಯ ಮಂಡಳಿ ಬೇರೆ ಬೇರೆ ಪ್ರದೇಶಗಳಿಗೆ ಅನುಕೂಲವಾಗುವಂತಹ ವಿವಿಧ ಪ್ರಕಾರದ ಅಧಿಕ ಇಳುವರಿ ನೀಡುವಂತಹ ರೋಗ ಪ್ರತಿಬಂಧಕ ಶಕ್ತಿಯುಳ್ಳ ಬೀಜಗಳನ್ನು ಉತ್ಪಾದಿಸಲು ಹಾಗೂ ಪ್ರಚಾರ ಮಾಡಲು ಕ್ರಮ ಕೈಗೊಂಡಿದೆ. ಹಸಿರು ಕ್ರಾಂತಿಯ ಫಲವಾಗಿ ಪ್ರಾರಂಭಿಸಿದ (೧೯೬೬) ಅಧಿಕ ಇಳುವರಿ ನೀಡುವ ಮಿಶ್ರತಳಿ ಬೀಜಗಳ ಬಳಕೆಯ ಕಾರ್ಯಕ್ರಮವನ್ನು (High Yielding Varieties Programme) ಪ್ರಾರಂಭಿಸಲಾಯಿತು. ಇದರ ಪರಿಣಾಮದಿಂದಾಗಿ ಕೃಷಿ ಇಳುವರಿಯಲ್ಲಿ ಗಣನೀಯ ಹೆಚ್ಚಳ ಕಂಡುಬಂದಿತು. ಇದರ ಪರಿಣಾಮದಿಂದ ಗ್ರಾಮವೂ ಹೊರತಾಗಿಲ್ಲ. ಇಂದು ಕೊಟ್ಬಲಗಿ ಗ್ರಾಮದ ರೈತ ಬಿತ್ತನೆಯಲ್ಲಿ ಸುಧಾರಿಸಿದ ಬಿತ್ತನೆಯ ಬೀಜವನ್ನು ಬಳಕೆ ಮಾಡುತ್ತಿರುವದು ಕಂಡುಬರುತ್ತದೆ. ಗ್ರಾಮದಲ್ಲಿ ಇಂದು ಮುಂಗಾರಿ ಹಿಂಗಾರಿ ಕ್ಷೇತ್ರಗಳನ್ನು ಗಮನಿಸಿದರೆ ಅಲ್ಪ ಜಮೀನಿನಲ್ಲಿ ಹೆಚ್ಚಿನ ಆದಾಯ ಪಡೆಯುತ್ತಿದ್ದಾರೆ. ಇಂದು ರಾಸಾಯನಿಕ ಗೊಬ್ಬರವಿಲ್ಲದೆ ಮಳೆ ಆಶ್ರಿತ ಭೂಮಿಯಲ್ಲೂ ಬಿತ್ತನೆ ಕೈಗೊಳ್ಳುತ್ತಿಲ್ಲ. ಕಡ್ಡಾಯವಾಗಿ ರಾಸಾಯನಿಕ ಗೊಬ್ಬರ ಬೇಕೆ ಬೇಕು.

ಗೊಬ್ಬರವಿಲ್ಲದೇ ಬಿತ್ತನೆ ಸಾಧ್ಯವೇ ಇಲ್ಲವೆನ್ನುವಷ್ಟರ ಮಟ್ಟಿಗೆ ಇಂದು ರೈತರು ರಾಸಾಯನಿಕ ಗೊಬ್ಬರಗಳಾದ ಯೂರಿಯಾ, ಡಿ.ಎ.ಪಿ. ೨೦-೨೦-೦, ೧೨-೩೨-೧೬ ಮುಂತಾದವುಗಳನ್ನು ಬಳಸುತ್ತಾರೆ. ಅಲ್ಲದೇ ಇಂದು ಗೊಬ್ಬರ ಬಿತ್ತನೆಗೆ ಕೋಲುಗಳನ್ನು ಪ್ರತ್ಯೇಕವಾಗಿ ಬಳಸದೇ ಮೂರು ಕೋಲುಗಳನ್ನು ಸೇರಿ ಒಂದೇ ಮಂಡಿಯನ್ನು ಬಳಸುವುದು ರೂಢಿಯಲ್ಲಿದೆ. ಆಧುನಿಕ, ಸುಧಾರಿಸಿದ ಮಿಶ್ರತಳಿ ಬೀಜಗಳಲ್ಲಿ ಗ್ರಾಮದಲ್ಲಿ ಬಳಕೆಯಾಗುತ್ತಿವೆ. ಬಳಕೆಯಾಗುವ ಬೀಜಗಳು ಇಂತಿವೆ.

೧. ಜೋಳದಲ್ಲಿ

೧) ಎಮ್-೩೫ ೨) ಸುವರ್ಣನಿರ್ಮಲ

ಮಿಶ್ರತಳಿಯಾಗಿದ್ದು ಇವುಗಳನ್ನು ಗ್ರಾಮದಲ್ಲಿ ಬಳಸುತ್ತಾರೆ.

೨. ಕಡಲೆಯಲ್ಲಿ ಅಣ್ಣಿಗೇರಿ ತಳಿಯನ್ನು ಬಳಸುತ್ತಾರೆ.

೩. ಸೂರ್ಯಕಾಂತಿಯಲ್ಲಿ

೧. ಗಂಗಾ ಕಾವೇರಿ

೨. ಪ್ಯಾರಾಡಿಕಲ್

೩. ಅಡ್ವರ್ಟ ಇಂಡಿಯಾ

೪. ರಾಣೆಬೆನ್ನೂರ ಬೀಜಗಳನ್ನು ಬಳಸುತ್ತಾರೆ.

೪. ಶೇಂಗಾ ಬೆಳೆಯಲ್ಲಿ – ಪುಲ್ ಪ್ರಗತಿ, ಉಪ್ಪಡ, ಗೆಜ್ಜಿ

೫. ಉದ್ದು–ಮಹಾಬೀಜ

ಮುಂತಾದ ಬೀಜಗಳನ್ನು ಬಳಸುವದು ಕಂಡುಬರುತ್ತದೆ. ಕೊಟ್ಟಲಗಿ ಹೋಬಳಿಯಾದ ತೆಲಸಂಗ ಗ್ರಾಮದಲ್ಲಿ ರೈತ ಕೇಂದ್ರದ ಮುಖಾಂತರ ಸರಕಾರದ ಸಹಾಯಧನದಿಂದ ರೈತರು ಬೀಜ ಖರೀದಿಸುತ್ತಾರೆ. ರೈತ ಕೇಂದ್ರದಲ್ಲಿ ಸಿಗದೇ ಇದ್ದಾಗ ಹೊರಗಡೆ ಅಂಗಡಿಗಳಲ್ಲಿ ಬೀಜ ಖರೀದಿಸುತ್ತಾರೆ.

೬.೧೧ ವಿದ್ಯುತ್ ಯಂತ್ರಗಳ ಬಳಕೆ

ಇಂದು ಬಹುತೇಕವಾಗಿ ಮಳೆ ಕಡಿಮೆ ಆಗುತ್ತಿರುವುದು ಕಂಡು ಬರುತ್ತದೆ. ಅಷ್ಟೆ ಅಲ್ಲದೆ ಗ್ರಾಮವು ನಿರಂತರ ಬರಗಾಲದ ಬಾಯಿಗೆ ತುತ್ತಾಗುತ್ತಿರುವದು ವಿಪರ್ಯಾಸವೇ ಸರಿ. ಈ ಕಾರಣದಿಂದ ತೆರೆದ ಬಾವಿಗಳು ಬತ್ತಿ ಹೋಗುತ್ತಿವೆ. ಈ ಕಾರಣಕ್ಕಾಗಿ ಅನಿವಾರ್ಯವಾಗಿ ಗ್ರಾಮದಲ್ಲಿ ಕೊಳವೆ ಬಾವಿಗಳನ್ನು ಕೊರೆಸುತ್ತಿದ್ದಾರೆ. ಇನ್ನು ನೀರು ಮೇಲೆತ್ತಲು ಸಹಜವಾಗಿ ನೀರೆತ್ತುವ ಯಂತ್ರಗಳನ್ನು ಬಳಸುತ್ತಿದ್ದಾರೆ. ಆಧುನಿಕ ತಂತ್ರಜ್ಞಾನದ ಔಷಧಿ ಸಿಂಪಡಿಸುವ ಯಂತ್ರಗಳು, ಕರೆಂಟ ಇಲ್ಲದ ಸಂದರ್ಭದಲ್ಲಿ ಜನರೇಟರ (ವಿದ್ಯುತಜನಕ) ಕೂಡ ಬಳಸುತ್ತಾರೆ.

ಪೈಪಲೈನ ಮುಖಾಂತರ ನೀರಾವರಿ ಜಮೀನದಲ್ಲಿ ನೀರು ಹರಿಸಲು ರೈತರು ಮೋಟಾರ ಬಳಸುತ್ತಾರೆ. ವಿದ್ಯುತ ವೆಲ್ಡಿಂಗ ಮಶಿನಗಳ ಮುಖಾಂತರ ಕೃಷಿ ಉಪಕರಣಗಳನ್ನು ತಯಾರಿಸುತ್ತಾರೆ ಮತ್ತು ಕೃಷಿ ಉಪಕರಣಗಳ ರಿಪೇರಿಯನ್ನು ಕೈಗೊಳ್ಳುತ್ತಾರೆ. ಅಲ್ಲದೆ ಟಿ.ವ್ಹಿ.ಗಳ ಮುಖಾಂತರ ರೈತರು ಸಲಹೆಗಳನ್ನು ಪಡೆಯುತ್ತಾರೆ.

೬.೧೨ ದೂರವಾಣಿ ಬಳಕೆ

ರೈತರು ಇಂದು ತಮ್ಮ ನಿತ್ಯ ಬದುಕಿನ ಹಲವಾರು ಕೆಲಸ ಕಾರ್ಯಗಳಿಗಾಗಿ ತೋಟದಿಂದ ಊರುಗಳಿಗೆ ಅಲೆದಾಟ ಮಾಡಬೇಕಾದ ಪ್ರಮೇಯ ಕಡಿಮೆಯಾಗಿದೆ. ಗ್ರಾಮದಲ್ಲಿ ಏರಟೆಲ್, ವೋಡಾಫೋನ್, ಐಡಿಯಾ, ರಿಲಯನ್ಸ, ಬಿ.ಎಸ್.ಎನ್.ಎಲ್. (ಲ್ಯಾಂಡ ಲೈನ್) ವಿವಿಧ ಕಂಪನಿಗಳ ಮೊಬೈಲ ಕಂಪನಿಗಳು ತಮ್ಮ ಸೇವೆಯನ್ನು ಗ್ರಾಮದಲ್ಲಿ ನೀಡುತ್ತಿವೆ. ಹೀಗಾಗಿ ರೈತರು ನಿತ್ಯ ತಮ್ಮ ಕೈಯಲ್ಲಿ ಮೊಬೈಲ ಮೂಲಕ ತಮ್ಮ ಕೆಲಸ ಕಾರ್ಯಗಳನ್ನು ಪೂರೈಸಿಕೊಳ್ಳುತ್ತಿದ್ದಾರೆ. ಆಧುನಿಕ ತಾಂತ್ರಿಕತೆಯಲ್ಲಿ ತಕ್ಕಮಟ್ಟಿಗೆ ಮುಂದುವರೆದಿದೆಯೆಂದೇ ಹೇಳಬಹುದು.

ವಾಹನ ಸೌಲಭ್ಯ

ರೈತರು ಒಂದಾನೊಂದು ಕಾಲದಲ್ಲಿ ಕುದುರೆ, ಎತ್ತುಗಳು, ಬಂಡಿಗಳ ಮೂಲಕ ತಮ್ಮ ಸರಕು ಸಾಮಾನುಗಳನ್ನು ಸಾಗಿಸುವ ಕಾಲವೊಂದಿತ್ತು. ಆದರೆ ಇಂದು ವಾಹನಗಳು ಗ್ರಾಮಕ್ಕೆ ಬಂದಿರುವ ಕಾರಣ; ಇಂದು ದೂರದ ರಾಜ್ಯಗಳಿಗೆ ಕೂಡ ತಮ್ಮ ಸರಕುಗಳನ್ನು ಕೊಂಡೊಯ್ಯುವುದು ಸರ್ವೇ ಸಾಮಾನ್ಯವಾಗಿದೆ. ಹೊಲದಲ್ಲಿರುವ ಧಾನ್ಯಗಳ ರಾಶಿಯಾದ ಮೇಲೆ ದವಸ ಧಾನ್ಯಗಳನ್ನು ವಾಹನಗಳಲ್ಲಿ ಮನೆಗೆ ತರುತ್ತಾರೆ ಹಾಗೂ ಮಾರಾಟಕ್ಕೆ ಮಹಾರಾಷ್ಟ್ರದ ಜತ್ತ, ತಾಲೂಕಾದ ಅಥಣಿ, ನೆರೆ ಜಿಲ್ಲೆ ವಿಜಾಪೂರ ಇತರ ಕಡೆಯಲ್ಲೂ ಧಾನ್ಯಗಳನ್ನು ಸಾಗಿಸುತ್ತಾರೆ.

ಅಲ್ಲದೇ ಗ್ರಾಮದಲ್ಲಿ ಬೆಳೆಯುವ ದ್ರಾಕ್ಷಿ, ದಾಳಿಂಬೆ ಬೆಳೆಗಳನ್ನು ಬೆಂಗಳೂರು, ಬೆಳಗಾವಿ, ಪುಣೆ, ನಾಗಪುರ ಇನ್ನಿತರ ಕಡೆಯೆಲ್ಲಾ ಗ್ರಾಮದ ವಾಹನಗಳಲ್ಲೇ ಸಾಗಿಸುತ್ತಿರುವುದು ವಿಶೇಷ.

ಕಾಳು ಕಡಿ ಸಂಗ್ರಹ ಪದ್ಧತಿ

ಹಿಂದೆಲ್ಲಾ ಗ್ರಾಮದಲ್ಲಿ "ಹಗೆ ತೆವರ" ಎನ್ನುವ ಒಂದು ಸ್ಥಳದಲ್ಲಿ ಸಾಕಷ್ಟು ಆಳವಾದ ತಗ್ಗುಗಳನ್ನು ಮಾಡಿ ಅವುಗಳಲ್ಲಿ ಜೋಳದ ಕಣಿಕೆಯನ್ನು ನಾಲ್ಕು ದಿಕ್ಕಿಗಿರಿಸಿ ಅದರಲ್ಲಿ ಜೋಳದ ಧಾನ್ಯಗಳನ್ನು ಸಂಗ್ರಹಿಸುವ ಪದ್ಧತಿಯಿತ್ತು. ಹಾಗೆಂದೇ ಸಾಕಷ್ಟು ಇಂತಹ ಕಾಳು ಸಂಗ್ರಹಕ್ಕೆ "ಹಗೆಗಳು" ಇರುವುದರಿಂದಲೇ ಈ ಸ್ಥಳಕ್ಕೆ ಹಗೆತೆವರ ಎಂದು ಕರೆಯುತ್ತಿದ್ದರು. ಇಂದು ಈ ಹಗೆಗಳೆಲ್ಲಾ ಮುಚ್ಚಿಹೋಗಿವೆ. ಅದರ ಮೇಲೆಲ್ಲಾ ಮನೆಗಳು ನಿರ್ಮಾಣವಾಗಿವೆ. ಸಂಪೂರ್ಣವಾಗಿ ಈ ಸ್ಥಳ ನಾಮಾವಶೇಷವಾಗಿದೆ. ಅನೇಕ ಮನೆಗಳಲ್ಲಿ ಇಂತಹ ಹಗೆಗಳ ನಿರ್ವಹಣೆ ಮಾಡುವುದು ಹಳೆಯ ಪದ್ಧತಿಯಾಗಿತ್ತು. ಇಂದು ಇವೆಲ್ಲ ಪದ್ಧತಿಗಳು ಮಾಯವಾಗಿವೆ.

ಪ್ರಸ್ತುತ ಸನ್ನಿವೇಶದಲ್ಲಿ ಚೀಲಗಳಲ್ಲಿ ಹಾಗೂ ತಗಡಿನ ಡಬ್ಬಿಗಳಲ್ಲಿ ಕಾಳುಗಳ ಸಂಗ್ರಹಣೆ ಮಾಡುತ್ತಿದ್ದಾರೆ.

ಸ್ವಾತಂತ್ರ್ಯ ನಂತರ ಕೃಷಿ

೧೯೪೭ ಅಗಸ್ಟ ೧೫ರಂದು ಭಾರತ ಬ್ರಿಟಿಷರ ದಾಸ್ಯದಿಂದ ಮುಕ್ತಿಹೊಂದಿ ಸ್ವಾತಂತ್ರ್ಯದ ಜಯಮಾಲೆಯನ್ನು ಧರಿಸಿತು. ಶತಮಾನದ ಗುಲಾಮಗಿರಿಯ ಕಪಿಮುಷ್ಠಿಯಿಂದ ಪಾರಾಗಿ ಸ್ವರಾಜ್ಯಗಳಿಸಿದ ಸಂದರ್ಭದಲ್ಲಿ ಭಾರತದ ಕೃಷಿಯ ಪರಿಸ್ಥಿತಿ ಏನೇನೂ ಸುಖಕರವಾಗಿರಲಿಲ್ಲ. ಈ ಸಮಯದಲ್ಲಿ ನಮ್ಮ ದೇಶದ ಮುಂದೆ ಲೆಕ್ಕವಿಲ್ಲದಷ್ಟು ಸಮಸ್ಯೆಗಳು ಬೃಹದಾಕಾರವಾಗಿ ಬೆಳೆದು ನಿಂತಿದ್ದವು. ಇತರ ದೇಶಗಳೊಡನೆ ಹೋಲಿಸಿದಾಗ ಭಾರತವು ಎಲ್ಲಾ ಕ್ಷೇತ್ರಗಳಲ್ಲಿಯೂ ತೀರಾ ಹಿಂದುಳಿದಿತ್ತು. ನೀರಿಗಾಗಿ ಬಾಯಾರಿ ಬಿರುಕು ಬಿಟ್ಟ ಗದ್ದೆಗಳು, ಹಸಿದ ಹೊಟ್ಟೆಯಲ್ಲಿ ಗೋಳು ಗರಿಯುತ್ತಿದ್ದ ಲಕ್ಷಾಂತರ ಜನರು, ಜಾತಿ ವ್ಯವಸ್ಥೆಯ ಕಟ್ಟುಪಾಡಿನಿಂದಾಗಿ ನಾಯಿ, ಹಂದಿಗಳಿಗಿಂತಲೂ ಕೀಳಾಗಿ ಜೀವಿಸುತ್ತಿದ್ದಂತಹ ಕೋಟ್ಯಂತರ ದಲಿತ ಜನರ ಗೋಳು, ಹರಕು ಮುರುಕು ಉಪಕರಣಗಳಿಂದ ತುಂಬಿದ ಹಳೆಯ ಕಾರ್ಖಾನೆಗಳು, ಬಡತನ, ಅಜ್ಞಾನ, ಮೂಢನಂಬಿಕೆ, ಪೌಷ್ಠಿಕ ಆಹಾರದ ಕೊರತೆಯಿಂದ ಹಾಗೂ ಬರ, ಕ್ಷಾಮ, ಭೀಕರ ಬಿರುಗಾಳಿಗೆ ತುತ್ತಾಗಿ ಗ್ರಾಮೀಣ ಬದುಕು ನಮ್ಮ ದೇಶಕ್ಕೆ ಸ್ವತಂತ್ರ ಬಂದಾಗ ಎಲ್ಲೆಲ್ಲೂ ಕಂಡು ಬರುತ್ತಿದ್ದ ಕರುಣಾಪೂರಿತ ದೃಶ್ಯಗಳಾಗಿತ್ತೆಂದು ಅನೇಕ ಆಧಾರಗಳಿಂದ ತಿಳಿದು ಬರುತ್ತದೆ. ಇಷ್ಟೆ ಅಲ್ಲದೆ ಲಕ್ಷಾಂತರ ಗ್ರಾಮೀಣ ಜನರು ಅನ್ಯಾಯವಾದ ಭೂಪದ್ಧತಿಯಿಂದ ವಿಪರೀತ ಕಷ್ಟಕ್ಕೊಳಗಾಗಿದ್ದರು. ಮೊದಲೆ ತಿಳಿಸಿರುವ ಹಾಗೆ ಬಡತನದ ತಾಂಡವ ನೃತ್ಯ ಎಲ್ಲೆಲ್ಲೂ ಪಾಶವೀಕೃತ್ಯಗಳನ್ನು ನಡೆಸಿತ್ತು. ಕೈಗಾರಿಕೆಗಳು ಬೆರಳೆಣಿಸುವಷ್ಟಿದ್ದವು. ಕಚ್ಚಾ ವಸ್ತುಗಳ ಕೊರತೆಯಿಂದಾಗಿ ಅವೂ ಸಹ ಹೀನಸ್ಥಿತಿಯಲ್ಲಿದ್ದವು. ಇಂತಹ ವಿಷಮ ಪರಿಸ್ಥಿತಿಯಲ್ಲಿ ಸರ್ಕಾರಕ್ಕೆ ಯೋಜನಾಬದ್ಧ ಅಭಿವೃದ್ಧಿಯನ್ನು ಕೈಗೊಳ್ಳುವುದೊಂದೇ ಹಿತವಾದ ಮಾರ್ಗವಾಗಿತ್ತೆನ್ನಬಹುದು. ಈ ಹಂತದಲ್ಲಿ ದೇಶವು ರಾಜಕೀಯ ಸ್ವಾತಂತ್ರ್ಯಗಳಿಸಿ ಮುಂದೆ ೧೯೫೦ರಲ್ಲಿ ಆರ್ಥಿಕ ಸ್ವಾತಂತ್ರ್ಯಗಳಿಸಲು ಪಂಚವಾರ್ಷಿಕ ಯೋಜನೆಯ ಪಥದಲ್ಲಿ ಕಾಲಿಟ್ಟಿತು. ಭಾರತ ಹಳ್ಳಿಗಳ ರಾಷ್ಟ್ರವಾಗಿದ್ದರಿಂದ ಹಾಗೂ ಅಂದು ಭಾರತದ ಆರ್ಥಿಕತೆಯು ಗ್ರಾಮೀಣ ಪ್ರದೇಶದ ಮೇಲೆಯೇ ಅವಲಂಬಿತವಾಗಿದ್ದರಿಂದ, ಗ್ರಾಮೀಣ ಮೂಲ ಕಸುಬಾಗಿದ್ದ ಕೃಷಿಯಲ್ಲಿ ಅಧಿಕ ಉತ್ಪಾದನೆ ಪಡೆದು ಆಹಾರದಲ್ಲಿ ಸ್ವಾವಲಂಬಿಗಳಾಗಲು ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ (೧೯೫೧-೧೯೫೬) ಹೆಚ್ಚಿನ ಆದ್ಯತೆ ನೀಡಲಾಯಿತು. ಅಲ್ಲಿಂದ ಭಾರತದ ಕೃಷಿಯಲ್ಲಿ ಹೊಸ ತಿರುವು ಮೂಡಲಾರಂಭಿಸಿತು. ಏಕೆಂದರೆ ಕೃಷಿಯು ಭಾರತದ ಅರ್ಥವ್ಯವಸ್ಥೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿತು. ಸುಮಾರು ಶೇಕಡ ೭೦ರಷ್ಟು ಜನರು ಕೃಷಿಯನ್ನೇ ಅವಲಂಬಿಸಿದ್ದು; ಅದರಲ್ಲಿ ಶೇಕಡ ೮೦ರಷ್ಟು ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಆದಕಾರಣ ಭಾರತವು ಕೃಷಿ ಪ್ರಧಾನವಾದ ರಾಷ್ಟ್ರವಾಗಿದೆ. ನಮ್ಮ ದೇಶದ ಆರ್ಥಿಕಾಭಿವೃದ್ಧಿಯು ಕೃಷಿಯ ಮೇಲೆಯೇ ಅವಲಂಬಿಸಿರುವುದರಿಂದ ಕೃಷಿ ಅಥವಾ ಒಕ್ಕಲುತನವು 'ಭಾರತ ಅರ್ಥವ್ಯವಸ್ಥೆಯ ಬೆನ್ನೆಲುಬು' ಆಗಿದೆ ಎಂದು ಹೇಳಬಹುದು. ನಮ್ಮ ರಾಷ್ಟ್ರೀಯ ವರಮಾನದ ಶೇಕಡ ೬೦ರಷ್ಟು ಕೃಷಿಯ ಮೂಲದಿಂದಲೇ ಬರುತ್ತಿದೆ.

ಗ್ರಾಮದ ಅರ್ಥವ್ಯವಸ್ಥೆಯಲ್ಲಿ ಕೃಷಿಯ ಪಾತ್ರ

ಆಹಾರದ ಮೂಲ

ಕೃಷಿಯು ಜನರಿಗೆ ಮುಖ್ಯವಾಗಿ ಬೇಕಾಗುವ ಆಹಾರ ಮತ್ತು ಜಾನುವಾರಗಳಿಗೆ ಬೇಕಾಗುವ ಮೇವನ್ನು ಒದಗಿಸುತ್ತದೆ. ಆಹಾರ ಧಾನ್ಯಗಳ ಜೊತೆಗೆ ಎಣ್ಣೆ ಕಾಳುಗಳು, ದ್ವಿದಳ ಧಾನ್ಯಗಳು, ಕಾಯಿಪಲ್ಲೆ, ಹಣ್ಣು ಹಂಪಲು ಇತ್ಯಾದಿಗಳನ್ನು ಪೂರೈಸುತ್ತದೆ. ನಮ್ಮ ಇಂದಿನ ರೈತರು ಕೃಷಿ ಕ್ಷೇತ್ರದಲ್ಲಿ ಹಲವಾರು ತಾಂತ್ರಿಕ ಬದಲಾವಣೆಗಳನ್ನು ಅಳವಡಿಸಿರುವುದರಿಂದ ಹಾಗೂ ತಮಗೆ ಬೇಕಾಗುವ ಆಹಾರ ಧಾನ್ಯಗಳನ್ನು ಬೆಳೆದು ಆಹಾರದ ಸ್ವಾವಲಂಬನೆಯನ್ನು ಸಾಧಿಸುತ್ತಾ ದಾಪುಗಾಲಿಡುತ್ತಿದ್ದಾರೆ.

ಗೃಹ ಕೈಗಾರಿಕೆ ಹಾಗೂ ಸಣ್ಣ ಕೈಗಾರಿಕೆಗಳ ಏಳ್ಗೆ

ಕೃಷಿಯು ಕೈಗಾರಿಕೆಗಳಿಗೆ ಮತ್ತು ಕಾರ್ಖಾನೆಗಳಿಗೆ ಅವಶ್ಯಕವಿರುವ ಕಚ್ಚಾ ಸರಕುಗಳನ್ನು ಪೂರೈಸಿ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಉದಾ: ಹತ್ತಿ ಬಟ್ಟೆ ಕೈಗಾರಿಕೆ ಹತ್ತಿಯನ್ನು, ಎಣ್ಣೆ ಕೈಗಾರಿಕೆಗಳಿಗೆ ಎಣ್ಣಿ ಬೀಜಗಳನ್ನು ಇನ್ನಿತರ ಕೃಷಿ ಆಧಾರಿತ ಪರಿಷ್ಕರಣೆ ಕಾರ್ಖಾನೆಗಳಿಗೂ ಕೃಷಿಯು ಅನೇಕ ಕಚ್ಚಾ ಸಾಮಗ್ರಿಗಳನ್ನು ಪೂರೈಸುತ್ತದೆ.

ಗ್ರಾಮದ ವರಮಾನದ ಮೂಲ

ಕೃಷಿಯು ನಮ್ಮ ದೇಶದಲ್ಲಿ ರಾಷ್ಟ್ರೀಯ ವರಮಾನದ ಮೂಲವಾಗಿದೆ. ಅದರಂತೆ ಗ್ರಾಮದ ಪ್ರಮುಖ ವರಮಾನ ಕೃಷಿಯೇ ಆಗಿದೆ. ಗ್ರಾಮದ ಒಂದು ಮೂರಾಂಶದಷ್ಟು ವರಮಾನ ಕೃಷಿಯಿಂದಲೇ ಬರುತ್ತದೆ.

ನಿರುದ್ಯೋಗ ನಿರ್ವಹಣೆ ಮೂಲ

ಕೃಷಿಯು ನಮ್ಮ ದೇಶದ ಅದರಲ್ಲಿಯೂ ಗ್ರಾಮೀಣ ಭಾಗದ ಜನರಿಗೆ ವರ್ಷವಿಡೀ ಉದ್ಯೋಗವನ್ನು ಒದಗಿಸುತ್ತದೆ. ನಮ್ಮ ದೇಶದ ಸುಮಾರು ೨೦% ರಷ್ಟು ಜನರು ಒಕ್ಕಲುತನವನ್ನೇ ಅವಲಂಬಿಸಿದ್ದಾರೆ. ಹಾಗೆಯೇ ಗ್ರಾಮವು ಕೂಡ ಸಂಪೂರ್ಣವಾಗಿ ಅಲ್ಲದಿದ್ದರೂ ಭಾಗಶಃ ಕೃಷಿಯನ್ನೇ ಅವಲಂಬಿಸಿದ್ದು, ಗ್ರಾಮದ ಜನ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಹೀಗಾಗಿ ನಿರುದ್ಯೋಗ ಹೋಗಲಾಡಿಸುವಲ್ಲಿ ಸಂಪೂರ್ಣವಾಗಿ ಅಲ್ಲದಿದ್ದರೂ ಭಾಗಶಃ ಗ್ರಾಮದ ಕೃಷಿಯು ಯಶಸ್ವಿಯಾಗಿದೆ.

ವಾಣಿಜ್ಯ ವ್ಯಾಪಾರದ ಮೂಲ ಕೇಂದ್ರ

ನಮ್ಮ ದೇಶದ ಕೃಷಿಯು ವಾಣಿಜ್ಯ ವ್ಯಾಪಾರದ ಪ್ರಮುಖ ಮೂಲವಾಗಿದೆ. ನಮ್ಮ ದೇಶದ ವಾಣಿಜ್ಯ ವ್ಯಾಪಾರದಲ್ಲಿ ಸುಮಾರು ಅರ್ಧದಷ್ಟು ಸರಕುಗಳು ಕೃಷಿ ಅಥವಾ ಕೃಷಿ ಆಧಾರಿತ ವಸ್ತುಗಳಾಗಿವೆ. ಉದಾಹರಣೆ ಚಹಾ, ಕಾಫಿ, ತಂಬಾಕು, ಎಣ್ಣೆ ಬೀಜಗಳು, ಸಕ್ಕರೆ, ಗೋಡಂಬಿ, ಸಾಂಬಾರು ಪದಾರ್ಥಗಳು ಮುಂತಾದವುಗಳನ್ನು ಹೆಸರಿಸಬಹುದು. ಗ್ರಾಮವು ಪ್ರಮುಖವಾಗಿ ಎಣ್ಣೆ ಬೀಜಗಳ ಉತ್ಪಾದನೆಯಲ್ಲಿ ದಾಪುಗಾಲಿಡುತ್ತಾ ಸಾಗುತ್ತಿದೆ.

ಸರ್ಕಾರದ ಆದಾಯದ ಮೂಲ

ಕೃಷಿಯು ನಮ್ಮ ಗ್ರಾಮದ ಮುಖ್ಯ ಉದ್ಯೋಗವಾಗಿರುವುದರಿಂದ ರಾಷ್ಟ್ರೀಯ, ರಾಜ್ಯದ ಬೊಕ್ಕಸಕ್ಕೆ ತೆರಿಗೆ, ಸುಂಕ, ಭೂ ಕಂದಾಯ, ಶುಲ್ಕ, ದಂಡ, ಆಯಾತ,

ನಿರ್ಯಾತ ಸುಂಕಗಳು ಇತ್ಯಾದಿಗಳು ರಾಷ್ಟ್ರೀಯ ಬೊಕ್ಕಸಕ್ಕೆ ಬರುತ್ತವೆ. ಗ್ರಾಮದ ಒಕ್ಕಲುತನ ಕೃಷಿಯು ಸರ್ಕಾರಕ್ಕೆ ಒಂದು ಪ್ರಮುಖ ಆದಾಯದ ಮೂಲವಾಗಿ ರೂಪಗೊಂಡಿದೆ ಎನ್ನಬಹುದು. ಕೃಷಿಯ ಮಹತ್ವವನ್ನು ಈ ಚಿತ್ರದಲ್ಲಿ ಕಾಣಬಹುದು.

ವ್ಯವಸಾಯ

- **ಆಹಾರ**
- **ರಾಷ್ಟ್ರೀಯ ಆದಾಯ**
- **ಉದ್ಯೋಗ**
- **ಕೈಗಾರಿಕೆಯ ಪ್ರಗತಿ**
- **ಉತ್ತಮ ಮತ್ತು ವಾಣಿಜ್ಯ**
- **ವ್ಯಾಪಾರ**
- **ಗ್ರಾಮೀಣಾಭಿವೃದ್ಧಿ**
- **ಉತ್ತಮ ಜೀವನಾಧಾರ**

ಗ್ರಾಮದ ಕೃಷಿಯಲ್ಲಿನ ಸಮಸ್ಯೆಗಳು

ನಮ್ಮ ದೇಶ ಹಾಗೂ ರಾಜ್ಯಗಳು ಏನೆಲ್ಲಾ ಆಧುನಿಕ ತಂತ್ರಜ್ಞಾನದಲ್ಲಿ ಅಭಿವೃದ್ಧಿ ಹೊಂದುತ್ತಿದ್ದರೂ ಸಹ ಈ ದೇಶದ ಜನರ ಬೆನ್ನೆಲುಬಾಗಿರುವ ಕೃಷಿಯಲ್ಲಿ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗುತ್ತಿಲ್ಲ; ಗ್ರಾಮವು ಇದರಿಂದ ಭಿನ್ನವಾಗಿಲ್ಲ. ಇದಕ್ಕೆ ನೂರಾರು ಕಾರಣಗಳನ್ನು ನೀಡಬಹುದು. ಬಹುತೇಕ ಕೃಷಿಕರೂ ಸಹ ಆರ್ಥಿಕವಾಗಿ ಹಿಂದುಳಿದಿದ್ದಾರೆ. ಇದಕ್ಕೆ ನಮ್ಮ ಗ್ರಾಮದ ಕೃಷಿ ಸಮಸ್ಯೆಗಳೇ ಮುಖ್ಯ ಕಾರಣ. ದೇಶಕ್ಕೆ ಸ್ವಾತಂತ್ರ್ಯ ಬಂದು ಸುಮಾರು ಆರುವರೆ ದಶಕಗಳನ್ನು ದಾಟುತ್ತಿದ್ದರೂ ಸಹ ನಾವು ನಮ್ಮ ಗ್ರಾಮೀಣ ಪ್ರದೇಶದಲ್ಲಿನ ಕೃಷಿಯ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಒಂದಲ್ಲ ಒಂದು ದೃಷ್ಟಿಯಿಂದ ಸಂಪೂರ್ಣವಾಗಿ ವಿಫಲರಾಗಿದ್ದೇವೆ. ಪ್ರಮುಖವಾಗಿ ಇಂದಿನ ಗ್ರಾಮದ ಕೃಷಿಯ ಸಮಸ್ಯೆಯನ್ನು ನಾವು ನೈಸರ್ಗಿಕ, ಆರ್ಥಿಕ ಮತ್ತು ಸಾಮಾಜಿಕ ಕಾರಣಗಳನ್ನು ಕೊಟ್ಟು ಚರ್ಚಿಸಬಹುದು.


ನೈಸರ್ಗಿಕ ಕಾರಣಗಳು

- **ಮಳೆಅನಿಶ್ಚಿತತೆ**
- **ಆಣೆಕಲ್ಲು ಮಳೆ**
- **ಕ್ರಿಮಿಕೀಟಗಳು**
- **ವನ್ಯಮೃಗಗಳಿಂದಬೆಳೆನಾಶ**
- **ಅರಣ್ಯನಾಶ**

ನಮಗೆಲ್ಲಾ ತಿಳಿದಿರುವ ಹಾಗೆ ನಮ್ಮ ಕೃಷಿಯು ಹೆಚ್ಚಾಗಿ ನಿಸರ್ಗವನ್ನೇ ಅವಲಂಬಿಸಿದೆ. ಮಳೆಯು ಪ್ರಮುಖವಾಗಿ ಅನಿಶ್ಚಿತತೆ ಮತ್ತು ಅಕಾಲಿಕ ರೀತಿಯ ಲಕ್ಷಣಗಳನ್ನು ಹೊಂದಿದೆ. ಸಾಮಾನ್ಯವಾಗಿ ಜೂನನಿಂದ ಸಪ್ಟೆಂಬರವರೆಗೆ ಅಂದರೆ ವರ್ಷದ ನಾಲ್ಕು ತಿಂಗಳು ಮಾತ್ರ ಹೆಚ್ಚಾಗಿ ಮಳೆ ಆಗುತ್ತದೆ. ಉಳಿದ ವೇಳೆ ಮಳೆ ಇರುವದಿಲ್ಲ. ಅಷ್ಟೆ ಅಲ್ಲ ಕೆಲವು ಭೂಮಿಯ ಮೆಲ್ಲಡೆ ಇರುವಂತಹ ಫಲವತ್ತಾದ ಅಂಶವನ್ನು ರಭಸದ ಮಳೆಯು ಕೊಚ್ಚಿಕೊಂಡು ಹೋಗಿ ಹಾಳುಮಾಡುವುದುಂಟು. ಹಾಗೆಯೇ ಒಮ್ಮೊಮ್ಮೆ ಮಳೆ ಬಾರದೇ ಕ್ಷಾಮ ಸಂಭವಿಸಿ ಬೆಳೆಗಳು ನಾಶವಾಗಬಹುದು ಅಥವಾ ಸುಟ್ಟು ಹೋಗಬಹುದು. ಇಂದು ನಾವು ಏನೆಲ್ಲಾ ಆಧುನಿಕತೆಯಲ್ಲಿ ಮುಂಚೂಣಿಯಲ್ಲಿದ್ದರೂ ಸಹ ನಮ್ಮ ಕೃಷಿ ಪದ್ಧತಿ ಮಾತ್ರ ಅನಿಶ್ಚಿತ ವಾತಾವರಣದಿಂದ ಕೂಡಿದೆ. ಇದಕ್ಕಾಗಿಯೇ ಹಿಂದಿನಿಂದ ಇಂದಿನವರೆಗೂ ನಾವು "ಕೃಷಿಯು ಮಳೆಯೊಡನೆ ಆಡುವ ಜೂಜಾಟ" ಎಂದು ಕರೆದುಕೊಂಡು ಬಂದಿರುವುದು. ಕೆಲವು ಸಮಯ ಮಳೆಯು ತಮ್ಮ ಉಗ್ರನರ್ತನವನ್ನು ಪ್ರದರ್ಶಿಸಿ ಬೆಳೆದ ಬೆಳೆಯನ್ನು ನಾಶಮಾಡುವು

ದುಂಟು. ಗ್ರಾಮದ ಬೆಳೆಗಳಾದ ದಾಳಿಂಬೆ, ದ್ರಾಕ್ಷಿಯಂತಹ ಬೆಳೆಗಳು ಬಲಿಯಾಗುವುದುಂಟು.

ಆರ್ಥಿಕ ಮತ್ತು ತಾಂತ್ರಿಕ ಕಾರಣಗಳು



ಗ್ರಾಮದಲ್ಲಿ ಹೆಚ್ಚಿನ ಜನ ಅಂದರೆ ಪ್ರತಿಶತ ೭೦ರಷ್ಟು ಜನರು ಕೃಷಿಯನ್ನು ಅವಲಂಬಿಸಿರುವುದು ಕಂಡುಬರುತ್ತದೆ. ಕೃಷಿಯನ್ನೇ ತಮ್ಮ ಜೀವಾಳವೆಂದು ಭಾವಿಸಿರುವುದು ಇಂದಿನ ಆಧುನಿಕ ದಿನಗಳಲ್ಲಿಯೂ ಕಂಡುಬರುತ್ತದೆ. ಹೀಗಾಗಿ ಕೃಷಿಯ ಮೇಲೆ ಅಧಿಕ ಒತ್ತಡ ಇರುವುದರಿಂಗಾಗಿ ಭೂಮಿಯ ವಿಭಜನೆಯ ಭಿನ್ನತೆಯಿಂದ ಕೃಷಿಯ ಇಳುವರಿಯ ಮೇಲೆ ಅನೇಕ ದುಷ್ಪರಿಣಾಮಗಳುಂಟಾಗಿ ಉತ್ಪಾದನೆ ಕಡಿಮೆಯಾಗಿದೆ. ಇದರಿಂದಾಗಿ ಕೃಷಿಯ ಆದಾಯ ಕಡಿಮೆಯಾಗಿ ಬಡತನದ ವಿಷಮ ಚಕ್ರಕ್ಕೆ ಕಾರಣವಾಗಿದೆ ಎನ್ನಬಹುದು. ಕೃಷಿಕರು ಅಥವಾ ಅತೀ ಸಣ್ಣ ಅಥವಾ ಭೂರಹಿತ ಕಾರ್ಮಿಕರಾಗಿರುವವರೇ ಸಾಕಷ್ಟು ಜನರು. ಹಲವು ಸಂದರ್ಭಗಳಲ್ಲಿ ಇವರೇ ಗೇಣಿದಾರರಾಗಿರುವುದರಿಂದ ಅವರು ಹೆಚ್ಚು ಆಸಕ್ತಿ ವಹಿಸಿ ಇನ್ನೊಬ್ಬರ ಭೂಮಿಯಲ್ಲಿ ದುಡಿಯುವದಿಲ್ಲ. ಅನೇಕ ರೈತರ ಭೂಮಿ ಸಣ್ಣ ಸಣ್ಣ ತುಂಡುಗಳಿರುವುದರಿಂದ ಆಧುನಿಕ ಬೇಸಾಯ ಪದ್ಧತಿಯನ್ನೇ ಅನುಸರಿಸಲು ಸಾಧ್ಯವಾಗುವದಿಲ್ಲ. ಇದರಿಂದಾಗಿ ಪುರಾತನ ವ್ಯವಸಾಯ ಪದ್ಧತಿಯನ್ನೇ ಅವಲಂಬಿಸಿ ಕೃಷಿ ಮಾಡಿದ ಭೂಮಿಯಲ್ಲಿ ಉತ್ತಮ ಇಳುವರಿ ಪಡೆಯಲು ಸಾಧ್ಯವಾಗುತ್ತಿಲ್ಲ. ಇನ್ನು ಕೃಷಿ ಕಾರ್ಮಿಕರ ದಕ್ಷತೆಯ ಅಭಾವ, ಬಂಡವಾಳದ ಕೊರತೆ ಮತ್ತು ಪೂರಕ ಕೃಷಿ ವಸ್ತುಗಳ ಕಡಿಮೆ ಗುಣಮಟ್ಟ ಇತ್ಯಾದಿಗಳು ಕಾರಣವಾಗಿರುತ್ತವೆ. ಗ್ರಾಮದ ಕೃಷಿಯು ಉತ್ತಮವಾಗಬೇಕಾದರೆ ಅದಕ್ಕೆ ಸಾಕಷ್ಟು ನೀರಿನ ಪೂರೈಕೆಯಾಗಬೇಕು.

ನೀರಾವರಿ ಆಧರಿಸಿ ಕೃಷಿಯನ್ನು ಕೈಗೊಂಡರೆ ಎರಡರಿಂದ ಮೂರು ಪಟ್ಟು ಆಹಾರದ ಉತ್ಪಾದನೆಯನ್ನು ಹೆಚ್ಚಿಸಬಹುದಾಗಿದೆ. ಕೇವಲ ಮಳೆಯನ್ನು ಅವಲಂಬಿಸಿ ಇಂಥ ಕಡೆ ಉತ್ತಮ ಫಸಲನ್ನು ನಿರೀಕ್ಷಿಸುವುದು ಕಷ್ಟಕರವೇ ಸರಿ. ಅಷ್ಟೇ ಅಲ್ಲದೆ ಇತರ ಉದ್ಯಮಕ್ಕೂ ಇರುವ ಹಾಗೆ ಹಣದ ಸಮಸ್ಯೆಯನ್ನು ಎದುರಿಸುತ್ತಿದೆ. ಸಾಮಾನ್ಯವಾಗಿ ಇತ್ತೀಚಿನ ಭೂಹಿಡುವಳಿ ಯಿಂದಾಗಿ ಕೃಷಿಕರು ಕಡು ಬಡವರಾಗಿರುವುದು ಕಂಡುಬರುತ್ತದೆ. ತಮ್ಮ ಭೂಮಿಯ ವ್ಯವಸಾಯಕ್ಕೆ ಬೇಕಾಗುವ ಹಣವನ್ನು ತಾವೇ ಹೊಂದಿಸಿಕೊಳ್ಳಲಾರದ ಸ್ಥಿತಿಯಲ್ಲಿರುವುದು ಕಂಡುಬರುತ್ತದೆ. ಅಷ್ಟೆ ಅಲ್ಲದೇ ಇಂದಿನ ಆಧುನಿಕ ಕೃಷಿ ಪದ್ಧತಿಯು ತುಂಬಾ ವೆಚ್ಚದಾಯಕ ವಾಗಿದೆ. ಆದ್ದರಿಂದ ರೈತರು ಗ್ರಾಮೀಣ ವಲಯದಲ್ಲಿ ಸಾಹುಕಾರರಿಂದ ಮಿತಿಮೀರಿದ ಬಡ್ಡಿಯ ಮೇಲೆ ಸಾಲವನ್ನು ಪಡೆಯುತ್ತಾರೆ. ಇದರಿಂದಾಗಿ ಸಾಲವನ್ನು ತೀರಿಸಲು ತಮ್ಮ ವರ್ಷದ ಫಸಲನ್ನೇ ಮಾರಿ; ವರ್ಷಪೂರ್ತಿ ಕೂಲಿಮಾಡಿ ಜೀವನ ನಡೆಸುವ ಪ್ರಸಂಗ

ಹೆಚ್ಚಾಗಿ ಕಂಡುಬರುತ್ತದೆ. ಇಷ್ಟೆ ಅಲ್ಲದೇ ಗ್ರಾಮೀಣ ಜನರು ಅನಾವಶ್ಯಕವಾಗಿ ಮದುವೆ, ಮುಂಜಿ, ಆರತಿ, ಉಪನಯನ, ಪ್ರಸ್ಥ, ವರೋಪಚಾರ, ವರದಕ್ಷಿಣೆ, ಹಬ್ಬ ಹರಿದಿನ, ಪೂಜೆ, ಉತ್ಸವ, ಜಾತ್ರೆ ಮುಂತಾದ ಕಾರ್ಯಗಳಿಗೆ ಹಣವನ್ನು ದುಂದುವೆಚ್ಚ ಮಾಡಿ ಬಡ್ಡಿದಾರರ, ಗ್ರಾಮೀಣ ಜಮೀನುದಾರರ ಋಣದಲ್ಲಿ ತಮಗೆ ತಿಳಿಯದ ರೀತಿಯಲ್ಲಿ ಬಂಧಿತರಾಗಿರುತ್ತಾರೆ. ಈ ಸಂದರ್ಭವನ್ನು ಗಮನಿಸಿಯೇ ನಮ್ಮ ಕೃಷಿಕರನ್ನು "ಸಾಲದಲ್ಲಿ ಜನಿಸಿ, ಸಾಲದಲ್ಲಿಯೇ ಬೆಳೆದು ಸಾಲದಲ್ಲಿಯೇ ಸತ್ತು, ತನ್ನ ಉತ್ತರಾಧಿಕಾರಿಗಳಿಗೆ ಸಾಲವನ್ನೇ ಆಸ್ತಿಯನ್ನಾಗಿ ನೀಡುತ್ತಾನೆ" ಎನ್ನುವ ಮಾತು ಪ್ರಚಲಿತವಾಗಿದೆ.

ನಾವು ಪ್ರಗತಿಪರರಾಗಿ ಚಿಂತಿಸಿದರೂ ಸಹ ನಮ್ಮ ಕೃಷಿಕರು ಉಪಯೋಗಿಸುವ ಗೊಬ್ಬರವು ಅತ್ಯಂತ ಕೆಳಮಟ್ಟದ್ದಾಗಿದೆ. ಉತ್ತಮವಾದ ರಾಸಾಯನಿಕ ಗೊಬ್ಬರದ ಬೆಲೆಗಳು ಹೆಚ್ಚಾಗಿರುವುದರಿಂದ ಸಾಮಾನ್ಯ ರೈತನಿಗೆ ರಾಸಾಯನಿಕ ಗೊಬ್ಬರವನ್ನು ಕೊಳ್ಳಲಾಗುತ್ತಿಲ್ಲ. ಅಷ್ಟೆ ಅಲ್ಲದೇ ಜನರು ತಮ್ಮ ಜೀವನಾವಶ್ಯಕತೆಗಾಗಿ ಸಾಕುತ್ತಿರುವ ಎತ್ತು, ಕೋಣ, ಎಮ್ಮೆ, ಹಸು, ಕರುಗಳ ಸಗಣಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಬೆರಣಿ ಮಾಡಿ ಇಂಧನವಾಗಿ ಬಳಸಿಕೊಳ್ಳುತ್ತಾರೆ. ಇದರಿಂದಾಗಿ ಸಾವಯವ ಗೊಬ್ಬರವೂ ತನ್ನ ಮೌಲ್ಯವನ್ನು ಕಳೆದುಕೊಳ್ಳುವ ಸ್ಥಿತಿಯನ್ನು ತಲುಪಿದೆ. ಇದರಿಂದಾಗಿ ಕಷ್ಟಪಟ್ಟು ಬೆಳೆದ ಬೆಳೆಯನ್ನು ಸಹ ಸಕಾಲಕ್ಕೆ ತಗಲುವ ರೋಗಗಳಿಂದ ಸಂರಕ್ಷಿಸಲು ಅವನಿಗೆ ಸಾಧ್ಯವಾಗುತ್ತಿಲ್ಲ. ಕ್ರಿಮಿನಾಶಕ ಮತ್ತು ಬೆಳೆಗಳನ್ನು ವೃದ್ಧಿಪಡಿಸುವ ಔಷಧಿಯ ಉತ್ಪಾದನೆ ಹಾಗೂ ಬಳಕೆ ಕಡಿಮೆ ಪ್ರಮಾಣದಲ್ಲಿದೆ. ಇದರಿಂದಾಗಿ ಬೆಳೆ ನಾಶಹೊಂದಿ ರೈತನು ಸಾಲ ಹಾಗೂ ಇನ್ನಿತರ ಸಮಸ್ಯೆಗಳಿಗೆ ಪರಿಹಾರ ಕಾಣದೇ ಸಮಸ್ಯೆಯಲ್ಲಿಯೇ ಬದುಕನ್ನು ನೂಕುತ್ತಿದ್ದಾನೆ.

ಸಾಮಾಜಿಕ ಕಾರಣಗಳು

- **ಸಂಪ್ರದಾಯಿಕ ಮತ್ತು ಮೂಢ ನಂಬಿಕೆಗಳು**
- **ಅನಕ್ಷರತೆ ಮತ್ತು ಅಜ್ಞಾನ**
- **ಜಾತಿ ಪದ್ಧತಿ**
- **ರೈತನ ಅನಾರೋಗ್ಯ**

ಹೀಗೆ ಹಲವಾರು ಕಾರಣಗಳ ಜೊತೆಗೆ ಇಂದು ನಮ್ಮ ಗ್ರಾಮಗಳಲ್ಲಿ ಕೃಷಿಯ ಇಳುವರಿ ಕಡಿಮೆಯಾಗಲು ಸಾಮಾಜಿಕ ಅಂಶಗಳೂ ಬಹುಮಟ್ಟಿಗೆ ಕಾರಣವಾಗಿರುತ್ತದೆ. ನಮ್ಮ ರೈತರು ಹೆಚ್ಚಾಗಿ ಅನಕ್ಷರಸ್ಥರೂ, ಸಂಪ್ರದಾಯ ಶರಣರೂ ಆಗಿರುವುದರಿಂದ ಕೃಷಿಕತನವೂ ಕೇವಲ ತಮ್ಮ ಉಪಜೀವನದ ವೃತ್ತಿ ಎಂದು ತಿಳಿದಿದ್ದಾರೆಯೇ ವಿನಃ ಅದನ್ನೊಂದು ಕೈಗಾರಿಕೆ ಅಥವಾ ಸೇವಾವಲಯವೆಂದು ತಿಳಿದುಕೊಂಡಿಲ್ಲ. ಈ ರೀತಿಯ ನಿರಾಶಾವಾದಿ ವಿಚಾರವುಳ್ಳವರಾದ ಹೆಚ್ಚಿನ ನಮ್ಮ ರೈತರು ತಮ್ಮ ಉತ್ಪಾದನೆಯಲ್ಲಿ ಉತ್ತಮ ಫಲ ನೀರಿಕ್ಷಿಸುವಲ್ಲಿ ಸಫಲರಾಗುವದಿಲ್ಲ. ಈ ದೃಷ್ಟಿಯಿಂದ ಕೃಷಿಯ ಉತ್ಪಾದನೆಯು ಇಳಿಮುಖವಾಗಲು ಕೇವಲ ನೈಸರ್ಗಿಕ, ತಾಂತ್ರಿಕ ಮತ್ತು ಆರ್ಥಿಕ ಕಾರಣಗಳಷ್ಟೇ ಅಲ್ಲದೇ ಸಾಮಾಜಿಕ ಕಾರಣಗಳು ಇವೆ. ಅವುಗಳನ್ನು ವಿಸ್ತರಿಸುವುದಾದರೆ ಸಮಾಜಶಾಸ್ತ್ರಜ್ಞ ಹಾಗೂ ಅರ್ಥಶಾಸ್ತ್ರಜ್ಞರು ನಮ್ಮ ಬೇಸಾಯವು ಹಿಂದುಳಿಯಲು ನಮ್ಮ ಕೃಷಿಕರ ಕುರುಡು ನಂಬಿಕೆ ಹಾಗೂ ಅವರ ದೈವ ಅಧೀನ ಪ್ರವೃತ್ತಿಯೇ ಕಾರಣವಾಗಿದೆ ಎಂಬ ಮಾತನ್ನು ಹೇಳುತ್ತಾರೆ. ನಮ್ಮ ಕೃಷಿಕರಲ್ಲಿ ಅನೇಕ ಮೂಢನಂಬಿಕೆಗಳು ಮನೆ ಮಾಡಿದೆ. ಅವರು ಕೃಷಿಯನ್ನು ಆರ್ಥಿಕವಾಗಿ ಲಾಭಕರ ಉದ್ಯಮವೆಂದು ಪರಿಗಣಿಸುವುದಿಲ್ಲ.

ಅನಗತ್ಯವಾದ ಹಬ್ಬ ಹರಿದಿನ, ಪೂಜೆ, ಪುರಸ್ಕಾರ, ಮದುವೆ ಇತ್ಯಾದಿಗಳಿಗೆ ಹಣವನ್ನು ಸಾಲ ಮಾಡಿಯಾದರೂ ದುಂದುವೆಚ್ಚ ಮಾಡುವಷ್ಟು ಕೃಷಿಗೆ ಮಾಡುವದಿಲ್ಲ. ನಮ್ಮ ಕೆಟ್ಟ ಆಚಾರ ಸಂಪ್ರದಾಯಗಳು ಇಂದಿನ ಯುವ ರೈತರನ್ನು ಸಹ ಸೋಮಾರಿಯಾಗಿಸಿವೆ. ಅಷ್ಟೆ ಅಲ್ಲದೇ ಜಾತಿಯ ಸಂಪ್ರದಾಯಗಳು ಮತ್ತು ಧಾರ್ಮಿಕ ಸಂಪ್ರದಾಯಗಳು ರೈತರಿಗೆ ಹೊರೆಯಾಗಿವೆ ಮತ್ತು ಕೃಷಿಯು ಹಿಂದುಳಿಯುತ್ತಿರುವುದಕ್ಕೆ ಕಾರಣವಾಗಿವೆ ಎನ್ನಬಹುದು. ಇಷ್ಟೆ ಅಲ್ಲದೇ ನಮ್ಮ ಕೃಷಿಕರು ಬಹುತೇಕ ಅನಕ್ಷರಸ್ಥರಾಗಿರುವುದರಿಂದ ಹೊಸ ಹೊಸ ಬದಲಾವಣೆಗೆ ಅವರು ಸಿದ್ಧರಾಗುತ್ತಿಲ್ಲ. ಕೃಷಿಯನ್ನು ಅವರು ನಮ್ಮ ತಲೆ ತಲಾಂತರದಿಂದ ಬಂದಿರುವ ಪಿತ್ರಾರ್ಜಿತ ಕರ್ತವ್ಯ ಎಂಬ ಭಕ್ತಿಯಿಂದ ನಡೆಸಿಕೊಂಡು ಬರುತ್ತಿರುವವರೇ ಹೊರತು, ಇದೊಂದು ವಾಣಿಜ್ಯ ಕಸುಬೆಂದು ಉತ್ಸಾಹದಿಂದ ನಡೆಸಿರುವುದು ಕಂಡುಬರುವುದೇ ಇಲ್ಲ. ಇನ್ನು ಕೊನೆಯದಾಗಿ ಕೆಲವು ಜಾತಿಯವರು ಕೃಷಿ ಮಾಡುವುದೇ ಮಹಾ ಅಪರಾಧವೆಂದು ತಿಳಿದು ಹೊಲಗಳಲ್ಲಿ ದುಡಿಯುವುದು ತಮ್ಮ ಅಂತಸ್ತಿಗೆ ಕೀಳು ಎಂದು ಭಾವಿಸಿ ತಮಗೆ ತಾವೇ ದ್ರೋಹ ಮಾಡಿಕೊಂಡಿರುವುದಕ್ಕೆ ಅನೇಕ ನಿದರ್ಶನಗಳಿವೆ. ಈ ರೀತಿಯಿಂದಾಗಿ ಕೃಷಿಯು ಹಿಂದುಳಿಯಲು ಕಾರಣವಾಗುತ್ತಿದೆ.

ಗ್ರಾಮದ ರೈತ ಇಂತಹ ಎಲ್ಲಾ ಸನ್ನಿವೇಶಗಳ ಹಿನ್ನಲೆಯಲ್ಲಿ ಪಾರಂಪರಿಕ ವ್ಯವಸ್ಥೆ ಮತ್ತು ಆಧುನಿಕ ವ್ಯವಸ್ಥೆ ಹೀಗೆ ಎರಡು ಸನ್ನಿವೇಶಗಳ ಹಿನ್ನಲೆಯಲ್ಲಿ ಹೊಂದಿಕೊಂಡು; ಅತ್ಯಂತ ಸುಂದರ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಕಷ್ಟವೋ ಸುಖವೋ ಎರಡು ಬದುಕಿನ ಅವಿಭಾಜ್ಯ ಅಂಗಗಳೆಂದು ತಿಳಿದು ಬದುಕನ್ನು ಸಮನ್ವಯತೆಯಿಂದ ಸ್ವೀಕರಿಸಿ ಬದುಕುತ್ತಿರುವದಂತೂ ನಿಜವೇ ಹೌದು.

ನಮ್ಮ ದೇಶವು ಸಂಪೂರ್ಣ ವ್ಯವಸಾಯಿಕ ದೇಶ. ಗ್ರಾಮಗಳೇ ಇಲ್ಲಿಯ ಐಶ್ವರ್ಯದ ಆಧಾರ. ರೈತರೇ ಗ್ರಾಮಗಳ ಮತ್ತು ರಾಷ್ಟ್ರದ ತಳಹದಿ. ಅವನ ಸಂಪತ್ತೇ ದೇಶದ ಸಂಪತ್ತು. ಅವನ ಭಾಗ್ಯವೇ ದೇಶದ ಭಾಗ್ಯ. ಅವನ ಉದ್ಧಾರವೇ ದೇಶೋದ್ಧಾರ. ದೇಶದ ಗ್ರಾಮೀಣ ಜನರಲ್ಲಿ ಸುಖ, ಸಂಪತ್ತು, ಸಮೃದ್ಧಿಯಾಗಿದ್ದರೆ; ದೇಶದಲ್ಲಿ ನೆಲವೂ, ಜಲವೂ, ಸಂಪತ್ತೂ ನದಿಯಂತೆ ಅವಿಚ್ಛಿನ್ನವಾಗಿ ಹರಿಯುತ್ತದೆ ಎಂದುದನ್ನು ಮರೆಯಕೂಡದು. ಹಳ್ಳಿಗಳ ಅಭಿವೃದ್ಧಿಯಾಗದೇ ನಮ್ಮ ರಾಷ್ಟ್ರದ ಅಭಿವೃದ್ಧಿಯಾಗಲಾರದೆಂಬ ಮಾತನ್ನು ನಾವೆಲ್ಲರೂ ಅರಿತಿದ್ದೇವೆ. ಆದರೆ ನಿಷ್ಠೆಯಿಂದ, ಪ್ರಾಮಾಣಿಕತನದಿಂದ ಎಲ್ಲಕ್ಕೂ ಹೆಚ್ಚಾಗಿ ವಾಸ್ತವ ದೃಷ್ಟಿಯಿಂದ ನಾವು ನಮ್ಮ ಮುಂದಿರುವ ಸಮಸ್ಯೆಗಳ ಪರಿಹಾರದಲ್ಲಿ ನಿರತರಾಗುವುದು ಅವಶ್ಯವೆಂಬ ಕಲ್ಪನೆ ರೈತನಿಗೆ ಬಂದರೆ ಅಷ್ಟೇ ಸಾಕು.

ಅಡಿ ಟಿಪ್ಪಣಿಗಳು

೧. ಟಿ.ಗೋವಿಂದರಾಜು, ಕರ್ನಾಟಕ ಗ್ರಾಮ ವಿನ್ಯಾಸಗಳು. ಸು,ಜಾ,ಸಂ. ೨ ಕ,ಜಾ,ಮ,ಯ,ಅ, ಬೆಂಗಳೂರು ೧೯೯೮ ಉದ್ಧೃತ ಪುಟ ೪೮೧.

೨. ಶ್ರೀ ಗುರಪ್ಪ ಸಿದ್ದಪ್ಪ ಈಶ್ವರಪ್ಪಗೋಳ ವಯಸ್ಸು–೪೦ ಜಾತಿ–ಹಿಂದೂ ಲಿಂಗಾಯತ ಉದ್ಯೋಗ–ಒಕ್ಕಲುತನ ಊರು–ಕೊಟ್ಟಲಗಿ

3. 18th All India Live Stock Politry Agriculture Implement and Machinery and Fishery Statitic Census 2007. Sri. M.G. Rachanaikar, Govt. of Karnataka, Veternory Inspector, Belgaum.

ಅಧ್ಯಾಯ ೭

ಆಚರಣೆಗಳು

೭.೧ ಜೀವನಾವರ್ತನದ ಆಚರಣೆಗಳು
 ೭.೧.೧ ಸೀಮಂತ
 ೭.೧.೨ ಜನನ ನಾಮಕರಣ
 ೭.೧.೩ ಮದುವೆ
 ೭.೧.೪ ಮರಣ
೭.೨ ವಾರ್ಷಿಕಾವರ್ತನ ಆಚರಣೆಗಳು
 ೭.೨.೧ ಹಬ್ಬ ಹರಿದಿನಗಳು
 ೭.೨.೨ ಧರ್ಮ, ದೇವಾಲಯ, ಮಠಗಳಲ್ಲಿ ಜರುಗುವಂತ ಆಚರಣೆಗಳು
 ೭.೨.೩ ಜಾತ್ರೆಗಳು
 ೭.೨.೪. ನಂಬಿಕೆಗಳು
 ೭.೨.೫. ವಿಧಿ-ನಿಷೇಧಗಳು
 ೭.೨.೬. ಹರಕೆಗಳು

ಅಧ್ಯಾಯ ೭

ಆಚರಣೆಗಳು

ಮನುಷ್ಯ ಅಗೋಚರವಾದ ದೈವಶಕ್ತಿಗಳ ಪ್ರಿತ್ಯರ್ಥವಾಗಿ ನಡೆಸುವ ಮತಾಚಾರಗಳು ಮತ್ತು ಕಾರ್ಯವಿಧಿಗಳನ್ನು ಆಚರಣೆಗಳು ಒಳಗೊಂಡಿವೆ. ಆಚರಣೆ ಇಲ್ಲದ ಕುಲವಿಲ್ಲ, ಜಾತಿ ಇಲ್ಲ, ಜನಾಂಗವಿಲ್ಲ. ಜನಪದರ ಜೀವನದ ತಳಹದಿ ಅವರ ಬಲವಾದ ನಂಬಿಕೆಗಳಾಗಿವೆ. ಈ ನಂಬಿಕೆಗಳ ಮೊತ್ತವೇ ಆಚರಣೆಯಾಗುತ್ತದೆ ಆಚರಣೆಗಳ ಅಭ್ಯಾಸ ಮಾಡದೇ ಇದ್ದರೆ ಗ್ರಾಮವೊಂದರೆ ಅಧ್ಯಯನ ಪೂರ್ಣವಾಗುವುದಿಲ್ಲ.

ಕಿಟ್ಟೆಲ್ ಕೋಶದಲ್ಲಿ 'ಆಚರಣೆ' ಎಂಬುದಕ್ಕೆ Ritual ಎನ್ನಲಾಗಿದೆ. ನಂಬಿಕೆ, ನಡಾವಳಿಕೆಗಳು ಎನ್ನುವ ಸಮಾನ ಪದಗಳು ಇವೆ. ಪ್ರತಿಯೊಂದು ಸಮಾಜಕ್ಕೂ ತನ್ನದೇ ಆದ ನಿಯಮವಿರುತ್ತದೆ. ಸಂಪ್ರದಾಯದ ಚೌಕಟ್ಟಿನೊಳಗೆ ಈ ಆಚರಣೆಗಳು ಬರುತ್ತವೆ. ಆಚರಣೆಗಳು ಅನೇಕ ಸಂಪ್ರದಾಯಗಳ ವಿಭಾಗಗಳು. ನಿರ್ದಿಷ್ಟ ಸ್ವರೂಪ ವಿನ್ಯಾಸ ಹೊಂದಿರುವ ಆಚರಣೆಗಳು ಸಮಾಜವನ್ನು ನಿಯಂತ್ರಿಸುವ ಶಕ್ತಿಯಾಗಿವೆ ನಿರ್ದಿಷ್ಟ ಸಂದರ್ಭಗಳಲ್ಲಿ ಈ ಆಚರಣೆಗಳನ್ನು ಆಚರಿಸುತ್ತಾರೆ. ಕ್ರಿಯೆ ಇಲ್ಲದಿದ್ದರೆ ಅದು ಆಚರಣೆ ಎನಿಸಿಕೊಳ್ಳುವುದಿಲ್ಲ. ಚಲನಶೀಲ ಬದುಕಿನಲ್ಲಿ ಆಚರಣೆ ಇರುತ್ತದೆ.

ಆಚರಣೆಗಳನ್ನು ಜೀವನಾವರ್ತನದ ಆಚರಣೆಗಳು ಮತ್ತು ವಾರ್ಷಿಕ ಆವರ್ತನದ ಆಚರಣೆಗಳು, ಎಂದು ಎರಡು ರೀತಿಯಲ್ಲಿ ವಿಂಗಡಣೆ ಮಾಡಬಹುದು.

ಜನಪದರ ಜೀವನದಲ್ಲಿ ಮಹತ್ವದ ಎರಡು ಘಟ್ಟಗಳೆಂದರೆ ಜನನ ಮತ್ತು ಮರಣ. ಜನನ ಒಂದು ಮುಖವಾದರೆ, ಮರಣ ಮತ್ತೊಂದು ಮುಖ. ಹುಟ್ಟಿನ ಬಗ್ಗೆ ನಂಬಿಕೆ ಆಚರಣೆಗಳಿರುವಂತೆ ಸಾವಿನ ಬಗೆಗೂ ಹಲವು ನಂಬಿಕೆ ಆಚರಣೆಗಳಿವೆ.

ಹಲವು ಜಾತಿಗಳಿರುವ 'ಕೊಟ್ಟಲಗಿ' ಗ್ರಾಮದ ಆಚರಣೆ, ನಂಬಿಕೆಗಳು ಇಲ್ಲಿನ ಎಲ್ಲ ವರ್ಗದ ಜನಪದರ ಬದುಕಿನ ವ್ಯವಹಾರದ ನೆಲೆಗಟ್ಟಾಗಿ ನಿಂತಿವೆ ನಂಬಿಕೆ ಜನಪದರ ಜ್ಞಾನ. ಅದನ್ನು ಬಿಟ್ಟು ಜನಪದರ ಬದುಕಿಲ್ಲ ಜನಪದರ ಜೀವನದಲ್ಲಿ ನಂಬಿಕೆಗಳು ಸಾವಿರಾರು ವರ್ಷಗಳಿಂದ ಹಾಸು ಹೊಕ್ಕಾಗಿ ಸೇರಿಕೊಂಡಿವೆ. ಅವು ಜನಪದರ ಜೀವನದ ಮೇಲೆ ನೇರವಾಗಿ ಪ್ರಭಾವ ಬೀರುವುದರಿಂದ ಗ್ರಾಮದ ಜನಪದ ಅಧ್ಯಯನದಲ್ಲಿ ಇವುಗಳ ಅಭ್ಯಾಸವು ಮುಖ್ಯವಾಗುತ್ತದೆ.

೭.೧ ಜೀವನಾವರ್ತನದ ಆಚರಣೆಗಳು

ಜೀವನಾವರ್ತನವು ಮನುಷ್ಯನ ಹುಟ್ಟಿನಿಂದ ತೊಡಗಿ ಸಾವಿನಲ್ಲಿ ಕೊನೆಗೊಳ್ಳುತ್ತವೆ. ಇವುಗಳ ನಡುವೆ ಅನೇಕ ಸ್ಥಿತ್ಯಂತರದ ಹಂತಗಳಿರುತ್ತವೆ. ಇಂತಹ ಸಂದರ್ಭಗಳಲ್ಲಿ ನಡೆಸುವ ಆಚರಣೆಗಳನ್ನು ಸ್ಥಿತ್ಯಂತರ ವಿಧಿಗಳು ಅಥವಾ ಪರಿವರ್ತನೆಯ ವಿಧಿಗಳೆಂದು ಕರೆಯಬಹುದು. ಇಂತಹ ವಿಧಿ ಆಚರಣೆಗಳು ಕಾಲದಿಂದ ಕಾಲಕ್ಕೆ, ದೇಶದಿಂದ ದೇಶಕ್ಕೆ ವ್ಯತ್ಯಾಸವಾಗುತ್ತ ಹೋಗುತ್ತವೆ.

ಕೊಟ್ಟಲಗಿ ಗ್ರಾಮದಲ್ಲಿ ವಿವಿಧ ಸಮುದಾಯದ ಜನರು ವಾಸಿಸುತ್ತಾರೆ. ಆದರೆ ಬಹು ಸಂಖ್ಯಾತರಾಗಿ ವೀರಶೈವ ಲಿಂಗಾಯತ ಸಮುದಾಯದವರಿದ್ದು, ಶೇಕಡಾ ೭೦ ರಿಂದ ೭೫ ರಷ್ಟು ಈ ಸಮುದಾಯದವರೆ ಇದ್ದಾರೆ. ಹೀಗಾಗಿ ಅನೇಕ ಸಮುದಾಯದ ಅಲ್ಪ ಸಂಖ್ಯಾತ ಜನರು ತಮ್ಮ ಸಮುದಾಯದಲ್ಲಿ ಅಲ್ಪ ಸ್ವಲ್ಪ ಆಚರಣೆಯಲ್ಲಿ ಬದಲಾವಣೆ ಮಾಡಿಕೊಂಡರೂ ಕೂಡಾ ಬಹುತೇಕ ಆಚರಣೆಗಳಲ್ಲಿ ಬಹು ಸಂಖ್ಯಾತ ಲಿಂಗಾಯತ ಸಮುದಾಯದ ಆಚರಣೆಗಳೇ ಕಂಡುಬರುತ್ತವೆ. ಹೀಗಾಗಿ ವಿವಿಧ ಸಮುದಾಯಗಳ ಆಚರಣೆಗಳಲ್ಲಿ ಕಂಡುಬರುವ ವಿಭಿನ್ನ ಆಚರಣೆಗಳನ್ನು ಮಾತ್ರ ಇಲ್ಲಿ ಗುರ್ತಿಸುವ ಪ್ರಯತ್ನವನ್ನು ಮಾಡಲಾಗಿದೆ.

೭.೧.೧ ಸೀಮಂತ

ಜನನ ಪೂರ್ವದಲ್ಲಿ ಆಚರಿಸುವ ಸಂಸ್ಕಾರವೆಂದರೆ, ಮೊದಲನೆಯದು 'ಸೀಮಂತ ಕಾರ್ಯ' ಇದನ್ನು ಜನಪದರು 'ಕುಬಸಾ ಮಾಡುವುದು' ಎಂದು ಕರೆಯುತ್ತಾರೆ. ಇದರಲ್ಲಿ ಎರಡು ಬಗೆ – ಒಂದು 'ಕಳ್ಳ ಕುಬುಸ' ಇನ್ನೊಂದು 'ದೊಡ್ಡ ಕುಬುಸ'.

ಕಳ್ಳ ಕುಬುಸ

ಸ್ತ್ರೀಯು ಗರ್ಭವತಿಯಾದ ಐದನೆಯ ತಿಂಗಳಲ್ಲಿ ಕಳ್ಳ ಕುಬುಸ ಮಾಡುತ್ತಾರೆ. 'ತಿಂಗಳು ಬಸರಲ್ಲಿ, ತಂಗಳು ಊಟಲ್ಲ' ಎಂಬ ಗಾದೆ ಮಾತೇ 'ಕಳ್ಳ ಕುಬುಸ' ಎಂದು ಕರೆಯಲು

ಸಂಭವ ಇರುವುದರಿಂದ ಹೆಚ್ಚು ಸುದ್ದಿ ಮಾಡದೆ ಗುಪ್ತವಾಗಿ ಈ ಕಾರ್ಯ ಮಾಡುವದರಿಂದ 'ಕಳ್ಳ ಕುಬುಸ' ಎನ್ನುತ್ತಾರೆ. ಓಣಿಯಲ್ಲಿ ಕೆಲವು ಜನ ಸೇರಿ ಕಾರಣವನ್ನು ಹಮ್ಮಿಕೊಳ್ಳುತ್ತಾರೆ. ತವರು ಮನೆಯಿಂದ ಬಂದ ನಾಲ್ಕಾರು ಜನರು ಸೇರಿ ಬಹಳ ಸರಳವಾದ ರೀತಿಯಲ್ಲಿ

ಬರುವುದಿಲ್ಲ.

ದೊಡ್ಡ ಕುಬುಸ

ಸೊಸೆಗೆ ಏಳು ತಿಂಗಳು ತುಂಬಿವೆ ಎಂದು ತಿಳಿದಾಗ ತವರ ಮನೆಗೆ ಹೇಳಿ

ಕೇಳಿಕೊಂಡು ಕಾರಣದ ಏರ್ಪಾಡು ಮಾಡಿಕೊಳ್ಳುತ್ತಾರೆ. ಅನುಕೂಲವಿದ್ದ ಮತ್ತು ನಡಿ ಇದ್ದ ಎಲ್ಲ ಜನಪದ ವರ್ಗಗಳಲ್ಲಿ ದೊಡ್ಡ ಕುಬುಸದ ಕಾರಣ ನಡೆಯುತ್ತದೆ. ಮನಿ–ಮಾರು ಸಾರಿಸಿ, ಮಂಟಪ ಹಾಕುತ್ತಾರೆ. ಇಲ್ಲವೆ ತಮ್ಮ ಮನಿದೇವರ ದೇವಾಲಯದಲ್ಲಿ ಏರ್ಪಾಡು ಮಾಡುತ್ತಾರೆ. ಈ ಸಲ ತವರು ಮನೆಯವರು ನಿಬ್ಬಣಕ್ಕೆ ಹೊರಟಂತೆ ಹೆಚ್ಚಿನ ಸಂಖ್ಯೆಯಲ್ಲಿ

ಬಂದಿರುತ್ತಾರೆ ಮತ್ತು ಹೆಣ್ಣು-ಗಂಡಿನವರು ತಮ್ಮ ಕಳ್ಳು-ಬಳ್ಳಿಯವರಿಗೆಲ್ಲ ಹೇಳಿ ಕಳಿಸಿರುತ್ತಾರೆ. ತವರಿನವರು ಮಗಳೊಂದಿಗೆ ಅಳಿಯನಿಗೂ ಮತ್ತೊಮ್ಮೆ ತುಂಬಾ ಆಯೇರಿ ತಂದಿರುತ್ತಾರೆ. ಕಾರಣದ ದಿವಸ ದಂಪತಿಗಳೀರ್ವರಿಗೆ ಹೊಸ ಬಟ್ಟೆಯನ್ನುಡಿಸಿ ಜೊಡಿ ಕೂಡಿಸಿ ದಂಡಿ ಕಟ್ಟಿ, ಮಾಲಿ ಹಾಕಿ, ಆರತಿ ಬೆಳಗುತ್ತಾರೆ. ಆಗ ಕೆಲವು ಹಾಡುಗಳನ್ನೂ ಹಾಡುತ್ತಾರೆ. ನಂತರ ಹತ್ತಿರದ ಯಾವುದಾದರೊಂದು ದೇವಾಲಯಕ್ಕೆ ಬಾಜಾ-ಭಜಂತ್ರಿಯೊಂದಿಗೆ ಊದುತ್ತ ಬಾರಿಸುತ್ತ ಹೋಗಿ ಎಡೆ ಕೊಟ್ಟು ಕಾಯಿ ಒಡೆಸಿಕೊಂಡು ದರ್ಶನ ಪಡೆದು ಮನೆಗೆ ಬರುತ್ತಾರೆ. ಕಾರಣದ ಸಂದರ್ಭದಲ್ಲಿ ಬೀಗರಾಗುವವರೆಲ್ಲರೂ ಗಂಡ ಹೆಂಡತಿಗೆ ಆಯೇರಿ ಮಾಡುತ್ತಾರೆ. ಇದಾದ ನಂತರ ಬಂದ ಜನ ಸಮೂಹಕ್ಕೆಲ್ಲ ಸಜ್ಜಕ, ಹೋಳಿಗೆ-ಹುಗ್ಗಿ, ಅನ್ನ-ಸಾರ ಮೊದಲಾದ ತಿಂಡಿ ತಿನಿಸಿನ ಊಟ ಇರುತ್ತದೆ. ಕೆಲವು ಶ್ರೀಮಂತರು ಮತ್ತೊಮ್ಮೆ ಊರಿಗೆನೇ ಊಟ ಹಾಕಿಸುತ್ತಾರೆ. ತವರಿನವರು ತಂದ 'ಬುತ್ತಿ ರೊಟ್ಟಿ'ಯನ್ನು ಹಂಚಿ ಹೆರಿಗೆಗಾಗಿ ಮಗಳನ್ನು ತವರಿಗೆ ಕರೆದೊಯ್ಯುತ್ತಾರೆ.

ವಿಶ್ವಕರ್ಮ ಸಮುದಾಯದಲ್ಲಿ ಸೀಮಂತ

ವಿಶ್ವಕರ್ಮ ಜನಾಂಗದಲ್ಲಿ ಮದುವೆಯಾದ ಹೆಣ್ಣು ಮೂರು ತಿಂಗಳು, ಐದು ತಿಂಗಳು, ಏಳು ಮತ್ತು ಒಂಬತ್ತನೇಯ ತಿಂಗಳಲ್ಲಿ ಸೀಮಂತ ಕಾರ್ಯವನ್ನು ನೆರವೆರಿಸುತ್ತಾರೆ. ಎಲ್ಲ ಸಮುದಾಯದೊಂದಿಗೆ ಬೆರೆತು ಈ ಕಾರ್ಯಕ್ರಮವನ್ನು ನಡೆಸುತ್ತಾರೆ. ಗಂಡ ಹೆಂಡತಿಯರಿಗೆ ಹೊಸ ಬಟ್ಟೆ ಹಾಗೂ ಸಿಹಿಊಟವನ್ನು ತಯಾರಿಸಿ ಸಂತೋಷ ಸಂಭ್ರಮದಿಂದ ಈ ಕಾರ್ಯವನ್ನು ನೆರವೆರಿಸುತ್ತಾರೆ.

ಕೊರವ ಸಮುದಾಯದಲ್ಲಿ ಸೀಮಂತ

ಗ್ರಾಮದ ಕೊರವ ಜನಾಂಗದಲ್ಲಿ ಐದು ಮತ್ತು ಏಳು ಹಾಗೂ ಒಂಬತ್ತನೇಯ ತಿಂಗಳಲ್ಲಿ ಸೀಮಂತ ಕಾರ್ಯ ನೆರವೆರಿಸುತ್ತಾರೆ. ಸಿಹಿಯ ಅಡುಗೆಯನ್ನು ತಯಾರಿಸಿ ಅವರವರ ಶಕ್ತ್ಯಾನುಸಾರ ಸಮುದಾಯವರನ್ನು ಕರೆದು ಊಟ ಮಾಡಿಸಿ ಸಂತೊಷ ಪಡುತ್ತಾರೆ. ಅವರವರ ಸಂತೋಷದ ಹಾಗೂ ಆರ್ಥಿಕ ಸಾಮರ್ಥ್ಯದ ಆಧಾರದಲ್ಲಿ ಉಡುಗೊರೆ ಕೊಡುಕೊಳ್ಳುವುದನ್ನು ಮಾಡುತ್ತಾರೆ.

೭.೧.೨ ಜನನ ನಾಮಕರಣ

ಜನನಾನಂತರದ ಸಂಸ್ಕಾರಗಳು

ಚೊಚ್ಚಲು ಹೆರಿಗೆ ತವರು ಮನೆಯಲ್ಲಿಯೇ ಆಗಬೇಕೆಂಬುದು ಸಾಮಾನ್ಯವಾಗಿ ಎಲ್ಲ ಜನಪದ ವರ್ಗಗಳ ಆಶಯವಾಗಿದೆ. ತಮ್ಮ ಜನಾಂಗದಲ್ಲಿ ಆಚರಣೆ ಇದ್ದರೆ ಕುಬುಸಾ ಮಾಡಿ, ಇರದಿದ್ದರೆ ಮಗಳಿಗೆ ಏಳೆಂಟು ತಿಂಗಳು ತುಂಬಿವೆ ಎಂದು ತಿಳಿದಾಗ ಬಾಣೇತನಕ್ಕಾಗಿ ತವರಿಗೆ ಕರೆತರುತ್ತಾರೆ. ತಮ್ಮ ಓಣಿಯಲ್ಲಿಯೋ ಇಲ್ಲವೆ ಪಕ್ಕದ ಓಣಿಯಲ್ಲಿರುವ ನುರಿತ 'ಸೂಲಗಿತ್ತಿ' ಗೆ ಮುಂಚಿತವಾಗಿಯೇ ಹೇಳಿಬಿಟ್ಟಿರುತ್ತಾರೆ. ಸಾಮಾನ್ಯವಾಗಿ ಎಲ್ಲ ಸಮುದಾಯದಲ್ಲೂ ಎಂದರೆ ಲಿಂಗಾಯತ, ಬಣಜಿಗ, ಗಾಣಿಗ, ಕುರುಬ, ಮುಸ್ಲಿಂ, ನಾವ್ಹಿ, ಹೊಲೆಯರು, ಮಾದಿಗರು, ಕುಂಬಾರರು, ಪಂಚಾಳರು, ತಳವಾರರು, ಬೇಡರು ಮುಂತಾದ ಸಮುದಾಯಗಳಲ್ಲಿ ಎಲ್ಲ ಸಮುದಾಯದಲ್ಲಿ ಹೆರಿಗೆ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ ಹಿರಿಯರು, ಸೂಲಗಿತ್ತಿಯರು

ತಿಳುವಳಿಕೆ ನೀಡುತ್ತಾರೆ. ಹೊಸದೊಂದು ಹೊರಸಲನ್ನು ನೇಯಿಸುತ್ತಾರೆ. ಬಸುರಿಗೆ ಬೇನೆ ಕಾಣಿಸಿಕೊಳ್ಳಲು ಸೂಲಗಿತ್ತಿಯಿಂದ ಬಾಣೆತನ ಮಾಡಿಸುತ್ತಾರೆ. ಬಾಣೆತನ ಬೇಗ ಆಗದಿದ್ದರೆ, ಎದ್ದು ನಿಂತು ನೆಲುವನ್ನು ಹಿಡಿದು ನಿಲ್ಲಿಸುವುದು, ಹೊಟ್ಟೆಗೆ ಕೊಬ್ರಿ ಎಣ್ಣಿ ಹಚ್ಚಿ ಒರೆಸುವುದು, ಒತ್ತಿ ಉಸಿರು ಹಿಡಿಯಲು ಇತ್ಯಾದಿಯಾಗಿ ನುರಿತ ಸೂಲಗಿತ್ತಿಯರು ಹೇಳಿ ಬಾಣೆತನ ಸರಳವಾಗಿ ಆಗುವಂತೆ ಮಾಡುತ್ತಾರೆ. ಹುಟ್ಟಿದ ಮಗು ಹೆಣ್ಣಾಗಿದ್ದರೆ ಗಡ್ಡ–ಮೀಸೆ ಬರದಂತೆ ಹೊಕ್ಕಳ ಹುರಿಯನ್ನು ಕೊಯ್ದು ಮುಖಕ್ಕೆ ಒರೆಸುವುದಾಗಿ ಸೂಲಗಿತ್ತಿಯರು ಹೇಳುತ್ತಾರೆ. ನಂತರ ಬಾಣತಿ ಮೈಗೆ ಹೆಚ್ಚು–ಅರಿಷಿಣ ಒರೆಸಿ, ಎಣ್ಣೆ ಹಚ್ಚಿ ಬಿಸಿ ನೀರಿನಿಂದ, ಮಗುವಿಗೆ ಉಗುರು ಬೆಚ್ಚಗಿನ ಬಿಸಿ ನೀರಿನಿಂದ ಸ್ನಾನ ಮಾಡಿಸುತ್ತಾರೆ.

ಇದಾದ ನಂತರ ಮಾಸನ್ನು ಹೊಸ ಗಡಿಗೆಯಲ್ಲಿ ಹಾಕಿ ಮೇಲೆ ಮುಚ್ಚಿ ಬಚ್ಚಲಲ್ಲಿ ತೆಗ್ಗು ತೆಗೆದು ಹುಗಿಯುತ್ತಾರೆ. ಇದರಲ್ಲಿ ಕೆಲವು ದವಸ–ಧಾನ್ಯ, ಹಣ ಹಾಗೂ ಬೆಳ್ಳಿ ಚೂರು ಇತ್ಯಾದಿಗಳನ್ನು ಹಾಕಿ ಮುಚ್ಚುತ್ತಾರೆ. ಅದರ ಮೇಲೆ ತೆಳುವಾದ ಐದು ಸಣ್ಣ ಕಲ್ಲುಗಳನ್ನಿರಿಸಿ ಕುಂಕುಮ ಬಂಡಾರ ಹಚ್ಚಿ ಊದಿನಕಡ್ಡಿ ಹಚ್ಚಿ ಪೂಜಿಸುತ್ತಾರೆ. ಇವಳನ್ನು 'ಬಚ್ಚಲ ಶೆಟವಿ' ಎಂದು ಕರೆಯುತ್ತಾರೆ.

ಸೂತಕ

ಗ್ರಾಮದ ಎಲ್ಲ ಸಮುದಾಯದವರಲ್ಲಿ ಜನನ ಸಂದರ್ಭದ ಸೂತಕವನ್ನು ಆಚರಿಸುವುದ ಕಂಡು ಬರುತ್ತದೆ. ಕೊರವ ಸಮುದಾಯದಲ್ಲಿ ನಾಲ್ಕು ದಿನದವರೆಗೆ ಸೂತಕ ಆಚರಿಸುವುದು ಕಂಡು ಬಂದರೆ ಇನ್ನುಳಿದ ಎಲ್ಲ ಸಮುದಾಯಗಳಲ್ಲಿ ಐದು ದಿನ ಸೂತಕ ಆಚರಿಸುತ್ತಾರೆ.

ಮೂರದೇಶಿ

ಗ್ರಾಮದ ಹೊಲೆಯರು ಮತ್ತು ಮಾದಿಗರಲ್ಲಿ ಮೂರದೇಶಿ ಎನ್ನುವ ಆಚರಣೆ ಕಂಡುಬರುತ್ತದೆ. ಜೋಳದ ನುಚ್ಚು ಮಾಡಿ ಚಿಕ್ಕ ಮಕ್ಕಳಿಗೆ ಉಣ್ಣಿಸಿ ಐದು ಜನ ಮುತ್ತೈದೆಯರಿಗೆ ಉಣ್ಣಿಸಿ ಬಚ್ಚಲು ಪೂಜೆ ಮಾಡುತ್ತಾರೆ. ಗ್ರಾಮದಲ್ಲಿ ಈ ಜನಾಂಗದಲ್ಲಿ ಮಾತ್ರ ಈ ಆಚರಣೆ ಕಂಡುಬರುತ್ತದೆ.

ಐದೇಶಿ

ಐದೇಶಿ ಸಾಮಾನ್ಯವಾಗಿ ಮುಸ್ಲಿಂರಾದಿಯಾಗಿ ಹಿಂದೂ ಸಂಪ್ರದಾಯದ ರಜಪೂತರನ್ನು ರಜಪೂತರನ್ನು ಹೊರತುಪಡಿಸಿ ಉಳಿದ ಎಲ್ಲ ಸಮುದಾಯದವರು ಈ ಆಚರಣೆಯನ್ನು ಮಾಡುತ್ತಾರೆ. ಮುಸ್ಲಿಂರು 'ಚಟ್ಟಿಮಾ' ಪೂಜಾ ಎಂದು ಕರೆದರೆ ಹಿಂದೂಗಳು 'ಶೆಟ್ಟಿ' ಪೂಜೆ ಎಂದು ಕರೆಯುತ್ತಾರೆ. ಬಾಣೆತನದ ಐದನೆಯ ದಿನ ಮಾಡುವ ಒಂದು ಆಚರಣೆಯೇ 'ಐದೇಶಿ' ಅಂದು ಸೂಲಗಿತ್ತಿಯ ನೇತೃತ್ವದಲ್ಲಿ ಮಗುವಿಗೆ ಅಭ್ಯಂಜನ ಸ್ನಾನ ನಡೆಯುತ್ತದೆ. ಐದು ಜನ ಹಾಲು ಮುತ್ತೈದೆಯರಿಗೆ ಆಮಂತ್ರಣ ನೀಡಿರುತ್ತಾರೆ. ಇವರು ಬಂದು ಬಾಣತಿ ಮತ್ತು ಮಗುವಿನ ಸ್ನಾನ ಮಾಡಿಸಿ, ಮನೆಯಲ್ಲಿರುವ ಗುಂಡಕಲ್ಲನ್ನು ತೊಳೆದು ಒರೆಸಿ ನಡುಮನೆಯಲ್ಲಿ ಇತರರು ತಂದ ಕಾಳುಗಳ ಮಧ್ಯದಲ್ಲಿ ಬಾಣಿತಿಯ ಮುಂದಿಟ್ಟು, ಅವಳ ತಾಳಿ ಹಾಕಿ, ಕುಂಕುಮ ಬಂಡಾರ, ವಿಭೂತಿ ಹಚ್ಚುತ್ತಾರೆ. ಈ ಕಲ್ಲಿಗೆ "ಶಟಗವ್ವ' ಎಂದು ಕರೆಯುತ್ತಾರೆ.

ಈ 'ಶೆಟಗವ್ವನ' ಪೂರ್ವಾಭಿಮುಖಕ್ಕೆ ಮೊರವೊಂದನ್ನು ಡಬ್ಬ ಹಾಕಿ, ಅದರ ಮೇಲೆ ಐದು ಇಲ್ಲವೆ ಏಳು ಗೋದಿ ಕಣಕದಾರತಿಗಳನ್ನು ಮೂಲೆಗೂ ಮತ್ತು ಸುತ್ತಲೂ ಇರಿಸಿ ಮುಂದಿಡುವರು. ಆನಂತರ ಲೋಬಾನ ಹಾಕಿ ಶೆಟವಿಯನ್ನು ಮತ್ತೊಮ್ಮೆ ಪೂಜಿಸುವರು. ಬೆಳ್ಳೊಳ್ಳಿಯನ್ನು ಕುಡಗೋಲಿಗೆ ತಿಕ್ಕಿ ದೀಪಕ್ಕೆ ಹಿಡಿದು ಕಾಡಿಗೆ ಮಾಡಿ ಬಾಣತಿ, ಶೆಟವಿ ಮತ್ತು ಮಗುವಿಗೂ ಹಚ್ಚಿ, ಹಂಗನೂಲೆಳೆ ಸುತ್ತಿ ಪೂಜೆ ಮಾಡುವರು. ಆನಂತರ ಬಾಣತಿಗೆ ಶೆಟಗವ್ವನ ಕೆಳಗಿರುವ ಕಾಳುಗಳಿಂದಲೇ 'ಸೇಸಿ' ಇಡುತ್ತಾರೆ. ಕೂಸನ್ನು ಬಟ್ಟೆಯೊಂದರಲ್ಲಿ ಸುತ್ತಿ ಬಾಣತಿಯ ತೊಡೆಯ ಮೇಲೆ ಹಾಕುತ್ತಾರೆ. ಆಗ ಬಾಣತಿಯು ಸೂಲಗಿತ್ತಿಗೆ ಕಂಬಳಿಯನ್ನು ಮೈತುಂಬ ಹೊರಿಸಿ ದೀಪಗಳಿರುವ ಮೊರವನ್ನು ಆರದಂತೆ ಅವಳ ತನ್ನ ಮನೆಗೆ ತೆಗೆದುಕೊಂಡು ಹೋಗಲು ಹೇಳುತ್ತಾರೆ. ಹೋಗಲಣಿಯಾದಾಗ ಮಗುವಿನ ಹೊಕ್ಕಳ್ಹುರಿಯನ್ನು ಕೊಯ್ದು ಕುಡುಗೋಲಿನಿಂದ ಸೂಲಗಿತ್ತಿಯ ಬೆನ್ನನ್ನು ತಟ್ಟಲು, ಕತ್ತಲಲ್ಲಿ ಹೊರಳಿ ನೋಡದೆ ಹೋಗಲು ಹೇಳುತ್ತಾರೆ. ಆ ಮೇಲೆ ಬಂದವರೆಲ್ಲ ಹುಗ್ಗಿ, ಹೋಳಿಗೆ ಇಲ್ಲವೆ ಕಡಬಿನ ಸಿಹಿ ಊಟ ಮಾಡಿ ತಮ್ಮ ತಮ್ಮ ಮನೆಗೆ ತೆರಳುವುದರೊಂದಿಗೆ 'ಐದೇಶಿ' ಕಾರಣ ಮುಗಿದಂತಾಗುತ್ತದೆ.

ಅಲ್ಲದೇ ಬಾಣಂತನ ಸಮಯದಲ್ಲಿ ಬಾಣಂತಿಗೆ ಹಾಗೂ ಮಗುವಿಗೆ ಬಿಸಿ ನೀರಿನಿಂದ ಸ್ನಾನ ಮಾಡಿಸುತ್ತಾರೆ. ಮಗುವಿಗೆ ಐದು ತಿಂಗಳು ಅಥವಾ ಒಂಭತ್ತು ತಿಂಗಳು, ಒಂದು ವರ್ಷದವರೆಗೆ ಬಿಸಿನೀರಿನಿಂದ ಸ್ನಾನ ಮಾಡಿಸುತ್ತಾರೆ. ಮಗು ಎಷ್ಟು ಕಿರುಚಾಡಿದರೂ ಬಿಡದೇ ಕೊಬ್ಬರಿ ಎಣ್ಣೆಯನ್ನು ಹಿತವಾಗಿ ಬಿಸಿಮಾಡಿ ಮಗುವಿನ ಮೈಗೆ ನೀವುತ್ತಾರೆ. ಸ್ವಲ್ಪ ಹೆಚ್ಚು ಬೆಚ್ಚಗಾಗಿರುವ ನೀರನ್ನೇ ಮಗುವಿಗೆ ಮೈ ಮೇಲೆ ತಲೆ ಮೇಲೆ ಹಾಕುತ್ತಾರೆ. ಹೀಗೆ ಮಾಡುವುದರಿಂದ ಮಕ್ಕಳು ಉತ್ತಮವಾಗಿ ಬೆಳೆಯುತ್ತಾರೆ ಎಂಬ ನಂಬಿಕೆ ಇದೆ.

ಪಂಚಾಳ ಸಮುದಾಯದಲ್ಲಿ ಜನನದ ಆಚರಣೆ

ಹೆರಿಗೆಯಾದ ಐದನೇಯ ದಿನದಿಂದ ಹದಿಮೂರನೇಯ ದಿನದವರೆಗೆ ಬಾಣಂತಿಯರಿಗೆ ಮೈಲಿಗೆ ಆಚರಣೆ ಇರುತ್ತದೆ. ಹದಿಮೂರನೇಯ ದಿನಕ್ಕೆ ಗಂಗಾಪೂಜೆ ನೆರವೇರಿಸುತ್ತಾರೆ. ಇವರಿಗೆ ಸ್ವಾಮಿಗಳು ಹಾಗೂ ಇತರೇ ಗುರುಗಳು ಯಾರು ಬರುವುದಿಲ್ಲ. ಹದಿಮೂರನೇಯ ದಿನ ತೊಟ್ಟಿಲು ಪೂಜೆ ನಾಮಕರಣ ನೆರವೇರುತ್ತದೆ. ಗಂಡು ಮಗು ಇದ್ದರೆ ೧೨ ನೇಯ ವರ್ಷಕ್ಕೆ ಮುಂಜಿವೆಯ ಕಾರ್ಯಕ್ರಮ ನಡೆಯುತ್ತದೆ.

ಮುಂಜಿವೆ ಸಂದರ್ಭದಲ್ಲಿ ಮಗುವಿಗೆ ಕೇಶ ಮುಂಡನ ಅರಿಶಿಣ ನೀರನ್ನು ಹಾಕಿ ನೂಲು ಸುತ್ತಿ ವಿಧಿವಿಧಾನಗಳೊಂದಿಗೆ ಮಗುವಿಗೆ ಜನಿವಾರ ಧರಿಸಿ ಗುರುವಿನಿಂದ ಆಶೀವಾದ ಪಡೆಯುತ್ತಾರೆ. ಇನ್ನೀತರು ಗುರುಗಳೆಂದು ಆಯಾ ಪ್ರದೇಶಕ್ಕೆ ನೆಮಿಸಿರುವ ಗುರುವಿನಿಂದ ಮನೆಯಲ್ಲಾಗಲೀ ನಿರ್ದಿಷ್ಟ ದೇವಾಲಯದಲ್ಲಾಗಲೀ ಈ ಕಾರ್ಯ ನೆರವೇರಿಸುತ್ತಾರೆ. ೧೨ ನೇಯ ವರ್ಷದವರೆಗೆ ಮಗು ಅಜ್ಞಾನದಲ್ಲಿದ್ದು ೧೨ ನೇಯ ವರ್ಷದ ನಂತರ ಪ್ರಜ್ಞಾವಂತನಾಗುತ್ತಾನೆ. ಆ ಕಾರಣಕ್ಕಾಗಿ ೧೨ ನೇಯ ವರ್ಷಕ್ಕೆ ಈ ವಿಧಿ ನೆರವೇರಿಸುತ್ತಾರೆ.

ವಾಲ್ಮೀಕಿ ಸಮುದಾಯದ ಜನನ ಸಂದರ್ಭದ ಆಚರಣೆ

ಗ್ರಾಮದಲ್ಲಿ ವಾಲ್ಮೀಕಿ ಸಮುದಾಯದ ಆಚರಣೆಗಳು ಈ ರೀತಿಯಾಗಿವೆ.

ಐದು ದಿನ ಸೂತಕ ಆಚರಿಸುತ್ತಾರೆ. ಐದನೇಯ ದಿವಸಕ್ಕೆ ಸ್ವಾಮಿಗಳು ಲಿಂಗಧಾರಣೆ

ಮಡುತ್ತಾರೆ. ಐದನೇಯ ದಿವಸಕ್ಕೆ ಗಂಗಾದೇವಿಯ ಪೂಜೆ, ಶಟಕವ್ವನ ಪೂಜೆ ಮಾಡುತ್ತಾರೆ. ಬಾಣಂತಿಯರು ಐದು ದಿವಸ ಉಪ್ಪು ಹಾಕದ ಅಡುಗೆಯನ್ನು ಊಟ ಮಾಡುತ್ತಾರೆ. ಕಾಡಿಗೆ ಹಿಡಿಯುತ್ತಾರೆ. ಗಂಡು ಮಗುವಿದ್ದರೆ 12 ದಿವಸ ಹೆಣ್ಣು ಮಗುವಿದ್ದರೆ 13 ದಿವಸಕ್ಕೆ ನಾಮಕರಣ ಮಾಡುತ್ತಾರೆ. ನಾಮಕರಣ ಕಾರ್ಯಕ್ರಮಕ್ಕೆ ಹದಿಮೂರು ದೇಸಿಯೆಂದು ಕರೆಯುತ್ತಾರೆ ಈ ಕಾರ್ಯಕ್ರಮಕ್ಕೆ ಮೊಲೆ ಹಾಲಿರುವ ಹೆಣ್ಣು ಮಕ್ಕಳು ಬಂದು ಪೂಜೆ ಸಲ್ಲಿಸುತ್ತಾರೆ. ತಮ್ಮ ಮಕ್ಕಳಿಗೆ ಸಮುದಾಯದವರು ಅಣ್ಣಪ್ಪ, ಗಂಗವ್ವ, ಗುರಪ್ಪ, ಸಿದ್ದರಾಯ, ಗಂಗಾರಾಮ ಮುಂತಾದ ಹೆಸರುಗಳಿರುವುದು ಉಂಟು.

ನಾಮಕರಣ

ಗ್ರಾಮದ ಮುಸ್ಲಿಂ ಧರ್ಮದವರನ್ನ ಹಾಗೂ ಕೊರವ ಸಮುದಾಯದವರನ್ನು ಹೊರತು ಪಡಿಸಿದರೆ ಇನ್ನುಳಿದವರು ೧೨ ಮತ್ತು ೧೩ ನೇ ದಿನ ಒಳ್ಳೆಯ ಮಹೂರ್ತವನ್ನು ನೋಡಿ ಒಂದೆರೆಡು ದಿನ ಹೆಚ್ಚು ಕಡಿಮೆಯಾದರೂ ನಾಮಕರಣವನ್ನು ಇಟ್ಟುಕೊಳ್ಳುತ್ತಾರೆ. ಕೊರವ ಸಮುದಾಯದಲ್ಲಿ ಐದನೇ ದಿನಕ್ಕೆ ನಾಮಕರಣ ಮಾಡಿದರೆ ಮುಸ್ಲಿಂ ಸಮುದಾಯದವರು ನಲವತ್ತೊಂದನೆ ದಿನಕ್ಕೆ ನಾಮಕರಣ ನೆರವೇರಿಸುತ್ತಾರೆ. ಎಲ್ಲ ಸಮುದಾಯವರು ತಮ್ಮ ತಮ್ಮ ಕುಲದೇವತೆ ಹಾಗೂ ಹಿರಿಯರ ಹೆಸರುಗಳನ್ನು ಕರೆಯುವುದುಂಟು. ಇತ್ತೀಚಿಗೆ ಹೊಸ ಹೊಸ ಆಧುನಿಕ ಹೆಸರುಗಳನ್ನು ಇಡುತ್ತಿರುವುದು ಕಂಡುಬರುತ್ತಿದೆ.

ಗ್ರಾಮದ ಇನ್ನುಳಿದ ಸಮುದಾಯಗಳ ನಾಮಕರಣ ಕಾರ್ಯವನ್ನು ಗಮನಿಸಿದಾಗ ಈ ರೀತಿಯಾಗಿ ಕಂಡು ಬರುತ್ತದೆ. ಹೆಸರಿಡುವ ಕಾರ್ಯಕ್ರಮವನ್ನು ತೊಟ್ಲದಾಗ ಹಾಕುವುದು, 'ನಾಮಕರಣ' ಎಂದೆಲ್ಲಾ ಕರೆಯುವ ಈ ಕಾರ್ಯ ನಡೆಯುವುದು. ಮಗುವಿನ ಜನನವಾದ ೧೨ ಇಲ್ಲವೆ ೧೩ ನೆಯ ದಿನ, ಅದು ಆಯಾ ಜನಪದ ವರ್ಗದವರಲ್ಲಿ ಅವರವರ ಅನುಕೂಲಕ್ಕೆ ತಕ್ಕಂತೆ ದಿನ–ಆಚರಣಾ ರೀತಿಯಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಎಲ್ಲ ಜನಪದ ವರ್ಗಗಳ ಆಚರಣೆಯನ್ನು ಅನುಲಕ್ಷಿಸಿ ಒಂದು ಸಾಮಾನ್ಯವಾದ ವಿವರಣೆಯನ್ನಿಲ್ಲಿ ಮಾಡಲಾಗಿದೆ.

ಅಂದು ಮನೆ–ಮಾರನ್ನು ಮತ್ತೆ ಸಾರಿಸಿ, ಹಾಸಿಗೆ–ಹೊತ್ತಿಗೆಗಳನ್ನು ನೀರಲ್ಲಿ ಹಾಕಿ, ಮನೆ ತುಂಬ ಹೊಳೆಯ ನೀರನ್ನು ಇಲ್ಲವೆ ಗೋಮೂತ್ರವನ್ನು ಸಿಂಪಡಿಸುವರು. ಈ ಕಾರ್ಯನಡೆಯುವುದು ಸಾಯಂಕಾಲವೆ. ಹಿಂದಿನ ತಲೆಮಾರುಗಳಲ್ಲಿ ಐದು ತರದ ಕಾಳು ಕೂಡಿಸಿ ಗುಗ್ಗರಿ ಹಾಕುವ ಪದ್ಧತಿ ಈಗಲೂ ಕಾಣಸಿಗುತ್ತದೆ. ಚುರುಮರಿ, ಪೇಡೆ, ಜಿಲೇಬಿ ತಂದು ಹಂಚಿ ಕಾರ್ಯ ಮಾಡುತ್ತಾರೆ. ಶೆಟವಿ ಪೂಜೆಗೆ ಮಾತ್ರ ಕಡಬು, ಹೋಳಿಗೆ ಎಡೆ ಮಾಡುತ್ತಾರೆ. 'ಶೆಟಗವ್ವ'ನನ್ನು ಮತ್ತೆ ಐದೇಶಿಯಲ್ಲಿಯಂತೆಯೇ ಪೂಜಿಸುವರು. ಈ ಬಾರಿ ಅದರ ಮುಂದೆ ತುಂಬಿದ ತಂಬಿಗೆಯನ್ನಿಡುತ್ತಾರೆ. ಓಣಿಯ ಹೆಂಗಸರೆಲ್ಲ ಬಂದು ತರುವಾಯ ಬಾಣತಿ ಹಾಗೂ ಮಗುವಿಗೆ ಸ್ನಾನ ಮಾಡಿಸಿ ಕೂಸಿಗೆ ಹೊಸ ಬಟ್ಟೆಯನ್ನುಡಿಸಿ, ತೊಟ್ಟಿಲು ಕಟ್ಟು ಪದ್ಧತಿ ಇದ್ದರೆ ತೊಟ್ಟಿಲಲ್ಲಿ, ಇಲ್ಲಿದಿದ್ದರೆ ತಾಯಿಯ ತೊಡೆಯ ಮೇಲೆ ಹಾಕಿ ಸೋದರತ್ತೆಯಾಗುವವಳ ಕೈಯಲ್ಲಿ ಕಂಚಿನ 'ಪರಾತ' ಅಥವಾ 'ಗಂಗಾಳ'ನ್ನು ಹಿಡಿದು ಮೊದಲು ಮನೆ ಇಲ್ಲವೆ ಕುಲದೇವತೆಯ ಹೆಸರನ್ನು ಕರೆದು, ನಂತರ ತಮಗೆ ಇಷ್ಟವಾದ ಹೆಸರನ್ನು ಇಡುತ್ತಾರೆ. ಹೆಸರಿಡುತ್ತಿರುವ ಸೋದರತ್ತೆಯ ಡುಬ್ಬ ಬಾರಿಸಲೆಂದೇ ಅನೇಕ ಸೊಸೆಯಂದಿರ ಕೈಗಳು ಕಾದಿರುತ್ತವೆ. ಹೆಸರಿಡುವಷ್ಟರಲ್ಲಿ ಆಕೆಯ ಡುಬ್ಬ ಕೆಂಪಗಾದರೆ

ಆಶ್ಚರ್ಯವೇನಿಲ್ಲ. ಇದಕ್ಕೂ ಮುಂಚೆ ಜೋಗುಳ ಹಾಡಿನ ಸರದಿ ನಡದೇ ಇರುತ್ತದೆ. ಇದೇ ಸಂದರ್ಭದಲ್ಲಿ ಐದುಜನ ಮುತ್ತೈದೆಯರು ಸೇರಿ ಶೆಟವಿ ಮುಂದಿರುವ ತಂಬಿಗೆಯನ್ನೆತ್ತಿ ಬಾಣತಿಯ ತಲೆಯ ಮೇಲೊಮ್ಮೆ ಕೆಳಗೊಮ್ಮೆ ಇಡುವಾಗ ಒಂದ ಹೆಣ್ಣ, ಒಂದ ಗಂಡ ಹೇಳಿ, ಸಾಕ ಬೇಕವ್ವ ಎನಲು, ಬಾಣತಿ ಸಾಕೆಂದರೆ ಬೇಕು ಎನ್ನು, ಬೇಕೆಂದರೆ ಸಾಕು ಎನ್ನು ಎಂದು ಹೇಳಿ, ಹೀಗೆಯೇ ಐದು ಸಲ ಮಾಡುವರು. ಇದಾದ ಮೇಲೆ ಬಂದವರಿಗೆಲ್ಲ ಗುಗ್ಗರಿ ಇಲ್ಲವೆ ತಂದ ಸಿಹಿ ತಿಂಡಿ ತಿಸಿಸುಗಳನ್ನು ಹಂಚುತ್ತಾರೆ. ಎಲ್ಲರೂ ಮನೆಗೆ ಹೋಗುವಾಗ ಮದುವೆಯಾಗದೇ ಇರುವ ಕೆಲವು ಹೆಣ್ಣುಮಕ್ಕಳು ಮುತ್ತೈದೆಯರನ್ನು ಗಂಡನ ಹೆಸರು ಹೇಳುವಂತೆ ಬಾಗಿಲಲ್ಲಿ ತಡೆ ಹಿಡಿದು ಹೆಸರು ಹೇಳಿಸಿಕೊಂಡೇ ಬಿಡುತ್ತಾರೆ.

ಜಡಿ ತೆಗೆಯುವುದು

ಕೂಸಿನ ಅಪ್ಪ-ಅವ್ವ, ಇಲ್ಲವೆ ಆಯಿ-ಮುತ್ಯಾ ತಾವು ಬೇಡಿಕೊಂಡ ಕುಲ ದೇವರು ಅಥವಾ ಮನೆದೇವರು ಇದ್ದಲ್ಲಿಗೆ ಜಾತ್ರಾ ಸಮಯದಲ್ಲಿ ಹೋಗಿ ಅಲ್ಲಿ ಕೂಸಿನ ಕೂದಲನ್ನು ಮೊದಲ ಸಲ ಕತ್ತರಿಸುವುದಕ್ಕೆ 'ಜಡಿ' ಇಲ್ಲವೆ 'ಜವಳ' ತೆಗೆಯುವುದು ಎನ್ನುತ್ತಾರೆ. ಅನುಕೂಲಸ್ಥರು ತುಂಬಾ ವಿಜೃಂಭಣೆಯಿಂದ ಈ ಕಾರ್ಯವನ್ನು ಮಾಡಿದರೆ, ಕಡುಬಡವರು ತಾವಿದ್ದಲ್ಲಿಯೇ ಆ ದೇವರ ಹೆಸರಿನಲ್ಲಿ ವಾರದ ದಿನ ಜಡಿ ತೆಗೆಯುತ್ತಾರೆ. ಹುಟ್ಟಿದ ಮಗು ಹೆಣ್ಣಾಗಿದ್ದರೆ ೨,೫,೭,೯,೧೦ ನೇ ತಿಂಗಳಲ್ಲಿ, ಗಂಡಾಗಿದ್ದರೆ, ೧,೪,೬,೧೦,೧೨ ನೇ ತಿಂಗಳಲ್ಲಿ ಜಡಿ ತೆಗೆದರೆ, ಇನ್ನೂ ಕೆಲವರು ೧,೨,೩,೫ ವರ್ಷಗಳ ಒಳಗೆ ತಮಗೆ ಅನುಕೂಲವಾದಾಗ ಜಡಿ ತೆಗೆಯುತ್ತಾರೆ. ಈ ಕಾರಣವನ್ನು ಮಗುವಿನ ಸೋದರ ಮಾವನೇ ನಡೆಯಿಸಿಕೊಡಬೇಕು. ಎಲೆ, ಅಡಿಕೆ, ಅಕ್ಕಿ, ಉತ್ತತ್ತಿ, ಅರಿಷಣ, ಕೊಬರಿ ಮುಂತಾದವುಗಳಿಂದ ದೇವರ ಉಡಿ ತುಂಬಿ ಸೋದರ ಮಾವನು ಮಗುವಿನ ತಲೆಗೆ ಎಲೆಗತ್ತರಿ ಮುಟ್ಟಿಸಿ ಬಿಟ್ಟರೆ ಜಡಿ ತೆಗೆದಂತೆ ಕೆಲವರು ಎಲ್ಲ ತಲೆಗೂದಲನ್ನು ಅಲ್ಲಿಯೇ ಕತ್ತರಿಸಿದರೆ, ಕೆಲವರೂ ಊರಿಗೆ ಬಂದು ಕೂದಲನ್ನು ತೆಗೆಯಿಸುತ್ತಾರೆ. ನಂತರ ಕೂಸಿಗೆ ಹೊಸ ಬಟ್ಟೆಯನ್ನುಡಿಸಿ ತಾಯಿಯ ತೊಡೆಯ ಮೇಲೆ ಹಾಕುತ್ತಾರೆ. ತಂದೆ-ತಾಯಿ ಅಥವಾ ಇನ್ನಾರಾದರೂ ಬೇಡಿಕೊಂಡಿದ್ದರೆ, ಅವರು ದಂಡವಾತ ಹಾಕಿ ಹೊಸ ಬಟ್ಟೆಯನ್ನುಟ್ಟಿರುತ್ತಾರೆ. ಬೀಗರಾಗುವವರು ಅಯೇರಿ ಮಾಡಿದ ಬಳಿಕ ಜಡಿ ತೆಗೆದ ಸೋದರ ಮಾವನಿಗೂ ಆಯೇರಿ ಮಾಡುತ್ತಾರೆ. ಗ್ರಾಮದಲ್ಲಿ ಕೆಲವರು ಇಂಚಗೇರಿ ಮಠದ ಮಹಾರಾಜರಿಂದ ಹಾಗೂ ಸ್ವಾಮಿಗಳಿಂದ ಜಡೆ ತೆಗೆಯಿಸುವ ಪದ್ಧತಿವುಂಟು. ಆ ಮೇಲೆ ಎಲ್ಲರೂ ಸಾಮೂಹಿಕವಾಗಿ ಊಟ ಮಾಡಿ ತಂದ ಎತ್ತಿನ ಗಾಡಿ, ಟ್ರ್ಯಾಕ್ಟರ್, ಟ್ರಕ್ ಮುಂತಾದ ವಾಹನಗಳ ಮೂಲಕ ಊರಿಗೆ ಬರುತ್ತಾರೆ.

ಋತುಶಾಂತಿ

ಹೆಣ್ಣು ಮಕ್ಕಳು ಮೊದಲ ಸಲ ಮುಟ್ಟಾಗುವದಕ್ಕೆ ಋತುಮತಿಯಾದಳು, ಮೈನೆರೆದಳು, ದೊಡ್ಡಕ್ಯಾದಳು ಎಂದೆಲ್ಲಾ ಹೆಳುವುದು ರೂಢಿ. ಇದು ೧೨ ರಿಂದ ೧೪ ವರ್ಷದಲ್ಲಿ ನಡೆಯುವ ಕ್ರಿಯೆ. ಋತುಮತಿಯಾದುದಕ್ಕೆ ಮಾಡುವ ಶಾಂತಿಯೇ ಋತುಶಾಂತಿ. ಅನಂತರ ಹೆಣ್ಣು ಸಂತಾನಕ್ಕೆ ಯೋಗ್ಯಳಾಗುತ್ತಾಳೆ. ಮಗಳ ಮುಖ ಸಪ್ಪಗಾಗಿ ಉಟ್ಟ ಲಂಗಕ್ಕೆ ರಕ್ತ ಹತ್ತಿದ್ದು ಕಂಡುಬಂದರೆ, ಮನೆಯ ಹಿರಿಯರು ಮಗಳು ದೊಡ್ಡವಳಾದಳು ಎಂದು ತಿಳಿದು ಅವಳನ್ನು ಮನೆಯ ಮೂಲೆಯೊಂದರಲ್ಲಿ ಕೂಡಿಸಿ. ಓಣಿಯ ಹಾಗೂ ಸಂಬಂಧಿಕರುಗಳಿಗೆ

ಹೇಳಿ ಕಾರಣ ಮಾಡುವರು. ೭-೯-೧೧-೧೭-೨೧ ಹೀಗೆ ಪಂಚಾಂಗಕ್ಕೆ ಪೂರಕವಾಗಿ ಅಷ್ಟು ದಿನಗಳವರೆಗೆ ಕೂಡಿಸಿ ಕೊನೆಯ ದಿನ ಎಬ್ಬಿಸುತ್ತಾರೆ. ಪ್ರತಿದಿನ ಓಣಿಯವರೆಲ್ಲ ಎಡೆ ಕಳಿಸುತ್ತಾರೆ. ಮೈನೆರೆದ ಹುಡುಗಿಗೆ ಮೊದಲೆ ಮದುವೆಯಾಗಿದ್ದರೆ ಗಂಡನನ್ನು ಕರೆಯಿಸಿ ಜೋಡಿ ಕೂಡಿಸಿ ಆಯೇರಿ ಮಾಡಿ, ದಂಡಿಕಟ್ಟಿ ಆರತಿ ಬೆಳಗುತ್ತಾರೆ. ಬಂದವರಿಗೆಲ್ಲ ಸಿಹಿ ಊಟದ ವ್ಯವಸ್ಥೆ ಇರುತ್ತದೆ. ಈ ಸಂದರ್ಭದಲ್ಲಿ ಹಾಡುವ ಹಾಡುಗಳನ್ನು 'ಸೋಬಾನ ಹಾಡು' ಗಳೆಂದೇ ಕರೆಯುತ್ತಾರೆ. ಕೆಲವು ವರ್ಷಗಳ ಹಿಂದೆ ಮಗಳು ದೊಡ್ಡವಳಾದರೆ ಲೌಡಸ್ಪೀಕರ ಹಚ್ಚಿ ಅತ್ಯಂತ ವಿಜೃಂಭಣೆಯಿಂದ ಕಾರಣ ಮಾಡಿ ಊರಿಗೆ ಊಟ ಹಾಕಿಸಿ ಮಾಡಲಾಗುತ್ತಿತ್ತು. ಇಂದು ಪಟ್ಟಣದ ಸಂಸ್ಕೃತಿಯ ಪ್ರಭಾವಕ್ಕೆ ನಮ್ಮೂರು ಕೂಡಾ ಒಳಗಾಗುತ್ತಿರುವುದರಿಂದ ಹುಡುಗಿ ಮೈನೆರೆದ ವಿಷಯ ಮನೆಯವರಿಗಷ್ಟು ಬಿಟ್ಟರೆ ಮಗ್ಗಲ ಮನೆ-ಓಣಿ ಕೇರಿಯವರಿಗೂ ಗೊತ್ತಾಗದೇ ಹೋಗುತ್ತದೆ. ಇದು ನಮ್ಮ ಗ್ರಾಮೀಣ ಸಂಸ್ಕೃತಿಯ ಹಿಂಬೀಳಿಕೆಯನ್ನೆಬಹುದು.

ವಿಶ್ವಕರ್ಮ ಸಮುದಾಯದಲ್ಲಿ ಮೈನೆರೆದ ಸಂದರ್ಭ ಆಚರಣೆ

ಗ್ರಾಮದ ಇತರ ಸಮುದಾಯದಲ್ಲಿರುವಂತೆ ವಿಶ್ವಕರ್ಮ ಜನಾಂಗದಲ್ಲಿಯೂ ಕೂಡ ಆಚರಣೆಗಳು ಕಂಡುಬರುತ್ತವೆ. ಐದು ದಿವಸ ಅಥವಾ ಏಳು ದಿವಸ ಮೈಲಿಗೆಯನ್ನು ಆಚರಿಸುತ್ತಾರೆ. ಶೋಭನ ಕಾರ್ಯವನ್ನು ನಡೆಸುತ್ತಾರೆ. ಏಳು ದಿವಸ ಮೈನೆರೆದ ಸ್ತ್ರೀಗೆ ಸುಂದರವಾದ ಸೀರೆಗಳಿಂದ ಮಂಟಪವನ್ನು ನಿರ್ಮಿಸಿ ವಿಶೇಷವಾಗಿ ಶೃಂಗರಿಸಿ ಒಳಗಡೆ ಕೂಡಿಸಿ ಸೋಬಾನೆ ಹಾಡುಗಳನ್ನು ಹೇಳುತ್ತಾರೆ. ಕೊನೆಯ ದಿನ ವಿಶೇಷ ಅಡುಗೆ ತಯಾರಿಸಿ ಎಡೆಕೊಟ್ಟ ಜನರಿಗೆ ಊಟಕ್ಕೆ ಕರೆಯುವ ಪದ್ಧತಿಯಿದೆ.

ವಾಲ್ಮೀಕಿ ಸಮುದಾಯದಲ್ಲಿ ಮೈನೆರೆದ ಸಂದರ್ಭದ ಆಚರಣೆ

ಐದು ದಿವಸ ಮೈನೆರೆದ ಹೆಣ್ಣಿಗೆ ಬಿಸಿನೀರಿನಲ್ಲಿ ಸ್ನಾನ ಮಾಡಿಸಿ ಅರಿಶಿಣ ಹಚ್ಚುತ್ತಾರೆ ಆರತಿ ಮಾಡುತ್ತಾರೆ. ಐದನೇಯ ದಿನಕ್ಕೆ ಹೊಸ ಬಟ್ಟೆ, ಹಸಿರು ಬಳೆ ಹಾಕಿ ಹೂವಿನ ದಂಡೆ ಕಟ್ಟಿ ಆರತಿ ಮಾಡುತ್ತಾರೆ ಮದುವೆಯಾದ ಮೇಲೆ ಅವರವರ ಅನುಕೂಲತಕ್ಕಂತೆ ಶೋಭನ ಕಾರ್ಯ ನೆರವೆರಿಸುತ್ತಾರೆ. ಈ ಸಂದರ್ಭದಲ್ಲಿ ಸ್ವಾಮಿಗಳ ಪಾದ ತೊಳೆದು ಪೂಜೆ ಮಾಡುತ್ತಾರೆ. ಪಾದ ತೊಳೆದ ನೀರನ್ನು ಮನೆಯಲ್ಲಿ ಸಿಂಪಡಿಸುವ ಪದ್ಧತಿಯಿದೆ.

೭.೧.೩ ಮದುವೆ

ಮದುವೆಯ ಕಲ್ಪನೆಯಲ್ಲಿ, ವ್ಯವಸ್ಥೆಯಾಗಲಿ ಇರದ ಜನಸಮೂಹವೇ ಬಹುಶಃ ಪ್ರಪಂಚದಲ್ಲಿ ಇರಲಾರದು. ಮನುಷ್ಯನು ಭೂಮಿಯಲ್ಲಿ ಕಾಣಿಸಿ ಕೊಳ್ಳುವ ಮೊದಲೇ ಕೆಲವು ವಾನರ ವರ್ಗಗಳಲ್ಲಿ, ಅದಕ್ಕೂ ಮೊದಲು ಕೆಲವು ಪ್ರಾಣಿಗಳಲ್ಲಿ ಮತ್ತು ಪಕ್ಷಿಗಳಲ್ಲಿ, ಇಂತಹ ಒಂದು ವ್ಯವಸ್ಥೆಯನ್ನು ಗುರುತಿಸುವುದು ಸಾಧ್ಯವೆಂದು ಸಮಾಜಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಒಂದು ಗಂಡು ಪ್ರಾಣಿಯೋ, ಪಕ್ಷಿಯೋ ಯಾವುದಾದರೊಂದು ಅವಧಿಯಲ್ಲಿ ಹೆಣ್ಣಿನೊಂದಿಗೆ ಕೂಡಿಕೊಳ್ಳುವುದು, ಕೂಡಿಕೊಂಡ ಮೇಲೆ ಜನಿಸಿದ ಮರಿಗಳ ಜವಾಬ್ದಾರಿಯನ್ನು ಒಟ್ಟಿಗೆ ನಿಭಾಯಿಸುವುದು, ಗಂಡು ಮತ್ತು ಹೆಣ್ಣು ತಮ್ಮ ಮರಿಗಳೊಂದಿಗೆ ಒಟ್ಟು ಸೇರಿ ಒಂದು ಕುಟುಂಬದಂತೆ ಜೀವನ ಸಾಗಿಸುವುದು-ಇದು ಪ್ರಕೃತಿಸಹಜವಾದ ಪ್ರಕ್ರಿಯೆ. ಆದುದರಿಂದ

ಇದು ಮಾನವ ಸಮಾಜಕ್ಕೆ ಮಾತ್ರ ಸೀಮಿತವಾದುದೆಂದು ಹೇಳಲಾಗುವುದಿಲ್ಲ. ಹೀಗೆ ಒಟ್ಟಿಗೆ ಕೂಡುವ, ಅನಂತರ ಕೂಡಿ ಬಾಳುವ, ಕಲ್ಪನೆ ಮನುಷ್ಯನಿಗಿಂತ ಹಳೆಯದು. ಆದರೆ ಮನುಷ್ಯನಲ್ಲಿ ದೇಶ ಕಾಲ ಪರಿಸ್ಥಿತಿಗಳಿಗನುಗುಣವಾಗಿ ಬೆಳೆದು ಬಂದ ಒಂದು ಅಚ್ಚುಕಟ್ಟಾದ ವ್ಯವಸ್ಥೆಯಿದೆಯೆಂದು ಹೇಳಬಹುದು.

ಪ್ರತಿಯೊಬ್ಬ ವ್ಯಕ್ತಿಗೂ ಸಾಮಾನ್ಯವಾಗಿ ಎರಡು ಕುಟುಂಬಗಳ ನೆಲೆಯಿರುತ್ತದೆ. ಹುಟ್ಟಿದ ಕುಟುಂಬ ಒಂದಾದರೆ ಕಟ್ಟಿಕೊಂಡ ಕುಟುಂಬ ಇನ್ನೊಂದು. ಹುಟ್ಟಿದ ಕುಟುಂಬದ ಆಯ್ಕೆ ಯಾರಿಗೂ ಸಾಧ್ಯವಿಲ್ಲ. ಆದರೆ ಕಟ್ಟಿಕೊಳ್ಳುವ ಕುಟುಂಬದ ಆಯ್ಕೆ ಸಾಧ್ಯವಿರುವ ಸಂಗತಿಯಾಗಿದೆ. ಹುಟ್ಟಿನಿಂದ ಮೊದಲ ಕುಟುಂಬ ನಿರ್ಧರಿತವಾದರೆ ಮದುವೆಯಿಂದ ಎರಡನೆಯ ಕುಟುಂಬ ಮೂಡಿ ಬರುತ್ತದೆ. ವ್ಯಕ್ತಿ ಬೆಳೆದ ಮೇಲೆ ತನ್ನದೇ ಆಯ್ಕೆಯಿಂದಲೋ, ಹಿರಿಯರ ಆಯ್ಕೆಯಿಂದಲೋ, ಒತ್ತಾಯದಿಂದಲೋ ಮದುವೆಯಾದ ಬಳಿಕ ಹುಟ್ಟಿದ ಕುಟುಂಬ ಅಲ್ಪ ಹಿಂದಕ್ಕೆ ಸರಿದು ಕಟ್ಟಿಕೊಂಡ ಕುಟುಂಬ ಸ್ವಲ್ಪ ಮುಂದಕ್ಕೆ ಬರುತ್ತದೆ. ಈ ಪ್ರಕ್ರಿಯೆ ಮಿತಿಯಲ್ಲಿದ್ದರೆ ಸಹಜ ಹಾಗೂ ಸಹ್ಯ; ಅತಿಯಾದರೆ ಮಾತ್ರ ಅಸಹ್ಯ.

"ಸಾಮಾಜಿಕ ಮನ್ನಣೆ ಪಡೆದ ಗಂಡು-ಹೆಣ್ಣುಗಳ ಸಂಯೋಗವನ್ನು ವಿವಾಹ ಎನ್ನುತ್ತಾರೆ. ವಿವಾಹದ ಮೂಲಕ ಗಂಡು-ಹೆಣ್ಣುಗಳು ಪತಿ-ಪತ್ನಿಯರಾಗಿ ಕುಟುಂಬವನ್ನು ಸ್ಥಾಪಿಸುವರು. ಹೀಗೆ ವಿವಾಹ ಪದ್ಧತಿಯು ಕುಟುಂಬ ಸಂಸ್ಥೆಗೆ ತಳಹದಿಯಾಗುತ್ತದೆ."

ವ್ಯಕ್ತಿಗಳ ದೃಷ್ಟಿಯಿಂದ ವಿವಾಹ ಅತ್ಯಗತ್ಯದ ವಿಧಿಯೆಂದು ತೋರದಿರಬಹುದಾದರೂ ಸಾಮಾಜಿಕ ದೃಷ್ಟಿಯಿಂದ ಅದರ ಅಗತ್ಯ, ಮಹತ್ವ ಹೆಚ್ಚು. ಜಗತ್ತಿನ ಎಲ್ಲ ಸಮಾಜಗಳಲ್ಲೂ ವಿವಾಹವು ಧಾರ್ಮಿಕ ವಿಧಿ-ವಿಧಾನಗಳೊಂದಿಗೆ ಸಾಮಾಜಿಕವಾಗಿ ಆಚರಿಸಲ್ಪಡುವ ಕಾರ್ಯವಾಗಿ ತನ್ನ ಸ್ಥಾನವನ್ನು ಸಾಂಸ್ಥಿಕವಾಗಿ ಸ್ಥಿರಪಡಿಸಿಕೊಂಡಿದೆ. ಒಂದು ಗಂಡು ಒಂದು ಹೆಣ್ಣಿನೊಂದಿಗೆ ಕೂಡಿಕೊಂಡು ಹೊಸ ಕುಟುಂಬದ ನಿರ್ಮಾಣ ಮಾಡುತ್ತಿರುವಾಗ ಅದಕ್ಕೆ ಸಮಾಜದ ಸಮ್ಮತಿ, ಶುಭಾಕಾಂಕ್ಷೆ ಮತ್ತು ಆಶೀರ್ವಾದಗಳು ಬೇಕೇ ಬೇಕು. ಸಮಾಜದ ಒಪ್ಪಿಗೆ ಇಲ್ಲದಿದ್ದರೆ ಕುಟುಂಬಕ್ಕೆ ಸ್ಥಾನಮಾನ ದೊರೆಯದು. ಹೀಗೆ ವಿವಾಹದಲ್ಲಿ ಸಾಮಾಜಿಕ ಮನ್ನಣೆಯೂ ಮಹತ್ತ್ವದ ಪಾತ್ರವಹಿಸುತ್ತದೆ.

ವೀರಶೈವ ಲಿಂಗಾಯತರಲ್ಲಿ ವಿವಾಹ ಪದ್ಧತಿ

ವೀರಶೈವ ಲಿಂಗಾಯತರು ಕರ್ನಾಟಕದಲ್ಲಿ ಒಂದು ಬಹುಸಂಖ್ಯಾತ ಜಾತಿ, ವೈದಿಕ ಸಂಪ್ರದಾಯದಿಂದ ಸಿಡಿದು ಬಂದರೂ ಅವರ ವಿವಾಹ ಪದ್ಧತಿಯ ಅನೇಕ ಆಚರಣೆಗಳು ಬ್ರಾಹ್ಮ ವಿವಾಹವನ್ನು ಹೋಲುತ್ತವೆ.

ವೀರಶೈವರಲ್ಲಿ ಹೋಮಾಗ್ನಿ ಇಲ್ಲ. ಅದರ ಬದಲು ಪಂಚಕಲಶಗಳನ್ನಿಟ್ಟು ವಿವಾಹ ವಿಧಿಗಳನ್ನು ಪೂರೈಸುತ್ತಾರೆ. ಸಪ್ತಪದಿಯ ಪದ್ಧತಿಯೂ ಇವರಲ್ಲಿಲ್ಲ. ಇವರ ವಿವಾಹದಲ್ಲಿ ಜಂಗಮ ಅಯ್ಯನವರು ಪೌರೋಹಿತ್ಯ ಮಾಡುತ್ತಾರೆ.

ಹಿಂದೆ ವೀರಶೈವರ ವಿವಾಹ ಐದು ದಿನಗಳ ಆಚರಣೆಯಾಗಿತ್ತು. ಬರಬರುತ್ತ ಅದು ಮೂರು ದಿನಗಳಿಗಿಳಿದು ಈಗ ಒಂದು ದಿನದಲ್ಲೂ ಮುಕ್ತಾಯಗೊಳ್ಳುತ್ತದೆ.

ವೀರಶೈವರಲ್ಲಿ ಹೆಚ್ಚಾಗಿ ಸಮಾಜದ ಹಿರಿಯರೇ ಗಂಡು ಹೆಣ್ಣುಗಳನ್ನು ನಿಶ್ಚಯಿಸುತ್ತಾರೆ. ಇತ್ತೀಚೆಗೆ ಇತರ ಜಾತಿಗಳಲ್ಲಿರುವಂತೆ ವೀರಶೈವರಲ್ಲೂ ಯುವಕ-ಯುವತಿಯರಿಗೆ ಈ ವಿಚಾರದಲ್ಲಿ ಅಧಿಕ ಸ್ವಾತಂತ್ರ್ಯ ದೊರೆಯಲಾರಂಭಿಸಿದೆ. ತುಲಸಿ ವಿವಾಹದಿಂದ ಕಾರಹುಣ್ಣಿಮೆಯ ಒಳಗಾಗಿ ಅವರು ವಿವಾಹ ನಡೆಸುತ್ತಾರೆ. ಕಾರಹುಣ್ಣಿಮೆಯ ನಂತರ ಲಗ್ನ ಆಗುವುದಿಲ್ಲ. ಮದುವೆಯಾಗುವ ಹುಡುಗನ ಮನೆಯವರು ಹುಡುಗಿಯನ್ನು ಹುಡುಕುತ್ತಾರೆ. ಒಮ್ಮೊಮ್ಮೆ ಸಂಬಂಧಿಕರಲ್ಲಿಯೇ ಸಣ್ಣವರಿರುವಾಗಲೇ ಈ ವರ-ವಧು ನಿಶ್ಚಯ ಆಗಿರುತ್ತದೆ. ಮದುವೆಯ ಪೂರ್ವಯೋಜನೆ ವರನ ಮನೆಯಲ್ಲಿ ನಡೆಯುತ್ತದೆ. ಹಿರಿಯರ ಸಮ್ಮುಖದಲ್ಲಿ ಮಠದ ಅಯ್ಯನವರಿಂದ ಅಕ್ಕಿಕಾಳಿನ ದಿನ, ಗುಗ್ಗುಳದ ದಿನ ನಿಶ್ಚಯಿಸಲ್ಪಡುತ್ತವೆ.

ಅಲಂಕಾರ ಮಾಡಿದ ಕಳ್ಳಿಗಂಬ (ಹಾಲುಗಂಬ) ನೆಟ್ಟು ಅದರ ಸುತ್ತ ಮದುವೆ ಮಂಟಪ ನಿಲ್ಲಿಸುತ್ತಾರೆ. ಹಂದರ ಹೊದಿಕೆಗೆ ಹಸುರು ತಪ್ಪಲು ಅವಶ್ಯ ಹಾಕಬೇಕು. ಅನಂತರ ಮಾವಿನತಳಿರು ಕಟ್ಟಲೇಬೇಕು.

ಮದಮಗನ ತಲೆ ಕ್ಷೌರಮಾಡಿಸಿ, ಸ್ನಾನ ಮಾಡಿಸಿ ಲಗ್ನ ನಡೆಯುವ ಮಠ ಅಥವಾ ಛತ್ರಕ್ಕೆ ದಿಬ್ಬಣ ತರುತ್ತಾರೆ. ಹೆಚ್ಚಾಗಿ ಗಂಡನ ಮನೆಯಲ್ಲಿ, ಶಿವಾಲಯಗಳಲ್ಲಿ ಅಥವಾ ಮಠಗಳಲ್ಲಿ ವಿವಾಹ ನಡೆಯುತ್ತದೆ. ಒಂದೇ ದಿನದಲ್ಲಿ ನಡೆಯುವ ವಿವಾಹದಲ್ಲೂ ಎಲ್ಲ ರೀತಿಯ ಆಚರಣೆಗಳು ನಡೆಯಲೇಬೇಕು.

ಗಂಡನ ಪಂಗಡದವರ ಕಡೆ ಹೆಣ್ಣಿನ ಪಂಗಡದವರು ಮದುಮಗಳ ಮುಂದಾಳುತನದಲ್ಲಿ ಬರುತ್ತಾರೆ. ಇದಕ್ಕೆ 'ನಿಬ್ಬಣ' ಎನ್ನುತ್ತಾರೆ. ಹಳ್ಳಿಯ ಅಗಸಿಯಲ್ಲಿ ಹಾಗೂ ಗ್ರಾಮದ ಪ್ರಮುಖ ಸ್ಥಳಗಳಲ್ಲಿ ನಿಬ್ಬಣವನ್ನು ನಿಲ್ಲಿಸಿ ಮದುವೆಯ ಸ್ಥಳಕ್ಕೆ ಕರೆದು ತರುತ್ತಾರೆ.

ಮದುಮಗಳು ಗಂಡನ ಮನೆಯ ಬಾಗಿಲಿಗೆ ಬಂದಾಗ ಆಹಾರದ ಉಂಡಿಗಳಿಂದ ನಿವಾಳಿಸಿ ಒಗೆಯುವ ಪರಂಪರೆಯಿದೆ. ಅನಂತರ ಆಕೆ ಬಲಗಾಲು ಮೊದಲಿಟ್ಟು ಬಂದು ಮನೆಯ ಜಗಲಿಗೆ ನಮಸ್ಕರಿಸುತ್ತಾಳೆ.

ಗಂಡನ ಮನೆಯವರು ಹಂದರದಲ್ಲಿ ಹಾಲುಗಂಬ (ಇಂಗಳಗಂಬ) ತರುವುದು, ಕುಂಬಾರನ ಮನೆಯಿಂದ ಐರಾಣಿ ತರುವುದು, ಪತ್ತಾರನ ಮನೆಯಿಂದ ಮಂಗಳಸೂತ್ರ ತರುವುದು, ಹೂಗಾರನ ಮನೆಯಿಂದ ಬಾಸಿಂಗ ತರುವುದು ಇತ್ಯಾದಿ ಕಾರ್ಯಕ್ರಮಗಳಿಗೆಲ್ಲ ಊದಿಸುತ್ತ, ಬಾರಿಸುತ್ತ ಹೋಗಿ ಬರುತ್ತಾರೆ. ಸುಮಂಗಲೆಯರು ಪ್ರತಿ ಪ್ರಸಂಗದಲ್ಲೂ ಹಾಡುತ್ತಿರುತ್ತಾರೆ. ಇದಿರುಗೊಳ್ಳುವ ಹಾಡು, ಐರಣಿ ಹಾಡು, ಬಾಸಿಂಗ ತರುವ ಹಾಡು – ಇತ್ಯಾದಿ ಹಾಡುಗಳನ್ನು ಹಾಡುತ್ತಾರೆ. ಹಿಂದೆ ವೀರಶೈವರಲ್ಲಿ ವರದಕ್ಷಿಣೆ ಇರಲಿಲ್ಲ. ಗಂಡಿನವರೇ ಹೆಣ್ಣಿನವರಿಗೆ 'ತೆರ' ಕೊಡುವ ಪದ್ಧತಿಯಿತ್ತು. ಇತ್ತೀಚೆಗೆ ಗ್ರಾಮದ ಎಲ್ಲ ಸಮುದಾಯಗಳಲ್ಲೂ ಬೂದಿ ಮುಚ್ಚಿದ ಕೆಂಡದಂತೆ ವರದಕ್ಷಿಣೆ ಹಣದ ರೂಪದಲ್ಲಿ, ವಸ್ತುಗಳ ರೂಪದಲ್ಲಿ ಕೊಡುಕೊಳ್ಳುವುದು ನಡೆದಿದೆ.

ವೀರಶೈವರಲ್ಲಿ ಗುಗ್ಗಳ ತೆಗೆಯುವುದು, ಗುಗ್ಗಳ ಹೊರುವುದು. ಗುಗ್ಗಳ ಮೆರವಣಿಗೆ ಪ್ರಮುಖ ವೈಶಿಷ್ಟ್ಯಗಳಾಗಿವೆ. ಅಕ್ಕಿಕಾಳು ಗಂಡು-ಹೆಣ್ಣಿಗೆ ಹಾಕಿ ಮಂಗಳ ಗೀತೆ ಹಾಡುವ ಪೂರ್ವದಲ್ಲೇ ಗುಗ್ಗಳದ ಕಾರ್ಯ ಪೂರ್ತಿಯಾಗಬೇಕು.

ಕೊಟ್ಟಲಗಿ ಗ್ರಾಮದಲ್ಲಿ ಶ್ರೀಶೈಲ ಮಲ್ಲಯ್ಯ, ಗ್ರಾಮದೇವತೆ ಶ್ರೀ ಸಿದ್ಧೇಶ್ವರ, ಯಡೂರ ಶ್ರೀ ವೀರಭದ್ರ, ಶ್ರೀ ಖಿಳೇಗಾಂವ ಬಸವಣ್ಣ ಮುಂತಾದ ದೇವತೆಗಳು ಗ್ರಾಮದ ವೀರಶೈವರಿಗೆ ಮನೆ ದೇವತೆಗಳಾಗಿರುವುದರಿಂದ ಇವರ ಹೆಸರಿನಿಂದ ಗುಗ್ಗಳವನ್ನು ಪೂಜಿಸುತ್ತಾರೆ. ಗುಗ್ಗಳದ ಪ್ರಮುಖ ಆರಾಧಕ ಪುರವಂತ ಗುಗ್ಗಳವನ್ನು ಅಗ್ನಿಯಿಂದ ಹೊತ್ತಿಸಿ ವೀರಾವೇಶದಿಂದ ಶಿವನ ಅವತಾರವನ್ನು, ವೀರೇಶನ ಹುಟ್ಟನ್ನು ವಿವರಿಸುತ್ತಾರೆ. ಗ್ರಾಮದಲ್ಲಿ ಪಂಚಾಳ ಸಮುದಾಯದವರು ಪುರವಂತಿಕೆ ಕಾರ್ಯ ಮಾಡುತ್ತಾರೆ. ಪುರವಂತಿಕೆ ಕಾರ್ಯವನ್ನು ಹಣಮಂತ ಮಹಾದೇವ ಕಂಬಾರ ಹಾಗೂ ಈರಪ್ಪ ಬಡಿಗೇರ ನೆರವೇರಿಸುತ್ತಾರೆ.

ವೀರಭದ್ರನು ಅವತರಿಸಿದ್ದು ಶಿವನ ಕಣ್ಣಿನಿಂದ. ದಕ್ಷಬ್ರಹ್ಮನ ವಧೆಯಾದುದು ವೀರಭದ್ರನಿಂದ. ದಕ್ಷಬ್ರಹ್ಮನು ಯಜ್ಞಮಾಡಿದಾಗ ಶಿವನನ್ನು ಆರಾಧಿಸದೆ ಅವಮಾನಿಸುವ ಕಥೆಯನ್ನೇ ವೀರಶೈವರು ನಂಬಿ, ವಿವಾಹ ಶುಭ ಮತ್ತು ಭದ್ರವಾಗಬೇಕೆಂದು ಶಿವ-ವೀರಭದ್ರರ ಆರಾಧನೆಯನ್ನು ಈ ಸಂದರ್ಭದಲ್ಲಿ ಗುಗ್ಗಳದ ರೂಪದಲ್ಲಿ ಆಚರಿಸುವ ಕ್ರಮವನ್ನು ಆರಂಭಿಸಿದರು.

ಕುಂಬಾರನ ಮನೆಯಿಂದ ಐದು ಮಣ್ಣಿನ ಮಡಕೆಗಳನ್ನು ಹೇಳಿ ಮಾಡಿಸಿ ತರುತ್ತಾರೆ. ನಾಲ್ಕು ಕೊಡಗಳನ್ನು ತಲೆಕೆಳಗಾಗಿಟ್ಟು, ಕೆಳಭಾಗವನ್ನು ಸಾವಕಾಶವಾಗಿ ಒಡೆದು ತೆಗೆದು ಗುಂಡಿಯನ್ನಾಗಿ ಮಾಡುತ್ತಾರೆ. ಪುರವಂತನು ಬಂದು ಗೋದಿಯ ತೌಡನ್ನು ಮೊದಲು ಹರವಿಹಾಕಿ ಕುಳ್ಳ ಬೂದಿಯನ್ನು ತುಂಬುತ್ತಾನೆ. ಬಳಿಕ ಗೋಧಿ ಕಣಕವನ್ನು ಹಾಕುತ್ತಾನೆ. ಬಳಿಕ ಶ್ರೀಗಂಧದ ತುಂಡುಗಳನ್ನು ಹರಡುತ್ತಾನೆ. ಹೊಸ ಅರಿವಿಯಿಂದ ಸಿಂಬಿ ಮಾಡಿ ಗಾಣದ ಎಣ್ಣೆಯಲ್ಲಿ ಅದ್ದಿ ಮೇಲೆ ಕರ್ಪೂರ ಇಡುತ್ತಾನೆ. ಹೀಗೆ ನಾಲ್ಕು ಗುಂಡಿಗಳನ್ನು ತಯಾರಿಸಿ ಕರ್ಪೂರದಿಂದ ಗುಗ್ಗಳ ಹೊತ್ತಿಸುತ್ತಾನೆ.

ಹಂದರದಿಂದ ನಾಲ್ಕು ಜನರು ಗುಗ್ಗಳದ ಗುಂಡಿಗಳನ್ನು ಹೋರುತ್ತಾರೆ. ಬದಿಯಲ್ಲಿ ಮದುಮಗ ಮತ್ತು ಮದುಮಗಳು ಸ್ನಾನಮಾಡಿ ಗಂಧಹಚ್ಚಿಕೊಂಡು ಕೈಮುಗಿದುಕೊಂಡು ನಡೆಯುತ್ತಾರೆ. ಗುಗ್ಗಳ ಉರಿಯುತ್ತಿರುತ್ತದೆ. ಪುರವಂತನು "ಅಹಾ ವೀರಾ! ಅಹಾ ರುದ್ರಾ! ಎಂದು ಆರ್ಭಟಿಸುತ್ತಿರುತ್ತಾನೆ. ಮದುಮಗನ ಪಾಲಕರು ತಮ್ಮ ಎಡ-ಬಲ ತೋಳುಗಳಲ್ಲಿ ಸೂಜಿ ಚುಚ್ಚಿಕೊಂಡು ಕೈಮುಗಿದು ನಡೆಯುತ್ತಾರೆ. ಇವುಗಳನ್ನು ಅವರು ಶಸ್ತ್ರಗಳೆಂದು ಕರೆಯುತ್ತಾರೆ. ಇವರೆಲ್ಲ ರಸ್ತೆಯಲ್ಲಿ ರೌದ್ರಾವತಾರವನ್ನು ತಾಳುತ್ತಾರೆ. ಇದೆಲ್ಲ ವಾದ್ಯದೊಂದಿಗೆ ನಡೆಯುತ್ತದೆ. ಗುಂಡಿಯಲ್ಲಿ ಮಂಗಳಪೂಜೆಯಾದ ಬಳಿಕ ಗುಗ್ಗಳವನ್ನು ದೇವಸ್ಥಾನ ಇರುವ ದಿಕ್ಕಿಗೆ ಅಥವಾ ಪೂರ್ವ ಉತ್ತರಕ್ಕೆ ಕೆಳಗೆ ಹಾಕುತ್ತಾರೆ. ನಂತರ ನೆರೆದಿರುವ ಜನ ಗುಗ್ಗಳದಲ್ಲಿ ಅಲಂಕರಿಸಿರುವ ಬಣ್ಣ ಬಣ್ಣದ ಧ್ವಜಗಳನ್ನು ಕಿತ್ತುಕೊಂಡು ಮನೆಗೆ ತರುತ್ತಾರೆ.

ಗುಗ್ಗಳವು ಮಧ್ಯದಲ್ಲಿ ನಂದಿದರೆ ಅಮಂಗಳ ಎಂಬ ಭಾವನೆಯುಂಟು. ಅಕಸ್ಮಾತ್ ನಂದಿಹೋದಾಗ ಪುರುವಂತನು ತನ್ನ ಕೈಯ ಕಡ್ಗದಿಂದ ತನ್ನದೇ ಚಂಡು ಕಡಿದುಕೊಂಡು, ಗುಗ್ಗಳಕ್ಕೆ ರಕ್ತಕೊಟ್ಟು ಮತ್ತೆ ಅದನ್ನು ಹೊತ್ತಿಸಿ ತಾನೂ ಜೀವಂತನಾದನು ಎಂಬ ದಂತಕತೆಯೂ ಇದೆ.

ಇದಾದ ಮೇಲೆ ವಧೂವರರನ್ನು ಜಗಲಿಯ ಬಳಿ ಕೂರಿಸಿ ಎಣ್ಣೆ ಏರಿಸುವ ಮತ್ತು ಅರಿಶಿಣ ಹಚ್ಚುವ ಕಾರ್ಯ ನಡೆಯುತ್ತದೆ. ಹೆಚ್ಚಾಗಿ ವರನ ಅಕ್ಕತಂಗಿಯರು ಈ ಕಾರ್ಯ

ಮಾಡುತ್ತಾರೆ. ಅವರೇ ಒಳಗಡೆ ಪಂಚ ಕಳಶ ಹೂಡಿ ನೂಲು ಸುತ್ತುತ್ತಾರೆ. ಅಂಗಳದಲ್ಲಿ ಐರಾಣಿ ಮಗಿಗಳನ್ನಿಟ್ಟು ನೂಲು ಸುತ್ತುತ್ತಾರೆ. ಒಳಗಿನಿಂದ ವರ–ವಧು ಮತ್ತು ಅವರ ಪಾಲಕರು ಹಿಂಬಾಲಿಸುತ್ತಾರೆ. ಪ್ರತಿಯೊಬ್ಬರ ಕೈಯಲ್ಲಿರುವ ಅಕ್ಕಿಕಾಳು ಒಗೆಯುತ್ತ ಸುರಗಿಯ ಸುತ್ತ ಐದು ಸಲ ತಿರುಗಿ ಬಳಿಕ ಸುರಗಿಯಲ್ಲಿ ಕೊರುತ್ತಾರೆ. ವರ–ವಧುಗಳ ತಲೆಯ ಮೇಲೆ ಕೊಡ ದಿಂದ ಬಿಸಿನೀರು ಸುರಿಯುತ್ತಾರೆ. ಅನಂತರ ಹೊಸಬಟ್ಟೆ ತೊಡಿಸುತ್ತಾರೆ.

ವರನಿಗೆ ವಧುವಿನ ಕಡೆಯವರು ಮತ್ತು ವಧುವಿಗೆ ವರನ ಕಡೆಯವರು ಹೊಸ ಬಟ್ಟೆಗಳನ್ನು ಕೊಡುತ್ತಾರೆ. ಪದ್ಧತಿಯಂತೆ ಹಲವಾರು ರೀತಿಯ ಆಭರಣಗಳನ್ನೂ ತೊಡಿಸುತ್ತಾರೆ. ವಧು ಮದುವೆಯ ನಂತರ 'ಧಡಿ' ಧೋತರ ಹೊದ್ದು ಕೊಳ್ಳಬೇಕು. ವರನು ಬಿಳಿಬಟ್ಟೆಯನ್ನು ಉಟ್ಟುಕೊಳ್ಳಬೇಕು.

ಇದಾದ ಮೇಲೆ ಹೊರಗೆ ಅಕ್ಕಿಕಾಳು ತಯಾರಾಗಿರುತ್ತದೆ. ಜಂಗಮನು ಹಸಿ ಜಗಲಿಗೆ ವಧೂವರರನ್ನು ಕರೆತಂದು ನಿಲ್ಲಿಸಿ ವರನ ಕೈಗೆ ಮಾಂಗಲ್ಯ ಕೊಟ್ಟು ವಧುವಿನ ಕೊರಳಿಗೆ ಕಟ್ಟಿಸುತ್ತಾರೆ. ಅಕ್ಕಿಕಾಳಿನ ನಂತರ ವರ ಹಳದಿ ರೇಶ್ಮೇ ಜರತಾರಿ ರುಮಾಲು ಸುತ್ತಿಕೊಳ್ಳಬೇಕು.

ನಂತರ ಗುರುವರ್ಗದವರು ಮಂತ್ರ ಸಹಿತ ಆಶೀರ್ವಾದ ಮಾಡುತ್ತಾರೆ. ಬಳಿಕ ನೆರೆದವರು ಅಕ್ಕಿಕಾಳು ಹಾಕಿ ಆಶೀರ್ವದಿಸುತ್ತಾರೆ. ಸಂಜೆ ನವದಂಪತಿಗಳಿಂದ ಅಡಿಕೆಯಾಡಿಸುವುದು, ಉಂಗುರ ಉಡಿಸುವುದು ಇತ್ಯಾದಿ ಕಾರ್ಯಗಳು ನಡೆಯುತ್ತವೆ. ನವದಂಪತಿಗಳಲ್ಲಿ ಪರಸ್ಪರ ಪ್ರೀತಿ, ಸಲಿಗೆ ಬೆಳೆಸುವುದು ಇವುಗಳ ಉದ್ದೇಶವಾಗಿದೆ.

ಕಾಲು ತೊಳೆಯುವ ಪದ್ಧತಿ ವೀರಶೈವರಲ್ಲಿದೆ, ಬೀಗರು ಮತ್ತೆ ಕೆಲವು ಕಾಣಿಕೆಗಳನ್ನಿತ್ತು ನವದಂಪತಿಗಳ ಕಾಲುಗಳನ್ನು ತೊಳೆಯುತ್ತಾರೆ.

ರಾತ್ರಿಯಲ್ಲಿ ನವದಂಪತಿಗಳು ಮೆರವಣಿಗೆ ಮುಗಿಸಿಕೊಂಡು ಮನೆಯ ಬಾಗಿಲಿಗೆ ಬಂದಾಗ ಸಹೋದರಿಯು ನವದಂಪತಿಗಳ ಕಾಲುಹಿಡಿದು ತನ್ನ ಮಕ್ಕಳಿಗೆ ಅಣ್ಣನ ಮಕ್ಕಳನ್ನು ಕೇಳುತ್ತಾರೆ. ಹೆಂಡತಿಯಾದವಳು ತುಂಬಿದ ಕಾಳಿನ ಮಾಪನ್ನು ಬಲಗಾಲಿನಿಂದ ಒದೆದು ಒಳಗೆ ಬರುತ್ತಾರೆ. ಇಲ್ಲಿಗೆ ಮದುವೆಯ ಕಾರ್ಯ ಮುಗಿಯುತ್ತದೆ.

ವೀರಶೈವರಲ್ಲಿ ಹಲವು ಶಾಖೆಗಳಿವೆ. ಪ್ರತಿ ಶಾಖೆಯಲ್ಲೂ ಒಳ ಪಂಗಡ ಅಥವಾ ಉಪಜಾತಿಗಳಿವೆ. ಈ ಒಳಪಂಗಡ ಅಥವಾ ಉಪಜಾತಿಗಳಲ್ಲೇ ಅವರು ವಿವಾಹ ಸಂಬಂಧ ಬೆಳೆಸುವುದು ಸಾಮಾನ್ಯ ರೂಢಿ. ಕೆಲವು ಒಳಪಂಗಡಗಳಲ್ಲಿ ವಿಧವಾ ವಿವಾಹ ನಿಷಿದ್ಧವಾಗಿದೆಯಾದರೆ ಕೆಲವು ಪಂಗಡಗಳಲ್ಲಿ ಅದಕ್ಕೆ ಸಮ್ಮತಿಯಿದೆ.

ಇವರಲ್ಲಿ ವರದಕ್ಷಿಣೆಯು ಇತರ ಕೆಲವು ಜಾತಿಗಳಲ್ಲಿರುವಷ್ಟು ಸಾರ್ವತ್ರಿಕವಾಗಿಲ್ಲದಿದ್ದರೂ ಈಗ ಸಾಕಷ್ಟು ಚಾಲ್ತಿಯಲ್ಲಿದೆ. ಮೂಲದಲ್ಲಿ ಸರಳತೆ ಮತ್ತು ಸಮಾನತೆಯ ಉದ್ದೇಶ ಹೊಂದಿದ್ದರೂ ಪುರೋಹಿತವರ್ಗದವರು ಹಾಕಿಕೊಟ್ಟ ನಿಯಮಗಳನ್ನು ಸರಿಯಾಗಿ ಅನುಸರಿಸಲಾಗುತ್ತಿದೆ. ಇತ್ತೀಚೆಗಂತೂ ನಗರ ಪ್ರದೇಶಗಳಲ್ಲಿ ಪರಂಪರೆಯ ಕೆಲವು ಅನಿವಾರ್ಯ ವಿಧಿಗಳನ್ನು ಮಾತ್ರ ಅನುಷ್ಠಾನಗೊಳಿಸಿ ಅದ್ದೂರಿಯಿಂದ ಮದುವೆಗಳನ್ನು ನಡೆಸುವ ಪರಿಪಾಟ ಇವರಲ್ಲೂ ಕಂಡುಬರುತ್ತಿದೆ.

ಪರಂಪರಾಗತ ಪದ್ಧತಿಯ ಪ್ರಕಾರ ವೀರಶೈವರು ದೀಕ್ಷೆಹೊಂದಿದ ವರನಿಗೂ ದೀಕ್ಷಿತಳಾದ ಕನ್ಯೆಗೂ ವಿವಾಹವನ್ನು ಏರ್ಪಡಿಸುತ್ತಾರೆ. ವಧು-ವರರಿಬ್ಬರೂ ದೀಕ್ಷೆ ಹೊಂದಿ ಇಷ್ಟಲಿಂಗವನ್ನು ಧರಿಸಬೇಕು. ಆಗಲೇ ಅವರು ಧಾರ್ಮಿಕ ವಿವಾಹಕ್ಕೆ ಅರ್ಹರಾಗುತ್ತಾರೆ. ವರಪೂಜೆ, ವಾಗ್ದಾನ, ಗಣಪತಿಪೂಜೆ, ಕಂಕಣ ಧಾರಣೆ ಮುಂತಾದ ಕ್ರಿಯೆಗಳು ಎಲ್ಲ ಹಿಂದುಗಳು ನಡೆಸುವ ಕ್ರಿಯೆಗಳಿಗೆ ಸಮಾನವಾಗಿ ನಡೆಯುತ್ತವೆ. ಪಂಚಕಲಶ ಸ್ಥಾಪನೆ ಮತ್ತು ಪೂಜೆಗಳು ಒಂದು ವಿಶೇಷ. ಉಮಾಮಹೇಶ್ವರ ಕಲಶ ಸ್ಥಾಪನೆ ಮತ್ತು ಪೂಜೆಗಳು ಇರುತ್ತವೆ. ವೈದಿಕ ಮಂತ್ರಗಳ ಪ್ರಯೋಗವು ಎಲ್ಲ ವಿವಾಹಾಂಗಭೂತ ಕರ್ಮಗಳಲ್ಲಿ ಇರುತ್ತವೆ. ವೈದಿಕ ಮಂತ್ರಗಳ ಪ್ರಯೋಗವು ಎಲ್ಲ ವಿವಾಹಾಂಗಭೂತ ಕರ್ಮಗಳಲ್ಲಿ ಇರುತ್ತದೆ. ಗೃಹ್ಯಸೂತ್ರದ ವಿವರಗಳನ್ನೆಲ್ಲ ಅನುಸರಿಸುವ ದೀರ್ಘವಾದ ವಿವಾಹಪದ್ಧತಿಯೂ ಅವರಲ್ಲಿದೆ. ಅವರವರ ಶಕ್ತ್ಯಾನುಸಾರ ಅವುಗಳನ್ನು ಅಳವಡಿಸಿಕೊಂಡು ನಡೆಸುತ್ತಾರೆ. ಗುರು-ಜಂಗಮ ಸಮ್ಮುಖದಲ್ಲಿ ಮಾಂಗಲ್ಯಧಾರಣೆಯನ್ನು ಮಾಡಿಸುತ್ತಾರೆ. ಅವರ ಆಶೀರ್ವಾದ, ತೀರ್ಥ ಪ್ರಸಾದಗಳನ್ನು ವಧು-ವರರು ಶುಚಿರ್ಭೂತರಾಗಿ ಸ್ವೀಕರಿಸುತ್ತಾರೆ.

ವೀರಶೈವರಲ್ಲಿ ಸಪ್ತಪದಿಯ ಕ್ರಮ ಈ ರೀತಿ ಇರುತ್ತದೆ. ಮಾಂಗಲ್ಯಧಾರಣೆ ಮತ್ತು ಬ್ರಹ್ಮ ಬಂಧಗಳಾದ ಮೇಲೆ ವಧು-ವರರು ಉಮಾಮಹೇಶ್ವರರ ಕಲಶ ಪೂಜೆಯನ್ನು ನೆರವೇರಿಸುತ್ತಾರೆ. ಅನಂತರ ವರನು ಅಸನದಿಂದ ಎದ್ದು ವಧುವಿನ ಬಲಗೈಯನ್ನು "ಗೃಹ್ಣಾಮಿತೇ ಸೌಭಗತ್ವಾಯ ಹಸ್ತಂ" ಎಂಬ ಮಂತ್ರವನ್ನು ಪಠಿಸುತ್ತಿದ್ದಂತೆ ಹಿಡಿಯುತ್ತಾನೆ. ಉಮಾಮಹೇಶ್ವರ ಕಲಶಗಳ ಉತ್ತರಕ್ಕೆ ಪೂರ್ವದೆಡೆಗೆ ಅಕ್ಕಿಯ ಏಳು ಗೂಡೆಗಳನ್ನು ಹೆಜ್ಜೆಗೊಂದರಂತೆ ಹಾಕಿರುತ್ತಾರೆ. ಮಂತ್ರಗಳ ಪಠಣದೊಂದಿಗೆ ವಧು-ವರರು ಒಂದೊಂದು ಅಕ್ಕಿಯ ಗೂಡೆಯ ಮೇಲೆ ಹೆಜ್ಜೆ ಇರಿಸುತ್ತ ಪಶ್ಚಿಮದ ಕಡೆಯಿಂದ ಪೂರ್ವದ ಕಡೆಗೆ ಸಾಗುತ್ತಾರೆ. ಏಳನೆಯ ಹಜ್ಜೆ ಇರಿಸುವಾಗ "ಸಖಾ ಸಪ್ತಪದಾಭವ" ಎಂಬ ಮಂತ್ರವನ್ನು ಹೇಳುತ್ತಾರೆ.

ವಿಶ್ವಕರ್ಮ ಸಮುದಾಯದಲ್ಲಿ ಮದುವೆ

ಸಾಮಾನ್ಯವಾಗಿ ಗ್ರಾಮದ ವಿಶ್ವಕರ್ಮ ಜನಾಂಗದಲ್ಲಿ ೨೨ ರಿಂದ ೨೫ ನೇಯ ವಯಸ್ಸಿನಲ್ಲಿ ಅಥವಾ ಹುಡುಗ/ಹುಡುಗಿ ಪ್ರಭುದ್ಧಾವಸ್ಥೆಗೆ ಬಂದ ಮೇಲೆ ಮದುವೆ ಕಾರ್ಯ ನೆರವೇರಿಸುತ್ತಾರೆ. ಪಂಚಾಗದ ಪ್ರಕಾರ ಒಳ್ಳೆಯ ದಿವಸದಂದು ಕನ್ಯೆಯನ್ನು ಗೊತ್ತು ಮಾಡುತ್ತಾರೆ. ಭಿನ್ನಗೊತ್ರಗಳು ಮಾತ್ರ ಮದುವೆಯಾಗುತ್ತಾರೆ. ಒಂದೇ ಗೊತ್ರವೆಂದರೆ ಸಹೋದರ ಸಹೋದರಿ ಸಂಬಂಧವಾಗುತ್ತದೆ. ಈ ಕಾರಣಕ್ಕೆ ವಿರುದ್ಧ ಗೊತ್ರವನ್ನು ಮದುವೆಗೆ ಆಯ್ಕೆ ಮಾಡುತ್ತಾರೆ.

ಮದುವೆ ಸಂದರ್ಭದಲ್ಲಿ ಆಲಗಂಬ ತರುವುದು, ಐರಾಣಿಗಿ ತರುವುದು, ವೀರಭದ್ರ ಮೂರ್ತಿಯನ್ನು ವಾದ್ಯ ಮೇಳದೊಂದಿಗೆ ಪುರುವಂತಿಗೆ ಜನರ ಸಮೇತ ದೇವರನ್ನು ಮನೆಯಲ್ಲಿ ಕರೆದುಕೊಳ್ಳುವುದು. ನಂತರ ಅರಿಶಿಣ ಕಾರ್ಯಕ್ರಮ, ನೂಲು ಸುತ್ತುವುದು, ನೂಲಿನಲ್ಲಿ ಹುಡುಗ/ಹುಡುಗಿಯ ತಂದೆ ತಾಯಿಗಳು ಇರುತ್ತಾರೆ. ಹುಡುಗನ ಸೋದರ ಮಾವ ವಧು ವರರಿಗೆ ಬ್ರಹ್ಮಗಂಟು ಹಾಕುತ್ತಾರೆ. ಅವರ ಮನೆಯ ಅಥವಾ ಸಮಾಜದ ಗುರುಗಳು ಮಂತ್ರದೊಂದಿಗೆ ಅಕ್ಷತೆಯನ್ನು ಹಾಕುತ್ತಾರೆ. ಮದುವೆ ಅಕ್ಷತೆಯ ಸಂದರ್ಭದಲ್ಲಿ ವರನಿಗೆ ದೊತರ (ಪಂಚೆ), ಅಂಗಿ, ಬಿಳಿಯ ಟೊಪ್ಪಿಗೆ ಧರಿಸುತ್ತಾರೆ. ವಧುವಿಗೆ ಅರಿಶಿಣ ಸೀರೆ ಧರಿಸುತ್ತಾರೆ ಮಂಗಳಸೂತ್ರ, ಕಾಲುಂಗುರ ಧರಿಸುತ್ತಾರೆ. ವರೋಪಚಾರ ಜಾರಿಯಲ್ಲಿದೆ.

ಮಂಗಳಸೂತ್ರವನ್ನು ವಧು ಮತ್ತು ವರನ ಕಡೆಯಿಂದ ಸಮಪಾಲು ವೆಚ್ಚವನ್ನು ಭರಿಸಿ ತಯಾರಿಸುತ್ತಾರೆ.

ಮದುವೆಯಲ್ಲಿ ವಧು ವರರ ಶ್ರೇಯಸ್ಸಿಗಾಗಿ ಇದುವರೆಗೆ ಮಾಡಿದ ತಪ್ಪುಗಳನ್ನು ಕ್ಷಮಿಸಲೆಂದು ತಂದೆ ತಾಯಿಗಳು ಪುರವಂತಿಗೆಯವರಿಂದ ಶಸ್ತ್ರಗಳನ್ನು ಚುಚ್ಚಿಕೊಳ್ಳಬೇಕೆಂದು ಪದ್ಧತಿಯಿದೆ. ಆದರೆ ಇತ್ತೀಚೆಗೆ ಪರಸ್ಪರ ಶಸ್ತಗಳನ್ನು ಚುಚ್ಚಿಕೊಳ್ಳುವುದರಿಂದ ರೋಗ ರುಜಿನಗಳು ಹಬ್ಬಬಹುದೆಂದು ಪರಸ್ಪರರ ಅನುಮತಿ ಪಡೆದು ಹಾಗೂ ಶಸ್ತ್ರಗಳನ್ನು ಸ್ವಚ್ಛಗೊಳಿಸಿ ಈ ಪದ್ಧತಿಯನ್ನು ಆಚರಿಸುತ್ತಿರುವರು. ಇನ್ನೂಳಿದ ಗ್ರಾಮದ ಎಲ್ಲ ಸಮುದಾಯದ ಜನರು ಮದುವಿಗೆ ಆಗಮಿಸಿರುತ್ತಾರೆ. ವಿಧವಾ ವಿವಾಹಕ್ಕೆ ಸಮುದಾಯದ ನಿಯಮದ ಪ್ರಕಾರ ಅವಕಾಶವಿಲ್ಲ. ಆದರೆ ಇತ್ತೀಚೆಗೆ ವಿಧವಾ ವಿವಾಹಗಳು ನಡೆಯುತ್ತಿರುವುದು ಕಂಡುಬರುತ್ತದೆ. ಮಡಿಮೈಲಿಗೆ ಜನಾಂಗದಲ್ಲಿ ಆಚರಣೆಯಲ್ಲಿದೆ.

ಕೊರವ ಸಮುದಾಯದಲ್ಲಿ ಮದುವೆ

ಕೊರವ ಜನಾಂಗದವರ ಮದುವೆಗೆ ಗೃಹ ಪ್ರವೇಶ, ಸತ್ಯನಾರಾಯಣ ಪೂಜೆಗೆ ಗ್ರಾಮದ ಸ್ವಾಮಿಗಳು ಬರುತ್ತಾರೆ. ಮದುವೆಯಲ್ಲಿ ಸ್ವಾಮಿಗಳೇ ಬ್ರಹ್ಮಗಂಟು ಹಾಕುವದುಂಟು. 101 ರೂಪಾಯಿ ಹಣ, ಜೋಳ, ತಂಬಿಗೆ ಮುಂತಾದ ಧಾನಗಳನ್ನು ಸ್ವಾಮಿಗಳಿಗೆ ನೀಡುತ್ತಾರೆ. ಮದುವೆಯಲ್ಲಿ ತಾಯಿ ಸೀರೆ, ಆಯಿ ಸೀರೆ, ಬಿಗರ ಸೀರೆ, ಮುಂತಾದ ಪ್ರಕಾರದ ಉಡುಗೊರೆಯ ಕೊಡುಕೊಳ್ಳುವಿಕೆ ನಡೆಯುತ್ತದೆ.

ತೆರವು ಕೊಡುವ ಪದ್ಧತಿ

ಮದುವೆಯಾಗುವ ವಧುವಿಗೆ ಗಂಡಿನ ಪಕ್ಷದಿಂದ ವಧುದಕ್ಷಿಣೆ ಕೊಡುವುದನ್ನು ತೆರವು ಕೊಡುವ ಪದ್ಧತಿಯೆಂದು ಕರೆಯುವುದುಂಟು. ಕೊರವ ಜನಾಂಗದಲ್ಲಿ ಈ ವಿಶಿಷ್ಟವಾದ ಪದ್ಧತಿ ಆಚರಣೆಯಲ್ಲಿದೆ. ಎರಡು ತೆರನಾದ ತೆರವುಗಳನ್ನು ಕೊಡುವ ಪದ್ಧತಿ ಈ ಜನಾಂಗದಲ್ಲಿ ಆಚರಣೆಯಲ್ಲಿದೆ. 1) ಸಣ್ಣ ಧಾರಣೆ 101 ರೂ. 2) ದೊಡ್ಡ ಧಾರಣೆ 500ರೂ. ಹೀಗೆ ಅನುಕೂಲತಕ್ಕಂತೆ ತೆರವು ಕೂಡಿಸಿ ಅದಕ್ಕೆ ಸರಿಸಮವಾದ ತೆರಿಗೆ ಹೆಣ್ಣುಗಂಡಿನವರು ಸೇರಿಸಿ ಅಡುಗೆ ಮಾಡಿ ಸಂತೋಷ ಕೂಟವನ್ನು ಏರ್ಪಡಿಸುತ್ತಾರೆ. ಈ ಕಾರ್ಯಕ್ರಮಗಳು ಹೆಣ್ಣು ತೆಗೆದುಕೊಳ್ಳುವ, ತಾಂಬೂಲ ಬದಲಾಯಿಸುವ ಸಮಯದಲ್ಲಿ ಈ ಪದ್ಧತಿಯನ್ನು ಆಚರಿಸುತ್ತಾರೆ.

ವರದಕ್ಷಿಣೆ

ಹತ್ತು ಸಾವಿರ ರೂಪಾಯಿಂದ ಇಪ್ಪತ್ತು ಸಾವಿರವವರೆಗೆ ಹಣ, ವಡವೆ, ವಸ್ತು, ಆಭರಣ ಉಡುಗೊರೆ ನೀಡುತ್ತಾರೆ.

ಕೊರವ ಜನಾಂಗದಲ್ಲಿ ವೈವಾಹಿಕ ಸಂಬಂಧಗಳು ಜತ್ತ ತಾಲೂಕಿನ ಮಾಡಿಹಾಳ, ಜಾಡರ ಬಬಲಾದ, ಡಪಳಾಪೂರ, ಸಾಂಗಲಿ, ನಾಗಜ, ಸಾಂಗೋಲ ಮುಂತಾದ ಕಡೆಗಳಿಲ್ಲಿವೆ. ಕರ್ನಾಟಕದಲ್ಲಿ ಗೋಟೆ, ಸಾವಳಗಿ, ಜಮಖಂಡಿ, ಮಹಾಲಿಂಗಪೂರ, ಚಡಚಣ ಮುಂತಾದ ಕಡೆಗಳಲ್ಲಿವೆ.

ಯಾದಿ ಮ್ಯಾಲ ಶಾದಿ

ಗ್ರಾಮದಲ್ಲಿ ಅತ್ಯಂತ ಸರಳ ವಿವಾಹ ಪದ್ಧತಿಯಾದ ಯಾದಿ ಮ್ಯಾಲ ಶಾದಿ ಎನ್ನುವ

ವಿಶಿಷ್ಟ ಆಚರಣೆ ಜಾರಿಯಲ್ಲಿದೆ. ಎಷ್ಟೋ ವೇಳೆ ವಧು ವರರ ಮಾತು ಕತೆಗೆಂದು ಆಗಮಿಸಿದ ವೇಳೆಯಲ್ಲಿಯೇ ಪರಸ್ಪರ ಒಪ್ಪಿಗೆಯಾಗಿ ವ್ಯವಹಾರ ಮುಗಿಸಿ ಸ್ಥಳದಲ್ಲಿಯೇ ಆವತ್ತೇ ಮದುವೆ ಮಾಡಲು ಹಿರಿಯರು ನಿಶ್ಚಯಿಸುತ್ತಾರೆ.

ತಾಳಿ, ಹೊಸಬಟ್ಟೆ ಹಾಗೂ ಸಿಹಿ ಅಡಿಗೆ ತಯಾರಿಸಿ ಪರಸ್ಪರರು ಒಂದು ಹಾಳೆಯ ಮೇಲೆ ಒಪ್ಪಿಗೆ ಪತ್ರವನ್ನು ಬರೆದು ಕುಂಕುಮ ಅರಿಶಿಣದಿಂದ ಪೂಜಿಸಿ ಮದುವೆ ನೆರವೇರಿಸುತ್ತಾರೆ. ಈ ಮದುವೆಗೆ ಗ್ರಾಮದಲ್ಲಿರುವ ಅಥವಾ ಪರ ಊರಿನಲ್ಲಿರುವ ಸಂಬಂಧಿಕರನ್ನು ಬಂಧುಗಳನ್ನು ಕರೆಸದೇ ಇದ್ದರೂ ನಡೆಯುತ್ತದೆ. ಹೇಗೆಂದರೆ ಅವಸರದ ಮದುವೆ ಇದಾಗಿರುವುದರಿಂದ ಯಾರೂ ಕೂಡಾ ಈ ಬಗ್ಗೆ ನಮ್ಮನೇಕೆ ಮದುವೆಗೆ ಕರೆಸಲಿಲ್ಲವೆಂದು ಸಿಟ್ಟು ಮಾಡಿಕೊಳ್ಳುವುದಿಲ್ಲ. ಇದೊಂದು ಆರ್ಥಿಕ ಮಿತವ್ಯಯಕಾರಿಯಾದ ಹಾಗೂ ಸಮಯ ಉಳಿತಾಯ ಎಲ್ಲ ದೃಷ್ಟಿಯಿಂದಲೂ ಜನಪ್ರೀಯ ಪದ್ಧತಿಯಾಗಿದೆ.

ಇನ್ನು ಕೆಲವು ಸಂದರ್ಭದಲ್ಲಿ ಶ್ರೀ ಕ್ಷೇತ್ರ ಇಂಚಗೇರಿ ಮಠಕ್ಕೆ ಹೋಗಿ ಸರಳ, ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮದುವೆ ಮಾಡಿಕೊಂಡು ಬರುತ್ತಾರೆ. ಗ್ರಾಮದಲ್ಲಿ ಸಾಮಾನ್ಯವಾಗಿ ತಮ್ಮ ತಮ್ಮ ಮನೆಯ ಮುಂದೆ ಹಾಗೂ ಸಿದ್ದೇಶ್ವರ ಕಲ್ಯಾಣ ಮಂಟಪ ಹಾಗೂ ಮಲ್ಲಯ್ಯನ ದೇವಸ್ಥಾನ ಇತರೆಡೆಗಳಲ್ಲಿ ಮದುವೆಗಳು ಜರುಗುತ್ತವೆ.

ಮುಸ್ಲಿಂ ಸಮೂದಾಯದಲ್ಲಿ ವಿವಾಹ (ಶಾದಿ) ಪದ್ಧತಿ

ಮೊದಲು ವರನ ಕಡೆಯವರು ಕನ್ಯೆಯನ್ನು ನೋಡಿ ಬರುತ್ತಾರೆ. ನಂತರ ಕನ್ಯೆಯವರು ವರನನ್ನು ನೋಡುವರು ಆ ಮೇಲೆ ಎರಡು ಪಕ್ಷಕ್ಕೆ ಒಪ್ಪಿಗೆ ಆದ ಮೇಲೆ ಮಾತುಕಥೆ ಮಾಡುವರು. ಮಾತುಕಥೆ ಮುಗಿದ ಮೇಲೆ ವರನ ಕಡೆಯವರು ಕನ್ಯೆಗೆ ಸೀರೆಯನ್ನು ಊಡುಗೊರೆ ನೀಡಬೇಕು. ಅದು ಉರ್ದು ಭಾಷೆಯಲ್ಲಿ (ಮಂಗನಿ) ಗಟ್ಟಿ ಮಾಡುವರು ಎಂದು ಹೇಳುತ್ತಾರೆ.

ಅವರವರ ಅನುಕೂಲತೆಯ ಪ್ರಕಾರ ಲಗ್ನದ ದಿನಾಂಕವನ್ನು ನಿಗದಿಪಡಿಸುತ್ತಾರೆ. ನಂತರ ಮದುವೆಯ ವೇಳೆಯಲ್ಲಿ ಕನ್ಯೆಗೆ ಹತ್ತೊಂಬತ್ತು ವರ್ಷ ವಯಸ್ಸಾಗಿರಬೇಕು. ವರನಿಗೆ ಇಪ್ಪತ್ತುವರ್ಷವಾಗಿರಬೇಕು. ಈ ಪ್ರಕಾರ ಲಗ್ನ ನಿಶ್ಚಯಿಸುತ್ತಾರೆ.

ಲಗ್ನದ ಸಂದರ್ಭದಲ್ಲಿ ಸಮಾಜದ "ಖ್ವಾಜಿ"ಯನ್ನು ಕರೆತಂದು ನಿಖಾಹ "ಅಕ್ಷತ" ನಿಖಾಹ ದಪ್ತರದಲ್ಲಿ (ಪುಸ್ತಕ)ದಲ್ಲಿ ಮದುಮಗಳ ಹೆಸರು ಮತ್ತು ಮದುಮಗನ ಹೆಸರು ದಾಖಲಿಸಿ ಆ ಮದುಮಗಳಿಗೆ ವರನು ಕೊಡುವಂತ ಮೆಹರ (ವಧು ದಕ್ಷಿಣೆ) ದ ಮೌಲ್ಯ ರಜಿಸ್ತ್ರರದಲ್ಲಿ ಬರೆದು ಮದುಮಗಳು ಮತ್ತೆ ಮದುಮಗನ ಇಬ್ಬರ ಒಪ್ಪಿಗೆಯ ಪ್ರಕಾರ ವಧುದಕ್ಷಿಣೆಯನ್ನು ಪಾವತಿಸಬೇಕು. ಬಾಚಾ ಮದುಮಗಳನ್ನು ಕನ್ಯೆಯನ್ನು ವರಿಸಲಿಕ್ಕೆ ಸಮಾಜದ ಎರಡು ಸಾಕ್ಷಿಗಳ ಸಹಿತ ಖ್ವಾಜಿಯ ಎದುರು ಮಹರ ಕಬೂಲ ಕಬೂಲ ಎಂದು ಮೂರು ಬಾರಿ ಹೇಳಬೇಕು. ಹಪ್ತ ಒಪ್ಪಿಸಬೇಕು ರಜಿಷ್ಟ್ರರದಲ್ಲಿ ಮದುಮಗನ ಸಹಿ ಮದುಮಗಳ ಸಹಿಯೊಂದಿಗೆ ಒಬ್ಬ ವಕೀಲರ ಸಹಿ ದಾಖಲಿಸಬೇಕು.

ನಂತರ ಧರ್ಮದ ಪ್ರಕಾರ ನಿಖಾಹ ಖ್ವಾನಿ ಕುತುಬಾ ಓದಿ ಐದು ಪ್ರಕಾರದ ಐದು ಹರಳು ಕಲ್ಲು ಸಕ್ಕರೆ ಐದು ಕೊಬ್ಬರಿಯ ತುಂಡು ಅದರಲ್ಲಿ ನಿಯಮ ಪ್ರಕಾರ ಸ್ವಲ್ಪ

ಅರಿಶಿಣ ಹಚ್ಚಾದ ಅಕ್ಕಿಕಾಳು ಇವೆಲ್ಲಾ ಮದುಮಗನ ತಲೆಯ ಮೇಲೆ ಹಾರಿಸಬೇಕು. ಮದುಮಗನು ತಲೆಯ ಮೇಲೆ ಎದ್ದು ನಿಂತು ಎಲ್ಲ ಸಮಾಜಕ್ಕೆ ವಂದಿಸಬೇಕು. (ಸಲಾಂ).

ನಂತರ ಇದೇ ಪ್ರಕಾರ ಹೆಣ್ಣು ಮಗಳು ವಧುವಿನ ಕೂಡ ಈ ವ್ಯವಸ್ಥೆಯನ್ನು ನೇರವೇರಿಸುತ್ತಾರೆ. ಅಂದರೆ ಹೆಣ್ಣು ಗಂಡು ಬೇರೆ ಬೇರೆಯಾಗಿ ಮದುವೆಯ ಈ ಕಾರ್ಯನಡೆಯುತ್ತದೆ. ಅವರವರ ಅನೂಕೂಲಕ್ಕೆ ತಕ್ಕ ಊಟೋಪಚಾರದ ಗೌರವದ ವ್ಯವಸ್ಥೆ ಮಾಡಬಹುದು.

೧) ಶೇಖ ಜನಾಂಗದವರು ಶೇಖ ಜನಾಂಗವನ್ನು ವರಿಸಬೇಕು.
೨) ಸೈಯ್ಯದರು ಸೈಯ್ಯದ ಜನಾಂಗದವರನ್ನೆ ವರಿಸಬೇಕು. (ಫಕೀರನಿಗೆ ಕೊಡುವದಿಲ್ಲ)
೩) ಮೊಗಲರು (ನದಾಫ್ ಜನಾಂಗ) ಮೊಗಲ್‌ದವರೊಡನೆ ಸಂಬಂಧ ಮಾಡಬೇಕು.
೪) ಪಠಾಣವಧುವಿನವರು ಪಠಾಣದವರನ್ನೆ ವರಿಸಬೇಕು.

ಇತ್ತೀಚಿಗೆ ಸಹೋದರಿ ಸಂಬಂಧಿ ಸ್ತ್ರೀಯರನ್ನು ಮುಸ್ಲಿಂ ಸಮುದಾಯದಲ್ಲಿ ಮಾಡಿಕೊಳ್ಳುತ್ತಿಲ್ಲ. ಈ ಆಚರಣೆ ಕಡಿಮೆಯಾಗುತ್ತಿದೆ.

೭.೧.೪ ಮರಣ

ಜನನ ಪೂರ್ವದಿಂದಲೂ ಸಂಸ್ಕಾರ ಪಡೆದುಬಂದ ಈ ಮನುಷ್ಯ ಮರಣಾನಂತರವೂ ಅನೇಕ ಸಂಸ್ಕಾರಗಳನ್ನು ಪಡೆಯುತ್ತಾನೆ. ಅದು ಆಯಾ ಜನಪದ ವರ್ಗ ಚಾಚು ತಪ್ಪದೆ ಆಚರಿಸುತ್ತ ಬಂದಿದೆ. ವ್ಯಕ್ತಿ ಸತ್ತ ನಂತರ ಸಂಬಂಧಿಕರುಗಳಿಗೆ ಸುದ್ದಿ ಕಳಿಸಿ ಹೆಣವನ್ನು ಅವರವರ ಮತ ಧರ್ಮಕ್ಕೆ ಅನುಸಾರವಾಗಿ ಕೂಡಿಸುವ, ಮಲಗಿಸುವ ವ್ಯವಸ್ಥೆ ಮಾಡುತ್ತಾರೆ. ಒಂಟ್ಟಲಿಗೆ, ಜೋಡ್ಹಲಿಗೆ, ಭಜಂತ್ರಿ ವಾದನಗಳು ಬಾರಿಸುವಿಕೆ ಒಂದೆಡೆ ಇದ್ದರೆ, ಹೊತ್ತು ಕಳೆಯಲೆಂದು ಗಿಡದ ನೆರಳು, ಮನೆಯ ಕಟ್ಟೆಯ ಮೇಲೆ ಇಸ್ಪೇಟು, ಹುಲಿಕಟ್ಟಿಯಾಟ ಆಡುವುದು ಮತ್ತೊಂದೆಡೆ ನಡೆದಿರುತ್ತದೆ. ಇನ್ನೊಂದೆಡೆ ಹೆಣ ಎತ್ತುವುದು ತಡವಾಗುತ್ತ ಹೋದಂತೆ ಚಹಾ-ಚೋಡಾದ ವ್ಯವಸ್ಥೆ, ಜೊತೆಗೆ ಭಜನೆ, ಜನಪದ ಕಥೆ ಹೇಳುವುದು ನಡೆದಿರುತ್ತದೆ. ಹೆಣವನ್ನು ಸುಡುವ ಪದ್ಧತಿಯಿದ್ದರೆ, ಹಳ್ಳದಲ್ಲಿ ಕಟ್ಟಿಗೆಯನ್ನು ಹಾಕಿಸುವ, ಹುಗಿಯುವ ಪದ್ದತಿ ಇದ್ದರೆ, ಸುಡಗಾಡದಲ್ಲಿ ಗೋರಿ ತೋಡಿಸುವ ಕೆಲಸ ನೋಡಿಕೊಂಡು ಮತ್ತು ಸಂಬಂಧಿಕರೆಲ್ಲ ಬಂದರೆಂಬ ವಿಷಯ ತಿಳಿದುಕೊಂಡು ಹೆಣವನ್ನು ಎತ್ತುತ್ತಾರೆ. 'ಸತ್ತ ಹೆಣಕ್ಕೆ ಶೃಂಗಾರ' ಎಂಬಂತೆ ಹೆಣವನ್ನು ಇಟ್ಟು ಒಯ್ಯುವ ಸುಂದರ ಸಮಂದಿಯನ್ನು ಅಲಂಕರಿಸುತ್ತಾರೆ. ಇದು ಸವರ್ಣೀಯ ಕೆಲವು ಜನಪದ ವರ್ಗಗಳಿಗೆ ಮಾತ್ರ ಸೀಮಿತವಾದುದು. ಇನ್ನುಳಿದವರು ಬಡಿಗೇರರಿಂದ ತಾತ್ಪೂರ್ತಿಕವಾದ ಚಟ್ಟವನ್ನು ಮಾಡಿಸುತ್ತಾರೆ. ಗ್ರಾಮದ ಬ್ರಾಹ್ಮಣ, ಪಂಚಾಳ, ರಜಪೂತ ಸಮುದಾಯದವರು ಶವವನ್ನು ಚಟ್ಟದಲ್ಲಿ ಮಲಗಿಸಿ ಸಾಗಿಸುತ್ತಾರೆ. ಇನ್ನುಳಿದಂತೆ ಸಾಮಾನ್ಯವಾಗಿ ಕಂಬಳಿ, ಹಳೆಯ ಕೌದಿ, ಚಾದರದಲ್ಲಿ ಶವವನ್ನು ಸುಡಗಾಡಿಗೆ ಸಾಗಿಸುತ್ತಾರೆ.

'ಸಾವಿರ ಕೆಲಸ ಬಿಟ್ಟು ಸ್ವರ್ಗಕ್ಕೆ ಹೋಗವರ್‍ನ ನೋಡಬೇಕು' ಎಂಬಂತೆ ಹೆಣ ಎತ್ತಿದರೆಂಬುದನ್ನು ಪಟಾಕ್ಷಿ ಸದ್ದು ಕೇಳಲು ಸಂದಿ ಸಂದಿಗೆ ಜನ ಬಂದು ಸೇರಿ ಜನ ಜಂಗುಳಿಯೇ ಹೊರಟಿರುತ್ತದೆ. ಆಗ ಸತ್ತವರ ಹಿರಿಯ ಮಗ ಇಲ್ಲವೆ ಮಗಳು 'ಮರಕೂಳ'

ಹಿಡಿದು ಹೆಣದ ಮುಂದೆ ಮುಂದೆ ನಡೆದಿರುತ್ತಾರೆ. ಗೋರಿಯನ್ನು ಮುಟ್ಟುವವರೆಗೆ ಇನ್ನೊಬ್ಬರು ನೆವಣಿಯನ್ನು ಬಿತ್ತುತ್ತಿರುತ್ತಾರೆ. ಶವವನ್ನು ಕುಣಿಯಲ್ಲಿಟ್ಟು ಮತ್ತೊಮ್ಮೆ ಪೂಜಿಸಿ ಕೂಡಿಸುವದಾಗಿದ್ದರೆ ಕಮಾನಿನಲ್ಲಿ, ಮಲಗಿಸುವುದಾಗಿದ್ದರೆ ಉದ್ದಗೆ ಅಂಗಾತ ಮಲಗಿಸಿ ಮೇಲೆ ಗಿಡ ಗಂಟಿಗಳ ಟೊಂಗೆ-ತಪ್ಪಲವನ್ನು ಹಾಕಿ ಬಂದವರೆಲ್ಲ ಒಂದೊಂದು ಹಿಡಿ ಮಣ್ಣನ್ನು ಹಾಕುತ್ತಾರೆ. ಸುಡುವುದಾಗಿದ್ದರೆ ಒಂದೊಂದು ದಂಟನ್ನು ಮುರಿದು ಒಗೆದು ದೂರ ಸರಿದು ನಿಲ್ಲುತ್ತಾರೆ. ನಂತರ ಕೆಲವರು ಸಲಕೆಯಿಂದ ಎಡದಿಂದ ಬಲಕ್ಕೆ ಸರಿಯುತ್ತ ಎಲ್ಲ ಮಣ್ಣನ್ನು ಸರಿಸಿ ಉಳಿದದ್ದನ್ನು ಗುಂಪಾಗಿ ಮಾಡಿ ಒಳಗೊಂದು ಟೆಂಗನ್ನು ಇಟ್ಟು ಗೋರಿಗೆ ಪೂಜಿಸಿ ಕಾಯಿ ಒಡೆದು ಫಳಾರ ಹಂಚುವರು. ಸುಡುವವರು ಹೆಣಕ್ಕೆ ಬೆಂಕಿಯಿಟ್ಟ ನಂತರ ತಲಿಸುಟ್ಟು ಸಿಡಿಯುವವರೆಗೆ ಅಲ್ಲಿಯೇ ಇರುವರು. ಉಳಿದವರು ಮನೆಗೆ ಬರುತ್ತಾರೆ. ಈ ಸಂದರ್ಭದಲ್ಲಿ ಶ್ರೀಮಂತರು ಹಣ, ಕಾಳು-ಕಡಿ, ಬಟ್ಟೆ-ಬರಿ ದಾನ ಮಾಡುತ್ತಾರೆ. ಇವನ್ನು ಕೆಳವರ್ಗದವರು ಮತ್ತು ಪರ ಊರಿನ ಅಯ್ಯಗೋಳು ಪಡೆಯುತ್ತಾರೆ. ಹಾಗೂ ವಾದ್ಯ ವಾಲಗದವರಿಗೂ ತಮಗೆ ತಿಳಿದಷ್ಟು ಹಣವನ್ನು ಸತ್ತವರ ಮನೆಯವರೇ ಕೊಡುವರು. ಸುಡುಗಾಡಿನಿಂದ ಬರಬರುತ್ತಲೇ ಹಳ್ಳ-ಬಾವಿಗಳಲ್ಲಿ ಮುಖ ಮಾರಿ-ಮೈ ತೊಳೆದು ಮನೆಗೆ ಬರುವರು.

ಮರಣೋತ್ತರ ಸಂಸ್ಕಾರಗಳು

ಸತ್ತವರನ್ನು ಸುಡಗಾಡಿಗೆ ವ್ಯವಸ್ಥಿತವಾಗಿ ಕಳಿಸಿ ಬಂದರೆ ಕೆಲಸ ಮುಗಿದಂತಾಗುವದಿಲ್ಲ. ಓಣಿಯ ಹಿರಿಯರು ಸಾಂತ್ವಾನ ಹೇಳುತ್ತ ಮುಂದಿನ ಕೆಲಸಕ್ಕೆ ತೊಡಗುತ್ತಾರೆ. ಮೊದಲು ಒಂದೆರಡು ದಿನಗಳಲ್ಲಿ ಹೊತ್ತವರ ಹೊರೆ ಇಳಿಸುತ್ತಾರೆ. ಅಂದರೆ ಶವಯಾತ್ರೆಯಲ್ಲಿ ಹೆಣಕ್ಕೆ ಹೆಗಲು ಕೊಟ್ಟವರನ್ನು ಕರೆದು, ಗೋರಿಗೆ ಪೂಜಿಸಿ ಅವರಿಗೆ ಊಟ ಮಾಡಿಸುತ್ತಾರೆ. ಇದನ್ನು ಹೊತ್ತವರ ಹೊರೆ ಇಳಿಸುವುದು ಎನ್ನುತ್ತಾರೆ. ಸಂಬಂಧಿಕರೆಲ್ಲ ಇನ್ನೂ ದುಃಖದಲ್ಲಿರುವುದರಿಂದ ಇದನ್ನು ಅಷ್ಟೊಂದು ವಿಜೃಂಭಣೆಯಿಂದ ಮಾಡಲು ಹೋಗುವುದಿಲ್ಲ.

ಇದು ಮುಗಿಯುತ್ತಿದ್ದಂತೆಯೇ 'ಹಸಿಯ' ಮೇಲೆ ತೆಗೆದುಕೊಳ್ಳುವ ಕಾರ್ಯ ಮಾಡುತ್ತಾರೆ. ಕೆಲವು ಜನಪದ ವರ್ಗಗಳಲ್ಲಿ ಇದನ್ನು ಮೂರು ದಿನದ ಕಾರ್ಯ ಎಂದೂ ಕರೆಯುವುದುಂಟು. ಆ ದಿನ ತೀರಿಕೊಂಡ ವ್ಯಕ್ತಿ ಇಷ್ಟಪಡುತ್ತಿದ್ದ ಆಹಾರವನ್ನು ತಯಾರಿಸಿ ಎಡೆ ಹಿಡಿಯುತ್ತಾರೆ. ಹೊಸ ಬಟ್ಟೆಗಳನ್ನು ತಂದು ಏರಿಸಿ ಕೆಲವು ಜನರಿಗೆ ಊಟ ಮಾಡಿಸುತ್ತಾರೆ. ಅಂದು ಸಂಜೆ ಇಲ್ಲವೆ ಬೆಳಿಗ್ಗೆ ಹಕ್ಕಿಗೆ ಹಾಕುತ್ತಾರೆ. ಜೌಡಲ ಅಥವಾ ಪರ್‍ಯಾಣದಲ್ಲಿ ಅಡುಗೆ ಮಾಡಿದ ಎಲ್ಲ ಪದಾರ್ಥಗಳನ್ನು ಹಾಕಿ ಗೋರಿಯ ಮೇಲೊಯ್ದಿಡುವರು. ಯಾವುದಾದರೂ ಹಕ್ಕಿ ಬೇಗ ಅದನ್ನು ತಿನ್ನಲು ಬಂದರೆ ಸತ್ತವರಿಗೆ ಇನ್ನೂ ಆಶೆ ಇಲ್ಲವೆಂದು ಬರದಿದ್ದರೆ ಇನ್ನೂ ಆಶೆ ಇದೆಯೆಂದು ನಂಬುತ್ತಾರೆ.

ಕೊನೆಯದು 'ತಡಿಗೆ' ಅಥವಾ 'ಗದ್ದಿಗೆ' ಕಟ್ಟಿಸುವುದು. ವ್ಯಕ್ತಿ ತೀರಿಕೊಂಡು ಒಂದು ವರ್ಷ ತುಂಬುವುದರೊಳಗಾಗಿ ಗೋರಿಯ ಮೇಲೆ ತಡಿಗೆ ಕಟ್ಟಿಸುವ ಸಂಪ್ರದಾಯ ಕಂಡುಬರುತ್ತದೆ. ಎಲ್ಲ ಜನಪದ ವರ್ಗದವರಲ್ಲಿ ಕಡ್ಡಾಯವಾದುದೇನಲ್ಲ. ಅನುಕೂಲಸ್ಥರು ಮಾತ್ರ ಈ ಪರಂಪರೆಯನ್ನು ಅನುಸರಿಸುತ್ತ ಬಂದಿದ್ದಾರೆ. ಸತ್ತ ವ್ಯಕ್ತಿ ಬಹಳ ಒಳ್ಳೆಯವನಾಗಿದ್ದರೆ ಸುಡಗಾಡದಲ್ಲಿ ಹುಗಿಯದೆ ತಮ್ಮ ಹೊಲ-ತೋಟದಲ್ಲಿ ಹುಗಿದು ತಡಿಗೆ ಕಟ್ಟಿಸುತ್ತಾರೆ. ಪ್ರತಿ ವರ್ಷಕ್ಕೊಮ್ಮೆ

ರಾತ್ರಿ ಭಜನೆ ಹಚ್ಚಿ ಪುಣ್ಯತಿಥಿ ಆಚರಿಸುತ್ತಾರೆ. ಅಂದು ಬೆಳಿಗ್ಗೆ ಸಿಹಿ ಊಟದ ಏರ್ಪಾಡಿರುತ್ತದೆ. ಗೋರಿ ಗುಡಿಯಾಗಿ ಪರಿಣಮಿಸುವುದು ನಮ್ಮ ಧರ್ಮದ ತಿರುಳು.

ವಿಶ್ವಕರ್ಮ ಸಮುದಾಯದಲ್ಲಿ ಮರಣ

ವ್ಯಕ್ತಿ ಮರಣ ಹೊಂದಿದ ಮೇಲೆ ವಿಶ್ವಕರ್ಮ ಜನಾಂಗದಲ್ಲಿ ಶವವನ್ನು ಆಸನ ಹಾಕಿ ಮಲಗಿಸುತ್ತಾರೆ. ಶವಕ್ಕೆ ಎಣ್ಣೆ ಹಚ್ಚಿ ಬಿಸಿನೀರಿನಲ್ಲಿ ಸ್ನಾನ ಮಾಡಿಸುತ್ತಾರೆ. ಹೊಸ ಬಟ್ಟೆ ಧರಿಸುತ್ತಾರೆ. ಹಾರ ಹಾಕುತ್ತಾರೆ. ಕುಂಕುಮ ಗಂಧದ ಧಾರಣೆ ಮಾಡುತ್ತಾರೆ. ಶವವನ್ನು ಕೂಡ್ರಿಸುವುದಿಲ್ಲ. ಶವವನ್ನು ಮರಣ ಸಂಭವಿಸಿದ ಮೂರು ಗಂಟೆಯೊಳಗೆ ಶವ ಸಂಸ್ಕಾರ ಮಾಡುತ್ತಾರೆ. ಶವವನ್ನು ಬಿದಿರು ಕಟ್ಟಿಗೆಯಿಂದ ತಯಾರಿಸಿದ ಪರಿಕರದಲ್ಲಿ ಸ್ಮಶಾನಕ್ಕೆ ಕೊಂಡೊಯುತ್ತಾರೆ. ಶವವನ್ನು ದಹನ ಮಾಡುತ್ತಾರೆ. ಶವ ದಹನ ಮಾಡುವ ಮುಂಚೆ ಮಣ್ಣಿನ ಪಾತ್ರೆಯಲ್ಲಿ ಬೆಂಕಿ ಹಾಕಿ ಹಿರಿಯ ಮಗ ಇರದಿದ್ದರೆ ಕಿರಿಯ ಮಗ ಕೇಶ ಮುಂಡನ ಮಾಡಿಕೊಂಡು ಸ್ನಾನ ಮಾಡಿ ಮಡಿ ಬಟ್ಟೆ ಧರಿಸಿ ಬೆಂಕಿಯನ್ನು ತೆಗೆದುಕೊಂಡು ಹೋಗುತ್ತಾರೆ. ಅದೇ ವ್ಯಕ್ತಿ ಶವಕ್ಕೆ ಅಗ್ನಿ ಸ್ಪರ್ಶ ಮಾಡುತ್ತಾನೆ.

ಆನಂತರ ಹದಿಮೂರು ದಿನ ಕೇಶಮುಂಡನ ಮಾಡಿಸಿಕೊಂಡ ವ್ಯಕ್ತಿ ಸಹಿತ ರಕ್ತ ಸಂಬಂಧಿಕರೆಲ್ಲ ಸೂತಕ ಆಚರಿಸುತ್ತಾರೆ. ಆ ಸಂದರ್ಭದಲ್ಲಿ ಸ್ವತಃ ಅಡುಗೆ ಮಾಡಿಕೊಂಡು ಅಥವಾ ಅನ್ಯರು ಅಡುಗೆ ಕೊಟ್ಟದ್ದನ್ನೆ ಮಾಡಿಕೊಳ್ಳಬೇಕು. ಮೂರನೇ ದಿನ ದಹನ ಮಾಡಿದ ವ್ಯಕ್ತಿಯ ಮೂಳೆಗಳನ್ನು ಮಣ್ಣಿನ ಮಡಿಕೆಯಲ್ಲಿ ಹಾಕಿ ನದಿಯಲ್ಲಿ ಬಿಡಲು ಬರುತ್ತಾರೆ. ಅವರಲ್ಲಿ ಹಣೆಗೆ ಸಂಬಂಧಪಟ್ಟ ಒಂದು ಭಾಗವನ್ನು ತೆಗೆದುಕೊಂಡು ಹದಿಮೂರು ದಿನಗಳವರೆಗೆ ನೀರು ಇರುವ ಸ್ಥಳದಲ್ಲಿ ಅದನ್ನು ಇಟ್ಟು ಸ್ನಾನ ಮಾಡಿ ಪೂಜೆ ಮಾಡಿ ಬರುವುದು. ಹತ್ತನೇಯ ದಿವಸಕ್ಕೆ ಮನೆಯನ್ನು ಸ್ವಚ್ಚಗೊಳಿಸಿ ಹನ್ನೆರಡು ಅಥವಾ ಹದಿಮೂರು ದಿನಕ್ಕೆ ಮನೆಯ ಗುರುಗಳನ್ನು ಕರೆಸಿ ವಿಧಿ ವಿಧಾನಗಳೊಂದಿಗೆ ಜನಿವಾರ ಹಾಕಿಕೊಳ್ಳುವುದೊಂದಿಗೆ ಕಾರ್ಯವನ್ನು ಮುಕ್ತಾಯಗೊಳಿಸುತ್ತಾರೆ. ವರ್ಷಕ್ಕೊಮ್ಮೆ ಅವರು ತಿರಿಕೊಂಡ ದಿನ ಪುಣ್ಯ ತಿಥಿಯನ್ನು ಅವರ ಶ್ರಾದ್ಧ ಮಾಡುತ್ತಾರೆ.

ಕೊರವ ಸಮುದಾಯದಲ್ಲಿ ಮರಣ ಸಂದರ್ಭ

ಕೊರವ ಜನಾಂಗದಲ್ಲಿ ಸತ್ತ ವ್ಯಕ್ತಿಯ ಶವಕ್ಕೆ ಸ್ನಾನ ಮಾಡಿಸುತ್ತಾರೆ. ಹೊಸ ಬಟ್ಟೆ ಧರಿಸಿ ಸಂಬಂಧಿಕರು ಬರುವವರೆಗೆ ಕಾಯುತ್ತಾರೆ. ಭಜನೆ ಇತರ ಕಾರ್ಯಕ್ರಮಗಳನ್ನು ನಡೆಸುವುದು ನಡೆಸುವುದು ವೆಚ್ಚದಾಯ ಕ ವಾಗಿರುವುದರಿಂದ ಅವರವರ ಆರ್ಥಿಕ ಶಕ್ತಿ ಸಾಮರ್ಥ್ಯದ ಮೇರೆಗೆ ಶವದ ಮುಂದೆ ಭಜನೆ ಕಾರ್ಯಕ್ರಮ ಹಚ್ಚುತ್ತಾರೆ. ರೋಗ ರುಜಿನಗಳಿದ್ದರೆ ಶವವನ್ನು ಬೆಂಕಿಯಲ್ಲಿ ಧಹಿಸುತ್ತಾರೆ ಇಲ್ಲದಿದ್ದರೆ ಮಣ್ಣು ಮಾಡುತ್ತಾರೆ. ಕೊಟ್ಟಲಗಿ ಗ್ರಾಮದಿಂದ ಬನ್ನೂರ ಗ್ರಾಮಕ್ಕೆ ಹೋಗುವ ದಾರಿಯಲ್ಲಿ ಸ್ಮಶಾನವಿದೆ. ವ್ಯಕ್ತಿ ಸತ್ತ ಎರಡನೇಯ ದಿನಕ್ಕೆ ಕೋಳಿ ಬಲಿಕೊಡುತ್ತಾರೆ ಮೂರನೇಯ ದಿನ ಹೊತು ಬಲಿಕೊಡುತ್ತಾರೆ ಒಂಬತ್ತನೇಯ ದಿವಸ ಒಂದು ಹೊತು ಹದಿಮೂರನೇಯ ದಿವಸಕ್ಕೆ ಒಂದು ಹೊತು ಬಲಿಕೊಡುತ್ತಾರೆ. ಎರಡು ಮೂರು ಅಥವಾ ಐದನೇಯ ದಿನಕ್ಕೆ ಹಕ್ಕಿಗೆ ಅನ್ನ ಇಡುವ ಪದ್ಧತಿ ಜಾರಿಯಲ್ಲಿದೆ.

ಒಂದು ಒಳ್ಳೆಯ ದಿವಸದ ಪ್ರಕಾರ ಒಂದುವರೆ ತಿಂಗಳವರೆಗೆ ಜಗಲಿಯ ಮೇಲೆ ತೆಗೆದುಕೊಳ್ಳುತ್ತಾರೆ. ಸತ್ತ ವ್ಯಕ್ತಿ ಬದುಕಿದ್ದಾಗ ಇಷ್ಟ ಪಡುತ್ತಿದ್ದ ಮಾಂಸಾಹಾರವನ್ನು ನೈವೇಧ್ಯವಾಗಿ ಇಡುತ್ತಾರೆ.

ವರ್ಷಕ್ಕೊಮ್ಮೆ ಹಿರಿಯರಿಗೆ ಬಟ್ಟೆ ಬರೆ ತೆಗೆದುಕೊಂಡು ಅರ್ಪಿಸುತ್ತಾರೆ. ಮರಣದ ನಂತರ ಸತ್ತ ವ್ಯಕ್ತಿಯ ಮನೆಯಲ್ಲಿ ಬಡವರಿದ್ದರೂ ಖರ್ಚು ವೆಚ್ಚ ಮಾಡುವ ಶಕ್ತಿಯಿಲ್ಲದಿದ್ದರೂ ಆ ಕಾರ್ಯವನ್ನು ನೆರವೇರಿಸಲೇಬೇಕು. ಒಂದು ವೇಳೆ ಸತ್ತ ವ್ಯಕ್ತಿಯ ಮನೆಯವರು ಬಡವರಿದ್ದರೆ ಹಣವಂತರು ಇಲ್ಲದವರಿಗೆ ಸಹಾಯ ಮಾಡುತ್ತಾರೆ.

ವಾಲ್ಮೀಕಿ ಸಮುದಾಯದಲ್ಲಿ ಮರಣ ಸಂದರ್ಭ ಆಚರಣೆ

ಬಿಸಿನೀರಿನಿಂದ ಸತ್ತ ವ್ಯಕ್ತಿಯ ಶವಕ್ಕೆ ಸ್ನಾನ ಮಾಡಿಸುತ್ತಾರೆ. ಎಣ್ಣೆ ಹಚ್ಚಿ ಕೂಡ್ರಿಸುತ್ತಾರೆ. ಮದುವೆ ಆಗಿರದಿದ್ದರೆ ಮಲಗಿಸುತ್ತಾರೆ. ಹೊಸ ಬಟ್ಟೆ ಹಾಕುತ್ತಾರೆ. ಹೂ ಪುಷ್ಪಗಳಿಂದ ಶೃಂಗರಿಸಿ ಸ್ವಾಮಿಗಳಿಂದ ಪೂಜಾ ಕಾರ್ಯ ನೆರವೇರಿಸುತ್ತಾರೆ. ಸ್ವಾಮಿಗಳು ಶವ ಸಂಸ್ಕಾರ ದಪನ ಕಾರ್ಯ ಮಾಡುವ ಸ್ಥಳವನ್ನು ಅಳತೆ ಮಾಡಿಕೊಡುತ್ತಾರೆ. ಶವದ ಮುಂದೆ ಭಜನೆ ಪದಗಳನ್ನು ಮಾಡುವ ನಡೆಯುತ್ತದೆ. ಶವ ಯಾತ್ರೆಯಲ್ಲಿ ಸಂಬಾಳ ವಾದ್ಯ ಬಾರಿಸುತ್ತಾ ಶಹನಾಯಿ ಉದುತ್ತಾ ಕಂಬಳಿಯಲ್ಲಿ ಶವವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗುತ್ತಾರೆ. ನಂತರ ಶವವನ್ನು ಹೂಳುತ್ತಾರೆ. ಹಡೆದ ಬಾಣಂತಿಯರಿದ್ದರೆ, ರೋಗಗ್ರಸ್ತರಾಗಿದ್ದರೆ ದಹನ ಮಾಡುತ್ತಾರೆ. ಸ್ವಾಮಿಗಳು ಮಂಗಳಾರತಿ ಮಾಡಿ ಸಮಾಧಿಯ ಮೇಲೆ ಪಾದ ಇಟ್ಟು ಪೂಜೆ ಮಾಡುತ್ತಾರೆ. ಅನೇಕರು ಸತ್ತವರಿಗೆ ಸದ್ಗತಿ ಪ್ರಾಪ್ತವಾಗಲೆಂದು ದಾನಧರ್ಮ ಮಾಡುತ್ತಾರೆ.

ಮೂರನೇ ದಿನಕ್ಕೆ ದಿನ ಕಾರ್ಯವನ್ನು ಮಾಡುತ್ತಾರೆ. ಅಂದರೆ ಮನೆಯಲ್ಲಿ ಹಾಸಿಗೆ ಬಟ್ಟೆ ತೊಳೆದು ಅನ್ನ ತಯಾರಿಸಿ ಸತ್ತ ವ್ಯಕ್ತಿಯ ಸಮಾಧಿಯ ಮೇಲೆ ಕಾಗೆಗೆ ಅನ್ನ ಇಡುತ್ತಾರೆ. ಕಾಗೆ ಬಂದು ತಕ್ಷಣ ಅನ್ನ ತಿಂದರೆ ಸತ್ತ ವ್ಯಕ್ತಿಗೆ ಯಾವ ಆಶೆ ಆಕಾಂಕ್ಷೆಯಿಲ್ಲವೆಂದು ಭಾವಿಸುತ್ತಾರೆ. ಒಂದು ವೇಳೆ ತಿನ್ನದೇ ಇದ್ದರೆ ಆತನ ಬದುಕಿನಲ್ಲಿ ಅಪೂರ್ಣವಾದ ಕಾರ್ಯಗಳನ್ನು ನಾವು ನೆರವೇರಿಸುವುದಾಗಿ ಭರವಸೆ ನೀಡುತ್ತಾರೆ. ಆಗಲೂ ಕಾಗೆ ಬಂದು ಅನ್ನ ಮುಟ್ಟದಿದ್ದರೆ ಆಕಳನ್ನು ಕರೆತಂದು ತಿನ್ನಿಸುವುದುಂಟು. ಬಂದ ಬಿಗರು ಬಿಜ್ಜರು ಸೇರಿ ಸಂಬಂಧಿಗಳೆಲ್ಲ ಹಣವನ್ನು ಸೇರಿಸಿ ಅಡುಗೆ ಮಾಡುತ್ತಾರೆ. ಸಿಹಿ ಅಡುಗೆ ತಯಾರಿಸಿ ಸತ್ತ ವ್ಯಕ್ತಿಯ ಹೆಸರಿನಲ್ಲಿ ಬಂದ ಜನರಿಗೆ ಅನ್ನ ಸಂತರ್ಪಣೆ ಮಾಡುತ್ತಾರೆ. ಒಂದು ವರ್ಷದವರೆಗೆ ಆತನ ಭಾವಚಿತ್ರ ಅಥವಾ ಬೆಳ್ಳಿ, ಹಿತ್ತಾಳೆಯ ಮೂರ್ತಿ ತಯಾರಿಸಿ ದೇವರನ್ನು ಪೂಜಿಸುವ ಜಗಲಿ ಸ್ಥಳದಲ್ಲಿರಿಸಿ ಪೂಜಿಸುತ್ತಾರೆ. ನೈವೇಧ್ಯ ತಯಾರಿಸಿ ಸತ್ತವರು ಸ್ತ್ರೀಯರಾಗಿದ್ದರೆ ಸೀರೆ ಕುಪ್ಪಸ, ಪುರುಷರಾಗಿದ್ದರೆ ಪಂಚೆ, ಅಂಗಿ ತಂದು ಪೂಜಿಸುತ್ತಾರೆ.

ಮುಸ್ಲಿಂ ಸಮುದಾಯ ಮರಣದ ಸಂದರ್ಭದಲ್ಲಿ ಆಚರಿಸುವಂತ ಪದ್ಧತಿ

ಸತ್ತ ವ್ಯಕ್ತಿಯ ಶವವನ್ನು ಸ್ವಚ್ಚವಾಗಿ ಸಾಬೂನಿನಿಂದ ಮೈ, ಕೈ, ಗುದ, ಗುಹ್ಯ ಎಲ್ಲವನ್ನು ಅಲ್ಲದೇ ಉಗುರು ಇನ್ನಿತರ ಕಡೆ ಸ್ವಚ್ಛಮಾಡುವರು. ಕೈಗೆ ಹೊಸ ಬಟ್ಟೆ ಕಟ್ಟಿಕೊಂಡು ಈ ಎಲ್ಲ ಭಾಗವನ್ನು ಸ್ವಚ್ಛಗೋಳಿಸುತ್ತಾರೆ. ಶವವನ್ನು ತೊಳೆಯಬೇಕಾದರೆ ಪುರುಷರ ಶವ ಪುರುಷರೇ ಸ್ತ್ರೀಯರ ಶವ ಸ್ತ್ರೀಯರೇ ಸ್ವಚ್ಛಗೋಳಿಸುತ್ತಾರೆ. ಈ ಸಂಧರ್ಭದಲ್ಲಿ ಬಿಸಿನೀರು ಅಥವಾ ತಣ್ಣನೇ ನೀರು ಬಳಸುವರು ಹಾಗೂ ನಾಲ್ಕು ದಿಕ್ಕಿಗೆ ಶವದ ಸುತ್ತಲು

ಮರ್ಯಾದೆಗಾಗಿ ಪರದೇಯನ್ನು ಹಿಡಿಯುತ್ತಾರೆ. ನಂತರ ೨೫ ಮೋಳ ಹೊಸಬಟ್ಟೆ ಅಥವಾ ಅತಿಯಾದ ಬಡವನಾದರೆ ಶುದ್ಧವಾದ ಹಳೆಯಬಟ್ಟೆಯು ಕೂಡಾ ನಡೆಯುವದು. ಒಮ್ಮೊಮ್ಮೆ ಹಳೆಯ ಬಟ್ಟೆ ಇರದಿದ್ದರೇ ಅಂಗಡಿಯಲ್ಲಿ ಹೋಗಿ "ಮುರ ಪಾಟಾಪ" ಬಟ್ಟೆ ಕೋಡು ಎಂದು ಕೇಳುವರು. ಅಂದರೆ ಹುಂಜನ ಗುರುತಿನ ಬಟ್ಟೆ ಇದು ಕೇವಲ ಶವದ ಉಪಯೋಗಕ್ಕಾಗಿ ಮುಸ್ಲಿಂರು ಮಾತ್ರ ಬಳಸುವರು. ಈ ಶಬ್ದ ಮಾರವಾಡಿಗಳಿಗೆ ಮಾತ್ರ ಚಿರಪರಿಚಿತವಾಗಿದೆ.

ಶವಕ್ಕೆ ೨೫ ಮಳದ ಬಟ್ಟೆಯಲ್ಲಿ ಸುತ್ತುವರು ಭಾಗಗಳನ್ನಾಗಿ ವಿಂಗಡಿಸುವರು. ಇಲ್ಲಿ ಮೊದಲನೆಯದು

೧) ಬಿಚಾಣಾ ದಿಡಿ – ಹಾಸಿಗೆ ದೀಡಪಟ್ಟು

೨) ಕಪನಿ – ಬಗವಾ

೩) ಪಿರಾಣಿ ಪಟ್ಟಿ – ಹಣೆಪಟ್ಟಿ

೪) ಚಾದರ ವಾಡಾವಣೆ – ಹೊದ್ದುಕೊಳ್ಳುವದು

೫) ಜಂಹಾನ ಮಾಜ ಕಪಡಾ –

ಸಾಮಾನ್ಯವಾಗಿ ೧) ಸಿನಾಬಂದ –೨೫ ಮಳ ಬಟ್ಟೆಯಿಂದ ಉದ್ದನೇಯ ಒಂದು ಬಟ್ಟೆಯ ದಡದಿಂದ ಅರಿವೇಯ ಲಡಿಯನ್ನು ತೆಗೆಯುತ್ತಾರೆ. ಇದನ್ನು ೧) ಸಿರಬಂದ – ತಲೆಗೆ ಕಟ್ಟಲು ಉಪಯೋಗಿಸುತ್ತಾರೆ. ೨) ಕಂಬರ ಬಂದ – ಸೊಂಟದ ಹತ್ತಿರ ಕಟ್ಟುವರು. ೩) ಪಾಂವ ಬಂದ – ಕಾಲಿನ ಪಾದಗಳ ಹತ್ತಿರ ಕಟ್ಟುತ್ತಾರೆ.

ಹಣೆಯ ಮೇಲಿನ ಬಟ್ಟೆಯಲ್ಲಿ ೧) ಕರ್ಪೂರ ೨) ಅರಿಷಣ ಪುಡಿ ೩) ಊದಿನ ಕಡ್ಡಿಯ ಪುಡಿ ಮೂರು ಕೂಡಿಸಿ ಹಾಕುವರು ಹಾಕಿ ಅರೆಬಿಕದಲ್ಲಿ ಎರಡು ಊದಿನ ಕಡ್ಡಿಗೆ ತುದಿಗೆ ದಾರದಲ್ಲಿ ಮಂತ್ರ ಬರೆಯುತ್ತಾರೆ. "ಕಲ್ಮ ಲಾಇಲಾಹಾ ಇಲ್ಲಲ್ಲಾ ಮೊಹ್ಮದ ರಸೂಲುಲ್ಲ" ಎಂದು ಬರೆಯುವರು. ದೇವರು ಒಬ್ಬನೇ ಅವನು ಪರಮಾತ್ಮನ ಭಕ್ತ ಮೊಹ್ಮದ ಪೈಗಂಬರ ಒಬ್ಬನೇ ಅವನ ಹೊರತಾಗಿ ಇನ್ನಾರು ಇಲ್ಲ.

ಶವ ಒಯ್ಯುವ ಪೆಟ್ಟಿಗೆಗೆ "ಪಿಂಜರಾ" ಎಂದು ಕರೆಯುತ್ತಾರೆ. ಇದೇ ಶವಪೆಟ್ಟಿಗೆಯನ್ನು ನಾಲ್ಕು ಜನ ಸೇರಿ ಒಯ್ಯುತ್ತಾರೆ. ಮೇಲೆ ಹೇಳಿದ ಮಂತ್ರವನ್ನು ಹೇಳುತ್ತ "ಖಬರಸ್ಥಾನ" ಅಂದರೆ ಸ್ಮಶಾನದವರೆಗೂ ಶವ ಒಯ್ಯುತ್ತಾರೆ ಪುರುಷರು ಮತ್ತೆ ಸ್ಮಶಾನಕ್ಕೆ ಶವದ ಜೊತೆಗೆ ಹೋಗುತ್ತಾರೆ. ಸ್ತ್ರೀ ಯರಿಗೆ ಹೋಗಲು ಅವಕಾಶವಿಲ್ಲ.

ಸ್ಮಶಾನ ಸುಮಾರು ೪೦/೫೦ ಅಡಿ ದೂರವಿರುವಾಗ ಶವ ಪೆಟ್ಟಿಗೆಯನ್ನು ಉತ್ತರಕ್ಕೆ ತಲೆ ಹಾಗೂ ದಕ್ಷಿಣಕ್ಕೆ ಕಾಲು ಮಾಡಿ ಕೆಳಗೆ ಇಳಿಸಿ ಇಡುತ್ತಾರೆ.

ಸಾಮಾನ್ಯ ಶವ ಇಳಿಸಿ ಪೇಶ ಇಮಾಮ್ ನಮಾಜು ಮಾಡುವ ಹಿರಿಯ ಮುಂದೆ ಶವದ ಹತ್ತಿರ ನಿಲ್ಲುತ್ತಾರೆ. ನಂತರ ಅವರ ಹಿಂದೆ ಎಲ್ಲ ಜನ ನಿಲ್ಲುವರು.

ಬನಾಚೌದ ಅಥವಾ ಪಾಯಾ ನಮಾಜ ಮಾಡುತ್ತಾರೆ. ಚಾರ ತಖಬೀರ ಸೇ ಸಾತ ದೋತಾ ಕಿಪಾಯಾ ನಮಾಜ ಮಾಡಿ ಅಂದರೆ ಸತ್ತ ವ್ಯಕ್ತಿಗೆ ಸ್ವರ್ಗದೊರಕುವಂತೆ ಅಲ್ಲಾಹನಲ್ಲಿ ಪ್ರಾರ್ಥನೆ ಮಾಡುವರು. ದುವಾ ಎಂದರೆ ಪ್ರಾರ್ಥನೆ.

ಅಲ್ಲಿಂದ ಶವವನ್ನು ತೆಗೆದುಕೊಂಡು ಹೋಗಿ "ಖಬರ" ಅಂದರೆ ಗೋರಿಯಲ್ಲಿ ಹಾಕುತ್ತಾರೆ. ಸಾಮಾನ್ಯವಾಗಿ ಈ ಗೋರಿಯು ಉತ್ತರ ದಕ್ಷಿಣಕ್ಕೆ ಇರುತ್ತದೆ. ಗೋರಿಯಲ್ಲಿ ಹಾರದ ನಂತರ ಮುಖದ ಮೇಲಿನ ಬಟ್ಟೆಯನ್ನು ಮಾತ್ರ ತೆಗೆದು ಎಲ್ಲ ಜನ ಸತ್ತ ವ್ಯಕ್ತಿಯ ಮುಖದರ್ಶನ ಮಾಡಿ ಅಲ್ಲಾಹುವಿನಲ್ಲಿ ಪ್ರಾರ್ಥಿಸುವರು.

ಮಕಫೀ ದುವಾ ಎಂದರೆ ಪ್ರಾರ್ಥನೆ ಎರಡು ವಧಾ ಅಂದರೆ ಗುಪ್ತ ಮನಸ್ಸಿನಿಂದ ಮಾಡುತ್ತಾರೆ. ಅಂದರೆ ಆತ ಜೀವಿತ ಅವಧಿಯಲ್ಲಿ ಮಾಡಿದ ತಪ್ಪುಗಳಿಗೆ ಕ್ಷಮೆಯನ್ನು ಕೇಳುವರು.

ನಂತರ ಶವ ಮುಚ್ಚಿದ ಮೇಲೆ "ಚೌಹರಿ" ದಾಲಿಂಬೆ ಅಥವಾ ಭಾರಿ ಯಾವುದೇ ಒಂದು ಗಿಡದ ಟೊಂಗೆಯನ್ನು ಬಳಸುತ್ತಾರೆ. ಈ ವಿಚಾರ ಪೈಗಂಬರ ಆದೇಶ ಆಚರಣೆಯಾಗಿದೆ. ಟೊಂಗೆಯನ್ನು ಶವದ ತಲೆಯಕಡೆಗೆ ಚುಚ್ಚುತ್ತಾರೆ. ನಂತರ ತಲೆಯ ಕಡೆಗೆ ಒಂದು ಎತ್ತರವಾದ ಕಲ್ಲು, ಕಾಲಿನ ಕಡೆಗೆ ಎತ್ತರವಾದ ಒಂದು ತಂಬಿಗೆ ನೀರನ್ನು ಮೊದಲೇ ತೆಗೆದುಕೊಂಡು ಹೊಗಿದ್ದ ಶವದ ಗೋರಿಯ ಮೇಲೆ ಸಿಂಪಡಿಸಿ ಎಲ್ಲ ಜನರು ಕೈಗಳನ್ನು ಅಗಲ ಮಾಡಿ ಅಂಗೈಗಳನ್ನು ತೆರೆದುಕೊಂಡು ಅಲ್ಲಾಹನಲ್ಲಿ "ದುವಾ" ಪ್ರಾರ್ಥನೆ ಮಾಡುತ್ತಾರೆ.

"ಐ ಅಲ್ಲಾ ಮೈಯುತ ಕೆ ಲಿಯೇ ದುವಾ"

ದುವಾದ ವಿವರ ಎನೆಂದರೆ, ಸಗೀರಾ ಗುನ್ಹಾ, ಕಬೀರಾ ಗುನ್ಹಾ, ರಾತಕಾ ಗುನ್ಹಾ, ದೀನ ಉಜಾಲೇಖಾ ಗುನ್ಹಾ, ತಮಾಮ್ ಗುನ್ಹಾ, ಬಕ್ಕದೇ ಶರ ಮಹ್ಮದ ಮುಸ್ತಫಾ ಸಲ್ಲಲಾಹು ಅಲ್ವೆ "ಪಲ್ಲಂ ಕಾ ವಶಿಲಾ ಮಿಲ್ ದೇವೆ.

ಬರಕೇ ಅಂದರೆ ಸಾಪ ಕಾ ಅಚೌಬ ಬಿಚ್ಚು ಕಾ ಅಜಾಬ ಮುನಕೀರ ನಕೀರ ಕಾ ಸವಾಲ್ ಅಗರೆ ಗರಮೀ ತಕಲಿಪಿಯಾ ದೂರ ಕರದೇ ಖಬರಕೆ ಅಂದರೆ ಉಚಾಲಾ ಕರದೇ ತಮಾಮ್ ಮುಸಲ್ಮಾನ ಬಾಯಿಕಾ ದುವಾ ಮಂಜೂರ ಕರದೇ ಎಂದು ಕೇಳಿಕೊಳ್ಳುತ್ತಾರೆ.

ಸಗಿರಾಗುನ್ಹಾ – ತಿಳಿಯದೇ ಮಾಡಿದ ಅಪರಾಧ

ಕಬೀರಾಗುನ್ಹಾ – ತಿಳಿದು ಮಾಡಿದ ತಪ್ಪು

ರಾತಕಾ ಗುನ್ಹಾ – ರಾತ್ರಿ ಮಾಡಿದ ತಪ್ಪು.

ದಿನಜಾತೀ ಗುನ್ಹಾ – ಹಗಲಿನಲ್ಲಿ ಮಾಡಿದ ತಪ್ಪು ಎಲ್ಲ ಅಪರಾಧ ಕ್ಷಮಿಸು ಇವರಿಗೆ ಸ್ವರ್ಗದಲ್ಲಿ ಅವಕಾಶ ದಯಪಾಲಿಸು. ಮಹ್ಮದ ಪೈಗಂಬರ ಆಶಿರ್ವಾದದಿಂದ ಇವರಿಗೆ ಸ್ವರ್ಗ ಸಿಗಲಿ. ಗೋರಿಯಲ್ಲಿ ಇವರ ತಪ್ಪಿಗೆ ಪರಮಾತ್ಮನ ಅಜ್ಞಾನುಸಾರ ಹಾವಿನ ತೊಂದರೆ, ಚೆಳಿನ ತೊಂದರೆ, ಯಮಧೂತನ ತೊಂದರೆ ಪ್ರಾಣಒಯ್ಯುವ ಧೂತ ಇಜರಾಯಿಲ್ ಉಪಮಿರಾಯಿಲ್ ಅಂದರೆ ಇಬ್ಬರೂ ಧೂತರು ಇವರ ತೊಂದರೆ ಬೆಂಕಿಯ ತೊಂದರೆ ವಿಷ ಜಂತುಗಳ ತೊಂದರೆ, ಇವನೆಲ್ಲಾ ನಿವಾರಿಸು, ಎಂದು ಪ್ರಾರ್ಥಿಸುವರು ಮುಸಲ್ಮಾನ ಸಹೋದರರ ಪ್ರಾರ್ಥನೆಯನ್ನು ಮನ್ನಿಸಿ ಅವರಿಗೆ ಸ್ವರ್ಗಕೊಡು ಎಂದು ಬೇಡುತ್ತಾರೆ.

ಪ್ರಾರ್ಥನೆಯ ನಂತರ ಗೋರಿಯಿಂದ ನಲವತ್ತು ಹೆಜ್ಜೆ ನಡೆದುಬಂದು ಗೋರಿಯ ಕಡೆಗೆ ಎಲ್ಲ ಜನ ಮುಖಮಾಡಿ "ಅಸ್ಸಾಲುಮ ಅಲೆಹಂ" ಎಂದು ಕೈಮಾಡಿ ಹೇಳುತ್ತಾರೆ.

ಅಂದರೆ ದೇವರು ನಮಗೆ ನಿನಗೆ ದಯಪಾಲಿಸಲಿ ಎಂದು ಹೇಳುತ್ತಾರೆ. ಅಂದರೆ ನಾವೆಲ್ಲರೂ ಒಂದಾನೊಂದು ದಿನ ನಿಮ್ಮ ಹತ್ತಿರ ಬರುತ್ತೆವೆ ಎಂದರ್ಥ.೨

೭.೨ ವಾರ್ಷಿಕಾವರ್ತನ ಆಚರಣೆಗಳು

೭.೨.೧ ಹಬ್ಬ ಹರಿದಿನಗಳು

'ಹಬ್ಬ' ಎಂಬ ಪದವು ಸಂಸ್ಕೃತದ 'ಪರ್ವನ್' ಶಬ್ದದ ತದ್ಭವ ರೂಪ. ಪರ್ವ ಎಂದರೆ, ಒಂದು ಮತ್ತೊಂದರ ಜೊತೆಗೆ ಸಂಧಿಸುವುದು ಎಂದರ್ಥ. ಸೂರ್ಯ ಚಂದ್ರರ ದಿಕ್ಕು ಬದಲಾಗುವುದೇ ಪರ್ವ. ಅದನ್ನೇ ನಮ್ಮ ಪೂರ್ವಜ್ಜರು ಅಮವಾಸ್ಯೆ, ಹುಣ್ಣಿಮೆಗಳೆಂದು ಹೆಸರಿಸಿದಂತೆ ಕಾಣುತ್ತದೆ. ಮಾನವ ತನ್ನ ಬಯಕೆ ಇಲ್ಲವೇ ಸಂಕಲ್ಪ ವೃತ ಆ ಇಚ್ಛೆಯ ಈಡೇರಿಕೆಗಾಗಿ ಒಂದು ಸೀಮಿತವಾದ ಅವಧಿಯಲ್ಲಿ ಕೈಗೊಳ್ಳುವ ಹರಕೆ, ರೂಢಿ ಸಂಪ್ರದಾಯ, ಆಚರಣೆ, ಉತ್ಸವಗಳೇ ಹಬ್ಬಗಳಾಗಿ ಬಂದಿವೆ. ಮಹಾಕವಿ ಕಾಳಿದಾಸ ತನ್ನ ವಿಕ್ರಮೋರ್ವಸಿಯ ಕೃತಿಯಲ್ಲಿ 'ಉತ್ಸವ ಪ್ರೀಯಾಹಿ ಮನುಷ್ಯ' ಎಂದು ಹೇಳಿದ್ದನ್ನು ನೋಡಿದರೆ ಮಾನವ ಐಹಿಕ ಸುಖ ಸಂತೋಷ ಹಾಗೂ ಮುಕ್ತಿ ಸಾಧನೆಗಾಗಿ ಹಬ್ಬ ಆಚರಣೆಯಲ್ಲಿ ತೊಡಗಿದಂತೆ ತೋರುತ್ತದೆ. ಸೃಷ್ಠಕರ್ತನಾದ ಶಿವನು ಪ್ರಪಂಚದ ಸ್ಥಿತಿಗೆ ಗ್ಲಾನಿಯುಂಟಾದಾಗ, ನಾನಾ ರೂಪಗಳಿಂದ ಅವತರಿಸಿ ಜಗತ್ತನ್ನು ಕಾಪಾಡುವನೆಂದು ಹೇಳುತ್ತಾರೆ. ಈ ತೆರವಾದ ಸಮಾರಂಭದ ದಿನಗಳನ್ನು ಜನಪದರು ಹಬ್ಬ-ಹರಿದಿನಗಳೆಂದು ಕರೆಯುತ್ತ ಬಂದಿರಬೇಕು. ಮಾನವ ತನ್ನ ನಿತ್ಯ ಲೌಕಿಕ ಜೀವನದಿಂದ ಅಲೌಕಿಕ ಜೀವನದತ್ತ ಮುನ್ನೆಡೆಯಲು ಸನಾತನವಾಗಿ ಆಚರಿಸುತ್ತ ಬಂದ ಈ ಹಬ್ಬಗಳು ಸಹಾಯಕವಾಗಿವೆ. ಹೀಗಾಗಿ ಹಬ್ಬದ ದಿನವೆಂದರೆ ಪವಿತ್ರ ದಿನವಾಗಿದೆ. ಅದನ್ನು ಬಡವ-ಬಲ್ಲಿದರೆಲ್ಲರೂ ಹರುಷದಿಂದ ಆಚರಿಸುತ್ತ ಬಂದಿದ್ದಾರೆ.

ಸಾಮಾನ್ಯವಾಗಿ ಇತರ ಕಡೆಗಳಲ್ಲೆಲ್ಲ ಹಿಂದೂ ಮುಸಲ್ಮಾನರು ಆಚರಿಸುವ ಹಬ್ಬಗಳನ್ನೇ ಕೊಟ್ಟಲಗಿ ಗ್ರಾಮದಲ್ಲಿಯೂ ಆಚರಿಸುತ್ತಾರೆ. ಪ್ರಸ್ತುತ ಕೊಟ್ಟಲಗಿ ಗ್ರಾಮದಲ್ಲಿ ಆಚರಿಸುವ ಹಬ್ಬಗಳನ್ನು ಕುರಿತು ವಿವೇಚಿಸುವುದು ಇಲ್ಲಿನ ಮುಖ್ಯ ಉದ್ದೇಶವಾಗಿದೆ. ಆದರೆ ಆಚರಣಾ ರೀತಿಯಲ್ಲಿ ಅಲ್ಪಸ್ವಲ್ಪ ಬದಲಾವಣೆ ಕಂಡುಬರಬಹುದು. ಕಡ್ಡಾಯವಾಗಿ ತುಂಬಾ ವೈಶಿಷ್ಟ್ಯಪೂರ್ಣವಾಗಿ ಆಚರಿಸುತ್ತ ಬಂದಿರುವ ಹಬ್ಬಗಳೆಂದರೆ ಯುಗಾದಿ, ಕಾರಹುಣ್ಣಿಮೆ, ನಾಗರಪಂಚಮಿ, ದಸರಾ, ದೀಪಾವಳಿ, ಎಳ್ಳಮವಾಸಿ, ಮೋಹರಂ ಹಾಗೂ ಹೋಳಿ ಇತ್ಯಾದಿ.

ಯುಗಾದಿ

'ಯುಗಾದಿ' ಎಂಬ ಸಂಸ್ಕೃತ ಪದದ ತದ್ಭವ ರೂಪವೇ 'ಉಗಾದಿ'. ಸಂಸ್ಕೃತದಲ್ಲಿ 'ಯುಗ' ಎಂದರೆ ವರ್ಷ, 'ಆದಿ' ಎಂದರೆ ಆರಂಭ ಎಂದರ್ಥ. ಆದ್ದರಿಂದ (ಯುಗ+ಆದಿ) ಯುಗಾದಿಯೆಂದರೆ, ವರ್ಷಾರಂಭ ಅದು ಎಲ್ಲದಕ್ಕೂ ಹೊಸದಿನ. ನಿಸರ್ಗದಲ್ಲಿಯೂ ಗಿಡಮರ ಚಿಗಿತು ಹೊಸ ಜೀವಕಳೆ ಬಂದಂತಾಗುತ್ತದೆ. ಹೀಗಾಗಿ ನಮ್ಮ ಹಿಂದೂಗಳು ಕೂಡಾ 'ಯುಗಾದಿ ಉದ್ರಿ' ಎಂಬುದು ಜನಪದರಲ್ಲಿ ಬಹಳ ಪ್ರಚಲಿತವಿರುವ ಮಾತು. ಉಗಾದಿ ಬಂತೆಂದರೆ ಚಾದಂಗಡಿ, ಅರಬಿ ಅಂಗಡಿ, ಕಿರಾಣಿ ಅಂಗಡಿ, ಪಾನಬೀಡಿ ಅಂಗಡಿ ಮೊದಲಾವುಗಳು ಹಳೆಯ ಬಾಕಿ ಕೊಡುವುದು, ಹೊಸದಾಗಿ ಸಾಲ ಕೊಡುವುದು, ಪಡೆಯುವುದು, ಹೊಸ ಅಂಗಡಿಗಳನ್ನು ತೆರೆಯುವುದು, ಬಾವಿ ಹೊಡಿಸುವುದು, ಮನೆಯ ಹಾಗೂ ಗುಡಿಗಳ ತರ ತೆಗೆಯುವುದು ಹಲವಾರು ಕಾರ್ಯ ಕಲಾಪಗಳು ನಡೆಯುತ್ತವೆ.

ನನ್ನೂರಿನ ಜನಪದರಿಗೆ ಬಿಡುವಿನ ದಿನಗಳೆಂದರೆ ಹೆಚ್ಚು ಯುಗಾದಿ ಹಬ್ಬದ ಸಂದರ್ಭದ ದಿನಗಳೆನ್ನಬೇಕು. ಏಕೆಂದರೆ, ಹಿಂಗಾರಿ ಬೆಳೆಗಳ ಸುಗ್ಗಿಯೆಲ್ಲ ಮುಗಿದು ನಿಶ್ಚಿಂತನಾಗಿದ್ದಾಗ ಯುಗಾದಿ ದಿಡೀರನೆ ಬಂದು ಬಿಡುತ್ತದೆ. ಹಬ್ಬದ ಮುನ್ನಾದಿನ ಮನೆ–ಮಾರುಗಳಿಗೆ ಸುಣ್ಣ–ಬಣ್ಣ ಬಳಿಯುವುದು; ಗೋಡೆ–'ನೆಲಕ್ಕಿ'ಗಳನ್ನು ಸಾರಿಸುವುದು; ಮನೆಯ ಹಾಸಿಗೆ–ಹೊತಿಗೆಗಳನ್ನು ನೀರಲ್ಲಿ ಹಾಕುವುದು; ಬಾಗಿಲು ಕಿಡಕಿ ಎತ್ತಿನ ಗಾಡಿಗಳಿಗೆ ವಾರ್ನಿಸ್(ಬಣ್ಣ) ಹಚ್ಚುವುದು; ಮನೆ ಬಾಗಿಲಿಗೆ ಅಗಸಿ ಎಣ್ಣಿ ಹಚ್ಚಿ ತಳಿರು ತೋರಣ ಕಟ್ಟಿ ಶೃಂಗಾರ ಮಾಡುವುದು. ತಮ್ಮ ಸಾಕು ಪ್ರಾಣಿಗಳಾದ ಎತ್ತು, ಎಮ್ಮೆ, ಆಕಳುಗಳ ಮೈ ತೊಳೆಯುವುದು, ಇವೆಲ್ಲ ಅಮಾವಾಸಿಯ ದಿನ ಇಲ್ಲವೆ ಅದಕ್ಕೂ ಮುನ್ನಾ ದಿನ ನಡೆಯುವ ಕಾರ್ಯ ಚಟುವಟಿಕೆಗಳು. ಅಮವಾಸಿಯ ದಿನ ಬಹುಪಾಲು ಎಲ್ಲರೂ ತಮ್ಮ ಕೇರಿಯ, ಮನೆಯ, ಊರ, ಗ್ರಾಮ ದೇವತೆಗಳಿಗೆ ದೀಪ ಹಚ್ಚಿ, ಕಾಯಿ ಒಡೆದು ಬಾನ ಹಿಡಿಯುತ್ತಾರೆ. ಇದು ಉಗಾದಿಯ ಮೊದಲ ಘಟ್ಟ.

ಪಾಡ್ಯದ ದಿನ ಉಗಾದಿ ಆಚರಣೆಯ ಎರಡನೆಯ ಘಟ್ಟ. ಅಂದು ನಸುಕಿನಲ್ಲಿಯೇ ಎದ್ದು ತಲೆ, ಮೈ–ಕೈ ತುಂಬ ಎಣ್ಣೆ ಹಚ್ಚಿಕೊಂಡು ಬಿಸಿ ನೀರಿನಿಂದ ಸ್ನಾನ ಮಾಡುತ್ತಾರೆ. ಅದಕ್ಕೂ ಮೊದಲು ಆ ನೀರಿನಲ್ಲಿ ಮುರಿದು ತಂದ ಬೇವಿನ ತಪ್ಪಲು ಚಿಗುರು, ಹೂವನ್ನು ಹಾಕಿರುತ್ತಾರೆ. ಸ್ನಾನ ಮಾಡಿ ಬಳಿಕ ಅತ್ತು–ಕರೆದು, ಕಾಡಿ–ಬೇಡಿ ತಂದ, ಹೊಲಿಸಿದ ಹೊಸ ಬಟ್ಟೆಗಳನ್ನುಟ್ಟು ದೇವರು ದಿಂಡರುಗಳನ್ನು ಪೂಜಿಸಿ ಬೇವು–ಬೆಲ್ಲ ಕಚ್ಚುವರು. ಬೇವು–ಬೆಲ್ಲವನ್ನು ಅವರವರ ಶಕ್ತ್ಯಾನುಸಾರ ತಯಾರಿಸಿರುತ್ತಾರೆ. ಅಂದರೆ, ತುಂಬಾ ಬಡತನದಲ್ಲಿರುವವರು ಬೇವಿನ ಚಿಗುರು, ಬೆಲ್ಲ, ಹುಣಸಿ ಹುಳಿಯಷ್ಟನ್ನು ಬಿಟ್ಟರೆ ಬೇರೆ ಮತ್ತೇನನ್ನೂ ಕೂಡಿಸುವುದಿಲ್ಲ. ಆದರೆ ಸ್ವಲ್ಪ ಅನುಕೂಲಸ್ಥರು, ಸ್ಥಿತಿವಂತರು ಪುಟಾಣಿ ಹಿಟ್ಟಿಗೆ ಬೀಸಿದ ಸಕ್ಕರೆಯನ್ನು ಅಥವಾ ಬೆಲ್ಲವನ್ನು, ಬೇವಿನ ಚಿಗುರನ್ನು ಕೂಡಿಸಿ ಪಾಕ ಮಾಡುತ್ತಾರೆ. ಕೆಲವರು ಅದರಲ್ಲಿ ಕೊಬರಿ, ಕಸಕಸಿಯನ್ನ ಬೆರೆಸುವುದುಂಟು.

ಸ್ನಾನ, ಬೇವು ಪಾನ ಮುಗಿಯುವಷ್ಟರಲ್ಲಿ ಹೊತ್ತು ನೆತ್ತಿಗೇರುತ್ತ ನೆಲ ಕಾದು ಚರುಗುಟ್ಟುವ ಬಿಸಿಲು ಪ್ರಾರಂಭವಾಗಿರುತ್ತದೆ. ಅದು 'ಎಳ್ಳಾಮಾಸಿಗಿ ಎಳ್ಳಕಾಳಷ್ಟು, ಅವರಾತ್ರಿಗಿ ಅವರಿಕಾಳಷ್ಟು, ಶಿವರಾತ್ರಿಗಿ ಶಿವಶಿವ, ಉಗಾದಿಗಿ ಉಗಾ ಹಾಯುವಂತಿರುತ್ತದೆ ' ಬಿಸಿಲು. ಮನೆಯಲ್ಲಿ ಹೆಂಗಸುರು ಈ ಮೊದಲೆ ಕುದಿಯಲು ಹಾಕಿದ ಬೇಳೆಯನ್ನು ಬಸಿದು, ಕಟ್ಟಿನ ಸಾರು, ಅನ್ನ ಮಾಡಿ, ಬ್ಯಾಳಿ ಅರೆದು ಹೋಳಿಗಿ, ಕಡಬು ಮೊದಲಾದ ತಿಂಡಿ ತಿನಸುಗಳನ್ನು ತಯಾರಿಸುತ್ತಾರೆ. ಮತ್ತು ಶಿವರಾತ್ರಿಗೂ ಹಿಂದೆಯೇ ಮಾಡಿಟ್ಟ ಶ್ಯಾವಿಗೆಯನ್ನು ಬಸಿಯುತ್ತಾರೆ. ಉಗಾದಿಗೆ ಶ್ಯಾವಿಗೆಯ ಊಟ ಎಲ್ಲರ ಮನೆಯಲ್ಲಿ ಸರ್ವಸಾಧಾರಣವಾಗಿ ಇದ್ದೆ ಇರುತ್ತದೆ. ಈ ಚಿತ್ರಣ ಜನಪದ ತ್ರಿಪದಿಯಲ್ಲಿ ಸೊಗಸಾಗಿ ಮೂಡಿ ಬಂದಿದೆ.

"ಊರಾಗ ಉಗಾದಿ ಉಂಡ್ಹೋಗ ನನ್ನಣ್ಣ
ಶ್ಯಾಂವಿಗಾಗಿ ಗುಳಿಗಾಗಿ । ಮುಗಿಲಾಗ
ಬಾನ ಬಸಿಯೋದು ತಡವಲ್ಲ".

ಕಾರುಣಿ

"ಕಾರಹುಣ್ಣಿವಿ ಬಂತು ಕರಿ ಹರದ ನಮ್ಮ ಬಸವ
ಹಾರ್‍ಯಾಡತಾವ ಕರಿಮಾಡ । ಮುಗಿಲಾಗ

ನೀರ ನೀಡ್ಯಾವ ನೆಲ ತುಂಬ"

ನನ್ನೂರಿನ ಜನಪದರು ಆಚರಿಸುವ ಪುರುಷ ಪ್ರಧಾನವಾದ ಹಬ್ಬಗಳಲ್ಲಿ ಕಾರುಣಿಯೂ ಒಂದಾಗಿದೆ. ಕಾರಹುಣ್ಣಿಮೆಯ ಆಡುಮಾತಿನ ರೂಪವೇ ಕಾರುಣಿ. ಹುಣ್ಣಿಮೆಯ ದಿವಸ ಮುಂಜಾನೆ ಸೂರ್ಯೋದಯದೊಂದಿಗೆನೆ ರೈತರ ಕಾರ್ಯ ಚಟುವಟಿಕೆಗಳು ಸುರುವಾಗುತ್ತವೆ. ಒಕ್ಕಲುತನದ ಸಲಕರಣೆಗಳಾದ ಕುಂಟಿ, ಕೂರಗಿ, ಎಡಿದಿಂಡ, ಮಡಿಕೆ, ನೇಗಿಲ, ಕೊಡ್ಲಿ, ಕುಡಗೋಲ, ಕುರುಪಿ, ಗುದ್ಲಿ, ಟಿಕಾಂವ, ಬೆಡಗ, ಸಲ(ನ)ಕಿ, ಕುಂಟಿಕುಡಾ–ಬಳಿ, ಎಡಿಚಿಂಪ–ಬಳಿ, ಕೂರಗಿ, ಹೊಂಬ್ಲ, ಮಂಡಿ, ಕೊಡಲಿ, ಮೆಟ್ನಾಲಗಿ ಪಳಿ, ಕಾಲ, ರಾಗೋಲ, ಮಡಗುಂಟಿ ಮುಂತಾದವುಗಳನ್ನು ಸ್ವಚ್ಛವಾಗಿ ತೊಳೆದು ಚೀಲದ ತಟ್ಟು ಹಾಸಿ ಮನೆಯ ಮುಂದಿನ ಕಟ್ಟೆಗೆ ಇಡುತ್ತಾರೆ. ಇದು ಒಂದು ನಿಟ್ಟಿನ ಕೆಲಸವಾದರೆ, ಮತ್ತೊಂದೆಡೆ ಎತ್ತು, ಎಮ್ಮೆ, ದನಕರುಗಳಿಗೆ ಮೊಸರು, ಜೋಳದ ಹಿಟ್ಟಿನಿಂದ ತಯಾರಿಸಿದ ಅಂಬಲಿ 'ಗೊಟ್ಟಾ' ಹಾಕಿ ಮೈತೊಳೆದು ಬಿಸಲಿಗೆ ಕಟ್ಟುತ್ತಾರೆ. ಇನ್ನೊಂದೆಡೆಗೆ ಕಾರುಣಿಗೆ ಹದಿನೈದು ದಿನಕ್ಕೂ ಮೊದಲೇ ಪುಂಡಿ ನಾರು–ನೂಲಿನಿಂದ ಹೊಸೆಯಲು ಆರಂಭಿಸಿದ ಅಲ್ಪಸ್ವಲ್ಪ ಉಳಿದ ಲಡ್ಡು, ಹಣೆಗೊಂಡೆ, ಕೋಡಿನಗೊಂಡೆ, ಹಣೆಗ್ಗ, ಚಿಲಕಣ್ಣಿ, ಕೊಳಕಣ್ಣಿ, ಗಳೇದ ಮೀಣಿ, ಎಡಿಮಿಣಿ, ಮೇಲಗ್ಗ, ಕಟ್ನಾಣಿ ಮುಂತಾದವುಗಳನ್ನು ಮುಗಿಸಿ ಒಂದೊಂದು ತರಹದ ಬಣ್ಣ ಎದ್ದಿ ಬಿಸಲಿಗೆ ಹಾಕುತ್ತಾರೆ. ಎತ್ತುಗಳ ಮೈ ಆರಿವೆ ಎಂಬುದನ್ನು ತಿಳಿದುಕೊಂಡು ಕೋಡಿಗೆ ವಾರ್ನಿಸ್ (ಬಣ್ಣ) ಹಚ್ಚುತ್ತಾರೆ. ಕುಂಟಿ ಕುಡದ ಬಳಿ ಮತ್ತು ಉಳ್ಳಾಗಡಿಯಲ್ಲಿ ಕೊರೆದ ಚಿತ್ರದಿಂದ ಎತ್ತುಗಳ ಮೈಮೇಲೆ ತರತರದ ಚಿತ್ತಾರಗಳನ್ನು ತೆಗೆಯುತ್ತಾರೆ. ಇದನ್ನು ಅವರು ಗುಲ್ಲಾ ಕೊಡುವುದು ಎನ್ನುತ್ತಾರೆ. ನಂತರ ಹೊಸೆದು ಬಣ್ಣ ಎದ್ದಿದ ಅಥವಾ ಅಂದು ಅಗಸಿಯಲ್ಲಿ ಮಾರಲು ಬಂದ ಲಡ್ಡು, ಹೊಂಡೆ ಮೊದಲಾದವುಗಳನ್ನು ಕಟ್ಟಿ ಅಲಂಕರಿಸುತ್ತಾರೆ. ಎಮ್ಮೆಗಳ ಮೈಗೆ ಮಾತ್ರ ಸುಣ್ಣ 'ಹುಲಮಂಜಿನ' ಹಸ್ತ ತೆಗೆದು ಒಂದು ಕೋಡಿಗೆ ಸುಣ್ಣ, ಇನ್ನೊಂದು ಕೋಡಿಗೆ ಹುಲಮಂಜನ್ನು ಬಳಿಯುತ್ತಾರೆ. ಅದೇ ಸುಣ್ಣ– ಹುಲಮಂಜನ್ನು ತೆಗೆದುಕೊಂಡು ಈ ಮೊದಲು ತೊಳೆದಿಟ್ಟ ಒಕ್ಕಲುತನದ ಸಲಕರಣೆಗಳಿಗೆ ಹಚ್ಚುತ್ತಾರೆ. ಜೊತೆಗೆ ದನಕರುಗಳನ್ನು ಕಟ್ಟುವ ಗೂಟ, ಹಗ್ಗ, ಸರಪಳಿಗಳಿಗೆಲ್ಲ ಸವರುತ್ತಾರೆ ಮತ್ತು ಮನೆಯ ಬಾಗಿಲುಗಳಿಗೆ ನಾನಾ ಹಸಿರು, ನೀಲಿ ವಾರ್ನಿಸ್ ಅಗಸಿ ಎಣ್ಣಿಯನ್ನು ಹಚ್ಚಲಾಗದವರು ಹುಲಮಂಜನ್ನೇ ಹಚ್ಚುವರು. ಇಷ್ಟೆಲ್ಲ ಆಗುವುದರಲ್ಲಿ ಹೊತ್ತು ಹೊರಳಿರುತ್ತದೆ.

ಈ ಯಾವ ಕೆಲಸದಲ್ಲಿಯೂ ಹೆಚ್ಚಾಗಿ ಭಾಗವಹಿಸದೇ ಇದ್ದ ಹೆಂಗಸರು ಮಾತ್ರ ಸೂರ್ಯೋದಯಕ್ಕೂ ಮೊದಲೇ ಬ್ಯಾಳಿ ಹಾಕಿ ಹೊತ್ತ ಹೊರಳುವುದರೊಳಗಾಗಿ ಕರಿಗಡಬ, ಹೋಳಿಗಿ, ಅನ್ನ, ಸಾರ ಹಬ್ಬದೂಟ ಸಿದ್ಧಪಡಿಸಿರುತ್ತಾರೆ. ಎತ್ತು, ಎಮ್ಮೆ, ದನಕರುಗಳ ಕೋಡಿಗಾಗಿ ಗೋದಿ ಕನಕದಿಂದ ಮಾಡಿದ ಬಳಿಯನ್ನು ಕರದಿಡುತ್ತಾರೆ. ಆರತಿ ಬೆಳಗಿದ ತರುವಾಯ ಪ್ರತಿಯೊಂದರ ಕೋಡುಗಳಿಗೆ ಸಿಕ್ಕಿಸುತ್ತಾರೆ. ಎಡೆ ಹಿಡಿಯುವಾಗ ಒಂದೊಂದು ತುತ್ತನ್ನು ಪ್ರಾಣಿಗಳಿಗೆ ತಿನಿಸುತ್ತಾರೆ. ಆಮೇಲೆ ತಾವೂ ಊಟ ಮಾಡುತ್ತಾರೆ. ಇದು ಕಾರುಣಿ ಹಬ್ಬದ ಒಂದು ಮುಖವಾದರೆ ಇನ್ನೊಂದು ಮುಖ 'ಕರಿ ಹರಿಯುವುದು'. ಪಂಚಾಯತಿಯವರು ಸಿದ್ದೇಶ್ವರ ದೇವಸ್ಥಾನದಲ್ಲಿ ಹಾಗೂ ಬಸ್ ಸ್ಟ್ಯಾಂಡದ ಹತ್ತಿರ ಈ ಕರಿ ಹರಿಯುವ ಕಾರ್ಯಕ್ರಮ ನಡೆಯುತ್ತದೆ. ಪೂಜಾರಿ ಓಣಿಯವರು ಖೋಜನವಾಡಿ ರಸ್ತೆಯಲ್ಲಿ ಕರಿ

ಹರಿಯುತ್ತಾರೆ. ಹಾಗೂ ಇನ್ನುಳಿದ ಗ್ರಾಮದ ಜನ ಬಸ್ ಸ್ಟ್ಯಾಂಡನ ಹತ್ತಿರ ಕರಿ ಹರಿಯುವ ಕಾರ್ಯಕ್ರಮ ಜರುಗುತ್ತದೆ. ಅಲ್ಲಲ್ಲಿ ಬೇವಿನತೊಳ್ಳೆ, ನಡುವೆ ಕೊಬ್ಬರಿಯ ಗುಂಡೊಂದನ್ನು ಕಟ್ಟಿ, ಉದ್ದನೆಯ ಸರ ಮಾಡಿ, ಆ ಕಡೆಯೊಬ್ಬ ಈ ಕಡೆಯೊಬ್ಬ ಹಿಡಿದುಕೊಂಡು ನಿಲ್ಲುತ್ತಾರೆ. ಜನರೆಲ್ಲ 'ಕರಿ' ನೋಡಲು ಕಿಕ್ಕಿರಿದು ಸಂದಿಯ ಎರಡೂ ಬದಿಗೂ, ಮಾಳಿಗೆ ಏರಿ ಸಾಲಾಗಿ ನಿಂತಿರುತ್ತಾರೆ. ಕರಿ ಹರಿಯುವ ಎತ್ತುಗಳು ಬರುವುದಕ್ಕೂ ಮೊದಲು ಬೇರೆಯವರು ತಮ್ಮ ಹೋರಿ, ಎತ್ತುಗಳನ್ನು ಓಡಾಡಿಸುತ್ತಾರೆ. ಇನ್ನು ಕೆಲವರು ಹೇಳಿ ಮಾಡಿಸಿದಂತೆ ಕೂಡಿಸಿದ ಜೋಡಿ ಎತ್ತುಗಳನ್ನು ಹಲಗಿ–ಕರಡಿ ಮಜಲಿನೊಂದಿಗೆ ಮೆರೆಸುತ್ತ ಹೋಗುತ್ತಾರೆ. ಇದಾದ ಮೇಲೆ ಊರ ಪ್ರಮುಖರೊಂದಿಗೆ ಮಜಲಿನವರು 'ಚಾಜದ ಎತ್ತು'ಗಳನ್ನು ಊದುತ್ತ–ಬಾರಿಸುತ್ತ ಅಗಸಿಯಲ್ಲಿ ಹಾಯ್ದು ಕರಿ ಹರಿಯಲು ಹಿಡಿದುಕೊಂಡು ಹೋಗುತ್ತಿರುವಾಗ ಈ ವರ್ಷ ನಮ್ಮ ಎತ್ತೇ ಕರಿ ತರಬೇಕೆಂಬ ಹಂಬಲವುಳ್ಳವರೂ ಕೂಡಾ ತಮ್ಮ ಎತ್ತುಗಳನ್ನು ಹಿಡಿದುಕೊಂಡು ಬಂದು ಸೇರುತ್ತಾರೆ. ಈ ರೀತಿಯಾಗಿ ಬರಬೇಕಾದ ಎತ್ತುಗಳೆಲ್ಲ ಬಂದವೆಂದು ತಿಳಿದಾಗ ಸಾಲಾಗಿ ನಿಲ್ಲಿಸಿ, ಮುತ್ತೈದೆಯರಿಂದ ಜೋಡಾರತಿ ಬೆಳಗಿಸಿ ಪಂಚರ ಅಪ್ಪಣೆಯಂತೆ ಒಮ್ಮೆಲೆ ಬಿಟ್ಟುಬಿಡುತ್ತಾರೆ. ಅವರವರ ಎತ್ತಿನ ಬಾಲ, ಹಗ್ಗ ಹಿಡಿದುಕೊಂಡು ನಾ ಮುಂದು ನೀ ಮುಂದೆಂದು ಓಡಿಸುತ್ತ ಬರುತ್ತಾರೆ. ಕೆಲವರು ಸುಮ್ಮನೆ ಬಿಟ್ಟು ಹಿಂದೆ ಸರಿಯುತ್ತಾರೆ. ಎತ್ತುಗಳು ಓಡುತ್ತ ಬರುವಾಗ ಸಂದಿಗುಂಟ ನಿಂತು ಹುಯ್ ಎಂದು ಕೇಕೆ ಹಾಕುತ್ತಾರೆ. ಈ ಚೀರಾಟಕ್ಕೆ ಬೆದರಿ ಕೆಲವು ಸಂದಿ ಬಂದತ್ತ ಓಡುತ್ತವೆ. ಕೆಲವು ಹಿಂದಕ್ಕೆ ಹೊರಳಿ ಓಡುತ್ತವೆ. ಆದರೆ, ಧೈರ್ಯ ಗುಂದದ ಎತ್ತುಗಳು ಮಾತ್ರ ಯಾವುದನ್ನು ಲೆಕ್ಕಿಸದೆ ಓಡಿಬರುತ್ತವೆ. ಕರಿಹರಿದವರ ಹತ್ತಿರ ಬರಲು ಅವರು ಕರಿ ಹರಿದು ಬಿಡುತ್ತಾರೆ. ಯಾರ ಎತ್ತು ಮುಂದೆ ಬಂದಿರುತ್ತದೆಯೋ ಅವರ ಎತ್ತು 'ಕರಿ ತಂತು' ಎಂದು ಹೇಳುತ್ತಾರೆ. ಈ ಮಾತುಗಳನ್ನಾಡುತ್ತ ಕರಿ ತಂದ ಎತ್ತಿನ ಮನೆಯ ಕಡೆಗೆ ಜನರೆಲ್ಲ ಬಂದು ಸೇರುತ್ತಾರೆ. ಕರಿ ತಂದ ಎತ್ತಿನೊಂದಿಗಿರುವ ಅದೊಂದು ಎತ್ತನ್ನು ಹಿಡಿದುಕೊಂಡು ಮನೆಯಿಂದಲೇ ಆರಂಭಗೊಂಡ ಮೆರವಣಿಗೆ ಊರ ಪ್ರಮುಖ ಬೀದಿ ಹಾಗೂ ಅಗಸಿಯಲ್ಲಿ ಹಾಯ್ದು ಮತ್ತೆ ಮನೆ ತಲುಪುತ್ತದೆ. ಬಂದವರಿಗೆಲ್ಲ ಚಾ–ಚೋಡಾದ ವ್ಯವಸ್ಥೆ ಮಾಡಿ ಮಜಲಿನವರಿಗೆ, ಹಲಗಿ, ಕೊಂಬಿನವರಿಗೆ ಖುಷಿ ಕೊಟ್ಟು ಕಳಿಸುವುದರೊಂದಿಗೆ ಕಾರುಣಿ ಹಬ್ಬದಾಚರಣೆ ಕೊನೆಗೊಳ್ಳುತ್ತದೆ.

'ಕಾರುಣಿ'ಯ ಹಿಂದಿನ ದಿನ ಹೊನ್ನುಗ್ಗಿಯಾದರೆ ಮರುದಿನ ಕೆಟ್ಟ ಕರಿ. ಒಂದು ಶುಭದಿನ ಮತ್ತೊಂದು ಅಶುಭ ದಿನ. ಹೊನ್ನುಗ್ಗಿಯ ದಿನ ಮನೆಗೆ ಹೊಸದಾಗಿ ಸೊಸೆಯನ್ನು ಕರೆತರುವುದು, ಆಳುಗಳು ಜೀತಕ್ಕೆ ಹೋಗುವುದು ಇತ್ಯಾದಿ ಕಾರ್ಯಗಳು ನಡೆಯುತ್ತವೆ. ಕರಿಯ ದಿನದಂದು ಹೊಲೆಯರು, ಮಾದಿಗರು, ಕೊರವರು ಮೊದಲಾದ ಜನಪದ ವರ್ಗದವರು ಬೇಟೆಯಾಡಲು ಹೋಗುತ್ತಾರೆ. ಬೇಟೆಯಾಡದೆ ಮನೆಗೆ ಬರುವುದಿಲ್ಲ. ಬೇಟೆ ಸಿಕ್ಕ ನಂತರ ಅಗಸಿಯಲ್ಲಿ ಮೆರೆಸುತ್ತ ಬರುತ್ತಾರೆ.

ನಮ್ಮೂರಿನಲ್ಲಿರುವಂತೆ ನೆರೆಯ ಹಳ್ಳಿಯಲ್ಲೇಕೆ ಕರಿ ಇಲ್ಲವೆಂದು ಕೇಳಿದರೆ, ಕರಿ ತಂದ ಎತ್ತು ಹಾಗೇಯೇ ಓಡಿ ಮುಂದಿನೂರಿನ ಸೀಮೆ ಸೇರಿತೆಂದರೆ ಅಂದಿನಿಂದ ಆ ಊರಿನ ಕರಿ ಎತ್ತು ಹೋದ ಊರಿಗೆ ಸೇರಿದಂತೆ. ಮತ್ತು ಪ್ರತಿವರ್ಷ ತಮ್ಮೂರಿನಲ್ಲಿ ಕರಿ ಹರಿಯದೇ

ಆ ಹಳ್ಳಿಯಲ್ಲಿಯೇ ಕರಿ ಹರಿಯಬೇಕಾಗುತ್ತದೆ. ಈ ಕಾರಣವಾಗಿಯೇ ಕೆಲವರು ಕರಿತರುವ ಎತ್ತಿನ ಬೆನ್ನು ಬಿಡದೆ ಓಡುತ್ತಾರೆ.

ಎಳ್ಳಾಮಾಸಿ

ಒಕ್ಕಲಿಗ ತಾನು ಬೆಳೆಯುವ ಬೆಳೆ ಹಾಗೂ ಭೂಮಾತೆಯನ್ನು ಆರಾಧಿಸುವ ಹಬ್ಬಗಳಲ್ಲಿ ಎಳ್ಳ ಅಮವಾಸ್ಯೆ ಪ್ರಮುಖವಾದುದು. ಬಿಳಿಜೋಳ ಆಗತಾನೆ ಹೊಡೆ ಬಿಚ್ಚಿಕೊಂಡು ಸುಂಕಗಟ್ಟಿ ಹಾಲಗಾಳ ಹಿಡಿಯುತ್ತಿರುತ್ತದೆ. ಅಮವಾಸಿಯ ದಿನದಂದು ಎತ್ತುಗಳ ಮೈ ತೊಳೆದು ಜೂಲಾ ಹಾಕಿ ಕೋಡಿಗೆ ರಿಬ್ಬನ, ಗೊಂಡೆ, ಕೊರಳಿಗೆ ಗೆಜ್ಜಿ ಸರ ಕಟ್ಟಿ ಅದ್ದೂರಿಯಿಂದ ಶೃಂಗಾರ ಮಾಡಿರುತ್ತಾರೆ. ಎಳ್ಳಾಮಾಸಿಗೆ ಎಳ್ಳಕಾಳಷ್ಟು ಬಿಸಿಲು ಪ್ರಾರಂಭವಾಗಿರುವುದರಿಂದ ಗಾಡಿಗೆ ಸವಾರಿ ಕಟ್ಟುತ್ತಾರೆ. ನಸುಕಿನಲ್ಲಿಯೇ ಎದ್ದ ಹೆಂಗಸರು ಎಳ್ಳು ಹಚ್ಚಿದ ರೊಟ್ಟಿ, ಎಣ್ಣಿಗಾಯಿ, ಚಟ್ನಿ, ಹುಳಿಬಾನ, ಹೋಳಿಗಿ, ಹುಗ್ಗಿ, ಕಡಬ, ಅನ್ನ, ಸಾರ ಮೊದಲಾದ ತಿಂಡಿ ತಿನಿಸುಗಳನ್ನು ಮಾಡಿರುತ್ತಾರೆ. ಬಿಸಿಲಿಗೆ ಮೊದಲು ಗಾಡಿ ಹೂಡಿ ಬುತ್ತಿ ನೀರ ಇಟಗೊಂಡು ಓಣಿಯವರನ್ನು, ಸಂಬಂಧಿಕರನ್ನು ಕರೆದುಕೊಂಡು ಎಲ್ಲರೂ 'ಗಾಡಿ'ಯನ್ನು ಹತ್ತಿ ತಮ್ಮ ಹೊಲಗಳಿಗೆ ಹೋಗುತ್ತಾರೆ.

ಹೊಲದ ಬಲಭಾಗದ ಮೂಲೆಯೊಂದರಲ್ಲಿ ಗಿಡದ ನೆರಳು ನೋಡಿ ಗಾಡಿ ಕೊಳ್ಳ ಹರಿಯುತ್ತಾರೆ. ಬಂಡಿಯಲ್ಲಿಯ ಬುತ್ತಿ–ನೀರನ್ನು ಇಳಿಸಿ, ಬನ್ನಿ ಗಿಡದ ಕೆಳಗೆ ಅಥವಾ ಹೊಲದ ಮೂಲೆಯಲ್ಲಿ ಐದು ಚಪ್ಪಟೆಯಾಕಾರದ ಕಲ್ಲುಗಳನ್ನಿರಿಸಿ ಅವಕ್ಕೆ ನೀರು ಸುರವಿ, ವಿಭೂತಿ–ಕುಂಕುಮ ಹಚ್ಚಿ, ಕಾಯಿ ಒಡೆದು, ಎಡೆ ಹಿಡಿಯುತ್ತಾರೆ. ಮತ್ತೊಂದೆಡೆಯನ್ನು (ಮೊಸರನ್ನ) ಒಬ್ಬನ ಕೈಯಲ್ಲಿ ಕೊಟ್ಟು ಅವನೊಂದಿಗೆ ತಂಬಿಗೆ ನೀರು ಹಿಡಿದುಕೊಂಡು ಹೊಲದ ನಾಲ್ಕು ಮೂಲೆಗೂ ಮತ್ತು ಹೊಲದ ತುಂಬ ಒಬ್ಬ 'ಹುಲಿಗೊ', ಮತ್ತೊಬ್ಬ 'ಚೆರಗೊ', 'ಚೆಜ್ಜರೊಟ್ಟಿ ಚವಳೆಕಾಯಿ', 'ದುಡ್ಡಿಗಿಸೇರ ಬದ್ನಿಕಾಯಿ', ಎಂದು ಆಹಾರ ನೀರನ್ನು ಸಿಂಪಡಿಸುತ್ತ ಚರಗ ಚೆಲ್ಲುತ್ತಾರೆ. ಅನಂತರ ಒಂದೆಡೆ 'ಬಾಟಿ'ಯನ್ನು ಕಿತ್ತಿ ಎತ್ತುಗಳಿಗೆ ಹಾಕಿ ಎಲ್ಲರೂ ಗುಂಪಾಗಿ ಕುಳಿತು ಊಟ ಮಾಡುತ್ತಾರೆ. ಗಿಡದ ನೆರಳಿದ್ದರೆ ಅಲ್ಲಿಯೇ ವಿಶ್ರಾಂತಿ ತೆಗೆದುಕೊಳ್ಳುತ್ತಾರೆ. ಇಲ್ಲವಾದರೆ ಒಂದು ಪೆಂಡಿ ಬಾಟಿಯನ್ನು ಕಿತ್ತಿಕೊಂಡು ಗಾಡಿಯಲ್ಲಿಟ್ಟುಕೊಂಡು ಹಾಡುತ್ತ ಮನೆಗೆ ಬರುತ್ತಾರೆ. ಈ ಸಂದರ್ಭದಲ್ಲಿ ಬಹುತೇಕವಾಗಿ ಎಲ್ಲರೂ ಹೊಸ ಬಟ್ಟೆಗಳನ್ನು ಉಟ್ಟಿರುತ್ತಾರೆ. ಅದರಲ್ಲೂ ಹೆಂಗಸರು ಆಭರಣಗಳನ್ನಿಟ್ಟು 'ಹಳ್ಳಿರಂಭೆ ಬೊಂಬೆ'ಯಂತಾಗಿರುತ್ತಾರೆ.

ಜೋಕಾಲಿ ಹಬ್ಬ

ಸ್ತ್ರೀ ಪ್ರಧಾನವಾದ ಹಲವಾರು ಹಬ್ಬಗಳಲ್ಲಿ ಜೋಕಾಲಿ ಹಬ್ಬವೂ ಒಂದು. ನಾಗರ ಅಮಾಸಿ, ನಾಗರ ಪಂಚಮಿ ಎಂದು ಬೇರೆ ಬೇರೆ ಹೆಸರುಗಳಿಂದ ಕರೆಯುವ ಈ ಹಬ್ಬದಲ್ಲಿ ನಾಗಪ್ಪನಿಗೆ ಹಾಲೆರೆಯುವುದು ಹಾಗೂ ಜೋಕಾಲಿ ಪ್ರಮುಖವಾಗಿರುವುದರಿಂದ 'ನಾಗರ ಪಂಚಮಿ' ಅಥವಾ 'ಜೋಕಾಲಿ ಹಬ್ಬ' ಎಂದೂ ಕರೆಯುವುದು ರೂಢಿ. 'ನಾಗರ ಪಂಚಮಿ ನಾಡಿಗೆ ದೊಡ್ಡದು', 'ಜೋಕಾಲಿ ಆಡೂನ ಬಾರ ಜತುನದಿಂದ' ಎಂದು ಭಜನಾ ಪದಗಳಲ್ಲಿ ಮತ್ತು–

"ಪಂಚಮಿ ಬರಲೆವ್ವ ಮಂಚ ಕಟ್ಟಲಿ ಮನಿಗಿ
ಕೆಂಚ ಗೆಳತೇರು ಕೂಡಲಿ । ನಮ್ಮ ಜೀಕ
ಮಿಂಚ ಮುಗಿಲೇರಲಿ"

ಎಂದು ಜನಪದರು ಹಾಡಿದ್ದಾರೆ. ಮದುವೆಯಾಗಿ ಗಂಡನ ಮನೆಗೆ ಹೋದ ಹೆಣ್ಣು ಮಗಳು–

ಆಷಾಢ ಮಾಡ ಬಂದಿತವ್ವ
ಖಾಸ ಅಣ್ಣ ಬರಲಿಲ್ಲ ಕರಿಯಾಕ
ಎಷ್ಟ ನೋಡಲೆವ್ವ ಅಣ್ಣನ ದಾರಿ । ಸುವ್ವನಾರಿ । ಸುವ್ವನಾರಿ"

ಎಂದು ಈ ಪರಿಯಾಗಿ ಪರಿತಪಿಸಬೇಕಾದರೆ ಇದರ ಹಿನ್ನೆಲೆ ಏನಿರಬೇಕು ? ಎಂಬುದನ್ನು ಆಲೋಚಿಸಬೇಕಾಗಿದೆ.

'ನಾಗಚವತಿ' ಎಂಬ ಹೆಸರು

ಶ್ರಾವಣ ಶುದ್ಧ ಪಂಚಮಿಯ ದಿವಸವೇ ಈ ನಾಗರಪಂಚಮಿ ಹಬ್ಬವನ್ನು ಆಚರಿಸುವುದಕ್ಕೆ ಖಚಿತವಾದ ಆಧಾರಗಳು ಸಿಗದೆ ಹೋದರೂ ಜನಪದ ಕಥೆಯೊಂದು ಇದಕ್ಕೆ ಸಾಕ್ಷಿ ನುಡಿಯುತ್ತದೆ.

ರೈತನೊಬ್ಬನು ಹೊಲದಲ್ಲಿ ನೇಗಿಲು ಹೊಡೆಯುತ್ತಿರುವಾಗ ನೇಗಿಲ ಪಾಳಿಗೆ ಸಿಲುಕಿ ಹಾವಿನ ಮರಿಗಳೆಲ್ಲ ಸಾಯಲು ತಾಯಿ ಹಾವು ಸಿಟ್ಟಿಗೆದ್ದು, ಆ ದಿನ ರಾತ್ರಿ ರೈತನನ್ನೊಳಗೊಂಡು ಮನೆಮಂದಿಯನ್ನೆಲ್ಲ ಕಡಿದು ಸಾಯಿಸಿದರೂ, ಅದರ ರೋಷ ಕಡಿಮೆಯಾಗುವುದಿಲ್ಲ, 'ಹಾವಿನ ರೋಷ ಹನ್ನೆರಡು ವರುಷ' ವೆಂಬಂತೆ ಸಿಟ್ಟನ್ನಿರಿಸಿಕೊಂಡ ಹಾವು ಪರ ಊರಿನಲ್ಲಿಗೆ ಈ ಮನೆಯ ಹೆಣ್ಣು ಮಗಳೊಬ್ಬಳು ಸೊಸೆಯಾಗಿ ಹೋಗಿದ್ದನ್ನು ತಿಳಿದು, ಅವಳನ್ನು ಕಚ್ಚಿ ಕೊಲ್ಲಲು ಹೋಯಿತು. ಅದೇ ಸಮಯದಲ್ಲಿ ಆ ಹೆಣ್ಣು ಮಗಳು ಮಣ್ಣಿನ ನಾಗಪ್ಪನನ್ನು ಮಾಡಿ ಹಾಲೆರೆಯುತ್ತಿರುವುದನ್ನು ಕಂಡು ಸಮಾಧಾನವಾಯಿತು. ತಾನು ಆಕೆಯ ತವರುಮನೆಯಲ್ಲಿ ರೈತನ ಕುಟುಂಬದವರನ್ನೆಲ್ಲ ಕಚ್ಚಿ ಸಾಯಿಸಿ ಬಂದ ವಿಷಯ ತಿಳಿಸಲು ಆಕೆ ಗೋಗರೆಯತ್ತಾಳೆ. ತನ್ನ ಕರುಳ ಬಳ್ಳಿಯನ್ನೆಲ್ಲ ಬದುಕಿಸುವಂತೆ ನಾಗರಾಜನಲ್ಲಿ ಮೊರೆಯಿಡಲು, ಅವನಿಗೆ ಕರುಣೆ ಬಂದು ಅಲ್ಲಿಗೆ ಹೋಗಿ ಮತ್ತೆ ವಿಷವನ್ನೆಲ್ಲ ಹೀರಿಕೊಂಡು ಎಲ್ಲರನ್ನೂ ಬದುಕಿಸುತ್ತದೆ, ಆಗ ತವರಿಗೆ ಬಂದ ಹೆಣ್ಣು ಮಗಳು ನಾಗಪ್ಪನನ್ನು ಪೂಜಿಸಿದಳು. ಅಂದಿನಿಂದಲೇ ನಾಗಪೂಜೆ ಆರಂಭಗೊಂಡು 'ನಾಗಚವತಿ' 'ನಾಗಪಂಚಮಿ' ಎಂಬ ಹೆಸರು ಆಚರಣೆಯಲ್ಲಿ ಬಂದು ಹಬ್ಬವಾಗಿ ಪರಿಣಮಿಸಿದೆ. ಈ ಕಾರಣವಾಗಿಯೇ ಹೆಣ್ಣು ಮಕ್ಕಳನ್ನು ತಪ್ಪದೇ ನಾಗರಪಂಚಮಿಗೆ ತವರುಮನೆಗೆ ಕರೆತರುತ್ತಾರೆ.

ಹಬ್ಬ ಇನ್ನೂ ಎಂಟು ಹತ್ತು ದಿನ ಇದೆ ಎನ್ನುವಾಗಲೇ ಗಂಡನ ಮನೆಗೆ ಹೊಸದಾಗಿ ಹೋದ ಮತ್ತು ಒಂದೆರಡು ಹಡೆದ ಹೆಣ್ಣು ಮಕ್ಕಳನ್ನು ತಪ್ಪದೆ ತವರುಮನೆಗೆ ಕರೆತರುತ್ತಾರೆ. ತವರಿಗೆ ಬಂದ ಹೆಣ್ಣು ಮಕ್ಕಳೆಲ್ಲ ನಾಗಪ್ಪನ ಪೂಜೆಗಾಗಿ ಎಳ್ಳು ಹುರಿಯುವುದು, ಅಳಿಟ್ಟ–ತಂಬಿಟ್ಟ ಮಾಡುವುದು, ಕರದಂಟ, ಸಕ್ಕರೆ–ಬೆಲ್ಲ ರವೆ ಉಂಡಿಗಳನ್ನು ಕಟ್ಟುವುದು, ಕರ್ಚಿಕಾಯಿ ಕರೆಯುವುದುಮುಂತಾದ ಆಹಾರ ಪದಾರ್ಥಗಳನ್ನು ತಯಾರಿಸುತ್ತಾರೆ. ನಾರಪಂಚಮಿಯ ಮೊದಲ

ದಿನ ನಾಗರ ಅಮವಾಸಿ. ಅದನ್ನು 'ರೊಟ್ಟಿ ಪಂಚಮಿ' ಎನ್ನುವರು. ಎರಡನೆಯ ದಿನ 'ನಾಗಚವತಿ' ಮೂರನೇಯ ದಿನವೇ 'ನಾಗರ ಪಂಚಮಿ' ಅಮವಾಸಿಯ ದಿನ ಬಂಧು–ಬಳಗದೊಂದಿಗೆ ಹೆಣ್ಣು ಮಕ್ಕಳು 'ಹಣತೆ ಪೂಜೆಯನ್ನು' ನೆರವೇರಿಸುವರು. ಎರಡನೆಯ ದಿನವೇ ನಾಗಚೌತಿ. ಅಂದು ಹೆಣ್ಣು ಮಕ್ಕಳೆಲ್ಲ ತಲೆಯ ಮೇಲೆ ನೀರು ಹಾಕಿಕೊಂಡು ಹೊಸ ಬಟ್ಟೆಯನ್ನುಟ್ಟು ಸಮೀಪದ ಹುತ್ತಿನಲ್ಲಿಗೆ ಹೋಗಿ ಪೂಜಿಸಿ ಅದೇ ಮಣ್ಣನ್ನು ತಂದು ನಾಗಪ್ಪನನ್ನು ಮಾಡಿ, ಔಡಲ ಇಲ್ಲವೆ ಎಕ್ಕಿಯ ಎಲೆಯಲ್ಲಿ ಇಟ್ಟು ಅರಿಷಿಣ, ಕುಂಕುಮ, ವಿಭೂತಿ ಹಚ್ಚಿ ಹೂ ಹಾಕಿ ಶೃಂಗಾರ ಮಾಡುವರು. ಹಂಗನೂಲ ಸುತ್ತಿ, ಕೊಕ್ಕಾ ಬತ್ತಿ, ಕೋಡಗ ಬತ್ತಿಯನ್ನು ಹಚ್ಚುತ್ತಾರೆ. ಉಂಡಿ, ಕಡಬ, ಅಳ್ಳಿಟ್ಟ, ಎಳ್ಳಿ ನೆಡೆ ಹಿಡಿದು ಮನೆ ಮಂದಿಯೆಲ್ಲ ಕರಕಿ ಪತ್ತರಿಯಿಂದ ನಾಗಪ್ಪನಿಗೆ ಹಾಲೆರೆಯತ್ತ ದೇವರದಿಂಡರ ಪಾಲ, ತಂದೆ–ತಾಯಿ ಪಾಲ, ಗುರು–ಹಿರಿಯರ ಪಾಲ, ಎಲ್ಲ ಬಂಧು ಬಳಗದವರ ಪಾಲೆಂದು ಹಾಲೆರೆಯುತ್ತಾರೆ. ಅನಂತರ ಆರತಿ ಬೆಳಗಿ ಕಾಯಿ ಒಡೆದು ಪೂಜಿಸುತ್ತಾರೆ. ನಮ್ಮೂರಿನ ಈಗ ಹುತ್ತಗಳು ಇಲ್ಲದಿರುವದರಿಂದ ಎರಡು ಮೂರು ಓಣಿಗಳಲ್ಲಿ ಶ್ರೀ ಕುಂಬಾರ ಸಿದ್ದಪ್ಪನವರು ತಯಾರಿಸಿದ ಕೆಸರಿನ ದೊಡ್ಡ ನಾಗಪ್ಪನ ಮೂರ್ತಿಗಳಿಗೆ ಬಹುಪಾಲ ಜನರು ಹಾಲೆರೆಯುತ್ತಾರೆ. ಹೇಗಾದರಾಗಲಿ ನಾಗಪೂಜೆ ಮಾತ್ರ ತಪ್ಪುವದಿಲ್ಲ. ಎಡೆ ಹಿಡಿಯವುದು ನಿಂತಿಲ್ಲ.

ನಾಗಪೂಜೆಯ ಮರುದಿನ ಜೋಕಾಲಿ ಆಡುವ ಸಂಭ್ರಮ. ಸಾಮಾನ್ಯವಾಗಿ ಅಂದು ಹೆಂಗಸರು–ಗಂಡಸರು ಸಣ್ಣ ಹುಡುಗರೆಲ್ಲ ಹೊಸ ಅರಿವೆಯನ್ನುಟ್ಟು ಕೇರಿಯಲ್ಲಿ ದೊಡ್ಡ ದೊಡ್ಡ ಮರದ ಟೊಂಗೆಗಳಿಗೆ, ಇಲ್ಲವೆ ಕಂಬ ನೆಟ್ಟು ಕಟ್ಟಿದ ಅಂತರ ಜೋಕಾಲಿಯನ್ನಾಡಲು ಬರುತ್ತಾರೆ. ಗಂಡಸರಂತೆ ಕೆಲ ಹೆಂಗಸರು ನಿಂತೇ ಜೋಕಾಲಿಯಾಡುತ್ತಾರೆ. ಕೆಲವರು ಕುಂತು ತೂಗಿಸಿಕೊಳ್ಳುವುದುಂಟು. ಹೆಂಗಸರು ಕುಂತಾಡಲಿ ಇಲ್ಲವೆ ನಿಂತಾಡಲಿ ಜೋಕಾಲಿ ಆಡುವುದಕ್ಕೂ ಮೊದಲು ಗಂಡನ ಹೆಸರು ಹೇಳಬೇಕಾದದು ಕಡ್ಡಾಯ. ಹೊಸದಾಗಿ ಮದುವೆಯಾದವರಿಗೆ ಗಂಡನ ಹೆಸರ್ಹೇಳಲು ತುಂಬಾ ನಾಚಿಕೆ. ಇದೊಂದು ರೀತಿಯ ಮಜುಗುರದ ಸನ್ನಿವೇಶ. ಜೋಕಾಲಿಯನ್ನು ಮುಗಿಲು ಮುಟ್ಟುವಂತಾಡುವಾಗ ಜನಪದರು ತಮ್ಮ ಆಸರಿಕೆ–ಬೇಸರಿಕೆಗಳನ್ನು ಕಳೆದುಕೊಳ್ಳುತ್ತಾರೆ ಮತ್ತು ವಾರಗಿಯ ಗೆಳತಿಯರೆಲ್ಲ ಗಂಡನ ಮನೆಯಿಂದ ಬಂದಿರುವುದರಿಂದ ಅಲ್ಲಿಯ ಮತ್ತು ತಮ್ಮ ಬಾಲ್ಯದ ನೆನಪುಗಳನ್ನು ಮರುಕಳಿಸಿಕೊಳ್ಳಲು ಇದೊಂದು ಉತ್ತಮ ಅವಕಾಶವಾಗಿದೆ. ಅಂದು ಉಂಡುಟ್ಟು ಬಲು ಹುರುಪಿನಿಂದ ಜೋಕಾಲಿ ಆಡುವುದರೊಂದಿಗೆ ಹಬ್ಬ ಮುಗಿಯುತ್ತದೆ. ಆದರೆ ಜೋಕಾಲಿ ಆಡುವುದು ಮಾತ್ರ ಪ್ರತಿ ಸರಣ (ಶ್ರಾವಣ) ಸೋಮವಾರದಿಂದ ಕಡಿ ಸೋಮವಾರದವರೆಗೆ ಇರುತ್ತದೆ.

ಜೋಕಾಲಿ ಹಬ್ಬ ಒಂದೆಡೆ ಈ ರೀತಿ ಉಂಡುತಿಂದು ನಡೆದಿದ್ದರೆ, ಇನ್ನೊಂದೆಡೆ ಕೆಲವು 'ಜೂಜಿನಾಟಗಳು' 'ಶಕ್ತಿ ಪ್ರದರ್ಶನಗಳು' ನಡೆದಿರುತ್ತವೆ. ಇವುಗಳೊಂದಿಗೆ ಜೋಕಾಲಿ ಹಬ್ಬ ಮುಗಿದಂತೆ.

ಬನ್ನಿ ಹಬ್ಬ

ನಮ್ಮ ನಾಡಿನಲ್ಲಿ ತುಂಬಾ ವಿಚಿತ್ರವಾದ ಹಬ್ಬಗಳಿವೆ. ಅಂದರೆ, 'ಹೋಳ್ಗಿ ತಿಂದು ಹೊಯ್ಕೊಳೋದು ಹೋಳಿಹಬ್ಬ, ಮನಿ ಕೂಳ ತಿಂದ ಮಂದಿಕಾಲ ಹಿಡಿಯೋದು ಮಾನವಮಿ

ಹಬ್ಬ' ಇದನ್ನು ಬನ್ನಿ, ನವರಾತ್ರಿ, ಮಾನಾಮಿ, ದಸರಾ, ವಿಜಯದಶಮಿ, ನಾಡಹಬ್ಬ ಎಂದೆಲ್ಲಾ ಕರೆಯುತ್ತಾರೆ. ಸಾಮಾನ್ಯವಾಗಿ ಪ್ರತಿ ಹಬ್ಬಕ್ಕೂ ಒಂದು ಪೌರಾಣಿಕ ಇತಿಹಾಸವಿರುವಂತೆ ಬನ್ನಿ ಹಬ್ಬಕ್ಕೂ ಹಿನ್ನೆಲೆಯಿರುವುದು ಜನಪದ ಹಾಡುಗಳಿಂದ ತಿಳಿದು ಬರುತ್ತದೆ.

"ಕಲ್ಲ ಕಡವ ಮಾಡಿ ಮುಳ್ಳ ಶ್ಯಾಂವಿಗೆ ಮಾಡಿ
ಬನ್ನೀ ಎಲಿಯಾಗ ಎಡಿಮಾಡಿ । ಪಾಂಡವರು
ಉಂಡ ಹೋಗ್ಯಾರೋ ವನವಾಸೋ"
"ಬನ್ನೀಯ ಗಿಡದಾಗ ಬಾಣ ಇಟ್ಟೇವಿ ತಾಯಿ
ಯಾರ ಬಂದರೂ ಕೊಡಬ್ಯಾಡ । ಹಡದವ್ವ
ಅರಜುನ ಬಂದರ ಕೊಡಬೇಕ"

ಎಂಬ ಜನಪದ ತ್ರಿಪದಿಗಳು ಬನ್ನಿ ಪೂಜೆಯ ಪ್ರಾಚೀನತೆಯನ್ನು ಮಹಾಭಾರತದ ಕಾಲಕ್ಕೆ ಒಯ್ಯುತ್ತವೆ. ಮಹಾನವಮಿಯಲ್ಲಿ ಬನ್ನಿಗಿಡವನ್ನು ಪೂಜಿಸಿ ಒಬ್ಬರಿಗೊಬ್ಬರು ಬನ್ನಿಯನ್ನು ಕೊಡುಕೊಳ್ಳುವಿಕೆಯಿಂದ ಬನ್ನಿ ಹಬ್ಬವೆಂದು ಕರೆದಿದ್ದಾರೆ.

ಮಹಾಲಯ ಅಮವಾಸಿ ಇನ್ನೂ ಮುಂದೆ ಇರುವಾಗಲೆ ಮನೆಮಾರು ಸಾರಿಸುವುದು, ಹಾಸಿಗೆ ಹೊತಿಗೆಗಳನ್ನು ಒಗೆಯುವುದು ಮೊದಲಾದ ಕೆಲಸಗಳು ಆರಂಭಗೊಳ್ಳುತ್ತವೆ. ಇದು ಒಟ್ಟು ಒಂಬತ್ತು ದಿನಗಳವರೆಗೆ ನಡೆಯುವ ಹಬ್ಬ. ಅಶ್ವಯುಜ ಶುಕ್ಲ ಪ್ರತಿಪದೆ ಪಾಡ್ಯ) ಯಿಂದ ಹಿಡಿದು ದಶಮಿವರೆಗಿನ ಆಚರಣೆಯಲ್ಲಿ ನಾಲ್ಕು ಹಂತಗಳಾಗುತ್ತವೆ. ಮೊದಲನೆಯ ದಿನ ಅಮವಾಸಿ, ನಂತರ ಪ್ರತಿಪದೆ, ದ್ವಿತೀಯಾ, ತೃತಿಯಾಗಳೆಂದು ಮೂರು ದಿನ ರೋಗ-ರುಜಿನ, ದುಃಖ-ದುಮ್ಮಾನಗಳ ಪರಿಹಾರಕ್ಕಾಗಿ ದುರ್ಗಾ ಪೂಜೆಯನ್ನು ಕೈಗೊಳ್ಳುತ್ತಾರೆ. ಎರಡನೆಯದಾಗಿ ಚತುರ್ಥಿ, ಪಂಚಮಿ, ಷಷ್ಠಿ ಈ ಮೂರು ದಿನ ಸುಖ-ಸಂಪತ್ತು ಸಮೃದ್ಧಿಗೊಳ್ಳುವಂತೆ ಲಕ್ಷ್ಮೀಯನ್ನು ಆರಾಧಿಸುವರು. ಮೂರನೆಯದಾಗಿ ಸಪ್ತಮಿ, ಅಷ್ಟಮಿ, ನವಮಿ ಈ ಮೂರು ದಿನ ವಿದ್ಯಾ-ಬುದ್ಧಿ-ಜ್ಞಾನಗಳು ಹೆಚ್ಚಲೆಂದು ಸರಸ್ವತಿಯನ್ನು ಪೂಜಿಸುವರು. ಹೀಗೆ ಮೂರು ಹಂತಗಳಲ್ಲಿ ಶಕ್ತಿ ಪೂಜೆ ನಡೆಯುವುದರಿಂದ ಈ ಹಬ್ಬಕ್ಕೆ ನವರಾತ್ರಿ, ಮಹಾನವಮಿ ಎಂದು ಕರೆಯುವರು. ನಾಲ್ಕನೆಯದಾಗಿ ಈ ಹಬ್ಬದ ಪರಿಸಮಾಪ್ತಿಯೆಂಬಂತೆ ಬರುವ ಹತ್ತನೆಯ ದಿನವೇ ದಶಮಿ. ಅದನ್ನೇ 'ವಿಜಯ ದಶಮಿ' ಎನ್ನುತ್ತಾರೆ. ದಶಹರ್ ಎಂದರೆ, ಹತ್ತು ದಿನಗಳ ರಾತ್ರಿ ಹಬ್ಬವನ್ನು ಆಚರಿಸುವುದರಿಂದ 'ದಸರಾ' ಎಂಬ ಹೆಸರೂ ಬಂದಿದೆ. ದಶಮಿಯ ದಿನದಂದು ಆಯಾ ವೃತ್ತಿಯವರು ತಮ್ಮ ತಮ್ಮ ಸಾಮಗ್ರಿಗಳನ್ನು ಪೂಜಿಸುವರು. ಇದನ್ನು 'ಆಯುಧ ಪೂಜೆ' ಅಥವಾ 'ಖಂಡೆಪೂಜೆ' ಎಂದೂ ಕರೆಯುವರು. ಮೂರು ಚೆಂಜೀಲೆ ಆರತಿ ಹಿಡಿದ ಮುತ್ತೈದೆಯರೊಂದಿಗೆ ಊರ ಪ್ರಮುಖರು ಸೇರಿದಂತೆ ಕರಡಿಮಜಲಿನೊಂದಿಗೆ ಬನ್ನಿ ಪೂಜೆ ಮಾಡುವರು. ಮನೆಯ, ಗ್ರಾಮದೇವತೆಗಳಿಗೆ ಜೋಳದ ದಂಟು, ಕಬ್ಬು, ಟೆಂಗಿನ ಪರಕೆಗಳನ್ನು ಇಟ್ಟಂತೆ ಇಲ್ಲಿಯೂ ಇಟ್ಟು ಪೂಜಿಸುವರು. ಇಲ್ಲಿ ಪೂಜೆಗೊಂಡವಳು 'ಬನ್ನಿ ಮಹಾಂಕಾಳಿ' ಯಾಗುವಳು. ಅಲ್ಲಿಯೇ ಎಲ್ಲರೂ ಸಾಮೂಹಿಕವಾಗಿ ಬನ್ನಿ ಮುಡಿದು, ಓಣಿಗೆ ಬಂದು ತಮ್ಮ ಸಂಬಂಧಿಕರುಗಳಿಗೆಲ್ಲ ಬನ್ನಿ ಕೊಟ್ಟು ಕಾಲು ಬೀಳುವುದು, ಕೈಮುಗಿಯುವುದು ನಡೆಯುತ್ತದೆ. ಈ ಚಿತ್ರಣ ಜನಪದ ತ್ರಿಪದಿಯೊಂದರಲ್ಲಿ ತುಂಬಾ ಸೊಗಸಾಗಿ ಮೂಡಿಬಂದಿದೆ.

"ಬನ್ನಿ ಮುಡಿಯೋದು ಬಂತು, ಬಂಗಾರ ಕೊಡೋದು ಬಂತು
ಬಂದ ನನಕಾಲ ಹಿಡಿದಾನ । ನನ್ನ ತಮ
ಬಂಗಾರ ಮಾಲ ನನಗಿರಲಿಂತ"

ಬನ್ನಿ ಹಬ್ಬವೂ ಕೂಡಾ ಜಾತಿ-ಮತದ ಗಡಿಯನ್ನು ಮೀರಿ ಆಚರಿಸಲ್ಪಡುವ ಹಬ್ಬ. ಯಾವ ಜಾತಿ, ಲಿಂಗ, ವಯಸ್ಸಿನ ಬೇಧವಿಲ್ಲದೆ ಬನ್ನಿಯನ್ನು ಕೊಟ್ಟು 'ನಾಂವು ನೀಂವು ಬಂಗಾರಾಗಿರೂನ್ರಿ' ಎಂದು ಹೇಳುವ ಒಂದೇ ವಯದವರ ಸ್ನೇಹ, ದೌಡ ಮಕ್ಕಳಾಗ್ಲಿ ಎಂದು ಹರಸುವ ಹಿರಿಯರ ಆಶೀರ್ವಾದ, ಬನ್ನಿ ಕೊಟ್ಟು ಬಾಗಿಕಾಲು ಹಿಡಿಯುವವರಿಗೆ 'ಇರ್‍ಲಿ ಇರ್‍ಲಿ ಬಿಡು' ಎಂದು ಹೇಳುವ ಹಿರಿಯರ ಸೌಜನ್ಯತೆ ಈ ಹಬ್ಬದ ದಿನ ಮಧ್ಯರಾತ್ರಿಯವರೆಗೂ ನಮ್ಮೂರಲ್ಲಿ ನಡೆಯುತ್ತದೆ. ಬನ್ನಿ ಹಬ್ಬ ಕೇವಲ ಒಂದು ಮನೆತದನವರೆಗೆ ಮಾತ್ರ ಸೀಮಿತವಾಗಿರದೆ ಇಡೀ ಊರು, ನಾಡಿನ ಹೊರಗೆ ಪ್ರೀತಿ-ಪ್ರೇಮ, ವಿಶ್ವಾಸ ಹಂಚಿಕೊಂಡು ಹರುಷ ಪಡುವ ಹಬ್ಬವಾಗಿದೆ. ಇತ್ತೀಚಿಗೆ ಮೊಬೈಲುಗಳಲ್ಲಿ ಶುಭಾಶಯ ವಿನಿಮಯ ಸಾಮಾನ್ಯವಾಗಿದೆ.

ದೀಪಾವಳಿ

ದೀಪಗಳ ಹಾವಳಿಯನ್ನು ತಂದೊಡ್ಡುವ ದೀಪಾವಳಿ ನಮ್ಮೂರಿನ ಜನರು ಆಚರಿಸುವ ನಾಡಹಬ್ಬಗಳಲ್ಲಿ ಒಂದು. 'ಉಂಡದ್ದೇ ಉಗಾದಿ, ಮಿಂದದ್ದೇ ದೀಪಾವಳಿ' ಎಂದಂತೆ ಮೈಮನವನ್ನು ಬೆಳಗಿಸಿ ಶುಭ್ರಗೊಳಿಸುವ ಹಬ್ಬವಾಗಿದೆ. ಇತರ ಹಬ್ಬಗಳಲ್ಲಿಯಂತೆ ಈಗಲೂ ಮಡಿ ಮೈಲಿಗೆಯನ್ನು ತಪ್ಪದೆ ಕಾಯ್ದುಕೊಳ್ಳುತ್ತಾರೆ. ಅಮವಾಸಿಯ ದಿನ ಮನೆಯ ಒಳ-ಹೊರಗೆ ಸಾಲು ದೀಪಗಳನ್ನು ಹಚ್ಚುತ್ತಾರೆ. ಗಂಡನ ಮನೆಯಿಂದ ಬಂದ ಹೆಣ್ಣು ಮಕ್ಕಳು ತಮ್ಮ ಅಣ್ಣ-ತಮ್ಮಂದಿರಿಗೆ 'ಪೀಡಾ' ಹೋಗಿ ಆಯುಷ್ಯ ಹೆಚ್ಚಲೆಂದು ಆರತಿ ಬೆಳಗುತ್ತಾರೆ. ಅದಕ್ಕೆ ಪ್ರತಿಯಾಗಿ ಅಕ್ಕ-ತಂಗಿಯರಿಗೆ ಸೀರೆ-ಕುಪ್ಪಸ, ಬಂಗಾರವನ್ನು ಕೊಡುವ ಪದ್ದತಿ ಇದೆ. ಮರುದಿನ ದೀಪಾವಳಿಯ ಪಾಡ್ಯ. ಅಂದು ಲಕ್ಷ್ಮೀಗೆ ಮತ್ತೆ ವಿಶೇಷ ಪೂಜೆ ಇರುತ್ತದೆ. ಅಂಗಡಿ ಹೊಸದಾಗಿದ್ದರೆ ಸರಿ, ಒಂದು ವೇಳೆ ಹಳೆಯದಾಗಿದ್ದರೆ ಅದನ್ನು ರಿಪೇರಿ ಮಾಡಿ, ಸುಣ್ಣ-ಬಣ್ಣ ಬಳಿದು ಹೊಸದೆನ್ನುವಂತೆ ಮಾಡಿ ಪರಪರಿ, ಚೆಂಡು ಹೂವಿನ ಸರ, ತಳಿರು-ತೋರಣ ಕಟ್ಟಿ ಅವರವರ ಅಂಗಡಿಯ ಮುಂದೆ 'ಮಾಯಿಕ್' (ಧ್ವನಿ ವರ್ಧಕ) ಗಳನ್ನು ಹಚ್ಚುತ್ತಾರೆ. ಬೆಳಿಗ್ಗೆಯಿಂದ ಮಧ್ಯಾಹ್ನ ಅಥವಾ ಬಹಳಷ್ಟು ಜನ ಸಾಯಂಕಾಲ ಶಾಸ್ತ್ರೋಕ್ತವಾಗಿ ಪೂಜೆ ನೆರವೇರಿಸುವರು. ಪೂಜಾ ಸಮಯದಲ್ಲಿ ನೆರೆದವರಿಗೆ ಫಳಾರ ಹಂಚಿ ಬಡವರಿಗೆ ಬಟ್ಟೆ-ಬರೆ, ಹಣವನ್ನು ಕೊಡುವರು. ಲಕ್ಷ್ಮೀ ಪೂಜೆ ರಾತ್ರಿಯಿಡಿ ಡೊಳ್ಳಿನ ಹಾಡು, ಭಜನೆ ಹಾಡು, ಗೀಗಿ ಹಾಡು, ಇಸ್ಪಿಟ ಆಡುವುದು, ಮನರಂಜನೆ ಕಾರ್ಯಕ್ರಮಗಳನ್ನು ಏರ್ಪಡಿಸುವರು.

ಮನುಷ್ಯರಂತೆ ದನಕರುಗಳಿಗೆ ಪೀಡೆ ಬರುತ್ತಿದ್ದು, ದೀಪಾವಳಿಯಲ್ಲಿ ಅವಕ್ಕೆ 'ಆಣಿ-ಪೀಣಿ' ಬೆಳಗುವುದರ ಮೂಲಕ ಅದನ್ನು ನಿವಾರಿಸುತ್ತಿದ್ದರು. ಜೋಳದ ದಂಟು ಇಲ್ಲವೆ ಬೇವಿನ ಗರಿಗಳಿಂದ ಗೂಡಿನಾಕಾರ ಕಟ್ಟಿ ದನಕರುಗಳಿಗೆ ಬೆಳಗುತ್ತಿದ್ದರು. ಆ ಸಂದರ್ಭದ ಹಾಡುಗಳನ್ನು 'ಆಣಿ-ಪೀಣಿ' ಹಾಡುಗಳೆಂದೇ ಕರೆಯುತ್ತಾರೆ. ಈ ಕುರಿತ ಆಚರಣೆಯ ಹಾಡೊಂದನ್ನು ಭಾಷೆ ಮತ್ತು ಸಾಹಿತ್ಯ ಅಧ್ಯಾಯದಲ್ಲಿ ಗಮನಿಸಲಾಗಿದೆ. ಈಗ ಈ ಪದ್ದತಿ ಅಷ್ಟಾಗಿ ಕಂಡುಬರುವುದಿಲ್ಲ. ಇದೇ ಸಂದರ್ಭದಲ್ಲಿ ಹೆಣ್ಣು ಮಕ್ಕಳು ಸಗಣಿ ಪಾಂಡವರನ್ನು

ಮಾಡಿ ಅವಕ್ಕೆ ಉತ್ರಾಣಿ ಕಡ್ಡಿ, ಅವರಿ ಹೂ, ಚೆಂಡು ಹೂ ಚುಚ್ಚಿ ಎಡೆ ಬೆಳಗಿ, ಸಣ್ಣ ಹುಡುಗರಿಗೆ ಉಣಿಸಿ, ಮನೆಯ ಎಡಬಲಕ್ಕೆ ಮತ್ತು ಕುಂಬಿಯ ಮೇಲೆ ಇಡುತ್ತಾರೆ. ಈ ಆಚರಣೆ ಪಾಂಡವರು ವನವಾಸ ಮುಗಿಸಿ ಬಂದ ನೆನಪು ತಂದುಕೊಡುತ್ತದೆ.

ಹೋಳಿ

ನಮ್ಮ ಹಿಂದೂ ಪರಂಪರೆಯಲ್ಲಿ ಬಹುತರ ಹಬ್ಬಗಳೆಲ್ಲ ಹೆಂಗಸು ಪ್ರಧಾನವಾದ ಮತ್ತು ಅವರಿಗಾಗಿಯೇ ಇರುವುದರಿಂದ ಗಂಡಸರು ತಮಗೆ ಹಬ್ಬಗಳೇ ಇಲ್ಲವೆಂದು ಶಿವನ ಹತ್ತಿರ ಹೋಗಿ ಹೊಯ್ಕೊಂಡರಂತೆ, ಅಂದಿನಿಂದ ಶಿವನು ಹೋಳಿಹುಣ್ಣಿಮೆಯ ದಿವಸ ಇದ ಹೊಯ್ಕೊಳೊ ಹಬ್ಬ ಮಾಡ ಹೋಗೆಂದನಂತೆ, ಆವಾಗಿನಿಂದಲೇ ಹೋಳಿ ಹುಣ್ಣಿಮೆ ಹೊಯ್ಕೊಳೊ ಹಬ್ಬವಾಗಿ ಬಂದಿತೆನ್ನುತ್ತಾರೆ ಜನಪದರು. ಇದಕ್ಕಿರುವ ಇನ್ನೊಂದು ಹೆಸರು ಕಾಮನ ಹಬ್ಬ. ಇದು ಪೌರಾಣಿಕ ಹಿನ್ನಲೆಯಿಂದ ಬಂದ ಹೆಸರು. ತಾರಕಾಸುರನ ಬಾಧೆ ಉಪಟಳ ತಾಳದ ದೇವಾನುದೇವತೆಗಳು ಕಾಮನನ್ನು ಮುಂದು ಮಾಡಿ ಶಿವನ ತಪಸ್ಸನ್ನು ಭಂಗಗೊಳಿಸಲು ಹೇಳುತ್ತಾರೆ. ಮನ್ಮಥನು ಧ್ಯಾನಾಸಕ್ತನಾದ ಶಿವನ ತಪಸ್ಸನ್ನು ಬಾಣ ಬಿಟ್ಟು ತಪಸ್ಸಿಗೆ ಆತಂಕವುಂಟು ಮಾಡುತ್ತಾನೆ. ಸಿಟ್ಟಿಗೆದ್ದ ಶಿವನ ಉರಿಗಣ್ಣಿನಿಂದ ಕಾಮ ಸುಟ್ಟು ಬೂದಿಯಾಗುತ್ತಾನೆ. ಯಾವತ್ತೂ ನಿನ್ನ ಹೃದಯ ಮಂದಿರದಲ್ಲಿಯೇ ಇರುವೆನೆಂದು ಭರವಸೆ ಕೊಟ್ಟನಂತೆ. ಐದನೆಯ ದಿನವನ್ನು 'ರಂಗಪಂಚಮಿ' ಎಂದು ಕರೆದು ಮತ್ತೆ ಬಣ್ಣವಾಡುತ್ತಾರೆ. ಹೀಗೆ ಊರ ಕೇರಿಯವರೆಲ್ಲ ಸೇರಿ ಕುಳ್ಳು, ಕಟ್ಟಿಗೆ ಕಳ್ಳತನ ಮಾಡಿ ಹಾಗೂ ಮನೆ ಮನೆಯಿಂದ ಬೇಡಿ ತಮ್ಮ ತಮ್ಮ ಓಣಿಗಳಲ್ಲಿ ಸಂಗ್ರಹಿಸಿದ ಕುಳ್ಳಿಗೆ ಹುಬ್ಬಿ ನಕ್ಷತ್ರವಿರುವ ದಿವಸ ಹೋಳಿ ಸುಡುತ್ತಾರೆ. ಹೀಗೆ ವಿಶೇಷವಾಗಿ ಹೋಳಿ ಹಬ್ಬವನ್ನು ಸಡಗರದಿಂದ ಆಚರಿಸುತ್ತಾರೆ.

ಮೋಹರಂ

ಮುಸಲ್ಮಾನರ ಹನ್ನೆರಡು ತಿಂಗಳಲ್ಲಿಯ ಮೊದಲ ತಿಂಗಳ ಹೆಸರೇ ಮೋಹರಂ. ಈ ತಿಂಗಳಿನ ಮೊದಲ ಹತ್ತು ದಿನ ಆಚರಿಸುವ ಹಬ್ಬವೇ 'ಮೋಹರಂ ಹಬ್ಬ' ವೆಂದು ಹೆಸರಾಗಿದೆ. ಇದು ಮೇಲು ನೋಟಕ್ಕೆ ಮುಸ್ಲಿಂರ ಹಬ್ಬವಾಗಿದ್ದರೂ ನಮ್ಮೂರಿನಲ್ಲಿ ಹಿಂದೂ-ಮುಸಲ್ಮಾನರೆಲ್ಲರೂ ಒಟ್ಟಿಗೆ ಸೇರಿ ವಿಜೃಂಭಣೆಯಿಂದ ಆಚರಿಸುವ ಹಬ್ಬವಾಗಿದೆ.

ಹಬ್ಬದ ಹಿನ್ನೆಲೆ

ಮಹಮ್ಮದ ಪೈಗಂಬರರ ತರುವಾಯ ಇಸ್ಲಾಂ ಸಾಮ್ರಾಜ್ಯಕ್ಕೆ ಧರ್ಮಪ್ರಭುಗಳನ್ನು (ಖಲೀಫರನ್ನು) ಆಯ್ಕೆ ಮಾಡುತ್ತ ಬಂದರು. ಪ್ರಜಾಪ್ರಭುತ್ವದ ಆಧಾರದ ಮೇಲೆ ಆಯ್ಕೆಯಾಗುತ್ತ ಬಂದ ಈ ಮುಖಂಡರಲ್ಲಿ ನಾಲ್ಕನೆಯವರು ಹಜರತ ಅಲಿ. ಇವನು ಮಹಮ್ಮದ ಪೈಗಂಬರರ ಅಳಿಯ. ಸಿರಿಯಾ ಪ್ರಾಂತದ ಅಧಿಕಾರಿ ತಾನೇ ಖಲೀಫನೆಂದು ಘೋಷಿಸಿಕೊಂಡನು. ನಂತರ ಇವನ ಮಗ ಯಜೀದನೂ ಇದೇ ರೀತಿ ಮಾಡಿದನು. ಈತನ ದಬ್ಬಾಳಿಕೆಯನ್ನು ತಾಳಲಾರದ ಕೆಲವರು ಹಜರತ ಅಲಿಯ ಮಗ ಇಮಾಮ ಹಸನನ್ನು ಪಟ್ಟಕ್ಕೆ ತರಲು ಪ್ರಯತ್ನಿಸಿದರು. ಆದರೆ ಯಜೀದನು ಮೋಸದಿಂದ ವಿಷಹಾಕಿ ಅವನನ್ನು ಕೊಂದನು. ಹಸನ್ನನ ತಮ್ಮ ಹುಸೇನನನ್ನು ಪಟ್ಟಗಟ್ಟಿ ಯಜೀದನ ಸೊಕ್ಕನ್ನು ಮುರಿಯಲು ಹೋರಾಡಿದರು. ಅಧಿಕಾರದ ಆಸೆಗಾಗಿ ಧರ್ಮವಂತರ ವಿರುದ್ಧ ಬಂಡೆದ್ದ ಯಜೀದನಿಗೆ ಹಸನ-ಹುಸೇನ

ಮತ್ತು ಇವರ ಅನುಯಾಯಿಗಳು ಶರಣಾಗತರಾಗದೆ ಧರ್ಮಕ್ಕಾಗಿ ಹೋರಾಡಿ ವೀರ ಮರಣವನ್ನಪ್ಪಿದ ದುರಂತದ ಕಥೆಯೇ ಇಂದಿನ ಮೋಹರಂ ಹಬ್ಬವಾಗಿದೆ.

ಗುದ್ದಲಿ ಹಾಕುವುದು

ಮೋಹರಂ ತಿಂಗಳು ಆರಂಭಗೊಳ್ಳುವುದಕ್ಕೂ ಮೊದಲೇ ಮುಸ್ಲಿಂರು ತಮ್ಮ ಮನೆಯ ಒಳಹೊರಗು ಸುಣ್ಣ-ಬಣ್ಣ ಬಳಿದು, ಹಾಸಿಗೆ-ಹೊತಿಗೆಗಳನ್ನು ತೊಳೆದು ಮಡಿ ಮೈಲಿಗೆಯನ್ನು ಕಾಪಾಡುತ್ತಾರೆ. ಜೊತೆಗೆ ಮಸೀದೆಗಳಿಗೂ ಸುಣ್ಣ-ಬಣ್ಣ ಬಳಿಯುತ್ತಾರೆ. ಚಂದ್ರ ಕಂಡ ದಿನ ಮೋಹರಂದ ಮೊದಲ ದಿನವೆಂದು ಪಶ್ಚಿಮಕ್ಕೆ ಮುಖಮಾಡಿ ನಿಂತು ಮುಲ್ಲಾ ಪತೆ ಕೊಡುತ್ತಾನೆ. ಒಬ್ಬರು ಗುದ್ದಲಿಯಿಂದ ಐದಾರು ಕಚ್ಚುಗಳನ್ನು ಹಾಕುತ್ತಾರೆ. ಇದನ್ನೇ ಜನಪದ ಭಾಷೆಯಲ್ಲಿ 'ಗುದ್ದಲಿ ಹಾಕುವುದು' ಎನ್ನುತ್ತಾರೆ. ನಂತರ ಉಳಿದವರು 'ಗುದ್ದಲಿ ಬಿದ್ದವು' ಎಂದು ಹೇಳುತ್ತಾರೆ. ಮರುದಿನ ಮುಜಾವರನನ್ನು ಕರೆದು ಅದೇ ಜಾಗದಲ್ಲಿ ದೊಡ್ಡದಾದ ಕುಣಿ ತೋಡಿ, ಸುತ್ತಲೂ ಸೊಂಟಮಟ ಕೆಸರಿನ ಒಂಡಿ ಕಟ್ಟುವರು. ಇದಕ್ಕೆ 'ಅಲಾಯಿ ಕುಣಿ' ಎಂದು ಕರೆಯುತ್ತಾರೆ.

ದೇವರು ಕೂಡುವದು

ಮೋಹರಂದ ಐದನೆಯ ದಿನ ಸಾಯಂಕಾಲ ಊರಿನ ಓಣಿ-ಓಣಿಯವರೆಲ್ಲ ವಾದ್ಯ-ಮೇಳದೊಂದಿಗೆ ಹೆಜ್ಜೆ ಆಡುತ್ತ ದೇವರನ್ನು ತರುವ ಜಾಗದಲ್ಲಿ ಸೇರುತ್ತಾರೆ. ಮಡಿಯಿಂದ ಬಂದ ಮುಸ್ಲಿಂರು ತಲೆಯ ಮೇಲೆ ಪೀರಾ(ದೇವರು) ಗಳ ಗಂಟನ್ನು ಹೊತ್ತು 'ಹಸೇನ-ಹುಸೇನಕಿ ದೋಸ್ತಾರಾ ಹೋದೀನ್' ಇಲಾಯಿಮೋಮ್ ಧೂಲೊ ಎಂದು ದೀನ್ ಹಾಕುತ್ತ ದೇವರನ್ನು ಕೂಡಿಸುವ ಹಳೆ ಮಸೀದಿಗೆ ಬರುತ್ತಾರೆ. ಡೋಲಿಯಲ್ಲಿರುವ ದೇವರುಗಳನ್ನೆಲ್ಲ ಓಣಿಯ ಮಸೀದಿಗಳಲ್ಲಿ ಒಂದೊಂದನ್ನು ಪಂಜೆ ಜೋಡಿಸಿ ಕೂಡಿಸುತ್ತಾರೆ. ಹಸ್ತ ಮತ್ತು ಅರ್ಧ ಚಂದ್ರಾಕೃತಿಯಲ್ಲಿ ಈ ದೇವರುಗಳಿರುವುದನ್ನು ನೋಡಿದರೆ 'ಕರ್ಬಲಾ ಕಾಳಗ'ದಲ್ಲಿ ವೀರ ಮರಣವನ್ನಪ್ಪಿದ ಹಸೇನ-ಹುಸೇನ, ಅಬ್ಬಾಸಾಲಿ, ಕಾಸೀಮ ಅವರ ಪರಿವಾರದವರ ನೆನಪು ತರುವ ಸಂಕೇತಗಳಾಗಿವೆ ಎನಿಸುತ್ತದೆ.

ಗಂಧ ಇಲ್ಲವೆ ಖತಾಲ್

ಮೋಹರಂದ ಒಂಬತ್ತನೆಯ ದಿನ ಖತಾಲ್ ಜರಗುತ್ತದೆ. ಇದಕ್ಕೆ ಜಾನಪದೀಯವಾಗಿ 'ದೇವರು ಏಳುವುದು' ಎನ್ನುತ್ತಾರೆ. ಇಮಾಮ ಹುಸೇನರು ತೀರಿಕೊಂಡ ದಿನ ಇದಾಗಿರುವುದರಿಂದ ಅಂದು ಖತಾಲ ರಾತ್ರಿ ಆಚರಿಸುತ್ತಾರೆ. ರಾತ್ರಿ ಏಳೆಂಟರಿಂದ ದೇವರಿಗೆ ಸಕ್ರಿ ಹಂಚುವುದು, ಊದ, ತುರಾಯಿ ಕೊಡುವುದು, ಬಾನ ಕೊಡುವುದು, ಎಲ್ಲರದು ಊಟವಾದ ಬಳಿಕ ರಾತ್ರಿಯಿಡಿ ಹೆಜ್ಜೆ ಯಾಡುವುದು, ರಿವಾಯತ ಪದಗಳನ್ನು ಹಾಡುವುದು ಎಡಬಿಡದೆ ನಡೆದಿರುತ್ತದೆ. ದೇವರು ಹಿಡಿಯುವವರು ಮೈತುಂಬಿ ಬರುವವರೆಗೂ ಇದೆಲ್ಲ ಹಾಗೆಯೇ ಮುಂದುವರೆಯುತ್ತದೆ. ಹಂಸಯ್ ಆಡುವವರ ಪ್ರತಿಯೊಬ್ಬರು ಕೈಯಲ್ಲಿ ಕಬ್ಬು, ಒಣಗಿದ ಜೋಳದ ದಂಟು, ತುದಿ ಮುರಿಯದ ಲಕ್ಕಿ ಜಬರಿ ಮೊದಲಾದವುಗಳನ್ನು ಹಿಡಿದಿರುತ್ತಾರೆ. ಕೆಲವರು ತರತರದ ವೇಷ ಹಾಕಿ ಕೈಯಲ್ಲಿ ಚತ್ರಿ, ಒಣಕೆಗಳನ್ನು ಹಿಡಿದಿರುತ್ತಾರೆ. ಪೂಜಾರಿ ಓಣಿಯ ವೇಶಧಾರಿಗಳು ಮೈ ಎಲ್ಲಾ ಹುಲಮಂಜು ಹಚ್ಚಿಕೊಂಡು ಚಡ್ಡಿಧರಿಸಿಕೊಂಡು ಹಲಿಗೆ ಹಾಗೂ ಲೇಜಿಮ

ಆಡುತ್ತಾ ವಿಶೇಷವಾಗಿ ಮೆರಗು ನೀಡುತ್ತಾರೆ. ಈ ವೇಶಧಾರಿಗಳ ಜೊತೆ ಹಣಮಂತನ ವೇಷಧಾರಿ ಎಲ್ಲರ ಆಕರ್ಷಣೆಯ ಕೇಂದ್ರಬಿಂದುಯಾಗಿರುತ್ತಾನೆ. ಕುರುಬರ ಓಣಿಯವರು ಡೊಳ್ಳು ವಾದ್ಯಗಳೊಂದಿಗೆ ಆಗಮಿಸಿರುತ್ತಾರೆ. ಕೋಟ್ಯಾಳ ಓಣಿಯವರು ನವಿಲು ಹಾಗೂ ಕುದುರೆ ವೇಷ ಹಾಕಿಕೊಂಡು ಹಲಿಗೆ ವಾದ್ಯದೊಂದಿಗೆ ಬಂದಾಗ ಮೆರವಣಿಗೆಯ ಸೌಂದರ್ಯ ಇಮ್ಮಡಿಗೊಳ್ಳುತ್ತದೆ. ಹಲಿಗೆಯ ಗತ್ತಿನೊಂದಿಗೆ ಕುಣಿಯುವ ಕುದುರೆ ನವಿಲುಗಳ ಕುಣಿತವು ಎಂತಹವರನ್ನು ಬೆರಗುಗೊಳಿಸುತ್ತದೆ. ದೇವರು ಹಿಡಿಯುವವರು ಮೈತುಂಬಿ ಬಂದರೆಂದು ಗೊತ್ತಾದಾಗ ಕೈಯಲ್ಲಿಯ ದಂಟು, ಜಬರಿಗಳನ್ನೆಲ್ಲಾ ಕುಣಿಯಲ್ಲಿ ಒಗೆಯುತ್ತಾರೆ. ದೇವರುಗಳು, ಡೋಲಿ ಬಂದು ಐದು ಸುತ್ತು ಹಾಕಿ, ಕೇರಿಗಳಿಗೆ ಹೋಗಲು ಕುಣಿಯನ್ನು ಮುಚ್ಚುತ್ತಾರೆ. ಫೇರಗಳು ತಮ್ಮ ಕೈಯಲ್ಲಿಯ ಲಾಡಿಯನ್ನು ಹರಿದು ಒಗೆಯಲು ಎಲ್ಲರೂ ಲಾಡಿ ದಾರವನ್ನು ತೆಗೆದುಕೊಳ್ಳುತ್ತಾರೆ. ಅಂದು ರಾತ್ರಿ ಅದರ ಬತ್ತಿಯಿಂದಲೇ ಮನೆಯಲ್ಲಿ ದೀಪ ಹಚ್ಚುತ್ತಾರೆ. ದೇವರುಗಳು ರಾತ್ರಿ ಎಂಟರವರೆಗೆ ತಿರುಗಾಡಿ ಕನಮಡಿ ದಾರಿಯಲ್ಲಿ ರಜಪೂತರ ತೋಟದಲ್ಲಿ ಹೋಗಿ ಅಲ್ಲಿ ದಪನಾಗುತ್ತವೆ. ದೇವರು ಹೊಳೆಗೆ ಹೋದವು ಎಂದರೆ ತೀರಿಕೊಂಡರೆಂದರ್ಥ. ಅಂದು ರಾತ್ರಿ ಎಲ್ಲರ ಮನೆಯಲ್ಲಿ 'ಚೊಂಗೆ' ಎಂಬ ವಿಶೇಷ ತಿಂಡಿಯನ್ನು ಮಾಡಿ ಓಣಿಯಲ್ಲಿ ವಾರಿಗೆ ಗೆಳೆಯರನ್ನು ಕರೆದುಕೊಂಡು ದೀನ್ ಹಾಕಿ ಊಟ ಮಾಡುತ್ತಾರೆ. ಇಲ್ಲಿಗೆ ಮೋಹರಂ ಹಬ್ಬ ಕೊನೆಗೊಳ್ಳುತ್ತದೆ. ದೇವರು ಹೊಳೆಗೆ ಹೋದ ಮೂರನೆಯ ದಿನ 'ಜಾರತ್' ನು ಆಚರಿಸುತ್ತಾರೆ.

ಜೋಕುಮಾರ

ಸಂಪ್ರದಾಯದ ದೇವತೆಯಾದ ಜೋಕುಮಾರನ ಆಚರಣೆಗೆ ಒಂದು ಚಾರಿತ್ರಿಕ ಹಿನ್ನೆಲೆಯಿದೆ. ಭಾದ್ರಪದ ಶುದ್ಧ ಅಷ್ಟಮಿಯ ದಿನದಂದು ಜೋಕುಮಾರನ ಜನನವಾಗುತ್ತದೆ. ಅಂದು ಅನಂತನ ಹುಣ್ಣಿಮೆ. ಅದನ್ನು ಜೋಕ್ಯಾನ ಹುಣ್ಣವಿಯೆಂದು ಕರೆಯುತ್ತಾರೆ. ಬಾರಕೇರ, ಕಬ್ಬಲಿಗರು, ಅಂಬಿಗರು, ಸುಣಗಾರರು, ತಳವಾರರು ಇವನನ್ನು ಆರಾಧಿಸುವ ಪ್ರಮುಖ ಜನಪದ ವರ್ಗಗಳು. ನಮ್ಮೂರಿನಲ್ಲಿ ತಳವಾರರು ಜೋಕುಮಾರನ ಆರಾಧಕರು. ಅತ್ಯಂತ ಪ್ರಾಚೀನತೆಯುಳ್ಳ ಜೋಕುಮಾರನು ಮಾರಿದೇವತೆಯ ಮಗನು. ಅಲ್ಪಾಯುಷಿಯಾಗಿ ಏಳು ದಿನಗಳಲ್ಲಿ ಮೆರೆದಾಡಿ ಹೋಗುವ ಜನಪದರ ಸಂಪ್ರದಾಯದ ದೇವತೆ. ಅಗಲವಾದ ಮುಖ. ಮೊಡ್ಡ ಕಣ್ಣುಗಳು, ಹಣೆಯಲ್ಲಿ ವಿಭೂತಿ, ಕುಂಕುಮ, ತಲೆಗೆ ರುಮಾಲು, ಕ್ವಾರಿ ಮೀಸಿ, ಅಗಲವಾದ ಬಾಯಿಯಾಕಾರ, ಅತಿ ಕಾಮುಖನೆಂದು ತೋರಿಸಲು ದೊಡ್ಡದಾದ ಶಿಶ್ನ, ಕಣ್ಣಿಗೆ ಕವಡಿ, ಬಾಯಿಗೆ ಬೆಣ್ಣೆ ಹಚ್ಚಿ ಬುಟ್ಟಿಯಲ್ಲಿ ಬೇವಿನ ತಪ್ಪಲನ್ನು ಹಾಕಿ ಅದರಲ್ಲಿ ಕೂಡಿಸಿಕೊಂಡು ಹೊತ್ತು ಮನೆಮನೆಗೆ ಬರುತ್ತಾರೆ. ಹೀಗೆ ಹೊತ್ತುಕೊಂಡು ಬಂದಾಗ ಅನೇಕ ಹಾಡುಗಳನ್ನು ಹಾಡುತ್ತಾರೆ. ಅವು ಜೋಕುಮಾರನ ಹಾಡುಗಳೆಂದೇ ಹೆಸರಾಗಿವೆ.

ಮೊದಲನೆಯ ದಿನ ಜೋಕುಮಾರ ಗೌಡರ ಮನೆಗೆ ಹೋಗುತ್ತಾನೆ. ಗೌಡರು ಪೂಜಿಸಿ ಜೋಕುಮಾರನನ್ನು ಹೊತ್ತು ಬಂದ ಹೆಂಗಸರಿಗೆ ಜೋಳ, ಗೋಧಿ, ಕೊಬ್ಬರಿ, ರೊಟ್ಟಿ, ಉಪ್ಪು ಮುಂತಾದ ದಿನಸಗಳನ್ನು ನೀಡುವರು. ಇದೇ ರೀತಿ ಒಂದೊಂದು ಓಣಿಯ ಮನೆಗಳಿಗೆ ಒಂದೊಂದು ದಿನ ಹೋಗುವರು. ಕಾಳು-ಕಡಿ ನೀಡಿದವರಿಗೆ ಮರಳಿ ನಾಲ್ಕು

ಕಾಳು ಮತ್ತು ಬುಟ್ಟಿಯಲ್ಲಿರುವ ಬೇವಿನೆಲೆ, ಅಂಬಲಿ ಕೊಡುತ್ತಾರೆ. ಅವನ್ನು ತೆಗೆದುಕೊಂಡ ಭಕ್ತರು ತಮ್ಮ ಜೋಳದ ಚೀಲದಲ್ಲಿ ಬೆರೆಸುತ್ತಾರೆ. ಅಂಬಲಿಯನ್ನು ಬೆಳೆಗೆ ಚರಗ ಚೆಲ್ಲುತ್ತಾರೆ. ಆರು ದಿನಗಳವರೆಗೆ ಊರೆಲ್ಲ ಸುತ್ತಾಡಿದ ತರುವಾಯ ಏಳನೆಯ ದಿನ ಹೊಲಗೇರಿಯಲ್ಲಿ ಇಟ್ಟು ಬರುತ್ತಾರೆ. ಅನಂತರ ಹೊಲೆಯರು ಜೋಕುಮಾರನನ್ನು ಪೂಜೆ ಮಾಡಿ ಬುಟ್ಟಿ ಎತ್ತಿ ವರ್ಷದ ಮಳೆ-ಬೆಳೆ ಕೇಳುತ್ತಾರೆ. ಆಮೇಲೆ ಒನಕೆಯಿಂದ ತಲೆ ಒಡೆಯುತ್ತಾರೆ. ಸಿಡದ ತಲೆ ಮುಖ ಮೇಲೆ ಮಾಡಿಬಿದ್ದರೆ ಕೆಡಗಾಲವಲೆಂದು ತಿಳಿಯುತ್ತಾರೆ. ಇದೆಲ್ಲ ಮುಗಿದ ನಂತರ ಜೋಕುಮಾರನನ್ನು ತಂದು ಹಳ್ಳದಲ್ಲಿ ಒಗೆಯುವರು. ಮೂರು ದಿನಗಳ ವರೆಗೆ ಅಗಸರು ಹಳ್ಳಕ್ಕೆ ಅರಬಿ ಒಗೆಯಲು ಬರುವುದಿಲ್ಲ. ಕಾರಣ ಅಂದರೆ ಜೋಕುಮಾರ ಇನ್ನೂ ನರಳುತ್ತಿರುತ್ತಾನೆಂದು ಹೇಳುತ್ತಾರೆ. ಅಗಸರ ಹುಡುಗಿಯ ಮೇಲೆ ಕಾಮುಖ ದೃಷ್ಟಿ ಬೀರಿದುದೇ ಈ ಹೆಂಗಸರ ಭಯಕ್ಕೆ ಮೂಲ ಕಾರಣವಾಗಿದೆ.

ಇಂತಹ ವಿಶಿಷ್ಟ ಆಚರಣೆಯುಳ್ಳ, ಜೋಕುಮಾರ ಯಾರೆಂಬ ಪ್ರಶ್ನೆ ಯಾರಿಗಾದರೂ ಬರುವುದು ಸಹಜ. ಜೋಕುಮಾರನ ಬಗೆಗೆ ಜನಪದರಲ್ಲಿ ಕೆಲವು ಜನಪದ ಕಥೆಗಳು ಪ್ರಚಲಿತ ಇವೆ.

ದಂತ ಕಥೆ

ಬಹಳ ದಿನಗಳಿಂದ ಜೋಕ ಋಷಿ ಮತ್ತು ಗೌರಿಗೆ ಮಕ್ಕಳಾಗಿರುವುದಿಲ್ಲ. ಅವರು ಶಿವನಲ್ಲಿ ಬೇಡಿಕೊಳ್ಳಲು ಏಳು ದಿನ ಆಯುಷ್ಯವುಳ್ಳ ಮಗನನ್ನು ದಯಪಾಲಿಸುತ್ತಾನೆ. ಹುಟ್ಟಿದ ಕೂಡಲೆ ಮಗು ತಿರುಗಾಡುವುದು, ಮಾತನಾಡುವುದು ಕಲಿಯುತ್ತದೆ. ನಾಡೆಲ್ಲ ಸುತ್ತಿ ಮಳೆ ತರಿಸುತ್ತಾನೆ. ಹುಟ್ಟಿನಿಂದಲೇ ಅತಿಕಾಮಿಯಾದ ಜೋಕುಮಾರನು ಚಂಡಿನಾಟವಾಡುತ್ತ ಹೋಗಿ ಅಗಸರ ಹೆಣ್ಣನ್ನು ಮೋಹಿಸುತ್ತಾನೆ. ಅವಳ ತಂದೆ ಬಂದುಕೊಂದು ರುಂಡವನ್ನು ಕಲ್ಲ ಕೆಳಗಿಟಟು ದಿಂಡನ್ನು ಹೊಳೆ ಕೂಡಿಸುತ್ತಾನೆ. ಅರಬಿ ಒಗೆಯುಲು ಬಂದ ಅಗಸರ ಹೆಂಗಸರು ಅದು ದೇವರೆಂದು ತಿಳಿದು ಪೂಜಿಸುತ್ತಾರೆ. ಮಳೆ-ಬೆಳೆ ತರುವ ದೇವತೆಯೆಂದು ಹೇಳಿ ಆರಾಧಿಸುತ್ತಾರೆ. ಅಂದಿನಿಂದಲೇ ಜೋಕುಮಾರನ ಹಬ್ಬ ಆಚರಣೆಯಲ್ಲಿ ಬಂದಂತೆ ತೋರುತ್ತದೆ.

ಗುಳ್ಳವ್ವ

ಜನಪದರು ಮಣ್ಣಿನ ಪೂಜೆಯನ್ನು ಹಲವಾರು ಬಗೆಯಲ್ಲಿ ಅನೇಕ ತಲೆಮಾರುಗಳಿಂದ ಮಾಡುತ್ತಲೇ ಬಂದಿದ್ದಾರೆ. ಜೇಷ್ಠಮಾಸದಿಂದ ಭಾದ್ರಪದವರೆಗಿನ ಅವಧಿಯಲ್ಲಿ ಮಣ್ಣಿಗೆ ಸಂಬಂಧಿಸಿದ ಆಚರಣೆಗಳು ಅನೇಕ. ನಿದರ್ಶನಕ್ಕಾಗಿ ಹುತ್ತಿನ ಪೂಜೆ, ಮಣ್ಣೆತ್ತಿನ ಪೂಜೆ, ಗಣಪತಿ ಪೂಜೆ, ಗುರ್ಚಿಗಳಂತೆ ಗುಳ್ಳವ್ವನ ಆಚರಣೆಯೂ ಒಂದಾಗಿದೆ.

ಉಡುಕಿ ಗಂಡಲ್ಲ, ಗುಳ್ಳವ್ವ ದೇವರಲ್ಲ ವೆಂದರೂ ಸಂಪ್ರದಾಯ ದೇವತೆಯಾಗಿ ನಮ್ಮೂರ ಜನಪದರಿಂದ ಪೂಜಿಸಲ್ಪಡುತ್ತಾಳೆ. ಮಳೆಯಿಂದ ಸಂತುಷ್ಟಗೊಂಡ ಎಂದು ಹಾಡುತ್ತ ಮನೆಗೆ ಬರುತ್ತಾರೆ. ತಂದ ಮಣ್ಣನ್ನು ಕಲಿಸಿ ಅದಕ್ಕೊಂದು ಆಕಾರ ಕೊಡುತ್ತಾರೆ. ಅಂದು ಮೊದಲ ಮಂಗಳವಾರವೆಂದು ಲಿಂಗಾಕಾರದ ಗುಳ್ಳವ್ವನನ್ನು ಮಾಡುತ್ತಾರೆ. ಈ ವಾರ ಇಂತಹದೇ ಆಕಾರದ ಗುಳ್ಳವ್ವನನ್ನು ಮಾಡಬೇಕೆಂಬ ನಿಯಮವೇನಿಲ್ಲ. ಗುಳ್ಳವ್ವನ ಮುಂದೆ ಹೆಣ್ಣಿನಾಕಾರದ ಇನ್ನೊಂದು ಗೊಂಬಿಯನ್ನು ನಿಲ್ಲಿಸುತ್ತಾರೆ. ಅವಳೆ 'ಗೊಗ್ಗವ್ವ' ಇದು ಮೊದಲು ದೀಪ

ಸ್ಥಂಭವಾಗಿದ್ದು ಕ್ರಮೇಣ ಮನುಷ್ಯ ರೂಪ ತಾಳಿರಬೇಕು. ದೀಪದ ಗೊಗ್ಗವ್ವ, ಕೊಂತೆವ್ವ ಗುರಕವ್ವ ಎಂಬ ಬೇರೆ ಬೇರೆ ನಾಮಾವಳಿಗಳೂ ಇವಳಿಗಿವೆ.

ಅಲಂಕೃತಗೊಂಡ ಗುಳ್ಳವ್ವನ ಮುಂದೆ ಕೆಸರಿನ ಕಡಬು, ಹಣ್ಣು ಹಾಗೂ ಪಣತಿಗಳನ್ನು ಮಾಡಿಡುವರು. ಅಂದು ಶ್ಯಾಂವಿಗೆ, ಗುಳಿಗೆ, ಗವಲಿಗಳ ಎಡೆ ಹಿಡಿಯುತ್ತಾರೆ. ಹುಡುಗಿಯರು ಪೂಜೆಯನ್ನು ಮಾಡಿದರೆ, ಹುಡುಗರ ಆಕೆಯ ಮುಂದೆ ಕೆಸರಿನ ಕೋಣವನ್ನು ಮಾಡಿ ಕಡಿಯುತ್ತಾರೆ. ಇದೆಲ್ಲ ಮುಗಿಯುತ್ತಿದ್ದ ಹಾಗೆಯೇ ಹುಡುಗಿಯರೆಲ್ಲ ಒಂದೆಡೆ ಸೇರಿ ಕೆಸರಾರತಿಗಳನ್ನು ತೂತು ಡಬ್ಬಿಯಲ್ಲಿರಿಸಿಕೊಂಡು ಮನೆಮನೆಗೆ ಹೋಗಿ ಗುಳ್ಳವ್ವಗೆ ಆರತಿಯನ್ನೆತ್ತುವರು. ಜೊತೆಗೆ ಉಡಿಯನ್ನು ತುಂಬುವರು. ಆ ಸಮಯದಲ್ಲಿ ಕೆಲವು ಹಾಡುಗಳನ್ನು ಹಾಡುತ್ತಾರೆ.

‘ಒಂದ ಮೂಲ್ಯಾಗ ಒಂದ ಪತ್ತರಿ
ಸಾಲ ಮೂಲ್ಯಾಗ ಬೆಲ್ಲ ಪತ್ತರಿ
ಪತ್ತರ‍್ಯಾಗ ಪನಿವಾರ
ಗುಳ್ಳವ್ವ ನಿನ್ನ ಮುತ್ತಿನ ಜನಿವಾರ
ಎರಡ ಮೂಲ್ಯಾಗ ಎರಡ ಪತ್ತರಿ

ಎಂದು ಇದೇ ರೀತಿ ಐದು ಮೂಲಿಗಳವರೆಗೂ ಹಾಡು ಮುಂದುವರಿಯುತ್ತದೆ. ಹೀಗೆಯೇ ‘ಒಂದ ಸೇರ ಎಣ್ಣಿ ತಂದು ಒಂದೆಳಿ ಬತ್ತಿ ಮಾಡಿ’ ಎಂದು ಐದೆಳಿಯವರೆಗೆ ಮತ್ತೊಂದು ಹಾಡನ್ನು ಹಾಡುವುದುಂಟು.

‘ಕರಿಯ ಸೀರಿಯನುಟ್ಟು ಕರಿಯ ಕುಪ್ಪಸ ತೊಟ್ಟು
ಕರನಾಟಕದವರು ನಮ್ಮವರು । ನಾರಿ । ಗುಳ್ಳವ್ವಗ
ಕರಕೀಯ ಮುಯ್ಯ ತಂದಾರ । ನಾರಿ”

ಎಂದು ಬೆಳವಲದವರು ಬಿಳಿಸೀರಿ, ಬಿಳಿ ಕುಪ್ಪಸ, ಮಲ್ಲಾಡದವರು ಕೆಂಪ ಸೀರಿ, ಕುಪ್ಪಸ ಮುಯ್ಯ ತಂದಿರುವರೆಂದು ಹಾಡುತ್ತಾರೆ. ಆರತಿ ಮಾಡಲು ಬಂದ ಹುಡುಗಿಯರು ಬೇರೆಯವರ ಮನೆಯಲ್ಲಿಯ ‘ಗೊಗ್ಗವ್ವ’ ನನ್ನು ಕದ್ದು ತಂದು ಬೀದಿಯಲ್ಲಿ ಒನಕೆಯಿಂದ ಬಡಿಯತ್ತಾರೆ. ಆವಾಗ

‘ಗೊಗ್ಗಿ ಕುಟ್ಟೇನವ್ವ ಗೊಗ್ಗಿ ಕುಟ್ಟೇನವ್ವ
ಬಣ್ಣದ ಒನಕೀಲೆ ।
ಅವರ ಕುಟ್ಯಾರವ್ವ ಅವರ ಕುಟ್ಯಾರವ್ವ
ಮುರುಕ ಒಣಕೀಲೆ’

ಹೀಗೆಯೇ “ಮುತ್ತಿನ ಸುಪಲೀಲೆ ಅಕ್ಕಿ ಕೇರುವರು, ಅವರು ಮುರಕ ಸುಪಲೀಲೆ, ತಾವು ಬಂಗಾರ ತಪಲ್ಯಾಗ ಅವರು ಒಡಕ ಗಡಗ್ಯಾಗ ಅನ್ನ ಮಾಡ್ಯಾರವ್ವ” ಎಂದೆಲ್ಲಾ ಹಾಡುತ್ತಾರೆ. ಹಾಡು ಮುಗಿಯುತ್ತಲೇ ‘ಗುಜು ಗುಜು ಮಾಮರೆ’ ಆಟ ಆರಂಭಿಸುತ್ತಾರೆ. ಈ ಆಟದಲ್ಲಿ ಎರಡು ಪಂಗಡವರಾಗಿರುತ್ತಾರೆ. ಒಬ್ಬರು ಗಂಡಿನ ಪಕ್ಷದವರು ಮೊತ್ತಬ್ಬರು ಹೆಣ್ಣಿನ ಪಕ್ಷದವರಾಗಿ ಹೆಣ್ಣು ಕೊಡುವ ತೆಗೆದುಕೊಳ್ಳುವ ವಾಗ್ವಾದ ನಡೆಯುತ್ತದೆ.

ಗಂಡಿನ ಪಕ್ಷದವರು ।

'ಗುಜು ಗುಜು ಮಾಪುರೆ ಹೆಣ್ಣಕೊಡರೆ
ಗುಜೇರಿ ಮಾಪುರೆ ಹೆಣ್ಣ ಕೊಡರೆ'

ಹೆಣ್ಣಿನ ಪಕ್ಷದವರು ।

'ಗುಜು ಗುಜು ಮಾಪುರೆ ಯಾತರದವರು
ಗುಜೇರಿ ಮಾಪುರೆ ಯಾತರದವರು
ಸಾಮ ದಂಡೆಲ್ಯಾತರದವರು
ಈ ಲೋಕಲ್ಯಾತರದವರು"

ಗಂಡಿನವರು ।

'ಗುಜು ಗುಜು ಮಾಪುರೆ ಹೊಲ್ಯಾರು
ಗುಜೇರಿ ಮಾಪುರೆ ಹೊಲ್ಯಾರು
ಸಾಮದಂಡೆಲ್ಲ ಹೊಲ್ಯಾರು
ಈ ಲೋಕೆಲ್ಲ ಹೊಲ್ಯಾರು"

ಎಂದು ಇದೇ ರೀತಿ ಸಿಂಪಗೇರ, ಬ್ರಾಹ್ಮಣರು, ತಳವಾರರು, ಕುರುಬರು, ನೇಕಾರರು, ರಡ್ಡೇರು ಎಂದು ಬೇರೆ ಜಾತಿಗಳ ಹೆಸರು ಹೇಳಿದರೆ ಹೆಣ್ಣು ಕೊಡುವುದಿಲ್ಲ ಎನ್ನುತ್ತಾರೆ. ಆಡುವವರು ತಮ್ಮ ಜಾತಿಯ ಹೆಸರು ಹೇಳಿದಾಗ ಹೆಣ್ಣು ಕೊಡಲೊಪ್ಪಿ ವಂಕಿ, ಸರಗಿ, ಡಾಬ, ಕಾಲುಂಗರ, ಚೈನ, ಬೆಂಡೋಲಿ ಮೊದಲಾದ ವಸ್ತ್ರಾ ಒಡವೆಗಳನ್ನು ಹಾಕಬೇಕೆಂದು ಹೇಳಿ ಮದುವೆ ಮಾಡಿ ಆಡುತ್ತಾರೆ. ನಂತರ ಸಾಮೂಹಿಕವಾಗಿ ಊಟ ಮಾಡಿ ಮನೆಗೆ ದಾರಿ ಹಿಡಿಯುತ್ತಾರೆ.

ಈ ತೆರನಾಗಿ ಐದು ಮಂಗಳವಾರ ಆಡಿ ಮರುದಿನ ಬುಧವಾರ ಗುಳ್ಳವ್ವನ ವಿಸರ್ಜನೆ ನಡೆಯುತ್ತದೆ. ಆ ದಿನ ಮಧ್ಯಾಹ್ನ ಎಳ್ಳಚ್ಚಿದ ರೊಟ್ಟಿ, ಮುಳಗಾಯಿ, ಮೊಸರನ್ನ, ಹೋಳಿಗಿ, ಉಸುಳಿ, ಚಟ್ನಿ, ಪುಂಡಿಪಲ್ಲೆ, ಉಪ್ಪಿನಕಾಯಿ ತರತರದ ತಿಂಡಿ ತಿನಿಸುಗಳನ್ನು ಮಾಡಿಕೊಂಡು ಹಳ್ಳದ ದಂಡಿಗೆ ಹೋಗಿ ಸಾಮೂಹಿಕವಾಗಿ ಊಟ ಮಾಡುತ್ತಾರೆ. ಇದನ್ನು 'ಬಣದೂಟ' ಎನ್ನುತ್ತಾರೆ. ಅನಂತರ ಗಂಡಿನವರು ಹೆಣ್ಣು ಕರೆಯಲು ಬರುತ್ತಾರೆ. ಆಗ ಅವರು ಗುಳ್ಳವ್ವಗೆ ಆರಾಮವಿಲ್ಲವೆಂದು ಹೀಗೆಯೇ ಮೂರು ಬಾರಿ ಸುಳ್ಳು ಹೇಳಿ, ಮತ್ತೊಂದು ಸಲ ಬಂದಾಗ ಗುಳ್ಳವ್ವ ಸತ್ತೇ ಹೋದಳೆಂದು ಹೇಳುತ್ತಾರೆ. ಆಗ ಎಲ್ಲರೂ ಸೇರಿ ಹಾಡ್ಯಾಡಿಕೊಂಡು ಅಳುತ್ತಾರೆ.

'ಏನ ಸತ್ತೆ ಚಿನಮಲ್ಲಿ (ಚಿನಮರಿ)
ನಿನಗಂಡ *___ _.. _. __
ಕೊಟ್ಟಲಗಿ ಸಂತ್ಯಾಗ
ಬೊಳ್ಳೊಳ್ಳಿ ಮಾರಾಗ
ಉಳ್ಳಾಡ್ಸಿ ಹೊಡಿತಿದ್ದ
ಬಿಡ ಬಿಡಂತ ಬಿಡಸಗೊತ್ತಿದ್ದೇವಲ್ಲ ಚಿನಮಲ್ಲಿ"

ಎಂದು ಕೆಲವರು ಹಾಡಿದರೆ ಕೆಲವರು,

'ಏನ ಸತ್ತೆ ಚಿನಮರಿ
ನಿನಗಂಡ * [illegible]
ಬಳೊಳ್ಳಿ ಹೊಲದಾಗ
ಉಳ್ಳ್ಯಾಡಿ ಅಳತಾನ"

ಎಂದು ಹಾಡ್ಯಾಡಿ ಅಳುತ್ತಾರೆ. ಅಷ್ಟರಲ್ಲಿ ಗುಳ್ಳವ್ವನ ಗಂಡನೂ ಎದೆಯೊಡೆದು ಸಾಯುತ್ತಾನೆ. ದಂಪತಿಗಳೀರ್ವರ ಅಂತ್ಯ ಸಂಸ್ಕಾರ ಮಾಡಿ ಮನೆಗೆ ಬರುತ್ತಾರೆ. ಗುಳ್ಳವ್ವನ ವಾರ ಮುಗಿಯುವಷ್ಟರಲ್ಲಿ ಮಳೆ ಆಗಿದ್ದರೆ ಸರಿ, ಆಗಿರದಿದ್ದರೆ ಗುಳ್ಳವ್ವನ ಮೈತುಂಬ ಮುಳ್ಳುಚುಚ್ಚಿ ಕಂಟಿಯಲ್ಲಿ ಇಟ್ಟು ಬರುತ್ತಾರೆ. ಕೆಲವು ಗುಳ್ಳವ್ವನನ್ನು ಬರುವ ಆಷಾಢ ಮಾಸದವರೆಗೆ ಮನೆಯ ಕುಂಬಿಯ ಮೇಲೆ ಇಡುತ್ತಾರೆ. ಇಲ್ಲಿಗೆ ಗುಳ್ಳವ್ವನ ಹಬ್ಬದ ಆಚರಣೆ ಮುಗಿಯುತ್ತದೆ. ನಮ್ಮೂರಿನಲ್ಲಿ ಮುಸಲ್ಮಾನ ಹುಡುಗಿಯರನ್ನು ಹೊರತುಪಡಿಸಿ ಉಳಿದೆಲ್ಲ ಜನಪದ ವರ್ಗದ ಹೆಣ್ಣುಮಕ್ಕಳಲ್ಲಿ ಕಂಡುಬರುವ ಈ ಗುಳ್ಳವ್ವನ ಹಬ್ಬದಾಚರಣೆ ಪರಸ್ಪರ ಪ್ರೀತಿ, ವಿಶ್ವಾಸ ಬೆಳೆಸುವಂಥದ್ದಾಗಿದೆ.

ಮಣ್ಣೆತ್ತಿನ ಅಮವಾಸ್ಯೆ

ನಮ್ಮೂರಿನ ಜನರು ವೈಶಿಷ್ಟ್ಯಪೂರ್ಣವಾಗಿ ಆಚರಿಸುವ ಮಣ್ಣಿನ ಪೂಜೆಗಳಲ್ಲಿ ಮಣ್ಣೆತ್ತಿನ ಅಮಾಸಿಯೂ ಒಂದಗಿದೆ. ಈ ಅಮಾಸಿಯಲ್ಲಿ ಮಣ್ಣೆತ್ತು ಮಾಡಿ ಪೂಜಿಸುವುದರಿಂದ ಹೀಗೆ ಕರೆದಿದ್ದಾರೆ. ಇದು ಪ್ರಧಾನವಾಗಿ ಗಂಡು ಹುಡುಗರಿಗೆ ಸಂಬಂಧಿಸಿದ್ದಾಗಿದೆ. ಮಣ್ಣೆತ್ತು ಹುಡುಗರಾಟವಾದರೂ ಮನೆಯ ಹಿರಿಯರಿಂದ ಮನ್ನಣೆ ಪಡೆದು ಪೂಜಿಸಲ್ಪಡುತ್ತದೆ.

'ಮಣ್ಣನ್ನು ನಂಬಿ ನಾ ಮಣ್ಣಿಂದ ಬದುಕೇನ
ಮಣ್ಣೆನಗೆ ಮುಂದೆ ಹೊನ್ನು । ಅಣ್ಣಯ್ಯ
ಮಣ್ಣೆ ಲೋಕದಲ್ಲಿ ಬೆಲೆಯಾದ್ದು"

ಎಂಬ ಜಾನಪದ ತ್ರಿಪದಿಯಲ್ಲಿ ಮಣ್ಣೆ ಬದುಕಿನ ಮೂಲವೆಂಬಂಶ ಅಡಕವಾಗಿದೆ. ಈ ಕಾರಣವಾಗಿ ರೈತನನ್ನು ಮಣ್ಣಿನ ಮಗನೆಂದು ಕರೆಯಾಗಿದೆ. ಜಾನಪದ ವಿದ್ವಾಂಸ ದೇ.ಜ.ಗೌ. ಅವರು ಹೇಳುವಂತೆ ಸಂಪತ್ತನ್ನು ಹೀರುವ ಜೀವಶಕ್ತಿ. ಮಣ್ಣು ಕೇವಲ ಜಡವಸ್ತುವೇನಲ್ಲ. ಚೇತನಕ್ಕೆ ಚೈತನ್ಯ ನೀಡುವ ಸಚೇತನ ವಸ್ತು. ಆದುದರಿಂದ ಅದನ್ನು ದೇವರೆಂದು ತಿಳಿದು ಬಗೆಬಗೆಯಾಗಿ ಪೂಜಿಸುತ್ತ ಬಂದಿದ್ದಾನೆ.

ಮಣ್ಣೆತ್ತೆಂಬ ಪದ ಪ್ರಯೋಗ ನಮಗೆ ಪ್ರಪ್ರಥಮವಾಗಿ ಗೋಚರವಾಗುವುದು ಬಸವಣ್ಣನವರ ವಚನದಲ್ಲಿ ಕ್ರಿ.ಶ. ೧೫೦೦ ರ ಸಿಂಗಿರಾಜ ಪುರಾಣದಲ್ಲಿಯೂ ಕೂಡಾ ಮಣ್ಣೆತ್ತಿನ ಪೂಜೆ ಹೇಗೆ ಪ್ರಾರಂಭವಾಯಿತೆಂಬುದಕ್ಕೆ ಜನಪದರಲ್ಲಿ ಕಥೆಯೊಂದು ಪ್ರಚಲಿತವಿದೆ. ಬಹಳ ದಿನಗಳ ಹಿಂದೆ ಕಡುಬಡವನೊಬ್ಬನಿಗೆ ಆರು ಜನ ಹರೆಯದ ಹೆಣ್ಣು ಮಕ್ಕಳಿದ್ದರು. ಅದೇ ಊರಲ್ಲಿ ಆಗರ್ಭ ಶ್ರೀಮಂತನಿಗೊಬ್ಬನೇ ಮಗನಿರುತ್ತಾನೆ. ಹುಲಿಯ ಕಾರಣದಿಂದ ಅವನದು ಅಕಾಲಿಕ ಮರಣವೆಂದು ಶಕುನ ನುಡಿದಿತ್ತು. ತಂದೆ-ಮಗನ ಜೀವ ರಕ್ಷಣೆಗೆ ವಿಶೇಷ ರಕ್ಷಣಾ ವ್ಯವಸ್ಥೆ ಮಾಡಿಸಿದನು. ಓದಾರಂಭಿಸಿದಾಗ ಮಗನು ಒಂದು ದಿನ ಹುಲಿಯ ಚಿತ್ರ ಬರೆಯಲು, ಅದಕ್ಕೆ ಜೀವ ಕಳೆ ಬಂದು ಅವನ ಜೀವ ಹೀರಿತು. ಚಿಂತೆಗೀಡಾದ ತಂದೆ ಅಂತ್ಯ ಸಂಸ್ಕಾರಕ್ಕೂ ಮೊದಲು ಮಗನ ಮದುವೆ ಮಾಡಬೇಕೆಂದು ವಿಚಾರ ಮಾಡಿದಾಗ, ಅದೇ

ಊರಿನ ಬಡವನ ಹಿರಿಯ ಮಗಳನ್ನು ಸೊಸೆಯನ್ನಾಗಿ ಮಾಡಿಕೊಳ್ಳಲು ಸಿದ್ದನಾದನು. ಶವಸಂಸ್ಕಾರಕ್ಕಾಗಿ ಸುಡಗಾಡಿಗೆ ಎಲ್ಲರೊಂದಿಗೆ ಆತನ ಮಡದಿಯೂ ನಡೆದಿದ್ದಳು. ಆಗ ಮಳೆ ಗಾಳಿ ಪ್ರಾರಂಭವಾಗಲು ಜನರೆಲ್ಲ ಹೆದರಿ ಹೆಣ ಬಿಟ್ಟು ಓಡಿ ಹೋದರು. ಶ್ರೀಮಂತನ ಸೊಸೆಯೋರ್ವಳೆ ಕೆಸರಿನ ನಂದಿ ಮಾಡಿ, ಧ್ಯಾನ ಮಾಡುತ್ತ ಕುಳಿತಳು. ಶಿವ-ಪಾರ್ವತಿಯರು ಪ್ರತ್ಯಕ್ಷರಾಗಿ ಪತಿಗೆ ಜೀವದಾನ ನೀಡಿದರು. ನಂದಿ ಪೂಜೆಯೇ ಇದಕ್ಕೆಲ್ಲ ಕಾರಣವೆಂದು ಮಣ್ಣೆತ್ತು ಮಾಡಿ ಪೂಜಿಸುವ ಪರಿಪಾಠ ಪ್ರಾರಂಭವಾಯಿತು. ಅದುವೆ 'ಮಣ್ಣೆತ್ತಿನ ಅಮಾಸಿ' ಎಂದು ಜನಪದರಲ್ಲಿ ರೂಢಿಯಲ್ಲಿ ಬಂದಿತು.

ಅಮವಾಸಿಯ ದಿನ ಮುಂಜಾನೆ ಊರ ಹತ್ತಿರದ ಜಿಗುಟಾದ ಎರೆಯ (ಕರ್ಲ) ಮಣ್ಣನ್ನು ತಂದು ಎರಡು ಮಣ್ಣೆತ್ತುಗಳನ್ನು ಮಾಡಿ, ಅವುಗಳನ್ನು ಜಗುಲಿಯ ಮೇಲಾಗಲಿ, ಬಾಗಿಲ ಮಾಡಿನಲ್ಲಿ ಇಟ್ಟು ಕುಂಕುಮ, ವಿಭೂತಿ ಹಚ್ಚಿ, ನೂಲಿನ ಲಡ್ಡು, ಗೊಂಡೆ ಹಾಗೂ ರಿಬ್ಬನ ಮುಂತಾದವುಗಳನ್ನು ಕಟ್ಟಿ, ಶೃಂಗಾರ ಮಾಡಿ ಪೂಜಿಸುತ್ತಾರೆ. ನೈವೇದ್ಯಕ್ಕಾಗಿ ಕಡಬು, ಅನ್ನ-ಸಾರು ಕಡ್ಡಾಯ ಆಹಾರ ತಯಾರಿಸುತ್ತಾರೆ. ಕೆಲವು ಓಣಿಗಳಲ್ಲಿ ಹುಡುಗರು ತಮ್ಮ ತಮ್ಮ ಎತ್ತುಗಳನ್ನು ಪ್ರದರ್ಶನ ಮಾಡುವರು.

ಈ ರೀತಿ ಬಹಳ ವೈಭವದಿಂದ ಪೂಜಿಸಿದ ಮಣ್ಣೆತ್ತುಗಳನ್ನು ವಿಸರ್ಜಿಸುವ ಕಾರ್ಯ ಮರುದಿವಸ ನಡೆಯುತ್ತದೆ. ಅಂದು ಸಿಹಿ ತಿಂಡಿಯೊಂದಿಗೆ ಇತರ ತಿಂಡಿ ತಿನಿಸುಗಳನ್ನು ಮಾಡುತ್ತಾರೆ. ಅಂದು ಸಾಯಂಕಾಲ ಮತ್ತೊಮ್ಮೆ ಪೂಜಿಸಿ ಓಣಿಯ ಹುಡುಗರೆಲ್ಲ ಮಣ್ಣೆತ್ತಿನ ಅಮವಾಸಿ ಮುಗಿದ ನಂತರ ಬರುವ ವರ್ಷದವರೆಗೆ ಮಣ್ಣೆತ್ತುಗಳನ್ನು ಹಾಗೆಯೇ ಇಡುತ್ತಾರೆ.

ಇವು ನಮ್ಮೂರಿನ ಜನಪದರಲ್ಲಿ ಕಂಡು ಬರುವ ಹಬ್ಬ-ಹರಿದಿನ, ಆಚರಣೆಗಳು ಜನಾಂಗದ ಸಂಸ್ಕೃತಿಯ ಚಿತ್ರಣವನ್ನು ಅರಿಯಲು ತುಂಬಾ ಸಹಾಯಕವಾಗಿವೆ. ಹಬ್ಬ ಯಾವುದೇ ಆಗಿರಲಿ, ಯಾರದೇ (ಹಿಂದೂ-ಮುಸ್ಲಿಂ) ಆಗಿರಲಿ, ಎಲ್ಲರೂ ಆಚರಿಸುವುದು ಇಲ್ಲಿಯ ಭಾವೈಕ್ಯತೆಯನ್ನು ಸೂಚಿಸುತ್ತದೆ. ಇಂದು ನಮ್ಮೂರಲ್ಲಿ ಹಬ್ಬಗಳು ಹಿಂದಿನಂತೆ ವಿಧಿವತ್ತಾಗಿ ಆಚರಣೆಯಲ್ಲಿ ಇಲ್ಲವೆಂದರೂ ಆಚರಣಾ ರೀತಿಯಲ್ಲಿ ವ್ಯತ್ಯಾಸಗೊಂಡು ಉಳಿದುಕೊಂಡಿವೆ. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಅತಿಯಾಗುತ್ತ, ಆರ್ಥಿಕ ಸ್ಥಿತಿಗತಿ ಇನ್ನೂ ಹದಗೆಡುತ್ತ ಹೋದರೆ, ಹಬ್ಬ ಇಂದಿನಂತೆ ಮುಂದಿನ ದಿನಮಾನಗಳಲ್ಲಿ ಉಳಿಯಲಿಕ್ಕಿಲ್ಲ.

ರಮಜಾನ್: (ಆಚರಣೆ ತಿಂಗಳ ವೈಶಿಷ್ಟ್ಯತೆ)

ಮುಸ್ಲಿಂ ತಿಂಗಳಲ್ಲಿ ಮೊಹರಮ್ ತಿಂಗಳಿಂದ ಹೊಸ ವರುಷ ಪ್ರಾರಂಭ.

ರಮಜಾನ ಒಂದನೇಯ ತಾರಿಖಿನಿಂದ ೧೦ ನೇಯ ತಾರಿಖಿನವರೆಗೆ ಮುಸಲ್ಮಾನ್ ಹೆಣ್ಣು ಮಕ್ಕಳು ರಾತ್ರಿ ದಿನಾಲು ಅತಿಹೆಚ್ಚು ಪ್ರಾರ್ಥನೆ ಮಾಡಬೇಕು ೨) ಜಿಕರ ಮಾಡಬೇಕು, ಖುರಾನ್ ಓದಬೇಕು ತಾವು ಎಲ್ಲರೂ (ಹೆಣ್ಣುಗಂಡು) ಆನಂದದಿಂದ ಇರಬೇಕು.

ಉರ್ದು ಒಂಬತ್ತನೇಯ ದಿನಾಂಕದಂದು ಹಗಲು ರೋಜಾ ಇರಬೇಕು. ಉರ್ದು ೧೦ ನೇಯ ತಾರಿಖಿನಂದು ಅದಕ್ಕೆ ಮೊಹರಮ್ ಕೊನೆಯ ದಿನದಂದು ಹೇಳುವರು ಅಂದು ಕೂಡಾ ರೋಜಾ (ಉಪವಾಸ) ಇರಬೇಕು.

ಉರ್ದು ೧೦ ನೇಯ ದಿನಾಂಕದಂದು ರೋಜಾ ಇರಬೇಕು ಇರುವಾಗ ೧೦ ನೇಯ ದಿನ ಪರಮಾತ್ಮನು ಹತ್ತು ಸಾವಿರ ಪರಿಸ್ತಗಳು (ಶಿವದೂತರು) ಅವರು ಮಾಡಿರುವಂತಹ ಪರಮಾತ್ಮನ ನಾಮಸ್ಮರಣೆ ಪುಣ್ಯ ಪರಮಾತ್ಮನು ರೋಜಾ ಇದ್ದವರಿಗೆ ಕೊಡುತ್ತಾನೆ.

ಬಕ್ರೀದ್

ರಮಜಾನ ತಿಂಗಳು ಮುಗಿದ ಎರಡು ತಿಂಗಳು ಹತ್ತು ದಿವಸಕ್ಕೆ ಬಕ್ರೀದ್ ಆಚರಣೆ ಮಾಡಲಾಗುತ್ತದೆ. ಜಿಲ್ಹೇಜ ೧೦ ನೇಯ ತಾರಿಖಿಗೆ ಬಕ್ರೀದ್.

ಎಲ್ಲ ಮುಸಲ್ಮಾನರು ಕೂಡಿಕೊಂಡು ಇದಗಾಕ್ಕೆ ಹೋಗಿ ಇದು ದುವಾ ನಮಾಜ ಆರು ತಖಭೀರದಿಂದ ಎರಡು ರಖಾತ ವಾಜಜ್ ಇದು ದುವಾ ನಮಾಜ ಮಾಡಬೇಕು ನಂತರ ಕುತುಬಾ ಮೆಂಬರ ಮೇಲೆ ನಿಂತು ತಾತ್ಪರ್ಯ ಓದುವ ಪದ್ಧತಿ ಖತಿಬನು ೧) ಖುತ್ಬಾ ಓದಿ ಎಲ್ಲ ಜನರಿಗೆ ಹೇಳಬೇಕು ೨) ಸುನ್ನತ ಖುತ್ಬಾ ಓದಿ ಹೇಳಬೇಕು ಖುತ್ಬಾ ಮುಕ್ತಾಯದ ನಂತರ ಎಲ್ಲ ಜನರು ಆಕಾಶದಕಡೆಗೆ ಎರಡು ಕೈಗಳನ್ನೂ ಮೇಲೆ ಅಗಲ ಮಾಡಿ ಪೆಶ ಇಮಾಮನು ಅವನು ಹೇಳುವ ಪ್ರಕಾರ ಹಿಂದಿನ ಎಲ್ಲ ಜನರು ಆಮಿನ (ನಿಜ) ಎಂದು ಹೇಳಿ ತಮ್ಮ ಮನಸ್ಸಿನಲ್ಲಿಯ ಬೇಡಿಕೆಯನ್ನು ಅಲ್ಲಾನ ಕಡೆ ಬೇಡಿಕೊಂಡು ಮುಕ್ತಾಯದ ಮಾಡಬೇಕು.

ಎರಡನೇಯ ದಾರಿಯಲ್ಲಿ ಇದಗಾದಿಂದ ತಮ್ಮ ತಮ್ಮ ಮನೆಗೆ ಬಂದು ತಾವು ರುಚಿಕರವಾದ (ಸಿಹಿ) ಊಟ, ಮಾಡಿ ಒಂದು ಬಾಂಧವರನ್ನು ಗೆಳೆಯರನ್ನು ಕರೆತಂದು ಉಣಿಸಬೇಕು ನಂತರ ನಮಾಜದ ಜನರಿಗೆ ಹೇಳಿ ಅವರನ್ನು ಕರೆತಂದು ತಾವು ಕೊಂಡಂತಹ ಒಂದು ಹೊತು (೧ ವರ್ಷಿಗಾನ ವಯಸ್ಸಿನದು) ಅದನ್ನು ಜುಬಾ ಮಾಡಬೇಕು, ಕೊಯಬೇಕು. ಆ ಹೊತನ ಚರ್ಮವನ್ನು ತೆಗೆದು ಅದರಲ್ಲಿರುವ ಶುದ್ಧವಾದ ಮಾಂಸ ತೆಗೆದ ಮೂರು ಪಾಲು ಮಾಡಬೇಕು ಅದರ ಮುಂದೆ ಚರ್ಮ ಹೊತಿನ ರುಂಡವನ್ನು ತೆಗೆದು ಇವರೆಲ್ಲ ಮಂತ್ರವನ್ನು ಹೇಳಬೇಕು ನಂತರ ಒಂದು ಪಾಲು ಮನೆಯವರು ಎರಡನೇಯ ಪಾಲು ತನ್ನ ಅಣ್ಣ ತಮ್ಮಂದಿರಿಗೆ ಕೊಡಬೇಕು ಮೂರನೇಯ ಪಾಲು ಬಡವಬೇವಾ (ರಂಡೆಮುಂಡೆ) ಮಾಹತಾಜ, ಕಸ್ಕನ ಪಕೀರ ಇವರಿಗೆ ಧಾನ ಮಾಡಬೇಕು.

ಇದು ಬಕ್ರೀದ ಹಬ್ಬದ ವೈಶಿಷ್ಠ್ಯತೆ.

ನೀರು ಕುಡಿದ ನಂತರ ರೋಜರ ನಿಲಾತ ಗಂಡು/ಹೆಣ್ಣು ಮಾಡಬೇಕು ಅದು ಯಾವವುದೆಂದರ– ನವಾಯಿತು ಅನ್ ಅಸುಮ್ ಗದನಮಿನ್ ಅದಾಯೀ ಶಹರ ಫರ್ಜಲ್ ಹುತಾಲ್‌ಯತ್ ಅಲಾ (ಎಲೋ ಪರಮಾತ್ಮ ನಿನ್ನ ಆಜ್ಞೆ ಪ್ರಕಾರ ನಾನು ಪರ್ಜ, ರೋಜಾ ನಿಲ್ಲುತ್ತೇನೆ ಸೂರ್ಯೋದಯದಿಂದ ಸೂರ್ಯಾಸ್ತದವರೆಗೂ ಉಪವಾಸ ಮಾಡಬೇಕು.

ರೋಜಾ

ಹಗಲು ಹೊತ್ತಿನಲ್ಲಿ ಸೂರ್ಯೋದಯದಿಂದ ಸೂರ್ಯಾಸ್ತದವರೆಗೂ ಪೂರ್ತಿ ಉಪವಾಸ ಹಾಗೂ ಮನಸ್ಸಿನಿಂದ ಯಾವುದೇ ದುಷ್ಟವಿಚಾರ ದುರಾಲೋಚನೆ ಮಾಡುವುದಿಲ್ಲ ಎಂದು ಪ್ರಾರ್ಥನೆ ಆ ದೇವರ ಸಾಕ್ಷಿಯಾಗಿ ಮನಸಾಕ್ಷಿಯಾಗಿ ಉಪವಾಸ ಆಚರಿಸುವುದು ಹಗಲು

ಹೊತ್ತಿನಲ್ಲಿಯೇ ಉಪವಾಸವಿರುವುದರ ಔಚಿತ್ಯವೆಂದರೆ ದಿನದ ಮಹತ್ವವನ್ನು ಸಾಕಷ್ಟು ದುಷ್ಕಾರ್ಯ ಮಾಡುವದರಿಂದ ಅವುಗಳನ್ನು ಸಾಧ್ಯವಾದಷ್ಟು ದೂರಮಾಡಲು ಈ ಪದ್ಧತಿಯು ಆಚರಣೆಯಲ್ಲಿದೆ.

೩) ರೋಜಾ ಮಾಡುವ ಸಂಧರ್ಬದಲ್ಲಿ ಸುಳ್ಳ ಹೇಳಬಾರದು.

೪) ಇನ್ನೋಬ್ಬರನ್ನು ನಿಂದಿಸಬಾರದು.

ಇವನ್ನು ಮಾಡಿದರೆ ರೋಜಾ ಫಲಿಸುವುದಿಲ್ಲ ವೃತ ಭಂಗವಾಗುತ್ತದೆ.

ಸೂರ್ಯಾಸ್ತದ ನಂತರ ರೋಜಾ/ಉಪವಾಸವನ್ನು ಬಿಡಬೇಕು ಬಿಡುವಾಗ ಹೇಳುವ ಮಂತ್ರ ಎಲೋ ಪರಮಾತ್ಮ ನಿನ್ನ ಆಜ್ಞೆಯ ಪ್ರಕಾರ ನಾನು ಹಿಡಿದ ಉಪವಾಸ ನಾನು ನೀನು ಕೊಟ್ಟಂತ ಅನ್ನದಿಂದ ನಾನು ಸ್ವೀಕರಿಸಿ ಉಪವಾಸ ಬಿಡುತ್ತೇನೆ.

೪) ರಮಜಾನ ತಿಂಗಳಲ್ಲಿ ರಾತ್ರಿ ೧) ಸುನ್ನತ ನಮಾಜ ೨) ಪಜನ ನಮಾಜ ಮಾಡಿ ತರಾವ್ಹಿ ನಮಾಜ ೨೦ ರಕಾತ ಮಾಡಬೇಕು ತದನಂತರ ಮೂಲರರಕಾತ ವಾಜಿಮ್ ವಿತರ ನಮಾಜ ಮಾಡಿ ನಮಾಜ ಮುಕ್ತಾಯಗೊಳಿಸಬೇಕು ೩೦ ರಾತ್ರಿ ಈ ಆಚರಣೆ ಮಾಡಬೇಕು.

ರಮಜಾನ ತಿಂಗಳಲ್ಲಿ ಈ ರೀತಿಯ ಆಚರಣೆಗೆ "ನವಾಬ್" ಅಂದರೆ "ಪುಣ್ಯ" ಅಭ್ಯವಾಗುತ್ತದೆ.

ಇಸ್ಲಾಂ ಧರ್ಮದ ಹಬ್ಬಗಳ ಆಚರಣೆ

೧) ಮೊಹರಮ್	೨) ರಮಜಾನ್ ಈದ – (ಹಬ್ಬ)
೩) ಕುರಬಾನಿ ಹಬ್ಬ	೪) ಸಣ್ಣ ಹಬ್ಬ – ಪೈಗಂಬರ ಜನ್ಮದಿನ
೫) ರಮಜಾನ್	೬) ಬಕ್ರೀದ
೭) ಮೊಹರಮ್	

೧) ರಮಜಾನ್ :– ಉರ್ದುಲಿಪಿಗಳ (ಸವ್ವಾಲ ಮತ್ತು ಮಹಿನಾ)

೧) ಉರ್ದು ತಿಂಗಳ (ಸವ್ವಾಲ ಮಹಿನಾ) :–

೧) ಮೊಹರಮ್	೨) ಸಫರ
೩) ರಬಿಲಾವಲ್	೪) ರಬಿಲಾಬರ
೫) ಜಮಾದಿ ಅವಲ್	೬) ಜಮಾದಿಲಾಬರ
೭) ರಜ್ಜಬ	೮) ಶಬಾನ್
೯) ರಮಜಾನ್	೧೦) ಸವ್ವಾಲ್
೧೧) ಜಿಲ್ಬಾದ	೧೨) ಜಿಲ್ಹೇಜ

ಸವ್ವಾಲ್ ಮಹಿನಾ ಒಂದನೇಯ ದಿನಾಂಕದಂದು ಎಲ್ಲ ಮುಸ್ಲಿಂ ಜನ ಸೇರಿ ಇದಗಾ ಬನ್ನೂರು ದಾರಿಯಲ್ಲಿ ಇದಗಾ ಇರುವಲ್ಲಿ ಆರು ತಬಬೀರದಿಂದ ಸಮಾಜ ಪ್ರಕಾರ ಎರಡು ರಖಾತ ಇದುಲ್ ಪಿತರ ಸಮಾಜ ವಾಜಬ್ ಮಾಡಬೇಕು ನಂತರ ಕುತಬಾ ಓದಬೇಕು ಆ ಕುತುಬಾದಲ್ಲಿ ಎರಡು ಪ್ರಕಾರ ೧) ಪರ್ಜ ೨) ಸುನ್ನತ ಓದಬೇಕು ನಂತರ ಅಲ್ಲಾನ

ಕಡೆ (ಆಕಾಶದಕಡೆ) ಕೈ ಮಾಡಿ ಬೇಡಬೇಕು ಕೈಯನ್ನು ಅಗಲಮಾಡಿ ದುವಾವನ್ನು ಬೇಡಬೇಕು ತಮ್ಮ ಮನಸಿನಲ್ಲಿ ಇದ್ದ ಬೇಡಿಕೆ ಪ್ರತಿಯೊಬ್ಬನು ಬೇಡಿ ಮುಕ್ತಾಯ ಮಾಡಿ ಎಲ್ಲ ಜನರು ಬಂದ ದಾರಿಯನ್ನು ಬಿಟ್ಟು ಎರಡನೇಯ ದಾರಿಯಿಂದ ಊರಲ್ಲಿ ಬಂದು ತಮ್ಮ ತಮ್ಮ ಮನೆಗೆ ಹೋಗಬೇಕು.

ಮನೆಗೆ ಬಂದನಂತರ ರುಚಿಕರವಾದ (ಸಿಹಿತಿಂಡಿ) ಮನೆಯಲ್ಲಿ ಹೆಣ್ಣುಮಕ್ಕಳು ತಯಾರಿಸಿದ ಅಡಿಗೆಯನ್ನು ತಾವು ತಿನ್ನಬೇಕು ಮತ್ತು ಬಂದು ಬಾಂಧವರನ್ನು ಮಿತ್ರರನ್ನು ಕರೆತಂದು ಉಣಿಸಬೇಕು.

ರಮಜಾನ್ ತಿಂಗಳ ಮಹತ್ವ

ಮುಸಲ್ಮಾನ ಬಾಂಧವರು ಮಾಡುವಂತ ಇಬಾದತ (ಪ್ರಾರ್ಥನೆ) ಹಗಲು ಮೂವತ್ತು ಒಪ್ಪತ್ತ (ಊಟ) ರೋಜಾ ಇರಬೇಕು ಸೂರ್ಯೋದಯಕ್ಕಿಂತ ಮುಂಚೆ ನಸುಕಿನ ೫ ಘಂಟೆಯೊಳಗೆ ಪುರುಷ ಸ್ತ್ರೀಯರು ಎದ್ದು ಶುಚಿಮಾತವಾಗಿ ಸರ್ಗಿ ಆಹಾರವನ್ನು ಸ್ವಲ್ಪ ಸ್ವೀಕರಿಸಿ ನೀರು ಸೇವಿಸಬೇಕು.

ಪ್ರಾರ್ಥನೆಯ ಮಹತ್ವ

ಅಲ್ಲಾಹುವಿನಿಂದ ಬಂದದ್ದು ಖುರಾನ – ಇಸ್ಲಾಂ ಧರ್ಮದವರಿಗೆ ನಮಾಜ ಮಾಡುವದು ಕಡ್ಡಾಯ ಏಕೆಂದರೆ ಖುರಾನಿನಲ್ಲಿ ಈ ರೀತಿ ಆದೇಶ ನೀಡಲಾಗಿದೆ. ಖುರಾನದಲ್ಲಿ ಮಹ್ಮಮದ ಪೈಗಂಬರರು ಈ ಆಚರಣೆಯ ಕುರಿತು ಹೇಳಿರುವದರಿಂದ ಕಡ್ಡಾಯವಾಗಿ ಪ್ರಾರ್ಥನೆಯನ್ನು ಮಾಡಲಾಗುತ್ತದೆ ಎಂದು ವಕ್ತೃಗಳು ತಿಳಿಸುತ್ತಾರೆ.

ಖುರಾನಗೆ ಇತರ ಹೆಸರುಗಳು ೧) ಕಲಾಮ ಶರೀಫ
೨) ಖಲಾಮ್ ಉಲ್ಲಾ
೩) ಫರಮಾನ

ಹದೀಪ: ಹಜರತ ಮಹ್ಮಮದ ಪೈಗಂಬರರು ಹೇಳಿದ ಮಾತುಗಳು ಇವುಗಳು ಇಸ್ಲಾಂ ಧರ್ಮಧವರಿಗೆ ಆಧಾರಿತವಾದ ಗ್ರಂಥಗಳು. ನಮಾಜ ಮಾಡುವದಕ್ಕೆ ಮುಂಚೆ ವಜು ಮಾಡುವ ಉದ್ದೇಶವೆಂದರೆ ಪಂಚೇಂದ್ರಿಯಗಳಿಂದ ಮಾಡಿದ ದೋಷದ ಪರಿಹಾರಕ್ಕಾಗಿ ಸ್ವಚ್ಚಮಾಡಿಕೊಳ್ಳಬೇಕು.

೭.೨.೨ ಧರ್ಮ, ದೇವಾಲಯ, ಮಠಗಳಲ್ಲಿ ಜರುಗುವಂತ ಪ್ರಮುಖವಾದ ಆಚರಣೆಗಳು

೧) ಕೊಟ್ಟಲಗಿ ಗ್ರಾಮದ ಮಲ್ಲಯ್ಯ ದೇವಾಲಯದಲ್ಲಿ ಪ್ರತಿ ವರ್ಷವು ಗಜಾನನ ಉತ್ಸವ ನೇರವೇರುತ್ತದೆ. ಹಾಗೆಯೇ ಮಹಾನವಮಿಯ ದಿನಗಳಲ್ಲಿ ೯ ದಿನ ದೇವಿಯಪಾರಾಯಣವು ನಡೆಯುವದು. ಹಾಗೆಯೇ ಐದೇಶಿಯ ದಿನದಂದು ವಿಶೇಷವಾಗಿ ಮಲ್ಲಯ್ಯನ ಆಚರಣೆಗಳು ಜರಗುವವು. ಈ ಎಲ್ಲ ಸಂದರ್ಭದಲ್ಲಿ ಅಭಿಷೇಕ, ವಿಶೇಷ ಪೂಜೆ ನಡೆಯುತ್ತದೆ. ಭಕ್ತಾದಿಗಳು ತಮಗೆ ಅನುಕೂಲಕರವಾದ ದಿನಗಳಲ್ಲಿ ಪೂಜೆಯನ್ನು ಮಾಡುವರು. ವಾರದಲ್ಲಿ ಸೋಮವಾರ ಮಲ್ಲಯ್ಯನ ವಾರವಾಗಿದ್ದು ವಿಶೇಷವಾದ ಪೂಜೆಯು ನೇರವೆರುತ್ತದೆ. ಆ ಓಣಿಯಲ್ಲಿರುವ ಜನಗಳು ಮದುವೆ, ಸೀಮಂತ ಮುಂತಾದ ಕಾರ್ಯಕ್ರಮಗಳು ಮಲ್ಲಯ್ಯ ದೇವಸ್ಥಾನದಲ್ಲಿ ನೇರವೆರಿಸುತ್ತಾರೆ.

ಶ್ರೀಶೈಲಕ್ಕೆ ಯಾತ್ರೆ

ಪ್ರತಿವರ್ಷ ಹೋಳಿ ಹುಣ್ಣಿಮೆಯ ದಿನ ೩ ಕಂಬಿಗಳು ಶ್ರೀಶೈಲಕ್ಕೆ ಪ್ರಯಾಣಿಸುತ್ತವೆ. ಶ್ರೀಶೈಲಕ್ಕೆ ಪಾದಯಾತ್ರೆ ಮುಖಾಂತರ ಪ್ರಯಾಣಿಸಿ ಊರಿನಿಂದ ಮಂಗಳವಾದ್ಯಗಳೊಂದಿಗೆ ನಡೆಯುತ್ತಾರೆ. ಅದರಂತೆ ಹುಣ್ಣಿಮೆಯಿಂದ ಯುಗಾದಿಗೆ ಸುಮಾರು ೧೫ ದಿನ ಶ್ರೀಶೈಲಕ್ಕೆ ಪ್ರಯಾಣಿಸಿ ಯುಗಾದಿಯ ದಿನ ಶ್ರೀಶೈಲ ತಲುಪುತ್ತಾರೆ. ಶ್ರೀಶೈಲ ಪ್ರಯಾಣಕ್ಕೆ ಮೊದಲು ಪ್ರತಿಮನೆ ಮನೆಗೂ ಮಲ್ಲಯ್ಯ ಭೇಟಿನಿಡುತ್ತಾನೆ.

ಮಲ್ಲಯ್ಯ ಕಂಬಿ ತೆಗೆದುಕೊಂಡು ಗ್ರಾಮದ ಸ್ವಾಮಿಗಳು ಪ್ರತಿ ಮನೆ ಮನೆಗೂ ಸಂಬಾಳವಾದ್ಯ, ಬಾರಿಸುತ್ತ ಸುತ್ತುತ್ತಾರೆ. ಪ್ರತಿ ಮನೆಯಲ್ಲು ಮಲ್ಯಯ್ಯನಿಗೆ ಸಕ್ಕರೆ, ಬೆಲ್ಲ, ಬಾಳೆಹಣ್ಣು ನೀಡುವದರೊಂದಿಗೆ ಪೂಜಿಸಿ ಸ್ವಾಮಿಗಳಿಗೆ ದಕ್ಷಣೆ, ಹಣ ಹಾಗೂ ಕಾಳು-ಕಡಿಗಳನ್ನು ದಾನರೂಪವಾಗಿ ನಿಡುತ್ತಾರೆ. ಎಲ್ಲ ಮೇಲ್ವರ್ಗದ ಮನೆಗಳಿಗೆ ಸಂಚಾರ ಮುಗಿದ ಮೇಲೆ ಕೊನೆಗೆ ಕೇರಿಗಳಲ್ಲಿರುವ ದುರ್ಗಾದೇವಸ್ಥಾನಕ್ಕೆ ಹೋಗುತ್ತಾರೆ. ಅಲ್ಲಿರುವ ಎಲ್ಲ ಭಕ್ತರು ಮಲ್ಲಯ್ಯನಿಗೆ ಕಾಳು ಕಡಿ ನೀಡಿ ಮಲ್ಲಯ್ಯನನ್ನು ಪೂಜಿಸುವರು.

ನಂತರ ಕೊನೆಯಲ್ಲಿ ಅಗಸರ ಮನೆಯಲ್ಲಿ ಬಟ್ಟೆಗಳನ್ನು ತೊಳೆದು ನಂತರ ಮಲ್ಲಯ್ಯ ಶ್ರೀಶೈಲಕ್ಕೆ ಪಾದಯಾತ್ರೆ ಬೆಳೆಸುತ್ತಾರೆ. ಪಾದಯಾತ್ರಿಕರು ಗ್ರಾಮದಲ್ಲಿರುವ ಈ ಕಾರ್ಯಕ್ರಮ ಮುಗಿದನಂತರ ಎಲ್ಲ ಭಕ್ತರು ಗಾಣದ ಎಣ್ಣಿಯ ದಿವಟಿಗೆಗಳನ್ನು ಹಿಡಿದು ಕೊಂಡು ಸಂಬಾಳವಾಧ್ಯ ನಂದಿಕೊಲು ಸಮೇತ ಮಲ್ಲಯ್ಯನ ಕಂಬಿ ತೆಗೆದುಕೊಂಡು ಶ್ರೀಶೈಲಕ್ಕೆ ಪಾದಯಾತ್ರೆ ಬೆಳೆಸುತ್ತಾರೆ. ಎಲ್ಲ ವರ್ಗಧ ಜನ ಇದರಲ್ಲಿ ಪಾಲ್ಗೋಳ್ಳುತ್ತಾರೆ.

ಯುಗಾದಿಯ ದಿವಸ ಶ್ರೀಶೈಲದಲ್ಲಿರುವ ಪಾತಾಳಗಂಗೆಯಲ್ಲಿ ಸ್ನಾನಮಾಡಿ ನಂತರ ರಥೋತ್ಸವದಲ್ಲಿ ಪಾಲ್ಗೊಂಡು ಬೇವು ಬೆಲ್ಲ ಸ್ವೀಕರಿಸಿ ಕಂಬಿಯನ್ನು ಪಶ್ಚಿಮಕ್ಕೆ ಮುಖ ಮಾಡಿ ಇಡುತ್ತಾರೆ. ನಂತರ ಅಲ್ಲಿಂದ ಪುನಃ ಊರ ಕಡೆಗೆ ಪ್ರಯಾಣಬೆಳೆಸುತ್ತಾರೆ.

ಪಾದ ಯಾತ್ರೆಯ ಸಂದರ್ಭದಲ್ಲಿ ಭಕ್ತಾಧಿಗಳು ಯಾತ್ರಿಗಳಿಗೆ ಹುಗ್ಗಿ ಹೊಳಿಗೆ ಅಡಿಗೆ ಮಾಡಿ ಬಡಿಸುತ್ತಾರೆ ಹಾಗೂ ಕಾಲಲ್ಲಿನ ಚರ್ಮದ ಚಪ್ಪಲಿಗಳು ಕಾಲಿಗೆ ತಂಪು ನೀಡಲಿ ಎಂದು ಕೇಲವು ಸ್ಥಳಗಳಲ್ಲಿ ಭಕ್ತರು ಚಪ್ಪಲಿಗಳಿಗೆ ಗಾಣದ ಎಣ್ಣಿಯನ್ನು ಹಾಕಿ ಕೊಡುತ್ತಾರೆ.

ಕನಮಡಿ, ತಿಕೋಟಾ, ಬಿಜಾಪೂರ, ಮನಗೂಳಿ, ಬಸವನಬಾಗೇವಾಡಿ, ದೇವರ ಹಿಪ್ಪರಗಿ, ಸಾಲವಾಡಗಿ, ಹುಣಜಗಿ, ದೇವದುರ್ಗ, ಮಸರಗುಪ್ಪಿ, ಬಾವಿದಡ್ಡಿ, ಕರ್ನೂಲ, ಅಂತಪುರ, ಕಡೆಬಾಗಿಲು, ಅಂಬಲಿಹಾಳ, ಭೀಮನಕೊಳ್ಳಿ, ಅಡಕೋಶ್ವರ, ಪಂಚದಾರಿ, ಪಲ್ಲದಾರಿ, ಶ್ರೀಶೈಲಕ್ಕೆ ತಲುಪುತ್ತಾರೆ.

ಶ್ರೀಶೈಲದಿಂದ ಮರಳಿ ಕೊಟ್ನಲಗಿ ಗ್ರಾಮಕ್ಕೆ ಮಲ್ಲಯ್ಯನ ಕಂಬಿ ಆಗಮಿಸುವ ಕುರಿತು

ಯುಗಾದಿಯ ದಿನ ಮರಳಿ ಊರಿನ ಕಡೆಗೆ ಪ್ರಯಾಣ ಬೆಳೆಸುತ್ತಾರೆ. ಮಲ್ಲಯ್ಯನು ಊರ್‍ನ್ನು ಪ್ರವೇಶ ಮಾಡಬೇಕಾದರೆ ಒಂದು ನಿಯಮವಿದೆ. ಅದೇನೆಂದರೆ ಶ್ರೀ ಧರಿದೇವರ ದೇವಸ್ಥಾನದಲ್ಲಿ ಸಬಿಣಿ ತಿರುಗುವ ಕಾರ್ಯಕ್ರಮ ಜರುಗುವವರೆಗೆ ಗ್ರಾಮವನ್ನು ಪ್ರವೇಶ ಮಾಡುವಂತಿಲ್ಲ. ಈ ಧರಿದೇವರ ಸಬಿಣಿಯು ಕಡ್ಡಾಯವಾಗಿ ಮುಲಾನಕ್ಷತ್ರದಲ್ಲಿ ರಾತ್ರಿ ೧೨ ಗಂಟೆಯಿಂದ ೩ ರಿಂದ ೪ ಗಂಟೆಯವರೆಗೆ ಜರುಗುತ್ತದೆ.

ಸಬಿಣಿ ಎಂದರೆ ದೇವರ ಪಲ್ಲಕ್ಕಿ, ನಂದಿಕೋಲು, ಸಮೇತ ಮಂಗಳವಾದ್ಯದೊಂದಿಗೆ ಜಕ್ಕವ್ವ ದೇವಸ್ಥಾನಕ್ಕೆ ಬಂದು ಪ್ರದಕ್ಷಿಣೆ ಹಾಕಿ ಬೇಟ್ಟಿಕೊಟ್ಟು ಹೋಗುತ್ತಾರೆ. ಈ ಕಾರ್ಯಕ್ರಮ ಕಡ್ಡಾಯವಾಗಿ ನಡೆಯದೇ ಕೊಟ್ಟಲಗಿ ಮಲ್ಲಯ್ಯ ಊರಲ್ಲಿ ಪ್ರವೇಶಿಸುವಂತಿಲ್ಲ. ಮೂಲಾ ನಕ್ಷತ್ರದ ನಂತರದ ಕಡ್ಡಾಯವಾಗಿ ಸೋಮವಾರ, ಶುಕ್ರವಾರವಿದ್ದಾಗಲೇ ಪ್ರವೇಶಿಸಬೇಕು. ಕನಮಡಿ ಸರಹದ್ದಿನಲ್ಲಿರುವ ಅಪ್ಪಯ್ಯಸ್ವಾಮಿಯ ದೇವಸ್ಥಾನದಲ್ಲಿ ವಾಸವಿರುತ್ತಾರೆ. ಈ ದೇವಸ್ಥಾನದ ಸುತ್ತುಮುತ್ತಲು ಕೊಟ್ಟಲಗಿಯ ಜನರು ಆಜೂರ ಬ್ಯಾಳಿ ಕೊಂಡಿ ಮುಂತಾದ ತೋಟಗಳೇ ಇರುವದರಿಂದ ಅಲ್ಲಿಯ ಜನ ಮೂಲಾ ನಕ್ಷತ್ರದ ಆಗುವವರೆಗೆ ಮಲ್ಲಯ್ಯನ ಪೂಜಾರಿಗಳಾದ ಸ್ವಾಮಿಗಳಿಗೆ ಊಟ ಉಪಚಾರ ಕೊಟ್ಟು ವ್ಯವಸ್ಥೆ ಮಾಡುತ್ತಾರೆ.

ನಂತರ ಊರ ಕಡೆಗೆ ಸೋಮವಾರ ಅಥವಾ ಶುಕ್ರವಾರ ಪ್ರಯಾಣ ಬೆಳೆಸುತ್ತಾರೆ. ಬರುವಾಗ, ಪೂಜೆ ಪುನಸ್ಕಾರಗಳನ್ನು ಮಾಡಿ ಬರುವಾಗ ಊರ ಸಮೀಪ ಪೂರ್ವದಲ್ಲಿ ಪಾದ ಗಟ್ಟೆ ಇದೆ. ಅಲ್ಲಿ ಊರಿನ ಜನರೆಲ್ಲ ಮಂಗಳವಾದ್ಯದೊಂದಿಗೆ ಬಂದು ಇಲ್ಲಿ ಮಲ್ಲಯ್ಯನನ್ನು ಇದಿರುಗೊಳ್ಳುತ್ತಾರೆ. ಅಲ್ಲಿಂದ ನೇರವಾಗಿ ಊರಲ್ಲಿ ಪ್ರವೇಶಿಸದೇ ಊರ ಮಗ್ಗಲ ದಾರಿಯಿಂದ ಹೂ ತೋಟಕ್ಕೆ ಹೋಗುತ್ತಾರೆ. ಅಲ್ಲಿ ಎಲ್ಲ ಭಕ್ತರು ನೈವೇದ್ಯ ಮಾಡುವದರೊಂದಿಗೆ ಎಲ್ಲ ಭಕ್ತಾಧಿಗಳಿಗೆ ಪರಸ್ಪರ ಪ್ರಸಾದ ವಿನಿಮಯ ಮಾಡಿಕೋಳ್ಳುತ್ತಾರೆ. ನಂತರ ಶ್ರೀ ಸಿದ್ದೇಶ್ವರ ದೇವಸ್ಥಾನಕ್ಕೆ ಆಗಮಿಸಿ ಶ್ರೀಶೈಲಕ್ಕೆ ಪ್ರಯಾಣಿಸಿ ಬಂದವರಿಗೆ ಅರಿವೆ ಉಡುಗೊರೆ ನೀಡುತ್ತಾರೆ. ಈ ರೀತಿ ಉಡುಗೊರೆ ಮಾಡುವ ಪದ್ಧತಿಗೆ ಒಂದು ಹಿನ್ನೆಲೇ ಕಥೆಯಿದೆ.

ಏಕೆಂದರೆ ಶ್ರೀಶೈಲಕ್ಕೆ ಮುಂಚೆ ಹೋಗುವಾಗ ಬಹಳಷ್ಟು ಕ್ರೂರ ಮೃಗಾದಿಗಳು ವಾಸವಾಗಿರುವದರಿಂದ ಮನುಷ್ಯ ಮರಳಿ ಬರುವದು ಕಠಿಣವಾಗಿತ್ತು. ಈ ಹಿನ್ನೆಲೇಯಲ್ಲಿ ಮರಳಿ ಬಂದ ಮೇಲೆ ಪುನರ್ಜನ್ಮವೆಂದು ಭಾವಿಸುತ್ತಿದ್ದರು ನಂತರ ಐದೇಶಿ ಆಚರಿಸುವದುಂಟು.

ಮಲ್ಲಯ್ಯನು ಊರ ಪ್ರವೇಶಿಸಿದ ನಂತರ ಐದನೇಯ ದಿನ ಐದೇಶಿ ಎಂದು ಆಚರಣೆ ಮಾಡುತ್ತಾರೆ. ಐದೇಶಿಯ ದಿನ ಪ್ರತಿಯೊಂದು ಮನೆಯಲ್ಲಿ ಸಿಹಿ ಊಟದ ಪಕ್ವವನ್ನೂ ಮಾಡಿರುವರು. ಈ ದಿವಸದ ಇನ್ನೊಂದು ವೈಶಿಷ್ಟ್ಯವೆಂದರೆ ಬೌರಮ್ಮನ ಪೂಜೆ ಬೌರಮ್ಮಳು ಶ್ರೀಶೈಲದ ಮಲ್ಲಿಕಾರ್ಜುನನ ಸಹೋದರಿ ಇವಳು ಕಂಬಿಯ ಜೋತೆ ಬಂದಿರುತ್ತಾಳೆ. ಅಂದು ನೀರಿನ ತಂಬಿಗೆಯ ಮೇಲೆ ಅಕ್ಕಿ ಹಾಗೂ ಕುಂಭ ಇಟ್ಟು ಎಲೆ, ಅಡಿಕೆ, ಬಾಳೆಹಣ್ಣು ಕಾಣಿಕೆ ರೂಪಾಯಿ ಇಟ್ಟು ಪೂಜೆಯನ್ನು ಸಲ್ಲಿಸುವರು.

ಆರನೇಯ ದಿನ ಊರಲ್ಲಿ ಎಲ್ಲರೂ ಪರಸ್ಪರ ಬೆಲ್ಲ ಹಚ್ಚುವರು ಈ ಸಂಧರ್ಭದಲ್ಲಿ ಕೇಲವು ಜನ ತಮ್ಮ ಶಕ್ತಾನುಸಾರ ಸಿಹಿ ಹಂಚುವರು ಹೇಗೆಂದರೆ ತಾವು ಮಲ್ಲಿಕಾರ್ಜುನನಿಗೆ ಬೇಡಿಕೊಂಡು ಬಯಸಿದ ಕಾರ್ಯ ಈಡೆರಿಸಿದಾಗ ಹರಕೆಗಾಗಿ ಕೇಲವರು ಕ್ವಿಂಟಲಗಟ್ಟಲೇ ಬೆಲ್ಲ ಹಂಚುತ್ತಾರೆ. ಈ ಹಿನ್ನೆಲೆಯಲ್ಲಿ ಗಾದೆ ಮಾತೊಂದು ಬಳಕೆಯಲ್ಲಿದೆ. [ಎಲ್ಲರಿಗೂ ಸಿಗಲು, ಮಲ್ಲಯ್ಯನ ಬೆಲ್ಲವೆ]

ಅಲ್ಲಿಯ ಮಲ್ಲಯ್ಯನ ಕಂಬಿ ದೇವಸ್ಥಾನದಲ್ಲಿ ತಂದು ಸ್ಥಾಪಿಸುತ್ತಾರೆ. ಪುರಾತನ ಕಾಲದಿಂದಲೂ ಈ ವ್ಯವಸ್ಥೆ ನಡೆದುಕೊಂಡು ಬಂದಿರುವದು ಕಂಡುಬರುತ್ತದೆ.

ಶ್ರೀ ಸಿದ್ಧೇಶ್ವರ ದೇವಾಲಯಲ್ಲಿ ನಡೆಯುವ ಆಚರಣೆಗಳು

ಶ್ರೀ ಸಿದ್ಧೇಶ್ವರ ಕೊಟ್ಟಲಗಿ ಗ್ರಾಮದ ಗ್ರಾಮ ದೇವತೆಯಾಗಿದೆ. ಹೀಗಾಗಿ ದೇವಸ್ಥಾನದಲ್ಲಿ ನಡೆಯುವ ಪ್ರತಿಯೊಂದು ಆಚರಣೆಯು ಬಹಳ ವಿಶಿಷ್ಟವಾಗಿ ವಿಶೇಷವಾಗಿ ಜರುಗುತ್ತವೆ. ಶ್ರೀ ಸಿದ್ಧೇಶ್ವರ ದೇವಸ್ಥಾನದಲ್ಲಿ ದಿನಾಲು ಮೂರು ವೇಳೆ ಪೂಜಾ ಕಾರ್ಯ ನಡೆಯುತ್ತದೆ. ಈ ಮೂರು ವೇಳೆ ಪೂಜೆಯ ವೈಶಿಷ್ಟ್ಯವೆನೆಂದರೆ

೧) ಮುಂಜಾನೆಯ ಪೂಜೆ ಬಾಲಸಿದ್ಧೇಶ್ವರನ ರೂಪಕ

೨) ಮಧ್ಯಾಹ್ನ ಪೂಜೆ ಸಿದ್ಧೇಶ್ವರನ ಯವ್ವನ ರೂಪದ ಪ್ರತೀಕ

೩) ಸಾಯಂಕಾಲದ ಪೂಜೆ ಮುಪ್ಪಾವಸ್ಥೆಯ ರೂಪಕ.

ಹೀಗೆ ವಿಶಿಷ್ಟ ಹಿನ್ನೆಲೆಯಲ್ಲಿ ಪೂಜೆಗಳು ನೇರವೆರುತ್ತವೆ.

ಶ್ರೀ ಸಿದ್ಧೇಶ್ವರ ದೇವಸ್ಥಾನದಲ್ಲಿ ಪೂಜಾರಿಗಳು ನಸುಕಿನ ೪ ಗಂಟೆಗೆ, ಮಧ್ಯಾಹ್ನ ೧೨ ಗಂಟೆಗೆ ಮತ್ತು ಸಾಯಂಕಾಲ ೬ ಗಂಟೆಗೆ ಪೂಜೆ ನೆರವೇರಿಸುತ್ತಾರೆ. ನಸುಕಿನ ಪೂಜೆಯ ಸಮಯಕ್ಕೆ ಮೂವರು ಪೂಜಾರಿಗಳು ಹೂತೋಟದಲ್ಲಿಯ ಶೀತಲ ಭಾವಿಯಿಂದ ತೀರ್ಥದ ನೀರನ್ನು ಮಡಿಯಿಂದ ಸ್ನಾನ ಮಾಡಿ ಹೊತ್ತು ತರುತ್ತಾರೆ. ಶೀತಲ ಭಾವಿಯಿಂದ ತಂದ ಈ ಮೂರು ಕೊಡ ತೀರ್ಥ ಮೂರು ಹೊತ್ತಿನ ಪೂಜೆಗೆ ಒಂದೊಂದು ಕೊಡದಂತೆ ಬಳಸುತ್ತಾರೆ. ಸಿದ್ಧೇಶ್ವರನಿಗೆ ಗಂಧ, ವಿಭೂತಿ ಧಾರಣೆ ಮಾಡುತ್ತಾರೆ. ಅನೇಕ ಪುಷ್ಪಗಳಿಂದ ಪೂಜಿಸುವುದುಂಟು. ನಸುಕಿನಲ್ಲಿ ಪೂಜೆಯ ಪದ್ಯಗಳನ್ನು ಹೇಳುತ್ತಾರೆ. ಮಂತ್ರ ವಿಧಿಗಳನ್ನು ಹೇಳುತ್ತಾರೆ. ಗರ್ಭಗುಡಿಯಲ್ಲಿರುವ ಲಿಂಗಕ್ಕೆ ವಿವಿಧ ರೀತಿಯ ಅಲಂಕಾರ ಭರಿತವಾದ ವಿಭೂತಿ ಧರಿಸುವರು. ಪ್ರತಿ ಸೋಮವಾರದಂದು ವಿಶೇಷ ಪೂಜೆಯಿರುತ್ತದೆ. ಇದರಂತೆ ದೀಪಾವಳಿ ಶಿವರಾತ್ರಿ ಮತ್ತು ಯುಗಾದಿ ಈ ಸಂದರ್ಭಗಳಲ್ಲಿ ವಿಶೇಷ ಪೂಜೆ ನೇರವೆರುತ್ತದೆ. ಸಿದ್ಧೇಶ್ವರನ ಭಕ್ತಾದಿಗಳು ಶ್ರೀ ಸಿದ್ಧೇಶ್ವರ ದೇವರಿಗೆ ಪೂಜೆ ಗಟ್ಟಿಸುವುದು ಒಂದು ವಿಶಿಷ್ಟ ಆಚರಣೆಯಾಗಿದೆ. ಶ್ರೀ ದೇವರ ಪೂಜಾ ಸಾಮಾನುಗಳೆಂದರೆ : ಗೋದಿ, ಅಕ್ಕಿ, ಕಡಲೆ ಬೆಳೆ ತಲಾ ಒಂದೊಂದು ಕೆ.ಜಿ. ಧೂಪ, ಕರ್ಪೂರ, ಊದು ತಲಾ ಅರ್ಧ ಕಿ.ಲೋ. ಬೇಕಾಗುತ್ತದೆ. ಅದರಂತೆ ಊದಬತ್ತಿ ಕುಂಕುಮ ವಿಭೂತಿ ಪೂಜಾ ಸಾಹಿತ್ಯ ಹತ್ತು ಟೆಂಗು ಸೊನೆರಿ ಕಾಗದ, ಕಪ್ಪು ಕಾಗದ, ಚಕ್ರದ ಹೂವು, ಹೊಸ ಬಟ್ಟೆ, ವಿಳೇದ ಎಲೆ,. ಹೂವು ನಿಂಬೆಹಣ್ಣು, ಬಾಳೆಹಣ್ಣು ಬೇಕಾಗುತ್ತದೆ. ಗೋದಿ ಧಾನ್ಯವನ್ನು ಮುತ್ತೈದೆ ಹೆಣ್ಣು ಮಗಳು ಮಡಿಯಿಂದ ನೀರು ಹಚ್ಚಿ ವರಳಲ್ಲಿ ಕುಟ್ಟುತ್ತಾಳೆ. ಎಲ್ಲವನ್ನು ಸಿದ್ಧೇಶ್ವರ ದೇವರಿಗೆ ಹಾಕಿ ಪೂಜಿಸುವ ವಿಶಿಷ್ಟ ಆಚರಣೆವುಂಟು. ಪೂಜೆ ಗಟ್ಟಿಸುವ ವ್ಯಕ್ತಿಗಳು ಮನೆಯಲ್ಲಿ ಈ ಮೇಲಿನ ಎಲ್ಲ ವಸ್ತುಗಳನ್ನು ಮುಂಚಿತವಾಗಿ ತಂದಿರಿಸಿಕೊಂಡಿರುತ್ತಾರೆ. ಪೂಜೆಯ ದಿನ ಮೊದಲೆ ನಿಶ್ಚಿತ ಪಡಿಸಿ ಪೂಜೆ ಗಟ್ಟಿಸುವ ವಿಚಾರ ದೇವಾಲಯದ ಪೂಜಾರಿಗಳಿಗೆ ತಿಳಿಸಿರುತ್ತಾರೆ. ಪೂಜಾರಿಗಳು ಭಕ್ತರು ಪೂಜೆ ಕೊಡುವ ದಿನ ಅವರ ಮನೆಗೆ ಮುಂಜಾನೆ ೭ ರಿಂದ ೮ ಗಂಟೆಯ ಸಮಯಕ್ಕೆ ಲಂಗೋಟಿ ಕಂಬಳಿ ಧರಿಸಿದ ಒಬ್ಬ ಮಡಿ ಪೂಜಾರಿ ಕರಡಿ, ಶಹನಾಯಿ ವಾದ್ಯ ಮೇಳಗಳೊಂದಿಗೆ ಛತ್ರಛಾಮರಗಳನ್ನು ತೆಗೆದುಕೊಂಡು ಆಗಮಿಸುತ್ತಾರೆ. ಈ ಸಂದರ್ಭದಲ್ಲಿ ಆ ಮನೆಯ ಜನರು ಗ್ರಾಮದ ಅನೇಕರು ಆಗಮಿಸುವುದುಂಟು. ಮತ್ತು ಆ ಮನೆಯಲ್ಲಿ ಪೂಜಾರಿಗೆ ಕಟ್ಟಿಗೆಯಿಂದ ತಯಾರಿಸಿದ ಮಣೆಯನ್ನು ಹಾಕಿ ಕೂಡ್ರಿಸುತ್ತಾರೆ.

ವಿವಿಧ ಪೂಜಾ ಸಾಮಾನು ಮತ್ತು ನಿರ್ದಿಷ್ಟ ಪಡಿಸಿದ ಕಾಣಿಕೆಯನ್ನು ಹಾಗೆಯೇ ಮಡಿಯಿಂದ ಕುಟ್ಟಿತಯಾರಿಸಿದ ಗೋದಿ ಧಾನ್ಯವನ್ನು ವಾದ್ಯ ಮೇಳಗಳೊಂದಿಗೆ ತೆಗೆದುಕೊಂಡು ದೇವಸ್ಥಾನಕ್ಕೆ ಮರಳುತ್ತಾರೆ. ಆ ಸಂದರ್ಭದಲ್ಲಿ ದೇವಸ್ಥಾನದ ವರೆಗೆ ಆ ಮನೆಯವರು ಆಗಮಿಸಿ ದೇವರ ದರ್ಶನ ಮಾಡಿಕೊಂಡು ಮುಂದಿನ ತಮ್ಮ ಕೆಲಸ ಕಾರ್ಯಗಳಿಗೆ ತೆರಳುತ್ತಾರೆ. ಹಾಗೆಯೇ ತೆರಳುವಾಗ ಪೂಜಾರಿಗಳಿಗೆ ೨೫ ಜನರಿಗೆ ನಮ್ಮ ಮನೆಗೆ ಊಟಕ್ಕೆ ಬರಬೇಕೆಂದು ಆಮಂತ್ರಣ ಕೊಡುತ್ತಾರೆ. ಮಧ್ಯಾಹ್ನ ಪೂಜೆಯಾದ ಮೇಲೆ ಮನೆಯ ಜನ ತಯಾರಿಸಿದ ನೈವೇದ್ಯವನ್ನು ದೇವರಿಗೆ ಒಪ್ಪಿಸಿ ನಂತರ ಪೂಜಾರಿಗಳು ಸ್ವಾಮಿಗಳು ಸೇರಿ ಮೊದಲ ಪಂಕ್ತಿಯಲ್ಲಿ ಊಟಮಾಡುತ್ತಾರೆ. ಇದಾದ ನಂತರ ಇತರರಿಗೆ ಊಟ ಮಾಡಿಸಲು ಅವಕಾಶ ಮಾಡಿಕೊಡುತ್ತಾರೆ. ಈ ರೀತಿ ವರ್ಷದ ಪ್ರತಿ ದಿನವಸವೂ ಹಲವಾರು ಭಕ್ತರು ತಮ್ಮ ಹೆಸರಿನಲ್ಲಿ ಸಿದ್ಧೇಶ್ವರ ದೇವಸ್ಥಾನದಲ್ಲಿ ಪೂಜೆ ಕೊಡುವುದುಂಟು.

ದೇವಸ್ಥಾನದಲ್ಲಿ ಪ್ರತಿ ಸೋಮವಾರ ನಡೆಯುವ ನಸುಕಿನ ಪೂಜೆಗೆ 'ಹರಪೂಜೆ' ಎಂದು ಕರೆಯುವುದುಂಟು. ಗ್ರಾಮದ ಹಲವಾರು ಭಕ್ತಾದಿಗಳು ನಸುಕಿನಲ್ಲಿ ೪ ಗಂಟೆಗೆ ಈ ಪೂಜೆಗೆ ಹಾಜರಿರುವುದುಂಟು. ಹಲವಾರು ಜನರು ಹರಕೆಯ ರೂಪದಲ್ಲಿ ಈ ಪೂಜೆಗೆ ಆಗಮಿಸಿರುವುದುಂಟು. ಗ್ರಾಮದ ಬೇರೆ ಬೇರೆ ಓಣಿಗಳಿಂದ ಸೋಮವಾರ ದೇವಸ್ಥಾನಕ್ಕೆ ಭಕ್ತಾದಿಗಳು ಆಗಮಿಸುತ್ತಾರೆ. ತೆಂಗಿನ ಕಾಯಿ ಊದಿನ ಕಡ್ಡಿ ಮೀಸಲು ತುಪ್ಪ, ಹಾಲು ಎಲ್ಲ ತರುತ್ತಾರೆ. ಬರೈಯಿಂದ ಬರಬಾರದೆಂದು ದವಸ ಧಾನ್ಯಗಳಾದ ಜೋಳ. ಅಕ್ಕಿ, ಗೋದಿ ತೆಗೆದುಕೊಂಡು ಬರುವುದುಂಟು.

ಸೋಮವಾರ ರಾತ್ರಿ ಶ್ರೀ ಸಿದ್ಧೇಶ್ವರ ಪಲ್ಲಕ್ಕಿ ಉತ್ಸವ ಜರಗುತ್ತದೆ ಮತ್ತು ವಿಶೇಷ ಹಬ್ಬ ಹರಿದಿನಗಳಾದ ಯುಗಾದಿ, ಶಿವರಾತ್ರಿ ಮತ್ತು ದೀಪಾವಳಿ ಅಮಾವಾಸ್ಯೆ, ಹುಣ್ಣಿಮೆಯ ಸಂದರ್ಭದಲ್ಲಿ ಪಲ್ಲಕ್ಕಿ ಸೇವೆ ನಡೆಯುವುದುಂಟು. ದೀಪಾವಳಿ ಮತ್ತು ಶಿವರಾತ್ರಿ ಸಂದರ್ಭದಲ್ಲಿ ದೇವರಿಗೆ ವಿಶೇಷ ಅಭಿಷೇಕ ನಡೆಯುತ್ತದೆ. ಈ ಸಂದರ್ಭದಲ್ಲಿ ಗ್ರಾಮದ ಯುವಕರು ತಾಲೂಕಿನ ಝುಂಜುರವಾಡ ಗ್ರಾಮಕ್ಕೆ ಹೋಗಿ ಮಡಿಯಿಂದ ಕೃಷ್ಣಾ ನದಿಯ ನೀರನ್ನು ಅಭಿಷೇಕಕ್ಕೆ ತರುತ್ತಾರೆ,. ಅಭಿಷೇಕಕ್ಕೆ ತೀರ್ಥ ತರುವವ್ಯಕ್ತಿ ಮಲಮೂತ್ರ ವಿಸರ್ಜನೆ ಮಾಡಬಾರದು. ಎಂದರೆ ಶುಚಿರ್ಭೂತನಾಗಿ ಶೌಚ್ಯ ಮುಗಿಸಿಕೊಂಡು ಸ್ನಾನ ಮಾಡಿ ತೀರ್ಥ ತೆಗೆದುಕೊಂಡು ಬರಬೇಕು. ಹಾಗೇ ಬರುವಾಗ ಮಲಮೂತ್ರ ವಿಸರ್ಜನೆ ಮಾಡುವುದಾದರೆ ತೀರ್ಥ ತಂಬಿಗೆಯನ್ನು ಗಿಡದಲ್ಲಿ ಕಟ್ಟಿ ಶೌಚಕರ್ಮ ಮುಗಿಸಿ ನಂತರ ಸ್ನಾನಮಾಡಿ ಮತ್ತೆ ತೀರ್ಥದ ತಂಬಿಗೆ ತೆಗೆದುಕೊಂಡು ಬರಬೇಕು. ಅಲ್ಲದೇ ಈ ಸಂದರ್ಭದಲ್ಲಿ ಪಾದ ರಕ್ಷೆಯನ್ನು ಧರಿಸುವಂತಿಲ್ಲ. ಎಷ್ಟೋ ವೇಳೆ ಯುವಕರ ಪಾದಗಳಲ್ಲಿ ಬೊಬ್ಬೆಗಳು ಉಂಟಾಗುತ್ತವೆ.

ದೀಪಾವಳಿ ಮತ್ತು ಶಿವರಾತ್ರಿಗಳಲ್ಲಿ ದೇವಸ್ಥಾನದಲ್ಲಿ ಮಹಾ ಅಭಿಷೇಕ ಜರುಗುತ್ತದೆ. ಈ ಸಂದರ್ಭದಲ್ಲಿ ಪೂಜಾರಿ ಓಣಿಯ ಪರ ಊರಿನಲ್ಲಿರುವ ವ್ಯಕ್ತಿಗಳು ಆಗಮಿಸುವುದುಂಟು. ಅಭಿಷೇಕಕ್ಕೆ ನಾಲ್ಕು ಪೂಜಾರಿ ವಂಶದವರು ಮನೆಗೆ ಒಬ್ಬರಂತೆ ಎಲ್ಲರೂ ಪಾಲ್ಗೊಳ್ಳುತ್ತಾರೆ. ಅಭಿಷೇಕ ವಿಶೇಷ ಪೂಜೆ ಮುಗಿದ ನಂತರ ಎಲ್ಲರು ತೆರಳುತ್ತಾರೆ. ಶಿವರಾತ್ರಿಯ ಸಂದರ್ಭದಲ್ಲಿ ಸಿದ್ಧೇಶ್ವರ ದೇವಾಲಯಕ್ಕೆ ಗ್ರಾಮದ ವಿವಿಧ ಓಣಿಯ ಹಾಗೂ ಪೂಜಾರಿ ಓಣಿಯ ಎಲ್ಲ ಜನರು ಅಭಿಷೇಕಕ್ಕೆ ಬಾಳೆಹಣ್ಣುಗಳನ್ನು ನೀಡುವುದುಂಟು. ದೇವಾಲಯದಲ್ಲಿ ಬಾಳೆಹಣ್ಣು

ರಾಶಿ ರಾಶಿಯಾಗಿ ಸಂಗ್ರಹವಾಗುತ್ತದೆ. ಅಲ್ಲದೇ ದೊಡ್ಡ ದೊಡ್ಡ ಪಾತ್ರೆಗಳಲ್ಲಿ ಗ್ರಾಮದ ಜನರಿಗಾಗಿ ಅಭಿಷೇಕ ಸಿದ್ಧವಾಗುತ್ತದೆ. ನಂತರ ಪೂಜಾರಿಗಳು ಎಲ್ಲ ಸಮುದಾಯದವರಿಗೂ ಅಭಿಷೇಕ ವಿತರಣೆ ಮಾಡುತ್ತಾರೆ.

ನಾಗರ ಪಂಚಮಿಯಲ್ಲಿ ಪೂಜಾರಿ ವಂಶದವರು ಗ್ರಾಮದ ಜನ ಒಳಗಿನ ನಾಗಪ್ಪನಿಗೆ ಹಾಲೆರೆಯುವ ದಿನವೇ ಸಿದ್ಧೇಶ್ವರ ಗುಡಿಯಲ್ಲಿರುವ ನಾಗಶಿಲ್ಪಕ್ಕೆ ಹಾಲೆರೆಯುವದುಂಟು. ಏಕೆಂದರೆ ಯಾವ ಒಬ್ಬ ಪೂಜಾರಿ ವಂಶದವರು ತಮ್ಮ ಮನೆಯಲ್ಲಿ ಹಾಲೆರೆಯುವ ಪದ್ಧತಿಯಿರುವುದಿಲ್ಲ. ಏಕೆಂದರೆ ಪೂರ್ವಜರಿಂದ ಈ ಪದ್ಧತಿ ನಡೆದುಕೊಂಡು ಬಂದಿದೆ. ಗ್ರಾಮದಲ್ಲಿ ಇತರ ಸಮುದಾಯದೊಂದಿಗೆ ಹೋಲಿಸಿದಾಗ ಇದೊಂದು ಭಿನ್ನವಾದ ಆಚರಣೆಯಾಗಿ ಕಂಡುಬರುತ್ತದೆ. ನಾಗಪಂಚಮಿಯ ಎರಡನೇ ದಿನ ಗ್ರಾಮದ ಜನ ವಿವಿಧ ಓಣಿಗಳಲ್ಲೆಲ್ಲಾ ಹಾಲೇರೆಯುವ ಕಾರ್ಯಕ್ರಮ ಜರುಗುತ್ತದೆ. ಆದರೇ ಪೂಜಾರಿ ಓಣಿಯ ಜನರು ಎರಡನೇ ದಿನ ಹಾಲೆರೆಯುವದಿಲ್ಲ.

ಮಹಾ ಆರಾಧನಾ ಕಾರ್ಯಕ್ರಮ

ಶ್ರೀ ಸಿದ್ಧೇಶ್ವರ ಆರಾಧನಾ ಕಾರ್ಯಕ್ರಮವು ಮೂರು ವರ್ಷಕ್ಕೊಮ್ಮೆ ನಡೆಯುವುದುಂಟು. ಗ್ರಾಮದೇವತೆಯ ಆರಾಧನೆಯಾಗಿರುವುದರಿಂದ ಈ ಕಾರ್ಯಕ್ರಮಕ್ಕೆ ಗ್ರಾಮದಲ್ಲಿ ವಿಶೇಷ ಮಹತ್ವವಿದೆ. ಸಿದ್ಧೇಶ್ವರನನ್ನು ಆರಾಧಿಸುವ ಈ ಕಾರ್ಯಕ್ರಮವು ಒಂದು ರೀತಿಯಲ್ಲಿ ಸಮಾಜ ಪರಿವರ್ತನ ಕಾರ್ಯವಾಗಿ ರೂಪಿತಗೊಂಡಿದೆ. ಹೇಗೆಂದರೆ ಗ್ರಾಮದ ಎಲ್ಲ ಸಮೂದಾಯದ ಹಿರಿಯರು ಸೇರಿಕೊಂಡು ಕಾರ್ಯಕ್ರಮದ ದಿನಾಂಕವನ್ನು ಗೊತ್ತುಪಡಿಸುತ್ತಾರೆ. ಈ ಕುರಿತು ಪತ್ರಿಕೆಗಳಲ್ಲಿ ಹಾಗೂ ಜಾಹೀರಾತುಗಳ ಮೂಲಕ ಎಲ್ಲ ಜನರಿಗೆ ತಿಳಿಸುತ್ತಾರೆ. ನಂತರ ವಿವಿಧ ಸಮೂದಾಯದ ಜನರನ್ನೊಳಗೊಂಡಂತೆ ಕಾರ್ಯಕ್ರಮದ ಯಶಸ್ವಿಗೆ ವಿವಿಧ ಸಮಿತಿಗಳನ್ನು ರಚಿಸಿಕೊಳ್ಳುತ್ತಾರೆ. ಎಲ್ಲ ಸಮೂದಾಯದವರು ಅತ್ಯಂತ ಪ್ರೀತಿಯಿಂದ ಜವಾಬ್ದಾಯನ್ನು ವಹಿಸಿಕೊಳ್ಳುತ್ತಾರೆ. ಭಕ್ತಿಯಿಂದ ನಿಸ್ವಾರ್ಥದಿಂದ ಈ ಕಾರ್ಯದಲ್ಲಿ ಪಾಲ್ಗೊಳ್ಳುತ್ತಾರೆ.

ಆರಾಧನಾ ಕಾರ್ಯಕ್ರಮ ಪ್ರಾರಂಭವಾಗುವದಕ್ಕಿಂತ ಪೂರ್ವದಲ್ಲಿ ಹತ್ತು ಹದಿನೈದು ಇಪ್ಪತ್ತು ದಿನಗಳವರೆಗೆ ಮೊದಲೇ ನಿರ್ಧರಿಸಿದಂತೆ ಮುಂಜಾನೆ ಅಥವಾ ಸಾಯಂಕಾಲ ಪ್ರವಚನ ಕಾರ್ಯಕ್ರಮ ನಡೆಯುತ್ತದೆ. ಇಂತಹ ಪ್ರವಚನ ಕಾರ್ಯಕ್ರಮವನ್ನು ರಾಜ್ಯದ ವಿವಿಧ ಭಾಗಗಳ ಅನೇಕ ಪೂಜ್ಯರು ನೆರವೆರಿಸಿಕೊಡುವುದುಂಟು ಇಂತಹ ಒಂದು ಕಾರ್ಯಕ್ರಮದಲ್ಲಿ ವಿಜಾಪೂರದ ಜ್ಞಾನಯೋಗಾಶ್ರಮದ ಪೂಜ್ಯ. ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳಂತಹ ಮಹಾತ್ಮರು ನಡೆಸಿಕೊಟ್ಟಿದ್ದು ಗ್ರಾಮದ ಮಟ್ಟದಲ್ಲಿ ಇತಿಹಾಸವೇ ಸರಿ.

ಆರಾಧನಾ ಕಾರ್ಯಕ್ರಮ ಆರಂಭದ ದಿನದಿಂದ ಶ್ರೀ ಸಿದ್ಧೇಶ್ವರ ದೇವರಿಗೆ ವಿಶೇಷ ಪೂಜೆ ರುದ್ರಾಭಿಷೇಕ ಕಾರ್ಯಕ್ರಮ ಜರುಗುತ್ತದೆ. ಆರಾಧನಾ ಕಾರ್ಯಕ್ರಮಕ್ಕೆ ಆಗಮಿಸಿದ ಮಹಾತ್ಮರಿಂದ ಮುಂಜಾನೆ ಮತ್ತು ಸಾಯಂಕಾಲ ಪ್ರವಚನ ಕಾರ್ಯಕ್ರಮ ದಿನವೂ ನಡೆಯುತ್ತದೆ. ಕೊಟ್ಟಲಗಿ ಗ್ರಾಮದ ಜನ ಜ್ಞಾನ ಪಿಪಾಸುಗಳು. ಭಕ್ತಿಶ್ರದ್ಧೆವುಳ್ಳವರು. ಏಕೆಂದರೆ ಪ್ರವಚನ ಪ್ರಸಾದ ಬಿಟ್ಟರೇ ಯಾವುದೇ ಜಾತ್ರೆಯ ಆಕರ್ಷಣೆಗಳನ್ನು ಈ ಸಂದರ್ಭದಲ್ಲಿ ನಡೆಸುವುದಿಲ್ಲ.

ಪ್ರತಿ ದಿನ ಪ್ರವಚನಕ್ಕೆ ಸುತ್ತ ಮುತ್ತಲ ಗ್ರಾಮದಿಂದಲೂ ಜನತೆ ಆಗಮಿಸುವುದುಂಟು. ಹೀಗಾಗಿ ಆಗಮಿಸಿದ ಎಲ್ಲ ಸದ್ಭಕ್ತರಿಗೂ ಅನ್ನ ಪ್ರಸಾದ ವ್ಯವಸ್ಥೆ ಮಾಡುತ್ತಾರೆ. ಕೊನೆಯ ದಿನ ವಿಶೇಷ ಪ್ರವಚನ ಕಾಯಕ್ರಮ ಹಾಗೂ ಆರಾಧನಾ ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ ಮಹನಿಯರನ್ನು ಸತ್ಕರಿಸುವುದು ಹೀಗೆ ವಿವಿಧ ಕಾರ್ಯಕ್ರಮ ಹಾಗೂ ಮಹಾಪ್ರಸಾದದೊಂದಿಗೆ ಕೊನೆಗೊಳ್ಳುತ್ತದೆ.

ಇದಲ್ಲದೆ ಶ್ರಾವಣ ಮಾಸದಲ್ಲಿ ಬರುವ ಪ್ರತಿ ಸೋಮವಾರದಂದು ಸಿದ್ಧೇಶ್ವರ ಉತ್ಸವ ಮೂರ್ತಿಯನ್ನು ತೆಗೆದುಕೊಂಡು ಹೂದೋಟದ ಶೀತಲ ಬಾವಿಗೆ ಹೋಗಿ ಪೂಜೆ ಸಲ್ಲಿಸಿಕೊಂಡು ಮರಳಿ ದೇವಾಲಯಕ್ಕೆ ಆಗಮಿಸುವ ಪದ್ಧತಿವುಂಟು. ಕೊನೆಯ ಸೋಮವಾರದಂದು ಅತೀ ವಿಜ್ರಂಬಣೆಯಿಂದ ಈ ಕಾರ್ಯಕ್ರಮ ಮುಕ್ತಾಯಗೊಳ್ಳುತ್ತದೆ. ಈ ರೀತಿಯಾಗಿ ಗ್ರಾಮ ದೇವತೆಯಾದ ಸಿದ್ಧೇಶ್ವರ ವಿಶಿಷ್ಟ ಪರಂಪರೆಯೊಂದಿಗೆ ಗ್ರಾಮದ ಸಂಸ್ಕೃತಿಯ ಕೇಂದ್ರವಾಗಿ ಗೋಚರಿಸುತ್ತದೆ.

೭.೨.೩ ಜಾತ್ರೆಗಳು

ಲಕ್ಷ್ಮೀ ದೇವಿಯ ಜಾತ್ರೆ (ನಡುಊರ ದೇವತೆ)

ಗ್ರಾಮದ ಚಾವಡಿಯ ಪಕ್ಕದಲ್ಲಿರುವ ಲಕ್ಷ್ಮೀ ದೇವಿಯ ಜಾತ್ರೆಯು ವಿಶಿಷ್ಟವಾಗಿ ಜರುಗುತ್ತದೆ. ಪ್ರತಿ ವರ್ಷ ಅಕ್ಷತ್ತಿಗೆ ಅಮವಾಸ್ಯೆ ಆದಮೇಲೆ ಜಾತ್ರೆ ನೆರವೆರುತ್ತದೆ. ಗ್ರಾಮದ ಹಿರಿಯರೆಲ್ಲ ಸೇರಿ ಜಾತ್ರೆಯ ದಿನವನ್ನು ನಿರ್ಧರಿಸುತ್ತಾರೆ. ಜಾತ್ರೆಗೆ ಗ್ರಾಮದಲ್ಲಿ ಜನರಿಂದ ಕಾಣಿಕೆ ಸಂಗ್ರಹಿಸುತ್ತಾರೆ. ದೇವಸ್ಥಾನ ಸ್ವಚ್ಚಗೊಳಿಸುತ್ತಾರೆ. ಹಾಗೂ ಬಣ್ಣ ಸುಣ್ಣ ಬಳಿಯುತ್ತಾರೆ. ದೇವಸ್ಥಾನದ ಮುಂದೆ ಮಂಟಪವನ್ನು ಹಾಕುತ್ತಾರೆ. ಜಾತ್ರೆಯ ಮೊದಲ ದಿನ ಗ್ರಾಮದ ಕುರುಬರ ಜನಾಂಗದವರು ಡೊಳ್ಳಿನ ಹಾಡಗಳನ್ನು ಹಾಡುತ್ತಾರೆ. ಮಾರನೇ ದಿನ ಎಲ್ಲ ಹೆಣ್ಣು ಮಕ್ಕಳು ದೇವಿಗೆ ಹೊಸ ಬಟ್ಟೆ ಸೀರೆ ಧರಿಸಿ ಮುತ್ತೈದೆಯರಿಗೆ ಉಡಿ ತುಂಬಿ ಊಟ ಮಾಡಿಸುತ್ತಾರೆ. ನಂತರ ಗ್ರಾಮದ ಜನತೆಗೆ ಪ್ರಸಾದ ವ್ಯವಸ್ಥೆಯನ್ನು ಮಾಡುತ್ತಾರೆ. ಎರಡನೇಯ ದಿನ ಮನರಂಜನೆಗೆ ನಾಟಕ, ಭಜನಾ ಕಾರ್ಯಕ್ರಮ ಅಥವಾ ಗೀ ಗೀ ಪದ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತಾರೆ. ಜಾತ್ರೆ ಮುಗಿದ ಐದನೇಯ ದಿನ ದೇವಸ್ಥಾನದ ಮುಂದೆ ಹಾಕಿದ ಮಂಟಪವನ್ನು ಇಳಿಸುತ್ತಾರೆ. ಆ ದಿವಸ ದೇವಿ ಮುಂದಿರುವ ಉಡಿಯಕ್ಕಿ ಸಾಮಾನು ಕಾಯಿ, ಹಣ್ಣು ಮುಂತಾದ ವಸ್ತುಗಳನ್ನು ಲೀಲಾವು ಮಾಡುತ್ತಾರೆ. ಗ್ರಾಮದ ಜನತೆಯನ್ನೊಳಗೊಂಡ ವಿವಿಧ ಸಮಿತಿ ರಚಿಸಿಕೊಂಡು ಗ್ರಾಮದ ಹಿರಿಯರೊಂದಿಗೆ ಸೇರಿ ಈ ಎಲ್ಲ ಕಾರ್ಯಕ್ರಮವನ್ನು ನೇರವೆರಿಸುತ್ತಾರೆ. ಎಲ್ಲ ಜನಾಂಗದವರು ಈ ಕಾರ್ಯಕ್ರಮಗಳಲ್ಲಿ ಪಾಲ್ಗೋಳ್ಳುತ್ತಾರೆ. ಅರ್ಚಕರಾಗಿ ಶ್ರೀಮತಿ ಕಸ್ತೂರಿ ಸಿದ್ದಣ್ಣಾ ಪೊಪಡಿ ಇವರು ಲಕ್ಷ್ಮೀ ದೇವಿಯ ಸೇವೆ ಮಾಡುತ್ತಾರೆ. ಅಷ್ಟೇ ಅಲ್ಲದೇ ಗ್ರಾಮದ ಬಣಜಿಗ ಸಮುದಾಯದ ಹೆಣ್ಣು ಮಕ್ಕಳನ್ನು ಗಂಡನ ಮನೆಗೆ ಕಳುಹಿಸಿದ್ದರು ಗಂಡನ ಮನೆಯಿಂದ ಜಾತ್ರೆಯ ಸಂದರ್ಭದಲ್ಲಿ ಕೊಟ್ಟಲಗಿ ಗ್ರಾಮಕ್ಕೆ ಬಂದು ಲಕ್ಷ್ಮೀ ದೇವಿಗೆ ಉಡಿ ತುಂಬಿಸಿ ಮುತ್ತೈದೆಯರಿಗೆ ಊಟ ಮಾಡಿಸಿ ಹೋಗುತ್ತಾರೆ. ಗ್ರಾಮದ ಬಣಜಿಗ ಸಮುದಾಯದವರು ವಿಶೇಷ ಭಯ ಭಕ್ತಿಯಿಂದ ನಡೆದುಕೊಳ್ಳುವುದು ಕಂಡುಬರುತ್ತದೆ.

ದುರ್ಗಾದೇವಿ ದೇವಿ ದೇವಸ್ಥಾನ ಕೊರವರ ಓಣಿ

ದುರ್ಗಾದೇವಿ ಕೊರವ ಸಮುದಾಯದವರ ಆರಾಧ್ಯ ದೈವವಾಗಿದೆ. ದೇವಾಲಯದಲ್ಲಿ ದಿನಾಲು ಎರಡು ಹೊತ್ತು ಪೂಜೆ ನಡೆಯುತ್ತದೆ. ಈ ದೇವತೆ ಸ್ಥಾಪನೆಯಾಗಿ ನಾಲ್ಕೈದು ತಲೆಮಾರುಗಳು ಗತಿಸಿರಬೇಕೆಂದು ಕೊರವ ಸಮುದಾಯದವರ ಹೇಳಿಕೆ. ಮೊದಲು ಚಿಕ್ಕ ದೇವಾಲಯವಾಗಿದ್ದು ಇತ್ತೀಚೆಗೆ ಉರ್ಜಿತಗೊಳಿಸಿ ಮಂಟಪ ನಿರ್ಮಾಣ ಮಾಡಲಾಗಿದೆ.

ಈ ದೇವತೆಗೆ ಮಣ್ಣೇತ್ತಿನ ಅಮವಾಸ್ಯೆಯಲ್ಲಿ ಜಾತ್ರೆಯನ್ನು ಮಾಡುತ್ತಾರೆ. ನಿಂಬೆಹಣ್ಣು, ಬಾಳೆಹಣ್ಣು, ಹೂವಿನ ದಂಡೆ, ಹಸಿರು ಸೀರೆ, ಹಸಿರು ಜಂಪರ, ಬೆಳ್ಳಿ ಕಣ್ಣಬಟ್ಟು, ಹಿತ್ತಾಳೆ ಕಣ್ಣಬಟ್ಟು, ಉಡಿಯಕ್ಕಿ, ಖಾರಿಕ, ಕೊಬ್ಬರಿ, ಎಲೆ, ಅಡಿಕೆ, ಎಲ್ಲ ಪರಿಕರಗಳನ್ನು ಪೂಜೆಗೆ ಉಪಯೋಗಿಸುತ್ತಾರೆ. ಜಾತ್ರೆಯ ದಿವಸ ಮಣ್ಣಿನಿಂದ ಮಾಡಿದ ಬಂಡಿಯನ್ನು ತಯಾರಿಸುತ್ತಾರೆ ಅಲ್ಲದೇ ಎರಡು ಮಣ್ಣಿನ ಕೋಣಗಳನ್ನು ಅದಕ್ಕೆ ಹೂಡುತ್ತಾರೆ. ಎರಡು ದಿನ ಜಾತ್ರೆ ಜರುಗುತ್ತದೆ. ಎರಡನೇಯ ದಿನ ಮಧ್ಯಾಹ್ನ ಹೋಳಿಗೆ, ಕಡಬು, ಇದರ ಜೊತೆಗೆ ಗಬ್ಬದ ಕುರಿಯನ್ನು ಬಲಿ ಕೊಡುತ್ತಾರೆ. ತಲೆತಲಾಂತರದಿಂದ ಈ ಪದ್ಧತಿ ಕೊರವ ಜನಾಂಗದಲ್ಲಿ ಆಚರಣೆಯಲ್ಲಿದೆ. ಈ ರೀತಿ ಬಲಿ ಕೊಡುವುದಕ್ಕೆ ಎಂಟು ಕಾಲಿನ ಬೇಟೆ ಬೇಕೆಂದು ಗಬ್ಬದ ಕುರಿ ಬಲಿ ಕೊಡುವ ಜಾರಿಯಲ್ಲಿದೆ. ಹರಕೆ ಹೊತ್ತವರು ಈ ರೀತಿ ಹರಕೆ ಇಡೇರಿಸುವ ಪದ್ಧತಿ ಇದೆ.

ಉದಿಸುತ್ತಾ ಬಾರಿಸುತ್ತಾ ವಾಧ್ಯಗಳೊಂದಿಗೆ ಬಂಡಿಯನ್ನು ಗ್ರಾಮದ ಸೀಮೆಯಲ್ಲಿ ಬಿಡುತ್ತಾರೆ. ಮರಳಿ ಬಂದು ಎಲ್ಲ ತಮ್ಮ ಜನಾಂಗಕ್ಕೆ ರೊಟ್ಟಿ, ಅನ್ನ, ಮಾಂಸದ ಊಟವನ್ನು ಮಾಡುತ್ತಾರೆ. ಬಿಗರು, ಬಿಜ್ಜರು, ಸಂಬಂಧಿಕರನ್ನು ಜಾತ್ರೆಗೆ ಕರೆಸುತ್ತಾರೆ. ಜಾತ್ರೆಯ ಮೊದಲ ದಿನ ರಾತ್ರಿ ಭಜನೆ, ಚೌಡಿಕೆ ಹಾಡು, ಗೀ ಗೀ ಪದಗಳು ಈ ರೀತಿಯಾಗಿ ವಿವಿಧ ಮನರಂಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ.

ಎಲ್ಲಮ್ಮದೇವಿಯ ಜಾತ್ರೆ

ಕೊಟ್ಟಲಗಿ ಗ್ರಾಮದ ಎಲ್ಲಮ್ಮದೇವಿಯ ಜಾತ್ರೆ ಅತಿ ವಿಜ್ರಂಭಣೆಯಿಂದ ಜರಗುತ್ತದೆ. ಪ್ರತಿ ವರ್ಷ ಹೊಸ್ತಿಲ ಹುಣ್ಣಿಮೆಗೆ ಈ ಜಾತ್ರೆ ನಡೆಯುತ್ತದೆ. ಗ್ರಾಮದ ಎಲ್ಲ ಜನ ಮುಂಚಿತವಾಗಿ ಒಂದು ತಿಂಗಳ ಅವಧಿ ಊರಿನ ಹಿರಿಯ ಪ್ರಮುಖರು, ಪೂಜಾರಿಗಳು, ಜೋಗಮ್ಮಗಳು, ಪಲ್ಲಕ್ಕಿ ಹೊರುವರು ಇತ್ಯಾದಿಯಾಗಿ ಸೇರಿ ಜಾತ್ರೆ ಆಚರಿಸುವ ಬಗೆಯನ್ನು ಚರ್ಚಿಸಿ ನಿರ್ಣಯಿಸುತ್ತಾರೆ.

ನಂತರ ಊರಿನ ಹಿರಿಯರು ಹಾಗೂ ಪೂಜಾರಿಗಳು ಸೇರಿಕೊಂಡು ಊರಿನಲ್ಲಿ ಗ್ರಾಮದ ಭಕ್ತ ಸಮೂಹದಿಂದ ದೇಣಿಗೆಯನ್ನು ಸಂಗ್ರಹಿಸುತ್ತಾರೆ. ದೇಣಿಗೆಯು ಹಣದ ರೂಪದಲ್ಲಿ ಅಥವಾ ಧಾನ್ಯದ ರೂಪದಲ್ಲಿ ನೀಡುತ್ತಾರೆ. ಅಕ್ಕಿ, ಗೋದಿಯನ್ನು ಧಾನ್ಯ ರೂಪದಲ್ಲಿ ನೀಡುವುದುಂಟು. ಈ ರೀತಿಯಾಗಿ ನೀಡಿದ ಧಾನ್ಯವನ್ನು ಅನ್ನ ಪ್ರಸಾದಕ್ಕಾಗಿ ಬಳಸಿಕೊಳ್ಳುತ್ತಾರೆ. ನಂತರ ಹೊಸ್ತಿಲು ಹುಣ್ಣಿಮೆಗಿಂತಲು ಒಂದು ದಿನ ಮುಂಚಿತ ವಿಜಾಪೂರಕ್ಕೆ ಹೋಗಿ ಅಲ್ಲಿ ಹೂಗಾರರರಿಂದ ಹೂವು ಖರೀದಿಸಿಕೊಂಡು ಹುಣ್ಣಿಮೆಯ ದಿನ ಸಂಜೆಯ ಹೊತ್ತು ದೀಪ ಹಚ್ಚುವದಕ್ಕಿಂತಲೂ ಮುಂಚೆ ಕಾಲ್ನಡಿಗೆಯಲ್ಲಿ ನಡೆದುಕೊಂಡು ಬರಬೇಕು. ಗ್ರಾಮದಲ್ಲಿ ಈ

ಮೊದಲು ಹೂವು ತರವು ಕಾರ್ಯವನ್ನು ಕುರುಬ ಜನಾಂಗದವರು ಮಾಡುತ್ತಿದ್ದರು. ಆದರೆ ಈಗ ಶ್ರೀ ಯಲ್ಲಪ್ಪಾ ರಾಮಣ್ಣಾ ತಟ್ಟಿ ಎನ್ನುವವರು ಹತ್ತಾರು ವರ್ಷಗಳಿಂದ ಈ ಕಾರ್ಯ ಮಾಡಿಕೊಂಡು ಬರುತ್ತಿದಾರೆ.

ಈ ಹೂವು ತೆಗೆದುಕೊಂಡು ಬಂದ ವ್ಯಕ್ತಿಯು ಹೂವಿನ ಕಟ್ಟೆ ಎನ್ನುವ ಒಂದು ಸ್ಥಳವಿದೆ. ಆ ಸ್ಥಳದಲ್ಲಿ ಹೂವು ತಂದಿರುವ ವ್ಯಕ್ತಿ ಕುಳಿತಿರುತ್ತಾನೆ. ಹೂವು ತಂದ ವ್ಯಕ್ತಿಯನ್ನು ಮಂಗಳವಾದ್ಯದೊಂದಿಗೆ ಸ್ವಾಗತಿಸುತ್ತಾರೆ. ನಂತರ ತಂದ ಹೂವುಗಳನ್ನು ದೇವಿಗೆ ಅರ್ಪಿಸಿ ಧೂಪ, ದೀಪ ನೈವೇದ್ಯ ಮಾಡುತ್ತಾರೆ. ನಂತರ ಊರಲ್ಲಿರುವ ಎಲ್ಲಮ್ಮಾ ದೇವಿಯ ದೇವಸ್ಥಾನಕ್ಕೆ ಆಗಮಿಸುತ್ತಾರೆ. ದೇವಿಯ ಜಗ ಮತ್ತು ಪಲ್ಲಕ್ಕಿ ಚೌಡಕಿ ಮೇಳ, ಕೊಂಬಸಿಂಗ ಹೀಗೆ ವಾದ್ಯಮೇಳಗಳೊಂದಿಗೆ ಆಗಮಿಸಿರುತ್ತಾರೆ. ಊರಲ್ಲಿ ಅಂದು ರಾತ್ರಿ ಭಕ್ತರ ಮನೆಗಳಿಗೆ ವಾದ್ಯಗಳೊಂದಿಗೆ ಕರಡಿ ಮಜಲು, ಹಲಗಿ ಮೇಳ, ಕಣಿ ಮೇಳ ಹೀಗೆ ವಿವಿಧ ವಾದ್ಯಗಳೊಂದಿಗೆ ಭೇಟ್ಟಿ ಕೊಡುತ್ತಾರೆ. ನಂತರ ರಾತ್ರಿ ಎಲ್ಲ ಭಕ್ತರ ಮನೆಯಲ್ಲಿ ಉಡಿ ತುಂಬಿಕೊಂಡು ಮರುದಿನ ಬೆಳಿಗ್ಗೆ ೬-೦೦ ಗಂಟೆಗೆ ಮಾದರ ಓಣಿಯಲ್ಲಿರುವ ಮಾತಂಗಿ ಕಟ್ಟೆಯಲ್ಲಿ ಪೂಜೆ ಮಾಡಿ ಉಡಿ ತುಂಬಿಕೊಳ್ಳುತ್ತಾರೆ. ಅಂದರೆ ಸೀರೆ, ಕುಪ್ಪಸ, ಅರಿಶಿಣ, ಕುಂಕುಮ, ಹತ್ತಿಕಾಯಿ, ಪರುಶುರಾಮನ ರುಮಾಲು ಹೀಗೆ ಎಲ್ಲ ಸಾಹಿತ್ಯದೊಂದಿಗೆ ಊಡಿ ತುಂಬುವ ಕಾರ್ಯಕ್ರಮ ನಡೆಯುತ್ತದೆ. ನಂತರ ಶ್ರೀ ಪರಸಪ್ಪಾ ನಾಗಪ್ಪಾ ತಟ್ಟಿಯವರ ಮನೆಯಲ್ಲಿ ದೇವಿ ಅಂಬಲಿ ಕೊಡದ ಸೇವೆ ಕಾರ್ಯ ನಡೆಯುತ್ತದೆ.

ತಟ್ಟಿಯವರು ತಮ್ಮ ಮನೆಯನ್ನು ದೇವಿಯು ಬರುವದಕ್ಕಿಂತಲೂ ಮೊದಲು ಶುಚಿಗೊಳಿಸಿ, ಸಾರಿಸಿ, ಒಪ್ಪು ಓರಣವಾಗಿಸಿ ಅಂಬಲಿಯನ್ನು ತಯಾರಿಸುತ್ತಾರೆ. ಈ ಸಂದರ್ಭದಲ್ಲಿ ಹೊಸ ಮಣ್ಣಿನ ಎರಡು ಕೊಡಗಳನ್ನು ತಂದು ಅವುಗಳನ್ನು ಹುಲಮಂಜು ಸುಣ್ಣದಿಂದ ಚಿತ್ರಬಿಡಿಸಿ ಅಲಂಕರಿಸಿರುತ್ತಾರೆ. ಅಂಬಲಿಯನ್ನು ಜೋಡ ಕೊಡದಲ್ಲಿ ಹಾಕಿ ತೆಂಗಿನಕಾಯಿ ಕುಂಭವನ್ನು ತೆಗೆದುಕೊಂಡು ಕೊಡದ ಬಾಯಿಗೆ ವಿಳ್ಯದ ಎಲೆ ಇಟ್ಟು ತೆಂಗಿನಕಾಯಿಯನ್ನು ಇಡುತ್ತಾರೆ. ಅಕ್ಕಿ ಅಥವಾ ಜೋಳದ ಶಾಸಕ್ಕಿ ಹಾಕಿ ಅವುಗಳಲ್ಲಿ ಕೊಡಗಳನ್ನು ಇಟ್ಟಿರುತ್ತಾರೆ.

ಆಮೇಲೆ ಎಲ್ಲಮ್ಮ ಜಗ ಹಾಗು ಪಲ್ಲಕ್ಕಿ ಇವುಗಳೊಂದಿಗೆ ಇಬ್ಬರು ವ್ಯಕ್ತಿಗಳು ದಪ್ಪನೆಯ ಕಂಬಳಿಗಳಿಂದ ಕೊಂಚಿಗೆ ತಯಾರಿಸಿ ತಲೆಯ ಮೇಲಿಟ್ಟುಕೊಳ್ಳುತ್ತಾರೆ. ಎರಡು ಅಂಬಲಿ ಕೊಡಗಳನ್ನು ಅಂಬಲಿ ತಯಾರಿಸಿದ ತಟ್ಟಿ ಮನೆತನದವರೇ ತಲೆಯ ಮೇಲೆ ಹೊತ್ತುಕೊಳ್ಳುತ್ತಾರೆ. ಅಂಬಲಿ ಕೊಡದವರು ಮುಂದಿನ ಸಾಲಿನಲ್ಲಿ ಸಾಗುತ್ತಾರೆ. ಅವರ ನಂತರ ಎಲ್ಲಮ್ಮ ಜಗ, ಪಲ್ಲಕ್ಕಿ, ಭಂಡಾರ ಹಾರಿಸುವವರು, ಪಲ್ಲಕ್ಕಿಗೆ ಛತ್ರ, ಛಾಮರ ಬೀಸುವ ಜೋಗಮ್ಮಗಳಿರುತ್ತಾರೆ. ಅವರು ಚೌಡಕಿ ಹಾಡಿನೊಂದಿಗೆ ಸಾಗುತ್ತಾರೆ. ಊರಿನ ಹಳಬರು ತಮ್ಮ ಹತಿಯಾರದೊಂದಿಗೆ ಉತ್ಸವದಲ್ಲಿ ಸಾಗುತ್ತಾರೆ. ಗ್ರಾಮದ ಕೊಂಬು ಊದುವ ವ್ಯಕ್ತಿ ಹಾಗೂ ಕರಡಿ ಮಜಲು ಕಣಿವಾದನದವರು ಹಲಗೆ ಮೇಳ ಹೀಗೆ ವಿವಿಧ ವಾದ್ಯಗಳೊಂದಿಗೆ ಉತ್ಸವದಲ್ಲಿ ಭಕ್ತಾದಿಗಳು ಸಾಗುತ್ತಾರೆ. ಸಾಗುತ್ತಿರುವಾಗ "ಎಲ್ಲಮ್ಮಾ ನಿನ್ನ ಪಾದಕ್ಕೆ ಉಧೋ ಉಧೋ" ಎಂದು ಹೇಳುತ್ತಾ ಹಳ್ಳದ ಎಲ್ಲಮ್ಮ ದೇವಸ್ಥಾನಕ್ಕೆ ಸಾಗುತ್ತಾರೆ. ಮಾರ್ಗ ಮಧ್ಯದಲ್ಲಿ ಜೋಗುಳ ಬಾವಿಗೆ (ಮಾಳಿಯವರ ತೋಟದಲ್ಲಿ) ಪೂಜೆ ಸಲ್ಲಿಸುತ್ತಾರೆ. ನಂತರ ಪಾದಗಟ್ಟೆಗೆ ಪೂಜೆ ಸಲ್ಲಿಸುತ್ತಾರೆ.

ಈ ಎಲ್ಲ ಕಾರ್ಯಕ್ರಮದ ನಂತರ ದೇವಿಯ ಹಳ್ಳದ ದೇವಸ್ಥಾನದೆಡೆಗೆ ಮೆರವಣಿಗೆ ಸಾಗುತ್ತದೆ. ದೇವಸ್ಥಾನಕ್ಕೆ ಹೋದ ಮೇಲೆ ಕೊಂಡದ ಪೂಜೆ (ಅಗ್ನಿಕುಂಡ) ನೇರವೇರುತ್ತದೆ. ಶ್ರೀ ಮಲಕಪ್ಪಾ ಭೀಮಣ್ಣಾ ಯಳೆಗಾವಿಯವರು ಹಲವಾರು ವರ್ಷಗಳಿಂದ ಆಕಳ ಶಗಣಿಯಿಂದ ಸಾರಿಸಿ ರಂಗೋಲಿ ಹಾಕಿ ಪೂಜಾ ಸಾಮಗ್ರಿಗಳಾದ ಹಣ್ಣು, ಎಲೆ, ಅಡಿಕೆ, ಖಾರಿಕ, ಖೊಬ್ಬರಿ ಎಲ್ಲ ಸಾಹಿತ್ಯದೊಂದಿಗೆ ಅಗ್ನಿ ಹಾಕುವ ಕಾರ್ಯ ಮಾಡುತ್ತಾರೆ. ಅಂದರೆ ಹುಣ್ಣಿಮೆಯ ದಿನ ಅಗ್ನಿ ಕುಂಡವನ್ನು ಊರಿನ ತಳವಾರನಿಂದ ಸ್ವಚ್ಛಗೊಳಿಸುತ್ತಾರೆ. ಪೂಜೆಯ ನಂತರ ಪೂಜಾ ಸಾಮಗ್ರಿಗಳೆಲ್ಲವನ್ನೂ ತಳವಾರನಿಗೆ ಕೊಡುತ್ತಾರೆ. ಅಗ್ನಿ ಸ್ಪರ್ಶ ಮಾಡುವದಕಿಂತ ಮೊದಲು ಓಳ್ಳೆಎಣ್ಣೆ, ಶ್ರೀಗಂಧ ಕಟ್ಟಿಗೆ ಕರ್ಪೂರ ಈವೆಲ್ಲವನ್ನು ತೆಗೆದುಕೊಂಡು ಬರುತ್ತಾರೆ. ಆಕಳ ಶಗಣಿಯ ಸುಮಾರು ೪೦೦ ಕುಳ್ಳುಗಳನ್ನು ತೆಗೆದುಕೊಂಡು ಬಂದಿರುತ್ತಾರೆ. ಅವುಗಳನ್ನು ಅಗ್ನಿಕುಂಡದಲ್ಲಿ ಹಾಕಿದ ನಂತರ ಯಳೆಗಾವಿ ಮನೆತನದವರು ಅಗ್ನಿ ಅಗ್ನಿಕುಂಡದಲ್ಲಿ ಅಗ್ನಿ ಸ್ಪರ್ಶಮಾಡುತ್ತಾರೆ.

ನಂತರ ದೇವಿಗೆ ಕುರಿಮರಿಯನ್ನು ಬಲಿಕೊಡುತ್ತಾರೆ. ಈ ಬಲಿಕೊಡುವ ಕಾರ್ಯ ನೇರವೆರಿದ ನಂತರ ಅಗ್ನಿ ಹಾಯುವ ಕಾರ್ಯಕ್ರಮ ನಡೆಯುತ್ತದೆ. ಅಗ್ನಿ ಕುಂಡದ ಪೂರ್ವಕ್ಕೆ ಸ್ವಲ್ಪವೇ ದೂರದಲ್ಲಿ ಸುಮಾರು ೩೦ ಫೂಟು ಅಂತರದಲ್ಲಿ ಕುರಿಮರಿ ಬಲಿಕೊಟ್ಟಿರುತ್ತಾರೆ. ನಂತರ ಪಶ್ಚಿಮಕ್ಕೆ ಪಲ್ಲಕ್ಕಿಯವರು ನಿಂತಿರುತ್ತಾರೆ. ಈ ಸಂದರ್ಭದಲ್ಲಿ ಅಗ್ನಿ ಹಾಯುವ ವ್ಯಕ್ತಿ ಎಂದರೆ ಶ್ರೀ ಮಲ್ಲಪ್ಪಾ ಬನ್ನೂರವರು. ಇವರು ದೇವಿಯ ಪೂಜಾರಿಗಳು ಆಗಿದ್ದಾರೆ. ಇವರು ಅಗ್ನಿ ಹಾಯುವ ಮುಂಚೆ ಎಲ್ಲಮ್ಮನ ತಲೆಯ ಮೆಲಿನ ಹೂವಿನ ದಂಡೆ ಅರಿಶಿಣ ಪತ್ತಲು ಅವಳ ಕೊರಳೊಳಗಿನ ತಾಳಿ ಇವೆಲ್ಲವನ್ನೂ ಅಗ್ನಿಗೆ ಹಾಕುತ್ತಾರೆ. ಶ್ರೀ ಮಲ್ಲಪ್ಪಾ ಬನ್ನೂರವರು ಅಗ್ನಿ ಪ್ರವೇಶ ಮಾಡುತ್ತಾರೆ. ನಂತರ ಪಲ್ಲಕ್ಕಿಯವರು ಚೌಡಕಿಯವರು, ಜೋಗಮ್ಮಗಳು ಎಲ್ಲರೂ ಅಗ್ನಿ ಹಾಯುತ್ತಾರೆ. ಅಗ್ನಿ ಬಲಕ್ಕೆ ಮಾಡಿಕೊಂಡು ಪ್ರದಕ್ಷಿಣೆ ಹಾಕಿ ಜಗದ ಮನೆ ಅನ್ನುವ ಸ್ಥಳಕ್ಕೆ ಬರುತ್ತಾರೆ. ನಂತರ ಬಲಿಕೊಟ್ಟ ಕುರಿಯನ್ನು ಅಗ್ನಿ ಕುಂಡದಲ್ಲಿ ಹಾಕಿ ತೆಗೆದುಕೊಂಡು ಹೋಗುತ್ತಾರೆ. ನಂತರ ಜಾತ್ರೆ ಪ್ರಾರಂಭವಾಗುತ್ತದೆ.

ನಂತರ ಗೋದಿ ಹಾಗೂ ಬೆಲ್ಲದಿಂದ ಹುಗ್ಗಿ ತಯಾರಿಸಿರುತ್ತಾರೆ ಹಾಗೂ ಅನ್ನ, ಸಜ್ಜಿರೊಟ್ಟಿ, ಜೋಳದ ರೊಟ್ಟಿ ಹೀಗೆ ವಿವಿಧ ರೀತಿಯ ಪದಾರ್ಥಗಳನ್ನು ಪ್ರಸಾದ ರೂಪದಲ್ಲಿ ಎಲ್ಲರಿಗೂ ಬಡಿಸುತ್ತಾರೆ. ಇದು ಅಲ್ಲದೆ ಇನ್ನೊಂದು ವೈಶಿಷ್ಟ್ಯವೆನೆಂದರೆ ವಿಧವೆಯರಾದ ಸ್ತ್ರೀಯರು 'ಬಾಗಿಣ' ಎಂದು ಸಜ್ಜಕ ಹೋಳಿಗೆಯನ್ನು ತಯಾರಿಸುವುದುಂಟು. ಬಾಗಿಣ ಎಂದರೆ ಜೋಗವ್ವಗಳಿಗೆ, ಚೌಡಕಿಯವರಿಗೆ ಹತೀಯಾರ ಹಿಡಿದವರಿಗೆ, ಹೂವು ತರುವವರಿಗೆ, ಕುರಿಮರಿ ಹಿಡಿದವನಿಗೆ, ಮರಿ ಆಹುತಿ ಕೊಡುವವನಿಗೆ, ವಾಲಿಕಾರನಿಗೆ ಈ ರೀತಿಯಾಗಿ ಎಲ್ಲರಿಗೂ ಹಂಚುವದುಂಟು. ಇವರೆಲ್ಲ ಬಾಗಿಣ ಸ್ವೀಕರಿಸಿದ ಮೇಲೆ ಕಿಚ್ಚು ಹಾಯಲು ಹೋಗುವ ಪದ್ಧತಿವುಂಟು. ಈ ಸಂದರ್ಭದಲ್ಲಿ ಚುನಮುರಿ, ಬೆಂಡು, ಬತ್ತಾಸ, ಚಿಕ್ಕಪುಟ್ಟ ಆಟಗಿ ಸಾಮಾನುಗಳ ವ್ಯಾಪಾರಸ್ಥರು ಎಲ್ಲರೂ ಸೇರಿ ಜಾತ್ರೆಗೆ ಮೇರಗು ನೀಡುತ್ತಾರೆ. ಸಾಯಂಕಾಲ ಕುಸ್ತಿ ಪಂದ್ಯಗಳು ನಡೆಯುತ್ತವೆ. ಈ ಸಂದರ್ಭದಲ್ಲಿ ಗ್ರಾಮದ ಎಲ್ಲ ಹಿರಿಯರ ಸಮ್ಮುಖ ಈ ಕಾರ್ಯಕ್ರಮಗಳು ನೆರವೆರುತ್ತವೆ. ರಾತ್ರಿ ವೇಳೆ ಎಲ್ಲಮ್ಮನ ಮುಖವನ್ನು ಮುಚ್ಚಿ ಪೂಜಾರಿಗಳು ಬಾಗಿಲು ಮುಚ್ಚಿತು ಎಂದು ಹೇಳುತ್ತಾರೆ. ನಂತರ ಮಾರನೇಯ ಒಂದು

ದಿನ ಬಿಟ್ಟು ಮೂರನೇ ದಿವಸ ಎಲ್ಲಮ್ಮ ದೇವಸ್ಥಾನ ಬಾಗಿಲು ಪುನಃ ತೆಗೆಯುತ್ತದೆ. ನಂತರ ಒಳಗೆ ಹೂವಿನ ದಂಡೆ, ಹೊಸಸೀರೆ, ತಾಳಿ, ಕಾಲುಂಗರ, ರಂಗವಲ್ಲಿ, ಅರಿಶಿಣ, ಕುಂಕುಮ, ಬಾಳೆಹಣ್ಣು, ಎಲೆ, ಅಡಿಕೆ, ಖಾರಿಕ ಈ ರೀತಿ ಎಲ್ಲ ಸಾಹಿತ್ಯ ತರುತ್ತಾರೆ. ಅಗ್ನಿಕುಂಡವನ್ನು ತಳವಾರ ಸ್ವಚ್ಛಮಾಡಿ ಸಾರಣೆ ಮಾಡುತ್ತಾನೆ. ನಂತರ ಪೂಜಾರಿಗಳು ದೇವಿಗೆ ಅಭಿಷೇಕ ಮಾಡಿ ಅಗ್ನಿಕುಂಡಕ್ಕೆ ರಂಗವಲ್ಲಿ ಹಾಕಿ ಅಗ್ನಿ ಹೊತ್ತಿಸಿ ಕಾಯಿ, ನೈವೇದ್ಯ ಅರ್ಪಿಸುವುದುಂಟು. ಪೂಜೆಯ ನಂತರ ತಳವಾರ ಪೂಜಾ ಸಾಮಾನುಗಳನ್ನು ಒಯ್ಯುತ್ತಾನೆ. ಅದೇ ದಿವಸ ಪ್ರಸಾದ ವ್ಯವಸ್ಥೆಯ ನಂತರ ಗ್ರಾಮಕ್ಕೆ ದೇವಿಯ ಪಲ್ಲಕ್ಕಿ ಆಗಮಿಸುವುದುಂಟು ನಂತರ ರಾತ್ರಿ ಮನರಂಜನೆಯ ನಿಮಿತ್ತ ಗ್ರಾಮದಲ್ಲಿ ಬೈಲಾಟ, ಭಜನಾಪದ,. ಗೀಗಿ ಪದಗಳು ಹೀಗೆ ವಿವಿಧ ಮನರಂಜನೆಗಳು ನೇರವೆರುವವು. ಈ ರೀತಿಯಾಗಿ ಹಲವಾರು ಆಚರಣೆಗಳೊಂದಿಗೆ ಗ್ರಾಮದಲ್ಲಿ ವಿವಿಧ ದೇವತೆಗಳ ಜಾತ್ರೆ ನೇರವೆರುತ್ತದೆ.

ದುರ್ಗಾದೇವಿ ದೇವಿ ದೇವಸ್ಥಾನ ಕೊರವರ ಓಣಿ

ದುರ್ಗಾದೇವಿ ಕೊರವ ಸಮುದಾಯದವರ ಆರಾಧ್ಯ ದೈವವಾಗಿದೆ. ದೇವಾಲಯದಲ್ಲಿ ದಿನಾಲು ಎರಡು ಹೊತ್ತು ಪೂಜೆ ನಡೆಯುತ್ತದೆ. ಈ ದೇವತೆ ಸ್ಥಾಪನೆಯಾಗಿ ನಾಲ್ಕೈದು ತಲೆಮಾರುಗಳು ಗತಿಸಿರಬೇಕೆಂದು ಕೊರವ ಸಮುದಾಯದವರ ಹೇಳಿಕೆ. ಮೊದಲು ಚಿಕ್ಕ ದೇವಾಲಯವಾಗಿದ್ದು ಇತ್ತೀಚೆಗೆ ಉರ್ಜಿತಗೊಳಿಸಿ ಮಂಟಪ ನಿರ್ಮಾಣ ಮಾಡಲಾಗಿದೆ.

ಈ ದೇವತೆಗೆ ಮಣ್ಣೇತ್ತಿನ ಅಮವಾಸ್ಯೆಯಲ್ಲಿ ಜಾತ್ರೆಯನ್ನು ಮಾಡುತ್ತಾರೆ. ನಿಂಬೆಹಣ್ಣು, ಬಾಳೆಹಣ್ಣು, ಹೂವಿನ ದಂಡೆ, ಹಸಿರು ಸೀರೆ, ಹಸಿರು ಜಂಪರ, ಬೆಳ್ಳಿ ಕಣ್ಣಬಟ್ಟು, ಹಿತ್ತಾಳೆ ಕಣ್ಣಬಟ್ಟು, ಉಡಿಯಕ್ಕಿ, ಖಾರಿಕ, ಕೊಬ್ಬರಿ, ಎಲೆ, ಅಡಿಕೆ, ಎಲ್ಲ ಪರಿಕರಗಳನ್ನು ಪೂಜೆಗೆ ಉಪಯೋಗಿಸುತ್ತಾರೆ. ಜಾತ್ರೆಯ ದಿವಸ ಮಣ್ಣಿನಿಂದ ಮಾಡಿದ ಬಂಡಿಯನ್ನು ತಯಾರಿಸುತ್ತಾರೆ ಅಲ್ಲದೇ ಎರಡು ಮಣ್ಣಿನ ಕೋಣಗಳನ್ನು ಅದಕ್ಕೆ ಹೂಡುತ್ತಾರೆ. ಎರಡು ದಿನ ಜಾತ್ರೆ ಜರುಗುತ್ತದೆ. ಎರಡನೇಯ ದಿನ ಮಧ್ಯಾಹ್ನ ಹೋಳಿಗೆ, ಕಡಬು, ಇದರ ಜೊತೆಗೆ ಗಬ್ಬದ ಕುರಿಯನ್ನು ಬಲಿ ಕೊಡುತ್ತಾರೆ. ತಲೆತಲಾಂತರದಿಂದ ಈ ಪದ್ಧತಿ ಕೊರವ ಜನಾಂಗದಲ್ಲಿ ಆಚರಣೆಯಲ್ಲಿದೆ. ಈ ರೀತಿ ಬಲಿ ಕೊಡುವುದಕ್ಕೆ ಎಂಟು ಕಾಲಿನ ಬೇಟೆ ಬೇಕೆಂದು ಗಬ್ಬದ ಕುರಿ ಬಲಿ ಕೊಡುವ ಜಾರಿಯಲ್ಲಿದೆ. ಹರಕೆ ಹೊತ್ತವರು ಈ ರೀತಿ ಹರಕೆ ಇಡೆರಿಸುವ ಪದ್ಧತಿ ಇದೆ.

ಉದಿಸುತ್ತಾ ಬಾರಿಸುತ್ತಾ ವಾದ್ಯಗಳೊಂದಿಗೆ ಬಂಡಿಯನ್ನು ಗ್ರಾಮದ ಸೀಮೆಯಲ್ಲಿ ಬಿಡುತ್ತಾರೆ. ಮರಳಿ ಬಂದು ಎಲ್ಲ ತಮ್ಮ ಜನಾಂಗಕ್ಕೆ ರೊಟ್ಟಿ, ಅನ್ನ, ಮಾಂಸದ ಊಟವನ್ನು ಮಾಡುತ್ತಾರೆ. ಬಿಗರು, ಬಿಜ್ಜರು, ಸಂಬಂಧಿಕರನ್ನು ಜಾತ್ರೆಗೆ ಕರೆಸುತ್ತಾರೆ. ಜಾತ್ರೆಯ ಮೊದಲ ದಿನ ರಾತ್ರಿ ಭಜನೆ, ಚೌಡಿಕೆ ಹಾಡು, ಗೀ ಗೀ ಪದಗಳು ಈ ರೀತಿಯಾಗಿ ವಿವಿಧ ಮನರಂಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ.

ಗ್ರಾಮದಲ್ಲಿ ಸಿದ್ಧಾರೂಢರ ಆರಾಧನಾ ಕಾರ್ಯಕ್ರಮಲ್ಲಿ ಸಿದ್ಧಾರೂಢರಿಗೆ ಪೂಜೆ, ಅಭಿಷೇಕ ಹಾಗೂ ಶಾಸ್ತ್ರ, ಪ್ರವಚನ ಹೀಗೆ ವಿವಿಧ ಕಾರ್ಯಕ್ರಮ ಜರುಗುವುದರೊಂದಿಗೆ ಅನ್ನ ಪ್ರಸಾದವು ಕೂಡಾ ನೆರವೇರಿಸುತ್ತಾರೆ.

ಶ್ರೀ ಮಾಧವಾನಂದ ಪ್ರಭುಜಿಯವರ ಸ್ಮರಣಾರ್ಥ ಸಪ್ತಾಹ

ಶ್ರೀ ಮಾಧವಾನಂದ ಪ್ರಭುಜಿಯವರ ಸ್ಮರಣಾರ್ಥ ಗ್ರಾಮದಲ್ಲಿ ಸರ್ಕಲ್ ಒಂದನ್ನು ನಿರ್ಮಿಸಿದ್ದಾರೆ. ಇಲ್ಲಿ ಗ್ರಾಮದ ಎಲ್ಲ ಜನರು ಸೇರಿ ಮಾಧವಾನಂದರ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ವರ್ಷದಲ್ಲಿ ಒಮ್ಮೆ ದಿನವನ್ನು ನಿಗದಿಪಡಿಸಿಕೊಂಡು ಮಾಧವಾನಂದರ ಸ್ಮರಣಾರ್ಥ ಸಪ್ತಾಹ ಕಾರ್ಯಕ್ರಮವನ್ನು ನೆರವೇರಿಸುತ್ತಾರೆ. ಈ ಸಂದರ್ಭದಲ್ಲಿ ಶ್ರೀ ಕ್ಷೇತ್ರ ಇಂಚಗೇರಿ ಮಠದಿಂದ ಗುರುಗಳಾದಂತಹ ಮಹಾರಾಜರು ಆಗಮಿಸಿರುತ್ತಾರೆ. ಹಾಗೂ ನಾಡಿನ ಅನೇಕ ಮಹಾತ್ಮರು ಆಗಮಿಸಿರುತ್ತಾರೆ. ಗ್ರಾಮದಲ್ಲಿ ಮೊದಲನೆ ದಿನ ತುಂಬಿದ ಕಲಷದೊಂದಿಗೆ ಮುತ್ತೈದೆಯರು ಹಾಗೂ ಜಾನಪದ ವಾದ್ಯ ಮೇಳದೊಂದಿಗೆ ಮಾಧವಾನಂದರ ಭಾವಚಿತ್ರದ ಮೆರವಣಿಗೆ ನಡೆಯುತ್ತದೆ. ಈ ಸಂದರ್ಭದಲ್ಲಿ ರಾಮದಾಸ ಮಹಾರಾಜರ ದಾಸಬೋಧ ಪಠನೆಯೊಂದಿಗೆ ವೀಣಾಪೂಜೆ ನೆರವೇರುತ್ತದೆ. ಸಾಯಂಕಾಲ ಪ್ರವಚನ ಕಾರ್ಯಕ್ರಮ ನೆರವೇರುತ್ತದೆ. ರಾತ್ರಿ ಮನರಂಜನೆಗಾಗಿ ಭಜನೆ, ಡೊಳ್ಳಿನ ಹಾಡು ಹಾಗೂ ಸಾಮಾಜಿಕ ನಾಟಕ ಅಥವಾ ಪೌರಾಣಿಕ ನಾಟಕ ನಡೆಯುತ್ತವೆ. ಮಾರನೇಯ ದಿನ ಪುರಾಣ, ಪ್ರವಚನ, ಪುಷ್ಪವೃಷ್ಠಿಯೊಂದಿಗೆ ಸಪ್ತಾಹ ಮಂಗಲಗೊಳ್ಳುತ್ತದೆ. ಅನ್ನ ಸಂತರ್ಪಣೆ ನಡೆಯುತ್ತದೆ. ಅದರಂತೆ

ಮನಮಿಮುತ್ಯಾ

ಮನಮಿಮುತ್ಯಾ ಇವರ ಮಠದಲ್ಲಿ ಜನೇವರಿ ತಿಂಗಳು ಬನದ ಹುಣ್ಣಿಮೆಯಾದ ಮೂರು ಅಥವಾ ನಾಲ್ಕನೆಯ ದಿನ ಸಂಕಷ್ಟಿ ದಿವಸ ಇವರ ಪುಣ್ಯಾರಾಧನೆ ಕಾರ್ಯಕ್ರಮ ನಡೆಯುತ್ತದೆ. ಈ ಸಂದರ್ಭದಲ್ಲಿ ನಾಲ್ಕಾರು ಊರುಗಳಿಂದ ಭಜನೆ ಮೇಳಗಳನ್ನು ಕರೆಯಿಸಿ ಭಜನಾ ಕಾರ್ಯಕ್ರಮ ನಡೆಯುತ್ತದೆ. ಮರುದಿನ ಊರಿನ ಜನಕ್ಕೆ ಅನ್ನ ಸಂತರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಗುತ್ತದೆ.೩

ಹನುಮಂತ ದೇವರ ಜಯಂತಿ

ಪ್ರತಿವರ್ಷ ಹನುಮ ಜಯಂತಿಯನ್ನು ವಿಶೇಷ ವಿಜೃಂಭಣೆಯಿಂದ ಗ್ರಾಮದ ಹನುಮಂತ ದೇವಾಲಯದಲ್ಲಿ ಆಚರಿಸಿಕೊಂಡು ಬರುತ್ತಾರೆ. ಮುಂಜಾನೆ 8 ಗಂಟೆಗೆ ರುದ್ರಾಭಿಷೇಕ, 11 ಗಂಟೆಗೆ ತೊಟ್ಟಿಲು ಕಾರ್ಯಕ್ರಮ, ಹನುಮಂತನಿಗೆ ಹೆಸರಿಡುವುದು, ಜೋಗುಳ ಹಾಡುವ ಕಾರ್ಯಕ್ರಮ ನೇರವೇರುತ್ತವೆ. ನಂತರ ಕರಡಿ ಮಜಲು ಸಂಬಾಳ ವಾದ್ಯಗಳೊಂದಿಗೆ ಹನುಮಂತ ದೇವರ ಕಂಚಿನ ಪುತ್ತಳಿಯನ್ನು ತಲೆಯ ಮೇಲಿಟ್ಟುಕೊಂಡು ಐದು ಸುತ್ತು ದೇವಸ್ಥಾನ ಪ್ರದಕ್ಷಿಣೆ ಹಾಕುತ್ತಾರೆ. ಬಣ್ಣ ಬಣ್ಣದ ಹಾಳೆಗಳಿಂದ ಶಲ್ಯ ದೋತರಗಳಿಂದ ಶೃಂಗರಿಸಿರುತ್ತಾರೆ. ಕೊಬ್ಬರಿ ಸಕ್ಕರೆಯಿಂದ ನೈವೇಧ್ಯ ತಯಾರಿಸಿರುತ್ತಾರೆ. ರಾತ್ರಿ ಜಾಗರಣೆ ನಿಮಿತ್ಯ ಡೊಳ್ಳಿನ ಹಾಡು, ಭಜನೆ, ನಾಟಕ ಮುಂತಾದ ಕಾರ್ಯಕ್ರಮಗಳಿರುತ್ತವೆ. ಊರಿಗೆಲ್ಲಾ ಈ ಸಂದರ್ಭದಲ್ಲಿ ಅನ್ನ ಸಂತರ್ಪಣೆ ನೆರವೇರಿಸುತ್ತಾರೆ.

ಶಿವತ್ರಯ ಸಿದ್ಧಾಶ್ರಮ

ವರ್ಷಕ್ಕೊಮ್ಮೆ ಸಪ್ಟೆಂಬರ್ ಕೊನೆ ಅಥವಾ ಅಕ್ಟೋಬರ್ ಆರಂಭದ ಸಂದರ್ಭದಲ್ಲಿ ವೇದಾಂತ ಪರಿಷತ್ತು ಜರುಗುತ್ತದೆ. ಈ ಸಂದರ್ಭದಲ್ಲಿ ಮುಂಜಾನೆ ಸಾಂಯಕಾಲ ನಿರ್ದಿಷ್ಟ ವಿಷಯದ ಮೇಲೆ ಪ್ರವಚನ ಜರುಗುತ್ತದೆ. ವೇದಾಂತ ಪರಿಷತ್ತು ದಿನಾಲೂ ೩ ರಿಂದ ೫

ರವರೆಗೆ ಜರುಗುತ್ತದೆ. ಭಕ್ತಾದಿಗಳಿಗೆ ಅನ್ನದಾಸೋಹ, ಜ್ಞಾನದಾಸೋಹ ನಡೆಯುತ್ತವೆ. ಇದುವರೆಗೆ ಒಟ್ಟು ೧೨ ವೇದಾಂತ ಪರಿಷತ್ತು ಕಾರ್ಯಕ್ರಮಗಳು ಜರುಗಿವೆ.ಳ

ಕವಟಗಿ ಮುತ್ಯಾ

ಗ್ರಾಮದ ಕವಟಗಿ ಮುತ್ಯಾ ಇವರ ಮಂದಿರದಲ್ಲಿ ಪ್ರತಿ ವರ್ಷ ಹೋಳಿ ಹುಣ್ಣಿಮೆಗಿಂತಲೂ ಮೊದಲು ಮೂರು ದಿನ ಅಂದರೆ ಏಕಾದಶಿಗೆ ಇವರ ಪುಣ್ಯತಿಥಿ ಆರಂಭವಾಗಿ ದ್ವಾದಶಿಯ ದಿವಸ ಇವರ ಪುಣ್ಯತಿಥಿ ಕಾರ್ಯಕ್ರಮ ಮುಕ್ತಾಯವಾಗುತ್ತದೆ. ಈ ದೇವಸ್ಥಾನಕ್ಕೆ ಸ್ಥಳಿಯ ೧೬ ಜನರ ಕಮಿಟಿ ಇದೆ. ಇವರು ದೇವಸ್ಥಾನದ ವ್ಯವಸ್ಥೆಯನ್ನು ನೋಡಿಕೊಂಡು ಹೋಗುತ್ತಾರೆ. ಪುಣ್ಯತಿಥಿಯ ಸಂದರ್ಭದಲ್ಲಿ ವಿಶೇಷ ಪೂಜೆ, ಅರ್ಚನೆ, ಪ್ರಸಾದ ಕಾರ್ಯಕ್ರಮ ಜರುಗುತ್ತವೆ.

ಅಯ್ಯಪ್ಪ ಸ್ವಾಮಿ ಪೂಜೆ

ಪ್ರತಿವರ್ಷ ಕವಟಗಿಮುತ್ಯಾ ಇವರ ದೇವಸ್ಥಾನದಲ್ಲಿ ಮಹಾಸನ್ನಿದಾನವನ್ನು ನಿರ್ಮಿಸಿ ಗ್ರಾಮದ ಅಯ್ಯಪ್ಪ ಸ್ವಾಮಿ ಭಕ್ತರು ದಿನಾಲೂ ಪೂಜೆ ಹಾಗೂ ಮಹಾಪೂಜೆ ವಿಶೇಷ ಕಾರ್ಯಕ್ರಮಗಳು ಜರುಗುತ್ತವೆ. ಮಹಾ ಪೂಜೆಯ ದಿನ ಅನ್ಯ ಗ್ರಾಮಗಳಿಂದ ಅಯ್ಯಪ್ಪ ಸ್ವಾಮಿಗಳು ಆಗಮಿಸಿರುತ್ತಾರೆ.

ಬ್ರಹ್ಮ ದೇವರು

ಬಹಳ ಪ್ರಾಚೀನವಾದ ಈ ದೇವಸ್ಥಾನದಲ್ಲಿ ಶ್ರಾವಣ ಸೋಮವಾರದ ನಂತರ ಜಾತ್ರೆ ನಡೆಯುತ್ತದೆ. ಈ ಜಾತ್ರೆಯಲ್ಲಿ ಭಜನಾ ಕಾರ್ಯಕ್ರಮಕ್ಕೆ ಬೇರೆ ಬೇರೆ ಊರಿನಿಂದ ಕಲಾವಿದರು ಆಗಮಿಸಿರುತ್ತಾರೆ. ವಿಜ್ರಂಭಣೆಯಿಂದ ದೇವಾಲಯದಲ್ಲಿ ಪೂಜೆ, ಅಭಿಷೇಕ ಮುಂತಾದ ಆಚರಣೆಗಳೊಂದಿಗೆ ಅನ್ನ ಪ್ರಸಾದದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಗುತ್ತದೆ.

ಕೊರೆವ್ವ ದೇವಿ

ಗ್ರಾಮದ ಪಶ್ಚಿಮಕ್ಕಿರುವ ಗ್ರಾಮದ ಆರಾಧ್ಯ ದೇವತೆ ಕೊರೆವ್ವ ಇಲ್ಲಿಯೂ ಕೂಡಾ ವಾರ್ಷಿಕ ವಿಶೇಷ ಪೂಜೆ ಆಚರಣೆಗಳೊಂದಿಗೆ ವಿಜ್ರಂಭಣೆಯಿಂದ ಕಾರ್ಯಕ್ರಮ ಜರುಗುತ್ತದೆ. ಗ್ರಾಮದ ಜನರಿಗೆ ಅನ್ನ ಪ್ರಸಾದ ನೆರವೇರಿಸುತ್ತಾರೆ.

೭.೨.೩. ನಂಬಿಕೆಗಳು

ಪ್ರಕೃತಿಯ ರಹಸ್ಯವನ್ನು ಭೇದಿಸುವಲ್ಲಿ ಆದಿ ಮಾನವನ ವಿಫಲತೆ ಹುಟ್ಟು ಬದುಕು ಸಾವುಗಳ ನಿಗೂಢತೆಯನ್ನು ಅರ್ಥೈಸಲಾಗದ ಆತಂಕ, ಜಾತಿ, ಮತ, ಧರ್ಮಗಳು ತಮ್ಮ ಅಸ್ತಿತ್ವಕ್ಕಾಗಿ ನಡೆಸಿದ ಹೋರಾಟ ಈ ಹಿನ್ನೆಲೆಯು ನಂಬಿಕೆಗಳು ಹುಟ್ಟಿಕೊಳ್ಳಲು ಕಾರಣವಾಗುತ್ತದೆ. ಲೌಕಿಕ ಕ್ರಿಯೆಯನ್ನು ಗಟ್ಟಿಗೊಳಿಸಲು ಅಥವಾ ನಿಷೇಧಿಸಲು ಅದಕ್ಕೆ ಧಾರ್ಮಿಕ ಚೌಕಟ್ಟನ್ನು ಒದಗಿಸುವದುಂಟು.

ಕೊಟ್ಟಲಗಿ ಪ್ರದೇಶದಲ್ಲಿ ಬದುಕುವ ಇಡೀ ಜನತೆ ಸಾವತ್ರಿಕವಾಗಿ ನಂಬುವ ಕೆಲವು ನಂಬಿಕೆ ವಿಧಿ ನಿಷೇಧಗಳು ಇಂದು ಬಹಳ ವಿಶಾಲವಾದ ಅರ್ಥದಲ್ಲಿ ಬಳಸಲಾಗುತ್ತಿದೆ. ಗ್ರಾಮದ ನಂಬಿಕೆ ವಿಧಿ ನಿಷೇಧಗಳು ಒಂದು ರೀತಿ ಸಂವಿಧಾನದ ನಿಯಮಗಳಂತೆ ಇರುತ್ತವೆ. ಇವರು ನಿಯಮಗಳಿಗೆ ಬದ್ಧರಾಗಿಯೇ ಸಾಮಾಜಿಕ ವ್ಯವಸ್ಥೆಯಲ್ಲಿ ಜೀವಿಸುತ್ತಾರೆ.

ಈ ಪರಿಸರಕ್ಕೆ ಅನುಗುಣವಾಗಿ ಕಾಲ ಕಾಲಕ್ಕೆ ತಕ್ಕಂತೆ ನಂಬಿಕೆ ನಿಷೇಧಗಳು ಅನ್ವಯಿಸುವುದಿಲ್ಲವಾದರೂ ಕೆಲವೊಂದನ್ನು ಕಡ್ಡಾಯವಾಗಿ ಪಾಲಿಸಿಕೊಂಡು ಬಂದಿದ್ದಾರೆ. ಇನ್ನು ಕೆಲವು ನಂಬಿಕೆಗಳು ಗ್ರಾಮದ ಸಮುದಾಯಗಳಲ್ಲಿ ಸಾಂಪ್ರದಾಯಿಕವಾಗಿ ಉಳಿದುಕೊಂಡು ಬಂದಿರುವುದನ್ನು ಕಾಣಬಹುದಾಗಿದೆ.

೧) ಹೆಣ್ಣು ಮಗಳ ಗಲ್ಲದಲ್ಲಿ ಗುಳಿ ಬಿದ್ದರೆ ಅವಳ ಮುಂದೆ ಅವಳ ಗಂಡ ಸಾವನ್ನಪ್ಪುತ್ತಾನೆ.

೨) ಕನ್ಯೆಯ ಕಾಲಿನ ಕಿರುಬೆರಳು ನೆಲಕ್ಕೆ ತಾಗಬೇಕು. ಇಲ್ಲದಿದ್ದರೆ ಮದುವೆಯಾದ ಮನೆಯಲ್ಲಿ ಸ್ತ್ರೀಯು ಸ್ಥಿರವಾಗಿ ನಿಲ್ಲುವುದಿಲ್ಲವೆಂಬ ನಂಬಿಕೆ ಇದೆ.

೩) ಬಿಳುಪು ಹತ್ತಿದ ಸ್ತ್ರೀಯು ಶುಭ ಕಾರ್ಯಗಳಲ್ಲಿ ಭಾಗವಹಿಸಿದರೆ ಅಶುಭ ಘಟಿಸುತ್ತದೆ ಎಂಬ ನಂಬಿಕ ಇದೆ.

೪) ಎರಡನೇ ಮದುವೆಯಾದ ಹೆಣ್ಣು ಮುತ್ತೈದೆತನಕ್ಕೆ ಹಾಗೂ ಶುಭ ಕಾರ್ಯಗಳಲ್ಲಿ ಭಾಗವಹಿಸುವುದು ಅಶುಭ.

೫) ಶುಭಕಾರ್ಯಗಳಲ್ಲಿ ಕೈಯಲ್ಲಿನ ಕುಂಕು ಡಬ್ಬಿ ಕೆಳಗೆ ಬೀಳಬಾರದು. ಬಿದ್ದರೆ ಅಶುಭ.

೬) ಗ್ರಾಮದ ಪಂಚಾಳ ಸಮುದಾಯದ ತಂದೆ ತಾಯಿಗಳು ತಮ್ಮ ಮಕ್ಕಳ ಮದುವೆಯಲ್ಲಿ ಶಸ್ತ್ರಗಳನ್ನು ಚುಚ್ಚಿಕೊಂಡರೆ ದೇವರು ತಮ್ಮ ಮಕ್ಕಳು ಮಾಡಿದ ತಪ್ಪನ್ನು ಕ್ಷಮಿಸುತ್ತಾನೆ. ಮಕ್ಕಳಿಗೆ ಶ್ರೇಯಸ್ಸು ಉಂಟಾಗುತ್ತದೆ ಎಂದು ನಂಬುತ್ತಾರೆ.

೭) ಬಿಳುಪು ಹತ್ತಿದ ಹೆಣವನ್ನು ಹೂಳಿದರೆ ಮಳೆ ಬರುವುದಿಲ್ಲ.

೮) ಲಕ್ಷ್ಮೀ ದೇವಿಗೆ ಭಕ್ತಿಯಿಂದ ನಡೆದುಕೊಂಡರೆ ಆರ್ಥಿಕ ಉನ್ನತಿಯಾಗುತ್ತದೆ. ಎಂದು ಗ್ರಾಮದ ಬಣಜಿಗ ಸಮುದಾಯದವರು ನಂಬುತ್ತಾರೆ. ಇತ್ತೀಚಿಗೆ ಗ್ರಾಮದ ಎಲ್ಲ ಜನರಲ್ಲೂ ಈ ನಂಬಿಕೆ ಇರುವುದು ಕಂಡುಬರುತ್ತದೆ.

೯) ಲಕ್ಷ್ಮೀ ಮೂರು ಸಂಜೆ ಹೊತ್ತು ಮನೆಗೆ ಆಗಮಿಸುತ್ತಾಳೆ. ಕಾರಣ ಮನೆಯಲ್ಲಿ ದೀಪ ಹಚ್ಚಿ ಮನೆಯನ್ನು ಶುಭ್ರವಾಗಿಡಬೇಕು ಎಂಬ ನಂಬಿಕೆ ಇದೆ.

೧೦) ಸಾಯಂಕಾಲ ಕಸಗೂಡಿಸಿ ಹೊರಗೆ ಚಲ್ಲಿದರೆ ಲಕ್ಷ್ಮೀ ಹೊರಹೋಗುತ್ತಾಳೆ.

೧೧) ರಾತ್ರಿ ಊಟದ ನಂತರ ಮುಸುರೆ ನೀರನ್ನು ಹೊರಗೆ ಚಲ್ಲಿದರೆ ಲಕ್ಷ್ಮೀ ಹೊರಹೋಗುತ್ತಾಳೆ.

೧೨) ಕಸಬರಿಗೆಯನ್ನು ಒದೆಯಬಾರದು.

೧೩) ಹೊಸ್ತಿಲ ಮೇಲೆ ಶೀನು ಬಂದರೆ ನೀರು ಹಾಕಬೇಕು.

೧೪) ಜೋಕುಮಾರನಿಗೆ ಹಾಗೂ ಗಣೇಶನಿಗೆ ಪರಸ್ಪರ ದರ್ಶನವಾಗಬಾರದೆಂದು ಜೋಕುಮಾರ ಬಂದರೆ ಗಣೇಶನ ಮುಖವನ್ನು ಮುಚ್ಚುತ್ತಾರೆ.

೧೫) ಊರಿಗೆ ಹೋಗುವಾಗ ಹೋಗಿ ಬರ್ತಿನಿ ಎನ್ನಬೇಕು. ಹೋಗುತ್ತೇನೆ ಎನ್ನಬಾರದು ಎಂಬ ನಂಬಿಕೆ ಇದೆ.

೧೬) ಕಾಲು ಮುಂದೆ ಮಾಡಿ ಹುಟ್ಟಿದವರು ಮಳೆ ಗುಡುಗುತ್ತಿರುವಾಗ ಹೊರಗೆ ಹೋದರೆ ಸಿಡಿಲು ಬಡಿಯುತ್ತದೆ ಎಂಬ ನಂಬಿಕೆ ಇದೆ.

೧೭) ಆಷಾಢ ಮಾಸದಲ್ಲಿ ಅತ್ತೆ ಸೊಸೆ ಮುಖ ನೋಡಬಾರದು. ನೋಡಿದರೆ ಕೇಡಾಗುತ್ತದೆ ಎಂಬ ಭಾವನೆ ಇದೆ.

೧೮) ಮರಣ ಹೊಂದಿದ ವ್ಯಕ್ತಿಯ ದಿನಕಾರ್ಯದಂದು ಹಕ್ಕಿಗೆ ಅನ್ನ ಇಟ್ಟಾಗ ಕಾಗೆ ತಕ್ಷಣ ಬಂದು ಅನ್ನ ತಿಂದರೆ ಅವನಿಗೆ ಆಸೆ ಇಲ್ಲ, ಮುಟ್ಟದಿದ್ದರೆ ಆಸೆ ಇದೆ ಸ್ವರ್ಗಕ್ಕೆ ಹೋಗಿಲ್ಲ. ಸತ್ತ ವ್ಯಕ್ತಿ ಅಂತರಪಿಶಾಚಿಯಾಗಿ ಅಲೆಯುತ್ತಾರೆ ಎಂಬ ನಂಬಿಕೆ ಇದೆ.

೧೯) ಮಹಿಳೆಯರಿಗೆ ಎಡಗಣ್ಣು ಹಾರಿದರೆ ಶುಭ. ಪುರುಷರಿಗೆ ಬಲಗಣ್ಣು ಹಾರಿದರೆ ಶುಭ. ಏನಾದರೂ ಶುಭ ಸಮಾಚಾರ ಕೇಳುತ್ತೇವೆ ಎಂದು ನಂಬಿದ್ದಾರೆ.

೨೦) ಹಲ್ಲಿ ಶುಭ ಕಾರ್ಯದ ಕುರಿತು ಮಾತನಾಡುವಾಗ ಲೊಚಗುಟ್ಟುವ ಶಬ್ದಗಳ ಸಂಖ್ಯೆ ಆಧಾರದ ಮೇಲೆ ಶಕುನ ನಿರ್ಧರಿಸುತ್ತಾರೆ. ಎರಡು ಬಾರಿ ಲೊಚಗುಟ್ಟಿದರೆ ಶುಭವೆಂದು ಮೂರು ಬಾರಿ ಲೊಚಗುಟ್ಟಿದರೆ ಅಶುಭವೆಂದು ನಂಬಿದ್ದಾರೆ.

೨೧) 'ಬಳು ಹೊಕ್ಕ ಮನೆ ಅಳು' ಎಂದರೆ ಬಳು ಒಂದು ಪಕ್ಷಿ ಇದು ಮನೆಯಲ್ಲಿ ಒಳಗೆ ಬಂದರೆ ಅಶುಭ. ಕಾರಣ ಮನೆಯನ್ನು ಮೂರು ತಿಂಗಳು, ಆರು ತಿಂಗಳು ಬಿಡುವುದುಂಟು.

೨೨) ಟೀವಂಕಿ ಮನೆಯ ಮೇಲೆ ಅರಚುತ್ತಾ ಎರಡು ಮೂರು ದಿನ ಹಾರಿದರೆ ಸಾವಿನ ಸುದ್ಧಿ ಬರುತ್ತದೆ. ಯಾರಾದರೂ ರೋಗದಿಂದ ಬಳಲುತ್ತಿದ್ದರೆ ಸಾಯುತ್ತಾರೆ ಎಂಬ ನಂಬಿಕೆ ಇದೆ.

೨೩) ಒಂಟಿ ಹಾಲಕ್ಕಿ ನುಡಿದರೆ ಅಪಶಕುನ ಜೋಡಿ ಹಾಲಕ್ಕಿ ನುಡಿದರೆ ಶುಭಶಕುನವೆಂದು ಭಾವಿಸುತ್ತಾರೆ.

೨೪) ಗೂಗೆ ಗೂಕ್ ಗೂಕ್ ಎಂದು ಕೂಗಿದರೆ ಅಶುಭ, ಅದೇ ಜೋಗುಳ ಹಾಡಿನ ರೀತಿ ಕೂಗಿದರೆ ಶುಭವೆಂದು ನಂಬಿಕೆ ಇದೆ.

೨೫) ಸೊಸೆ ಕಾಲ್ಗುಣ ಚೆನ್ನಾಗಿದ್ದರೆ ಅವಳ ಮನೆಗೆ ಬಂದ ಮೇಲೆ ಸಮೃದ್ಧಿ ಹೆಚ್ಚಾದರೆ ಅವಳ ಕಾಲ್ಗುಣ ಚೆನ್ನಾಗಿದೆ ಎಂದು, ಅವಳು ಮನೆಗೆ ಬಂದ ಮೇಲೆ ಅನಾನೂಕೂಲತೆಗಳು ಹೆಚ್ಚಾದರೆ ಕಾಲ್ಗುಣಗಳು ಸರಿವಿಲ್ಲವೆಂದು ನಂಬುತ್ತಾರೆ.

೨೬) ಪಂಚಕದಲ್ಲಿ ಒಳಪಂಚಕ ಹಾಗೂ ಹೊರಪಂಚಕವೆಂದು ಎರಡು ರೀತಿಯಲ್ಲಿ ನಂಬಿಕೆ ಇದೆ. ಒಳ ಪಂಚಕದಲ್ಲಿ ಮನೆಯಲ್ಲಿನ ವ್ಯಕ್ತಿ ಸತ್ತರೆ ಮನೆಯಲ್ಲಿ ಐದು ಜನ ಸಾವನ್ನಪ್ಪುತ್ತಾರೆ ಎಂದು ಹೊರಪಂಚಕದಲ್ಲಿ ಸತ್ತರೆ ಓಣಿಯಲ್ಲಿನ ಐದು ಜನ ಸಾಯುತ್ತಾರೆ ಎಂದು ಇವತ್ತಿಗೂ ಇರುವ ನಂಬಿಕೆಯಾಗಿದೆ. ಈ ಸಂದರ್ಭದಲ್ಲಿ ಪರಿಹಾರಕ್ಕಾಗಿ ಮೂರು, ಆರು ತಿಂಗಳುಗಳವರೆಗೆ ಮನೆ ಬಿಡುವುದು ನಂತರ ಮನೆ ಸಾರಿಸಿ ಸ್ವಾಮಿಗಳಿಂದ ಪೂಜೆ ಮಾಡಿಸಿ ಊಟ ಹಾಕಿಸುವುದು ಮುಂತಾದ ಶಾಂತಿ ಮಾಡುತ್ತಾರೆ. ಶ್ರವಣಾ, ಉತ್ತರಾಷಾಢ, ಪೂರ್ವಾಷಾಢ, ಶತತಾರ ಧನಿಷ್ಠದವರೆಗೆ ಪಂಚಕವಿರುತ್ತದೆ. ಈ ಸಂದರ್ಭದಲ್ಲಿ ಯಾವುದೇ ಶುಭ ಕಾರ್ಯ ಇಂದಿಗೂ ಮಾಡುವುದಿಲ್ಲ. ಪಂಚಕದಲ್ಲಿ ಸತ್ತ ವ್ಯಕ್ತಿಯ ಶವದ ಜೊತೆ ಟೆಂಗಿನ ಕಾಯಿ, ನಿಂಬೆಹಣ್ಣು ಗೊಂಬೆಯನ್ನು ಮಾಡಿ ಶವದ ಎದೆ ಮೇಲಿಟ್ಟು ಹೂಳಲಾಗುತ್ತದೆ. ಇದರಿಂದ ಗಂಡಾಂತರ ತಪ್ಪುತ್ತದೆ ಎಂಬ ನಂಬಿಕೆ ಇದೆ.

ಗ್ರಾಮದಲ್ಲಿ ದೈವಗಳು ಹೇಳುವ ಭವಿಷ್ಯದಲ್ಲಿ ನಂಬಿಕೆಯಿದೆ. ಭವಿಷ್ಯವಾಚಕಗಳ ನಿರ್ಣಯ ಮತ್ತು ನಿರ್ದೇನದಂತೆ ನಡೆಯುವುದನ್ನು ಕಾಣುತ್ತೇವೆ. ಗ್ರಾಮದ ಜನತೆ ಹಲವು ಭವಿಷ್ಯ ವಾಚಕಗಳನ್ನು ನಂಬಿ ತಮ್ಮ ಕೆಲಸ ಕಾರ್ಯಗಳನ್ನು ರೂಪಿಸಿಕೊಳ್ಳುವುದುಂಟು.

ಗ್ರಾಮದಲ್ಲಿ ಸ್ವಾಮಿಗಳು ಹೇಳುವ ಪಂಚಾಗದ ಭವಿಷ್ಯವನ್ನು ನಂಬುತ್ತಾರೆ. ತಮ್ಮ ಮನೆಗಳಲ್ಲಿ ಹುಟ್ಟು, ನಾಮಕರಣ, ಮದುವೆ, ಸೀಮಂತ, ಸಾವು ಏನೇ ಜರುಗಿದರೂ ಸ್ವಾಮಿಗಳಲ್ಲಿ ಅದರ ಫಲಾಫಲಗಳ ಭವಿಷ್ಯ ಆಚರಣೆಗಳ ಕುರಿತು ಕೇಳುತ್ತಾರೆ. ಅವರು ಹೇಳುವ ಪ್ರಕಾರವೇ ದೇವತಾ ಕಾರ್ಯ ಪೂಜೆ, ಮದುವೆ, ನಾಮಕರಣದಂತಹ ಕಾರ್ಯಗಳನ್ನು ತಪ್ಪದೇ ಪಾಲಿಸುತ್ತಾರೆ. ಇವರಿಗೆ ಭವಿಷ್ಯದಲ್ಲಿ ನಂಬಿಕೆಯ ಕಾರಣದಿಂದ ಹೆಣ್ಣು ದೇವರ ಬಳಿಗೆ ಹೋಗಿ ಹೇಳಿಕೆ ಕೇಳಿಕೆಗಳನ್ನು ಕೇಳುತ್ತಾರೆ. ಕೈಯನ್ನು ನೋಡಿ ಭವಿಷ್ಯ ಹೇಳುವವರನ್ನು ನಂಬುತ್ತಾರೆ. ಬುಡಬುಡಿಕೆಯವರ ಹಕ್ಕಿ ಶಕುನವನ್ನು ನಂಬುತ್ತಾರೆ. ಗೌಲೆತ್ತಿನವರು, ಮರಗವ್ವನ ಗುಡಿಯವರು ಹೇಳುವ ಭವಿಷ್ಯದಲ್ಲಿ ನಂಬಿಕೆಯಿದೆ. ಒಂಟಿ ಸೀನು ಅವಲಕ್ಷಣ, ಜೋಡಿ ಸೀನು ಶುಭ ಶಕುನ. ಹೆಣ್ಣನ್ನು ನೋಡಲು ಮನೆಗೆ ಯಾರಾದರೂ ಬಂದಾಗ ಆ ಮನೆಯಲ್ಲಿ ಕಸಗೂಡಿಸುತ್ತಿದ್ದರೆ ಅಪಶಕುನ. ಯಾರಾದರೂ ಆ ಮನೆಯಲ್ಲಿ ಬಾಚಣಿಗೆಯಿಂದ ತಲೆ ಬಾಚುತ್ತಿದ್ದರೆ ಅದು ಅವರಿಗೆ ಅಪಶಕುನ, ಊಟ ಮಾಡುತ್ತಿದ್ದರೆ ಅಪಶಕುನ. ಅದರಲ್ಲಿ ಊಟ ಮಾಡುವ ವ್ಯಕ್ತಿ ಕೈತೊಳೆದು ಬಂದರಂತೂ ಇನ್ನೂ ಅಪಶಕುನ. ಕಟ್ಟಿಗೆ ಹೊರೆ ಎದುರಿಗೆ ಬಂದರೆ ಅಪಶಕುನ. ತುಂಬಿದ ಕೊಡ ಎದುರಿಗೆ ಬಂದರೆ ಶುಭಶಕುನ. ಅವರಿಂದ ಸ್ವಲ್ಪ ನೀರನ್ನು ತೆಗೆದುಕೊಂಡು ಬಾಯಲ್ಲಿ ಹಾಕಿಕೊಂಡು ಮುಂದಕ್ಕೆ ಹೋಗುತ್ತಾರೆ. ಖಾಲಿ ಕೊಡ ಎದುರಿಗೆ ಬಂದರೆ ಅಪಶಕುನ. ಬೆಕ್ಕು ಎಡಕ್ಕೆ ಹೋದರೆ ಅಪಶಕುನ, ಬಲಕ್ಕೆ ಹೋದರೆ ಶುಭಶಕುನ. ಬಾಯಲ್ಲಿ ಇಲಿ ಕಚ್ಚಿಕೊಂಡು ಹೋದರೆ ಶುಭಶಕುನ. ಮುಂಜಾನೆ ಎದ್ದು ಕೂಡಲೆ ಅಥವಾ ಊರಿಗೆ ಹೋಗುವಾಗ ನಾವ್ಹಿದನ ಮುಖ ನೋಡಬಾರದು. ಶವದ ಮೆರವಣಿಗೆ ಎದುರಿಗೆ ಬಂದರೆ ಶುಭವೆಂದು ನಂಬುತ್ತಾರೆ. ಮನೆ ಮೇಲೆ ಕುಳಿತು ಕಾಗೆ ಕೂಗಿದರೆ ಬೀಗರು ಬರುತ್ತಾರೆ. ಮನೆಯಲ್ಲಿ ಗುಬ್ಬಿ ಗೂಡು ಕಟ್ಟಿದರೆ ಸಂತಾನ ಭಾಗ್ಯವಾಗುತ್ತದೆ ಎಂದು ನಂಬಿಕೆ. ಮಾತನಾಡುವಾಗ ಹಲ್ಲಿ ಲೊಚಗೊಟ್ಟಿದರೆ ಮಾತು ನಿಜವೆಂದು ನಂಬುತ್ತಾರೆ. ಸ್ತ್ರೀ ದೈವಗಳಾದ ದುರ್ಗವ್ವ, ಮರಗವ್ವ, ಎಲ್ಲವ್ವ, ಕೊರೆವ್ವ ಹಾಗೂ ಜೋಗತಿಯರು ಹೇಳುವ ಭವಿಷ್ಯವನ್ನು ನಂಬುತ್ತಾರೆ. ಅವರು ಹೇಳಿದಂತೆ ನಡೆದುಕೊಳ್ಳುತ್ತಾರೆ. ಇವರು ತಮ್ಮ ವೈಯಕ್ತಿಕ ಸಮಸ್ಯೆಗಳಿಗೆಲ್ಲ ದೇವತೆಗಳ ಮೊರೆ ಹೋಗುತ್ತಾರೆ. ಮಕ್ಕಳ ಫಲಬೇಕೆಂದರೂ ಗಂಡು ಸಂತಾನ ಬೇಕೆಂದರೂ, ಮದುವೆಯಾಗಬೇಕಾದರೂ, ಕಾಯಿಲೆ ವಾಸಿಯಾಗಬೇಕಾದರೂ, ಮುತ್ತೈದೆತನ ವೃದ್ಧಿಸಲು ದೇವತೆಗಳಲ್ಲಿ ಮೊರೆಹೋಗುತ್ತಾರೆ. ಹಾಗೆಯೇ ಒಳ್ಳೆಯದಾಗಲೆಂದು ಹೂವಿನ ಪ್ರಸಾದ ಕೇಳುವುದ, ದೇವತೆಯು ಬಲಭಾಗದಿಂದ ಹೂವನ್ನು ಕೊಟ್ಟರೆ ಅಂದುಕೊಂಡ ಕೆಲಸ ಯಶಸ್ವಿಯಾಗುತ್ತದೆ ಎಂದು ನಂಬಿದ್ದಾರೆ. ಒಂದು ವೇಳೆ ಎಡಭಾಗದ ಹೂ ಪ್ರಸಾದ ಸಿಕ್ಕರೆ ಕಾರ್ಯದಲ್ಲಿ ಅಪಯಶವಾಗುತ್ತದೆ ಎಂದು ನಂಬಿದ್ದಾರೆ. ಪ್ರಥಮ ಗರ್ಭಿಣಿ ಹೆಣ್ಣು ಕಳ್ಳಕುಬಸ ಆಗುವವರೆಗೆ ಹೊಳೆ ಹಳ್ಳ ದಾಟಬಾರದು.

ಮಾನವನ ಇಂತಹ ಎಲ್ಲ ನಂಬಿಕೆಗಳನ್ನು ಮೂಢನಂಬಿಕೆಗಳೆಂದು ತಿರಸ್ಕರಿಸಲು ಸಾಧ್ಯವಿಲ್ಲ. ಏಕೆಂದರೆ ಮೂಢನಂಬಿಕೆಗಳಾಗಿ ಕಂಡು ಬಂದರೂ ಕೆಲವೊಂದು ನಂಬಿಕೆಗಳು ನಿಷೇಧಗಳು ವೈಜ್ಞಾನಿಕ ಸ್ವರೂಪವನ್ನು ಪಡೆದುಕೊಂಡಿವೆ. ಮತ್ತೆ ಕೆಲವು ನಂಬಿಕೆಗಳು ವಿಧಿ ನಿಷೇಧಗಳು ಸಮಾಜದಲ್ಲಿನ ಅಹಿತಕರ ಘಟನೆಗಳನ್ನು ನಿವಾರಿಸುವುದಕ್ಕೆ ಸಮಾಜದ ಅನ್ಯೋನ್ಯ ಬಾಂಧವ್ಯಕ್ಕೂ

ಕಾರಣವಾಗಿವೆ. ಜಾತಿ, ಧರ್ಮ, ಲಿಂಗ, ಕೋಮುಗಳ ನಡುವೆ ಸಾಮಾಜಿಕ, ರಾಜಕೀಯ ಸಂದರ್ಭದಲ್ಲಿ ಮಾನವ ಸಂಬಂಧಗಳನ್ನು ಗಟ್ಟಿಗೊಳಿಸುವ ಕೆಲಸವನ್ನು ಮಾಡುತ್ತವೆ.

ಕೃಷಿಯಲ್ಲಿ ಗಾಳಿ ಮಳೆ ಕುರಿತಾದ ನಂಬಿಕೆಗಳು

೧) ಆಗ್ನೆ ದಿಕ್ಕಿನಿಂದ ಗಾಳಿ ಬೀಸಿದರೆ ಗೋದಿ ಬೆಳೆ ಚೆನ್ನಾಗಿ ಬರುತ್ತದೆ. ಈ ಹಿನ್ನೆಲೆಯಲ್ಲಿ ರೈತನ ಗಾದೆ ಮಾತೊಂದನ್ನು ಗಮನಿಸಬಹುದು. 'ಡಂಕಣ ಗಾಳಿ ಬೀಸಿದರೆ ಅಂಕಣ ತುಂಬ ಕಾಳು' ಎಂಬ ನಂಬಿಕೆಯನ್ನು ಹೊಂದಿದ್ದಾರೆ.

೨) ಉತ್ತರ ದಿಕ್ಕಿನಿಂದ ಬೀಸುವ ಗಾಳಿಗೆ ಹರಿಶ್ಚಂದ್ರನ ಗಾಳಿ ಎಂದು ಕರೆಯುತ್ತಾರೆ. ಈ ಗಾಳಿ ಬೀಸಿದರೆ ಮಳೆ ಬರುತ್ತದೆ ಎಂಬ ನಂಬಿಕೆಯಿದೆ.

೩) ಪಶ್ಚಿಮ ದಿಕ್ಕಿನಿಂದ ಬೀಸುವ ಗಾಳಿಗೆ ಪಡುಗಾಳಿ ಎನ್ನುತ್ತಾರೆ. ಈ ಗಾಳಿ ಬೀಸಿದರೆ ಕಾಯಿಪಲ್ಲೆ ಹಣ್ಣುಗಳಾದ ಬದನೆಕಾಯಿ, ಚವಳೆಕಾಯಿ, ಹಣ್ಣು ಉತ್ತಮವಾಗಿ ಬೆಳೆಯುತ್ತವೆ ಎಂಬ ನಂಬಿಕೆಯಿದೆ.

೪) ಅಶ್ವಿನಿ ಮಳೆಯಾದರೆ ಶಿಶುವಿಗೆ ನೀರು ಸಿಗುವುದಿಲ್ಲ ಎಂಬ ನಂಬಿಕೆಯಿದೆ.

೫) ಮಿರ್ಗಾ ಮಳೆಯಾದರೆ ಆರಿದ್ರಾ ಮಳೆ ಹೇಗೋ ಸಹಾಯ ಮಾಡುತ್ತದೆ ಎಂಬ ನಂಬಿಕೆಯಿದೆ.

೬) ರೋಣಿ ಮಳೆಯಾದರೆ ಓಣಿಯೆಲ್ಲಾ ಕಾಳು ಬೆಳೆಯುತ್ತವೆ ಎಂಬ ನಂಬಿಕೆಯಿದೆ.

ದನಗಳಸುಳಿಗಳ ಕುರಿತು ನಂಬಿಕೆಗಳು

ಒಕ್ಕಲಿಗರಿಗೆ ದನಗಳೇ ಸಂಪತ್ತು ಬೇಸಾಯದೊಡನೆ ದನಕರಗಳನ್ನು ಸಾಕಿ ಲಾಭದಾಶೆಯಿಂದ ಕೊಳ್ಳುವ ಮಾರುವ ಕಾರ್ಯ ಆಗಾಗ ನಡೆಯುತ್ತದೆ ಇದಕ್ಕೆ ಪಶುಪಾಲನೆ ಎಂಬ ಹೆಸರು ಪಶುಗಳನ್ನು ಕೊಳ್ಳುವುದುಂಟು ಅಂತೆಯೇ ತಳಿ ನೋಡಿ ಹೆಣ್ಣು ತರಬೇಕು, ಸುಳಿ ನೋಡಿ ದನ ತರಬೇಕು ಎಂಬ ಗಾದೆಯು ರೂಡಿಯಾಗಿದೆ. "ಸುಳಿ" ಇದು ದನಗಳಿಗೆ ಹುಟ್ಟಿನಿಂದ ಬಂದದ್ದು ಅಲ್ಲದೇ ಸಾಯುವವರೆಗೆ ಉಳಿಯುವಂತಿದೆ ಆದ್ದರಿಂದಲೇ ಹೀನ ಸುಳಿ ಬೋಳಿನದರೆ ಹೋದೀತೇ? ಎಂಬುವದು ಇನ್ನೊಂದು ಲೋಕೊಕ್ತಿ. ಸುಳಿ ಎಲ್ಲ ದನಗಳಿಗೆ ಇದ್ದರೂ ಕುರಿ, ಆಡುಗಳನ್ನು ಕೊಳ್ಳುವಾಗ ಸಾಮಾನ್ಯವಾಗಿ ಸುಳಿ ನೋಡುವುದಿಲ್ಲ. ದನಗಳಲ್ಲಿ ಕುದುರೆಯ ಸುಳಿಗಳನ್ನು ಅತೀ ಸೂಕ್ಷ್ಮವಾಗಿ ನೋಡುವುದುಂಟು ಆಕಳು ಎತ್ತುಗಳಿಗೆ ಮುಂಬಾಗಕ್ಕೆ ಕೆಳಗೆ ಮಾತ್ರ ೮ ಹಲ್ಲುಗಳಿರುತ್ತವೆ ಯಾವ ದನಗಳಿಗೂ ೭ ಹಲ್ಲುಗಳಿರಬಾರದು ೭ ಹಲ್ಲಿನ ದನ ಗೋಳು ಮಾಡುವದೆಂದು ಒಕ್ಕಲಿಗನ ನಂಬಿಕೆ.

	ಸ		ಶ
೧	ಕುಂಕುಮ ಸುಳಿ	ಹಣೆಯ ಮೇಲೆ ನಡುವೆ ಒಂದು ಸುಳಿ	ಶುಭ
೨	ನಾಮ ಸುಳಿ	ಹಣ	ಶುಭ
೩	ಅಡಕಲ ಸುಳಿ	ಹಣೆಯ ಮೇಲೆ ಒಂದರ ಮೇಲೊಂದು ೨ ಸುಳಿ	ಅಶುಭ
೪	ಬಾಸಿಂಗ ಸುಳಿ	ಹಣೆಯ ಮೇಲೆ ತ್ರಿಕೋನದಂತೆ ೩ ಸುಳಿ	ಅಶುಭ
೫		ಎರಡು ಕಣ್ಣುಗಳ ಮಧ್ಯೆ ಒಂದು ಸುಳಿ	ಅಶುಭ
೬	ಮಸ್ತಕದ ಸುಳಿ	ಎರಡು ಕೋಡುಗಳ ಮಧ್ಯೆ ಒಂದು ಸುಳಿ	ಅಶುಭ

೭	ಉರುಲು ಸುಳಿ	ಜಂತಿಗೆಯಲ್ಲಿ ಸಿಗುವಂತ ಕುತ್ತಿಗೆಯಲ್ಲಿ ೨ ಸುಳಿ	ಅಶುಭ
೮	ಎದೆಯ ಸುಳಿ		ಶುಭ
		ಎರಡು ಸುಳಿ	
೯	ನೊಗ ಮುರುಕ ಸುಳಿ	ಇಣಿಯ ಮುಂಬಾಗದಲ್ಲಿ ಹೆಗಲ ಮೇಲೆ ೧ ಸುಳಿ	ಅಶುಭ
೧೦	ಕಾಗಿ ಸುಳಿ	ಇಣಿಯ ಭಾಗದಲ್ಲಿ ಒಂದು ಸುಳಿ	ಅಶುಭ
೧೧	ಬೆಟ್ಟದ ಸುಳಿ/	ಇಣಿಯ ತುದಿಯಲ್ಲಿರುವ ಸುಳಿ ಗೋಪುರ ಸುಳಿ	ಶುಭ
೧೨	ರಾಜಾ ಸುಳಿ	ಬೆನ್ನ ಮೇಲೆ ಮುಂಬಾಗದಲ್ಲಿರುವ ಸುಳಿ	ಶುಭ
೧೩	ದಾವಣಿ ಸುಳಿ	ಬೆನ್ನ ಮೇಲೆ ಮುಂಬಾಗದಲ್ಲೊಂದು	
		ಹಿಂಬಾಗದಲ್ಲೊಂದು ಸುಳಿ	ಶುಭ
೧೪	ಮೆಟ್ಟಿ ಸುಳಿ/ಮೂತ್ರಸುಳಿ	ಬೆನ್ನ ಮಧ್ಯದಲ್ಲಿ ಒಂದು ಸುಳಿ ನೀರು ಕೆಳಗೆ	ಅಶುಭ
		ಮೂತ್ರದ ಧಾರೆಗೆ ಕೊಡವಂತಿರುವ ಸುಳಿ	
೧೫	ಗದ್ದಗಿ ಸುಳಿ	ಬೆನ್ನ ಮೇಲೆ ಹಿಂಬಾಗದಲ್ಲಿ ಸುಳಿ	ಶುಭ
			ಶುಭ
೧೭	ಜೇಡಿಸುಳಿ/ಜಿರಳಿಸುಳಿ	ಮುಂಗಾಲು ಮಂಡಿಯ ಹಿಂದಿರುವ ೧ ಸುಳಿ	ಅಶುಭ
೧೮	ವಕ್ರಸುಳಿ	ಹಿಂಗಾಲ ಚಪ್ಪೆಯ ಕೆಳಗಿರುವ ೧ ಸುಳಿ	ಅಶುಭ
೧೯	ಬಾಂಗಿ ಸುಳಿ	ಬಾಲದ ಮೇಲಿರುವ ೧ ಸುಳಿ	ಅಶುಭ
೨೦	ಬಾರಿಗಿ ಸುಳಿ	ಬಾಲದ ಕೆಳಗೆ ಲಂಗೋಟಿ ಪಟ್ಟವಿದ್ದರೆ	ಅಶುಭ
೨೧	ಬಾರಿಗಿ ಸುಳಿ	ಬಾಲದ ಕೆಳಗೆ ನಾಗರ ಹೆಡೆಯಂತಿದ್ದರೆ	ಶುಭ

ಜನಪದ ವೈದ್ಯ ಪದ್ಧತಿಯ ಕುರಿತು ನಂಬಿಕೆ

ಒಕ್ಕಲುತನ ಪ್ರಧಾನವಾದ ನಮ್ಮ ದೇಶದಲ್ಲಿ ಪ್ರತಿಶತ ೭೦ ರಷ್ಟು ಜನರು ಕೃಷಿಯನ್ನೇ ಅವಲಂಭಿಸಿ ಜೀವನ ಸಾಗಿಸುವವರಾಗಿದ್ದಾರೆ. ಕೃಷಿಕರಿಗೆ ದನಗಳೇ ಸಂಪತ್ತು. ಬೇಸಾಯದ ಕೆಲಸಕ್ಕಾಗಿ ಎತ್ತು, ಹೋರಿ, ಕೋಣಗಳನ್ನು ಹೈನುಗಾರಿಕೆಗಾಗಿ ಆಕಳು, ಎಮ್ಮೆ, ಆಡುಗಳನ್ನು ಒಕ್ಕಲಿಗರು ಸಾಕುವುದುಂಟು. ದನಗಳನ್ನೆ ಕೊಳ್ಳುವ ವಿಕ್ರಯಿಸು ಉದ್ಯೋಗದ ಕೆಲವರನ್ನು ನಾವು ಕಾಣುತ್ತೇವೆ ವಾರಕ್ಕೊಮ್ಮೆ ಕೊಡುವ ದನಗಳ ಸಂತೆ ಹಾಗೂ ವರ್ಷಕ್ಕೊಮ್ಮೆ ನೆರೆಯುವ ದನಗಳ ಜಾತ್ರೆಗಳಲ್ಲಿ ಇಂತಹ ದನಗಳ ವ್ಯಾಪಾರಿಗಳು ವಿಶೇಷವಾಗಿ ಕಂಡುಬರುತ್ತದೆ.

ಒಕ್ಕಲಿಗರು ದನಗಳನ್ನು ವಿಶೇಷ ಆಸಕ್ತಿಯಿಂದ ಜೋಪಾನ ಮಾಡುತ್ತಾರೆ. ದನಗಳು ಒಕ್ಕಲಿಗರ ಜೀವನಾಡಿಗಳು ದನಗಳ ಮಹತ್ವವನ್ನು ಹೆಂಡತಿ ಇಲ್ಲದವನಿಗೆ ದಗದ (ಕೆಲಸ) ಇಲ್ಲ ಎಂಬ ಸಾರಿ ಹೇಳುತ್ತದೆ. ಜನರಿಗೆ ಆಕಸ್ಮಿಕವಾಗಿ ರೋಗಗಳು ಬರುವಂತೆ ದನಗಳಿಗೂ ರೋಗಗಳು ಬರುತ್ತವೆ ಆಗ ಉಪಚಾರ ಅನಿವಾರ್ಯವಾಗುತ್ತದೆ. ಹಳ್ಳಿಗಳಲ್ಲಿ ದನಗಳನ್ನು ಉಪಚರಿಸಿ ಗುಣಪಡಿಸುವ ದೇಶಿವೈದ್ಯರಿರುವರು ಇವರು ಉಚಿತವಾಗಿ ಚಿಕಿತ್ಸೆ ಮಾಡುವರು ಗಿಡ ಮೂಲಿಕೆಗಳನ್ನು ಇವರು ಔಷಧಕ್ಕಾಗಿ ಬಳಸುತ್ತಾರೆ ಅನುಭವದಿಂದ ಬಳಸುತ್ತ ಬಂದ

ಈ ಔಷಧಗಳು ಫಲಕಾರಿಯಾಗುವುದಲ್ಲದೇ ರೋಗಪಿಡಿತ ದನಗಳು ಬೇಗ ಗುಣಮುಖವಾಗುತ್ತವೆ ಇಲ್ಲಿ ದನಗಳ ಕೇಲವು ರೋಗಗಳು ಹಾಗೂ ಚಿಕಿತ್ಸೆಯ ಕುರಿತು ಇರುವ ನಂಬಿಕೆ ಹಿನ್ನೆಲೆಯಲ್ಲಿ ವಿವರಿಸಲಾಗಿದೆ.

೧) ಬಾಯಿಬೇನೆಗೆ: ಹೊನ್ನವರಿ ತಪ್ಪಲನ್ನು ಮಜ್ಜಿಗೆಯಲ್ಲಿ ಅರದು ಅರ್ದ ತಂಬಿಗೆಯಷ್ಟು ರಸತೆಗೆದು ದಿನಾಲು ೨ ಸಾರಿಯಂತೆ ೩ ದಿವಸ ಕುಡಿಸಬೇಕು ದಿನಾಲು ಅರ್ದ ಕಿಲೋ ಒಳ್ಳೆಣ್ಣೆ ೨-೩ ದಿವಸ ಕುಡಿಸಬೇಕು. ಕಳಿತ ಬಾಳೆಹಣ್ಣು ೮-೧೦ ರಷ್ಟು ಒಂದೆರಡು ಸಾರಿ ತಿನಿಸಬೇಕು. ಕೊತಂಬರಿ ಸೂಡನ್ನು ಎಣ್ಣೆಯಲ್ಲಿ ಎದ್ದಿ ೨-೩ ಸೊಡು ಒಮ್ಮೆ ತಿನಿಸಬೇಕು. ಪ್ರತಿದಿನ ೨-೩ ಸಾರಿ ಬಾಯಿಬೇನೆಗೆ ಪಿಡಿತ ದನದ ಬಾಯಿಯನ್ನು ಸ್ವಚ್ಚವಾಗಿ ತೋಳೆದು ಅರಿಶಿಣಪುಡಿ ಮತ್ತು ಒಳ್ಳೆಣ್ಣೆ ಕೂಡಿಸಿ ನಾಲಿಗೆ ಸವರಬೇಕು.

೨) ಗಂಟಲ ಬೇನೆಗೆ: ಟರ್ಪೆಂಟಾಯಿನ ಮತ್ತು ಒಳ್ಳೆಣ್ಣೆ ಕೂಡಿಸಿ ಗಂಟಲಿನ ಹೊರಭಾಗಕ್ಕೆ ಹಚ್ಚಿ ಕಾವುಕೊಡಬೇಕು.

೩) ಕುಕ್ಕಡಿಗೆ: ಕಂಬಳ ತುಣುಕು (ಕೋರಿ) ಸುಟ್ಟು ಆ ಮಿಶ್ರಣವನ್ನು ನಾಲಿಗೆಗೆ ಹಚ್ಚಿ ಕೆಂಪು ಹಂಚಿನಿಂದ ನಿಧಾನವಾಗಿ ತಿಕ್ಕಬೇಕು ಇಲ್ಲವೇ ಉಪ್ಪಿನಕಾಯಿ ರಸ, ಬೆಲ್ಲ, ಅಜೀವಾನ ಕೂಡಿಸಿ ಅರೆದು ನಾಲಿಗೆಗೆ ಹಚ್ಚಿ ಬೆರುಗಳಿಂದ ತಿಕ್ಕಬೇಕು ಈ ರೋಗ ಪಿಡಿತ ದನಕ್ಕೆ ಬಿಸಿನೀರನ್ನು ಕುಡಿಸಬೇಕು.

೪) ಗುಂಡಿಗೆ ರೋಗಕ್ಕೆ: ಮೆಟ್ಟುಗಾಲಿನಿಂದ ಬಿರುಸಾಗಿ ಒದೆಯಲು ದನದ ಕೋಡಿನ ಮೇಲೆ ಸಾವಕಾಶವಾಗಿ ಗುಣೆಯಿಂದ ಬಡೆಯಬೇಕು ಅಥವಾ ಹುಣಸಿಹಣ್ಣಿನ ರಾಡಿಯನ್ನು ಮಜ್ಜಿಗೆಯಲ್ಲಿ ತಯಾರಿಸಿ ೨ ತಂಬಿಗೆಯಷ್ಟು ಗೊಟ್ಟ ಹಾಕಬೇಕು.

೫) ಕಣ್ಣಲ್ಲಿ ಹೂ ಆದರೆ: ಕುಂಕುಮವನ್ನು ಬೆಣ್ಣೆ ಇಲ್ಲವೇ ಅದನ್ನೂ ದಿನಾಲು ೨-೩ ಸಾರಿ ಕಣ್ಣಲ್ಲಿ ಹಾಕಬೇಕು ೨-೩ ದಿನಗಳಲ್ಲಿ ರೋಗ ವಾಸಿಯಾಗುವುದು.

೬) ಹೊಟ್ಟೆ ಕಡಿತಕ್ಕೆ: ೨೫೦ ಗ್ರ್ಯಾಂ ಗಾಣದ ಎಣ್ಣೆಯಲ್ಲಿ ಒಂದು ಬಾಟ್ಲ (೨೦೦ ಮಿಲಿ) ಟರ್ಪೆಂಟಾಯಿನ ಕೂಡಿಸಿ ಗೊಟ್ಟು ಹಾಕಬೇಕು ಅಜವಾನ, ಬೆಲ್ಲ, ಈರುಳ್ಳಿ ಕೂಡಿಸಿ ತಿನ್ನಿಸಬೇಕು.

೫ ಗ್ರಾಂ ಕರ್ಪೂರವನ್ನು ೨೦೦ ಗ್ರಾಂ ತಿನ್ನುವ ಸೋಡಾದೊಡನೆ ಬೇರಿಸಿ ನೀರಿನಲ್ಲಿ ದ್ರಾವಣ ತಯಾರಿಸಿ ಗೊಟ್ಟ ಹಾಕಬೇಕು ಇಲ್ಲವೇ ೪-೫ ಬುಂದೆದ ಉಂಡಿಗಳನ್ನು ತಿನ್ನಿಸಬೇಕು.

೮) ಉಚಗೊಳ್ಳುತ್ತಿದ್ದರೆ: ೧) ೪-೫ ಖಡು, ೫ ಗ್ರಾಂ ಹಿಂಗು ಹಾಕಬೇಕು ಇಲ್ಲವೇ ೧ ಕಿಲೋ ತೊಗರಿಯನ್ನು ಸಣ್ಣಾಗಿ ಒಡೆದು ತೋಯಿಸದೇ ಬೆಳಿಗ್ಗೆ ತಿನ್ನಿಸಬೇಕು. ೨) ಕರಕಾಯಿಯನ್ನು ನುಣ್ಣಾಗಿ ಅರೆದು ಮಜ್ಜಿಗೆಯಲ್ಲಿ ಅಥವಾ ಹಾಲಿನಲ್ಲಿ ೨-೩ ಸಾರಿ (೪ ತಾಸಿಗೊಮ್ಮೆ) ಒಂದು ತಂಬಿಗೆಯಷ್ಟು ಪ್ರತಿಸಲ ಗೊಟ್ಟು ಹಾಕಬೇಕು.

೯) ರಕ್ತ ಉಚಗೊಳ್ಳುತ್ತಿದ್ದರೆ: ಜೀರಿಗೆ, ಲಿಂಬೆಹಣ್ಣು ಪಟಕಕೂಡಿಸಿ ಅರದು ಮಜ್ಜಿಗೆಯಲ್ಲಿ ಗೊಟ್ಟ ಹಾಕಬೇಕು ಇದರಿಂದ ಮೂತ್ರದಲ್ಲಿ ರಕ್ತ ಬಿಳುತ್ತಿದ್ದರೂ ನಿಲ್ಲುವುದು.

೧೦) ಮೂತ್ರದಲ್ಲಿ ರಕ್ತ ಬರುತ್ತಿದ್ದರೆ: ಮೇಲಿನ ಉಪಚಾರದಿಂದ ಗುಣಮುಖವಾಗದಿದ್ದರೆ ೨೦೦ ಗ್ರ್ಯಾಂ ಹವಿಜನ್ನೂ ದಿನಾಲು ಒಮ್ಮೆ ತಿನಿಸಬೇಕು ಹೀಗೆ ೨-೩ ದಿವಸ ಉಪಚರಿಸಬೇಕು.

೧೧) ಮೂತ್ರ ಕಟ್ಟಿದರೆ: ಉದ್ದ ಎಲೆಯ ಹೊಲುಸಕ್ಕಿಯ ತಪ್ಪಲಿನ ರಸವನ್ನು ತೆಗೆದು ಒಂದು ಬಂಟಲಿನಷ್ಟು ಹೊಟ್ಟೆಯಲ್ಲಿ ಹಾಕಬೇಕು.

೧೨) ಹೆಗಲು ಬಂದರೆ: ಹೆಗಲಿಗೆ ಗಾಯವಾಗಿ ಗಂಟುಗಟ್ಟಿ ರಕ್ತ ಸೊರುವುದು ಬಾವು ಬರುವುದು ಇದಕ್ಕೆ ಹೆಗಲು ಬರುವುದು ಎಂದು ಹೆಸರು ಹೀಗಾದಾಗ ಮೆಣದಬತ್ತಿಯನ್ನು ಒಳ್ಳೆಣ್ಣೆಯಲ್ಲಿ ಕೂಡಿಸಿ ಕೂಡಿಸಿ ಗಾಯಕ್ಕೆ ಲೇಪಿಸಬೇಕು ಈ ರೋಗದ ದನವನ್ನು ಹೊಡಬಾರದು ಅದಕ್ಕೆ ವಿಶ್ರಾತಿ ಅಗತ್ಯ

೧೩) ಗಾಯವಾಗಿ ಕ್ರೀಮಿಗಳಾದರೆ: ಆ ಗಾಯವನ್ನು ಚೆನ್ನಾಗಿ ತೊಳೆದು ನಸ್ಯದ ಪುಡಿ ಮತ್ತು ಸುಣ್ಣವನ್ನು ಗಾಯಕ್ಕೆ ಲೇಪಿಸಬೇಕು ಅಥವಾ ಹೀರೇ ಬಳ್ಳಿಯ ಎಲೆಯ ರಸವನ್ನು ಗಾಯದ ಮೇಲೆ ದಿನಾಲು ಮೂರು ಸಾರಿಯಂತೆ ೨ ದಿವಸ ಹಿಂಡಬೇಕು.

೧೪) ಕುಂದು ಆದರೆ: ೧) ತುಂಬಿ ರಸವನ್ನು ತಂದು ಜಜ್ಜಿ ರಸ ತೆಗೆದು ಒಂದು ಗ್ಲಾಸಿನಷ್ಟು ರಸವನ್ನು ಗೊಟ್ಟ ಹಾಕಬೇಕು ಮತ್ತು ಆ ರಸವನ್ನು ಕಿವಿಯಲ್ಲಿಯೂ ಹಾಕಬೇಕು ಹಾಗೇ ರಸಯುಕ್ತ ತಪ್ಪಲನ್ನು ದನದ ಬೆನ್ನಿಗೆ ಹಚ್ಚಿ ತಿಕ್ಕಬೇಕು ಇದಲ್ಲದೆ ಹೊಲೊಸಕ್ಕ ರಸವನ್ನು ತೆಗೆದು ಒಂದು ಚಮಚೆಯಷ್ಟು ರೊಗಪಿಡಿತ ದನದ ಕಿವಿಯಲ್ಲಿ ಹಾಕಬೇಕು. ೨) ಬೆಲ್ಲದ ಚಹಾಪುಡಿ ಹಾಲು ಬೆರಸದೆ ಪ್ರತಿಸಾರಿ ಒಂದು ತಂಬಿಗೆಯಷ್ಟು ೪-೫ ಸಾರಿ ಕೊಡಬೇಕು.

೧೫) ಕಿರುಳು ಹತ್ತಿದರೆ: ಮಾನವನ ಮೂತ್ರವನ್ನು ಈ ರೋಗಪಿಡಿತ ದನದ ಕಿವಿಯಲ್ಲಿ ಹಾಕಿದರೆ ತಕ್ಷಣ ಗುಣಮುಖವಾಗುವುದು.

೧೬) ವಿಷ ಬಾಧೆಗೆ: ವಿಷ ಬಾಧೆಯಾದದ್ದು ಕಂಡೊಡನೆ ಉಪಚಾರ ಆರಂಭಿಸಬೇಕು. ವಿಷ ಬಾಧೆಗೊಳಗಾದ ದನವು ನಡಗುತ್ತದೆ ಇದನ್ನು ಮನದಟ್ಟು ಮಾಡಿಕೊಳ್ಳಬೇಕಾದರೆ ತಣದ ತುಟಿಗೆ ಅರಿಶಿಣಪುಡಿ ಹಚ್ಚಬೇಕು ಅದು ತಕ್ಷಣ ಕೆಂಪಾಗುತ್ತದೆ ಹೀಗಾದರೆ ಅದು ವಿಷಭಾದೆಗೊಳಬಾಗುವುದು ನಿಶ್ಚಿತ ಆಗ ಅದಕ್ಕೆ ಅರ್ಧಕಿಲೋ ತುಪ್ಪವನ್ನು ಕೂಡಿಸಬೇಕು ಔಡಲುಬೇರು ಒಂದು ಹಿಡಿ ಗುಂಡ ಹೊಸಲಕ್ಕಿ ತಪ್ಪಲು ಕಾಯಿ ಸಹಿತ ಮತ್ತು ಒಂದು ಹಿಡಿ ಗೋರಖ ಬಿಚ್ಚ ಕೂಡಿಸಿ ಅರೆದು ಅರ್ಧಕಿಲೋ ತುಪ್ಪದಲ್ಲಿ ಗೊಟ್ಟ ಹಾಕಬೇಕು.

ನಂಬಿಕೆಗಳನ್ನು ಸಾರಾಸಗಟಾಗಿ ಊಹಾತ್ಮಕ, ವಿಚಾರಹೀನ ಹಾಗೂ ಅವಾಸ್ತವವೆಂದು ಅಲ್ಲಗಳೆಯುವ ಹಾಗಿಲ್ಲ. ದೀರ್ಘಾಲೋಚನೆ ಅನುಭವಗಳ ಫಲವಾಗಿ ಅವುಗಳು ರೂಪ ಪಡೆದಿರುವಂತೂ ಸತ್ಯ ವ್ಯಕ್ತಿಗಳ ಹಾಗೂ ಸಮಾಜದ ಹಿತರಕ್ಷಣೆಗೆಂದು ಹಿರಿಯರು ನಿಗದಿಪಡಿಸಿದ ಶೀಲ, ನಿಯಮಗಳನ್ನಾಧರಿಸಿ ಹುಟ್ಟಿದ ನಂಬಿಕೆಗಳು ವಿಚಾರಹೀನವಾದವುಗಳೆಂದು ತಿರಸ್ಕರಿಸುವುದು ಸರಿಯೆಲ್ಲವೆಂದೆನಿಸುತ್ತದೆ. ವಿಶಾಲವಾದ ನಂಬಿಕೆ ಎಂದರೆ ಜ್ಞಾನವೆ ಎಂದು ಗೊತ್ತಾಗುತ್ತದೆ.

೭.೨.೪. ವಿಧಿ–ನೀಷೇಧಗಳು

ವಿಧಿ ನಿಷೇಧಗಳು

ಭಯ ಮತ್ತು ಭಾವನಾ ಮೂಲವಾದ ಒಂದು ನಂಬಿಕೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಅಥವಾ ಬಲಗೊಳಿಸುವಂತಹುದು ನಿಷೇಧ. ಇದನ್ನು ಮಾಡಬಾರದು, ಇದು ಕೆಡುಕು ಎನ್ನುವ ಸಾಮಾಜಿಕ, ಧಾರ್ಮಿಕ ಪ್ರತಿಬಂಧಕವೇ ನಿಷಿದ್ಧ ಎನ್ನಲಾಗುಗುತ್ತದೆ. ಹೀಗಾಗಿ ಲಿಖಿತ ಕಾನೂನನ್ನು ಮೀರಿಸುವಂತಹ ಸಶಕ್ತ ನಿಬಂಧನೆಯಾಗಿ ನಿಷೇಧ ಕಾರ್ಯನಿರ್ವಹಿಸುತ್ತದೆ.

ಸಕಾರಾತ್ಮಕವಾದ ಆಚರಣೆಯನ್ನು ಮಂತ್ರ ವಿಧಿಗಳೆಂದು, ನಕಾರಾತ್ಮಕವಾದವುಗಳನ್ನು ನಿಷೇಧಗಳು ಎಂದು ಕರೆಯಲುಬುಹುದು. ಮಂತ್ರ ವಿಧಿಗಳು ಮಾಡಬಹುದಾದದ್ದನ್ನು ತಿಳಿಸಿದರೆ ನಿಷೇಧಗಳು ಮಾಡಬಾರದ್ದನ್ನು ಉಲ್ಲೇಖಿಸುತ್ತದೆ ತಪ್ಪು ಒಪ್ಪುಗಳ ಪ್ರಜ್ಞೆ ಎಂದು ಹೇಳಬಹುದಾದ ಆತ್ಮ ಸಾಕ್ಷಿಯ ಮೇಲೆ ನಿಷೇಧ ಬೆಳಕು ಚೆಲ್ಲುತ್ತದೆ. ಅದನ್ನು ನಿಷೇಧತಾ ಪ್ರಜ್ಞೆ ಎಂದೂ, ಸಹಜ ಅರ್ಥಕ್ಕೆ ಧಕ್ಕೆ ಒದಗಿದಾಗ ಅಪರಾಧ ಪ್ರಜ್ಞೆ ಎಂದು ಕರೆಸಿಕೊಳ್ಳುತ್ತದೆ. ಅಂದರೆ ನಿಷೇಧ ಆತ್ಮ ಸಾಕ್ಷಿಯಿಂದ ಹುಟ್ಟುವ ಆಜ್ಞೆ ಹೀಗಾಗಿ ನಿಷೇಧವನ್ನು ಮುರಿದಾಗ ಅಫರಾಧಿ ಪ್ರಜ್ಞೆ ತೀವ್ರವಾಗುತ್ತದೆ. ನಿಷೇಧದ ಹಿಂದೆ ಸಾಮಾಜಿಕ ನಿಯಮಗಳು ಉಲ್ಲಂಘನೆಯಾಗಿರುತ್ತದೆ. ಉಲ್ಲಂಘಿಸಲ್ಪಟ್ಟ, ನಿಷೇಧವೇ ಸೇಡನ್ನು ತಿರಿಸಿಕೊಳ್ಳುತ್ತದೆ ಎಂದೇ ತಿಳಿಯಲಾಗುತ್ತದೆ. ಹೀಗಾಗಿ ಇಂತಹ ನಿಷೇಧವನ್ನು ಉಲ್ಲಂಘಿಸಿದರೆ ತೀವ್ರ ಅಪಾಯ ಉಂಟಾಗುತ್ತದೆ ಎನ್ನಲಾಗುತ್ತದೆ.

ಕೊಟ್ಟಲಗಿ ಗ್ರಾಮದಲ್ಲಿರುವ ವಿಧಿ–ನಿಷೇಧಗಳು ಈ ರೀತಿಯಾಗಿವೆ.

೧) ಕೊಟ್ಟಲಗಿ ಗ್ರಾಮದ ಶ್ರೀ ಸಿದ್ದೇಶ್ವರ ಪೂಜಾರಿಗಳು ತಮ್ಮ ಮನೆಯಲ್ಲಿ ಸೀಮೆ ಎಣ್ಣೆ ಉರಿಯುವಂತಿಲ್ಲ

೨) ಸೀಮೆ ಎಣ್ಣೆ, ಪೆಟ್ರೋಲ, ಡಿಸೇಲು ಪೂಜಾರಿ ಓಣಿಯಲ್ಲಿ ತೆಗೆದುಕೊಂಡು ತಿರುಗಾಡಕೂಡದು.

೩) ಪೂಜಾರಿ ಓಣಿಯ ಸ್ತ್ರೀಯರ ಹೆರಿಗೆ ಪೂಜಾರಿ ಓಣಿಯನ್ನು ಬಿಟ್ಟು ಹೊರಗಡೆ ಮಾಡಿಸಬೇಕು.

೪) ೫ದಿನ ಹೆರಿಗೆಯಾದ ಮಹಿಳೆ ಪೂಜಾರಿ ಓಣಿಯಲ್ಲಿ ಬರುವಂತಿಲ್ಲ.

೫) ಶ್ರೀ ಸಿದ್ದೇಶ್ವರ ಪೂಜಾರಿಗಳ ಮನೆಯಲ್ಲಿ ಕಟ್ಟಿಗೆ ತೊಟ್ಟಿಲು ಕಟ್ಟುವಂತಿಲ್ಲ.

೬) ಬೀಸುವ ಕಲ್ಲನ್ನು, ಒರಳನ್ನು ಒದೆಯಬಾರದು.

೭) ಕೊಟ್ಟಲಗಿಯಲ್ಲಿ ಶ್ರೀ ಸಿದ್ದೇಶ್ವರ ದೇವರಿಗೆ ಪೂಜೆಯನ್ನು ಕೊಟ್ಟರೆ ಊರಿಂದ ಆಚೆ ಹೋಗುವಂತಿಲ್ಲ. ಒಂದು ವೇಳೆ ಹೋಗುವುದಾದರೆ ದೇವರಿಗೆ ತುಪ್ಪ ಹಾಕಿ ಹೋಗಬೇಕು.

೮) ಎಮ್ಮೆ, ಆಕಳು, ಹಾಲು ಕರೆಯುತ್ತಿದ್ದರೆ ಸಿದ್ದೇಶ್ವರನಿಗೆ ಮೀಸಲು ತುಪ್ಪಕೊಡದೇ ಹಾಲು ಉಪಯೋಗಿಸುವಂತಿಲ್ಲ.

೯) ಕೂದಲು ಮತ್ತು ಉಗುರುಗಳನ್ನು ಸಿಕ್ಕಲ್ಲಿ ಬೀಸಾಕಬಾರದು.

೧೦) ಮಲಗಿರುವ ಮಕ್ಕಳಿಗೆ ಅಲಂಕಾರ ಮಾಡಬಾರದು.

೧೧) ಸತ್ತವರಿಗೆ ನೀಡಿದ ಮೂರುಕೂಳನ್ನು ಕಾಗೆ ಮುಟ್ಟದಿದ್ದರೆ ಅವರಿಗೆ ಮುಕ್ತಿ ಇಲ್ಲ.

೧೨) ಬಸುರಿಯವರ ಆಸೆಯನ್ನು ಪೂರೈಸಬೇಕು. ಇಲ್ಲದಿದ್ದರೆ ಮಗುವಿಗೆ ಕಿವಿ ಸೋರುತ್ತದೆ.

೧೩) ಮೊದಲು ಬಿದ್ದ ಹಲ್ಲನ್ನು ಸೆಗಣಿಯಲ್ಲಿಟ್ಟು ಗರ್ಭಿಣಿಯರ ಮಾಳಿಗೆ ಮೇಲೆ ಎಸೆಯುವುದು.

೧೪) ಬಂಜೆಯರು ಮಕ್ಕಳನ್ನು ಮುಟ್ಟಬಾರದು
೧೫) ತೊಲೆಯ ಕೆಳಗೆ ಮಲಗಬಾರದು.
೧೬) ಹೊಸ್ತಿಲ ಮೇಲೆ ಕುಳಿತುಕೊಳ್ಳುವದು, ಸೀನುವದು, ಮತ್ತು ನಿಲ್ಲಬಾರದು.
೧೭) ರಾತ್ರಿ ತಲೆ ಬಾಚಿಕೊಳ್ಳುವುದು ಸರಿಯಲ್ಲ.
೧೮) ರಾತ್ರಿ ವೇಳೆ ಕನ್ನಡಿಯಲ್ಲಿ ಮುಖ ನೋಡಬಾರದು.
೧೯) ದೀಪ ಹಚ್ಚಿದ ಮೇಲೆ ಮನೆಯಿಂದ ಏನನ್ನು ಕೊಡಬಾರದು.
೨೦) ಬೆಕ್ಕು ಅಡ್ಡಿ ಬಂದರೆ ಪ್ರಯಾಣ ನಿಷೇಧ.
೨೧) ಪರರ ಮನೆಯ ಬೆಕ್ಕು ತಾನಾಗಿಯೇ ಮನೆಗೆ ಬಂದರೆ ಶುಭ.
೨೨) ಕಾಗೆ ಮನೆ ಮೇಲೆ ಕುಳಿತು ಕೂಗಿದರೆ ನೆಂಟರು ಬರುತ್ತಾರೆ.
೨೩) ಗೂಬೆಯ ಶಬ್ದ ಕೇಳಿದರೆ ಅಶುಭ
೨೪) ಹಾವುಗಳ ಸಂಭೋಗ ಕ್ರೀಯೆ ನೋಡಿದರೆ ಅಶುಭ.
೨೫) ಬೆಳಗಿನ ಸಮಯದಲ್ಲಿ ನರಿಯನ್ನು ನೋಡಿದರೆ ಶುಭ.
೨೬) ಸ್ತ್ರೀಯರನ್ನು ಭೇಟಿಯಾಗಬಾರದು.
೨೭) ನೊಗ ಮುರಿದ ಎತ್ತುಗಳನ್ನು ಮನೆಯಲ್ಲಿ ಇಟ್ಟುಕೊಳ್ಳಬಾರದು.
೨೮) ಹೊಲದಲ್ಲಿ ಗೆಳೆಯರನ್ನು, ದಕ್ಷಿಣ ಮತ್ತು ಪಶ್ಚಿಮಕ್ಕೆ ನಿಲ್ಲಿಸುವುದಿಲ್ಲ.
೨೯) ಋತುಮತಿಯಾದ ಹುಡುಗಿ ಹೊರಗಡೆ ಎದುರುಗೆ ಇರುವಂತಿಲ್ಲ.
೩೦) ಮಗಳಿಗೆ ಹೆರಿಗೆ ನೋವು ಬಂದಾಗ ತಾಯಿ ಎದುರಿಗೆ ಇರುವಂತಿಲ್ಲ. ಮನೆಯಿಂದ ಹೊರಗೆ ಇರುಬೇಕು.
೩೧) ಹೆರಿಗೆಯಾದ ಕೂಡಲೇ ಮಗುವಿನ ತಂದೆ ಮಗುವಿನ ಮುಖ ನೇರವಾಗಿ ನೋಡುವಂತಿಲ್ಲ.
೩೨) ಗರ್ಭಿಣಿಯಾಗಿದ್ದಾಗ ಬಾಳೆಹಣ್ಣು, ಪಪ್ಪಾಯಿ ಹಣ್ಣು ತಿನ್ನುವಂತಿಲ್ಲ. ಹಾಗೆಯೇ ಎಳ್ಳಿನ ಪದಾರ್ಥಗಳನ್ನು ತಿನ್ನುವಂತಿಲ್ಲ.
೩೩) ಋತುಮತಿಯಾದ ಹುಡುಗಿ ಬಾಣಂತಿ ಮಲಗುವಾಗ ತಲೆದಿಂಬಿನ ಕೆಳಗೆ ಕುಡುಗೋಲು, ನಿಂಬೆಹಣ್ಣು, ಕಸಬರಿಗೆ ಇಟ್ಟುಕೊಂಡು ಮಲಗಬೇಕು.
೩೪) ಋತುಮತಿಯಾದ ಹುಡುಗಿಯನ್ನು ಪ್ರತ್ಯೇಕವಿಡುತ್ತಾರೆ.
೩೫) ಮಕ್ಕಳಿಗೆ ಬಂಜೆಹೆಣ್ಣಿನ ಎದುರಿಗೆ ಹಾಸುವಂತಿಲ್ಲ.
೩೬) ಮನೆದೇವರಲ್ಲಿ ಮಗುವಿಗೆ ಜವಳ ತೆಗೆಯುವ ತನಕ ಕ್ಷೌರವನ್ನು ಮಾಡಿಸುವಂತಿಲ್ಲ.
೩೭) ಮಗುವಿಗೆ ೫ ತಿಂಗಳಾಗುವ ತನಕ ಬಾಚಣಿಕೆಯನ್ನು ತಲೆಗೆ ಇಡುವಂತಿಲ್ಲ.
೩೮) ದೇವರಲ್ಲಿ ಹೂ ಕೇಳಿದಾಗ ಬಲಗಡೆಯಿಂದ ಕೊಟ್ಟರೆ ಕೆಲಸವಾಗುತ್ತದೆ.
೩೯) ದೆವ್ವವು ಹೂವನ್ನು ಪ್ರಸಾದವಾಗಿ ಎಡಗಡೆ ಭಾಗದಿಂದ ನೀಡಿದರೆ ಅಶುಭ.
೪೦) ಶುಕ್ರವಾರ ಮನೆಯ ಸೊಸೆ ತವರು ಮನೆಗೆ ಹೋಗುವಂತಿಲ್ಲ. ಮಂಗಳವಾರ ಮಗಳು ಗಂಡನ ಮನೆಗೆ ಹೋಗುವಂತಿಲ್ಲ.
೪೧) ರಾತ್ರಿ ಹೊತ್ತು ಮಹಿಳೆ ಗುಡಿಸಿ ಕಸವನ್ನು ಹೊರಹಾಕುವಂತಿಲ್ಲ.
೪೨) ಮನೆಯ ಮುಂದೆ ಅಥವಾ ಮಾಳಿಗೆಯ ಮೇಲೆ ಕಾಗೆ ಕೂಗಿದರೆ ನೆಂಟರು ಬರುತ್ತಾರೆ. ಕಸಬರಿಗೆ ಒದೆಯಬಾರದು.
೪೩) ಮಾತಾಡುವಾಗ ಹಲ್ಲಿ ಲೊಚಗೊಟ್ಟರೆ ಕೆಲಸ ಸಿದ್ಧಿ.

೪೪) ಎಲ್ಲಿಗಾದರೂ ಹೊರಟಾಗ ಕತ್ತೆ ಅರಚಿದರೆ ಶುಭ.
೪೫) ಬಳುವು ಹೊಕ್ಕ ಮನೆಯಲ್ಲಿ ಇರುವಂತಿಲ್ಲ.
೪೬) ಪರಿಚಕ ವ್ಯಕ್ತಿ ಸತ್ತರೆ ಮನೆಯಲ್ಲಿ ಇರುವಂತಿಲ್ಲ.
೪೭) ಬೆಕ್ಕುಮುಖವನ್ನು ತೊಳೆದರೆ ಶುಭವಾಗುವುದು.
೪೮) ಬಿತ್ತುವಾಗ ಎತ್ತ ಬಲಕ್ಕೆ ಮಲಗಿದರೆ ಬೆಳೆ ಸಮೃದ್ಧಿ.
೪೯) ಮುತ್ತೈದೆಯರು ಬಿತ್ತನೆಯ ಕೆಲಸದಲ್ಲಿ ಭಾಗಿಯಾಗಬೇಕು.
೫೦) ಮನೆ ದೇವರ ದರುಶನ ಪಡೆಯುವುದು.
೫೧) ಅಮವಾಸ್ಯೆಯ ದಿನ ಗಂಡು ಹುಟ್ಟಿದರೆ ಚಿಂತೆಗಿಡಾಗುವುದು.
೫೨) ಹುಣ್ಣಿಮೆಯ ದಿನ ಹೆಣ್ಣು ಹುಟ್ಟಿದರೆ ಚಿಂತೆ ಆವರಿಸುವುದು.
೫೩) ಹೂವಿನ ಬುಟ್ಟಿ ಎದುರಾದರೆ ಕೆಲಸ ಸುಲಭವಾಗುತ್ತದೆ.
೫೪) ದೇವಸ್ಥಾನಗಳಿಗೆ ಪಾದರಕ್ಷೆಗಳನ್ನು ಹಾಕಿಕೊಂಡು ಹೋಗಬಾರದು.
೫೫) ದೇವಿಯನ್ನು ನೆನೆಸಿಕೊಂಡರೆ ದುಷ್ಟಶಕ್ತಿಗಳು ನಮ್ಮ ಬಳಿ ಸುಳಿಯುವುದಿಲ್ಲ.
೫೬) ಬನ್ನಿಯ ಕಟ್ಟಿಗೆಯನ್ನು ಮನೆಯಲ್ಲಿ ಉರಿಸಿದರೆ ಕಷ್ಟಗಳು ಬರುತ್ತವೆ.
೫೭) ಕಟ್ಟೆಯ ಮೇಲೆ ಕುಳಿತು ಕಾಲು ತೂಗಬಾರದು.
೫೮) ಸತ್ತಿರುವ ವ್ಯಕ್ತಿಯ ಉಡುದಾರ ತೆಗೆಯುವುದು.
೫೯) ತೊನ್ನು ರೋಗ ಇರುವ ವ್ಯಕ್ತಿಯನ್ನು ದಹನ ಮಾಡುವುದು ರೂಢಿ.
೬೦) ಬಾಣಂತಿ ಸತ್ತರೆ ಶವವನ್ನು ಸುಡಬೇಕು.
೬೧) ಸ್ಥಿರ ಮುತ್ತೈದೆಯರು ಸತ್ತರೆ ಶವವನ್ನು ಸುಡಬೇಕು.
೬೨) ಶವಸಂಸ್ಕಾರಕ್ಕೆ ಹೋದವರು ಮರಳಿ ನೇರವಾಗಿ ಮನೆಗೆ ಬಂದು ಸ್ನಾನ ಮಾಡಬೇಕು.
೬೩) ಮೃತ ದೇಹವನ್ನು ಬಹಳ ಹೊತ್ತಿನ ತನಕ ಇಡುವಂತಿಲ್ಲ.
೬೪) ಸಾವು ಸಂಭವಿಸಿದ ಮನೆಗೆ ಸೂತಕ ಆವರಿಸಿರುತ್ತದೆ.
೬೫) ಹೊಸ್ತಿಲ ಮೇಲೆ ಸೀತರೆ ಹೊಸಿಲಕ್ಕೆ ನೀರು ಸಿಂಪಡಿಸಬೇಕು.
೬೬) ಮನೆಯಲ್ಲಿ ಮಹಿಳೆ ನೆಲಕ್ಕೆ ಕಾಲು ಸವರಿಕೊಂಡು ಓಡಾಡಬಾರದು.
೬೭) ಮುಟ್ಟಾದವರು ಕೊನೆಯ ನೀರು ಮುಗಿಯುವವರೆಗೂ ಪೂಜೆ ದೇವತಾ ಕಾರ್ಯಗಳಲ್ಲಿ ಭಾಗವಹಿಸಬಾರದು.
೬೮) ಗರ್ಭಿಣಿ ಸ್ತ್ರೀ ಕಾಲು ಚಾಚಿ ಕುಳಿತಿರಬೇಕು. ಮಡಚಿ ಕುಳಿತುಕೊಳ್ಳುವಂತಿಲ್ಲ.
೬೯) ಆಕಳು ಎತ್ತುಗಳನ್ನು ಹೊಡೆಯಬಾರದು.
೭೦) ಸೋಮವಾರ ದಿವಸ ಎತ್ತುಗಳನ್ನು ಕೃಷಿ ಕಾರ್ಯಕ್ಕೆ ಬಳಸಬಾರದು.
೭೧) ಸ್ತ್ರೀಯರು ಹಣೆಯ ಮೇಲೆ ದುಂಡಾಗಿ ಕುಂಕುಮವನ್ನು ಹಚ್ಚಬೇಕು.
೭೨) ಮನೆಯ ಶುಭ ಕಾರ್ಯಗಳಲ್ಲಿ ಕರಿಕಂಬಳಿಯನ್ನು ಹಾಸಬೇಕು.
೭೩) ಪ್ರತಿ ಶುಕ್ರವಾರ ದಿನ ಬಣಜಿಗ ಜನಾಂಗದವರು ಯಾವುದೇ ವ್ಯಾಪಾರ ಮಾಡಿದರೂ ಕೈಯಿಂದ ದುಡ್ಡು ಕೊಡುವುದಿಲ್ಲ. ಪ್ರತಿಯಾಗಿ ವಸ್ತು ವಿನಿಮಯ ಮಾಡುತ್ತಾರೆ.

೭.೨.೫. ಹರಕೆಗಳು

೧) ಗ್ರಾಮದ ಎಲ್ಲಮ್ಮ ದೇವಿಗೆ ಉಡಿತುಂಬುವ ಹರಕೆ ಹೊರುತ್ತಾರೆ.

೨) ಗ್ರಾಮದ ಎಲ್ಲಮ್ಮ ದೇವಿಗೆ ಭಾಗಿಣ ಅರ್ಪಿಸುವುದು.
೩) ಗ್ರಾಮದ ಎಲ್ಲಮ್ಮ ದೇವಸ್ಥಾನದಲ್ಲಿರುವ ಡಂಗಿದೇವರಿಗೆ ಪೂಜೆ.
೪) ಹುರುಕು ಖಜ್ಜಿ ಆದಾಗ ದೇವಿಯ ದರ್ಶನಕ್ಕೆ ಮಂಗಳವಾರ ಮತ್ತು ಶುಕ್ರವಾರ ಬರುವುದು.
೫) ದೇವಿಗೆ ನೈವೇದ್ಯ ತಂದು ಪೂಜಾರಿಗಳಿಗೆ ಊಟಮಾಡಿಸುವುದು.
೬) ಮಂಗಳವಾರ ಮತ್ತು ಶುಕ್ರವಾರ ದೇವಿಯ ಹೆಸರಿನಲ್ಲಿ ಉಪವಾಸ ಮಾಡುವುದು.
೭) ಗ್ರಾಮದ ಎಲ್ಲಮ್ಮ ದೇವಿಗೆ ದೀಡ ನಮಸ್ಕಾರ ಹಾಕುವುದು.
೮) ಗ್ರಾಮದ ಎಲ್ಲಮ್ಮ ದೇವಿಗೆ ಹುಟಗಿ ಉಡುವುದು.
೯) ಗ್ರಾಮದ ಕುರುಬ ಸಮುದಾಯದವರು ವಿಠ್ಠಲ ದೇವರ ಪಲ್ಲಕ್ಕಿಯನ್ನು ಮನೆಗೆ ಒಯ್ಯುವುದು, ಹಬ್ಬ ಹಾಕುವ ಹರಕೆ ಹೊರುತ್ತಾರೆ.
೧೦) ಕುರುಬ ಸಮುದಾಯದ ಜನರು ಪಲ್ಲಕ್ಕಿ ಮನೆಗೆ ಒಯ್ದಾಗ ಎಲ್ಲ ಜನರಿಗೆ ಕರಿಗಡಬು ಹಾಗೂ ಬಾಳೆಹಣ್ಣಿನ ಸೀಕರಣಿ ಊಟ ಹಾಕಿ ಹರಕೆ ತೀರಿಸುತ್ತಾರೆ.
೧೧) ರವಿವಾರ ವಿಠ್ಠಲ ದೇವರ ವಾರವೆಂದು ನಂಬಿದ್ದು, ಉಪವಾಸ ಮಾಡುತ್ತಾರೆ. ಸಿದ್ದೇಶ್ವರ ದೇವರಿಗೆ ಬೇಡಿಕೊಂಡು ಮಕ್ಕಳನ್ನು ಹೆತ್ತಿದ್ದರೆ ದೇವಸ್ಥಾನದ ಮೇಲಿಂದ ಕೆಳಗೆ ಹಾರಿಸಿ ಹರಕೆ ತೀರಿಸುತ್ತಾರೆ.
೧೨) ಮಕ್ಕಳ ಜಡೆ ಅರ್ಪಿಸುವುದಾಗಿ ಸಿದ್ದೇಶ್ವರನಿಗೆ ಹರಕೆ ಹೊರುತ್ತಾರೆ.
೧೩) ಸಿದ್ದೇಶ್ವರನಿಗೆ ಭಕ್ತರು ಪೂಜೆ ಗಟ್ಟಿಸುವುದಾಗಿ ಹರಕೆ ಹೊರುತ್ತಾರೆ.
೧೪) ಸಂಕಟ ಪರಿಹಾರಕ್ಕಾಗಿ ಸಿದ್ದೇಶ್ವರ ದೇವರಿಗೆ ತುಪ್ಪ ಹಾಕುವುದಾಗಿ ಬೇಡಿಕೊಳ್ಳುತ್ತಾರೆ.
೧೫) ಕೊರವ ಸಮುದಾಯದವರು ಜಮಖಂಡಿ ತಾಲೂಕು ಕಲ್ಲೋಳಿ ಹಣಮಂತ ದೇವರಿಗೆ ಮದುವೆಯಾದ ವಧುವರರು ಹೋಗಿ ದರ್ಶನ ಮಾಡಿಕೊಂಡು ಹೋಳಿಗೆ ಮಾಡಿಸಿ ಬುಟ್ಟಿ ತುಂಬಿಸಿ ಬರುತ್ತಾರೆ. ಇದಕ್ಕೆ 'ಗೋಪಾಳಬುಟ್ಟಿ ಹರಕೆ' ಎಂದು ಕರೆಯುತ್ತಾರೆ.
೧೬) ಸಿದ್ದೇಶ್ವರ ದೇವರಿಗೆ ಬಂಗಾರ, ಬನಾತ, ಗಂಟೆ ಬಾಂಡಿ ಸಾಮಾನುಗಳು ಮುಂತಾದ ವಸ್ತುಗಳನ್ನು ಹರಕೆ ರೂಪದಲ್ಲಿ ನೀಡುತ್ತಾರೆ.
೧೭) ದೇವರಿಗೆ ದೀಡ ನಮಸ್ಕಾರ ಹಾಗೂ ಸೋಮವಾರ ಹರಪೂಜೆಗೆ ಬರುವುದು, ಸೋಮವಾರ ಉಪವಾಸವಿರುವುದಾಗಿ ಸಿದ್ದೇಶ್ವರನಿಗೆ ಹರಕೆ ಹೊರುತ್ತಾರೆ.

ಅಡಿಟಿಪ್ಪಣಿಗಳು

೧) ಸಾವು ಒಂದು ಚಿಂತನೆ ಡಾ॥ ಬಿ.ಎಂ.ಪುಟ್ಟಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ ವರ್ಷ – ೨೦೦೧, ಪುಟ – ೧೫.
೨) ಹುಸೇನಿ ಅಬ್ದುಲ್ ಸನದಿ, ಜಾತಿ: ಮುಸ್ಲಿಂ ಶೇಖ, ವಯಸ್ಸು: ೭೨ ವರ್ಷ, ಉದ್ಯೋಗ : ಒಕ್ಕಲುತನ, ಸಾ: ಕೊಟ್ಟಲಗಿ
೩) ಭೀಮಸಿಂಗ ಹಣಮಂತಸಿಂಗ ರಜಪೂತ, ವಯಸ್ಸು–೬೪ ಜಾತಿ–ರಜಪೂತ ಉದ್ಯೋಗ–ಒಕ್ಕಲುತನ ಊರು–ಕೊಟ್ಟಲಗಿ.
೪) ಶ್ರೀ ಈಶ್ವರಾನಂದ ಸ್ವಾಮಿಗಳು, ಶಿವತ್ರಯ ಸಿದ್ಧಾಶ್ರಮ, ಕೊಟ್ಟಲಗಿ.

ಅಧ್ಯಾಯ–೮

ಭಾಷೆ ಮತ್ತು ಸಾಹಿತ್ಯ

ಅಧ್ಯಾಯ ೮

ಭಾಷೆ ಮತ್ತು ಸಾಹಿತ್ಯ.

೮.೧. ಭಾಷೆ

ಭಾಷೆ ಎಂದರೇನು? ಎಂಬ ಪ್ರಶ್ನೆಗೆ ಸೂಕ್ತವಾದ ಉತ್ತರ ಹೇಳಲು ಅನೇಕ ವಿದ್ವಾಂಸರು ನಾನಾ ಬಗೆಯಲ್ಲಿ ಪ್ರಯತ್ನ ಪಟ್ಟಿದ್ದಾರೆ. ಆದರೂ ಕೂಡ ಭಾಷೆಯ ನಿಜ ಸ್ವರೂಪವನ್ನು ವೈಜ್ಞಾನಿಕವಾಗಿ ಸೂತ್ರ ರೂಪದಲ್ಲಿ ಹಿಡಿದುಕೊಟ್ಟಿರುವ ವ್ಯಾಖ್ಯೆಗಳು ಸಿಕ್ಕುವುದು ಬಹಳ ಕಷ್ಟ.[೧] ಇದರಿಂದ ಅತ್ಯಂತ ಪರಿಚಿತವಾದಂತಹ ವಿಷಯಗಳ ಸ್ವರೂಪವನ್ನು ಸೂತ್ರರೂಪದಲ್ಲಿ ಹೇಳುವುದು ಕೆಲವು ವೇಳೆ ಕಷ್ಟವಾಗುವುದು.

ಭಾಷೆಯ ವ್ಯಾಖ್ಯೆಯನ್ನು ಕುರಿತು ಹೇಳುವ ಪ್ರಯತ್ನಗಳು ಬಹು ಹಿಂದಿನ ಕಾಲದಿಂದಲೇ ನಡೆದು ಬಂದಿವೆ. ಮೊಟ್ಟಮೊದಲು ಭಾಷೆಯನ್ನು ಕುರಿತು ಪ್ಲೇಟೋ ಮಹಾಶಯನು 'ಧ್ವನಿ ಸಂಕೇತಗಳಿಂದ ಮನುಷ್ಯನ ವಿಚಾರಗಳನ್ನು ಅಭಿವ್ಯಕ್ತಗೊಳಿಸುವ ಸಾಧನ[೨] ಎಂದು ಅಭಿಪ್ರಾಯಪಟ್ಟನು. ಅಂತೆಯೇ 'ಪದಗಳ ಮೂಲಕ ವಿಚಾರಗಳನ್ನು ಅಭಿವ್ಯಕ್ತಿಗೊಳಿಸುವುದೇ ಭಾಷೆ' ಎಂದು ಹೆನ್ರಿ ಸ್ವೀಟ್ ಹೇಳಿದ್ದಾರೆ. ವಿದ್ವಾಂಸರ ಅಭಿಪ್ರಾಯದಲ್ಲಿ ಭಾಷೆ; ಎಂದರೆ ಒಂದು ಸಮಾಜದ ಜನರು ಆಡುವ ಮಾತು ಅಷ್ಟೆ.

ಭಾಷೆಯು ನಿಂತ ನೀರಲ್ಲ. ಸದಾ ಹರಿಯುತ್ತಿರುವ ಜೀವನದಿ. ಕಾಲದಿಂದ ಕಾಲಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ, ಸ್ಥಳದಿಂದ ಸ್ಥಳಕ್ಕೆ ಭಾಷೆ ಬದಲಾಗುತ್ತದೆ. ಈ ಪರಿವರ್ತನಾಶೀಲತೆ ಭಾಷೆಯ ಬೆಳವಣಿಗೆಗೆ ಬಹಳ ಮುಖ್ಯವಾದುದು. ಈ ಗುಣವು ಇಲ್ಲದಿದ್ದರೆ ಜಗತ್ತಿನಲ್ಲಿ ಇಂದು ನಾಲ್ಕು ಸಾವಿರಕ್ಕೂ ಹೆಚ್ಚು ಭಾಷೆಗಳು; ಹತ್ತು ಸಾವಿರಕ್ಕೂ ಹೆಚ್ಚು ಉಪಭಾಷೆಗಳು ಕಾಣಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ.[೩]

ಜಗತ್ತಿನಲ್ಲಿರುವ ಪ್ರತಿಯೊಂದು ಭಾಷೆಗೂ ಒಂದು ಇತಿಹಾಸವಿದೆ. ಭಾಷೆಯ ಉಗಮ ಮತ್ತು ವಿಕಾಸಗಳನ್ನು ಪ್ರಯತ್ನದಿಂದ ತಿಳಿಯಲು ಸಾಧ್ಯವಿದೆ. ಪ್ರತಿ ಭಾಷೆಗೂ ಇತಿಹಾಸವಿರುವುದು ಖಚಿತವಾದರೂ ಕೆಲವು ಸಾರಿ ಅದನ್ನು ಕಾಲಾನುಸಾರವಾಗಿ ನಿರ್ಧರಿಸಿ ಹೇಳುವುದು ಬಹಳ ಕಷ್ಟವಾದ ಸಂಗತಿ. ಬರಹವಿಲ್ಲದ ಭಾಷೆಗಳೂ ಅನೇಕ ಕಂಡುಬರುತ್ತವೆ. ಇಂತಹ ಭಾಷೆಗಳ ವಿಷಯದಲ್ಲಿ; ಸಾಮಗ್ರಿಗಳ ಅಭಾವದಿಂದ ಇತಿಹಾಸದ ಸ್ಪಷ್ಟವಾದ ತಿಳುವಳಿಕೆ ಪಡೆಯಲು ಕಷ್ಟಸಾಧ್ಯವಾಗುತ್ತದೆ. ಲಿಪಿಯಿರುವ ಭಾಷೆಗಳಾದರೆ ಬರಹದ ದಾಖಲೆಗಳು, ಶಾಸನಗಳು,

ಸಾಹಿತ್ಯ ಕೃತಿಗಳು ಹಾಗೂ ಮತ್ತಿತರ ವಿವರಗಳು ದೊರೆತು ಆ ಭಾಷೆಯ ಇತಿಹಾಸ ನಿರ್ಣಯಕ್ಕೆ ಸಹಾಯವಾಗುತ್ತದೆ.

ಪ್ರತಿಯೊಂದು ಭಾಷೆಗೂ ತನ್ನದೇ ಆದ ಭೌಗೋಳಿಕ ಕ್ಷೇತ್ರ ನಿಶ್ಚಿತವಾಗಿರುತ್ತದೆ. ಈ ಕ್ಷೇತ್ರವು ಮುಖ್ಯವಾಗಿ ಆ ಭಾಷೆಯನ್ನು ಆಡುವ ಜನರನ್ನು ಅವಲಂಬಿಸಿ ನಿರ್ಧಾರವಾಗುತ್ತದೆಂಬುದನ್ನು ನಾವು ಮರೆಯುವಂತಿಲ್ಲ. ಭಾಷೆಯನ್ನು ಆಡುವವರ ಸಂಖ್ಯೆಯ ಮೇಲೆ ಭಾಷಾ ಕ್ಷೇತ್ರದ ಪರಿಣಾಮವೂ ಆಧಾರಗೊಂಡಿರುತ್ತದೆಂದು ಹೇಳಬಹುದು. ಕೆಲವು ವೇಳೆ ಒಂದು ಭಾಷಾ ಕ್ಷೇತ್ರದಲ್ಲಿ ಬೇರೆ ಬೇರೆ ಬಾಷೆಗಳನ್ನು ಆಡುವವರು ಇರಬಹುದು. ಉದಾಹರಣೆಗೆ ಕನ್ನಡ, ಕೊಂಕಣಿ, ಬಡಗ, ಕೊಡಗು, ತುಳು, ಹವ್ಯಕ, ಸೋಲಿಗ, ಕುರುಲ ಇತ್ಯಾದಿ ಭಾಷೆಗಳನ್ನು ಹಾಗೂ ಇತರ ಉಪ ಭಾಷೆಗಳನ್ನು ಆಡುವವರಿದ್ದಾರೆ. ಆದರೆ ಕರ್ನಾಟಕದಲ್ಲಿನ ಹೆಚ್ಚು ಜನರ ಭಾಷೆಯು ಕನ್ನಡವಾದುದರಿಂದ, ಕರ್ನಾಟಕ ಕನ್ನಡ ಭಾಷೆಯ ನಿಶ್ಚಿತವಾದ ಕ್ಷೇತ್ರವೆಂದು ಹೇಳಬಹುದು. ಬೇರೆ ಭಾಷೆಯ ಜನರೂ; ಕನ್ನಡವನ್ನು ತಮ್ಮ ವ್ಯವಹಾರಿಕ ಭಾಷೆಯನ್ನಾಗಿ ಬಳಸುತ್ತಾರೆಂಬುದನ್ನು ನಾವಿಲ್ಲಿ ಗಮನಿಸಬೇಕಾದ ವಿಚಾರ.

ಹೀಗಾಗಿ ನಿರ್ದಿಷ್ಟ ಕ್ಷೇತ್ರವಾದ ಕೊಟ್ಟಲಗಿ ಸಾಂಸ್ಕೃತಿಕ ಅಧ್ಯಯನ ಕೈಗೊಂಡ ಈ ಸಂದರ್ಭದಲ್ಲಿ ಕೊಟ್ಟಲಗಿಯ ಪ್ರಾದೇಶಿಕ ಭಾಷಾ ವ್ಯವಸ್ಥೆಯನ್ನು ಪರಿಶೀಲಿಸುವುದು ಅತ್ಯವಶ್ಯವಾಗಿದೆ. ಭಾಷಾ ಉಚ್ಚಾರಣೆಗೆ , ಆಡುನುಡಿಗೆ ಭೌಗೋಳಿಕ ಹಿನ್ನಲೆಯೂ ಕಾರಣವಾಗುತ್ತದೆ. ಉದಾಹರಣೆಗೆ ಕನ್ನಡವನ್ನೇ ತೆಗೆದುಕೊಂಡರೆ, ಹಳೆಯ ಮೈಸೂರಿನ ಕನ್ನಡ, ಧಾರವಾಡ ಕನ್ನಡ, ಮಂಗಳೂರಿನ ಕನ್ನಡ, ಹಿಂದಿನ ಹೈದ್ರಾಬಾದ ಸಂಸ್ಥಾನ ಭಾಗದ ಕನ್ನಡ ಎಂದು ಮುಖ್ಯವಾಗಿ ವಿಭಾಗಿಸುವ ರೂಢಿಯಿದೆ. ಈ ಪ್ರದೇಶಗಳ ಕನ್ನಡ ಭಾಷೆ ಒಂದೇ ಆದರೂ ಅದರಲ್ಲಿ ಸೇರಿಕೊಂಡ ಬೇರೆ ಬೇರೆ ಭಾಷೆಗಳ ಪದಗಳು, ಉಚ್ಚರಿಸುವ ರೀತಿ, ಮಾತನಾಡುವ ಪದ್ಧತಿ ಅನೇಕ ವಿಧವಾಗಿದೆ.

ಉತ್ತರ ಕರ್ನಾಟಕದ ಕನ್ನಡವನ್ನು "ಧಾರವಾಡ ಕನ್ನಡ" ಎಂಬ ಗುಂಪಿಗೆ ಸೇರಿಸಿದರೂ ಇಲ್ಲಿ ಕೂಡ ನೂರಾರು ಬಗೆಯಲ್ಲಿ ಮಾತನಾಡುತ್ತಾರೆ. ಊರು ಊರಿಗೂ ಭಾಷೆ ಪರಿವರ್ತನೆಯಾಗುವುದನ್ನು ಕಾಣುತ್ತೇವೆ. ವಿವಿಧ ಮತ ಧರ್ಮದವರು ಒಂದೇ ಊರಿನಲ್ಲಿದ್ದರೂ ಅವರವರ ಭಾಷೆಗಳಲ್ಲಿ ಭಿನ್ನತೆಯಿದೆ. ಹೀಗಾಗಿ ಒಂದು ಜಿಲ್ಲೆಯ ವಿವಿಧ ಭಾಗಗಳಲ್ಲಿ ಆಡುನುಡಿಯ ಅನೇಕ ರೂಪಗಳನ್ನು ಕಾಣಬಹುದು. ಭಾಷೆ ಯಾವಾಗಲೂ ವ್ಯತ್ಯಾಸಗೊಳ್ಳುತ್ತಲೇ ಇರುತ್ತದೆ. ಅದು ನಿಂತ ನೀರಲ್ಲ; ಸದಾಕಾಲ ಹರಿಯುವ ಪ್ರವಾಹ. ಇದು ತನ್ನ ಪಾತ್ರಗಳನ್ನು ಬದಲಿಸುತ್ತ ಇರುತ್ತದೆ.

ನಮ್ಮ ಅನುಭವಗಳು, ಸಂಸ್ಕಾರಗಳು, ಸಂಪರ್ಕಗಳು ಬೇರೆ ಬೇರೆಯಾದಂತೆ ನಮ್ಮ ಆಡು ನುಡಿ ಬೇರೆಯಾಗುತ್ತ ಹೋಗುತ್ತದೆ. ನಮ್ಮ ರಾಜ್ಯದ ಗಡಿ ಭಾಷೆಗಳಾದ ತೆಲುಗು, ತಮಿಳು, ಮಲೆಯಾಳಂ, ಮರಾಠಿ ಇವು ಕೂಡ ಆ ಸೀಮೆಯ ಜನರ ಕನ್ನಡ ನುಡಿಯಲ್ಲಿ ತಮ್ಮ ತಮ್ಮ ಪ್ರಭಾವವನ್ನು ಬೀರಿವೆ.

ಪ್ರಸ್ತುತ ಅಥಣಿ ತಾಲೂಕಿನ ಕೊಟ್ಟಲಗಿ"ಗ್ರಾಮದ ಕನ್ನಡ ಆಡು ನುಡಿಯ"ಬಗೆಗೆ ತಿಳಿದುಕೊಳ್ಳುವುದಕ್ಕೆ ಪೂರ್ವದಲ್ಲಿ ಅಥಣಿ ವಿಭಾಗದ ಹಿನ್ನೆಲೆಯನ್ನು ಅರಿತುಕೊಳ್ಳುವುದು ಅವಶ್ಯಕವಾದದ್ದು.

ಅಥಣಿ ಕರ್ನಾಟಕ ರಾಜ್ಯದ ಉತ್ತರ ಪಶ್ಚಿಮ ಗಡಿಯ ಒಂದು ತಾಲೂಕು. ಇದು ಬೆಳಗಾವಿ ಜಿಲ್ಲೆಯಲ್ಲಿದೆ. ಉತ್ತರಕ್ಕೆ-ಪಶ್ಚಿಮಕ್ಕೆ ಹೊಂದಿಕೊಂಡು ಮಹಾರಾಷ್ಟ್ರ ರಾಜ್ಯವಿದೆ. ನೂರಾರು ವರ್ಷಗಳಿಂದ ಈ ಭಾಗದ ಮೇಲೆ ಮರಾಠಿ ಪ್ರಭಾವ ಹಾಗೂ ಪ್ರಾಬಲ್ಯ ಇದ್ದದ್ದು ಸ್ಪಷ್ಟವಾಗುತ್ತದೆ. ಮೊದಲು ಇದು ಮುಂಬಯಿ ಪ್ರಾಂತ್ಯದಲ್ಲಿತ್ತು. ಅದಕ್ಕೂ ಪೂರ್ವದಲ್ಲಿ ಈ ಭಾಗದ ಅನೇಕ ಪ್ರದೇಶಗಳು ಮರಾಠಿ ಆಳರಸರ ಕೈವಶದಲ್ಲಿದ್ದವು. ಹೀಗಾಗಿ ಈ ಭಾಗದ ಮೇಲೆ ಮರಾಠಿ ಭಾಷೆಯ ಪ್ರಭಾವ ವಿಪರೀತವಾಗಿತ್ತೆಂದು ಹೇಳಲೇಬೇಕು.

ಪ್ರಸ್ತುತ ಅಥಣಿ ವಿಭಾಗವೆಂದರೆ; ಅಥಣಿ ತಾಲೂಕಿಗೆ ಹೊಂದಿಕೊಂಡ ಬಿಜಾಪೂರ ಜಿಲ್ಲೆಯ ಬಿಜಾಪೂರ, ಜಮಖಂಡಿ ತಾಲೂಕಿನ ಗಡಿಭಾಗಗಳು. ಬೆಳಗಾವಿ ಜಿಲ್ಲೆಯ ರಾಯಭಾಗ, ಚಿಕ್ಕೋಡಿ ತಾಲೂಕುಗಳ ಗಡಿಗಳು. ಮಹಾರಾಷ್ಟ್ರದ ಕೊಲ್ಲಾಪೂರ ಜಿಲ್ಲೆಯ ಶಿರೋಳ ತಾಲೂಕು ಗಡಿ, ಸಾಂಗಲಿ ಜಿಲ್ಲೆಯ ಮೀರಜ ಮತ್ತು ಜತ್ತ ತಾಲೂಕಿನ ಗಡಿಗಳು ಸೇರಿಕೊಳ್ಳುತ್ತವೆ.

ಅಥಣಿ ವಿಭಾಗದ ಪಶ್ಚಿಮ ಹಾಗೂ ಉತ್ತರ ಭಾಗ ಹೆಚ್ಚಾಗಿ ಮರಾಠಿ ಪ್ರಾಬಲ್ಯಕ್ಕೆ ಒಳಗಾಗಿದ್ದರೆ; ಪೂರ್ವ ಹಾಗೂ ದಕ್ಷಿಣ ಭಾಗ ಪೂರ್ತಿಯಾಗಿ ಅಲ್ಲದಿದ್ದರೂ ಹೆಚ್ಚಾಗಿ ಅಚ್ಚಗನ್ನಡವನ್ನು ಉಳಿಸಿಕೊಂಡಿವೆ. ಹೀಗಾಗಿ ಕೊಟ್ಟಲಗಿಯು ಅಥಣಿಯ ವಿಭಾಗದ ಪೂರ್ವ ಭಾಗದಲ್ಲಿ ಬರುತ್ತದೆ. ಈ ವಿಭಾಗದ ಭಾಷೆಯ ಸೊಗಡನ್ನು ರಾವ ಬಹಾದ್ದೂರ'ಅವರ ಗ್ರಾಮಾಯಣ ಕಾದಂಬರಿಯಲ್ಲಿ ಪ್ರತಿನಿಧಿಸುವುದನ್ನು ಕಾಣಬಹುದು.

ಕೆಲವೊಂದು ಬಾರಿ ಅನುಸ್ವಾರ ವ್ಯತ್ಯಾಸವಾಗುವುದು ಈ ಭಾಗದ ಆಡು ನುಡಿಯ ಒಂದು ವಿಶೇಷ. ಕನ್ನಡದಲ್ಲಿ ಗಂಡಸರು ಗಣಸರಾಗಿ ಮಾರ್ಪಾಡು ಹೊಂದುತ್ತಾರೆ. ಲೋಪವಾದ

ಹೌಂದ ಆಗುತ್ತದೆ,

ಒಂದು ಪದದಲ್ಲಿ ವ್ಯಂಜನವು ದುರ್ಬಲವಾದರೆ ಇಲ್ಲವೆ ಲೋಪವಾದರೆ ಆ ಹಾನಿಯನ್ನು ತುಂಬಲು ಹಿಂದಿನ ಸ್ವರವು ದೀರ್ಘವಾಗುವುದು ಭಾಷಾ ವಿಜ್ಞಾನದಲ್ಲಿ ಒಂದು ನಿಯಮ. ಇದಕ್ಕೆ ಪರಿಹಾರ ದೀರ್ಘೀಕರಣ'ಎಂದು ಕರೆಯುತ್ತಾರೆ. ಹ್ರಸ್ವ ಅಕ್ಷರಗಳನ್ನು ದೀರ್ಘವಾಗಿ ಆಡುವುದು ಇಲ್ಲಿ ಸಾಮಾನ್ಯ ಸಂಗತಿ. ಉದಾ:

ಮಾಡುವುದು=ಮಾಡೋದು ಹಾಲು=ಹಾಲಾ

ನೋಡುವುದು=ನೋಡೋದಾ ವರ್ಷ=ವರಸಾ

ಮೊಸರು=ಮಸರಾ

ಈ ಬಗೆಯ ಪದಗಳು ಸಾಮಾನ್ಯವಾಗಿ ದೀರ್ಘವಾಗಿ ಉಚ್ಚರಿಸುವ ರೂಢಿ ಮರಾಠಿ ಯಿಂದಲೂ ಬಂದಿರಬೇಕು.

ಈ ದೀರ್ಘೀಕರಣಕ್ಕೆ ವಿರೋಧವಾಗಿ ಪದಗಳನ್ನು ಸಂಕುಚಿತಗೊಳಿಸಿ, ಹ್ರಸ್ವ ಮಾಡಿ ಮಾತನಾಡುವ ಪದ್ಧತಿಯೂ ಇದೆ. ಉದಾಹರಣೆ: ಬರಲಿಕ್ಕೆ, ಹೋಗಲಿಕ್ಕೆ ಇವು ಬರ್ಲಾಕ-ಹೋಗ್ಲಾಕ ಆಗುತ್ತದೆ. ಈ ಪ್ರಯೋಗಗಳು ಸರ್ವೇ ಸಾಮಾನ್ಯವಾಗಿವೆ.

ಈ ಭಾಗದ ಕನ್ನಡದಲ್ಲಿ ಮರಾಠಿ ಪ್ರಭಾವವಂತೂ ಸಹಜವಾಗಿದೆ. ಅನೇಕ ಮರಾಠಿ ಪದಗಳು ಆಡುನುಡಿಯಲ್ಲಿ ಸೇರಿಕೊಂಡಿವೆ. ಉದಾಹರಣೆ:

ಶಾಣ್ಯಾ=ಜಾಣ	ಖರೆ=ನಿಜ	ಮಾಸ್ತ=ಬಹಳ
ತಾಬಡತೋಬ=ಬೇಗ	ಕಬೂಲಿ=ಒಪ್ಪಿಗೆ	ಆಜುಬಾಜು=ನೆರೆಹೊರೆ
ಅಗದಿ=ತೀರ	ಜರ=ಒಂದು ವೇಳೆ	ಠಗ್ಯಾ=ಮೋಸಗಾರ
ಖಬರ=ಅರಿವು	ಪಸಂದ=ಒಪ್ಪಿಗೆ	ಭೇಸಿ=ಒಳ್ಳೆಯ
ಪಾವಣ್ಯಾರು=ಬೀಗರು	ಭಿಡೆ=ದಾಕ್ಷಿಣ್ಯ	ಸಮಸು=ತಿಳಿ
ಹರಕತ್ತ=ಅಡ್ಡಿ	ಥ್ವಾಡೆ=ಸ್ವಲ್ಪ	ನಿಮ್ಮಾ=ಅರ್ಧ
ಪರಕ=ಅಂತ	ವಾಥಾಸು=ಹೆಚ್ಚಿಸು	ಏಕದಂ=ಒಮ್ಮೆಲೆ

ಈ ಆಡುನುಡಿಯಿಂದ ಗುರುತಿಸಿ ಮೊದಲಾದ ಪದಗಳನ್ನು ಈ ಭಾಗದ ಇನ್ನೂ ಅನೇಕ ಪದಗಳನ್ನು ಹೆಕ್ಕಿ ತೆಗೆಯಬಹುದು.

ಅಂಕಿ ಸಂಖ್ಯೆಗಳನ್ನು ಹೇಳುವಾಗ ಸಹಜವಾಗಿಯೇ ಹಲವು ಮರಾಠಿ ಸಂಖ್ಯಾವಾಚಕಗಳು ಬರುತ್ತವೆ.

ಅಡೀಚ=ಎರಡುವರೆ	ಆಕರಾ=ಹನ್ನೊಂದು
ದೀಡ=ಒಂದೂವರೆ	ಬಾರಾ=ಹನ್ನೆರಡು

ಇಂಥವು ಬಹಳಷ್ಟು ಬಳಕೆಯಾಗುತ್ತವೆ. ಉದಾ: ದೊನಸೆ ರೂಪಾಯಿ ಕೊಡುದಿತ್ತು, ಶಂಬರ ಕೊಟ್ಟಾ, ಎಡರುನೂರು ರೂಪಾಯಿ ಕೊಡುವುದಿತ್ತು ನೂರು ರೂಪಾಯಿ ಕೊಟ್ಟಾ, ಅದರಂತೆ ಪಾಶೆ ರೂಪಾಯಿ ಅದಾವೆನ. ಐದನೂರು ರೂಪಾಯಿ ಇದ್ದಾವೇನು. ನಾಳೆ ತನಕಾ ಶಂಬರ ರೂಪಾಯಿ ಕೊಡು, ನಾಳೆಯವರೆಗೆ ನೂರು ರೂಪಾಯಿ ಕೊಡು. ದೀಡಕಂದರ ಕೆಲಸಾ ಬಿಡತಾರ, ಒಂದೂವರೆಗೆ ಕೆಲಸ ಬಿಡುತ್ತಾರೆ.

ಸಮಯ ಹೇಳುವಾಗ

ಸಾಡೆ ಆಕರಾ=ಹನ್ನೊಂದುವರೆ	ಸಾಡೆಬಾರಾ=ಹನ್ನೆರಡುವರೆ
ದಿಡ=ಒಂದೂವರೆ	ಅಡಿಚ=ಎರಡೂವರೆ

ರಾತಿ ್ರಬಾರಾ=ರಾತ್ರಿ ಹನ್ನೆರಡು

ಎಂದು ಹೇಳುತ್ತಾರೆ. ಬಹಳಷ್ಟು ಜನ ಸವ್ವಾ ಹನ್ನೊಂದು, ಸವ್ವಾ ಹನ್ನೆರಡು, ಪೋಣೆ ಮೂರು, ಪೋಣೆ ಆರು ಎಂದೇ ಹೇಳುವ ರೂಢಿ. ಇದು ಕನ್ನಡದಲ್ಲಿ ಹನ್ನೊಂದು ಕಾಲು, ಹನ್ನೆರಡು ಕಾಲು, ಎರಡು ಮುಕ್ಕಾಲು, ಮೂರು ಮುಕ್ಕಾಲು ಎಂದಾಗುತ್ತದೆ. ಹಲವು ಸಲ

ಹೆಚ್ಚಿನ ಅಕ್ಷರಗಳು ಪದಗಳ ಮಧ್ಯ ಬಂದು ಸೇರುತ್ತವೆ. ಒಂದೊಂದು ಶಬ್ದದ ಅರ್ಥ ವ್ಯತ್ಯಾಸವೂ ಆಗುತ್ತದೆ. ಉದಾ: ಮಳಿಗೆ"ಶಬ್ದಕ್ಕೆ ಅಂಗಡಿ ಎಂದು ಇತರ ಕಡೆಗಳಲ್ಲಿ ಅರ್ಥವಿದ್ದರೆ, ಈ ಭಾಗದಲ್ಲಿ ಮಳಿಗೆ ಎಂದರೆ ಕೆರೆ, ಹೊಳೆ, ಹಳ್ಳದ ದಂಡೆಯ ತೋಟಕ್ಕೆ ಹೇಳುವ ಹೆಸರಿದೆ.

ಒಂದೇ ಊರಿನಲ್ಲಿ ವಿವಿಧ ಮತಧರ್ಮದವರ ನಡುವೆ ಭಾಷಾ ಬಳಕೆಯಲ್ಲಿ ವ್ಯತ್ಯಾಸವನ್ನು ಕಾಣಬಹುದು. ಊಟಕ್ಕೆ 'ಬಡಿಸು' ಪದಕ್ಕೆ ಸಮಾನಾರ್ಥವಾಗಿ ವೀರಶೈವರಲ್ಲಿ ಊಟಕ್ಕೆ ನೀಡು ಎಂಬುದಾಗಿಯೂ, ಬ್ರಾಹ್ಮಣರಲ್ಲಿ ಸಮುದಾಯದವರಲ್ಲಿ ಊಟಕ್ಕೆ ಹಾಕು ಎಂಬುದಾಗಿಯೂ ಪ್ರಯೋಗಿಸುತ್ತಾರೆ. ಉದಾ: ವೀರಶೈವ ಸಮುದಾಯದವರಲ್ಲಿ ನೀಡಿ ಎನ್ನುತ್ತಾರೆ. ಅದೇ ಬ್ರಾಹ್ಮಣ ಸಮುದಾಯದವರಲ್ಲಿ ಊಟವನ್ನು ಹಾಕು ಎನ್ನುತ್ತಾರೆ.

ಗ್ರಾಮದಲ್ಲಿ ಬಳಕೆಯಲ್ಲಿರುವ ಕೆಲವು ಪಡೆನುಡಿಗಳನ್ನು ಗಮನಿಸಿದರೆ ಕರ್ನಾಟಕದ ಇತರ ಭಾಗದಲ್ಲಿ ಇಲ್ಲವೆಂದೇ ಹೇಳಬೇಕಾಗುತ್ತದೆ. ಆದ್ದರಿಂದ ಇವು ಈ ಭಾಗದ ವೈಶಿಷ್ಟ್ಯಗಳಾಗಿವೆ. ಇವು ಇದೇ ವಿಭಾಗಕ್ಕೆ ಸೀಮಿತವಾಗಿವೆ.

ಉದಾ:

ದಂ ಹಿಡಿ=ತಡೆಯುವದು, ಸುಮ್ಮನಿರುವುದು	ಪಂಚೇತಿ ಆಗು=ತೊಂದರೆ ಆಗು
ಭಿಡೆದಾಗ ಬೀಳು=ದಾಕ್ಷಿಣ್ಯಕ್ಕೆ ಒಳಗಾಗು	ದಾದಮಾಡು=ಗಮನಕೊಡು
ಛಾಪ ಹಾಕು=ಪ್ರಭಾವ ಬೀರು	ಅಗಡ ಮಾಡು=ಅಡ್ಡದಾರಿಗೆ ಹಚ್ಚು
ಅಪಸತ್ ಮಾಡಿಕೊಳ್ಳು=ಒಪ್ಪಂದ ಮಾಡಿಕೊಳ್ಳು	ಥಾರೇಕ ಹತ್ತು=ಗತಿಗೆ ಹತ್ತು
ಪಂಟ ಬಡಿ=ನೆಪ ಹೇಳು	ದಡ್ಡ ಬೀಳು=ರೂಢಿಯಾಗು

ಹುಂ ಗುತಿಗಿ=ಸುಮ್ಮ ಸುಮ್ಮನೆ ಕಷ್ಟಕ್ಕೆ ಬೀಳು ಎಂಬರ್ಥಗಳಿವೆ.

ಪದಗಳಲ್ಲಿಯ ಅಕ್ಷರಗಳು ವ್ಯತ್ಯಾಸವಾಗುವದು, ಪಲ್ಲಟವಾಗುವದು, ಲೋಪ ಹಾಗೂ ಅದೇಶವಾಗುವದು ತೀರ ಸ್ವಾಭಾವಿಕ. ಸಂಗಡ ಇದು ಸಂಗಾಟವಾದರೆ; ಸ್ವತಂತ್ರ ಇದು ಸತಂತ್ರ'ಎಂದಾಗುತ್ತದೆ. ಅವನ ಕೂಡಾ=ಅವನಗೂಡಾ, ಹೊಟ್ಟೆಕಿಚ್ಚು=ಹೊಟ್ಟಿಕಿಚ್ಚು, ನಾಲ್ಕು=ನಾಕು, ಎರಡು=ಎಡ್ಡು ಈ ರೀತಿ ಅಕ್ಷರ ವ್ಯತ್ಯಾಸವನ್ನು ಹೊಂದುತ್ತವೆ.

ಕೆಲವೊಂದು ಇತರ ದೇಶಿ ಕನ್ನಡ ಪದಗಳು ಈ ಭಾಗ

ಆಯಾರ=ಉಡುಗೊರೆ	ಸನಿ=ಸಮೀಪ	ಅಗಾವು=ಮುಂಚಿತ
ಹರ್‍ಯಾವತ=ಬೆಳಗು ಮುಂಜಾನೆ	ತರಬು=ನಿಲ್ಲಿಸು,	ತಡೆದೌಳವ=ಸಿರಿವಂತ, ಶ್ರೀಮಂತ
ಪಟ್ನ=ಬೇಗನೆ	ದಗದ=ಕೆಲಸ	ಟಬರು=ಸೊಕ್ಕು, ಅಹಂಕಾರ
ಮಾರಿ, ಮೊತಿ=ಮುಖ	ಕಾಸಡಿ=ಬೆಲೆಯಿಲ್ಲದ	ಝುಪ್ಪರಿ=ತಲೆಕೂದಲು
ಅಡಚಣಿ=ಕಷ್ಟ	ಲಗುಟ=ಬೇಗ	ಕೊಳ್ಯಾಮಿ=ಕೊರತೆ
ಬಾಟಿ=ಹಸಿ ಜೋಳದ ದಂಟು	ಗಸಕ್ಕನ=ಲಗುಬಗೆಯಿಂದ	ಚಾಟ=ಆಸರೆ

ಜಿಬಟ=ಜಿಪುಣ	ಪಾಡ=ಲೇಸು	ದೀಡಿ=ವ್ಯಂಗ
ಜಡ್ಡು=ಅನಾರೋಗ್ಯ	ಗಾಂವ=ಒಳ್ಳೆಯ	ತರಬು=ನಿಲ್ಲಿಸು
ಪ್ಯಾಲಿ=ಮುರ್ಖಿ	ಅಟ=ಬಂಧಿಸು	ಬೆರಕಿ=ಚತುರ/ಚತುರೆ
ಬಣ್ಣ=ಕಳಂಕ	ಚಿಗವ್ವ=ಚಿಕ್ಕಮ್ಮ	ದೇಖರೇಖ=ಮೇಲ್ವಿಚಾರಣೆ
ಖೂನ=ಪರಿಚಯ	ಬೇಡ=ಒಲ್ಲೆ	ಸಂಗಾಟ=ಜೊತೆ

ಗಂಟುಬೀಳು=ಭೆಟ್ಟಿಯಾಗು ಮೊದಲಾದ ಶಬ್ದಗಳ ಬಳಕೆಯನ್ನು ಕಾಣಬಹುದು.

ಇಲ್ಲಿಯ ಮಾತನ್ನು ಕೇಳುವುದೇ ಒಂದು ಬಗೆಯ ಸೊಗಸು. ಏಕೆಂದರೆ ಮಾತನಾಡುವವರಿಗೆ ಈ ಸೊಗಸಿನ ಅನುಭವವಾಗಲಿಕ್ಕಿಲ್ಲ. ಆದರೆ ಅಥಣಿಯ ವಿಭಾಗದಲ್ಲಿ ಬರುವ ಕೊಟ್ಟಲಗಿ'ಗ್ರಾಮದ ಭಾಷೆ ಆದಷ್ಟು ಶಕ್ತಿಶಾಲಿಯಾಗಿಲ್ಲವಾದರೂ, ಈ ಮಿಶ್ರಣದಲ್ಲಿಯೂ ಸಾರಸತ್ವವಿದೆ ಎಂದು ಹೇಳಲೇಬೇಕು.

೮.೨. ಗ್ರಾಮದ ಶಿಷ್ಟ ಸಾಹಿತ್ಯ

ಕನ್ನಡ ಶಿಷ್ಟ ಸಾಹಿತ್ಯ ಪರಂಪರೆ ಸುಮಾರು ೧೫೦೦ ವರ್ಷಗಳ ಇತಿಹಾಸವನ್ನು ಹೊಂದಿದೆ.[೯] ಮೊದಲಿಗೆ ಕನ್ನಡ ಸಾಹಿತ್ಯ ಕೃತಿ ರಚನೆ ಮಾಡ ಹೊರಟ ಕವಿಗಳು ಸಂಸ್ಕೃತ ಸಾಹಿತ್ಯದ ಪ್ರಭಾವಕ್ಕೆ ಒಳಗಾದುದರಿಂದ ಅದು ಪೌಢ ಮತ್ತು ಗಂಭೀರತೆಯನ್ನು ತಳೆಯಿತು. ಅದು ಸಾಮಾನ್ಯರ ಆಡುನುಡಿಗಿಂತ ಭಿನ್ನವಾಗಿ ರೂಪಗೊಂಡಿದುದರಿಂದ ಅದನ್ನು ವಿದ್ವಾಂಸರು 'ಮಾರ್ಗ ಸಾಹಿತ್ಯ' ಎಂದು ಕರೆದಿದ್ದಾರೆ. ಅದು ಜನಸಾಮಾನ್ಯರಿಗೆ ನಿಲುಕುವಂತಹದಲ್ಲ. ಅದು ಸಂಸ್ಕೃತ ಭಾಷೆ ಮತ್ತು ಛಂದಸ್ಸಿನಿಂದ ಮಿಳಿತಗೊಂಡು ರೂಪ ಪಡೆದಿರುವ ಶಿಷ್ಟ ಸಾಹಿತ್ಯ ರೂಪವಾಗಿದೆ.

ಶಾಸನಗಳು: ಸಾಹಿತ್ಯದ ದೃಷ್ಟಿಯಿಂದಲೂ ಶಾಸನಗಳು ಅಪೂರ್ವವಾದ ದಾಖಲೆಗಳಾಗಿವೆ. ಈ ನಾಡಿನ ಬಹುಪಾಲು ಶಾಸನಗಳು ದಾನಶಾಸನಗಳಾಗಿವೆ. ಶಾಸನದ ಭಾಷೆ ಯಾವುದೇ ಇರಲಿ, ಪ್ರಾರಂಭದಲ್ಲಿ ಸ್ತುತಿ ಪದ್ಯ, ಅಂತ್ಯದಲ್ಲಿ ಫಲಶೃತಿ ಪದ್ಯವಿದೆ. ಸಾಮಾನ್ಯವಾಗಿ ಸಂಸ್ಕೃತ ಭಾಷೆಯಲ್ಲಿ, ಅದರಲ್ಲಿಯೂ 'ಸಮಸ್ತುಂಗ ಶಿರಶ್ಚುಂಬಿ' ಎಂಬ ಸ್ತುತಿ ಪದ್ಯ"ಸ್ವದತ್ತಂ ಪರದತ್ತಂ" ಎಂಬ ಫಲಶೃತಿ ವಾಕ್ಯಗಳು ಸಾಮಾನ್ಯವಾಗಿ ಸಂಸ್ಕೃತದಲ್ಲಿರುತ್ತವೆ. ಕೆಲವೊಮ್ಮೆ ವಿರಳವಾಗಿ ಕನ್ನಡ ಭಾಷೆಯಲ್ಲಿರುವ ಸ್ತುತಿ ಪದ್ಯ ಹಾಗೂ ಫಲಶೃತಿ ವಾಕ್ಯಗಳು ಕಾಣಸಿಗುತ್ತವೆ. ಪಾರಂಪರಿಕ ಬಿರುದುಗಳು ಮತ್ತು ದಾನಕೊಟ್ಟ ವಿವರಣೆ ಗದ್ಯದಲ್ಲಿದ್ದರೆ, ದೇಶವರ್ಣನೆ, ಪುರವರ್ಣನೆ, ರಾಜ ಮತ್ತು ಮಹಾಮಂಡಳೇಶ್ವರ ಗುಣಗಾನ, ದಾನಕೊಡುವವರ, ಉದಾರ ಮನೋಭಾವ ಹಾಗೂ ಸ್ವೀಕರಿಸುವ ಅರ್ಹತೆ ಮುಂತಾದ ವಿಷಯಗಳ ನಿರೂಪಣೆ ಶಾಸನ ಪದ್ಯಗಳಲ್ಲಿದ್ದು; ಪರಿಕಲ್ಪನೆಗೆ ಹಿಡಿದ ಕನ್ನಡಿಯಾಗಿದೆ. ರಾಜ, ಸಾಮಂತ, ಅಧಿಕಾರಿ, ಸಾಮಾನ್ಯ ಜನರು ಯಾರೇ ಇದ್ದರೂ ಅವರಲ್ಲಿ ಅತ್ಯುನ್ನತವಾದ ಆದರ್ಶ ಗುಣಗಳನ್ನು ಹೇಳಿರುವುದರಿಂದ ಇಲ್ಲಿನ ವರ್ಣನೆಗಳು ಕೆಲವೊಮ್ಮೆ ಅತಿಶಯೋಕ್ತಿ ಮತ್ತು ಉತ್ಪ್ರೇಕ್ಷೆಗಳಾಗಿ ಕಂಡುಬರುತ್ತವೆ.

ಶಾಸನಸಾಹಿತ್ಯ: ಶಾಸನದಲ್ಲಿ ವಿವಿಧ ಸಾಹಿತ್ಯ ರೂಪಗಳು, ಛಂದಸ್ಸಿನ ಪ್ರಕಾರಗಳು ಕಂಡು ಬರುತ್ತವೆ. "ವಾಸ್ತವ ಸಂಗತಿಯೆಂದರೆ ಪಕ್ಕಾ ಸಾಹಿತ್ಯವು ಶಾಸನ ಸಾಹಿತ್ಯಕ್ಕೆ ಆದರ್ಶ ಮತ್ತು ಪ್ರಚೋದಕ. ಪಕ್ಕ ಸಾಹಿತ್ಯದ ಏಳು ಬೀಳುಗಳನ್ನು ಶಾಸನ ಸಾಹಿತ್ಯವು

ಅನುಸರಿಸಿದೆ. ಪಂಪ, ರನ್ನ ಮೊದಲಾದ ಚಂಪೂ ಕವಿಗಳ ಅನಂತರ ಕಾವ್ಯಮಯ ಶಾಸನಗಳ ಸಂಖ್ಯೆಯೂ ಅವುಗಳ ಗುಣವು ಹೆಚ್ಚುತ್ತಾ ಹೋಗುತ್ತದೆ."" ಶಾಸನಗಳ ಮುಖ್ಯ ಉದ್ದೇಶ ಸಾಹಿತ್ಯ ರಚನೆಯಲ್ಲದಿದ್ದರೂ, ಸಾಹಿತ್ಯ ರೂಪಗಳಾದ ಚಂಪೂ, ಗದ್ಯ, ಷಟ್ಪದಿ, ರಗಳೆ, ತ್ರಿಪದಿ, ಕಂದ ವೃತ್ತಗಳು ಗಮನಿಸಿದಾಗ ಸಾಹಿತ್ಯದ ರಾಶಿಯನ್ನು ಕಡೆಗಣಿಸುವಂತಿಲ್ಲ. ಈ ಶಾಸನ ಸಾಹಿತ್ಯಕ್ಕೆ ತನ್ನದೇ ಆದ ಒಂದು ವೈಶಿಷ್ಟ್ಯವಿದೆ ಎಂಬುದು ಗಮನಾರ್ಹ ಸಂಗತಿ.

ಕಣಂಬಡೆ ನಾಡಿನಲ್ಲಿರುವ ಉಂಬರವಾಣಿ, ಕೊಕಟನೂರ, ತೆಲಸಂಗ, ಬಾಳಿಗೇರಿ, ರಾಮತೀರ್ಥ, ಸಿದ್ಧನಾಥ, ಮುರಗುಂಡಿ ಶಾಸನಗಳು ಹೆಚ್ಚು ದೀರ್ಘವಾಗಿದ್ದು, ಸೊಗಸಾದ ವರ್ಣನೆಗಳಿಂದ ಕೂಡಿವೆ. ಕೆಲವೊಮ್ಮೆ ಶಾಸನ ಕವಿಯ ಹೆಸರು ಕಂಡು ಬರದ ಸಂದರ್ಭದಲ್ಲಿ ಉತ್ತಮವಾದ ಕಾವ್ಯಗುಣವನ್ನು ಹೊಂದಿರುವುದನ್ನು ಗಮನಿಸಬಹುದಾಗಿದೆ. ಈ ಶಾಸನದಲ್ಲಿ ಕೊಟ್ಟಲಗಿಯ ಉಲ್ಲೇಖವಿರುವುದರಿಂದ ಸಹಜವಾಗಿಯೇ ಕೊಟ್ಟಲಗಿ ಸಾಹಿತ್ಯಕ್ಕೆ ಸಂಬಂಧಿಸಿದ ಸಮಕಾಲೀನ ಶಾಸನ ಸಾಹಿತ್ಯವಾಗುತ್ತದೆ. ಈ ಕಾರಣದಿಂದ ಶಾಸನವನ್ನು ಗಮನಿಸಿದಾಗ

ಕರಹಡವೆಂಬಾ ನಾಡಿನಂ –
ಗುರು ಭೂಷಣದಂತಿರೀ ಕಳಂಬಡೆ ನಾಡು – ।
ದ್ದರ ರಂಜಿತವದರೊಳಗೆಂ –
ತಿರೆ ಮೂವತ್ತಾರು ಬಾಡವನು ಪಮ ಪುಣ್ಯಂ

ವರತದ್ದೇಶನ ಮೊದಲುಂ –
ಬರವಾಣಿ ರಾಜಧಾನಿಬನದಿಂದಬ್ಜಾ – ।
ಕರದಿಂ ಕೆಯ್ವೊಲದಿಂ ಭಾ –
ಸುರ ನಾನಾ ಮರನಿಕೇತನಂಗಳಿನೆಸೆಗುಂ"

ಕ್ಷಿತಿನೋಡೆ ತನ್ನೊಳಿಪ್ಪಂ
ಚತುರಾನನನೊರ್ಲ್ದನೆಂನೊಳಿಪ್ಪರನೇಕ – ।
ರ್ಚ್ಚತುರಾನನರೆನುತಂ ಸಂ
ತತ ವು ೬"

ಉಮ್ರಾಣಿಯ ಶಾಸನದ ಪದ್ಯ ಕಾವ್ಯಮಯವಾಗಿ ವರ್ಣಿಸಿದೆ.
ಕಾಮಕ್ರೋಧ ವಿಧೂರರಪ್ರತಿಮಾರ್ತ್ತಾಂಡೋಜ್ವಳ ಭಾಜಿತ
ಶ್ರೀಮತ್ ಕೀರ್ತ್ತಿ ವಿರಾಳರಬ್ಜಚರಿತ್ರೋದಭಾಸಿಗಳ್ ರುಶ್ಯೆಜ
ಸ್ಯಾ ಮಾಥರ್ಬಣವೇದಪಾರಗರಿಳಾಧೀಶಾರ್ಚ್ಚಿತರ್ಸ್ವತ್ಯಸತ್

ಪ್ರಜಯಂ ಪಾಳಿಸಿ ಭೃತ್ಯರಂ ಪೊರೆದು ವಿದ್ವಿಪಾವನೀಪಾಳಕ
ಬ್ರವಜಂ ಕೊಂಡು ನ ತಾವನೀಶಕುಳಮಂ ತಂನೊಳ್ ಸಮಂ ಮಾಡಿ ಕೂ
ದೆ ಜಸಂ ದಿಕ್ ತಟವೆಟುಕಂ ಬೆಳಗೆ ಪೆಂಪಿಂ ಪೋಲ್ತನಾಧಿಶ್ಯಮಾ (ಭೂ)
ಭುಜರಂ ರಾಯಮುರಾರಿ ಸೋಮಮಹಿಪಂ ಶ್ರೀಬಿಜ್ಜಭೂಪಾತ್ಮಜಂ

ಇದೆ ಶಾಸನದಲ್ಲಿ ದಾನ ಕಾರ್ಯವನ್ನು ಮಾಡಿ ಪ್ರಸಿದ್ಧಿಯನ್ನು ಹೊಂದಿದ ಕಲ್ಲಿಸೆಟ್ಟಿ ಸಾಧನೆಯನ್ನು ಕೊಂಡಾಡುವ ಪದ್ಯ ಗಮನಾರ್ಹವಾದುದು.

ಹು ಸಿದೆಯ್ವಂತವಗಾಗಿರೆ
ಆಸವರನಂ ನೋಡದುಳರೆ ಧನಮಂ ಹಡವಾ
ಬ್ಯಸನದ ವೈಶ್ಯಗ್ರ್ಗಣಯೇ
ಆನದೊಡಯಂ ಕಲ್ಲಿಸೆಟ್ಟಿಪ್ಪಾಧಾರಂ[೬]"

ಈ ರೀತಿಯಾಗಿ ಕವಿಯು ಕಂದಪದ್ಯಗಳಲ್ಲಿ ಕಿರಿದಾದ ಭಾವಗಳನ್ನು ಸುಂದರವಾಗಿ ಹಿಡಿದಿದ್ದಾನೆ.

ಶಾಸನ ಕವಿಗಳು: ಶಾಸನ ಕಾವ್ಯ ರೂಪಗೊಳ್ಳಬೇಕಾದರೆ ಮೊದಲು ಶಾಸನಗಳನ್ನು ತಾಳೆಗರಿಯ ಮೇಲೆ ಬರೆಯಬೇಕು. ಇನ್ನೊಬ್ಬ ಅದನ್ನು ಕಾವ್ಯತರವಾಗಿ ಹೇಳಬೇಕು. ಮೂರನೆಯವ ಅದನ್ನು ಉಳಿಯ ಸಹಾಯದಿಂದ ಶಿಲೆಗಳ ಮೇಲೆ ಕೆತ್ತಬೇಕು. ಹೀಗೆ ಒಂದು ಶಾಸನ ನಿರ್ಮಾಣದಲ್ಲಿ ಮೂರು ಜನರ ಸಹಾಯವಿರುತ್ತದೆ. ಒಮ್ಮೊಮ್ಮೆ ಕವಿಯು ಕಂಡರಣೆಗಾರನು ಒಬ್ಬನೆ ಆಗಿದ್ದರೆ ಇಬ್ಬರ ಸಹಾಯ ಬೇಕಾಗುತ್ತದೆ. ಶಾಸನದ ಹೊನೆಯಲ್ಲಿ "'ರಚಿಸಿಯಿರದರ ಬರೆದಂ"" ಎಂದಿದ್ದರೆ ಆತ ಕೇವಲ ಶಿಲ್ಪಿ, ಕಂಡರಣೆಗಾರ ಎಂದು ತಿಳಿಯಬೇಕು. ಸಾಮಾನ್ಯವಾಗಿ ಶಾಸನವನ್ನು ಕೊರೆಯುತ್ತಿದ್ದ ಶಿಲ್ಪಿಗಳು ತಮ್ಮನ್ನು "ರೂವಾರಿ" (ರೂಪಕಾರಿ) ಮತ್ತು ಸರಸ್ವತಿ ಗಣದಾಸಿಗಳೆಂದು ಕರೆದುಕೊಂಡಿದ್ದಾರೆ. ಇವರು ಸುಂದರ ಅಕ್ಷರ ಬರೆಯುವ ಮತ್ತು ಶಿಲ್ಪಕಲೆಯಲ್ಲಿ ಪರಿಣತಿಗಳಾಗಿರುತ್ತಾರೆ.[೭]" ಹೀಗಾಗಿ ಒಮ್ಮೊಮ್ಮೆ ಶಾಸನದಲ್ಲಿ ಯಾರು ಬರೆದರು ಎನ್ನುವುದು ಗೊತ್ತಾಗುವುದಿಲ್ಲ. ಆದರೆ ಕೆಲವು ಕಡೆ ಅಪರೂಪವಾಗಿ ಹೆಮ್ಮೆಯಿಂದ ತಮ್ಮ ಹೆಸರನ್ನು ಸ್ಪಷ್ಟವಾಗಿ ಶಾಸನ ಕವಿಗಳು ಹೇಳಿಕೊಂಡಿದ್ದಾರೆ.

ಮಲ್ಲಿದೇವ

ಕಣಂಬಡೆ ನಾಡಿನ ರಾಮತೀರ್ಥ ಶಾಸನವು"ವಾಸುಗಿಯ ಮಹಿಮೆಯಂ ಬಣ್ಣಿಸಲ್ವಲ್ಲನಾವಂ ಮಲ್ಲಿದೇವನೊರ್ವನೆ ವಿಬ್ಧಾಶ್ರಯಂ ಚತುರನೀ ರಥಿನೀ ಪರಿ ಮಲ್ಲಿದೇವನೊಪ್ಪನೇ ಧರೆಗುಂಬ ತಾಂಬ್ರ ಶಾಸನದಂ ಶ್ರೀ ರಾಮೇಶ್ವರ ದೇವಶರಣರು" ಎಂದು ಹೇಳಿರುವುದರಿಂದ ಕವಿ ಮಲ್ಲಿದೇವನು ಕವಿಯಾಗಿರುವುದು ಸ್ಪಷ್ಟವಾಗುತ್ತದೆ. ಈತ ವಾಸುಗಿಯ ಮಹಿಮೆಯನ್ನು ಬಣ್ಣಿಸಲು ಸಮರ್ಥನಾಗಿದ್ದ, ಚತುರನಾಗಿದ್ದ, ವಿಭುದಾಶ್ರಯನಾಗಿದ್ದನೆಂದು ಶಾಸನವು ಉಲ್ಲೇಖಿಸುತ್ತದೆ.

ಕಲಚೂರಿ ಬಿಜ್ಜಳದೇವನ ಕಾಲಕ್ಕೆ ಸಂಬಂಧಿಸಿದ್ದ ಮಹಾಮಂಡಳೇಶ್ವರ, ಪೆರ್ಮಾಡಿ, ಮಹಾಮಂಡಳೇಶ್ವರ ಬನ್ನರ ಮತ್ತು ಸುಂಕವೆರ್ಗ್ಗಡೆ ನಾಗದೇವಯ್ಯ ಸೇರಿ ಶ್ರೀ ಸ್ವಯಂಭು ರಾಮೇಶ್ವರ ದೇವರ ಸ್ಥಾನಾಚಾರ್ಯರಿಗೆ ದತ್ತಿಬಿಟ್ಟಿದ್ದನ್ನು ತಿಳಿಸಿದೆ.

ಸಾಮಾನ್ಯವಾಗಿ ಮಧ್ಯಯುಗದ ಕನ್ನಡ ಶಾಸನಗಳು ಕೇವಲ ಗದ್ಯ ಇಲ್ಲವೆ ಪದ್ಯಗಳಿಗೆ ಬದಲು ಗದ್ಯಪದ್ಯಗಳ ಮಿಶ್ರಣವಾದ ಚಂಪೂ ರೂಪದಲ್ಲಿ ಅರಳಿ ನಿಂತವು. ಇದಲ್ಲದೆ "ಪುರಾಣಂ ಪಂಚಲಕ್ಷಣಂ" ಎಂಬ ಆದರ್ಶದಲ್ಲಿ "ಶಾಸನಂ ಪಂಚಲಕ್ಷಣಂ" ಎಂಬ ಸೂತ್ರವನ್ನು ಕಲ್ಪಿಸಿಕೊಂಡು; ಅದರ ಆದರ್ಶದಲ್ಲಿ ದೇವತಾಸ್ತುತಿ, ದೇಶ ವರ್ಣನೆ, ಕ್ಷೇತ್ರ

ವರ್ಣನೆ, ಚಕ್ರವರ್ತಿ ಸಾಮಂತ, ವಿವರಣೆ, ದಾನಿ, ದಾನಮಿತ್ರ, ದಾನವಸ್ತು, ಸಮಾಪ್ತಿವಾಕ್ಯ ಎಂದು ವಿಶಿಷ್ಟ ಕ್ರಮವಿನ್ಯಾಸವನ್ನು ಪಡೆದವು.[೧೦] ಕಣಂಬಡೆ ನಾಡಿನಲ್ಲಿ ಕಲ್ಯಾಣ ಚಾಲುಕ್ಯ, ಕಲಚೂರಿ ಮತ್ತು ಸೇವುಣರ ಕಾಲಕ್ಕೆ ಸಂಬಂಧಿಸಿರುವುದರಿಂದ ಇವುಗಳಲ್ಲಿ ಚಂಪೂರೂಪ ಪಂಚಲಕ್ಷಣ ವಿನ್ಯಾಸವನ್ನು ಕೊಕಟನೂರು ಶಾಸನ ಮತ್ತು ಉಮ್ರಾಣಿ ಶಾಸನಗಳಲ್ಲಿ ಕಂಡು ಬರುತ್ತದೆ.

ಶಾಸನಗಳಲ್ಲಿ ಛಂದಸ್ಸು

ಶಾಸನಗಳು ವ್ಯವಹಾರಿಕ ದಾಖಲೆಗಳಾಗಿರುವುದರಿಂದ ಭಾಷೆಯ ಆರಂಭದ ಕಾಲದಲ್ಲಿಯೇ ರೂಪಗೊಂಡಿರುತ್ತವೆ. ಆದ್ದರಿಂದ ಯಾವುದೇ ಭಾಷೆ ಅಥವಾ ಸಾಹಿತ್ಯದ ಉಗಮದ ಮೇಲೆ ಅವು ಅಮೂಲ್ಯ ಬೆಳಕು ಬೀರುತ್ತವೆ. ಅವುಗಳ ತಲಸ್ಪರ್ಶಿ ಅಧ್ಯಯನದಿಂದ ಆಯಾ ಭಾಷೆ ಸಾಹಿತ್ಯಗಳ ಪ್ರಾಚೀನತೆಯನ್ನು ನಿರ್ಣಯಿಸಬಹುದು. ರಾಜಕೀಯ ಚರಿತ್ರೆಯ ರಚನೆಗೆ ಶಾಸನಗಳು ಮೂಲ ಬೀಜಗಳಾದಂತೆ ಭಾಷೆ ಸಾಹಿತ್ಯಗಳ ಹಳಮೆಯನ್ನು ಪ್ರಚುರಪಡಿಸಲು ಅವು ಅತ್ಯಂತ ವಿಶ್ವಾಸಾರ್ಹ ಸಾಧನಗಳೆನಿಸಿವೆ.

ಶಾಸನಗಳು ಆಯಾ ಕಾಲದ ಜನಸಮುದಾಯದ ಲಿಖಿತಗೊಂಡ ದಾಖಲೆಗಳು. ಇವು ನಡೆದುಬಂದ ರೀತಿ, ಸಾಧಿಸಿದ ಸಾಹಿತ್ಯ ಸಿದ್ದಿಯೂ ಅಷ್ಟೇ ಸಾರ್ವಕಾಲಿಕವಾಗಿವೆ. ೨೦೦೦ ರಷ್ಟು ಅನ್ಯಭಾಷಾ ಶಾಸನಗಳನ್ನು ಬಿಟ್ಟರೆ ಉಳಿಯುವ ಸುಮಾರು ೨೦ ಸಾವಿರ ಕನ್ನಡ ಶಾಸನಗಳಲ್ಲಿ ಸಾಹಿತ್ಯ ಗುಣದಿಂದ ಕೂಡಿದ ಸಾವಿರಾರು ಸಂಖ್ಯೆಯಲ್ಲಿವೆ. ಇವುಗಳಲ್ಲಿ ಮೊದಮೊದಲು ಸಾಮಾನ್ಯ ಗದ್ಯ ಹೆಚ್ಚು; ಬರುಬರುತ್ತ ಸಮಾಸಯುಕ್ತ ಪದ್ಯ ಮತ್ತು ಗದ್ಯ ಪದ್ಯ ಮಿಶ್ರಣ ಹೆಚ್ಚಾಗಿ ಕಂಡುಬರುತ್ತದೆ. ಗದ್ಯಪದ್ಯಗಳಲ್ಲಿ ಅದರಲ್ಲಿಯೂ ಕಂದ ವೃತ್ತಗಳ ಬಳಕೆ ಅಧಿಕ; ಗದ್ಯ ಸಾಮಾನ್ಯವಾಗಿದೆ.[೧೧]

ಕಣಂಬಡೆ ನಾಡಿನಲ್ಲಿ ಕೊಕಟನೂರು ಹಾಗೂ ಉಮ್ರಾಣಿ ಶಾಸನಗಳಲ್ಲಿ ಸಾಹಿತ್ಯದ ರೂಪಗಳಾದ ಚಂಪೂ, ವೃತ್ತ ಮತ್ತು ಕಂದ ಬಳಕೆಗೊಂಡಿರುವುದು ಕಾಣುತ್ತೇವೆ. ಈ ನಾಡಿನ ಶಾಸನಗಳ ರಚನೆಯಲ್ಲಿ ಕರ್ನಾಟಕ ಖ್ಯಾತ ವೃತ್ತಗಳಾದ ಮಹಾಸ್ರಗ್ದರಾವೃತ್ತ, ಮತ್ತೇಭವಿಕ್ರಿಡೀತವೃತ್ತ, ಚಂಪಕಮಾಲೆ ವೃತ್ತ, ಶಾಲಿನೀ ವೃತ್ತ ಅನುಷ್ಟಪ, ಮಾಲಿನಿ, ಶಾರ್ದೂಲ ವಿಕ್ರೀಡಿತ ವೃತ್ತಗಳು ಮತ್ತು ಕಂದ ಪದ್ಯಗಳು ಕಂಡುಬಂದಿರುವುದು ಗಮನಾರ್ಹವಾಗಿದೆ. ಅವುಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಈ ನಾಡಿನ ಉಮ್ರಾಣಿ ಶಾಸನವು ಐದು ಮತ್ತೇಭವಿಕ್ರಿಡಿತ ವೃತ್ತವನ್ನು ಮತ್ತು ಒಂದು ಶಾರ್ದೂಲವಿಕ್ರೀಡಿತ ವೃತ್ತದ ಪದ್ಯಗಳನ್ನು ಒಳಗೊಂಡಿದೆ. ಅವನ್ನು ಖ್ಯಾತ ಕರ್ನಾಟಕ ವೃತ್ತದ ನಿಯಮಗಳ ಹಿನ್ನಲೆಯಲ್ಲಿ ಗಮನಿಸಲಾಗಿದೆ.

ಉದಾಹರಣೆಗಾಗಿ:

ಮತ್ತೇಭವಿಕ್ರೀಡಿತವೃತ್ತ:
ಪ್ರಜಯಂ ಪಾಳಿಸಿ ಭೃತ್ಯರಂ ಪೊರೆದು ವಿದ್ವಿಷ್ಟಾವನೀಪಾಳಕ

ಬ್ರಜವಂ ಕೊಂಡು ನತಾವನೀಶಕುಳವಂ ತಂನೊಳ್ ಸಮಂಮಾಡಿ ಕೂ
ಡೆ ಜಸಂಹಾಕಟತಟವೆಂಟುಮಂ ಬೆಳಗೆ ಪೆಂಪಿಂ ಪೊಲ್ತನಾಧಿಕ್ಯಮಭೂ
ಭುಜರಂ ರಾಯಮೂರಾರಿಸೋಮ ಮಹಿಪಂಶ್ರೀ ಬಿಜ್ಜಭೂಪಾತ್ಮ ಜಂ[೧೨]"

ಲಕ್ಷಣ

ಈ ಪದ್ಯಗಳಲ್ಲಿ ಮತ್ತೇಭವಿಕ್ರೀಡಿತದ ಎಲ್ಲ ನಿಯಮಗಳನ್ನು ಕಾಣಬಹುದು. ಪ್ರತಿ ಪಾದದಲ್ಲಿ ಇಪ್ಪತ್ತು ಅಕ್ಷರಗಳು ಬಂದಿವೆ. ಇದು ನಾಲ್ಕು ಸಾಲಿನ ಪದ್ಯವಾಗಿದ್ದು ಪ್ರತಿಯೊಂದು ಪಾದವು ಸ,ಭ,ರ,ನ,ಮ,ಯ ಗಣಗಳು ಮತ್ತು ಕೊನೆಯಲ್ಲಿ ಒಂದು ಲಘು, ಒಂದು ಗುರು ಬಂದಿದ್ದು, ಹದಿಮೂರನೆಯ ಸ್ಥಾನದಲ್ಲಿ ಯತಿ ಬಂದಿದೆ. ಪದ್ಯದ ಪ್ರತಿ ಪಾದದಲ್ಲಿ ಆದಿಪ್ರಾಸ ಬಂದಿರುತ್ತದೆ.

ಶಾರ್ದೂಲವಿಕ್ರೀಡಿತ ವೃತ್ತ

ಈ ವೃತ್ತದಲ್ಲಿಯೂ ಒಂದು ಪದ್ಯ ಇದೆ. ಶಾಸನದಲ್ಲಿ ಕಂಡುಬರುತ್ತದೆ. ಈ ವೃತ್ತದ ನಿಯಮಗಳ ಹಿನ್ನೆಲೆಯಲ್ಲಿ ಗಮನಿಸಿದಾಗ

ಕಾಮಕ್ರೋಧ ವಿದೂರರ ಪ್ರತಿ ಮಾವೊರ್ತ್ತಂಡೋಜ್ವಳ ಭ್ರಾಜಿತ
ಶ್ರೀಮತ್‌ಕೀರ್ತ್ತಿ ವಿಶಾಳರಬಜ ಚರಿತ್ರೋದ್ ಭಾಸಿಗಳ್ ರುಗ್ಯಜು
ಸ್ಯಾರ್ಮಾಥರ್ಬ್ಬಣದೇವ ಪಾಠಗರಿಳಾಧೀಶಾರ್ಚ್ಚಿತ ಸ್ವರ್ತ್ಯ ಸತ್
ಸೀಮಾಸ್ತೋಮರೆನಿಪ್ಪರಾ ವಸುಮತೀದೇವಕ್ಕಳತ್ಯೂರ್ಜಿತರ್[೧೩]"

ಲಕ್ಷಣ

ನಾಲ್ಕು ಪಾದವುಳ್ಳ ಸಮವೃತ್ತ ಪರ್ಯ ಪ್ರತಿ ಚರಣದಲ್ಲಿ ಹತ್ತೊಂಬತ್ತು ಅಕ್ಷರಗಳಿವೆ. ಪ್ರತಿಯೊಂದು ಸಾಲಿನಲ್ಲಿ ಮ,ಸ,ಜ,ಸ,ತ,ತ ಗಣಗಳಿದ್ದು ಹನ್ನೆರಡನೆಯ ಅಕ್ಷರ ಸ್ಥಾನದಲ್ಲಿ 'ಯತಿಯು'ಇರುವುದು ಹಾಗೂ ಈ ವೃತ್ತದ ಪ್ರತಿಯೊಂದು ಚರಣದ ಆದಿಯಲ್ಲಿ ಮೂರು ಗುರುಗಳು ಬರುತ್ತವೆ.

ಕಂದಪದ್ಯ

ಕಣಂಬಡೆ ನಾಡಿನ ಉಮ್ರಾಣಿ ಶಾಸನ[೧೪]" ಮತ್ತು ಕೊಟಕನೂರು"ಶಾಸನಗಳಲ್ಲಿ[೧೫] ಒಟ್ಟು ಇಪ್ಪತ್ತು ಕಂದಪದ್ಯಗಳು ಬಳಕೆಯಾಗಿರುವುದು ಗೊತ್ತಾಗುತ್ತದೆ. ಉದಾಹರಣೆಗಾಗಿ ಕೆಲವೊಂದು ಕಂದಪದ್ಯಗಳನ್ನು ಮಾತ್ರ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಕಂದಪದ್ಯವು ನಾಲ್ಕು ಸಾಲುಗಳ ಒಂದು ಛಂದೋಬಂಧವಾಗಿದ್ದು; ಹಳಗನ್ನಡ ಚಂಪೂ ಕಾವ್ಯಗಳಲ್ಲಿ ಬಳಕೆಯಾದಂತೆ ಶಾಸನಗಳಲ್ಲಿಯೂ ಬಳಕೆಗೊಂಡಿರುವುದು ಗಮನಾರ್ಹ. ಕನ್ನಡ ಸಾಹಿತ್ಯದ ರತ್ನತ್ರಯರಾದ ಪಂಪ, ರನ್ನ, ಪೊನ್ನರು ವೃತ್ತಗಳ ನಡುವೆ ಕಂದಪದ್ಯಗಳನ್ನು ವಿಶೇಷವಾಗಿ ಬಳಸಿಕೊಂಡಿದ್ದು ಕಂಡುಬರುತ್ತದೆ.

ಕಂದ ಸಂಸ್ಕೃತದಲ್ಲಿ ಆರ್ಯಗೀತ ಎನಿಸಿದರೂ, ಪ್ರಾಕೃತದಲ್ಲಿ "ಸ್ಕಂದಕ" ಎನಿಸಿದ ಛಂದೋವಿಧಾನವು ಕನ್ನಡದಲ್ಲಿ ಕಂದವಾಗಿದೆ.[೧೬]"

ಲಕ್ಷಣ

ಕಂದವು ನಾಲ್ಕು ಪದಗಳಿಂದ ಕೂಡಿದ ಅರ್ಧ ಸಮವೃತ್ತ ಪದ್ಯದ ಮೊದಲನೆಯ ಮತ್ತು ಮೂರನೆಯ ಪಾದಗಳಲ್ಲಿ ನಾಲ್ಕು ಮಾತ್ರೆಯ ಮೂರು ಗುಣಗಳು ಬರುತ್ತವೆ. ಎರಡನೆಯ ಮತ್ತು ನಾಲ್ಕನೆಯ ಪಾದಗಳಲ್ಲಿ ನಾಲ್ಕು ಮಾತ್ರೆಗಳು ಐದು ಗಣಗಳು ಬರುತ್ತವೆ. ಮೂರು, ಐದು ಮತ್ತು ಏಳನೆಯ ವಿಷಮ ಸ್ಥಾನದಲ್ಲಿ ಜಗಣ ಬರಕೂಡದು. ಎರಡು ಮತ್ತು ನಾಲ್ಕನೆಯ ಪಾದಗಳ ಕೊನೆಯ ಅಕ್ಷರವು ಕಡ್ಡಾಯವಾಗಿ ಗುರು ಆಗಿರಬೇಕು.

ಆರು ಮತ್ತು ಹದಿನಾಲ್ಕನೆಯ ಸ್ಥಾನದ ಗಣವು ಮಧ್ಯ ಗುರುವುಳ್ಳ ಜಗಣವಾಗಲಿ ಅಥವಾ ಸರ್ವಲಘುಗಣವಾಗಲಿ ಆಗಿರಬೇಕು. ಹೀಗೆ ಬಂದ ಪಕ್ಷದಲ್ಲಿ ಮೊದಲಿನ ಹ್ರಸ್ವಾಕ್ಷರ ಮುಂದೆ ಯತಿ ಇರುತ್ತದೆ.

ಈ ಮೇಲಿನ ಲಕ್ಷಣಕ್ಕೆ ಅನುಗುಣವಾಗಿ ಉಮ್ರಾಣಿ ಶಾಸನದಲ್ಲಿ ಬಳಕೆಯಾದ ಒಂದು ಕಂದ ಪದ್ಯವನ್ನು ಉದಾಹರಣೆಯಾಗಿ ತೆಗೆದುಕೊಳ್ಳಲಾಗಿದೆ.

ಭೂದಾನಂ ಗೃಹದಾನಂ
ಗೋದಾನಂ ವಸ್ತ್ರವಿತ್ತ ಭೋಜನ ಕನ್ಯಾಂ
ಬಾದೇಂ ಶ್ರೀ ಕಲ್ಲಿಸೆಟ್ಟಿ ವಿಪುರ್ಗ್ಗೆಲ್ಲಂ॥

ಕೊಕಟನೂರು ಶಾಸನದಲ್ಲಿ ಬಳಕೆಯಾಗಿರುವ ಕಂದ ಪದ್ಯವನ್ನು ಛಂದಸ್ಸಿನ ಹಿನ್ನಲೆಯಲ್ಲಿ ಒಂದು ಪದ್ಯವನ್ನು ಉದಾಹರಣೆಯಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಅದು ಈ ಕೆಳಗಿನಂತಿದೆ.

ಶಾಲೆಯ ಪರಿಸೂತ್ತದೊಳಾ
ತ್ಮಾಲಯಮಂ ಮಾಡಿಕೊಳ್ವದಲ್ಲದೆ ಪೆಂತೊ
ನ್ವಾಲಯ ದೊಳಿರ್ಪ್ಪವಂ ಪ್ರತಿ
ಕೂಲಂ ಲೋಲಂ ನಿಮಿಷ್ಪನಲ್ಲಂ ದುಷ್ಟಂ॥

ಲಕ್ಷಣ

ಮೊದಲನೆಯ ಮತ್ತು ಮೂರನೆಯ ಪಾದಗಳಲ್ಲಿ ನಾಲ್ಕು ಮಾತ್ರೆಯ ಮೂರು ಗಣ ಬಂದಿದೆ. ಎರಡನೆಯ ಮತ್ತು ನಾಲ್ಕನೆಯ ಪಾದದಲ್ಲಿ ನಾಲ್ಕು ಮಾತ್ರೆ ಐದು ಗಣಗಳಿವೆ. ಮೂರು, ಐದು ಮತ್ತು ಏಳನೆಯ ವಿಷಮಸ್ಥಾನದಲ್ಲಿ ಜಗಣ ಬಂದಿರುವದಿಲ್ಲ. ಎರಡು ಮತ್ತು ನಾಲ್ಕನೆಯ ಪಾದಗಳ ಕೊನೆಯಲ್ಲಿ ಅಕ್ಷರ ಕಡ್ಡಾಯವಾಗಿ ಗುರು ಆಗಿದೆ. ಆರು ಮತ್ತು ಹದಿನಾಲ್ಕನೆಯ ಸ್ಥಾನ ಗಣವು ಜಗಣ ಅಥವಾ ಸರ್ವ ಲಘುವಿನ ಗಣ ಆಗಿರಬೇಕೆಂಬ ನಿಯಮದಂತೆ ಇಲ್ಲಿ ಜಗಣ ಬಂದಿದೆ.

ಕಣಂಬಡೆ ನಾಡಿನಲ್ಲಿ ಕೊಟ್ಟಲಗಿ ಸಮಾವಿಷ್ಟವಾಗಿರುವುದರಿಂದ ಹಾಗೂ ಉಮ್ರಾಣಿ ಶಾಸನವು ಕೊಟ್ಟಲಗಿ ಗ್ರಾಮವನ್ನು ಉಲ್ಲೇಖಿಸುವುದರಿಂದ ಕಣಂಬಡೆ ನಾಡಿನ ಶಾಸನಗಳನ್ನು ಆಧರಿಸಿ ಶಾಸನಗಳಲ್ಲಿ ಛಂದಸ್ಸನ್ನು ಅಧ್ಯಯನ ಮಾಡಲಾಗಿದೆ. ಅಧ್ಯಯನಕ್ಕೊಳಪಡಿಸಿರುವ ಶಾಸನಗಳಲ್ಲಿ ದೊರಕಿರುವ ಶಾಸನಗಳ ಗುಣಲಕ್ಷಣಗಳನ್ನು ಹೇಳುವ ಸಂದರ್ಭದಲ್ಲಿ ಕೆಲವೊಂದು

ಲಘುಗುರುಗಳು ಲಕ್ಷಣಕ್ಕೆ ಹೊಂದಾಣಿಕೆ ಇಲ್ಲದಿರುವುದು ಕಂಡುಬರುತ್ತದೆ. ಇವಕ್ಕೆ ಸಾಮಾನ್ಯವಾಗಿ ಖಂಡಿಸುವವನ ಕಣ್ತಪ್ಪು ಅಥವಾ ಸಂಪಾದನ ಕಾರ್ಯಮಾಡುವಾಗ ತ್ರುಟಿತವಾಗಿರುವ ಸಂಭವವೂ ಕಾರಣವಾಗಿರಬಹುದು.

ಕೊಟ್ಟಲಗಿ ಶಾಸನ

ಇದು ಕ್ರಿಶ. ೧೦೨೨ ರ ಕಲ್ಯಾಣಿ ಚಾಲುಕ್ಯರ ಎರಡನೇ ಜಯಸಿಂಹನ ಶಾಸನವಾಗಿದೆ. ಈ ಶಾಸನವು ಗದ್ಯ ಪ್ರಕಾರದಲ್ಲಿದೆ. ದಾನಶಾಸನವಾದ ಈ ಶಾಸನವು ಕೊಟ್ಟಲಗಿ ಗ್ರಾಮದ ಗದ್ಯ ಸಾಹಿತ್ಯವನ್ನು ಪ್ರತಿನಿಧಿಸುತ್ತದೆ.

ಶಾಸನದಲ್ಲಿ ಬಳಕೆಯಾದ ಭಾಷೆ ಹಾಗೂ ವಿಷಯವಸ್ತುವನ್ನು ಗಮನಿಸಿದಾಗ; ಇದಕ್ಕೂ ಮೊದಲೇ ಗ್ರಾಮವಿದ್ದು ಸಾಕಷ್ಟು ಉತ್ತಮವಾದ ಭಾಷಾ ಶೈಲಿಯಿತ್ತೆಂಬುದು ತಿಳಿಯುತ್ತದೆ. ಕೊಟ್ಟಲಗಿ ಶಿಕ್ಷಣ ಕೇಂದ್ರವೊಂದಕ್ಕೆ ದಾನವಾಗಿ ಉಂಬಳಿಯಾಗಿ ಕೊಡಮಾಡಲ್ಪಟ್ಟ ಹಳ್ಳಿಯಾದುದರಿಂದ; ಕೊಟ್ಟ ದಾನದ ಬಗ್ಗೆ ಶಾಶ್ವತ ಕುರುಹಾದ ಶಾಸನವನ್ನು ನಡೆಸಿಕೊಟ್ಟ ಗ್ರಾಮದ ಜನ ಪ್ರತಿಭಾವಂತರು ಆಗಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಹೀಗೆ ಗ್ರಾಮವು ಪರಂಪರೆಯಲ್ಲಿ ತನ್ನದೇ ಆದ ಸ್ಥಾನವನ್ನು ಹೊಂದಿದೆ.

ಆಧುನಿಕ ಶಿಷ್ಟ ಸಾಹಿತ್ಯ

ಆಧುನಿಕ ಶಿಷ್ಟ ಸಾಹಿತ್ಯದ ಕುರಿತು ವಿವೇಚಿಸಿದಾಗ ಅಷ್ಟಾಗಿ ಯಾವ ಕೃತಿಗಳು ಗ್ರಾಮದಲ್ಲಿ ರಚನೆಯಾಗಿದ್ದು ಕಂಡುಬರದೇ ಇದ್ದರೂ; ಒಂದು ಕವನ ಸಂಕಲನ ರಚನೆಯಾಗಿರುವದು ಕಂಡುಬರುತ್ತದೆ.

ಗ್ರಾಮದವರೇ ಆದ ಶ್ರೀ ಬಿ.ಕೆ. ಮಲಾಬಾದಿ ಅವರು ಮೇ ೧೯೬೯ ನೇ ಇಸ್ವಿಯಲ್ಲಿ "“ಮಲ್ಲಿಗೆ”" ಎಂಬ ಕವನ ಸಂಕಲನ ಬಿಡುಗಡೆ ಮಾಡಿರುವುದು ಕಂಡುಬರುತ್ತದೆ. ಈ ಕವನಸಂಕಲನದಲ್ಲಿ ಒಟ್ಟು ೪೦ ಕವನಗಳನ್ನು ರಚಿಸಿರುವುದು ಕಂಡುಬರುತ್ತದೆ. ಇವುಗಳಲ್ಲಿ ೮,೯ ಹಾಗೂ ೧೦ನೇ ಪದ್ಯಗಳು ಗ್ರಾಮದ ವಿಷಯವನ್ನು ತಿಳಿಸುವ ಪದ್ಯಗಳಾಗಿವೆ. ೯ನೆಯ ಪದ್ಯದಲ್ಲಿ ಗ್ರಾಮದ ಹೆಸರು, ಭೌಗೋಳಿಕ ವಿಚಾರ, ಸ್ಥಳನಾಮದ ವಿಚಾರ, ಗಿಡಮರ ಬಳ್ಳಿಗಳ ವಿಚಾರ, ಗ್ರಾಮದೇವತೆಗಳ ವಿವರ, ಮಣ್ಣು, ಹಳ್ಳ ಹಾಗೂ ಗ್ರಾಮದ ಡೋಣಿ ನದಿಯ ಕುರಿತು ವಿವರಿಸಲಾಗಿದೆ. ಗ್ರಾಮದ ಜಾತಿ ಸಾಮರಸ್ಯದ ವಿಚಾರವನ್ನು ಕೂಡ ವಿವರಿಸಲಾಗಿದೆ. ಆರಂಭದ ಕವನ ಮಲ್ಲಿಗೆಯಿಂದ ಹಿಡಿದು "ಭಾರತ ಕೀರ್ತಿ ಹೆಚ್ಚಲಿ" ಎನ್ನುವವರೆಗೆ ಕವಿ ಹೃದಯವು ಪ್ರತಿಯೊಬ್ಬರೂ ನಿತ್ಯ ವಾಸ್ತವ ಜೀವನದಲ್ಲಿ ಕಣ್ಣಾರೆ ಕಂಡೂ ದುರ್ಮಾರ್ಗಕ್ಕಿಳಿದು ಅದರಿಂದ ಅನೇಕ ಜನಗಳು ಬದುಕಿನ ಪಾವಿತ್ರ್ಯತೆಯನ್ನು ಕಳೆದುಕೊಂಡು ನೀರಸವಾದ ಬದುಕನ್ನು ಸಾಗಿಸಿ ಸಮಾಜದಿಂದ ದೂರಾಗಿ, ಬಾಳಿನುದ್ದಕ್ಕೂ ದುಃಖಿತರಾಗಿ, ಬದುಕುವುದನ್ನು ನಾವು ದಿನವಿಡೀ ನೋಡುತ್ತೇವೆ. ಇಂತಹ ಅನಾಚಾರ, ಅವಿಚಾರಗಳಿಂದ ಮನುಜನ ಯೋಗ್ಯತೆಯು ನಿಜಕ್ಕೂ ನಷ್ಟವಾಗಿ; ಅವನು ಹಣದ ಕೊರತೆ, ಸತತ ಚಿಂತೆ, ಮನಸ್ಸಿನ ಅಶಾಂತತೆ ಜಿಗುಪ್ಸೆಗಳ ಮಧ್ಯದಲ್ಲಿ ಸಿಲುಕಿ; ದೇಹದಿಂದ ಮನೆತನದಿಂದ ತುಂಬಾ ಬಡವಾಗುವನಲ್ಲದೇ ಸೂಕ್ತ ಬಾಳಿನ ಹಿಡಿತದಿಂದ ದೂರಾಗುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಮಾನವ ಇವುಗಳನ್ನು ಯಾವ ರೀತಿಯಿಂದ ಹೋಗಲಾಡಿಸಿ ತನ್ನ ಅನಂತ

ಸುಖದ ಬದುಕಿನ ಗೋಪುರವನ್ನು ಕಟ್ಟುವ ಸುಮಾರ್ಗದಿಂದ ನಡೆಯುವ ಸೂಕ್ತ ಸಲಹೆಗಳ ಕುರಿತು ಕವನಗಳನ್ನು ರಚಿಸಿದೆ.

ಜನಪದ ಸಾಹಿತ್ಯ

ಜಾನಪದ ಇಂದು ನೆನ್ನೆಯದಲ್ಲ. ಅದಕ್ಕೆ ಪ್ರಾಚೀನ ಕಾಲದಷ್ಟು ಇತಿಹಾಸವಿದೆ.[೧೯] ಜನರಿಗೆ ಸಂಬಂಧಿಸಿದ್ದು ಜನಪದ. ಮನುಷ್ಯ ಭೂಮಿಯ ಮೇಲೆ ಉಗಮವಾಗಿ ವಿಕಾಸದ ಹಾದಿಯಲ್ಲಿ ಪ್ರಜ್ಞಾವಂತನಾದಂತೆಲ್ಲ ತನ್ನ ಬದುಕಿನ ಬಗೆಗೆ ಆಲೋಚನಾಪರನಾಗಿ ರೂಢಿಸಿಕೊಂಡ ಅಂಶಗಳೆಲ್ಲವೂ 'ಜನಪದ ಸಂಸ್ಕೃತಿ' ಎಂದೆನಿಸಿಕೊಳ್ಳುತ್ತವೆ. ಅಂದರೆ ಪ್ರಾಚೀನ ಕಾಲದ ಸಂಪ್ರದಾಯುಬದ್ಧ ಸಂಸ್ಕೃತಿಯ ಅಮೂಲ್ಯ ಅಂಶಗಳನ್ನು ಅರ್ಥಪೂರ್ಣವಾಗಿ ಗರ್ಭೀಕರಿಸಿಕೊಂಡಿರುವಂತದ್ದು ಜನಪದ. ಈ ರೀತಿಯಲ್ಲಿ ಕಂಡುಬರುವ ಮನುಕುಲದ ಮೊದಲ ಇತಿಹಾಸವೇ ಜನಪದ.

ಜನರಿಗೆ ಸಂಬಂಧಪಟ್ಟ ವಸ್ತು ವಿಷಯಗಳೆಲ್ಲವೂ ಜಾನಪದವಾಗಿ ಪರಿಣಮಿಸುತ್ತವೆ. ಮೊದಲಿಗೆ ಇದು ಪಾಮರರದೆಂದು ಉಪೇಕ್ಷಿಸಲಾಗಿತ್ತು. ಇಂದು ಜಗತ್ತಿನಾದ್ಯಂತ ಸರ್ವಶ್ರೇಷ್ಠ ಎಂದು ಭಾವಿಸಲಾಗಿದೆ. ಆದಿಮಾನವನಿಂದ ರೂಪಿತವಾಗಿ ತಲೆಮಾರಿನಿಂದ ತಲೆಮಾರಿಗೆ ಅನುಕರಣಾತ್ಮಕವಾಗಿ ಸಾಗಿಬಂದು; ನೆನಪಿನಲ್ಲಿ ಉಳಿಯುತ್ತ ತನ್ನ ಪರಂಪರೆಯನ್ನು ಉಳಿಸಿಕೊಂಡಿದೆ.

ಮಾನವ ಸಂಸ್ಕೃತಿಯನ್ನು ಅಧ್ಯಯನ ನಡೆಸುವ ಶಾಸ್ತ್ರಗಳಲ್ಲಿ ಜಾನಪದ ಪ್ರಮುಖ ಪಾತ್ರ ವಹಿಸುತ್ತದೆ. ಸಾಮಾನ್ಯವಾಗಿ ಸಂಸ್ಕೃತಿಯನ್ನು ಜನಪದ ಸಂಸ್ಕೃತಿ ಮತ್ತು ಶಿಷ್ಟಸಂಸ್ಕೃತಿ ಎಂದು ಎರಡು ಅಂಗಗಳಲ್ಲಿ ಗುರುತಿಸಲಾಗುತ್ತದೆ. ಮಾನವಶಾಸ್ತ್ರ ಸಮಗ್ರ ಸಂಸ್ಕೃತಿಯನ್ನು ಅಧ್ಯಯನ ಮಾಡಿದರೆ; ಜಾನಪದ ಪರಂಪರಾಗತ ವಿಷಯಗಳನ್ನು ಪ್ರತ್ಯೇಕಿಸಿಕೊಂಡು ತನ್ನ ಅಧ್ಯಯನ ವ್ಯಾಪ್ತಿಗೆ ಒಳಪಡಿಸಿಕೊಳ್ಳುತ್ತದೆ. ಸಹಸ್ರಾರು ವರ್ಷಗಳ ಮಾನವ ಜೀವನ ಯಾತ್ರೆಯಲ್ಲಿ ಒಂದು ಕಾಲಕ್ಕೆ ಜೀವನದ ಸಮಸ್ತ ವ್ಯಾಪಾರವೂ ಕಂಠಸ್ಥ ಸಂಸ್ಕೃತಿಯ ಮೂಲಕವೇ ತಲೆಮಾರಿನಿಂದ ತಲೆಮಾರಿಗೆ ಸಾಗಿಬರುತ್ತಿತ್ತು. 'ಕಂಠಸ್ಥ ಸಂಸ್ಕೃತಿಯು ಶಿಷ್ಟ ಸಂಸ್ಕೃತಿಯ ಉದಯದಿಂದ ಮುಕ್ಕಾಗಲಿಲ್ಲ. ತನಗೆ ಅನುಕೂಲವಾದ ಪರಿಸರದಲ್ಲಿ ಅದು ಉಳಿದುಕೊಂಡೇ ಬಂದಿತು. ಇದನ್ನೇ ವಿದ್ವಾಂಸರು 'ಜಾನಪದ' ಎಂದು ಕರೆದರು. ಜಾನಪದದ ಸಾಂಸ್ಕೃತಿಕ ಮಹತ್ವವನ್ನು ಅರಿತ ವಿದ್ವಾಂಸರು ಅದನ್ನು ಶಿಷ್ಟಸಂಸ್ಕೃತಿಯಿಂದ ಪ್ರತ್ಯೇಕಿಸಿಕೊಂಡು ಅಧ್ಯಯನ ಮಾಡತೊಡಗಿದರು.

ಜಾನಪದ ಎನ್ನುವ ಪದ ಇಂಗ್ಲೀಷನಲ್ಲಿ ಈ೦ಟಞಟ೧೦ಡಿಜ ಎಂಬ ಪದಕ್ಕೆ ಸಮಾನಾರ್ಥವಾಗಿ ಬಳಕೆಯಾಗಿದೆ. ಇಂಗ್ಲೆಂಡಿನ ಜಾನ್ ಥಾಮ್ಸ ಎಂಬುವವರು ೧೮೪೬ರಲ್ಲಿ ಈ೦ಟಞಟ೧೦ಡಿಜ ಪದವನ್ನು ಕಂಡುಹಿಡಿದು ಬಳಸಿದನು. ಬಿ.ಎ. ಬಾಟ್ಕಿ ಅವರು ಜಾನಪದದ ವ್ಯಾಖ್ಯೆಯನ್ನು ಹೇಳುತ್ತ "In a purely oral culture everything is folklore' ಎಂದಿದ್ದಾರೆ.[೨೦] ಎಸ್ಪಿ ಮಲಿಸಾರ ಪ್ರಕಾರ 'ಜಾನಪದ ಒಂದು ದೊಡ್ಡ ಅನುಭವ ಭಂಡಾರ' ಎಂದು ಹೇಳಿದ್ದಾರೆ.[೨೧]

ಜಾನಪದವು ಲಿಖಿತ ದಾಖಲೆಗಳಿಗಿಂತ ಜನತೆಯ ಗ್ರಂಥಸ್ಥವಲ್ಲದ ಸಂಪ್ರದಾಯಿಕ ಮೊತ್ತ ಸಂಪ್ರದಾಯವನ್ನು ಕುರಿತಾದ ವಿಜ್ಞಾನ. ಯಾವುದೇ ಸಮಾಜದ ವಾಚಿಕ ಪರಂಪರೆಗಳ ಕಲೆ ಮತ್ತು ನಂಬಿಕೆಗಳ ಮೊತ್ತ[೨೨] ಎಂದು ಹಾ.ಮಾ. ನಾಯಕ ಹೇಳುತ್ತಾರೆ.

ನಾಗರೀಕತೆಗೂ ಮೂಲವಾದ ಶಿಷ್ಠ ಸಂಸ್ಕೃತಿಯಿಂದ ದೂರವಾದ ಪರಂಪರಾನುಗತವಾದ ಬೆಳವಣಿಗೆಗಳನ್ನು ಪಡೆದ ಜನಸಮುದಾಯದ ವಿಶಿಷ್ಟ ಸಂಸ್ಕೃತಿಯೇ ಜಾನಪದ[೨೩] ಎಂಬುದಾಗಿ ಜೀ.ಶಂ. ಪರಮಶಿವಯ್ಯ ವಿವರಿಸುತಾರೆ."

ಶಾಸ್ತ್ರೀಯ ಅಧ್ಯಯನಕ್ಕೆ ಒಳಪಡುವ ಕ್ಷೇತ್ರ ವಿಜ್ಞಾನವಾದ ಜಾನಪದದ ವರ್ಗೀಕರಣ ಅಗತ್ಯವಾದುದು. ಜಾನಪದದ ಮೂಲಕ್ರಿಯೆ ಸಂಗ್ರಹಕಾರ್ಯ. ವಿವಿಧ ಭೌಗೋಳಿಕ ಹಾಗೂ ಭಾಷಿಕ ಭಾಗಗಳಲ್ಲಿ ನಡೆದು ಅನಂತರ ವರ್ಗೀಕರಣ ನಡೆಯಬೇಕು. ಹೀಗೆ ವರ್ಗೀಕರಣಗೊಂಡ ಜಾನಪದ ಪ್ರಕಾರಗಳನ್ನು ಅದರ ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಇತರ ಮೌಲ್ಯಗಳಿಗಾಗಿ ವ್ಯಾಖ್ಯಾನಿಸಬೇಕಾಗುತ್ತದೆ.

ರಾಲ್ಫ್ ಸ್ಟೀಲ್ ಬಾಗ್ಸರವರು ಜಾನಪದ ಕ್ಷೇತ್ರದಲ್ಲಿ ೧೯೩೭ ರಿಂದಲೂ ಕೆಲಸಮಾಡುತ್ತ ಬಂದವರಾಗಿದ್ದಾರೆ. ಜಾನಪದ ವರ್ಗೀಕರಣದಲ್ಲಿ ಅವರು ಆರು ಹಂತಗಳನ್ನು ಇಟ್ಟುಕೊಂಡಿದ್ದಾರೆ. ಜಾನಪದ ಪ್ರಕಾರವೊಂದನ್ನು ಇಟ್ಟುಕೊಂಡು ಅದರ ಕೊನೆಯ ಘಟ್ಟದವರೆಗೆ ವಿಭಜಿಸುತ್ತ ಹೋಗುವುದೇ ವರ್ಗೀಕರಣದ ಮುಖ್ಯ ದೃಷ್ಟಿ. ಅವರು ಆರು ಹಂತಗಳನ್ನು ಬೇರೆ ಬೇರೆ ಹೆಸರುಗಳಲ್ಲಿ ಕರೆದು; ಕೆಲವು ಸಂಖ್ಯೆಗಳನ್ನು ಕೊಡುತ್ತಾರೆ. ೧.ಗುಂಪು, ೨.ಪಂಗಡ, ೩.ವರ್ಗ, ೪.ಪ್ರಕಾರ, ೫.ವಿಭಾಗ, ೬.ಉಪವಿಭಾಗ ಈ ಗುಂಪಿನಲ್ಲಿ ಎರಡನ್ನು ಬಿಟ್ಟರೆ ಉಳಿದವು ಜಾನಪದ ಪ್ರಮುಖ ಪ್ರಕಾರಗಳನ್ನು ನಿರ್ದೇಶಿಸುತ್ತವೆ. ಇದನ್ನು ೦ ಯಿಂದ ಚ ವರೆಗೆ ಸೂಚಿಸಲಾಗಿದೆ. ಬಾಗ್ಸರವರ ಪ್ರಕಾರ ೦ ಸಾಮಾನ್ಯ ಜಾನಪದಃ ಗದ್ಯ ಕಥನ, ಅ – ಲಾವಣಿ, ಹಾಡು, ನೃತ್ಯ, ಆಟ, ಸಂಗೀತ, ಗೀತ, ಆ –ನಾಟಕ, ಖ –ಮಾತು, ಈ – ಸಂಪ್ರದಾಯ, ಹಬ್ಬ, ಹರಿದಿನ, ಉ –ಭೂಗೋಳ, ಐ –ಭಾಷೆ, ಒ –ಕುಶಲಕಲೆ, ಓ –ಆಹಾರ, ಪಾನೀಯ, ಕ –ನಂಬಿಕೆ, ಖ –ಮಾತು, ಗಿ –ಗಾದೆ, ಘ –ಒಗಟು ಈ ಗುಂಪುಗಳಲ್ಲಿ ೦,ಐ,ಉ ಈ ಮೂರನ್ನು ಬಿಟ್ಟರೆ ಉಳಿದವು ನೇರವಾಗಿ ಜಾನಪದದ ಬೇರೆ ಬೇರೆ ಪ್ರಕಾರಗಳಿಗೆ ಸಂಬಂಧಪಡುತ್ತವೆ. ಈ ವರ್ಗೀಕರಣವೇ ಕೊನೆಯಲ್ಲಿ ಹೀಗೆಯೇ ಮುಂದುವರೆಯುವ ಅವಕಾಶವಿದೆಯೆಂದು ಬಾಗ್ಸರವರು ಹೇಳುತ್ತಾರೆ.

೮.೩.೧. ಜನಪದ ಗೀತೆ

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಒಂದಾಗಿರುವ ಈ ಜನಪದ ಗೀತೆ ಜಾನಪದ ಸಂಸ್ಕೃತಿಯ ಅಂಗವೂ ಹೌದು. ಇದು ಗ್ರಾಮೀಣ ಅನಕ್ಷರಸ್ಥ ಜನರ ದೃಷ್ಟಿಯಾದುದರಿಂದ ಇದನ್ನು ಹಳ್ಳಿಯ ಹಾಡು ಎಂದು ಕರೆಯಲಾಗಿದೆ. ಏಕೆಂದರೆ ಹಳ್ಳಿಗರು ಎದೆ ತುಂಬಿ ಹಾಡುವ ನಾದಮಯ ಸೊಲ್ಲಾಗಿದೆ. ಪಲ್ಲವಿಯ ಮೂಲಕ ಕಟ್ಟಿದ ಈ ಹಾಡು ಕರ್ಣಾಕರ್ಣಿಯಾಗಿ; ತಲೆಮಾರಿನಿಂದ ತಲೆಮಾರಿಗೆ ಸಾಗಿಬರುವಾಗ ಆಸಕ್ತಿಯುಳ್ಳ ತೀಕ್ಷ್ಣಮತಿಗಳ ನಾಲಿಗೆಯ ಮೇಲೆ ನಲಿಯುತ್ತದೆ. ಸಾಮಾನ್ಯವಾಗಿ ಜನರೇ ಹೇಳುವಂತೆ ಇದು ಒಂದು

ಪದ ಅಥವಾ ಹಾಡು. ಹಳ್ಳಿಯ ಅವಿದ್ಯಾವಂತ ಜನರು ಈ ಹಾಡನ್ನು ಮೈಗೂಡಿಸಿಕೊಂಡಿರುವವರಿಗೆ ಒಂದು ಪದ ಹೇಳು, ಒಂದು ಹಾಡೇಳು ಎನ್ನುತ್ತಾರೆ. ಆದ್ದರಿಂದ ಹಳ್ಳಿಗರ ಬಾಯಲ್ಲಿ ಹಾಡಾಗಿ ಹರಿಯುವ ಇದು ಕಂಠಸ್ಥ ಪರಂಪರೆಯ ಜೀವಾಳವಾಗಿದೆ. ಇದು ಶಿಷ್ಟ ಕಾವ್ಯಕ್ಕಿಂತ ಭಿನ್ನವಾಗಿ ಕಂಡುಬರುವ ದೇಶಿ ಸಂಸ್ಕೃತಿಯಾಗಿದೆ. ಒಟ್ಟಾರೆ ಭೂತಕಾಲದ ಅವಿದ್ಯಾವಂತರು ಮಧುರವಾಗಿ ಮತ್ತು ರಾಗಬದ್ಧವಾಗಿ ಹಾಡಿರುವುದೇ ಜನಪದ ಗೀತೆಯಾಗಿದೆ.

ಅಜ್ಞಾತ ವ್ಯಕ್ತಿಯಿಂದ ಎಂದೋ ಉಗಮಗೊಂಡ ಈ ಜನಪದ ಗೀತೆ ಒಬ್ಬ ವ್ಯಕ್ತಿಯಿಂದಲೇ ಒಂದು ಸ್ಪಷ್ಟ ರೂಪತಾಳಿದೆ ಎಂದು ಭಾವಿಸಲು ಸಾಧ್ಯವಿಲ್ಲ. ಇದು ಸಮೂಹ ಸೃಷ್ಟಿ ಕಾಲದ ಹಾದಿಯಲ್ಲಿ, ವಾಕ್ ಪರಂಪರೆಯಲ್ಲಿ ಸಾಗುವಾಗ ನಿರಂತರವಾಗಿ ಹೊಸತನ ಕಂಡುಕೊಳ್ಳುತ್ತ; ಮೊದಲಿದ್ದ ಗೀತೆಗೆ ಮತ್ತಷ್ಟು ಸೇರ್ಪಡೆಯಾಗುತ್ತ, ಪರಿಷ್ಕೃತವಾಗುತ್ತ ಬದಲಾಗುತ್ತ ಭಿನ್ನಪಾಠಗಳು ಮತ್ತು ಭಿನ್ನರೂಪಗಳನ್ನು ಹೊಂದಿ ಬೆಳೆದಿದೆ. ಒಂದು ಸ್ಪಷ್ಟರೂಪವಾಗಿ ನಿಲ್ಲುವವರೆಗೂ ಹೀಗಾಗಿರಲು ಸಾಧ್ಯ. ಈ ದೃಷ್ಟಿಯಿಂದ ಇದು ಸಾಮೂಹಿಕ ಸೃಷ್ಟಿ. ಈ ಬೆಳವಣಿಗೆಯ ಸ್ವರೂಪವನ್ನು ಸಾಮೂಹಿಕ ಪುನರ್ ಸೃಷ್ಟಿ ಎಂದೇ ಭಾವಿಸಲಾಗಿದೆ. ಹೀಗಾಗಿ ಸಾರ್ವತ್ರಿಕತೆ ಜನಪದ ಗೀತೆಯ ಪ್ರಮುಖ ಲಕ್ಷಣವಾಗಿದೆ. ಈ ಜನಪದ ಗೀತೆಯ ರಚನೆ ಯಾವುದೇ ಸಾಂಪ್ರದಾಯಿಕ ತಂತ್ರ ಮತ್ತು ಸೂತ್ರ ಬದ್ಧವಾದುದಲ್ಲ. ಹಾಡುಗಾರರು ಲಯದ ಗತ್ತಿಗೆ ಅನುಗುಣವಾಗಿ ಪದಶಬ್ದ ಹಾಡಿದ್ದಾರೆ. ಅದೇ ದಾಟಿಯನ್ನು ಎಲ್ಲರೂ ಅನುಸರಿಸಿದ್ದಾರೆ. ಜನಪದ ಕವಿ ಅಥವಾ ಗಾಯಕನಲ್ಲೂ ಕೂಡ ಯಾವುದೇ ಸಿದ್ಧಾಂತ ಮತ್ತು ತಂತ್ರಪ್ರಜ್ಞೆ ಇರಲು ಸಾಧ್ಯವಿಲ್ಲ. ತಾನು ಹೇಳುತ್ತಿರುವುದು ಒಂದು ಕಲೆ ಎಂಬ ವಿಷಯ ಅವನಿಗೆ ಗೊತ್ತೇ ಇರಲಿಲ್ಲ. ಆದರೆ ಜನಪದ ಗೀತೆಗಳನ್ನು ಗಮನಿಸಿದಾಗ ಸರಳವಾದ ರಚನೆ, ಲಾಲಿತ್ಯವಾದ ಶೈಲಿ ಹೊಂದಿದ್ದು ಛಂದೋಬದ್ಧವಾಗಿ ರೂಪಗೊಂಡಿದೆ. ಸಾಕಷ್ಟು ಗೀತೆಗಳು ತ್ರಿಪದಿ ರೂಪದಲ್ಲಿದ್ದು ಅಂಶಗಣಾನ್ವಿತವಾದವುಗಳಾಗಿವೆ. ಅವರಿಗಾರೂ ಛಂದಸ್ಸಿನ ನಿಯಮಗಳನ್ನು ಹೇಳಿಕೊಟ್ಟಿರಲಿಲ್ಲ. ಲಾಲಿತ್ಯಪೂರ್ಣವಾದ ಪದಗಳನ್ನು ಹಿಡಿದು ಕಟ್ಟುವ ಮತ್ತು ಒಗ್ಗಿಸುವ ಕಲೆ ಅವರಿಗೆ ಕರಗತವಾಗಿತ್ತು ಎಂದೇ ಭಾವಿಸಬೇಕು. ಇದು ನಿರ್ಮಾಣವಾಗಬೇಕಾದರೆ ಯಾವುದೇ ಶಿಕ್ಷಣ ಮತ್ತು ಸತತ ಅಭ್ಯಾಸ ಜನಪದ ಕವಿಗಳಿಗಿರಲಿಲ್ಲ. ಯಾವುದೇ ಪ್ರಯತ್ನವಿಲ್ಲದೇ ಅಪ್ರಜ್ಞಾಪೂರ್ವಕವಾಗಿ ಹಿಂದಿನವರು ಕಟ್ಟಿದ; ಹಾಡಿದ ರೀತಿಯನ್ನು ನಂತರದ ತಲೆಮಾರಿನವರು ಅನುಸರಿಸುತ್ತ ಬಂದರು.

ಜನಪದ ಕವಿಗಳು ತಮ್ಮ ಸ್ವಪ್ರತಿಭೆಯಿಂದ ಜೀವಾನಾನುಭವವನ್ನು ಹಾಡಾಗಿ ಕಟ್ಟಿದ್ದಾರೆ. ಈ ದೃಷ್ಟಿಯಿಂದಲೇ ಅವರೇ ನಿರ್ಮಿಸಿರುವ ಕಾವ್ಯಗಳಲ್ಲಿ ಅವರ ವಿಶಿಷ್ಟ ಜೀವನ ದರ್ಶನವನ್ನು ಕಾಣಬಹುದು. ಹಾಗೆಯೇ ಉದ್ದಕ್ಕೂ ಜನಪದ ಮತ್ತು ಶಿಷ್ಟಪದಗಳ ನಡುವೆ ಕೊಳುಕೊಡೆ ನಡೆಯುತ್ತ ಬಂದಿದೆ. ಎಷ್ಟೋ ಜನಪದ ಗೀತೆಗಳು ಶಿಷ್ಟಮೂಲವಾಗಿರುವುದುಂಟು. ಪರಿಸರಕ್ಕನುಗುಣವಾಗಿ ಹಾಡುವ ದಾಟಿಯಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಒಂದೇ ಜನಪದ ಗೀತೆಯನ್ನು ಒಂದೊಂದು ಕಡೆಯವರು ಒಂದೊಂದು ರೀತಿಯಲ್ಲಿ ಧ್ವನಿ ವ್ಯತ್ಯಾಸ ಮಾಡಿ ಹಾಡುವುದುಂಟು. ಈ ರೀತಿ ಹಾಡುಗಾರರ ಪರಂಪರೆ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ಜೀವಂತವಾಗಿ ಉಳಿಯುತ್ತ ಮುಂದುವರೆಯುತ್ತದೆ. ಅದರ ಕಾಲವು

ಅನಿರ್ದಿಷ್ಟವಾಗುತ್ತದೆಂಬುದಕ್ಕೆ ಬ್ರಿಟಾನಿಕಾ ವಿಶ್ವಕೋಶವು ಒಂದು ಜನಪದ ಗೀತೆ ಹೊಸತೂ ಅಲ್ಲ, ಹಳತೂ ಅಲ್ಲ. ಅದು ಭೂತಕಾಲದಲ್ಲಿ ಆಳವಾಗಿ ಬೇರೂರಿ ಸತತವಾಗಿ ಹೊಸ ಹೊಸ ಕೊಂಬೆ, ಎಲೆ, ಹಣ್ಣುಗಳನ್ನು ಹೊಮ್ಮಿಸುವ ಅರಣ್ಯ ವೃಕ್ಷದಂತೆ ಎಂದಿದೆ. ಅದರಲ್ಲಿ ಕಾಲದ ಅಥವಾ ಕರ್ತೃತ್ವದ ಪ್ರಶ್ನೆ ಅಮುಖ್ಯ. ಅದು ನಿರಂತರವಾಗಿ ನವ ಚೈತನ್ಯ ಪಡೆದುಕೊಳ್ಳುತ್ತದೆ.

ಜನಪದ ಗೀತೆಗೂ, ಸಂಗೀತಕ್ಕೂ ಅವಿನಾಭಾವ ಸಂಬಂಧವಿದೆಯಾದರೂ ಶಾಸ್ತ್ರೀಯ ಸಂಗೀತದಂತೆ ಬಿಗಿಯಾದುದಲ್ಲ. ಯಾವ ಸಂದರ್ಭದಲ್ಲಾದರೂ ಸರಿಯೇ ಮನರಂಜನಾ ದೃಷ್ಟಿಯಿಂದ ಹಾಡುವ ಹಾಡುಗಳು ಅಪಾರವಾಗಿದ್ದರೂ; ಜನಪದ ಗೀತೆಗಳು ಮುಖ್ಯವಾಗಿ ಕ್ರಿಯಾತ್ಮಕವಾದವುಗಳಾಗಿವೆ. ಅಂದರೆ ಸಮಾಜದ ಮುಖ್ಯ ಚಟುವಟಿಕೆಗಳ ಅಂಗವಾಗಿ ಆಯಾಯ ಸನ್ನಿವೇಶಕ್ಕೆ ಅನುಗುಣವಾಗಿ ಜರುಗುತ್ತವೆ. ವ್ಯಕ್ತಿಯ ಜೀವನದ ಪ್ರಮುಖ ಘಟ್ಟಗಳಾದ ಬಾಲ್ಯ, ಮದುವೆ, ಮರಣ, ಹಬ್ಬ-ಹರಿದಿನ, ಬಿತ್ತನೆ, ಕೊಯ್ಲು ಮುಂತಾದ ವಿವಿಧ ಆಚರಣೆಗಳಿಗೆ ಸಂಬಧಿಸಿದ ಹಾಡುಗಳು ಆಯಾಯ ಸಾಮಾಜಿಕ ಸನ್ನಿವೇಶಗಳಲ್ಲಿ ಮಾತ್ರ ಉದ್ದೇಶಪೂರ್ವಕವಾಗಿ ಕ್ರಿಯಾತ್ಮಕವಾಗಿರುತ್ತವೆ. ಹೀಗಾಗಿ ಜನಪದ ಗೀತೆಗಳನ್ನು ಜಾನಪದ ವಿದ್ವಾಂಸರು ತಮ್ಮ ತಮ್ಮ ದೃಷ್ಟಿಗನುಗುಣವಾಗಿ ವಿಭಜಿಸುತ್ತಾರೆ. ಅಂಬಳಿಕೆ ಹಿರಿಯಣ್ಣನವರ ವಿಂಗಡನೆ ಸೂಕ್ತವಾದುದಾಗಿದೆ.[೨೫]” ಅವರ ವಿಂಗಡಣೆ ಈ ರೀತಿ ಇದೆ.

೧. ಕೆಲಸದ ಹಾಡುಗಳು
೨. ಹಬ್ಬ ಮತ್ತು ನೋಂಪಿಯ ಹಾಡುಗಳು
೩. ಜೀವನ ಚಕ್ರದ ಮುಖ್ಯ ಘಟ್ಟಗಳಲ್ಲಿ ಹಾಡುವ ಹಾಡುಗಳು
೪. ಕುಣಿತದ ಹಾಡುಗಳು
೫. ದೇವರ ಹಾಡುಗಳು

ಈ ವಿಭಾಗಗಳಿಗೆ ಸಂಬಂಧಪಟ್ಟಂತೆ ಕೆಲವು ಜನಪದ ಗೀತೆಗಳನ್ನು ಗಮನಿಸಿದಾಗ–

೧. ಕೆಲಸದ ಹಾಡುಗಳು : ಹಂತಿಯ ಹಾಡುಗಳು
ಬೀಸುವ ಪದಗಳು
ಕುಟ್ಟುವ ಹಾಡುಗಳು
ಹಚ್ಚೆಯ ಪದಗಳು

೨. ಹಬ್ಬ ಮತ್ತು ನೊಂಪಿಯ ಹಾಡುಗಳು : ಜೋಕುಮಾರನ ಹಾಡು
ಹೋಳಿ ಹಬ್ಬದ ಹಾಡು
ಅರಳೆಲೆ ಬಸವನ ಹಾಡು
ಗುಳ್ಳವ್ವನ ಪದಗಳು
ಹುತ್ತಪ್ಪನ ಹಾಡು
ಗುರ್ಜಿ ಪದಗಳು
ಬನ್ನಿಯ ಹಾಡುಗಳು
ಮೊಹರಂ ಪದಗಳು

ಮಂಗಳ ಗೌರಿ ಹಾಡು

ಅಂಟಕೆ ಪಂಟಿಕೆ ಪದಗಳು

ಕಲ್ಲಿ ತುರಾ ಹಾಡುಗಳು

೩. ಜೀವನ ಚಕ್ರದ ಮುಖ್ಯ ಘಟ್ಟಗಳಲ್ಲಿ : ಬಾಲ್ಯ, ಯೌವ್ವನ, ಮದುವೆ, ಸಾವು ಹಾಡುಗಳು

ಜೋಗುಳದ ಹಾಡುಗಳು

ಮೈ ನೆರೆಯುವಾಗ ಹಾಡುವ ಪದಗಳು

ಮದುವೆ ಹಾಡುಗಳು

ಸಾವಿನ ಸಂದರ್ಭದ ಹಾಡುಗಳು

೪. ಕುಣಿತದ ಹಾಡುಗಳು : ಕೋಲಾಟದ ಹಾಡುಗಳು

ಡೊಳ್ಳಿನ ಹಾಡುಗಳು

ಗುಮ್ಮಟೆ ಪದಗಳು

೫. ದೇವರ ಹಾಡುಗಳು : ದೇವತಾ ಸ್ತುತಿಪರ ಪದ್ಯಗಳು

ಕೆಲಸದ ಹಾಡುಗಳು

ಸಾಮಾನ್ಯವಾಗಿ ಜನಪದರು ತಮ್ಮ ನಿತ್ಯದ ಕೆಲಸ ಕಾರ್ಯಗಳಲ್ಲಿ ಮಗ್ನರಾಗಿರುತ್ತಿದ್ದದ್ದು ಸಹಜ. ನಿರಂತರವಾಗಿ ವರ್ಷದುದ್ದಕ್ಕೂ ಅದೂ ಕಾಲಮಾನಕ್ಕನುಗುಣವಾದ ಕೆಲಸ ಮಾಡುವಲ್ಲಿ; ಮಗ್ನರಾದ ಸಂದರ್ಭದಲ್ಲಿ, ತಮಗಾಗುವ ಬೇಸರ ಕಳೆಯುಲು ಹಲವಾರು ಮಾರ್ಗೋಪಾಯಗಳನ್ನು ಕಂಡುಕೊಂಡಿದ್ದರು. ಅದರಲ್ಲಿ ಕಥೆ, ಗಾದೆ, ಒಗಟು, ಹಾಡು, ನೃತ್ಯ ಹಲವಾರು ರೀತಿಯಲ್ಲಿ ಕಲೆಗಳು ಸಹಜವಾಗಿ ಅವರಿಗೆ ಕರಗತವಾಗಿದ್ದವು.

ಇಂತಹ ಹಾಡುವ ರೀತಿಯಲ್ಲಿ ಹಂತಿಯ ಹಾಡುಗಳು ಕೂಡ ಜನಪದರ ಅಮೂಲ್ಯ ಸಾಹಿತ್ಯವಾಗಿದೆ. ಕೊಟ್ಟಲಗಿ ಗ್ರಾಮದ ಜನಪದರು ಇಂದಿಗೂ ಈ ಹಾಡುಗಳನ್ನು ಸಂರಕ್ಷಿಸಿಕೊಂಡು ಬಂದದ್ದು ಸಹಜ ಸತ್ ಸಂಪ್ರದಾಯವೂ ಹೌದು. ಅಂತಹ ಹಾಡುಗಳನ್ನು ಗಮನಿಸಿದಾಗ ಕೃಷಿ ಚಟುವಟಿಕೆಗಳಿಗೆ ಪೂರಕವಾದ ಪ್ರಾಣಿ, ಪರಿಕರಗಳು, ದೈವ, ಈ ಎಲ್ಲದರ ಕುರಿತಾದ ವಿವರಗಳೇ ಹಲವಾರು ಪದ್ಯಗಳಲ್ಲಿ ಮೂಡಿ ಬಂದಿವೆ.

ಬಸವಣ್ಣನ ಜನ್ಮದ ಕುರಿತು ತನ್ನದೇ ಕಲ್ಪನೆಯಲ್ಲಿ ಈ ರೀತಿಯಾಗಿ ಹೇಳುತ್ತಾನೆ –

ಎಂಟೆತ್ತ ಹೊಡಕೊಂಡ ಕಂಟ್ಯಾಂದ ಬರುವಾಗ
ಗಂಟ ಬಿದ್ದಾಳೊ ಗಾವಂತ್ರಿ ಗಾವಂತ್ರಿ ಹೊಟ್ಟೆಲೆ
ಒಚಿಟ ಹುಟ್ಯಾನೊ ಬಸವಣ್ಣ

ಬಸವನ ಬರುವಿಕೆಗೆ ಅದ್ಭುತ ಕಲ್ಪನೆ ಕಟ್ಟುವಿಕೆಯನ್ನು ಈ ರೀತಿಯಾಗಿ ಕಾಣಬಹುದು.

ತುಂಬಿದ ಹೊಳೆಯಾಗ। ಕೊಂಬ ಕಾಣಸತಾವ
ಬಂಗಾರ ದಿಣಿಯ ಬಸವಣ್ಣ। ಬಂಗಾರ ದಿಣಿಯ
ಬಸವಣ್ಣ ಬರುವಾಗ। ತುಂಬಿದ ಗಂಗಾ ಬಯಲಾಗಿ

ಇನ್ನು ಹಂತಿಗೆ ಬೇರಾದ ಪರಿಕರಣೆಯ ಅವುಗಳಿಗೆ ಬಂಗಾರದ ಬಣ್ಣ ಕೊಡುವಿಕೆ ಬಸವಣ್ಣ ಹಂತಿ ಎಳೆಯುವಿಕೆಯನ್ನು ಇಲ್ಲಿ ಕಾಣಬಹುದು.

ಸರಗಂಟಿನ ಸರಪಳಿ। ಸರದಾಡೊ ಮುಗದಾಣಿ
ಶೇರ ಬಂಗಾರದ ಹಣೆಪಟ್ಟೊ। ಶೇರಬಂಗಾರದ ಹಣೆಪಟ್ಟ
ಕಟಗೊಂಡ ಬೊರ್‍ರ್ಯಾಡುತ್ತ ಹಂತಿ ತಿರಗ್ಯಾವು॥

ರೈತನಿಗೆ ಬಸವನೆಂದರೆ ಪಂಚಪ್ರಾಣ. ಹೀಗಾಗಿ ಅವುಗಳನ್ನು ಹಿಂಸಿಸುವುದು ಸಹಿಸದ ವಿಚಾರ. ಹೀಗಾಗಿ ಜನಪದ ಸಾಹಿತ್ಯದ ಹಂತಿ ಹಾಡುಗಳಲ್ಲಿ

ಕಗ್ಗಾಯಿ ಕಡಿಬ್ಯಾಡ। ಹಸಿಗಾಯಿ ಹರಿಬ್ಯಾಡ
ಬಸವನ ಹೂಡಿ ಹೊಡಿಬ್ಯಾಡ। ಬಸವನ ಹೂಡಿ
ಹೊಡಿಬ್ಯಾಡ ಸೋಮವಾರ ದಿವಸ ಹೊಸ ಮಗನಾಗಿ ತಿರುಗಲೋ

ಆ ಕೋಲ ಈ ಕೋಲ ಬಂಗಾರದ ಕೋಲ ಬಾರಕೋಲ
ಬಂಗಾರದ ಕೋಲ ಬಲಕ್ಕಿರುವ ಸಿಂಗಾರದ ಕೋಲ ರಾಗೋಲ

ಎಂದು ಕೃಷಿ ಉಪಕರಣದ ಕುರಿತು ವಿವರಿಸುತ್ತಾರೆ.

ಸರಗಂಟ ಸರಪಳಿ ಸರಜ್ಯಾನಮ್ಮೆತಗೋಳ
ಸರದಾರ ಓಣಿಲೆ ಬರತಾವೊ। ಸರದಾರ ಓಣಿಲೆ
ಬರುವ ನಮ್ಮೇತಗೊಳನ ಸಡಗರ ನೋಡುದಕ ಶಿವ ಬಂದ

ಶಿವನು ಕೂಡ ತಮ್ಮ ಎತ್ತುಗಳ ಸಂಭ್ರಮ ನೋಡುವುದಕ್ಕೆ ಆಗಮಿಸುತ್ತಾನೆ ಎಂದು ಕಲ್ಪಿಸಿಕೊಳ್ಳುತ್ತಾನೆ.

ಹತ್ತು ಹದನಾಕೆತ್ತ ಕಟ್ಟಿ। ಮೊಳಕಾಲಮಟ ಮದ ಮಾಡಿ
ಮೊಳಕಾಲಮಟ ಮದ ಮಾಡಿ। ಹೊತ್ತ ಏರಿ
ಹಂತಿ ಬಿಚ್ಚೇವು॥

ಹಂತಿ ಹೊಡೆಯುವಾಗ ಬಳಸುವ ಎತ್ತುಗಳ ಸಂಖ್ಯೆ ಸಮಯವನ್ನು ಈ ಮೇಲಿನ ಭಾಗದಲ್ಲಿ ಅರಿತುಕೊಳ್ಳಬಹುದಾಗಿದೆ.

ಸಾಮಾನ್ಯವಾಗಿ ಗ್ರಾಮೀಣ ರೈತನಿಗೆ ಭೂಮಿಯಲ್ಲಿರುವ ಬೆಳೆಯ ಕಾವಲು ರಕ್ಷಣೆ ಭಾರವನ್ನು ನಿಸರ್ಗದಲ್ಲಿರುವ ಸೂರ್ಯ, ಚಂದ್ರ, ನಕ್ಷತ್ರ, ದೇವರು ಕಾಪಾಡುವನೆಂಬ ನಂಬಿಕೆ. ಅದನ್ನು ಈ ಕೆಳಗಿನ ಪದ್ಯಗಳಲ್ಲಿ ಕಾಣಬಹುದು.

ಹೊಂಕಡ ಬಂಕಡ ತೆನೆಯೋ। ನಮ್ಮ ಲಂಕಿ ಹಣಮನ
ಕಾವಲೊ। ಮೂಡಲು ಹರಿತೊ ಮುತಾಳ ಕೂರಿಗಿ।
ನಮ್ಮ ಸೂರ್ಯ ಚಂದ್ರನ ಕಾವಲೊ॥

ಬೆಳ್ಳನ್ನು ಬೆಳಗಾಗಿ ಬೆಳ್ಳಿ ಮೂಡಲವಾಗಿ ಹೊಳ್ಳೊಳ್ಳಿ
ಮನ ಗರಿತೆಗೆದ। ಹೊಳ್ಳೊಳ್ಳಿ ಮನ ಗರಿ ತೆಗೆದ
ಆಡ್ಯಾವೊ ಗರತಿ ಗಂಗವ್ವನ ಉಡಿಯಾಗ

ಬಾಗೊಡಿ ಬಸವಣ್ಣ। ಬಾಗ್ಯಾವ ನಿನ ಕೋಡ
ಬಾಗಿ ಬಾರಣ್ಣ ಹೆಗಲಿಗಿ। ಬಾಗಿ ಬಾರಣ್ಣ ಹೆಗಲಿಗಿ
ಸಾಗಿ ಬಾರಣ್ಣ ಸಾಲಿಗಿ

ನೆಗಲ ಸಾಲ್ಯಾಗ ಲ್ಯಾವಳ ಬಿದ್ದಾವೊ। ಹಾವಂದ ಜೀವ
ಹೆದರ್‍ಯಾವೋ। ಹಾವಂದ ಜೀವ ಹೆದರ್‍ಯಾವೋ ನಮ್ಮೆತ್ತ
ತೀವಳದ ಗುರುತ ಹಿಡಿದಾವೋ

ಬಾಗೊಡಿನೆಂಬುದು ಬಾಲ್ಯಾರ ಪಟ್ಟಣ। ಮ್ಯಾಲ
ಚನ್ನಮ್ಮನ ಅರಮನೆ। ಮ್ಯಾಲ ಚನ್ನಮ್ಮನ
ಅರಮನಿ ಬಾಗಲದಾಗ। ಬಾಗಿ ನಿಂತಾನೊ ಬಸವಣ್ಣ

ಹಳ್ಳದ ಹೊಲ ಎಂದರೆ ಗಟ್ಟಿಯಾದ ಭೂಮಿ.ಆ ಭೂಮಿಯಲ್ಲಿ ಕೆಲಸ ಮಾಡಿದ ಎತ್ತುಗಳಿಗೆ ಬೇಗನೆ ಹಸಿವಾಗುತ್ತದೆ ಎಂಬ ಕಲ್ಪನೆ ರೈತನದು.

ಬೆಳ್ಳನ್ನ ಬಿಳಿಯತ್ತ। ಬೆಳ್ಳಿಯ ಬಾರಕೋಲ
ಹಳ್ಳದ ಹೊಲ ಹರಗ್ಯಾವೋ। ಹಳ್ಳದ ಹೊಲ
ಹರಗ್ಯಾವೋ ನಮ್ಮೆತ್ತ ತೆಳ್ಳನ್ನ ಹೊಟ್ಟಿ ಹಸದಾವೋ

ನಮ್ಮೂರ ರೈತ ಬಸವನ ಆಪ್ತ ಭಕ್ತ, ಹೀಗಾಗಿ ಬಸವಣ್ಣನವರನ್ನು ಬಾಗೋಡಿ ಬಸವನೆಂದು ಅನೇಕ ಪದ್ಯಗಳಲ್ಲಿ ಸಂಬೋಧಿಸಿದ್ದು ಕಂಡುಬರುತ್ತದೆ. ಅಲ್ಲದೇ ಬಾಗಲಕೋಟ ಜಿಲ್ಲೆ ಜಮಖಂಡಿ ತಾಲೂಕಿನ ಕಡಪಟ್ಟಿ ಬಸವಣ್ಣ, ಅಥಣಿ ತಾಲೂಕಿನ ಖಿಳೇಗಾಂವಿ ಬಸವಣ್ಣ ಹೀಗೆ ಬೇರೆ ಬೇರೆಯಾದ ಬಸವಣ್ಣನನ್ನು ನೆನದಿರುವದು ಕಂಡುಬರುತ್ತದೆ. ಒಟ್ಟಾರೆ ಬಸವನೆಂದರೆ ಭಕ್ತಿ ರೈತನಿಗೆ.

ಕಡಪಟ್ಟಿ ಬಸವಣ್ಣ ಕಲ್ಲಾಗ ನೆನೆದಾನೊ
ಕಲ್ಲೊತ್ತಿ ಸಣ್ಣ ಮಳಲೊತ್ತಿ। ನಮ್ಮ ಬಸವ
ಮಾಗಿಯ ನಿದ್ದಿಗಳದಾನೊ

ಕಡಪಟ್ಟಿ ಹಾದಿಲಿ ಅಡಕಿ ಬಿತ್ತವನಾರೊ
ನಡಕಟ್ಟಿನವರ ಧರಮರೊ। ನಡಕಟ್ಟಿನವರ
ಮನಿಮುಳದ ಹಣಪಟ್ಟಿನ ಹೋರಿ ಹದನಾರೊ

ಬಸವಣ್ಣ ಹುಟ್ಟಲಿ। ಹೊಸಪ್ಯಾಟಿ ಕಟ್ಟಲಿ
ರಸರಾಯರ ಕಬ್ಬ ಬೆಳೆಯಲಿ॥ ರಸರಾಯರ ಕಬ್ಬ ಬೆಳೆಯಲಿ
ಕಡಪಟ್ಟಿ ಬಸವಣ್ಣನ ತೇರ ಎಳೆಯಲಿ

ಆಜೂರ ಭೂಮ್ಯಾಗ। ಆಡ್ಯಾಡಿ ಮೇದಾನೊ
ಅಗರಾಣಿ ನೀರ ಕುಡದಾನೊ। ಅಗರಾಣಿ ನೀರ ಕುಡದಾನೊ
ಖಿಳೆಗಾವಿ ಬಸವಣ್ಣ ಆರಾಮ ನೋಡಿ ನೆನೆದಾನೊ

ಗ್ರಾಮದ ಜನಪದರು ಬಬಲಾದಿ ಸದಾಶಿವ ದೇವರಿಗೆ ನಡೆದುಕೊಳ್ಳುವದನ್ನು ಹಂತಿ ಪದ್ಯದಲ್ಲಿ ಕಾಣಬಹುದು

ಸದಾಶಿವ ನಿಮ್ಮ ಪಾದ ತುಪ್ಪದಲ್ಲಿ ತೊಳದೇನ
ಮತ್ತೆಲ್ಲಿ ತುಳದೇ ಕೊನಿಮುಳ್ಳ। ಮತ್ತೆಲ್ಲಿ ತುಳದೇ
ಕೊನಿಮುಳ್ಳ ಬಬಲಾದಿ ಒತ್ತಿನಾಗ ಹಾದಬರುವಾಗ

ಬಬಲಾದಿ ಮಠದಾಗ ಮೂರ ಕಾಲಿನ ಮಂಚ ಏಳ ಹೆಡಿ ಸರ್ಪ
ತೆಲಗುಂಬ। ಏಳಹೆಡಿ ಸರ್ಪ ತೆಲಗುಂಬ ಸದಾಶಿವ ಯೋಗಿ ನಿಮ್ಮ
ನೆಲಿಯ ತಿಳಿವಾಲ್ದ

ಮಗುವಿನ ಮೇಲಿನ ಅಕ್ಕರೆಯು ಈ ಕೆಳಗಿನ ಪದ್ಯಗಳಲ್ಲಿ ಹೀಗೆ ವ್ಯಕ್ತವಾಗಿದೆ.

ಮಾವಾರ ಹಿಂದಿಂದ ಮಾಳಿಗೆರುವರ್‍ಯಾರ ಮಾರುದ್ದ ಜುಲಪಿ
ಸುಲಿ ಹಲ್ಲ। ಮಾರುದ್ದ ಜುಲಪಿ ಸುಲಿ ಹಲ್ಲ ನನ್ನ
ಸಂಗಣ್ಣ ಮಾವಾರೊಳಗ ಚೆಲುವಾದ

ಹೋಳಗಿ ಹಂಚಿಟ್ಟ ಮಾಳಗಿ ಏರಿನ। ಸಾಲಿಂದ ಸರದಾರ
ಬರಲಿಲ್ಲ। ಸಾಲಿಂದ ಸರದಾರ ಬರಲಿಲ್ಲ। ನನ್ನ ಹರೀಶನ
ಮೋಜಿನ ಮಾಸ್ತರ ಬಿಡಲಿಲ್ಲ

ಮಾಣಿಕ ಕಳದರ ಮನೆಯಲ್ಲ ಹುಡಕಿನ।
ಕುಸ ಕಂದವನ ಕಿವಿಮುತ್ತ। ಕುಸ ಕಂದವನ
ಕಿವಿಮುತ್ತ ಕಳದರ ಓದು ಸಾಲೆಲ್ಲ ಹುಡುಕಿನ

ಅಣ್ಣ ತಮ್ಮರ ನೀವ ಜೋಡಿಲಿ ನಿಂದರ ಬ್ಯಾಡ್ರಿ ಮಂದಿಯ
ನೆದರ ನಿಮ್ಮ ಮ್ಯಾಲ। ಮಂದಿಯ ನಿ ನೆದರ ನಿಮ್ಮ ಮ್ಯಾಲ
ನಿನ್ನ ರಾಮಣ್ಣ ದಿಟ್ಟ್ಯಾಗ್ಯಾವ ಬಾಳಾ ಒಳಗೋಗ

ಸಹೋದರಿಯ ಮತ್ತು ತಾಯಿ ಮಕ್ಕಳ ಶ್ರೇಷ್ಠತೆಯನ್ನು ಜಾನಪದರು ಬಿಂಬಿಸುವ ರೀತಿ –

ಅಕ್ಕ ತಂಗೇರ ಹೊರತ ಮತ್ತೊಬ್ಬರ ಗೆಳತಿಲ್ಲ
ಮಕ್ಕಳ ಹೊರತ ಬಳಗಲ್ಲ। ಮಕ್ಕಳ ಹೊರತ ಬಳಗಲ್ಲ
ನನ್ನ ಹಡದವ್ವ ತಾಯವ್ವ ನಿನ್ನ ಹೊರತ ತವರಲ್ಲ
ಸೋದರ ಮಾವನ ಸೂರ್ಯ ಚಂದರನೆನ। ಬೆಳದಿಂಗಳೇನ
ಬಿಸಲೇನ ನನ್ನ ಹಡದವ್ವ ತಾಯವ್ವ ನಿನ್ನ ತಮ್ಮ ಹಾಡೆನ॥

ಅಕ್ಕರತಿ ತವರವರ ಅಡಕಿಯ ಬಿತ್ತ್ಯಾರ।
ಗಿಡಕೊಂದ ಗಿಣಿಯ ಸಲವ್ಯಾರ। ಗಿಡಕೊಂದ ಗಿಣಿಯ
ಸಲವ್ಯಾರ। ನಾಟಕಾರ। ಗಿಳಿ ಬೆದರ್‍ಯಾವ ಬಿಲ್ಲ
ಬಿಡಬ್ಯಾಡಿ

ಬಸವಣ್ಣನ ಹೆಣುತಿ ಹಸನುಳ್ಳ ನೀಲಮ್ಮ। ದಸರಿಪದ ಮ್ಯಾಲ
ಮಲಗ್ಯಾಳು। ದಸರಿಪದ ಮ್ಯಾಲ ಮಲಗ್ಯಾಳು। ದೇವಿ ಆರಾಮ ನೋಡಿ
ನೆಲದಾಳು॥

ಗಡಿನಾಡಿನ ಕುರಿತು ಹಾಡು

ಕಂಚಿನ ಕರಿಹಲಿಗಿ ಮಿಂಚ ವನಳಿಕ ದಿಮ್ಮ
ಗೊಂಚಲಿಳಿದಾವ ಗಡಿನಾಡ। ಗೊಂಚಲಿಳಿದಾವ ಗಡಿನಾಡ
ಬಾಲ್ಯಾರು ಕಂಚಿನಾರುತಿ ಬೆಳಗ್ಯಾರು

ಜಂಬಗಿ ಹಾದಿಲಿ ಜಂಬ ನೀಲದ ಗಿಡ। ಜಂಬ ನೀಲದ ಗಿಡ
ಜಲಿಸಬ್ಯಾಡೊ ಗಿಣಿರಾಮ। ಜಲ್ಲಿಸಬ್ಯಾಡೊ ಗಿಣಿರಾಮ ನಿಮ್ಮವ್ವ
ಮಲ್ಲಾಡದ ಹಣ್ಣ ತರತಾಳ

ಕುಂಬಳ ದಡಿ ಸೀರಿ। ಕುಣ ಕುಣದ ಉಡುವಾಗ
ಗಂಡನಿಲ್ಲೇನೊ ಇವಳಿಗೆ। ಗಂಡನಿಲ್ಲೇನೊ ಇವಳಿಗಿ
ಅಡವ್ಯಾಗ ಬಣ್ಣ ತಿರಗೇತೊ ಇವಳಿಗಿ

ಇಷ್ಟಲ್ಲದೇ **ಕನ್ನಡದ ಹೊರತಾಗಿ ಮರಾಠಿ ಭಾಷೆಯಲ್ಲಿನ ಹಂತಿಯ ಹಾಡುಗಳನ್ನು ಕೂಡ ಕನ್ನಡದ ಶೈಲಿಯಲ್ಲಿ ಹಾಡುವುದು** ಈ ಕೆಳಗಿನ ಪದ್ಯದಲ್ಲಿ ಕಾಣಬಹುದಾಗಿದೆ.

ಪಾತಾಳ ಲೇಸೂನ। ಪಾನ್ಯಾಲ್ಯಾ ಜಾವೂನ
ಪಾಯನಿಸರೂನ ಪಡಚಿಲೊ। ಪಾಯನಿಸರೂನ ಪಡಚಿಲೊ
ಏ ಪೋರಿ। ಗುಡಗ ಪೊಡುವ ವರಡಚಿಲೊ[೨೧]

ಸ್ತ್ರೀಯ ನಡತೆಯ ಕುರಿತು ಹಂತಿಯ ಹಾಡು

ಕುಂಟಲಗಿತ್ತಿಗಿ ಕುಸಬಿ ಹೂವಿನ ದಂಡಿ
ಎಂಟ ಹೂರಿ ಹಗ್ಗ ಗುಂಡ ಬಡಿಗಿ। ಎಂಟ್ಹೂರಿ ಹಗ್ಗ
ಗುಂಡ ಬಡಗಿಲಿ ಹೊಡದರ ಕುಂಟಲತನ ಬಿಡವಾಳೊ

ಓಡಿ ಹೊಗಲಿ ಬ್ಯಾಡ, ಗ್ವಾಡಿ ಜಗಿಯಲಿ ಬ್ಯಾಡ
ಗ್ವಾಡಿ ತೆಳಗ ತಿಳಿನಿರೊ। ಗ್ವಾಡಿಯ ತೆಳಗ ತಿಳಿ ನೀರ
ತಿಳಕ್ವಾರೋ ಪೋರಿ ನಿನ್ನ ಮನದಾಗ

ಮಳೆಗಾಲದ ಕುರಿತು

ಗುಡ್ಡದ ವಾರ್‍ಯಾಗ ಗುಡ ಗುಡ ಅನ್ನುವದೆನೊ
ದೊಡ್ಡವರ ಮಗ ಮಳೆರಾಜೊ। ದೊಡ್ಡವರ ಮಗ
ಮಳೆರಾಜ ಬಂದರ ಹಳ್ಳಕೊಳ್ಳ ತುಂಬಿ ಹರದಾವೊ

ಬಿತ್ತಿದ ಹೊಲದಾಗ ಒತ್ತಿ ಹಾಯುವನಾರೋ
ಮುತ್ತಿನ ಕುದರಿ ಮಳೆರಾಜ। ಮುತ್ತಿನ ಕುದರಿ ಮಳೆರಾಜ
ಬರುವಾಗ ಬಿಚ್ಚಿ ಬಿದ್ದಾವ ಬಿಳಿಜ್ವಾಳ

ಕೊಟ್ಟಲಗಿ ಪೂರ್ವ ದಿಕ್ಕಿನಲ್ಲಿರುವ ಗಡಿ ಗ್ರಾಮವಾದ **ಧರಿದೇವರ ಹಾಗೂ ಆತನ ಸೋದರಿ ಜಕ್ಕವ್ವಳ** ಇವರಿಬ್ಬರ ಕುರಿತು ಗ್ರಾಮದ ಜನರ ಹಂತಿ ಹಾಡುಗಳಲ್ಲಿ

ಗುಡ್ಡದ ವಾರ್‍ಯಾಗ ಗುಲಗಂಜಿ ಬನದಾಗ ಒಬ್ಬನ ಹೆಂಗಿದ್ದೆ
ಧರಿದೇವರ। ಒಬ್ಬನ ಹೆಂಗಿದ್ದೆ ಧರಿದೇವರ। ನಿನ್ನ ಮುಂದ
ಅಬ್ಬರಿಸಿ ಗಂಗಿ ಹರದಾಳ

ಮುಚ್ಚಂಡಿ ಮಿಂಚುವ ದಿದಯೊನ। ಗಂಚಗಾರನ ತಿದಿ ಹೊಡಿ
ಗಂಚಗಾರನ ತಿದಿ ಕೊಡಿ ಮಾಡ್ಯಾನೊ ಹಳ್ಳದ ಜಕ್ಕವ್ವನ ಗುಡಿ ಕಳಸಃ

ಬೀಸುವ ಪದಗಳು

ಜನಪದರ ದೈನಂದಿನ ಬದುಕು ಮೊದಲಾಗುವುದೇ ಬೀಸುವ ಕಾಯಕದಿಂದ. ಬೀಸುವ ಕಲ್ಲು ನಡೆಯುತ್ತಿದ್ದರೆ ಮನೆಯಲ್ಲಿ ಎಲ್ಲವೂ ಸರಿಯಾಗಿದೆ ಎಂದೇ ಅರ್ಥ. ಬೀಸುವಾಗ ಹೇಳುವ ಬಾಂಧವ್ಯ ಪರ ಗೀತೆಗಳೆಲ್ಲಾ ಹೆಣ್ಣಿನ ಬದುಕನ್ನು ಚಿತ್ರಿಸುತ್ತವೆ. ಬಾಲ್ಯದಲ್ಲಿ ತಂದೆ ತಾಯಿಯವರೊಂದಿಗೆ, ಯೌವ್ವನದಲ್ಲಿ ಪುರುಷರೊಂದಿಗೆ, ಮುಪ್ಪಿನಲ್ಲಿ ಮಕ್ಕಳೊಂದಿಗೆ ಬಾಳುವೆ ನಡೆಸುವ ಹೆಣ್ಣಿನ ಬದುಕಿನ ವಿವಿಧ ಸ್ತರದ ಶೀಲ ವರ್ತನೆಯ ಚಿತ್ರ ಇಲ್ಲಿ ಕಾಣಬಹುದಾಗಿದೆ. ಗರತಿಯ ಬದುಕಿನ ಹಿರಿಮೆಯನ್ನು ಇಲ್ಲಿ ಕಾಣಲು ಸಾಧ್ಯ.

ಇಂದಿನ ಮದುವೆ ದಿನಗಳಲ್ಲಿ ಹಾಡು ಹೇಳಿಸುತ್ತ, ಹೆಣ್ಣಿಗೆ ಬೀಸುವ, ಕುಟ್ಟುವ, ಶಾಸ್ತ್ರ ಮಾಡಿಸುವುದರಲ್ಲಿ ಹಿಂದೆ ಹೆಣ್ಣನ್ನು ಆಯ್ಕೆ ಮಾಡುತ್ತಿದ್ದ ರೀತಿಯನ್ನು ಪರಿಚಯವಾಗುವುದರೊಡನೆ ಈ ಕಾಯಕಗಳ ಬಗೆಗೆ ಹಿಂದಿನವರಿಗೆ ಎಂಥ ಹೆಗ್ಗಳಿಕೆ ಮತ್ತು ಪವಿತ್ರ ಭಾವನೆ ಇದ್ದವೆಂದು ತಿಳಿದುಬರುತ್ತದೆ. ಹೆಂಗಸರ ಹಾಡುಗಳಲ್ಲಿ ಬೀಸುವ ಪದಗಳಿಗೆ ಮಹತ್ವದ ಸ್ಥಾನವಿದೆ. ಇಂದು ಅಕ್ಕಿ ಮಾಡುವ ಮತ್ತು ಹಿಟ್ಟು ಮಾಡುವ ಯಂತ್ರಗಳು ಹಳ್ಳಿಗಳನ್ನು ಪ್ರವೇಶಿಸಿವೆ. ಆದ್ದರಿಂದ ಕುಟ್ಟುವ, ಬೀಸುವ ಕೆಲಸಗಳು ಮಾಯವಾಗುತ್ತಿವೆ.

ಕುಟ್ಟುವ ಪದಗಳು

ಇವು ಬೀಸುವ ಪದಗಳಷ್ಟೇ ಮಹತ್ವಪೂರ್ಣವಾದವು. ಆದರೆ ಈ ಪದಗಳು ಬತ್ತ ಕುಟ್ಟುವ ಕಾಯಕದಲ್ಲಿ ಬಹು ಪ್ರಯೋಜನಕಾರಿಯಾದವುಗಳಾಗಿವೆ. ಶ್ರಮದಾಯಕ ಕೆಲಸವಾದ ಬತ್ತ ಕುಟ್ಟುವ ಕಾಯಕದ ಸಂದರ್ಭದಲ್ಲಿ ಹಾಡುಗಳನ್ನು ಹಾಡಿ ಶ್ರಮ ಕಡಿಮೆ ಮಾಡಿಕೊಳ್ಳುತ್ತಿದ್ದರು. ಕೊಟ್ಟಲಗಿಯಲ್ಲಿ ಭತ್ತ ಬೆಳೆಯದೇ ಇದ್ದರೂ ಜವೇ ಗೋಧಿ, ಹೊಲದ ಗೋಧಿ, ಜೋಳದ ಗೊಂಡಿಯನ್ನು ಕುಟ್ಟುವುದು, ನವಣಿ ಅಕ್ಕಿಯನ್ನು ಕುಟ್ಟುವ ಸಂದರ್ಭ ಹೀಗೆ ವಿವಿಧ ಧಾನ್ಯಗಳನ್ನು ಕುಟ್ಟುವಾಗ ಹಾಡುತ್ತಿದ್ದರಿಂದ ಇವುಗಳಿಗೆ ಒನಕೆ ಹಾಡುಗಳೆಂಬ ಹೆಸರೂ ಇತ್ತು. ಇಂತಹ ಹಾಡುಗಳಿಗೆ ತಮ್ಮದೇ ಆದ ಚರಿತ್ರೆ ಇದೆ. ಕನ್ನಡದ ಪ್ರಾಚೀನ ಕಾವ್ಯಗಳಲ್ಲಿ ಈ ಹಾಡುಗಳ ಉಲ್ಲೇಖವಿದೆ.

ಮನೆಗೆ ಬೇಕಾದ ಅಕ್ಕಿ ಅಥವಾ ಇತರೆ ಧಾನ್ಯ ಕುಟ್ಟುತ್ತಿದ್ದುದು ಸಾಮಾನ್ಯ ಸಂಗತಿ. ಮದುವೆಯಂತಹ ಸಾಮೂಹಿಕ ಕಾರ್ಯಗಳಲ್ಲಿ ಕುಟ್ಟುವ ಸಂದರ್ಭಗಳು ಬರುತ್ತಿದ್ದವು. ಇತ್ತೀಚೆಗೆ ಯಂತ್ರಗಳು ಬಂದಿರುವುದರಿಂದ ಭತ್ತ ಕುಟ್ಟುವ ಕಾಯಕ ಮಾಯವಾಗಿ ಹೋಗಿದೆ. ಅದರ ಜೊತೆಯಲ್ಲಿ ಕುಟ್ಟುವ ಹಾಡುಗಳು ಮರೆಯಾಗಿ ಹೋಗಿವೆ.

ಬೀಸುವ ಕಲ್ಲಿನ ಪದಗಳು

ಪಂಢರಾಪುರವ ನೋಡ ಪಗಡಿ ಬಾಜಾರ ನೋಡ

ಗುಡಿ ನೋಡ ಗುಡಿ ನೋಡ ತಂದಿ ವಿಠ್ಠಲನ॥೧॥
ತಂದಿ ನಿ ವಿಠ್ಠಲನ ಗುಡಿಯ ನೋಡ ಮುಂದಿರುವ
ನದಿ ನೋಡ ನದಿ ನೋಡ ಚಂದ್ರ ಬಾಗಾನ॥೨॥

ಬಿಸುವ ಕಲ್ಲಿಗಿ ನಾ ಮುಂದ ನೀ ಮುಂದ
ಮರ ಮುಂದ ಮಕ ಮುಂದ ಸಣ್ಣ ಬಿದರಿನ॥೧॥
ಸಣ್ಣ ನೀ ಬಿದರಿನ ಮರ ಮುಂದ ಇಟಕೊಂಡ
ಸಭಾ ಮುಂದ ಸಭಾ ಮುಂದ ಎಲ್ಲಿಗ್ಹೊದರ॥೨॥

ಅಕ್ಕ ತಂಗ್ಯಾರ ಹೊರತ ಮೊತ್ತೊಬ್ಬರ ಗೆಳತಿಲ್ಲ
ಬಳ ಬಳಗಲ್ಲ, ಬಳಗಲ್ಲ ಮಕ್ಕಳ ಹೊರತ॥೧॥
ಮಕ್ಕಳ ನೀ ಹೊರತ ಬಳಗಲ್ಲ ನೀ ಹಡದವ್ವ
ತವರಲ್ಲ ತವರಲ್ಲ ತಾಯವ್ವ ನಿನ್ಹೊರತ॥೨॥

ಅಣ್ಣನ ಹೆಣುತಿ ಕಣ್ಣಿಗೆ ಒಳ್ಳೆಕಿ
ಒಲಿಮುಂದ ಒಲಿಮುಂದ ಸುಣ್ಣದ ನೀರ॥೧॥
ಸುಣ್ಣದ ನೀ ನೀರ ಒಲಿ ಮುಂದ ಇಟಕೊಂಡ
ಎಮ್ಮಿ ಹಾಲಂದ ಸುರುವ್ಯಾಳ॥೨॥

ಸಿಟ್ಟ ಬಂದರ ಶಿವನ ಬೈಯತಿನಲ್ಲ, ದತ್ತದಾಗಿರುವ
ಹೆಸಿಗುಣ, ದತ್ತದಾಗಿರುವ ಹೆಸಿಗುಣ ಬರದಂತ
ಬರಿಯ ಎತ್ತ ಹೋದರ ಬೆನ್ನ ಬಿಡಲಿಲ್ಲ

ಏಳುತ ನೆನದೇವ, ಎಳೆಂಟ ದೇವರನ, ವಳ
ಬಾಗಿಲದ ಒಡಿಯರ, ಒಳ ನೀ ಬಾಗಿಲರ
ಒಡೆಯ ಮಹಾದೇವ ನಿನ್ನ ಏಳುತ್ತ ಮೊದಲ
ನೆನದೇವ

ಬಿತ್ತುವ ಹೊಲದಾಗ ಹತ್ತೆಂಟು ಕೂರಿಗಿ
ಮಳೆರಾಜ ಮಳೆರಾಜ ಎತ್ತಿಂದ ಬಂದ
ಎತ್ತಿಂದ ನೀ ಬಂದ ಮಳೆರಾಜ ಹೊದಾಗ, ಸಸಿನಾಟಿ
ಸಸಿನಾಟಿ ಅಂಗೆಯಾನ ಗೋದ್ಯೊ

ಕನಡಿನಲ್ಲಿ ಕಂಡಿವ ಕಮಲಮುಖ ದೇವರ
ತುಳಸಿ ಮಾಲಿಯವರ ಹೊರಳಾಗ
ತುಳಸಿ ನೀ ಮಾಲಿ ಅವರ ಕೊರಳಾಗ
ತುಕಾರಾಮ ಸ್ವಪ್ನದಲ್ಲಿ ನೀ ಹೇಳ ನಿಜರೂಪ

ಆಕಾಶದ ಮರದಾಗ ನಾಕ ಕಾಲಿನ ಮಂಚ
ನಾಗ ಭೋಜನದ ತೆಲಗುಂಬ
ನಾಗ ಭೋಜನದ ತೆಲಗುಂಬ ನನ
ಮಹದೇವ ಯೋಗಿ ನಿಮ್ಮ ನಿದ್ದಿ ತಿಳಿಯವು

ಸರಕಾರ ನಂಬುದು ದರಕಾರ ನಮಗಿಲ್ಲ
ಸರಕಾರದೊಳಗ ಸರಿಪಾಲೋ
ಸರಕಾರದೊಗಳ ಸರಿಪಾಲು ತರುವಂತ
ಸರದಾರ ಮಗ ಮನಿಯಾಗ

ಕಲ್ಲಾಗ ಮುಕ್ಕಾಕಿ। ಬಲ್ಲಾವನ ನೆನದೆನ
ಸಲ್ಲಕೇಳು ಶಿವಬಂದ

ಮಾದೇವ ಬಂದ ಮನನೊಂದ
ಬಿಸಾಕ ಕುಂತೆನ ಸಣ್ಣ ಕೂಸ ತೊಡಿಮ್ಯಾಲ
ವಾಸ್ಯಾಡ ಬ್ಯಾಡ ನೆಗ್ಯಾಣಿ। ಮನಿ ದಗದ ತಾಸೊತ್ತಿನ್ಯಾಗ ತಿರುವಿನ

ಬಿಸೊದು ಬಿರಿ ಬಾಳ। ಕುಟ್ಟೊದು ಕುಸಿಬಾಳ
ಕುಟ್ಟಿ ಒಡಿಯೋದು ಮಾತ್ರ ಜಡಬಾಳ। ಬಾಳಿಯ
ಗಿಡವು ಯಾಕ ಬಾಗ್ಯಾವ। ಬಾಳಿಯ ಗಿಡಯಾಕ ಬಾಗ್ಯಾವ

ಇಂದು ನಿಮ್ಮ ಶನಿವಾರ ಸಾಕುನಿ ಪನಿವಾರ
ಹೂವಿನ ಹಾರ ಜನಿವಾರ। ಹೂವಿನ ಹಾರ ಜನಿವಾರ ನನ್ನವರ
ಆಗ್ಯಾರು ಶೃಂಗಾರ ಶನಿವಾರ

ಕವಚ ಕಾಂಚನಾ ಹೂವ ಬಿದರ ಬುಟ್ಟಿ ತುಂಬಿ
ಚದುರ ಇದ್ದಲ್ಲಿ ಕಳಸೆನ ಚದುರ ಇದ್ದಲ್ಲಿ ಕಳಸೆನ
ನನ್ನೂರ ಹದಿನಾರ ಬಿಜದ ಹನಮಪ್ಪ

ಹಾಡ್ಯಾಡಿ ಬೀಸಿನ ಹವಳ ಬಣ್ಣದ ಗೋಧಿ
ಬೀಜ ಕಿಟ್ಟಿನಿ ಬಿಳಿ ಜೋಳ। ನನ್ನ ತಮ್ಮಯ್ಯ
ಚಾಜಾಕಿ ಇಟ್ಟಾನ ನನ್ನ ಮಗಳನ್ನು

ಕನಡ್ಯಾಗ ಗೊಂಬಿಗಿ ಕಣ್ಯಾರ ಇಟ್ಟಾರ
ಕಾಟಿ ಹಿಡಿದಾಡು ಕೊಡನಿಗಿ। ನನ್ನ ಕಂದವ್ವ
ಕಟ್ಟಿಟ್ಟಾನ ನನ್ನ ಮಗ ಒಬ್ಬ

ಬಂಜಿಯ ಬಾಗಿಲಮುಂದ
ಅಂಜುರಿ ಗಿಡಹುಟ್ಟಿ। ಟೊಂಗಿ ಟೊಂಗಿ ಮ್ಯಾಲ
ಗಿಳಿಕುಂತ ಏನೋ ಹೇಳ್ಯಾವ। ಬಂಜಿಯ ಬದುಕು ಪರರಿಗೆ

ಬಂಜಿಯ ಮನ್ಯಾಗ ಬಂಗಾರದ ಒಳಕಲ್ಲ
ಕುಟ್ಟಿ ಬಿಸಾಕ ಸೊಸಿನಿಲ್ಲ। ಬನ್ನಿ ಮುರಿಲಾಕ ಮಗನಿಲ್ಲ

ಆರುವರಿ ಆಡ್ಡುಣಗಿ
ಮೂರುವರಿ ತಾಬಂಡಿ
ಬೆಸನದ ಉಂಡಿ ತಿಳಿದುಪ್ಪ ನನ್ನ ಅಣ್ಣಯ್ಯ
ಸಾವಕಾರ ನಿನ್ನ ಊಟ ಸಾವಕಾಸ

ಅಳುವಿ ಕಂದನ ಬಿಟ್ಟ ಹೊಳಿಯ ನೀರಿಗಿ ಹೋಗಿ
ಅಳಬ್ಯಾಡ ರಾಮ ಲಕ್ಷ್ಮಣ। ನಿಮ್ಮವ್ವ
ಹೊಳಿ ನೀರಿಗಿ ಹೋಗಿ ತಡದಾಳ

ಅತ್ತಿಗಿ ಅತ್ತಿಗಿ ನವಣಿಯ ನೆತ್ತಿಗಿ
ಹುಲ್ಲ ಮಾರಾವರ ಮಗಳವ್ವ ಹಡದಪ್ಪ
ಬಂಗಾರ ತೂಗವ್ವ ಸೊಸಿನವ್ವ
ಬಂಗಾರ ತೂಗವ್ವ ಸೊಸಿನವ್ವ ತಮ್ಮಣ್ಣ
ಕಸಕಸಿ ತೂಗಾವ ನನ್ನ ಹಡದೆವ್ವ

ಅಲ್ಲ್ಯಾಕ ನಿತ್ತಾಳ ಹಲ್ಯಾಕ ಕಿಸಿತಾಳ
ಹಲ್ಲ ಮ್ಯಾಲೊಂದ ನೊಣ ಕುತ್ತ
ಹಲ್ಲ ಮ್ಯಾಲೊಂದ ನೊಣ ಕುತ್ತ। ಲಕ್ಕವ್ವ
ಯಾಲಕ್ಕಿ ಮಾಡಿ ಸಿಪ್ಯಾಳ

ಬಾರಪ್ಪಾ ಬಳಗಾರ ಎರಪ್ಪಾ ತುದಿಕಟ್ಟಿ
ಆಡಲ್ಲಿ ಹೋಗ್ಯಾಳ ಅತಿರಂಬೆ। ನನಬಾಳ
ಬೇಡಿದ ಬಳಿಗೊಳ ಇಡುವೆನ। ಬಳಗಾರನ್ನ
ದುಡ್ಡಿಗಿ ಎಸಪ್ಪ ಬಳಿಗೋಳ

ಹತರೊಂದ ಹನ್ಯಾಡ ಶುಸಲೊಂದ ಮೂವತ್ತ
ನೀಲಿ ಬಣ್ಣದ ಐವತ್ತ। ಇದ್ದರ
ಹೊಗಪ್ಪ ಬಳಗಾರ ನನ್ನ ತವರಿಗಿ

ನಾನೆನ ಬಲ್ಲಿನ ನಿನ್ನ ತವರೂರ ಗುರ್ತ।
ಬಾಳಿಯ ಬಿತ್ತಾಕ ಬದನಿಯ ಹಚ್ಚಾಕ
ಕಾವಲದಾರ ಹುಲಿಕರಡಿ। ನನ್ನ ಹಡದಪ್ಪಾ
ರತನಾ ಬರದಾನ ನಡಗಂಬದ ಮ್ಯಾಲ

ಬೀಸುವ ಜೋಳ ತಗೊಂಡ ಬಿಸಾಕ ಕುಂತಿನಿ
ಕೂಸ ನನ್ನ ತೊಡಿ ಮ್ಯಾಲ
ಕೂಸ ನೀ ನನ್ನ ತೊಡಿಮ್ಯಾಲ। ನೆಗೆಣ್ಣಿ
ವಾಸ್ಯಾಡಬ್ಯಾಸ ನನಗೊಡ

ಬ್ಯಾಸರಾದಿತ ನನ ಜೀವ
ಗೋಧಿಯ ಬಿಸಾಕ ನಾದುನಿ ಶ್ಯಾಣ್ಯಾಳ
ಗೋಧಿಯ ಬಾನಿನ ಎಡಿಯ। ಗೋಧಿ ನೀ ಬನ್ನಿನ
ಎಡಿಯ। ನನ್ನ ಕಂದನ್ನ ನಾಳೆ ನನ್ನ ಮಗನ
ಮದವಿ ಮಾಡಿನ

ಅತ್ತಿಯ ಮನ್ಯಾಗ ಅತ್ತರ ಯಾರ ಕಂಡಾರ
ಅತ್ತರ ನಿಯಾರ ಕಂಡರ। ನನ್ನ ಭೂಮಕ್ಕ
ಸೆರಗಿಲೆ ಕಣ್ಣ ಒತ್ತಿನ

ಗಂಡ ಹಡದವರ ಬಂಡಾಟ ಏನ ಹೇಳಲಿ
ಮುಂಗೈ ಮ್ಯಾಗ ಸೆರಗ
ಮುಂಗೈ ನೀ ಮ್ಯಾಗ ಸೆರಗನ। ಹೊತಕೊಂಡ
ಇಂಬಾಗಿ ಹೇಳ್ಯಾಳ ನೆರಮನಿ ಅವ್ವಗ

ಸಾಮಾನ್ಯವಾಗಿ ಈ ಕೆಳಗಿನ ಹಾಡುಗಳನ್ನು ಕುಟ್ಟುವ ಕೆಲಸದ ಸಂದರ್ಭದಲ್ಲಿ ಗ್ರಾಮದ ಜನಪದರು ಹೇಳುತ್ತಾರೆ.

ಕುಟ್ಟುವ ಪದಗಳು

ಅಕ್ಕಿಯ ತಳಸಾಕ ನಾ ಯಾರನ ಕರಸಲಿ
ಅಕ್ಕಿಯ ಕರಿ ಅಕ್ಕಿ ಅಕ್ಕಿಯ ಬಿಳಿ ಅಕ್ಕಿ
ಅಕ್ಕಿಯ ತಳಸಾಕ ನಾ ಯಾರನ ಕರಸಲಿ

ಬಾಲಿಯ ಮನಿಮುಂದ ಬಾಳಿಯ ಗಿಡಹುಟ್ಟಿ
ಅದರ ಮೇಲೆರಡ ಗಿಳಿ ಕುತ್ತ
ಅದರ ಮೇಲೆರಡ ಗಿಳಿ ಕುತ್ತ। ಏನ ನುಡದಾವ
ಬಾಲಿ ನೀ ಮಗನ ಹಡಿ ಲಗುವ
ಬಾಲಿಯ ಮನಿ ಮುಂದ ನಿಂಬಿಯ ಗಿಡ ಹುಟ್ಟಿ
ಅದರ ಮೆಲೆರಡ ಗಿಳಿ ಕುತ್ತ। ಎನ್ ನುಡದಾವ
ಬಾಲಿಯ ನೀನ ಮಗನ ಹಡಿದು ಲಗನ

ಮಾಳಿಗಿ ಸಾರಿಸಿ ಮಾಳಿಗಿ ಡೊಳಿಸೆ
ತುಪ್ಪದ ಕೊಡ ಸುರಿವ್ಯಾಕಿ
ಮಾಳಿಗಿ ಸಾರಿಸಿ ಮಾಳಿಗಿ ಡೊಳಿಸೆ
ರಕ್ಕದ ಕೊಡ ಸುರಿವ್ಯಾರ

ಕಡಲಿಯ ಕಲ್ಲಿಟ್ಟ ನಾ ಯಾರನ ಕರಸಲೇ
ಸಾಲ ಮಾಳಿಗಿ ಮನಿಯಾಳೆ
ಸಾಲ ಮಾಳಿಗಿ ಮನಿಯಾಳೆ। ಮಾರವನ
ಕಾಡಲಿ ಕಲ್ಲಿಟ್ಟ ಕರಿಸಿನ್[೩೫]

ಹಬ್ಬದ ಹಾಡುಗಳು: ಗುಳ್ಳವ್ವನ ಹಾಡು

ಗುಳ್ಳವ್ವನ ಮಣ್ಣ ತರಲಿಲ್ಲ।
ಗುಲಗಂಜಿ ಹಚ್ಚಿ ಆಡಲಿಲ್ಲ।
ಸುಳ್ಳೆ ಬಂತಲ್ಲ ನಾಗರಪಂಚಮಿ। ಸುವ್ವನಾರಿ ॥ಪ॥

ಆಷಾಢ ಮಾಸ ಬಂದಿತವ್ವ
ಖಾಸ ಅಣ್ಣ ಬರಲಿಲ್ಲ। ಕರಿಲಾಕ
ಎಷ್ಟು ನೋಡಲಿ ಅಣ್ಣನ ದಾರಿ। ಸುವ್ವನಾರಿ॥೧॥

ಮಾವಿನ ಗಿಡ ಮರೆಯಾಯ್ತು।
ತವರಮನಿ ದೂರಾಯ್ತು।

ಯಾವಾಗ ನೋಡಲವ್ವ ತಾಯಿ ಮಾರಿ। ಸುವ್ವನಾರಿ। ॥೨॥

ರೊಟ್ಟಿ ಬುತ್ತಿ ಮಾಡಿಕೊಂಡು।
ಎತ್ತಿನ ಮ್ಯಾಲ ಹೇರಿಕೊಂಡು।
ಯಾವಾಗ ಕಂಡೆನವ್ವ ತಾಯಿ ಮಾಡಿ। ಸುವ್ವನಾರಿ॥೩।

ಹಿಂದಿನೆತ್ತ ಹಿಂದ ಇರಲಿ।
ಮುಂದಿನೆತ್ತ ಮುಂದ ಇರಲಿ
ಎಂದ ಕಂಡೆನವ್ವ ತಾಯಿ ಮಾರಿ। ಸುವ್ವನಾರಿ ॥೪॥

ಹೊತ್ತು ಮುಳುಗು ವ್ಯಾಳ್ಯಾದೊಳಗ।
ದೀಪಾ ಹಚ್ಚು ಹೊತ್ತಿನೊಳಗ।
ಅಣ್ಣ ಕರಿಯಾಕ ಬಂದಾನ ನಾರಿ। ಸುವ್ವನಾರಿ ॥೫॥
ತಾಯಿ ಬಂದು ನೀರ ಕೊಟ್ಟ
ತಾಯಿ ಮಾರಿ ಕಂಡೇನವ್ವ
ಹಸಿದ ಹೊಟ್ಟೆ ಉಂಡಂಗಾತ ನಾರಿ। ಸುವ್ವನಾರಿ ॥೬॥[೩೬]

ನಾಗರಪಂಚಮಿ ಹಾಡು

ಸಂಭ್ರಮದ ಪಂಚಮಿಯಲ್ಲಿ ಗ್ರಾಮದ ಸ್ತ್ರೀಯರು ಪಂಚಮಿ ಹಾಡುಗಳನ್ನು ಹಾಡುತ್ತಾರೆ.

ನಾಗಪ್ಪನ ಹಾಲ ಹೊಯ್ಯೋಣ।
ನಾಗರ ಹೆಡಿಯಾಂಗ ಆಡೋಣ ॥ಪ॥

ನಾಗರಪಂಚಮಿ ನಾಡ ಹೆಣ್ಣಿಗೆ ಹಬ್ಬ।
ನಾಗಪ್ಪನ ಹಾಲ ಎರಿಯೋಣ। ನನ ಗೆಳತಿ।
ನಾಗರ ಹೆಡಿಯಾಂಗ ಆಡೋಣ ॥೧॥

ಗುರುದೇವ ನಿಮಪಾಲ ಹರಹರನೆ ನಿಮಪಾಲ।
ಶರಣರಿಗೆ ಹಾಲು ಹಿರಿದುರಿಗೆ। ಎರಿಯೋಣ।
ಕಿರಿಯರಿಗೆ ಹಾಡಿ ಹರಸೋಣ ॥೨॥

ಅಳ್ಳಿಟ್ಟು ತಂಬಿಟ್ಟು ಮಾಡಿಟ್ಟ ಉಳ್ಳಂಡಿ।
ದಳ್ಳುರಿ ಕಣ್ಣ ಹೆಣೆಯವನ ಕೊರಳಾನ।
ನಾಗ ನಿನಗೆಡೆಯೋ ಕೈಮುಗಿದೊ ॥೩॥

ವಾರಿಗಿ ಗೆಳತಿಯರ ಕೇರಿಯ ಕೆಳದೇಶ
ಸೇರಿ ಒಂದೇಡೆ ಕೂಡೋಣ। ಜೋಕಾಲಿ
ತೂರಿ ಜೀಕವ ಆಡೋಣ ॥೪॥

ಚಂದ್ರಕಾಳಿಯ ಸೀರಿ ಚಂದ್ರಕುಪ್ಪಸ ತೊಟ್ಟು
ಬಂದ ಹಬ್ಬದಾಗ ನಲಿಯೋಣ। ನಕ್ಕಾಡಿ
ಒಂದಾಗಿ ಇದ್ದು ಅಗಲೋಣ ॥೫॥

ಸಾಕಾಗುತನ ಕೂಡಿ ಜೋಕಾಲ್ಯಾಡೋಣ।
ನಾಗರ ಮಿಡಿಯಾಗಿ ಆಡೋಣ। ವರ್ಷಾ ವರ್ಷಾ
ನಾಗರ ಪಂಚಮಿಗಿ ಕೂಡೋಣ ॥೬॥

ಗಂಡನ ಮನಿಯಾನ ಕಂಡ ಬಾಳುವೆ ಹಾಡಿ।
ಉಂಡು ಓಡ್ಯಾಡಿ ಆಡೋಣ। ಮನೆಮಾತ
ಹಿಂಡಿನಾಗಾಡಿ ಮರೆಯೋಣ ॥೭॥

ಪಂಚಮಿ ಬರಲೆವ್ವ ಮಂಚಕಟ್ಟಲಿ ಮನೆಗೆ।
ಕೆಂಚಿ ಗೆಳತೇರು ಕೂಡಲಿ। ನಮ ಜೀವ
ಮಿಂಚಿ ಮುಗಿಲೀಗಿ ಬರಲಿ ॥೮॥

ಸೀಗೆಯನ್ನು ಕುಂಬಾರ ಮನೆಯಿಂದ ತರುವಾಗ ಈ ರೀತಿ ಹಾಡುತ್ತಾರೆ.

ಮನಿಗೆ ಬಾರಮ್ಮ ಸೀಗಿ। ಮನಿಗೆ ಬಾರಮ್ಮ ॥ಪ॥
ದಟ್ಟಿ ಪಟ್ಯಾಳ ಸಿರಿ ಎಚ್ಚದಡಿದು ನ್ಯಾಮದಡಿಯ।
ಜರತಾರ ಸೀರಿ ಬಾಮಾ ಕುಟ್ಟು।
ಜಾಣೆ ನಿನ್ನ ಕರಿಯ ಬಂದೆ ॥೧॥

ವಸ್ತ್ರ ಒಡವೆ ಆಭರಣಿಟ್ಟು ಸಿಕ್ಕಿದ ಡಾಬನ ನಡಿನಾಗಿಟ್ಟು।
ರಾಗುಟಿ ಜಾರಿ ತಲಿಯಾಗಿಟ್ಟು।
ರಾಗದಿಂದ ಕರಿಯ ಬಂದೆ ॥೨॥

ಕಂಚಕಾಸು ಸೀರಿಕೊಂಡು ಕೆಂಚರ್ಯೆವರ ಕೂಡಿಕೊಂಡು
ಅರಸರ ಮಡದಿ ದುರಪದಿ ಕೂಡ।
ಸರಸದಿಂದ ಕರಿಯ ಬಂದೆ ॥೩॥

ಕುತನಿ ಕುಪ್ಪಸತೊಟ್ಟು ಹಣಿಮ್ಯಾಗ ಕುಂಕುಮವಿಟ್ಟು।
ವಾಲಿಕೊಪ್ಪ ಕಿವಿಯಾಗಿಟ್ಟು।
ರಾಗದಿಂದ ಕರಿಯ ಬಂದೆ ॥೪॥

ಕುಂಬಾರ ಮನಿಯಾಗ ಹುಟ್ಟಿದಿ ಸೀಗಿ ಚರಗಬುಟ್ಟಿ
ಸುಳಿ ಸುಳಿಗಾಳಿ ಚಳಿಯ ಕೂಡಿ।
ಗೆಳತಿಯರೊಡನೆ ಕರಿಯ ಬಂದೆ[೨]

ಜೋಕುಮಾರನ ಹಾಡು

ಉತ್ತರ ಕರ್ನಾಟಕದ ರೈತ ಭಾದ್ರಪದ ಮಾಸದಲ್ಲಿ ಮಳೆಯಿಲ್ಲದೆ ಪೈರು ಒಣಗಹತ್ತಿದಾಗ ಜೋಕುಮಾರನ ಹಬ್ಬವನ್ನು ಆಚರಿಸುವುದು ರೂಢಿ. ಈ ಹಬ್ಬವನ್ನಾಚರಿಸಿದರೆ ಮಳೆಯಾಗುತ್ತದೆ ಎಂದು ನಂಬಿಕೆ. ಊರ ಹೆಣ್ಣು ಮಕ್ಕಳು ಜೋಕುಮಾರನನ್ನು ಹೊತ್ತುಕೊಂಡು ಮನೆ ಮನೆಗೂ ಹೋಗಿ ಪೂಜೆ ಸಲ್ಲಿಸಿ, ಅಲ್ಲಿ ಜೋಕುಮಾರನ ಕಥೆಯನ್ನೇ ಹಾಡುತ್ತಾರೆ. ಆ ಹಾಡು ಹೀಗಿದೆ.

ಅಡ್ಡಡ್ಡ ಮಳೆ ಬಡದ ದೊಡ್ಡ ದೊಡ್ಡ ಕೆರೆತುಂಬಿ।
ಗೊಡ್ಡುಗಳೆಲ್ಲಾ ಹೈನಾಗಿ ಜೋಕುಮಾರ। ಗೌಡರ

ಸೆಡ್ಡಿಯ ಮ್ಯಾಲ ಸಿರಿಬಂದ। ಜೋಕುಮಾರ ॥೧॥

ಹಾಸ್ಯಾಸಿ ಮಳೆ ಬಡಿದು ಬೀಸ್ಬಿಸಿ ಕೆರೆತುಂಬಿ।
ಬಾಸಿಂಗದಂತ ತೆನೆಬಾಗಿ ಜೋಕುಮಾರ। ಗೌಡರ
ರಾಸಿಯ ಮ್ಯಾಲ ಸಿರಿಬಂದ। ಜೋಕುಮಾರ ॥೨॥[೩೮]

ಈ ರೀತಿಯಾಗಿ ಹಾಡುತ್ತ ಮನೆ ಮನೆಗೂ ತಿರುಗುತ್ತಾರೆ.

ಮೊಹರಂ ಹಾಡುಗಳು

ಉತ್ತರ ಕರ್ನಾಟಕದ ಮೊಹರಂ ಹಬ್ಬದ ಸಂದರ್ಭದಲ್ಲಿ ಹಾಡುವ ಹಾಡುಗಳಿವು. ಧರ್ಮ ಮತ್ತು ಶಾಂತಿಗಾಗಿ ತಮ್ಮನ್ನು ತಾವೇ ಬಲಿಕೊಟ್ಟುಕೊಂಡ ಹಜರತ ಹಸನ್ ಹುಸೇನ್‌ರ ವೀರ ಚರಿತ್ರೆಯನ್ನೊಳಗೊಂಡ ರಚನೆಗಳಿವು. ಇವುಗಳನ್ನು ಅಲಾವಿ ಪದಗಳು, ಕರ್ಬಲ ಪದಗಳು, ರಿವಾಯತ್ ಪದಗಳೆಂದೂ ಕರೆಯುವರು. ಮೊಹರಂ ಹಾಡಗಳು ಆ ಹಬ್ಬದಲ್ಲಿ ಮಾತ್ರ ಹಾಡುವಂಥವಾದ್ದರಿಂದ ಅವಕ್ಕೆ ಹಬ್ಬದ ಆಚರಣೆಯ ಕಥೆಯೇ ಹಿನ್ನೆಲೆಯಾಗಿದೆ. ಆ ಕಥೆ ಹೀಗಿದೆ. ಇಸ್ಲಾಂ ಮತ ಸ್ಥಾಪಕರಾದ ಮಹಮ್ಮದ ಪೈಗಂಬರರ ತರುವಾಯ ನಾಲ್ಕು ಜನ ಖಲೀಫರು ಪೀಠವನ್ನೇರಿದರು. ಅವರಲ್ಲಿ ಹಜರತ ಅಲಿ ಅವಿರು ನಾಲ್ಕನೆಯವರು. ಹಜರತ ಅಲಿ ಜೇಷ್ಠ ಪುತ್ರರಾದ ಹಜರತ ಹಸರ ಅವರ ಕಾಲದಲ್ಲಿ ಸಿರಿಯಾದ ಪ್ರಾಂತಾಧಿಕಾರಿಯ ಖಲೀಫಸದಕ್ಕೆ ಹಕ್ಕುದಾರನೆಂದು ಸಾರಿದಾಗ ಇವರ ಪ್ರಭುತ್ವವನ್ನು ಮನ್ನಿಸಲು ಜನ ನಿರಾಕರಿಸಿದರು. ಇದೇ ಮುಂದೆ ನಡೆದ ಕರ್ಬಲ ಕಾಳಗಕ್ಕೆ ನಾಂದಿಯಾಯಿತು. ಧರ್ಮ ರಕ್ಷಣೆಗಾಗಿ ಯುಜೀದನ ಉದ್ಧಟತನವನ್ನು ವಿರೋಧಿಸಿದ ಹುಸೇನರು ಜೀವದ ಹಂಗು ತೊರೆದು ಹೋರಾಡಿದರು. ಆದರೆ ಇವರದು ಸಾತ್ವಿಕ ಹೋರಾಟ. ಕಪಟವರಿಯದ ಹುಸೇನರನ್ನು ಯುಜೀದನ ಕಡೆಯವರು ಮೋಸದಿಂದ ಕೊಂದರು. ಮೊಹರಂ ಇಂತಹ ದುರಂತ ಚರಿತ್ರೆಯ ಧಾರ್ಮಿಕ ಹಿನ್ನಲೆಯ ಸಂಕೇತವಾಗಿದೆ. ಮೊಹರಂ ಸಂದರ್ಭದಲ್ಲಿ ಹಾಡುವ ಹಾಡುಗಳಿಗೆ ಕರ್ಬಲ ಹಾಡುಗಳೆಂದೇ ಪ್ರಸಿದ್ಧಿ ಪಡೆದಿವೆ. ಕರ್ಬಲ ಕಾಳಗದ ಪದ್ಯ ಹೀಗಿದೆ.

ದರಮಕ ಸತ್ತವರಾ ಸಿಗತಾರಾ ಕೋಟಿಗೊಬ್ಬ ಜನರಾ
ಮುಸಲಮಾನ ಮಂದ್ಯಾಗ ದೊರೀತಾರ ಹುಸೀನ ಸಾಬರಾ
ಯುಜೀದನವತಾರಾ ನಡಿಸಿತೊ ಅಧಿಕಾರ ಭರಪೂರಾ
ನೋಡಲಾಗಿದೆ ಎದುರಾಗಿ ನಿಂತಾರೋ ಹಜರತ ಹುಸೇನರಾ[೩೯]"

ಹಜರತ್ ಹುಸೇನ ಮತ್ತು ಹಸನವರ ಬಲಿದಾನದ ಇಂತಹ ಪದಗಳ ಮೂಲಕ ಅವರಿಬ್ಬರ ಪವಿತ್ರ ಜೀವನದ ಸಂದೇಶವನ್ನು ಸಾಗುವುದೇ ಮುಖ್ಯ ಉದ್ದೇಶವಾಗಿದೆ.

ಅಂಟಿಕೆ ಪಂಟಿಕೆ ಪದಗಳು

ಇದು ಕೂಡಾ ದೀಪಾವಳಿಯ ಸಂದರ್ಭದಲ್ಲಿ ನಡೆಯುವಂತ ಒಂದು ಹಾಡುಗಾರಿಕೆಯ ಸಂಪ್ರದಾಯ. "ಆಡಿ, ಪಿಡಿ" ದೀಪ ನೀಡುವುದು, ಜ್ಯೋತಿ ಕೊಡುವುದು ಎಂದು ಕರೆಯುವದುಂಟು. ವಿಶೇಷವಾಗಿ ಮಕ್ಕಳು ತಂಡಗಳನ್ನು ರಚಿಸಿಕೊಂಡು ಜ್ಯೋತಿ (ಆರತಿ) ತೆಗೆದುಕೊಂಡು ಮನೆ ಮನೆಗೂ ಹೋಗಿ ಈ ಪದಗಳನ್ನು ಹೇಳುವುದರಿಂದ ಈ ಹಾಡುಗಾರಿಕೆಯು

ಹಿಮ್ಮೆಳ ಮುಮ್ಮೆಳ, ಒಮ್ಮೆಮ್ಮೆ ಒಟ್ಟಾಗಿ ಹಾಡುವದುಂಟು. ಗ್ರಾಮದೇವರುಗಳ ಮೇಲೆ ತಮ್ಮ ಸುತ್ತಿನ ಕಸಬುಗಳು, ಕಸುಬುದಾರರ ಮೇಲೆ ಅವರು ಹಾಡುವ ಪದಗಳು ಅತ್ಯಂತ ಸುಂದರ ರಚನೆಗಳವು. ಸಾಮಾನ್ಯವಾಗಿ ಗ್ರಾಮದ ದನಕರುಗಳಿಗೆ, ಕುರಿಗಳಿಗೆ, ಆಡುಗಳಿಗೆ ಯಾವುದೇ ರೋಗ ರುಜಿನಗಳು ಬರಬಾರದು ಸುರಕ್ಷಿತವಾಗಿರಲಿ ಎಂಬ ನಂಬಿಕೆಯಿಂದ ಈ ಆಚರಣೆ ನಡೆಯುತ್ತದೆ. ಇತ್ತೀಚಿನ ದಿನಗಳಲ್ಲಿ ಈ ಹಾಡುಗಳು ಟಿವಿ ಮಾಧ್ಯಮ, ಟೇಪ ರಿಕಾರ್ಡರ ಮುಂತಾದ ಹಾಡುಗಳ ಪ್ರಭಾವಕ್ಕೆ ಮಾರುಹೋಗಿ ಈ ಆಚರಣೆಯ ಹಾಡುಗಳು ಕಡಿಮೆಯಾಗುತ್ತಿವೆ.

ಆಡಿನ ಮ್ಯಾಲ

ಆಡಪಡಾ ತಂದಿರಬೇಕು ಸಾರಬಾರ ಹಿಂಡರಬೇಕೊ
ಒಲಿಮ್ಯಾಲ ಇಟ್ಟರ ಬೇಕ್ಕು। ಬೆಕ್ಕ ಬಂದ ಕುಡಿದರಬೇಕೊ
ಆಯಿ ಬಂದ ಬಡದಿರಬೇಕು। ಮುತ್ಯಾ ಬಂದ ಬಿಸಿಸಿರಬೇಕು

ಎತ್ತು/ಎಮ್ಮೆ, ದನದ ಮೇಲೆ

ಹೊತ್ತ ಮುಣಗಿತೊ ಹೊಲ ಎಲ್ಲಿ
ಹನ್ನೆಡೆತ್ತಿನ ಬಾಲ। ಬಾಲ ಮ್ಯಾಗ ಬಂಡಿ
ಬಂಡಿ ಮ್ಯಾಗ ನವಲ। ನವಲಪುಚ್ಚ ತೊಡಿ
ಚಿಗರಿ ಕೊಡಿಗಿ ಹಾಕಿ ಚಿಗರಿ ಹೊಗೊ ಜಾಣ।
ಅದಕೆನ ದಾಡಿ ಹುಣಚಿನ ರಾಡಿ। ಆಡಿ ಪಿಡಿ ಮಂತ್ರೋಷೊ

ಹೀಗೆ ಗಂಡು ಮಕ್ಕಳು ಹಾಡು ಹೇಳುತ್ತ ಮನೆಯಲ್ಲಿ ಆಡು/ಕುರಿ, ಎಮ್ಮೆ/ದನ/ ಎತ್ತುಗಳಿರುವ ಮನೆಯಲ್ಲಿ ದೀಪ ಬೆಳಗುವದು ಪದ್ಧತಿಯಾಗಿದೆ.

ಮದುವೆ ಹಾಡುಗಳು

ಮದುವೆಯ ವಿವಿಧ ಶಾಸ್ತ್ರಾಚರಣೆಗಳಿಗೆ ಸಂಬಂಧಿಸಿದಂತೆ ಹಾಡುವಂತವು; ಇವನ್ನು "ಸೋಬಾನೆ ಪದಗಳು" ಎಂದು ಕರೆಯುತ್ತಾರೆ. ಸೋಬಾನೆ ಶುಭವನ್ನು ಸೂಚಿಸುವ ಶಬ್ದ. ಹಾಡುಗಳ ಮೂಲಕ ಶುಭವನ್ನು ಹಾರೈಸುವುದೇ ಸೋಬಾನೆ. 'ಶುಭವೆನ್ನಿ' ಎಂಬ ಶಬ್ದ ಸೋಬಾನೆಯಾಗಿದೆ. ಸೋಬಾನೆ ಪದ ಹಾಡುವವರು ಹೆಂಗಸರು. ಅವರನ್ನು 'ಸೋಬಾನದವರು' ಎಂದೇ ಕರೆಯುತ್ತಾರೆ. ಸೋಬಾನವಿಲ್ಲದೆ ಹಿಂದೆ ಮದುವೆ ನಡೆಯುತ್ತಿರಲಿಲ್ಲ. ಆಗ ಮದುವೆ ಹತ್ತಾರು ದಿನಗಳ ಕಾಲ ನಡೆಯುತ್ತಿದ್ದು; ಸುತ್ತಿನ ಎಲ್ಲ ಊರುಗಳ ಸಮಸ್ತರು ಮದುವೆಯ ಎಲ್ಲಾ ಕಾರ್ಯಗಳಲ್ಲಿ ಭಾಗವಹಿಸಬೇಕಾಗಿತ್ತು. ಆ ವೇಳೆಯ ಶ್ರಮವನ್ನು ಮರೆಯಲು, ಅಪರಿಚಿತ ಗಂಡು ಹೆಣ್ಣುಗಳು ಶಾಸ್ತ್ರಾಚರಣೆಯಲ್ಲಿ ಉತ್ಸಾಹದಿಂದ ಭಾಗವಹಿಸಲು ಎರಡು ಜೀವಗಳು ಒಂದಾಗಲು ಈ ಹಾಡುಗಳು ಸಾಧನವಾದುವು. ಇಂದಿಗೂ ಮದುವೆಯಲ್ಲಿ ಶಾಸ್ತ್ರಕ್ಕಾಗಿ ಸೋಬಾನೆ ಹೇಳಿಸುವದುಂಟು. ಹಿಂದಿನ ಪದ್ಧತಿಯಂತೆ ಮದುವೆ ಕ್ರಮಬದ್ಧವಾಗಿ ನಡೆಯಬೇಕು. ಆ ಕ್ರಮ ತಪ್ಪಿ ಹೋದರೆ ಗಂಡು ಹೆಣ್ಣಿನ ಜೀವನದಲ್ಲಿ ಮುಂದೆ ಅನಾಹುತ, ಅಮಂಗಲವಾಗಬಹುದೆಂಬ ಆತಂಕ, ಅದಕ್ಕಾಗಿ ಯಾವ ಶಾಸ್ತ್ರಾಚರಣೆಯು ತಪ್ಪಿ ಹೋಗದಂತೆ ಮೊದಲಿನಿಂದ ಕೊನೆಯವರೆಗೆ ಒಂದೊಂದು ಶಾಸ್ತ್ರಕ್ಕೂ ಒಂದೊಂದು ಹಾಡು ಹಾಡುವದು ಕ್ರಮ. ಶಾಸ್ತ್ರದ ನೀರು ತರುವಾಗ, ಶಾಸ್ತ್ರ ಬತ್ತ ಕಟ್ಟುವಾಗ, ವೀಳೆಯಶಾಸ್ತ್ರ ಮಾಡುವಾಗ,

ಅರಿಶಿನೆಣ್ಣೆ ಮಾಡುವಾಗ, ಗಂಡು ಹೆಣ್ಣಿನ ಮನೆಗೆ ನೆರೆ ಹೊರಡುವಾಗ, ಹೆಣ್ಣಿನ ಮನೆಯಲ್ಲಿ ಮದುಮಕ್ಕಳನ್ನು ಇದಿರುಗೊಳ್ಳುವಾಗ, ಆರತಿ ಎತ್ತುವಾಗ, ಸಸಿ ಮರಕ್ಕೆ ನೀರಿ ಹೊಯ್ಯುವಾಗ, ಹೆಣ್ಣು ಕರೆಯಲು ಬಂದಾಗ ಹೀಗೆ ಹತ್ತಾರು ಸಂದರ್ಭಗಳಲ್ಲಿ ಶಾಸ್ತ್ರಗಳು ಹಾಡಿನ ಮೂಲಕ ನೆರವೇರುತ್ತವೆ. ಸೋಬಾನೆ ಹಾಡುಗಳು ಮೊದಲಾಗುವುದು. ಶಾಸ್ತ್ರದ ನೀರು ತರುವಲ್ಲಿಂದ ಹಿಡಿದು ಮದುವೆ ನೆರವೇರುವವರೆಗೆ ಈ ಶಾಸ್ತ್ರ ಜರುಗುವುದು. ಆಗ ಸೋಬಾನದವರು ಕಲಶದ ಸಮೇತವಾಗಿ ಹೊಳೆಗೆ ಹೋಗುತ್ತಾರೆ. ಆಗ ಈ ರೀತಿ ಹೇಳುತ್ತಾರೆ.

ಅತ್ತಿ ಮರತಕ ಮುತ್ತಿನ ಕೊಳತಕ।
ಅಕ್ಕ ಲಕ್ಕವ್ವನ ಗುಡಿತಕ ನಮ್ಹಾಡು।
ಮುತ್ತೀನ ಮಳೆಯಾಗಿ ಸುರುದಾವೆ

ಎಣ್ಣೆ ಅರಿಷಿಣ ಹಚ್ಚುವಾಗಿನ ಹಾಸು
ಆ ಎಣ್ಣೆ ಈ ಎಣ್ಣೆ ಯಾವ ದೇವರೆಣ್ಣೆ।
ಮನಿಯ ದೇವರ ಮೊದಲೆಣ್ಣೆ।
ಮನಿಯ ದೇವರ ಮೊದಲೆಣ್ಣೆ
ಹರಹರ ನಮ್ಮ ಶಿವಗ ನೆಯ್ಯೊಣ್ಣೆ

ಬಾಲಗೆಣ್ಣೆ ಹಚ್ಚೊಡಿಸಿ ಬಾಗಿಲಿಗೆ ಬಿಸಿಲ್ದಂದ।
ನಾಲ್ವತ್ತ ತ್ವಾಟದ ಎಲಿ ಬಂದ।
ನಾಲ್ವತ್ತ ತ್ವಾಟದ ಎಲಿ ಬಂದ ಎಲಿ ಬಂದ।
ಹರಹರ ನಮ್ಮ ಶಿವಗ ನೆಯ್ಯೆಣ್ಣೆ।

ಕಂದಗೆಣ್ಣೆ ಹಚ್ಚೊಟಗಿ ಅಂಗಳಕ ಬಿಸಿಲ್ಬಂದ।
ಐವತ್ವಾಟದ ಎಲಿ ಬಂದ।
ಐವತ್ವಾಟದ ಎಲಿಬಂದ ಎಲಿಬಂದ।
ಹರಹರ ನಮ್ಮ ಶಿವಗ ನೆಯ್ಯೆಣ್ಣೆ

ನೀರಿಲ್ಲದಂಗಳಾದಾಗ ನೀರ್‍ಯಾಕ ಆಗ್ಯಾವ।
ಊರಿಗಿ ದೊಡ್ಡವರ ಮಗ ಮಿಂದ।
ಊರಿಗಿ ದೊಡ್ಡವರ ಮಗಮಿಂದ ಮಗಮಿಂದ
ಹರಹರ ನಮ್ಮ ಶಿವಗ ನೆಯ್ಯೆಣ್ಣೆ।

ಕೆಸರಿಲ್ಲದಂಗಳದಾಗ ಕೆಸರ್‍ಯಾಕ ಆಗೆದ।
ಹೆಸರಿಗಿ ದೊಡ್ಡವರ ಮಗಮಿಂದ।
ಹೆಸರಿಗಿ ದೊಡ್ಡವರ ಮಗಮಿಂದ ಮಗಮಿಂದ
ಹರಹರ ನಮ್ಮ ಶಿವಗ ನೆಯ್ಯೆಣ್ಣೆ

ಹೆಸಂಗಿ ದೊಡ್ಡವರ ಮಗಮಿಂದ ತಮ್ಮಗ।
ಹಸರ ಪಲ್ಲಕ್ಕಿ ನೆರಳಾಗಿ। ಹಸರ ಪಲ್ಲಕ್ಕಿ ನೆರಳಾಗಿ
ಹರಹರ ನಮ್ಮ ಶಿವಯ ನೆಯ್ಯೆಣ್ಣೆ।।

ಕುಬಸದ ಹಾಡುಗಳು

ಸೀಮಂತ ಕಾರ್ಯವು ಜನಪದರ ಬದುಕಿನಲ್ಲಿ ಬಹು ಮಹತ್ವದ ಘಟ್ಟ. ಗರ್ಭಿಣಿಯಾದ ಸ್ತ್ರೀಗೆ ಸಿಗುವ ಪ್ರತಿ ಗೌರವ ಅಷ್ಟಿಷ್ಟಲ್ಲ. ಮನೆಯಲ್ಲಿ ಅವಳಿಗೆ ಅನೇಕ ಸಂಸ್ಕಾರಗಳನ್ನು ನೀಡುವುದು; ಸತ್ ಸಂಪ್ರದಾಯ. ಹೀಗೆ ಜನಪದರು ತಮ್ಮ ಸಂತೋಷವನ್ನು ಜನಪದ ಹಾಡುಗಳಲ್ಲಿ ವ್ಯಕ್ತಪಡಿಸಿದ್ದನ್ನು ಕಾಣಬಹುದು.

ಬಸರಾದ ಮ್ಯಾಲ ನಿನ್ನ ಮೈಯ್ಯ ಹಸರೇರಿದಂಗ ಮಾರಿ ಬಣ್ಣ
ಕೈಕಾಲ ತನುವು ಏನಸಣ್ಣಾ ವರ್ಣಿಸಲಿ ಎಷ್ಟು ನಿನ್ನ ಗುಣ
ಸಿರಿವಂತ ಕೇಳ್ರಿ ಸುಖಸಾರಾ ಪ್ರೇಮಳ ಬಂಕಿ ವಿಸ್ತಾರಾ॥

ಸಣ್ಣಕ್ಕಿ ಅನ್ನ ಮಧುರಾಗಿ ಬೆಣ್ಣಿ ಕಾಸಿ ತುಪ್ಪ ಸಕ್ಕರಿ।
ಸೋಲಿನಾವು ಸಿಹಿಯಾಗಿ ಮೇಲಾದ ಚಟ್ನಿ ಮುಂದಾಗಿ
ಸಿರಿವಂತ ಕೇಳ್ರಿ ಸುಖಸಾರಾ ಪ್ರೇಮಳ ಬಂಕಿ ವಿಸ್ತಾರಾ॥

ಮಗಿ ಮಾವ ರಸಾ ಹೋಳಗಿ ಸರಸಾಗಿ ಏರುಮಾಳಗಿ
ಹೊಸಕೊಡದ ನೀರ ಸವಿಯಾಗಿ ಆ ನೀರು ನಮಗ ಬೇಕಾಗಿ
ಸಿರಿವಂತಿ ಕೇಳ್ರಿ ಸುಖಸಾರಾ ಪ್ರೇಮಳ ಬಂಕಿ ವಿಸ್ತಾರಾ॥

ಮಾಸ್ಯಾಳದವರು ತವರವರು ಲೇಸುಳ್ಳ ಸೀರೆ ಉಡಿಸುವರು
ಹಸತಾಬೂತಿ ಕುಬಸ ತೊಡಸುವರು ಎಷ್ಟಂತ ಜನರಿಗುಣಿಸುವರು
ಸಿರಿವಂತಿ ಕೇಳ್ರಿ ಸುಖಸಾರಾ ಪ್ರೇಮಳ ಬಂಕಿ ವಿಸ್ತಾರಾ॥

ಜೋಗುಳ ಹಾಡುಗಳು

ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ಜೋ ಜೋ ಎಂಬ ಪಲ್ಲವಿಯೊಡನೆ ತೊಟ್ಟಿಲು ತೂಗುತ್ತ ಹಾಡುವ ಹಾಡುಗಳನ್ನು ಜೋಗುಳದ ಹಾಡುಗಳು ಎಂದು ಗುರುತಿಸಲಾಗಿದೆ. ಜೋಗುಳ ಹಾಡುವುದನ್ನು 'ಲಾಲಿ ಹಾಡುವುದು' ಎಂದೂ ಕರೆಯುತ್ತಾರೆ. ಸಾಮಾನ್ಯವಾಗಿ ನಾಮಕರಣದ ಸಂದರ್ಭದಲ್ಲಿಯೂ ಜೋಗುಳ ಹಾಡುವದುಂಟು. ಇವು ಭಾವಪೂರ್ಣ ರಚನೆಗಳು. ಮಕ್ಕಳಿಗಾಗಿ ತಾಯಂದಿರು ರಚಿಸಿದ ಹಾಡುಗಳಿವು. ತಾಯಂದಿರೇ ಹಾಡುವಂತವು. ಮಗು ಲಾಲಿ ಹಾಡುಗಳನ್ನು ಆಲಿಸಿ ತನನ ಹಾಡಲು ಆರಂಭಿಸುವುದು, ತೊದಲು ನುಡಿಯಲು ತೊಡಗುವುದು, ಮಗುವಿನ ಆಟ, ನೋಟ, ತುಂಟತನ ಇತ್ಯಾದಿ ಚಟುವಟಿಕೆಗಳನ್ನು ಬಣ್ಣಿಸಿ ಹಾಡುವುದರಿಂದ ತಾಯಿ ಎದೆಯಳಲು ನಿವಾರಣೆಯಾಗಿ ಅವಳಿಗೆ ಮನೋಲ್ಲಾಸ ಸಿಗುತ್ತದೆ. ಮಗುವಿನ ಮೇಲಿನ ಮಮತೆ ವಾತ್ಸಲ್ಯ ದ್ವಿಗುಣಗೊಳ್ಳುತ್ತದೆ. ಈ ಕೆಳಗಿನ ಹಾಡಿನಲ್ಲಿ

ಬಾಳಿಯ ಬನದಾಗ ಬಾಳಿಯ ತೊಟ್ಟಿಲ
ಕಟ್ಟಿ ಬಾಲನಾಗಿ ಆಡಿದ ನನಕಂದ ಜೋ ಜೋ
ಬಾಲನಾಗಿ ಆಡಿದ ನನಕಂದ ಜೋ ಜೋ

ನಿಂಬೆಯ ಬನದಾಗ ರಂಬೆಯ ತೊಟ್ಟಿಲ ಕಟ್ಟಿ
ಕಂದನಾಗಿ ಆಡಿದ ನನಕಂದ ಜೋ ಜೋ
ಕಂದನಾಗಿ ಆಡಿದ ನನಕಂದ ಜೋ ಜೋ

ಉತ್ತೊತ್ತಿ ಬನದಾಗ ಉತ್ತಮ ತೊಟ್ಟಿಲ
ಕಟ್ಟಿ ಉತ್ತಮನಾಗಿ ಆಡಿದ ನನಕಂದ ಜೋ ಜೋ
ಉತ್ತಮವಾಗಿ ಆಡಿದ ನನಕಂದ ಜೋ ಜೋ

ಅರಿಷಿಣ ಬನದಾಗ ಪರಸ ತೊಟ್ಟಿಲ ಕಟ್ಟಿ
ಅರಸನಾಗಿ ಆಡಿದ ನನಕಂದ ಜೋ ಜೋ
ಅರಸನಾಗಿ ಆಡಿದ ನನಕಂದ ಜೋ ಜೋ

ತೆಂಗಿನ ಬನದಾಗ ತಣತಿ ತೊವುಲಕಾಕಿ
ಕಂದನಾಗಿ ಆಡಿದ ನನಕಂದ ಜೋ ಜೋ
ಕಂದನಾಗಿ ಆಡಿದ ನನಕಂದ ಜೋ ಜೋ

ಅಡಕಿಯ ಬನದಾಗ ಕಿಡಕಿಯ ತೊಟ್ಟಿಲಕಟ್ಟಿ
ಕಡಕಲಿಂದಾಡಿದ ನನಕಂದ ಜೋ ಜೋ
ಕಡಕಲಿಂದಾಡಿದ ಜೋ ಜೋ

ಗ್ರಾಮದಲ್ಲಿರುವ ವಿವಿಧ ಪ್ರಕಾರದ ಗೀತೆಗಳನ್ನು ಮೇಲಿನಂತ ನೋಡಬಹುದಾಗಿದೆ.[೪೩]

೮.೩.೨. ಜನಪದ ಕಥೆಗಳು

ಜನಪದ ಕಥೆಗಳು ಮೂಲತಃ ಮಾನವನ ವೈಯಕ್ತಿಕ ಹಾಗೂ ಸಾಮಾಜಿಕ ಅವಶ್ಯಕತೆಯ ಫಲಗಳು. ಮುಖ್ಯವಾಗಿ ಪುರಾತನ ಸಂಸ್ಕೃತಿ ಮತ್ತು ಪರಂಪರೆಯ ಮೇಲೆ ಹೆಚ್ಚು ಬೆಳಕು ಚೆಲ್ಲುತ್ತವೆ. ಹೊಸ ಸಂಸ್ಕೃತಿಯ ನಿರ್ಮಾಣಕ್ಕೆ ಯುಕ್ತ ಹಿನ್ನೆಲೆಯನ್ನು ಒದಗಿಸುತ್ತವೆ.

ಕಥೆಗಳನ್ನು ಹೇಳುವ ಮತ್ತು ಕೇಳುವ ಮಾನವ ಪ್ರವೃತ್ತಿ ಮಾನವ ಸಮಾಜದಷ್ಟೇ ಪುರಾತನವಾದದ್ದು. ನಿತ್ಯದ ದುಡಿಮೆಯ ಶ್ರಮವನ್ನು ಮರೆಯಲು ಬಿಡುವಿನ ವೇಳೆಯನ್ನು ನಿರಾಳವಾಗಿ ಕಳೆಯಲು, ಏಕತಾನದ ಬದುಕಿಗೆ ರಂಜನೆಯನ್ನು ದೊರಕಿಸಿಕೊಳ್ಳಲು–ಹೀಗೆ ನಾನಾ ಉದ್ದೇಶಗಳ ಹಿನ್ನೆಲೆಯಲ್ಲಿ ಮನುಷ್ಯನು ಕಥೆ ಹೇಳುವ ಕಲೆಯನ್ನು ರೂಢಿಸಿಕೊಂಡ.

ಕಥಾ ನಿರೂಪಕನ ಕಲ್ಪನೆ; ಶ್ರೋತೃಗಳ ಕುತೂಹಲವನ್ನು ಒಂದೇ ಸಮನಾಗಿ ಒಟ್ಟೊಟ್ಟಾಗಿ ಸಾಗಿ ಬರುವಂತೆ ಮಾಡುವ ವಿಶಿಷ್ಟ ಮೌಖಿಕ ಪ್ರಕಾರವೇ ಜನಪದ ಕಥೆ. ಇದನ್ನು ನಿರೂಪಿಸುವ ನಿರೂಪಕ ಇದನ್ನು ಗುರುತಿಸುವುದು "ಅಜ್ಜಿ ಕಥೆ" ಎಂತಲೇ. ಏಕೆಂದರೆ ಕಥೆ ಹೇಳುವ ವಿಷಯದಲ್ಲಿ ಅಜ್ಜಿಯರನ್ನು ಮೀರಿಸುವವರಿಲ್ಲ. ಆದರೂ ಕಥೆ ಹೇಳಲು ಕೇಳಲು ಪುರುಷರು, ಮಹಿಳೆಯರು, ವೃದ್ಧರು, ಬಾಲಕರು ಎನ್ನುವ ಭೇದವೇನಿಲ್ಲ. ಜಗತ್ತಿನಲ್ಲಿ ಮನುಷ್ಯರಿರುವ ಕಡೆಯಲ್ಲೆಲ್ಲಾ ಈ ಕ್ರಿಯೆ ಏಕಪ್ರಕಾರವಾಗಿ ಕಂಡುಬಂದಿದೆ. ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಪ್ರಚಲಿತವಿರುವ ಜನಪದ ಕಥೆಗಳಲ್ಲಿ ಏಕರೂಪತೆ ಇರುವಂತೆ ಭಿನ್ನತೆಗಳೂ ಇವೆ. ಮೌಖಿಕವಾಗಿ ಸಾಗಿ ಬರುವುದರಿಂದ ಅವು ನಿರಂತರವಾಗಿ ಬದಲಾವಣೆಗೊಳ್ಳುತ್ತಲೇ ಇರುತ್ತವೆ. ಅವು ಬೇರೆ ಬೇರೆ ಕಾಲ ಮತ್ತು ಪ್ರದೇಶಗಳಲ್ಲಿ ಬದುಕಬೇಕಾದ್ದರಿಂದ ಭೌಗೋಳಿಕವಾಗಿ ವ್ಯತ್ಯಾಸಕ್ಕೊಳಗಾಗುವುದು ಸರ್ವೆಸಾಮಾನ್ಯ. ವರ್ಷಗಳುರುಳಿದಂತೆ ಚಾರಿತ್ರಿಕ ವ್ಯತ್ಯಾಸಕ್ಕೂ ಗುರಿಯಾಗಬಹುದು. ಈ ಕಾರಣಗಳಿಂದಾಗಿ ಕಥೆಗಳ ರೂಪದಲ್ಲಿ ವೈವಿಧ್ಯವನ್ನು ಭೌಗೋಳಿಕವಾಗಿ, ಚಾರಿತ್ರಿಕವಾಗಿ ವಿಸ್ತೃತ

ವ್ಯಾಪ್ತಿಯನ್ನು ಪಡೆದುಕೊಂಡಿವೆ. ಮಾನವನ ಸಾಂಸ್ಕೃತಿಕ ವಿಕಾಸದ ವಿವಿಧ ಘಟ್ಟಗಳನ್ನು ಅಭ್ಯಾಸ ಮಾಡಲು ಕಥೆಗಳು ವಿಫುಲ ಸಾಮಗ್ರಿಯನ್ನೊದಗಿಸುತ್ತವೆ.[೪೪]

ಮೌಖಿಕ ಸಾಹಿತ್ಯದಲ್ಲಿ ಜನಪದ ಕಥೆಗಳೇ ಹೆಚ್ಚು ಜನಪ್ರಿಯವಾದ ಪ್ರಕಾರ. ಕಥೆಗಳ ವಿಶಿಷ್ಟ ಲಕ್ಷಣವೆಂದರೆ ಸಾಂಪ್ರದಾಯಿಕತೆ. ಬಲ್ಲವರಿಂದ ಕಥೆಯನ್ನು ಕೇಳಿಯಾದ ಮೇಲೆ ಅದನ್ನು ಹೇಳುವ ಸಂದರ್ಭ ಪ್ರಾಪ್ತವಾದಾಗ ಅದನ್ನು ಹೇಗೆ ನೆನಪಿನಲ್ಲುಳಿಸಿಕೊಳ್ಳಲಾಗುತ್ತದೊ ಅಂತೆಯೇ ಅದನ್ನು ಪುನರುಚ್ಚರಿಸಲಾಗುತ್ತದೆ. ಆ ಪುನರುಚ್ಚಾರಕ್ಕೆ ಆಯಾ ಕಥೆಗಾರನ ನೆನಪಿನ ಶಕ್ತಿ, ಕಲ್ಪನಾ ಸಾಮರ್ಥ್ಯ, ಅನುಭವಗಳಿಗನುಗುಣವಾಗಿ ಬೆಳೆಯುತ್ತ ಸಾಗುತ್ತದೆ. ಈ ಸಂದರ್ಭದಲ್ಲಿ ಮೂಲ ಕಥೆಯಲ್ಲಿರಬಹುದಾದ ಕೆಲವು ಅಂಶಗಳು ಕೈ ಬಿಟ್ಟು ಹೋಗಲೂಬಹುದು, ಹೊಸ ಅಂಶಗಳು ಸೇರಿಕೊಳ್ಳಲೂಬಹುದು.

ಸ್ಮಿತ್ ಥಾಂಸನ್ನರವರು ಜಾನಪದ ಕಥೆಗಳನ್ನು ಈ ರೀತಿಯಾಗಿ ವರ್ಗೀಕರಣ ಮಾಡಿರುತ್ತಾರೆ. ಆದುದರಿಂದ ಈ ಮಾದರಿಯನ್ನು ದೃಷ್ಟಿಯಾಗಿಸಿಕೊಂಡು ಹೋಗುವುದು ಒಂದು ರೀತಿಯಿಂದ ಸೂಕ್ತವೇ ಎನ್ನಬಹುದು.

ಜನಪದ ಕಥೆಗಳು

ಸಂಕೀರ್ಣ ಕಥೆಗಳು

೧. ಹಾಸ್ಯ ಕಥೆಗಳು
೨. ಪ್ರಾಣಿ ಕಥೆಗಳು
೩. ಸೂತ್ರ ಕಥೆಗಳು

ಸರಳ ಕಥೆಗಳು

ಕಟ್ಟು ಕಥೆಗಳು

೧. ಅತಿಮಾನುಷ್ಯ ವಿರೋಧಿಗಳು
೨. ಅತಿಮಾನುಷ್ಯ ಸಹಾಯಕರು
೩. ಮಾಟ ಮತ್ತು ಅದ್ಭುತಿಗಳು
೪. ಪ್ರೇಮಿಗಳು ಮತ್ತು ದಂಪತಿಗಳು
೫. ಪರೀಕ್ಷೆಗಳು ಮತ್ತು ಸಾಹಸಗಳು
೬. ವಿಧೇಯತೆ
೭. ಒಳ್ಳೆಯ ಹಾಗೂ ಕೆಟ್ಟ ಬಂಧುಗಳು
೮. ಅತೀತ ಶಕ್ತಿಗಳು
೯. ಮೂರು ಲೋಕಗಳು[೪೫]

ವಾಸ್ತವಿಕ ಕಥೆಗಳು

೧. ಬುದ್ಧಿವಂತಿಕೆ ಕಥೆಗಳು
೨. ವಂಚಕರ ಕಥೆಗಳು
೩. ಕಳ್ಳರ ಕಥೆಗಳು

ಜನಪದ ಕಥೆಗಳ ವರ್ಗೀಕರಣದಲ್ಲಿ ಆಶಯ ಮತ್ತು ಮಾದರಿ ಬಹುಮುಖ್ಯ ಪಾತ್ರವಹಿಸುತ್ತವೆ. ಆಶಯ ಕಥಾವಸ್ತುವನ್ನು ಕುರಿತದ್ದಾದರೆ; ಮಾದರಿ ಅದರ ತಾಂತ್ರಿಕ ಸ್ವರೂಪವನ್ನು ಕುರಿತದ್ದು. ಕಥೆಯ ಅತ್ಯಂತ ಚಿಕ್ಕ ಘಟಕ ಅಥವಾ ಮೂಲಾಂಶವೇ ಆಶಯ. ಇವು ಕೆಲವು ವೇಳೆ ಬಹು ಸರಳ ಕಲ್ಪನೆಗಳಾಗಿದ್ದರೂ ಸ್ವಾಭಾವಿಕವಾಗಿರದೇ ಅದ್ಭುತವೂ, ಅಸಾಮಾನ್ಯವೂ ಆಗಿರುತ್ತದೆ. ಮಾಟಗಾತಿ, ಮಂತ್ರವಾದಿ, ಮಲತಾಯಿ, ರಾಕ್ಷಸ,

ಮಾತನಾಡುವ ಪ್ರಾಣಿ, ದೈಹಿಕ ವೈಪರಿತ್ಯ, ಮಂತ್ರದಂಡ ಇತ್ಯಾದಿಗಳೆಲ್ಲ ಕಥನದ ಕ್ರಿಯಾಶೀಲತೆಗೆ ಕಾರಣವಾಗುವುದರಿಂದ ಆಶಯಗಳೆಂದು ಗುರುತಿಸಲ್ಪಡುತ್ತವೆ. ಜಗತ್ತಿನ ಎಲ್ಲ ಜನಪದ ಕಥೆಗಳಿಗೆ ಮೂಲಭೂತವಾದ ಕೆಲವು ಆಶಯಗಳಿದ್ದು ಇವುಗಳ ಸಂಖ್ಯೆ ಸುಮಾರು ಹತ್ತು ಸಾವಿರ ಇರಬಹುದೆಂದು[೪೬] ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಸ್ವತಂತ್ರ ಅಸ್ತಿತ್ವವುಳ್ಳ ಯಾವುದೇ ಜನಪದ ಕಥೆಯು ಒಂದು ಮಾದರಿ ಆಗಬಹುದು. ಉದಾಹರಣೆ ಗ್ರಾಮದಲ್ಲಿ ಸಂಪಾದಿಸಿರಿಸಿದ ಒಂದು ಕಥೆಯನ್ನು ಈ ರೀತಿಯಾಗಿ ಕಾಣಬಹುದು.

ಗರ್ವಿಷ್ಠ ಸೊಸೆ

ಒಬ್ಬಳು ಸೊಸೆ ಇದ್ದಳು. ಅವಳು ಮಹಾ ಗರ್ವಿಷ್ಠೆ. ಅವಳೆಂದೂ ಅತ್ತೆಗೆ ಅತ್ತೆ ಎಂದು ಕರೆಯುತ್ತಿರಲಿಲ್ಲ ಹಾಗೂ ಮಾವನಿಗೆ ಮಾವ ಎನ್ನುತ್ತಿರಲಿಲ್ಲ. ಮಾವ ಒಂದು ದಿನ ಸೊಸೆಯನ್ನು ಪರೀಕ್ಷೆ ಮಾಡಲು ಬಯಸಿದ. ಅತ್ಯಂತ ಕಠಿಣ ಪರಿಸ್ಥಿತಿ ಬಂದಾಗಲಾದರೂ ಮಾವ ಅಂತ ಹೇಳಬಹುದು ಅಂತಾ ಭಾವಿಸಿದ.

ಒಂದು ದಿನ ಉಪಾಯಮಾಡಿ ತನ್ನ ಪತ್ನಿಗೆ ಮಾವ ಹೇಳಿದನಂತೆ, ನಾನು ನೇಣು ಹಾಕಿಕೊಂಡಂತೆ ನಟಿಸುತ್ತೇನೆ. ನೀನು ಪಕ್ಕದ ಮನೆಯಲ್ಲಿ ಹೋಗಿ ಕುಳಿತುಕೊಳ್ಳು ಎಂದನಂತೆ. ಅತ್ತೆ ಹಾಗೆ ಮಾಡಿದಳಂತೆ. ಮಾವ ನೇಣು ಹಾಕಿಕೊಂಡಂತೆ ನಟಿಸಿದನಂತೆ. ಹೊರಗಿನಿಂದ ಸೊಸೆ ಬಂದು ಮಾವ ನೇಣು ಹಾಕಿಕೊಂಡಿದ್ದನ್ನು ಕಂಡಳು. ಆದರೆ ಗಾಬರಿಯಾಗದೇ ಪಕ್ಕದ ಮನೆಯಲ್ಲಿರುವ ಅತ್ತೆಯನ್ನು ಕಂಡು ಹೀಗೆ ಹೇಳುತ್ತಾಳೆ.

ಮಾತು ಮಾತಗಳಿತು, ತುತಗಾಳಿಗಾಣ್ತು, ಯಾಕ್ಯಾಕೊ ನಿನ್ನ ಗಂಡ ಜೊತ್ಯಾಡ್ತಾನೆ ನೋಡು ಎಂದು ಹೇಳಿದ್ಲಂತೆ. ಕೊನೆಗೂ ಮಾವ ಎಂದು ಹೇಳಲೇ ಇಲ್ಲ. ಇಂತಹ ಜನಪದರಿಂದ ಸಂಗ್ರಹಿಸಿ ಸಂಪಾದಿಸಿದ ಕಥೆಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

೮.೩.೩. ಜನಪದ ಕಥನಗೀತೆ

ಜಾನಪದ ಸಾಹಿತ್ಯ ಕ್ಷೇತ್ರದಲ್ಲಿ ಕಥನಗೀತೆ ಒಂದು ಪ್ರಮುಖ ಪ್ರಕಾರ. ಇದನ್ನು ಕಥಾಗೀತೆ, ನೀಳ್ಗವಿತೆ, ಹಾಡ್ಗತೆ, ಪದ್ಯಕಥೆ, ಕಥನ ಕಾವ್ಯ, ಕಾವ್ಯ ಕಥೆ ಎಂಬೆಲ್ಲ ಹೆಸರುಗಳಿಂದ ಕರೆಯುತ್ತಾರೆ. ಹೆಸರೆ ಸೂಚಿಸುವಂತೆ ಈ ಗೀತೆಯು ಕಥೆಯಾಧಾರಿತವಾಗಿದೆ. ಈ ಕಥೆಯೇ ಹಾಡಿನ ರೂಪದಲ್ಲಿ ನಿರೂಪಿಸಲ್ಪಡುತ್ತದೆ. ಈ ಹಾಡು ಸಂವಾದ ರೂಪದಲ್ಲಿ ಯಾರೋ ಒಬ್ಬರು ನಿರೂಪಿಸಿದಂತೆ ಕಂಡುಬರುತ್ತದೆ. ಇಲ್ಲಿ ವರ್ಣನೆಯಷ್ಟೇ ಮುಖ್ಯವಲ್ಲ, ಪಾತ್ರ ರಚನೆ ಮತ್ತು ಕ್ರಿಯಾಶೀಲ ಮುಖ್ಯ. ಇದರಲ್ಲಿ ಒಬ್ಬ ವ್ಯಕ್ತಿಯ ಬದುಕಿನ ಸ್ವಾರಸ್ಯಕರವಾದ ಘಟನೆ. ಇದು ಸನ್ನಿವೇಶಕ್ಕೆ ಅನುಗುಣವಾಗಿ ಕಥೆ ಸುಲಭವಾಗಿ ಜರುಗುತ್ತಿರುತ್ತದೆ. ಉಳಿದ ಪಾತ್ರಗಳೆಲ್ಲವೂ ಪೋಷಕವಾಗಿ ಕಂಡುಬರುತ್ತವೆ. ಇದರಲ್ಲಿ ಕಂಡು ಬರುವ ಕಥೆ ಕಲ್ಪನೆಗಿಂತ ಹೆಚ್ಚಾಗಿ ನಿತ್ಯ ಬದುಕಿನ ಸತ್ಯ ಕಥೆಯಾಗಿದ್ದು, ರಸವತ್ತಾಗಿ ಒಡಮೂಡಿರುತ್ತದೆ. ಹೆಣ್ಣಾಗಲಿ, ಗಂಡಾಗಲಿ ಹಾಡುತ್ತಿದ್ದಾಗ ಕಥೆಯು ವೇಗವಾಗಿ ಚಲಿಸುವುದನ್ನು ಕಾಣಬಹುದು. ಸಂಗೀತವೇ ಅವಿಭಾಜ್ಯ ಅಂಗವೆಂಬಂತಿರುವ ಕಥನ ಗೀತೆಗೆ; ಆಕರ್ಷಕವಾದ ಪಲ್ಲವಿಗಳು ಕೆಲವೊಂದರಲ್ಲಿ ಕಂಡುಬರುತ್ತವೆ. ಸಂತೋಷ ಮತ್ತು ದುಃಖಕ್ಕೆ ಸಂಬಂಧಪಟ್ಟಂತಹ ಕಥನ ಗೀತೆಗಳಲ್ಲಿ ಲಯದ ಏರಿಳಿತಗಳಿದ್ದು, ದಾಟಿಯಲ್ಲಿ ವ್ಯತ್ಯಾಸ ಕಂಡುಬರುತ್ತದೆ. ತ್ಯಾಗ, ಬಲಿದಾನಗಳಿಗೆ ಹೆಸರಾದ ಅಪಾರ ಸಂಖ್ಯೆಯ

ಕಥನ ಗೀತೆಗಳನ್ನು ಹಾಡುವವರು ಕಂಸಾಳೆ, ತಾಳ, ದಮ್ಮಡಿ, ಚೌಡಿಕೆ, ಕಿನ್ನರಿ, ಏಕತಾರಿ, ಗಣೆ, ಗುಮ್ಮಟೆ, ಗೆಜ್ಜೆ ಮೊದಲಾದವುಗಳನ್ನು ಬಳಸುತ್ತಾರೆ.

ಈ ಕಥನಗೀತೆಗಳು ಹಲವು ಬಗೆಯಲ್ಲಿ ಕಂಡುಬಂದು ಸಮಾಜದ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಹಜವಾಗಿ ನಡೆದಿರುವಂತೆ ಸ್ಥಿರಗೊಂಡಿವೆ. ಕೆಲವು ವಿದ್ವಾಂಸರು ಅವುಗಳನ್ನು ಈ ಕೆಳಕಂಡಂತೆ ವಿಭಜಿಸಿದ್ದಾರೆ. ಅವುಗಳಿಗೆ ನಿದರ್ಶನವಾಗಿ –

೧. ಪೌರಾಣಿಕ ಕಥನ ಗೀತೆಗಳು – ಶಿವ ಪಾರ್ವತಿ, ಗಂಗೆ ಗೌರಿ, ಕುಸುಮ ಬಾಲೆ

೨. ಚಾರಿತ್ರಿಕ ಕಥನ ಗೀತೆಗಳು – ಸಂಗೊಳ್ಳಿ ರಾಯಣ್ಣ, ಸರ್ಜಪ್ಪನಾಯಕ, ಕೆಂಪೆಗೌಡ

೩. ಸಾಮಾಜಿಕ ಕಥನ ಗೀತೆಗಳು – ಉತ್ತರದೇವಿ, ಅಣ್ಣ ತಮ್ಮ

೪. ಕಾಲ್ಪನಿಕ ಕಥನ ಗೀತೆಗಳು – ಗಜವತಿ, ರೂಪವತಿ

೫. ದೈವಸಂಬಂಧಿ ಕಥನ ಗೀತೆಗಳು – ಬಿಳಿಗಿರಿರಂಗ, ಚಲುವಯ್ಯ, ಬೀರಪ್ಪ

೬. ಆತ್ಮಾರ್ಪಣೆ ಕಥನ ಗೀತೆಗಳು – ಕೆರೆಗೆಹಾರ, ಮಲ್ಲಿಗೆ ಮಾದೇವಿ

೭. ಹಾಸ್ಯ ಕಥನ ಗೀತೆಗಳು – ಕೊಣವೇಗೌಡ, ನೂಲೊಲ್ಯಾಕ ಚನ್ನಿ

೮. ಮಾಂತ್ರಿಕ ಕಥನ ಗೀತೆಗಳು – ಬಾಲನಾಗಮ್ಮ, ನಾಗರಗನ್ನೆ[೪೬]

ಬಿಸುಕಲ್ಲಿನ ಹಾಡು, ಮದುವೆ ಹಾಡು ಮುಂತಾದ ಕೆಲವು ಪ್ರಕಾರಗಳಲ್ಲಿ ಕಥೆಯಿರುವುದಿಲ್ಲ. ಬಿಡಿ ಬಿಡಿ ಭಾವಗಳು ದಟ್ಟೈಸುತ್ತವೆ. ಕಥೆಯೇ ಹೆಚ್ಚಾಗಿರುವ ಹಾಡುಗಳೆಂದರೆ ಕೋಲಾಟದ ಪದಗಳು, ಡೊಳ್ಳಿನ ಹಾಡುಗಳು, ಕರ್ಬಲ ಹಾಡುಗಳು, ಜೋಗತಿಯ ಹಾಡುಗಳು, ಗೀ ಗೀ ಪದಗಳು ಹೀಗೆ ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ವಿಷಯಗಳ ಕುರಿತು ಮೂರು ಸ್ತರದಲ್ಲಿ ಈ ಹಾಡುಗಳಿದ್ದವು.

ಈ ಕೆಳಗಿನ ಹಂತಿಯ ಹಾಡಿನಲ್ಲಿ ಕಾಲ್ಪನಿಕ ಕಥನ ಗೀತೆಯನ್ನು ಕಾಣಬಹುದು.

ತಂಬಾಕ ಸೇದವನ ಸಂಗತಿ ಬ್ಯಾಡಣ್ಣ
ಟೆಂಗಿನ ಜುಟ್ಟ ಎಡಗೈಯ್ಯೊ

ಟೆಂಗಿನ ಜುಟ್ಟ ಎಡಗೈಯಾಗ ಹಿಡಕೊಂಡು
ಕೆಂಡಕ ಮೂರ ಮನೆಯ ತಿರಗ್ಯಾನ ॥೧॥

ಕೆಂಡಕ ಮೂರ ಮನೆಯ ತಿರಗೊಟಗಿ ಆ ಬಾಲಿ
ಬಂಡಿ ಕೊಡ ಹೊತ್ತ ಬರತಾಳೋ
ಬಂಡಿಕೊಡ ಹೊತ್ತ ಬರ್ವೊತ್ತಿಗೆ ಆ ಹುಡುಗ
ಅಡ್ಡೋಗಿ ಆಕಿನ ತರಬ್ಯಾನೋ

ಅಡ್ಡೊಗಿ ಆಕಿನ ತರಬೊಟಗಿ ಆ ಬಾಲಿ
ಮಾಡ ಮುಗಲಾಗಿ ನಿಂತಾಳೊ

ಮಾಡ ಮುಗಲಾಗಿ ನಿಂದರೊಟಗಿ ಆ ಹುಡುಗ
ಕೊಲ ಮಿಂಚಾಗಿ ಎರಗ್ಯಾನೊ

ಕೊಲ ಮಿಂಚಾಗಿ ಎರಗೊಟಗಿ ಆ ಬಾಲಿ
ಸಾತಿ ಮಳೆಯಾಗಿ ಸುರದಾಳೊ

ಸಾತಿ ಮಳಿಯಾಗಿ ಸುರಿಯೊಟಿಗೆ ಆ ಹುಡುಗ
ಒಡ್ಡ ಕೆರಿ ಆಗಿ ನಿಂತಾನೊ

ಒಡ್ಡ ಕೇರಿ ಆಗಿ ನಿಂದರೊಟಿಗೆ ಆ ಬಾಲಿ
ಮೀನ ಮಸಳ್ಯಾಗಿ ಬಿದ್ದಾಳೊ

ಮೀನ ಮಸಳ್ಯಾಗಿ ಬೀಳೊಟಿಗೆ ಆ ಹುಡುಗ
ಜಾಲಗಾರಾಗಿ ಸೆಳದಾನೋ

ಜಾಲಗಾರಾಗಿ ಬೀಳೊಟಿಗೆ ಆ ಬಾಲಿ
ದೊಡ್ಡ ಗುಡ್ಡಾಗಿ ಬಿದ್ದಾಳೊ

ದೊಡ್ಡ ಗುಡ್ಡಾಗಿ ಬೀಳೊಟಿಗೆ ಆ ಹುಡುಗ
ಕಡ್ಡ್ಯಾಗಿ ಗುಡ್ಡ ಕೆದರ್‍ಯಾನೊ

ಕಡ್ಡ್ಯಾಗಿ ಗುಡ್ಡ ಕೆದರೊಟಿಗೆ ಆ ಬಾಲಿ
ಜೋಳದ ಕಾಳಾಗಿ ಬಿದ್ದಾಳೊ

ಜೋಳದ ಕಾಳಾಗಿ ಬೀಳೊಟಿಗೆ ಆ ಹುಡುಗ
ಕೊಳ್ಯಾಗಿ ಕಾಳ ನುಂಗ್ಯಾನೊ

ಕೊಳ್ಯಾಗಿ ಕಾಳ ನುಂಗೊಟಿಗೆ ಆ ಬಾಲಿ
ಬೆಕ್ಕಾಗಿ ಗೋಣ ಮುರಿದಾಳೊ
ಅಹೊ ಹುಲಗಣ್ಣಾ ಹುಲಗೋ[೪೮]

೮.೩.೪. ಗಾದೆ

ಗಾದೆ ಜಾನಪದದ ಬಹುಮುಖ್ಯ ಪ್ರಕಾರಗಳಲ್ಲೊಂದು. ಪ್ರಪಂಚದ ಎಲ್ಲ ಜನವರ್ಗಗಳಲ್ಲಿಯೂ ಗಾದೆ ಪ್ರಚಲಿತದಲ್ಲಿದೆ. ನಿತ್ಯದ ಭಾಷೆಯಂತೆಯೇ ಸಹಜವಾಗಿ, ಅನಿವಾರ್ಯವಾಗಿ ಜನಜೀವನದೊಡನೆ ಗಾದೆ ಬೆಳೆದು ಬಂದಿದೆ. ನಿತ್ಯ ಜೀವನದಲ್ಲಿ ಎಲ್ಲ ಸಂದರ್ಭದಲ್ಲಿಯೂ ಅವಶ್ಯಕತೆಗಳಿಗನುಗುಣವಾಗಿ ಗಾದೆಗಳು ಪ್ರಯೋಗವಾಗುತ್ತಿರುತ್ತವೆ. ಈ ಅರ್ಥದಲ್ಲಿ ಇದೊಂದು ಜನಪ್ರಿಯವಾದ ಪ್ರಕಾರ ಕೂಡಾ ಹೌದು. ಗಾದೆ'ಪದವು ಮೂಲತಃ ಸಂಸ್ಕೃತದ 'ಗಾಥಾ' ಎಂಬುದರಿಂದ ನಿಷ್ಪನ್ನಗೊಂಡಿದೆ ಎಂದು ವಿದ್ವಾಂಸರು ಭಾವಿಸುತ್ತಾರೆ. ಸಂಸ್ಕೃತದ 'ಗಾಥ'ವು ಪ್ರಾಕೃತದಲ್ಲಿ 'ಗಾಹೆ" ಆಗಿ; ಕನ್ನಡದಲ್ಲಿ ಗಾದೆ ಆಗಿರಬೇಕು.[೪೯] ಆದರೆ ಸಂಸ್ಕೃತದಲ್ಲಿ 'ಗಾಥಾವು ಛಂದಸ್ಸಿನ ಒಂದು ಜಾತಿಯಾಗಿದೆ. ಕನ್ನಡದಲ್ಲಿ ಇದರ ಅರ್ಥ ಬೇರೆಯಾಗಿದೆ, ಕನ್ನಡದಲ್ಲಿ ಗಾದೆಗೆ ಸಂವಾದಿಯಾಗಿ "ನಾಣ್ಣುಡಿ" ಎಂಬ ಅಚ್ಚಗನ್ನಡ ಪದ ಬಳಕೆಯಲ್ಲಿದೆ. ಇದರ ಜೊತೆಗೆ ಜಾಣ್ನುಡಿ, ನಲ್ನುಡಿ, ಲೋಕೋಕ್ತಿ, ಶಾಸ್ತ್ರ ಎಂಬ ಪದಗಳೂ ಕ್ವಚಿತ್ತಾಗಿ ಬಳಕೆಯಲ್ಲಿದೆ. ಸಂಸ್ಕೃತದಲ್ಲಿ ಲೋಕೋಕ್ತಿ, ಸಾಮತಿ, ಸಾರೋಕ್ತಿ ಎಂಬ ಇತ್ಯಾದಿ ಹೆಸರುಗಳಿವೆ. ಮರಾಠಿಯಲ್ಲಿ ಅಹಣಾ, ಬಂಗಾಳಿಯಲ್ಲಿ ಪ್ರವಾದ, ಹಿಂದಿಯಲ್ಲಿ ಕಹಾವತ್, ಗುಜರಾತಿಯಲ್ಲಿ ಉಬಾಣಿ, ತಮಿಳಿನಲ್ಲಿ ಪಳವೊಳ, ಮಳೆಯಾಳಂನಲ್ಲಿ ಪಳಂ ಚೋತ್, ತೆಲುಗಿನಲ್ಲಿ ನಾನುಡಿ, ಕೊಡಗಿನಲ್ಲಿ ಗಾದಿ, ತುಳುವಿನಲ್ಲಿ ಗಾದೆ' ಎಂಬ ಪ್ರಯೋಗಗಳಿವೆ. ಇಂಗ್ಲೀಷನಲ್ಲಿ "Prov-

erb" ಎಂಬ ಪದವಿದ್ದು, ಅದು ಲ್ಯಾಟಿನ್ ಪದವಾದ "Poverbium" ನಿಂದ ಹುಟ್ಟಿಕೊಂಡಿದೆ. ಗ್ರೀಕ್‌ನಲ್ಲಿ ಗಾದೆಗೆ ಸಮನಾದ ಪದವೆಂದರೆ ""Paroemia". ಜನರೆದುರು ಅಥವಾ ಬೀದಿಯಲ್ಲಿ ಉದ್ಗರಿಸಿದ ಮಾತೆಂಬ ಅರ್ಥ ಆ ಪದಕ್ಕೆ ಇಲ್ಲಿದೆ. ಈ ಗಾದೆಗಳು ಬಹಳ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿವೆಯಾದರೂ ಅವು ಯಾವಾಗ ಹುಟ್ಟಿಕೊಂಡವು ಎಂದು ನಿಖರವಾಗಿ ಹೇಳಲಾಗದು. ಗಾದೆಯ ಲಕ್ಷಣಗಳನ್ನು ಗಮನಿಸಿದಾಗ–

೧. ಇದು ಹಳೆಯ ಉಕ್ತಿ. ಜನರು ಆಡಿ ಪಳಗಿಸಿದ ಮಾತು; ಲೋಕೋಕ್ತಿ. ಇದಕ್ಕೆ ಜನಾಂಗದ ಮುದ್ರೆ ಬಿದ್ದಿರುವುದರಿಂದ ಇದು ಜನವಾಣಿ.

೨. ಸಂಕ್ಷಿಪ್ತತೆ ಗಾದೆಯ ಮುಖ್ಯ ಲಕ್ಷಣ. ಆದರೆ ಸಂಕ್ಷಿಪ್ತವಾದುದೆಲ್ಲ ಗಾದೆಯಾಗಲಾರದು. ಜೀವನಾನುಭವವುಳ್ಳದ್ದು ಗಾದೆಯೆನಿಸುತ್ತದೆ.

೩. ಲೋಕಪ್ರಿಯತೆ; ಗಾದೆ ಲೋಕದ ಜನತೆಗೆ ಪ್ರಿಯವಾಗಿರುವ ಕಾರಣದಿಂದಲೇ ಅದು ವಿಶ್ವವ್ಯಾಪಕತ್ವವನ್ನು ಪಡೆದುಕೊಂಡಿದೆ. ಸಮಸ್ತರು ಇದನ್ನ ಚಲಾವಣೆಯ ನಾಣ್ಯದಂತೆ ಬಳಸುವ ಕಾರಣದಿಂದ ಜನಪ್ರಿಯತೆಯನ್ನು ಗಳಿಸಿಕೊಂಡಿದೆ. ಇದೇ ಇದರ ಬಹುಮುಖ್ಯ ಲಕ್ಷಣ.

ಗಾದೆಯ ಲಕ್ಷಣದ ಕುರಿತು ಅನೇಕ ವಿದ್ವಾಂಸರು ತಮ್ಮ ತಮ್ಮ ವಾದಗಳನ್ನು ಮಂಡಿಸಿದರೂ; ಗಾದೆಯ ಪರಂಪರಾಗತವಾದ ಮಾತೆಂಬುದನ್ನು ಮತ್ತು ಅದು ಅನುಭವಜನ್ಯವಾದುದೆಂಬುದನ್ನು ಬಹುತೇಕವಾಗಿ ಎಲ್ಲರೂ ಒಪ್ಪಿಕೊಂಡಿದ್ದಾರೆ. ಅದು ಒಂದು ನಿರ್ದಿಷ್ಟ ಸಂದರ್ಭದಲ್ಲಿನ ಮಾತುಕತೆಗೆ ಸಹಾಯಕವಾಗಿ ಬಳಕೆಯಾಗುತ್ತದೆ. ಈ ಸಮರ್ಥನಾ ವಾಕ್ಯವು ಆಕಾರದಲ್ಲಿ ಕಿರಿದಾಗಿದ್ದು ಅರ್ಥದ ದೃಷ್ಟಿಯಿಂದ ವಿಸ್ತಾರವಾಗಿರುತ್ತದೆ. ಈ ಹಿನ್ನಲೆಯಲ್ಲಿಯೇ ಸಾಮಾನ್ಯ ಬಳಕೆಯಲ್ಲಿರುವ ಸಂಕ್ಷಿಪ್ತವಾದ, ಸೂತ್ರಪ್ರಾಯವಾದ ಹೇಳಿಕೆ. ಅನುಭವ ಅಥವಾ ವೀಕ್ಷಣೆಯಿಂದ ಗೊತ್ತಾದ, ಸರ್ವರಿಗೆ ಚಿರಪರಿಚಿತವಾದ ಕೆಲವು ಸತ್ಯಗಳನ್ನು ಅಭಿವ್ಯಕ್ತಿಸುವ ಸಂಕ್ಷಿಪ್ತ ವಾಕ್ಯ" ಎಂಬ ವಿವರವನ್ನು ಆಕ್ಸಫರ್ಡ ನಿಘಂಟಿನಲ್ಲಿ ನೀಡಲಾಗಿದೆ. ಸರ್ವಾಂಟಿಸನು 'ದೀರ್ಘ ಅನುಭವದ ಮೇಲೆ ಕಟ್ಟಿದ ಸಂಕ್ಷಿಪ್ತ ವಾಕ್ಯ'"ಎಂದು ಗಾದೆಯನ್ನು ವಿವರಿಸಿದ್ದಾನೆ. ದ.ರಾ. ಬೇಂದ್ರೆಯವರು 'ಗಾದೆ ಮಾತುಗಳೆಂದರೆ ಅಚ್ಚುಕಟ್ಟಾದ ನಿರ್ಣಯಗಳಲ್ಲಿ ವಿವೇಕ ಜಾಗೃತಿ ಮಾಡುವ ಸುಭಾಷಿತಗಳು' ಎಂದಿದ್ದಾರೆ.

ವಿದ್ವಾಂಸರು ಗಾದೆಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ದೃಷ್ಟಿಯಿಂದ ವಸ್ತುವಿಷಯಕ್ಕೆ ಅನುಗುಣವಾಗಿ ವರ್ಗೀಕರಿಸಿದ್ದಾರೆ. ಅವುಗಳೆಂದರೆ

೧. ಪೌರಾಣಿಕ ಗಾದೆಗಳು
೨. ಚಾರಿತ್ರಿಕ ಗಾದೆಗಳು
೩. ಐತಿಹ್ಯ ಗಾದೆಗಳು
೪. ಸಾಮಾಜಿಕ ಗಾದೆಗಳು
೫. ಸರಳ ಗಾದೆಗಳು
೬. ಸಾಹಿತ್ಯಿಕ ಗಾದೆಗಳು
೭. ವೃತ್ತಿಪರ ಗಾದೆಗಳು

೮. ವೈದ್ಯಕೀಯ ಗಾದೆಗಳು

೯. ಹವಾಮಾನ ಗಾದೆಗಳು

೧೦. ಕೌಟುಂಬಿಕ ಗಾದೆಗಳು[೫೦]

ಇನ್ನು ಸಾಮಾನ್ಯವಾಗಿ ಸಾಂದರ್ಭಿಕ ಹಿನ್ನೆಲೆಯಲ್ಲಿ **ಗ್ರಾಮದ ಗಾದೆಗಳನ್ನು** ಗಮನಿಸಿದಾಗ –

೧. ರಟ್ಟಿಮುರುದು ರೊಟ್ಟಿ ತಿನ್ನು

೨. ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೇ ಮೇಲು

೩. ಕೃಷಿಯಿಂದ ಖುಷಿ

೪. ಮಳೆ ಇಲ್ಲದ ಬೆಳೆ, ಮತಿ ಇಲ್ಲದ ಮಗೂ ಒಂದೇ

೫. ಮಳೆ ಆದರೆ ಕೆಡಲ್ಲ, ಮಗ ಉಂಡರ ಕೆಡಲ್ಲ

೬. ಅಬ್ಬರಿಸಿ ಹೊಯ್ದದ್ದು ಮಳೆ ಅಲ್ಲ, ಗಬ್ಬ ಆಗದ್ದು ದನ ಅಲ್ಲ

೭. ಮಧ್ಯಾಹ್ನ ಬಂದ ಮಳೆ ಅಲ್ಲ, ಮುಂಜಾನೆ ಬಂದ ಬೀಗ ಅಲ್ಲ

೮. ಮಳೆಗಾಲದ ಬಿಸಿಲು ನಂಬಲಾರದು, ನಗೆಗಾರನ ಮಾತು ನಂಬಬಾರದು

೯. ಭರಣಿ ಮಳೆ ಧರಣಿಗಿ ಗಂಡ

೧೦. ರೋಹಿಣಿ ಮಳೆ ಆದ್ರೆ ಓಣಿಯಲ್ಲ ಕಾಳು

೧೧. ಆರಿದ್ರ ಬರದಿದ್ರ ದರಿದ್ರ ಖಂಡಿತ

೧೨. ಮಿರಗ ಮಿಂಚಿರ ಆರಿದ್ರ ಸಾಗಮಾಡತೈತಿ

೧೩. ಹುಬ್ಬಿ ಮಳೆ ಬಂದರ ಗುಬ್ಬಿ ಪುಚ್ಚ ತೊಯ್ಯುದಿಲ್ಲ

೧೪. ಹುಬ್ಬಿ ಉತ್ತರಿ ಜ್ವಾಳಾ ಗೋಧಿ ಬಿತ್ತರಿ

೧೫. ಆದರ ಉತ್ತರಿ, ಆಗದಿದ್ದರ ಸತ್ತರಿ

೧೬. ಆದರ ಹಸ್ತಾ, ಆಗದಿದ್ದರ ರೈತ ಹಲ್ಲ ಕಿಸ್ತಾ

೧೭. ಸ್ವಾತಿ ಮಳೆ ಹೆತಿನಂದ್ರ ಬಿಡುದಿಲ್ಲ

೧೮. ಸ್ವಾತಿ ಮಳಿ, ಮುತ್ತಿನ ಬೆಳಿ

೧೯. ವಿಶಾಖಾ ಮಳೆ ವಿಷ ತೊಳಿ

೨೦. ಅಶ್ವಿನಿ ಸಸ್ಯನಾಶಿನಿ

ಗಾದೆಗಳಲ್ಲಿ ಜಾತೀಯತೆ

ಜಾನಪದರು ಜಾತೀಯ ಮನೋಭಾವವುಳ್ಳವರು. ಚಾತುರ್ವರ್ಣ ಪದ್ಧತಿಯೊಂದಿಗೆ ಆಯಗಾರಿಕೆ ಹಳ್ಳಿಗಳಲ್ಲಿ ಹಾಸುಹೊಕ್ಕಾಗಿತ್ತು. ಜಾತಿಗಳನ್ನು ಹೇಳುವಾಗ ಜನಪದರು "ಆಯಗಾರ ಜಾತಿ" ಎಂಬ ಒಂದು ವಿಶಿಷ್ಟ ಪದವನ್ನೇ ಬಳಸಿದ್ದು ಕಂಡುಬರುತ್ತದೆ. ಅವರ ಗಾದೆಗಳಲ್ಲಿ ಜನಪದರ ಜಾತಿಯ ಮನೋಭಾವವು ಹೇಗೆ ಅಭಿವ್ಯಕ್ತವಾಗಿದೆಯೆಂಬುದನ್ನು ಈ ಮುಂದಿನ ಉದಾಹರಣೆಗಳಿಂದ ನೋಡಬಹುದು.

೧. ಕಟುಕರ ಕೇರಿಯಲ್ಲಿ ಬಸವಪುರಾಣ ಹೇಳಬೇಡ

೨. ಇಜಾಪುರದಾಗ ಇಜಾರದವರು ಹಜಾರಮಂದಿ

೩. ಹಸಿದಹಾರುವನನ್ನೂ ಉಂಡ ಮುಸಲನನ್ನು ಕೆಣಕಬೇಡ

೪. ನರಕಕ್ಕ ಹೋದರೂ ನಾಮಧಾರಿಯನ್ನ ನಂಬಬೇಡ

೫. ಹಾರುವನ ತೊತ್ತಾಗಬೇಡ, ಗಾಣಿಗನ ಎತ್ತಾಗಬೇಡ
೬. ಗಾಣಿಗನ ಮೇಲೆ ಸಿಟ್ಟಾಗಿ ಒಣ ರೊಟ್ಟಿ ತಿಂದರು
೭. ಜೇಡ ನೆಯದೇ ಕೆಟ್ಟ, ಬೇಡ ಕಾಣದೇ ಕೆಟ್ಟ
೮. ತಿರುಪತಿ ಹಜಾಮ ತಲೆಬೋಳಿಸಿದಂಗ
೯. ಬ್ರಾಹ್ಮಣ ಗಳಿಸಿದ್ದು ಪಿಂಡಕ್ಕೆ ಹೊಲೆಯಗಳಿಸಿದ್ದು ಹೆಂಡಕ್ಕೆ
೧೦. ಹಾರುವ ಮಾಡುದು ಹೊಟ್ಟೆಗೆ, ಮುಸ್ಲಿಂ ಮಾಡುವುದು ಗೋರಿಗೆ ಒಕ್ಕಲಿಗ ಮಾಡುವುದು ಕಛೇರಿ ಕಟ್ಟೆಗೆ
೧೧. ಪತ್ತಾರ ಅಕ್ಕನ ಬಂಗಾರ ಬಿಡಲಾರ

ವ್ಯವಹಾರ ಚಾತುರ್ಯತನ

ಜೀವನವು ಒಂದು ಕಲೆ. ಮಾನವನು ಜಾಣತನದಿಂದ ಬಾಳು ಸಾಗಿಸಿ ಸಂಸಾರ ಸಾಗರವನ್ನು ಸಸಾರವಾಗಿ ದಾಟಬೇಕಾಗಿದೆ. ಜಾನಪದರು ವ್ಯವಹಾರ ಚತುರರಾಗಿ ಬಾಳಿರುವುದನ್ನು ಅವರ ಗಾದೆಗಳಿಂದ ಕಂಡುಕೊಳ್ಳಬಹುದಾಗಿದೆ. ಅವರ ಅನುಭವವು ಮುಂದಿನವರಿಗೆ ದಾರಿದೀಪವಾಗುವುದರಲ್ಲಿ ಸಂಶಯವಿಲ್ಲ.

೧. ಸಾಲ ತಲೆಹೊರೆ, ಬಡ್ಡಿ ಬಡ್ಡಿ ಹೊರೆ
೨. ಕೊಟ್ಟ ಸಾಲ ಕೇಳದೇ ಹೋಯ್ತು, ಮಾಡಿದ ಆರಂಭ ನೋಡದೇ ಹೋಯ್ತು
೩. ಸಾಲವೇ ಶೂಲ
೪. ಕೊಟ್ಟವ ಕೋಡಗ, ತಕ್ಕೊಂಡವ ಹಣಮಂತ
೫. ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ
೬. ಗೆದ್ದರೆ ಆಡೋಕೆ ಬಂದಿದ್ದೆ, ಸೋತರೆ ನೋಡೋಕೆ ಬಂದಿದ್ದೆ
೭. ಗೆದ್ದೆತ್ತಿನ ಬಾಲ ಹಿಡಿಯುವದು

ಊಟೋಪಚಾರ ಮತ್ತು ದಡ್ಡತನದ ಪ್ರದರ್ಶನ

ರಸಿಕರಾದ ನಮ್ಮ ಜಾನಪದರು, ಊಟೋಪಚಾರಗಳಲ್ಲಿಯೂ ಬಲ್ಲಿದರು. ಊಟ ಬಲ್ಲವರಾದ್ದರಿಂದಲೇ ಅವರು ನಿರೋಗಿಗಳಾಗಿದ್ದರು. ಅವರು ಊಟದ ವಸ್ತುಗಳು, ಪೇಯಗಳು ಇವುಗಳನ್ನು ಕುರಿತು ಬರೆದರೆ ಒಂದು ಗ್ರಂಥವೇ ಆಗಬಹುದು.

೧. ಕದ್ದು ಹೋಳಿಗೆ ಕೊಟ್ಟರೆ ಬೆಲ್ಲ ಕಡಿಮೆ ಆಗಿದೆ ಅಂದರಂತೆ
೨. ಹೋಳಗಿ ಹುಗ್ಗಿ ಬಡಸಿದರ ಜೋಳದ ಗುಗ್ಗರಿ ಬೇಡಿದರಂತ
೩. ಕುಂಬಳ ಕಾಯಿ ಕಳ್ಳ ಅಂದರ ಹೆಗಲಮುಟ್ಟಿ ನೋಡಿಕೊಂಡರಂತೆ
೪. ಒಪ್ಪೊತ್ತ ಉಂಡವ ಯೋಗಿ, ಎರಡೊತ್ತ ಉಂಡವ ಭೋಗಿ ಮೂರೊತ್ತುಂಡವ ರೋಗಿ, ನಾಲ್ಕೊತ್ತುಂಡವನ್ನು ಹೊತ್ಕೊಂಡು ಹೋಗಿ
೫. ನುಚ್ಚಾ ಮಜ್ಜಿಗಿ ಸುರಕೊ ಉಳ್ಳಾಗಡ್ಡಿ ಕಡಕೊ
೬. ಕಾದ ಹಾಲ ರುಚಿ, ಕಳಿತ ಬಾಳಿಕಾಯಿ ರುಚಿ, ಹುಳಿತ ಜೇನ ರುಚಿ
೭. ಹಸಿದ ಹಣ್ಣು ತಿನ್ನ ಉಂಡ ಕಬ್ಬ ತಿನ್ನ
೮. ಮುಂದನೋಡಿ ಉಣ್ಣೊ ಮೂಳಾ ಅಂದರ, ಯಾವ ಹೊಲದ ಜ್ವಾಳಾ ಎಂದನಂತೆ

೯. ಬೋಳಿ ತನ್ನ ತುರುಬು ನೆನಸಿಕೊಂಡ ಅತ್ತಂತೆ
೧೦. ಬಂಗಾರ ಇಟ್ಟು ಬೆಳ್ಳಿ ಬೇಡಿದರು, ಸೀರೆ ಇಟ್ಟು ಕುಪ್ಪಸ ಬೇಡಿದರು
೧೧. ಎಲ್ಲಾರಿಗಿ ಸಿಗಾಕ ಮಲ್ಲಯ್ಯನ ಬೆಲ್ಲ ಅಲ್ಲ
೧೨. ಕಲ್ಲಕ್ಕ ಒಂದು ಕಡಬಾ ಕೊಟ್ಟರೆ ಮಲ್ಲಕ್ಕ ಒಂದು ದ್ವಾಸಿ ಕೊಡತಾಳೆ
೧೩. ಹಾಲಾ ಬಾನಾ ಉಂಡು ಹಾಸಿ ಹೊಯ್ಯೊ ನನ ಮಗಳ ಅಂದ್ರ ನಾನು ಊರಕಂಡ ನೀರ ತರ್ತಿನಿ ಅನ್ನಿತ್ತಂತ

ಗಾದೆಯಲ್ಲಿ ಹಾಸ್ಯ

೧. ಸಿರಿಗೇಡಿಗೆ ಸೀರಿ ಉಡಿಸಿದರ ಹೊಲಗೇರ್‍ಯಾಗ ತೊರಸಲಾಕ ಹೋಯ್ತಂತ
೨. ಅವಸರದಲ್ಲಿ ಅಜ್ಜ ಮೈ ನೆರೆದಳು
೩. ಬಾಯ್ವಡಕ ಬರದಾಗ ಗೆದ್ದ
೪. ಜಗದ್ಗುರು ಜಗದೀಶ ಥಂಡಿಗುರು ಕೌದೀಶ
೫. ಗಡ್ಡಕ ಬೆಂಕಿ ಹತ್ತಿದಾಗ ಬೀಡಿ ಹೊತ್ತಿಸಿಕೊಳ್ತಿನಿ ತಡಿ ಅಂದ
೬. ಮುತ್ಯಾ ಮುತ್ಯಾ ಮದವಿ ಅಂದರ, ಯಾರಿಗಿ ನನಗ ಅಂದನಂತ
೭. ಕದ್ದ ಮದಿವಿ ಆಗ್ತಿನಿ ಬಗ್ಗಿ ವಾಲಗಾ ಊದು ಅಂದನಂತ
೮. ಕೆಮ್ಮದ ಕೊಟ್ಟ ಗುಮ್ಮದ ತಂದಾ
೯. ಯಾವ ಊರೊ ಗೌಡಾ ಅಂದರ ಕಂಬಳಗಿ ಮೂರು ಗದ್ಯಾಣ ಅಂದ
೧೦. ಕ್ವಾಣ ಈದೈತಿ ಅಂದರ ಕೊಟ್ಟಗ್ಯಾಗ ಕಟ್ಟು ಅಂದನಂತ
೧೧. ಮುರಕ ಇಲ್ಲದ ಹೆಂಗಸಲ್ಲ, ಸುರಕ ಇಲ್ಲದ ಊಟವಲ್ಲ
೧೨. ಹ್ವಾರೆ ಇಲ್ಲದ ಹೊರೆಗೆಡಿ, ಊರಗೊಡೆ ಸಾರಿಸ್ತಿತಂತ

ಪೌರಾಣಿಕ ಐತಿಹಾಸಿಕ ಗಾದೆಗಳು

ರಾಮಾಯಣ ಮಹಾಭಾರತಗಳು ನಮ್ಮ ಜನಪದ ಜೀವನಾಡಿಗಳು, ಅದರಲ್ಲಿಯ ಘಟನೆಗಳು, ಸಂದರ್ಭಗಳು ಅವರಿಗೆ ರಕ್ತಗತ. ಗಾದೆಗಳಲ್ಲಿ ಈ ಪ್ರಜ್ಞೆ ಹಲವೆಡೆ ಮೂಡಿಬಂದಿದೆ.

೧. ಅಳಿಲ ಭಕ್ತಿ ಮಳಲ ಸೇವೆ
೨. ಉತ್ತರನ ಪೌರುಷ ಒಲೆಮುಂದೆ
೩. ಮಣ್ಣಿಗಾಗಿ ಕೌರವ ಕೆಟ್ಟ, ಹೆಣ್ಣಿಗಾಗಿ ರಾವಣ ಕೆಟ್ಟ
೪. ಬೆಳೆತನಕ ರಾಮಾಯಣ ಕೇಳಿ, ರಾಮನಿಗೆ ಸೀತೆ ಏನಾಗಬೇಕು ಎಂದರಂತೆ
೫. ಅಂತು ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ
೬. ಅಂಕಿ ಇಲ್ಲದ ಕಪಿ ಲಂಕಾ ಸುಟ್ಟಿತು

ದ್ವಂದಾರ್ಥದ ಗಾದೆಗಳು

ಕೆಲವು ಗಾದೆಗಳು ದ್ವಂದಾರ್ಥವನ್ನು ಹೊಂಧಿರುತ್ತವೆ. "ಬಾರಿಕಾಯಿ" ಎಂಬ ಇಲ್ಲಿಯ ಪದದಲ್ಲಿ "ಬೋರೆ ಹಣ್ಣು" ಎಂಬ ಅರ್ಥವಲ್ಲದೇ ಕಪಲಿಯ ಬಾರಿ ಬರದಲ್ಲಿ ಕಾಯಬೇಕೇ ವಿನಃ ಹಾಳು ಮಾಡಬಾರದು ಎಂಬ ಇನ್ನೊಂದು ಅರ್ಥವೂ ಇದೆ.

೧. ಬರಗಾಲಕ್ಕೆ ಬಾರಿಕಾಯಿ, ಸುಕಾಲಕ್ಕೆ ಉಣಚೆಕಾಯಿ

೨. ಹಪ್ಪಳ ಮಾಡ್ಯಾಳ ಹದಹಾಕಿ, ಗಂಡ ಬಡದಾನ ಕದಹಾಕಿ

೩. ಹಬ್ಬದ ದಿನಾನೂ ಹಳೆಯ ಗಂಡನೇ?

೪. ಕುಣ್ಯಾಗ ಕೂತವ ಹೆಣ ಅಲ್ಲ

ಹೆಣ್ಣುಮಕ್ಕಳ ಗಾದೆಗಳು

ಕೆಲವು ಗಾದೆಗಳನ್ನು ಗಮನಿಸಿದಾಗ ಹೆಣ್ಣುಮಕ್ಕಳಿಗೆ ಮೀಸಲಾಗಿರುವಂತೆ ಅವು ತೋರುತ್ತವೆ. ಅವರ ಬಾಳಿನ ಆಸರೆ, ಬೇಸರ, ಸುಖ, ದುಃಖ, ಬಂಧು–ಬಳಗ ಮೊದಲಾದ ವಿಷಯಗಳನ್ನು ಇಂತಹ ಗಾದೆಗಳಲ್ಲಿ ಕಾಣುತ್ತೇವೆ. ಅವನ್ನ ಸೃಷ್ಟಿಸಿ ಕಾಪಾಡಿಕೊಂಡು ಬಂದವರೂ ಸ್ತ್ರೀಯರೇ ಎಂಬುದು ವಿಶೇಷ.

೧. ಒಲಿದರೆ ನಾರಿ ಮುನಿದರೆ ಮಾರಿ

೨. ಬ್ಯಾಸತ್ತ ಬೇರೆಯಾದರೆ ಅತ್ತೆ ಪಾಲಿಗೆ ಬಂದಳಂತೆ

೩. ಗಂಡನಿಗೆ ಎದೆಗಟ್ಟಿ ಹೆಂಡತಿಗೆ ನಡುಗಟ್ಟಿ

೪. ಕತ್ತೆಯಂತಾ ಅತ್ತೆ ಬೇಕು, ಮುತ್ತಿನಂಥಾ ಗಂಡ ಬೇಕು

೫. ಅಕ್ಕ ಸತ್ತರೆ ಅಮವಾಸ್ಯೆ ನಿಲ್ಲದು

೬. ಹಿತವಿಲ್ಲದ ಗಂಡ ಹಿಂದ ಮಲಗಿದರೇನು? ಮುಂದೆ ಮಲಗಿದರೇನು?

೭. ಅತ್ತೆಯೆಂದರೆ ಮಾಗಿದ ಸೊಸೆ, ಸೊಸೆ ಎಂದರೆ ಮೊಳಕೆಯಂತ ಅತ್ತೆ

೮. ಒಲಿದರೆ ನಾರಿ, ಮುನಿದರೆ ಮಾರಿ

೯. ಗಂಡನಿಗೆ ಬೇಡವಾದರೆ ಗುಂಡುಕಲ್ಲಿಗೂ ಬೇಡ

೧೦. ಅಳಿಯ ಅತ್ತೆ ಮನೆಯ ತೊಳಿಯ

೧೧. ನಾರಿ ಸ್ವರ್ಗಕ್ಕೆ ದಾರಿ

೧೨. ಸುಳಿ ನೋಡಿ ದನಾ ತರಬೇಕು, ಕುಲಾ ನೋಡಿ ಹೆಣ್ಣ ತರಬೇಕು

೧೩. ನಾಯಿ ನೋಡಿ ಕುನ್ನಿ ತರಬೇಕು, ತಾಯಿ ನೋಡಿ ಹೆಣ್ಣ ತರಬೇಕು

ಅಶ್ಲೀಲ ಗಾದೆಗಳು

ಅಶ್ಲೀಲತೆ ಜನಪದ ಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ಅವರಿಗೆ ಶೀಲ–ಅಶ್ಲೀಲ ಎಂಬ ಭೇದವೇ ಗೊತ್ತಿರಲಿಲ್ಲ. ಅವರದು ನೈಜ ಬದುಕು, ಕೃತಕತೆಯನ್ನು ಅವರು ಎಂದೂ ಅರಿಯರು.

೧. ಗುಳದಾಳಿ ಹರದ ಮ್ಯಾಲ, ಸೆರಗ ಹಿಡಿದವಂದೇನ ಹಂಗ

೨. ಗಂಡ ಬೈದರ ಹುಚ್ಚು, ಮಿಂಡ ಬೈದರ ಮೆಚ್ಚು

೩. ಉಂಡವನಿಗೆ ಹಸಿವಿಲ್ಲ, ಮಿಂಡಗಾರಗ ನಾಚಿಕೆಯಿಲ್ಲ

೪. ಹುಡುಗ ಗಂಡ ಅಲ್ಲ, ಹುಲ್ಲ ಬೆಂಕಿ ಅಲ್ಲ

೫. ಹೊನ್ನ ಇದ್ದವಳ ತೊನ್ನ ಮುಚ್ಚಿತು, ಗಂಡ ಇದ್ದವಳ ಹಾದರ ಮುಚ್ಚಿತು

೬. ಮಾನಗೇಡಿ ಹೆಣ್ಣಿಗೆ ಮರ್ಯಾದಿಲ್ಲದ ಗೆಣೆಯ

೭. ಹಾದರಗಿತ್ತಿಗೆ ಹದಿನೆಂಟು ಮಂದಿ

೮. ಸೆರಗು ತೆಗೆದ ಹೆಣ್ಣಿಗೆ ಕಚ್ಚೆ ಬಿಚ್ಚಿದ ಗಂಡು
೯. ನಾಗರಪಂಚಮಿ ಆದರ ಹಾದರಗಿತ್ತಿಗೇನು?
೧೦. ಸೂಳೆಯ ಮಗ ಸುಬೇದಾರ, ಹಾದರಗಿತ್ತಿಯ ಮಗ ಹವಾಲ್ದಾರ
೧೧. ಬೋಳಿ ಹಣ ನೆಂಟರಿಗೆ, ಸೂಳಿಯ ಹಣ ತುಂಟರಿಗೆ
೧೨. ಜೋಕುಮಾರನದು ಮುರದರೇನು? ಗುಳ್ಳವನದು ಹರದರೇನು?
೧೩. ಹಾದರಗಿತ್ತಿಯ ತಿಗ ಎಣಿಸಬಾರದು, ಕುಂಟಲಗಿತ್ತಿಯ ಕುಲ ಎಣಿಸಬಾರದು
೧೪. ಮುಪ್ಪಿನ ಸೂಳೆ ಮಹಾಪತಿವ್ರತೆ
೧೫. ಉಂಡು ತಿಂದೂ ಗಂಡನಿಗೆ ಅಳುವ ರಂಡೆ
೧೬. ಬೇಡಿ ಬಯಸಿ ಮಗನ ಹಡದರ ಕಿಸಗಾಲ ಮಗಾ ಹುಟ್ಟಿತು
೧೭. ಹಿರಿತನ ಮಾಡ ಹಿರಿ ಸೊಸೆ ಅಂದರ ಹೊರಕೇರ್‍ಯಾಗ ತೆರಕೊಂಡ ಕೂತಿತ್ತು
೧೮. ಚಂದಗೇಡಿಗಿ ಚೌಕಾ ಹಾಕಿದರ ಮಂದಿ ನೋಡಲೆಂದ ಮಾಳಗಿ ಏರಿತ್ತಂತ
೧೯. ಕಾಳಿಗ್ಯಾಕ ಕಪ್ಪು, ಬೋಳಿಗ್ಯಾಕ ತುರುಬ
೨೦. ಕೂಡು ಮುದ್ದಾದರೆ, ಹೂಸು ಮುದ್ದೆ?
೨೧. ಹಾದರಗಿತ್ತಿ ಕಾಲ ಹಗರ, ರಂಡಿಮುಂಡಿ ಬಾಯಿಹಗರ
೨೨. ಮೀಸಿ ಬಂದಾವಗ ದೇಶ ಕಾಣಲಿಲ್ಲ, ಮಲಿ ಬಂದಾಕಿಗಿ ನೆಲ ಕಾಣಲಿಲ್ಲ
೨೩. ಮಕ್ಕಳಿಲ್ಲಂತ ಮೈಲಾರಕ ಹ್ವಾದರ, ಇದ್ದ ತೂತ ಮುಚ್ಚಿ ಹೋಯಿತು
೨೪. ಹಾದರಗಿತ್ತಿ ನಡಮನಿ ಚಂದ, ಗರತಿ ಕೋಣೆ ಚಂದ
೨೫. ರಂಡಿಮುಂಡಿ ಮಗ ರಾಜಕುಮಾರ, ಸೂಳಿಮಗ ಸುಬೇದಾರ

೮.೩.೫. ಒಡಪುಗಳು

ಇದು ಒಗಟುಗಳನ್ನು ಹೋಲುವ ಇನ್ನೊಂದು ಸಾಹಿತ್ಯ ಪ್ರಕಾರವಾಗಿದೆ. ಒಗಟುಗಳಲ್ಲಿ ಕಂಡುಬರುವ ರೂಪಕಗಳು, ಉಪಮಾನ, ಉಪಮೇಯಗಳು ಒಡಪುಗಳಲ್ಲಿಯೂ ಕಂಡುಬರುತ್ತವೆ. ಆದರೆ ಒಡಪುಗಳನ್ನು ಬಳಸುವ ಸಂದರ್ಭ, ಪರಿಸರ ಮಾತ್ರ ಬೇರೆಯಾಗಿರುತ್ತದೆ. ಒಡಪುಗಳನ್ನು ಮದುವೆಯ ಸಂದರ್ಭದಲ್ಲಿ ಮತ್ತು ಹಬ್ಬ ಹರಿದಿನಗಳಲ್ಲಿ, ಮಂಗಳಕಾರ್ಯ ಸಂದರ್ಭಗಳಲ್ಲಿ ಮಾತ್ರ ಹೇಳುತ್ತಾರೆ. ಉತ್ತರ ಕರ್ನಾಟಕದಾದ್ಯಂತ ಪ್ರಚಲಿತದಲ್ಲಿರುವ 'ಒಡಪು' ಪದಕ್ಕೆ ಸಂವಾದಿಯಾಗಿ ಚಿತ್ರದುರ್ಗ, ಶಿವಮೊಗ್ಗ ಪರಿಸರದಲ್ಲಿ ಬೇಡಗ ಎಂಬ ಪದವು, ಚಿಕ್ಕಮಗಳೂರು, ಹಾಸನ ಕಡೆಗಳಲ್ಲಿ 'ತೊಡಕು' ಎಂಬ ಪದವೂ, ನಾಗಮಂಗಲ, ತುಮಕೂರು ಪರಿಸರದಲ್ಲಿ 'ಬೊಡೆಸ್ರು' ಎಂಬ ಪದವೂ ಬಳಕೆಯಲ್ಲಿದೆ. ಈ ಪದಗಳಲ್ಲೆಲ್ಲ 'ಒಡಪು' ಪದವೇ ಹೆಚ್ಚು ಜನಪ್ರಿಯವಾಗಿದ್ದು, ಅದು ಭಾಷಿಕ ಬಗೆಯಲ್ಲಿ ಕಂಡು ಬರುವ ವಿಶಿಷ್ಟ ಪ್ರಕಾರವಾಗಿದೆ.

'ಒಡಪು' ಎಂದರೇನೆಂಬುದರ ಬಗೆಗೆ ಕನ್ನಡದಲ್ಲಿ ಜಾನಪದ ವಿದ್ವಾಂಸರು ಸಾಕಷ್ಟು ಚರ್ಚೆ ನಡೆಸಿದ್ದಾರೆ. ಜ್ಯೋತಿ ಹೊಸೂರರ ಪ್ರಕಾರ "ಒಡಪು ಎಂಬುದು ಜನಸಾಮಾನ್ಯರ ಬಾಯಲ್ಲಿ ಬದುಕಿರುವ ಪದ. ಒಡ, ಒಡೆ ಎಂಬುದಕ್ಕೆ 'ಪು' ಪ್ರತ್ಯಯ ಸೇರಿ ಸಿದ್ಧವಾದ ನಾಮಪದ. ಗಂಡನ ಮತ್ತು ಹೆಂಡತಿಯ ಹೆಸರಿಗೆ ವರ್ಣನಾತ್ಮಕ ಹಿನ್ನಲೆಯಾಗಿ ಅದರೊಂದಿಗೆ

ಒಸನೂಡಿಯೇ ಬರುವುದರಿಂದಾಗಿ ಇದು ಒಡಮು". ಸೋಮಶೇಖರ ಇಮ್ರಾಪೂರ ಅವರ ಪ್ರಕಾರ ಒಡಪು ಎಂದರೆ ಒಡವೆ ಇಲ್ಲವೇ ವಿಶೇಷಣ. ಗಂಡನ ಸೌಂದರ್ಯ, ಬಲ, ಗುಣ, ಸ್ವಭಾವ ಮುಂತಾದವುಗಳ ಹೆಚ್ಚಳವನ್ನು ಕುರಿತ ವರ್ಣನೆಯೇ ಒಡಪು ಎನಿಸಿಕೊಳ್ಳುವುದು.

ಈಗಿರುವಂತೆ ಒಡಪುಗಳು ಮದುವೆ ಸಂದರ್ಭಗಳಲ್ಲಿ ಮಾತ್ರ ಬಳಕೆಯಾಗುತ್ತಿವೆ. ಅಕ್ಷತೆಯ ಮುನ್ನಾದಿನ ವಧೂವರರಿಗೆ ಅಭ್ಯಂಜನ ಮಾಡಿಸಿ, ಅರಿಷಿಣ ಹಚ್ಚಿ, ಆರತಿ ಎತ್ತುವುದರೊಂದಿಗೆ ಒಡಪು ಹೇಳುವ ಕಾರ್ಯಕ್ರಮ ಆರಂಭವಾಗುತ್ತದೆ. ಗಂಡಾದರೆ ಒಡಪಿನೊಂದಿಗೆ ತನ್ನ ಭಾವೀ ಪತ್ನಿಯ ಹೆಸರನ್ನು, ಹೆಣ್ಣಾದರೆ ತನ್ನ ಭಾವೀ ಗಂಡನ ಹೆಸರನ್ನು ಒಡಪಿನೊಂದಿಗೆ ಸೇರಿಸಿ ಹೇಳುತ್ತಾರೆ. ಮದುವೆಗಾಗಿ ಕುಂಬಾರರ ಮನೆಯಿಂದ ಐರಾಣಿಗಿ ತರುವಾಗ, ಅಕ್ಕಸಾಲಿಗರ ಮನೆಯಿಂದ ಮಂಗಲಸೂತ್ರ ತರುವಾಗ, ಹೂ ಮಾಲೆ ತರುವಾಗ ಒಡಪುಗಳನ್ನು ಹೇಳುವದಿದೆ. ಹುಡುಗಿ ಮೈ ನೆರೆದಾಗ ನಡೆಯುವ ಆರತಿ ಕಾರ್ಯಕ್ರಮಗಳ ಸಂದರ್ಭದಲ್ಲಿಯೂ ಕ್ವಚಿತ್ತಾಗಿ ಒಡಪು ಹಾಕುತ್ತಾರೆ. ಗಂಡನು ಹೆಂಡತಿಯ ಹೆಸರನ್ನು ಸಾರ್ವಜನಿಕವಾಗಿ ಹೇಳುವುದರಿಂದಾಗಿ ದಂಪತಿಗಳ ನಡುವಣ ಸಂಕೋಚ ಕಡಿಮೆಯಾಗುತ್ತದೆಂದು ಭಾವಿಸಲಾಗಿದೆ.

ಗಂಡಸರ ಗುಣಗಾನವನ್ನು ಈ ರೀತಿಯಾಗಿ ನೋಡಬಹುದು.

ತೆಳ್ಳಾನ ರೊಟ್ಟಿ ಬೆಳ್ಳಾನ ಮೊಸರು
ನೆಳ್ಳಾಗ ಕುಂತ ನ್ಯಾರಿ ಮಾಡತಾರ

ಜರದ ರುಂಬಾಲ, ಕೊರದ ಈಬತ್ತಿ
ನೆರದ ಮಂದ್ಯಾಗ ಕುಂತು ನ್ಯಾಯಾ ಮಾಡ್ತಾರ
ಬಸವೇಶ್ವರರು ಮಾಡಿದ್ದು ಕರ್ನಾಟಕದ ಉದ್ದಾರ
ಗಾಂಧೀಜಿಯವರು ಮಾಡಿದ್ದು ಹರಿಜನರ ಉದ್ದಾರ
. . . . ಮಾಡುವರು ನನ್ನ ಉದ್ದಾರ

ಸಾವಿರ ಸುರಳಿ ಹೋಳ್ಗಿ
ಎಂಟನೂರ ಎಣ್ಣಿ ಹೋಳ್ಗಿ
ಬಾದಾಮಿ ಬಾನಾ, ಕುಡಚಿ ಬದ್ನಿಕಾಯಿ
ಸಾಂಗ್ಲಿ ಸಾರಾ, ಹಿರಿಹೊಳಿ ನೀರಾ
ಕುಂತು ಉಂಡು ಖುಷಿಲೇ ಹೊಗ್ತಾರ

ಎಡಕ ಎಣ್ಣಿ ದೀಪ, ಬಲಕ ತುಪ್ಪದ ದೀಪ
ಸಿಂಗಾರ ಗದ್ಗಿಮ್ಯಾಲ ಶಿವಪೂಜಿ ಮಾಡ್ತಾರಾ . . . .

ಹಾಲ ಮ್ಯಾಲಿನ ಕೆನಿ
ಹವಳಾ ಮುತ್ತಿನ ಗೊನಿ
ಅತ್ತಿಮಾವರ ಹೊಟ್ಟೀಲೆ ಮುತ್ತಿನಂಥವರು ಹುಟ್ಯಾರ . . . . . .

ಹತ್ತೂ ಬಳ್ಳಾಗ ಹತ್ತುಂಗುರಾ
ನಡುವಿನ ಬಳ್ಳಾಗ ಸುತ್ತುಂಗರಾ
ಹತ್ತಮಂದ್ಯಾಗ ಕುಂತ ಹೌದೆನ್ನಿಸಿಕೊಳ್ತಾರಾ

ಹಸರ ಹಾಗಲಕಾಯಿ, ಕುಸುರ ಭೆಂಡಿಕಾಯಿ

ಚೆಂಜಿ ಊಟಕ್ಕೆ ಚಂದ್ರಾಮನಂಗ ಬರತಾರ . . . .

ಶಿವನ ಜಡೆಯಲ್ಲಿರುವದು ಗಂಗೆ
ಶಿವ ಭಕ್ತರ ಕೊರಳಲ್ಲಿರುವದು ಲಿಂಗ
ನಮ್ಮ . . . . .ರು ಮಾಡುವರು ಸಜ್ಜನರ ಸಂಗ

ಸಿಟ್ಟಿನಿಂದ ನೋಡತಾರ
ಗುಟ್ಟಿನಿಂದ ಇರತಾರ
ರಟ್ಟಿ ಮುರಿದು ರೊಟ್ಟಿ ತಿಂತಾರ . . . .

ಗಂಡನ ಮೊಂಡ ತನದ ಕುರಿತು

ದೇವರ ಪೂಜಿ ಮಾಡತಾರ
ಸಾವಿರಕೊಂದು ಆಡತಾರ
ಸಿಟ್ಟಿಗೆದ್ದು ಸೆಟಗೋತಾರ
ಸರಸರ ಹೋಗತಾರ

ಒಕ್ಕಲುತನ ಮಾಡ್ತಾರ
ಹಕ್ಕಿ ಹಿಂಡ ಹೊಡಿತಾರ
ರೊಕ್ಕ ಕಳಕೊಂಡ
ಬಿಕ್ಕಿ ಬಿಕ್ಕಿ ಅಳತಾರ

ಸಣ್ಣನ್ನ ಶ್ಯಾವಿಗಿ, ಚಿನ್ನಿ ಸಕ್ಕರಿ
ಸುಮ್ಮನೆ ಉಂಡು ಸೂಳಿ ಮನಿಗೆ ಹೋಗತಾರ

ಸಣ್ಣಕ್ಕಿ ತರಲಿಲ್ಲ, ದೊಡ್ಡಕ್ಕಿ ಉಣಲಿಲ್ಲ
ಮನ್ಯಾಗ ಇರಲಿಲ್ಲ, ಮಾತು ಕೇಳಲಿಲ್ಲ
ಇದ್ದಿದ್ದು ಉಣ್ಣಂದ್ರ ಎದ್ದೆದ್ದು ಹೋಗತಾರ

ಬಾಗಲ ತೆರೀರಿ
ಹಿಂದಕ ಸರೀರಿ
ಬಾಳೋತ್ತಿನಾಗ ಬಾಳೇ ಮಾಡಿ ಅಂದ್ರ
ಕೋಳಿ ಕೂಗಿದರೂ ಏಳಾಕ ಒಲ್ಲೆ ಅಂತಾರ

ನೆಲುವಿನ ಮ್ಯಾಲಿರುವದು ಮೊಸರ
ಬೆಲ್ಲದಲ್ಲಿರುವದು ಕಸರ
ನಾವು ಅಕ್ಕ ತಂಗೇರು ಹೇಳುವದು . . . . .ರ ಒಂದೇ ಹೆಸರ

ಎಣ್ಣಿ ಹಚಗೊಂಡ ಎರಕೊಂತಾರ
ಬೆಣ್ಣಿ ಹಚಗೊಂಡ ರೊಟ್ಟಿ ತಿಂತಾರ
ಸಣ್ಣಕ್ಕಿ ಬಾನಾ ಉಣ್ಣಂದ್ರ ಕಣ್ಣ ಕಿಸದ ನೋಡತಾರ

ಆಭರಣಗಳ ವ್ಯಾಮೋಹ

ಮತ್ತೈದೆಯರ ಮೂಗಿನಲ್ಲಿರುವದು ನತ್ತು
. . . . ರ ಹೆಸರು ಹೇಳುವೆನು ಮೂರು ಸಂಜೆ ಹೊತ್ತು

ಆನಿಮ್ಯಾಲ ಅಂಬಾರಿ
ಒಂಟಿ ಮ್ಯಾಲ ನಗಾರಿ
ಕಂಠಿ ಸರಾ ಹಾಕ್ಕೊಂಡ ಕರಿಲಾಕ ಬರತಾರ . . . .

ಕುರುಂ ಕುರುಂ ಸವತಿ ಮಿಡಿ
ಕುದರೀಗಿ ಹಾಕ್ಯಾರ ಕುತನೀ ಥಡಿ
ಕೈಯಾಗ ಹಾಕ್ಯಾರ ಬಂಗಾರ ಖಡಿ
ಅಗಸ್ಯಾಗ ಬರತಾರ ಖೂನಾ ಹಿಡಿ

ಆಣೇದ ಬಂಗಾರ ಪಣೇದ ಪತ್ತಾರ
ಸರವೊತ್ತಿನಾಗ ಕುಂತು ಸರಗಿ ಮಾಡಸತಾರ

ಬಂಗಾರ ಗಿಡ, ಬೆಳ್ಳೀ ಬುಡ
ಚಂದ್ರಹಾರ ಮಾಡಸರಿ ಅಂದ್ರ
ಮುಂದಿನ ಪಗಾರ ಬರ್ಲಿ ಅಂತಾರ

ಬಂಗಾರ ಬ್ಯಾಡ ಅಂತಾರ
ಸಿಂಗಾರ ಮಾಡ ಅಂತಾರ
ಅಂಗಾಲ ಸಪ್ಪಳ ಇಲ್ಲದೆ ಅಂಗಳದಾಗ ಬರತಾರ

ಹಸರ ದಟ್ಟಿ ಉಟಗೊಂಡು
ಬಂಗಾರ ಪಟ್ಟಿ ಇಟಗೊಂಡು
ಸೆಟೆದ ನಿಂತರ ಸೆಟಗೊಂಡ ಹೋಗತಾರ
ಆಕಾಶದಲ್ಲಿ ಹೊಳೆಯುವುದು ನಕ್ಷತ್ರ
ಬೀಗತನದಲ್ಲಿ ವಿಚಾರಿಸುವುದು ಕುಲಗೋತ್ರ
ಸಂಸಾರದಲ್ಲಿರಬೇಕು ಪ್ರೇಮಸೂತ್ರ

. . . . ಕಟ್ಟಿದು ಮಂಗಲಸೂತ್ರ
ರಾಜರಿರುವದು ಅರಮನೆಯಲ್ಲಿ
ದೇವರಿರುವದು ಗುಡಿಗಳಲ್ಲಿ
. . . . . . ರ ಹೆಸರು ಹೇಳುವೆನು ಈ ಮಂಟಪಲ್ಲಿ

ಜೋಕಾಲಿ ಆಡುವದು ನಾಗರ ಪಂಚಮಿಯಲ್ಲಿ
ಆಯುಧ ಪೂಜೆ ಮಾಡುವದು ಮಾನವಮಿಯಲ್ಲಿ
ನಾನು. . . . . . .ರ ಪಾದಕ್ಕೆ ನಮಿಸುವದು ಪ್ರತಿ ನಿತ್ಯದಲ್ಲಿ
ಪಾರ್ವತಿ ಜನಿಸಿದ್ದು ಶಿವನ ಸಲುವಾಗಿ
ನಾನು ಜನಿಸಿದ್ದು . . . . . .ರ ಸಲುವಾಗಿ
ಕಂಚಿಯಲ್ಲಿರುವ ಗುಡಿ ಕಾಮಾಕ್ಷಿ
ಮಧುರೆಯಲ್ಲಿರುವ ಗುಡಿ ಮೀಮಾಕ್ಷಿ
. . . . . .ರ ಸೇವೆ ದೊರೆತದ್ದು ಅಗ್ನಿ ಸಾಕ್ಷಿ
ಸತ್ತ ಗಂಡನನ್ನ ಮತ್ತೆ ಪಡೆದಳು ಸಾವಿತ್ರಿ
. . . . . . ರ ಹೆಸರು ಹೇಳುವೆನು . . . . . ರ ಪುತ್ರಿ

ಕುಸುಬೆಯಿಂದ ತಯಾರಾಗುವದು ಒಳ್ಳೆಣ್ಣಿ
. . . . ರ ಹೆಸರು ಹೇಳುವೆ . . . . ನೆಗೆಣ್ಣಿ

ದೇವ–ಧರ್ಮ–ನ್ಯಾಯ–ನೀತಿ–ಸಂಬಂಧ

ಪರ್ವ ಸಂಕಟಗಳನ್ನು ಪರಿಹರಿಸುವವ ಗಣಪತಿ
ಲಗ್ನವಾಗಿ ನಾನಾದೆ . . . . ರ ಸತಿ

ಹನ್ನೆರಡು ವರ್ಷ ಹೇಳೂದು ತಾಯಿ–ತಂದಿ ಹೆಸರ
ಅಲ್ಲಿಂದ ಹೇಳೂದ ಅತ್ತಿ ಮಾವನ ಹೆಸರ
ಕಕ್ಕಲಾತಿಗಾಗಿ ಹೇಳೂದ ಅಕ್ಕ ತಂಗೇರ ಹೆಸರ
ಪ್ರೀತಿಲೇ ಹೇಳೂದ ಭಾವ ಮೈದುನರ ಹೆಸರ
ಪತಿವರ್ತ್ಯಾಗಿ ಹೇಳೂದ ನಮ್ಮ . . . . ಹೆಸರ
ಶಿವನ ಜಡೆಯಲ್ಲಿರುವವವಳು ಗಂಗಿ
ನಾನು . . . . ರ ಹೆಸರು ಹೇಳುವೇನು . . . . .ರ ತಂಗಿ

ಮಲಮಲ ಅಂಗಿ ಮೈಯಾಗ
ಮಲ್ಲಗಿ ಹೂವ ಕೈಯಾಗ
ಮಲ್ಲಮನಂಥಾ ಮಡದಿನ್ನ ಕರಕೊಂಡು
ಮಲ್ಲಯ್ಯನ ಗುಡಿಗೆ ಹೋಗತಾರ . . . .

ಹಾಸ ಪರಿಹಾಸ

ಕಟ್ಟಿಮ್ಯಾಲ ಕಟ್ಟಿ
ಕುಂಬಳಕಾಯಿ ಸೊಟ್ಟಿ
ಸಂಜೀತನಕ ಬಿಟ್ಟಿ
. . . . ರ ಹೆಸರು ಹೇಳಾಕ ನಾಬಾಳ ಘಟ್ಟಿ

ಆನಿ ಹಿಂಡತ್ಯೆತಿ ಆರು ಕೊಡಾ ಹಾಲಾ
. . . . ರು ಮಾಡ್ತಾರ ಸೂಳೇರ ಪಾಲಾ

ಕೈಯಾಗ ಇಲ್ಲ ಕಾಸ
ಮನ್ಯಾಗ ಹಚ್ಚ್ಯಾರ ತ್ರಾಸ
ನನ್ನ ಬಿಟ್ಟ . . . . ರು ಇರೂದಿಲ್ಲ ಒಂದೂ ತಾಸ

ಹಸರ ಸೀರಿ ಹರಿವಲ್ದು
ನೀರಾಗ ಹಾಕಿದರ ಕೊಳಿವಲ್ದು
ಎಂಟೆತ್ತಿನ ಎಳವಲ್ದು
ನಮ್ಮ . . . . ರ ಮನಸಿಗಿ ಬರವಲ್ದು

ರಾಡ್ಯಾಗ ರಾಡಿ
ಹುಣಸಿ ರಾಡಿ
ಸೇರ ಬಂಗಾರ ಹಾಕ್ಯಾರ . . . . ರಿಗೇನು ದಾಡಿ

ಹತ್ತು ಹೋಳ್ಗಿ ಹೊಡದಾರ
ಇಪ್ಪತ್ತು ಕಡಬ ಇಳಸ್ಯಾರ
ತೆಪ್ಪೆಲಿ ತುಂಬ ಹುಗ್ಗಿ ಉಂಡು
ಉಪ್ವಾಸ ಅದೀನಂತ ಡೋಂಗ ಮಾಡ್ತಾರ

ಅಡವಾಗಿರೊದು ಕರಕಿ
ಬಾವಿಮ್ಯಾಲಿರೋದು ಗಿರಕಿ
. . . . ರ ಹೆಸರು ಕೇಳುವರು ಬಾಳ ಬೆರಕಿ
ಹನ್ನೆರಡು ವರ್ಷದಾಗ ಮದುವೆಯಾಗಬಾರದೆಂಬುದು ಕಾಯಿದೆ
. . . . ರ ಹೆಸರು ಕೇಳಿ ನಿಮಗೇನ ಫಾಯದೆ
ಮೂಲ್ಯಾಗಿತ್ತು ಕಟ್ಟಿಗಿ
ನಾ ಕುಂತಿನಿ ರೊಟ್ಟಿಗಿ
ಐನೋರ ಬಂದ ಹಿಟ್ಟಿಗಿ
. . . . . . .ರ ಬಂದರು ಸಿಟ್ಟಿಗಿ

ಆತ್ಮ ಪ್ರಶಂಸೆ–ಮುಗ್ಧತೆ–ಕ್ಷಮಾಪಣೆ

ಅತ್ತೆ ಹೆಸರ ಮಲ್ಲಿಗಿ ಹೂವ
ಮಾವನ ಹೆಸರ ಮಲ್ಲಿಗಿ ಹೂವ
ನನ್ನ ಹೆಸರ ಸುಗಂಧಿ ಹೂವ
ಸುಗಂಧಿ ಮುಂದ ಸುಳಿದಾಡತಾರ . . . . . .

ಹೇಳಲಿಕ್ಕೆ ಹೆಸರ ಚೆಂದ
ಕೇಳಲಿಕ್ಕೆ ಕಥೆ ಚೆಂದ
ರಾಮನಿಗೆ ಸೀತಾ ಚಂದ
ನನಗೆ . . . . . .ರು ಚೆಂದ

ಹೊಲದಲ್ಲಿ ಬೆಳೆ ಚಂದ
ಮನೆಯಲ್ಲಿ ದೀಪ ಚಂದ
ಹಣೆಗೆ ಕುಂಕುಮ ಚೆಂದ
. . . . . . .ರಿಗೆ ನಾನು ಚಂದ

ಕೃಷ್ಣನು ಕೊಳಲನೂದಿದ್ದು ಬೆಳದಿಂಗಳ ತಂಪಿನಲ್ಲಿ
ನಾನು . . . . . .ರ ಹೆಸರು ಹೇಳುವೆನು ಈ ಗೆಳತಿಯರ ಗುಂಪಿನಲ್ಲಿ

ಆಧುನಿಕತೆ

ಗುಂಗುರ ಕೂದಲ
ಬಂಗಾರ ಬೇತಲ
ಬಂಗ್ಲೇದಾಗ ಕುಂತು ಇಂಗ್ಲೀಸ ಬರೀತಾರ

ಭಾರತದ ಉದ್ಧಾರವಾಗಲು ಮಹಾತ್ಮರ ಅವತಾರ
. . . . . . .ರ ಮನೆಯಲ್ಲಿ ನನ್ನದೆ ಕಾರಭಾರ
ಕನ್ನಡಿಗರಿಗೆ ಬೇಕಾಗಿತ್ತು ಏಕಿಕರಣ
. . . . . . .ರಲ್ಲಿ ತುಂಬಿದೆ ಅಂತಃ ಕರಣ
ಆರಾಣೇದ ಅಡಗಿಮನಿ, ಪಾವಲಿ ಪಡಸಾಲಿ
ತಾಟ ಹಾಕೇನಿ ಊಟಕ್ಕ ಬರ್ರಿ ಅಂದರ
ಬೂಟ ಹಾಕ್ಕೊಂಡು ಪ್ಯಾಟ್ಯಾಗ ಹೋಗತಾರ . . . .

ಉಗಾದಿಯಲ್ಲಿ ಮಾಡುವದು ಬೇವು ಬೆಲ್ಲ
ಸಂಕ್ರಮಣದಲ್ಲಿ ಮಾಡುವುದು ಎಳ್ಳು ಬೆಲ್ಲ
. . . . ರ ಚೈನಿ ದೇವರ ಬಲ್ಲ
ಕರಿ ಕೋಟಾ, ಕಾಲಾಗ ಬೂಟಾ
ಪ್ಯಾಟ್ಯಾಗ ನಿಂತು ಫೋಟೊ ತಕ್ಕೋತಾರ . . . .

ಆಕಾಶದಲ್ಲಿ ಹಾರಾಡುವದು ವಿಮಾನ
. . . . ರು ದೇವರ ಸಮಾನ
ಗಾಂಧೀಜಿಯವರು ಉಡುವದು ಮೂರುಮೊಳದ ಪಂಜೆ
ನಾನು ನಡೆಯುವದು ಅತ್ತಿ ಮಾವರಗಂಜಿ
. . . . ರ ಹೆಸರು ಹೇಳುವೆನು ಮೂರು ಸಂಜಿ

ಸವ್ವಾ ಸೇರಿನ ಪಾಟ್ಲಿ
ಅತ್ತರ ಎಣ್ಣಿ ಬಾಟ್ಲಿ
ಬಂಗ್ಲೇದಾಗ ಕುಂತು ಅಂಗ್ರೇಜಿ ಬರಿತಾರ

ಶುಭ ಕಾರ್ಯಗಳಲ್ಲಿ

ಲಗ್ನ ಬಂಧನದಿಂದ ಸತಿ ಪತಿಯರ ಸಮಾಗಮ
. . . . . . ರಿಗೆ ಹಚ್ಚುವೆ ಕುಂಕುಮ

ವಾಸನೆ ತಿಳಿಯುವರು ನಾಸಿಕದಿಂದ
. . . . . . .ರಿಗೆ ಹಚ್ಚುವೆನು ಪರಿಮಳ ಗಂಧ
ಗುಡಿಯಲ್ಲಾಗುವದು ದೇವರ ದರುಶನ
. . . . ರ ಮೈಗೆ ಹಚ್ಚುವೆನು ಗಂಧ ಅರಿಷಿಣ

ಕಾಲು ತೊಳೆಯುವಾಗ

ಮಳೆ ಇಲ್ಲದಾಗ ಉಂಟಾಗುವದು ಬರಗಾಲ
ಈಗ ನಡೆಯುತ್ತಿರುವದು ವರ್ತಮಾನಕಾಲ
ನಾನು ತೊಳೆಯುವದು . . . . ರ ಕಾಲ

ಸಾಗರಕ್ಕೆ ಅನ್ನವದು ಮುನ್ನೀರು
. . . . ರಿಗೆ ಎರೆಯುವೆ ಪನ್ನೀರು

ಉಡುಗೊರೆ ಕೊಡುವಾಗ

ಊರೆಲ್ಲಾ ಸಾರಿ ಹೇಳುವದು ಡಂಗುರ
. . . . ರಿಗೆ ಕೊಡುವೆನು ಬಂಗಾರದ ಉಂಗುರ

ಜಗತ್ತಿನಲ್ಲಿ ಪ್ರಸಿದ್ಧ ಕಾಶ್ಮೀರಿ ಶಾಲು
. . . . . . ರಿಗೆ ಕೊಡುವದು ರೇಶ್ಮಿ ರುಮಾಲು

ಸುಗಂಧದ ಎಣ್ಣೆ ಹಚ್ಚುವಾಗ

ಉಲನ್ ಅರಿವೆಗಳನ್ನು ತಯಾರಿಸಲು ಬೇಕು ಉಣ್ಣೆ
. . . . ರಿಗೆ ಹಚ್ಚುವ ಸುಗಂಧದ ಎಣ್ಣೆ

ಹೂ ಮಾಲೆ ಹಾಕುವಾಗ

ವಿಠೋಬನ ಕೊರಳಲ್ಲಿರುವದು ತುಳಸಿ ಹಾರ
. . . . ರ ಕೊರಳಿಗೆ ಹಾಕುವೆ ಪುಷ್ಪಹಾರ

ಕಾಂತೆಯರ ಕಿವಿಗೆ ಚೆಂದ ಮುತ್ತಿನ ಓಲೆ
. . . . ರ ಕಂಠಕ್ಕೆ ಹಾಕುವೆನು ಈ ಮಾಲೆ

ಆರತಿ ಬೆಳಗುವಾಗ

ರಾಮಾಯಣದಲ್ಲಿದ್ದವ ಮಾರುತಿ
ಬಯಲಾಟದಲ್ಲಿರುವವ ಸಾರಥಿ
ನಾನು . . . . ಮಾಡುವೆನು ಆರತಿ

ಸೀಗಿ ಹುಣ್ಣಿವ್ಯಾಗ ಬೆಳಗೋದ ಮಣ್ಣಿನಾರತಿ
ಗೌರಿ ಹುಣ್ಣಿವ್ಯಾಗ ಬೆಳಗೋದ ಸಕ್ಕರಿ ಆರತಿ
ಶುಭ ಕಾರ್ಯದಾಗ ಬೆಳಗೋದು ಪಂಚಾರುತಿ
. . . . ರಿಗೆ ನಾ ಬೆಳಗೋದು ಪ್ರೇಮದಾರತಿ

ತಿಂಡಿ ತಿನಿಸು ಕೊಡುವಾಗ

ಪಂಢರಪೂರ ಯಾತ್ರೆಗೆ ಹೋಗುವದು ದಿಂಡಿ
. . . . ರಿಗೆ ತಿನ್ನಿಸುವೆ ರವೆಯ ಉಂಡಿ

ದೇವಕಿ ನಂದನರು ಸೆರೆಯಿಂದ ಪಾರಾದರು ಕೃಷ್ಣನನ್ನ ಹೆತ್ತು
ನಾನು . . . . ರಿಗೆ ಹಾಕುವೆ ಒಂದೆರಡು ತುತ್ತು

ತಾಂಬೂಲ ಕೊಡುವಾಗ

ಭಾರತದೊಳಗಿರುವದು ಬಂಗಾರದ ಗಟ್ಟಿ
ಹೂಗಾರನ ಕೈಯಲ್ಲಿರುವದು ಹೂವಿನ ಬುಟ್ಟಿ
. . . . ರಿಗೆ ನಾನು ಕೊಡುವದು ಪಾನಪಟ್ಟಿ

ಮನೆಗೆ ಬೇಕು ಕಿಡಕಿ
ಅಂಗಡಿಕಾರರು ಕೊಡುವದು ಪುಡಿಕಿ
ನಾನು . . . . ರಿಗೆ ಅರ್ಪಿಸುವದು ಎಲಿ ಅಡಿಕಿ

ಮಕ್ಕಳ ಕೈಯಲ್ಲಿ ಕೊಡುವದು ಮೊಸರು ರೊಟ್ಟಿ
ಕೋಲಾರದಲ್ಲಿ ದೊರೆಯುವದು ಬಂಗಾರದ ಗಟ್ಟಿ
. . . . ರಿಗೆ ಕೊಡುವೆನು ಪಾನಪಟ್ಟಿ

ಗಂಡಸರು ಒಡಪುಗಳು

ಹುಬ್ಬಳ್ಳ್ಯಾಗ ಇರುವದು ಮೂರು ಸಾವಿರ ಮಠ
ಧಾರವಾಡದಲ್ಲಿರುವದು ಮುರುಘಾಮಠ
. . . . . ಮಾಡ್ತಾಳ ನನ್ನ ಮುಂದ ಹಟ

ಹೊಲದಾಗ ಬೆಳೆಯೂದು ಹತ್ತಿ
ಅದರಿಂದ ಮಾಡುವರು ಬತ್ತಿ
ನನ್ನ . . . . . ಬಾಳ ಕತ್ತಿ

ಗಣಕಿಲೆ ಹೊಡದರ
ಕುಣಕೋತ ಬರತಾಳ . . . . .

ಹಂಡೆದಾಗ ಕುಂತ
ಉಂಡಿ ತಿಂತಾಳ . . . . . .

ನಿಚ್ಚಣಿಕಿ ಮ್ಯಾಲ ಕುಂತ
ನುಚ್ಚ ಉಣತಾಳ

ಹಗ್ಗಲೆ ಹೊಡದರ
ಮಗ್ಗಲಿಗೆ ಬರತಾಳ . . . . .

ಬೆಡಗು ಬೇಲಿಮ್ಯಾಲ
ಹೆಡಗಿ ಹೆಗಲ ಮ್ಯಾಲ
ನನ್ನ ಕಣ್ಣ . . . . . ಳ ಮ್ಯಾಲ

ಐಗಳಿಗೆ ಗೋಧಿಯ ಹುಗ್ಗಿ
ನಮ್ಮ . . . . . ಳಿಗೆ ಪ್ರೀತಿ ಮಲ್ಲಿಗಿ ಮಗ್ಗಿ

ಉಪ್ಪಿಟ್ಟು ಮಾಡತಾಳ
ಅದಕ ತುಪ್ಪಾ ಬಾಳ ಹಾಕತಾಳ
ತಪ್ಪು ಮಾಡಿ ತವರಮನಿಗಿ ಓಡತಾಳ

ಹಗ್ಗಲೆ ಹೊಡದರ ಹಾರ್‍ಯಾರಿ ಬಿಳತಾಳ
ಒಣಕಿಲೆ ಹೊಡದರ ಕುಣಕೋತ ಬರತಾಳ

ಹಾಲ ಕುಡಿತಾ ಹಾಡಾ ಹಾಡತಾಳ
ಹಾಗಲಕಾಯಿ ಪಲ್ಲೆ ಮಾಡಂದ್ರ ಹರವಿಪಲ್ಲೆ ಮಾಡತಾಳ
ಸಾರ ಛಲೋ ಮಾಡತಾಳ
ಖಾರ ಬಾಳ ಹಾಕತಾಳ
ದೂರ ನಿಂತು ಊಟಕ್ಕೆ ನೀಡತಾಳ . . . . .

ಒಟ್ಟಿನಲ್ಲಿ ಒಡಪುಗಳನ್ನು ಕರ್ನಾಟಕದ ಗ್ರಾಮೀಣ ಸಮುದಾಯದ ವಿವಿಧ ಅನುಭವಗಳ ಸುಂದರವಾದ ಮತ್ತು ಪ್ರಾಮಾಣಿಕವಾದ ಅಭಿವ್ಯಕ್ತಿ ಎಂದು ಕರೆಯಬಹುದು. ಅವುಗಳಲ್ಲಿರುವ ಕಲ್ಪನಾ ರಮ್ಯತೆ, ಭಾಷಾ ಪ್ರಯೋಗ, ಸಾಹಿತ್ಯಿಕ ಸೊಗಸು, ಪ್ರಾಸ ಮತ್ತಿತರ ವಿಷಯಗಳು ಅಧ್ಯಯನ ಯೋಗ್ಯವಾದವು.

೮.೩.೬. ಒಗಟುಗಳು

ಜನಪದ ಸಾಹಿತ್ಯದ ಸ್ವತಂತ್ರ ಪ್ರಕಾರಗಳಲ್ಲಿ "ಒಗಟು"ಗಳು ಸೇರ್ಪಡೆಯಾಗುತ್ತವೆ.[೫೧] ಇವು ಪ್ರಪಂಚದಾದ್ಯಂತ, ಎಲ್ಲ ಸಮಾಜ ಮತ್ತು ಸಮುದಾಯಗಳಲ್ಲಿಯೂ ಕಾಣಸಿಗುವ ಪ್ರಮುಖ ಪ್ರಕಾರವಾಗಿದೆ. ಎಲ್ಲ ವಯಸ್ಸಿನ ಜನರೂ ಇದರಲ್ಲಿ ಭಾಗವಹಿಸುತ್ತಾರೆ. ಕನ್ನಡದಲ್ಲಿ ಒಂಟು, ಒಡಚುವ ಕಥೆ, ಒಡ್ಡಿದ ಕಥೆ, ಒಡಗಥೆ, ಒಗಟೆ ಎಂಬ ಹೆಸರುಗಳಿಂದಲೂ ಈ ಪ್ರಕಾರವನ್ನು ಗುರುತಿಸಲಾಗುತ್ತದೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಲಭ್ಯವಿರುವ ಮುಡಿಗೆ, ಮುಂಡಿಗೆಗಳನ್ನು ಒಗಟಿನ ಸಂವಾದಿ ರೂಪಗಳೆಂದೂ ಭಾವಿಸಲಾಗುತ್ತಿದೆ. ಕೆಲವರು ದೈವಿಕ ಪುರುಷರು ಹೇಳುವ ಕಾರಣಿಕಗಳನ್ನು, ತತ್ವಪದಕಾರರು ಹೇಳುವ ಬೆಡಗಿನ ವಚನಗಳನ್ನೂ ಒಗಟಿನ ವ್ಯಾಪ್ತಿಗೆ ತರುತ್ತಾರೆ. ತುಳುವಿನಲ್ಲಿ ಎದುರುಕತೆ, ಮಂಡೆ ಕತೆ, ತಮಿಳಿನಲ್ಲಿ ವಿಡಿಕತೈ, ತೆಲಗಿನಲ್ಲಿ ವಿಡಿಕತಾ ಅಥವಾ ಪೊಡಪು ಕಥಲು, ಮಲಯಾಳಂನಲ್ಲಿ ವಿಡಿಕದಾ, ಇಂಗ್ಲೀಷನಲ್ಲಿ "ಖಜಜಟಜ", ಜರ್ಮನಿಯಲ್ಲಿ "ಖಚಿಣಜಟ" ಎಂಬ ಪದಗಳು ಒಗಟಿಗೆ ಸಂವಾದಿಯಾಗಿ ಬಳಕೆಯಲ್ಲಿವೆ. ಸಂಸ್ಕೃತದಲ್ಲಿ ಈ ಪ್ರಕಾರವನ್ನು 'ಪ್ರಹೇಳಿಕಾ' ಎಂದು ಕರೆಯುತ್ತಾರೆ. ಪಾಲಿಯಲ್ಲಿ 'ಪಂಹ', ಮರಾಠಿಯಲ್ಲಿ 'ಉಖಾಣ' ಅಥವಾ ಆಹಣ, ಗುಜರಾತಿಯಲ್ಲಿ 'ಉಖಾಣೊ', ಹಿಂದಿಯಲ್ಲಿ 'ಪಹೇಲಿ', ಬಿಹಾರಿಯಲ್ಲಿ 'ಬಾಹಾ' ಎಂಬ ಪದಗಳು ಚಾಲ್ತಿಯಲ್ಲಿವೆ.

ಕನ್ನಡದಲ್ಲಿ ಬಳಕೆಯಾಗುತ್ತಿರುವ 'ಒಗಟು' ಪದದ ನಿಷ್ಪತ್ತಿಯನ್ನು ಖಚಿತವಾಗಿ ವಿವರಿಸಲಾಗಿಲ್ಲ. 'ಒಗೆ' ಎಂದರೆ 'ಎಸೆ' ಎಂದು ಅರ್ಥ ಮಾಡಿದರೆ ಒಗಟು ಪದಕ್ಕೆ 'ಸವಾಲು ಹಾಕು' ಎಂಬ ಅರ್ಥ ಹುಟ್ಟುತ್ತದೆ. ಇದು ಹೌದಾದರೆ ಒಗಟೆಂಬುದು ಒಬ್ಬರು ಇನ್ನೊಬ್ಬರಿಗೆ ಒಡ್ಡುವ ಸವಾಲು ಅಥವಾ ಸಮಸ್ಯೆ ಎಂದಾಗುತ್ತದೆ. ಇಂಗ್ಲೀಷನಲ್ಲಿ ಪ್ರಚಲಿತದಲ್ಲಿರುವ "ಂ ಖಜಜಟಜ" ಶಬ್ದಕ್ಕೆ ಕೂಡಾ "ಖಿಂ ಖಟಣಜಡಿಠಿಡಿಜಣ" ಎಂಬ ಅರ್ಥವಿದೆ. ಇವನ್ನು ಗಮನಿಸಿದರೆ ಒಗಟು ವ್ಯಾಖ್ಯಾನವನ್ನು ಬಯಸುವ, ಅರ್ಥೈಸಲು ಹೆಣಗಾಡಬೇಕಾದ ಒಂದು ಚತುರೋಕ್ತಿ ಅಥವಾ ಗೂಢೋಕ್ತಿ ಎಂದಂತಾಯಿತು. "ಒಂದು ವಸ್ತುವನ್ನು ಮತ್ತೊಂದು ವಸ್ತುವಿನ ವ್ಯಾಜ್ಯದಿಂದ ಚಮತ್ಕಾರಯುತವಾಗಿ ವರ್ಣಿಸುವುದು". ಆ ಅನುಕ್ತ ವಸ್ತುವನ್ನು ಕಂಡುಹಿಡಿಯುವಂತೆ ಹೇಳುವುದು ಒಗಟು ಎಂದು ಸಿ.ಪಿ.ಕೆ. ಹೇಳಿದ್ದಾರೆ. ಮಾನವನು

ಸಾದೃಶ್ಯ ಸನ್ನಿವೇಶಗಳನ್ನು ಅವಲೋಕಿಸಿ, ತನ್ನ ಅವಲೋಕನಗಳನ್ನು ಸವಾಲಿನ ರೂಪದಲ್ಲಿ ಒಡ್ಡಿದಾಗ ಒಗಟು ತಾನಾಗಿಯೇ ನಿರ್ಮಾಣವಾಗುತ್ತದೆ. ಇಲ್ಲಿ ಒಂದು ವಸ್ತುವನ್ನು ಪರ್ಯಾಯವಾಗಿ ಬಲಿಷ್ಠವಾದ ರೂಪಕವೊಂದರ ಮೂಲಕ ಪ್ರಸ್ತುತಪಡಿಸಲಾಗುತ್ತದೆ. ಇಂತಹ ಪ್ರಸ್ತುತ ಪಡಿಸುವಿಕೆಯು ಕೇಳುಗನ ಕುತೂಹಲವನ್ನು ಕೆರಳಿಸುತ್ತದೆ ಮತ್ತು ಹುದುಗಿರುವ ಅರ್ಥವನ್ನು ಬಯಲಿಗೆಳೆಯಬೇಕು. ಈ ಅರ್ಥದಲ್ಲಿ ಒಗಟು ದ್ವಂದಾರ್ಥವುಳ್ಳ ಗುಪ್ತ ಹೇಳಿಕೆ, ಅದರ ಅರ್ಥ ಸದಾ ರಹಸ್ಯವಾಗಿರುತ್ತದೆ.

ಒಗಟಿನ ಸ್ವರೂಪ ಲಕ್ಷಣ

'ಒಗಟಿ'ನಲ್ಲಿ ಎರಡು ಭಾಗಗಳಿರುತ್ತವೆ. ಅದರ ಮೊದಲ ಭಾಗದಲ್ಲಿ ಒಂದು ಪ್ರಶ್ನೆ ಇರುತ್ತದೆ. ಆ ಪ್ರಶ್ನೆಯು ತನ್ನ ಉತ್ತರ ಭಾಗದಲ್ಲಿರುವ ಒಂದು ಉತ್ತರವನ್ನು ತಾನೇ ಒಳಗೊಂಡಿರುತ್ತದೆ. ಈ ಪ್ರಶ್ನೆಯ ರೂಪಕದ ಸ್ವರೂಪವನ್ನು ಹೊಂದಿದ್ದರೆ; ಉತ್ತರವು ಸರಳ, ನೇರ ಮತ್ತು ವಸ್ತುನಿಷ್ಠವಾಗಿರುತ್ತದೆ. ಇಲ್ಲಿ ಜ್ಞಾನ ಅಥವಾ ನೈತಿಕ ಬೋಧನೆಯನ್ನು ಸುಲಲಿತ ಅಥವಾ ಹಾಸ್ಯದ ರೀತಿಯಲ್ಲಿ ಮಂಡಿಸಲಾಗುತ್ತದೆ. ಆದ್ದರಿಂದ ಒಗಟಿನ ಉದ್ದೇಶವು ಮೂಲತಃ ಶೈಕ್ಷಣಿಕವಾದುದು ಎಂದು ಹೇಳಲಾಗದೆ, ಅದು ಬುದ್ಧಿಯನ್ನು ಹರಿತಗೊಳಿಸುತ್ತದೆ. ಸಂಕ್ಷಿಪ್ತತೆ, ಹಾಸ್ಯಗುಣ ಮತ್ತು ಪ್ರಾಸ ಗುಣಗಳು ಎಲ್ಲ ಒಗಟುಗಳ ಸಾಮಾನ್ಯ ಲಕ್ಷಣಗಳಾಗಿವೆ.

ಒಗಟು ಕಟ್ಟುವವನು ಒಂದೇ ವಸ್ತುವನ್ನು ಆಧಾರವಾಗಿರಿಸಿಕೊಂಡು ತನ್ನ; ರೂಪಕ ಸಾಮರ್ಥ್ಯದಿಂದ, ಕೆಲವು ಬಾರಿ ಉಪಮಾ ಬಲದಿಂದ, ಬಗೆ ಬಗೆಯ ಸುಂದರವಾದ ಶಬ್ದಗಳನ್ನು ಬಳಸಿಕೊಂಡು ವಾಕ್ಚಾತುರ್ಯದಿಂದ ಹಲವು ಒಗಟುಗಳನ್ನೇ ಕಟ್ಟಬಹುದು. ಅದೇನೇ ಇದ್ದರೂ ಒಗಟಿನಲ್ಲಿ ಎರಡು ಸದೃಶ್ಯ ವಸ್ತುಗಳಿರಲೇ ಬೇಕು. ಒಂದು ಉಪಮಾನ, ಮತ್ತೊಂದು ಉಪಮೇಯ. ಉಪಮಾನದ ಆಧಾರದಿಂದ ಉಪಮೇಯವನ್ನು ಪತ್ತೆ ಮಾಡಬೇಕು, ಇಲ್ಲವೇ ರೂಪಕವನ್ನು ಒಡೆದು ಗುಹ್ಯಾರ್ಥವನ್ನು ಬಯಲು ಮಾಡಬೇಕು. ಆದ್ದರಿಂದ ಒಗಟು ಎಸೆಯುವವನ ಬುದ್ಧಿವಂತಿಕೆಯನ್ನು ಉತ್ತರ ಹೇಳುವವನು ಹೊಂದಿರಬೇಕಾಗುತ್ತದೆ.

ಒಗಟುಗಳ ವರ್ಗೀಕರಣ

ಒಗಟುಗಳ ವರ್ಗೀಕರಣದ ವಿಷಯದಲ್ಲಿ ಒಬ್ಬೊಬ್ಬ ವಿದ್ವಾಂಸರು ಒಂದೊಂದು ವಿಧಾನವನ್ನು ಅನುಸರಿಸಿದ್ದಾರೆ. ಅರ್ಚರ ಟೈಲರನು ದಶಮಾಂಕ ಪದ್ಧತಿಯ ವರ್ಗೀಕರಣವನ್ನು[೨] ಸೂಚಿಸಿದ್ದಾನೆ. ಜಗತ್ತಿನ ಸರ್ವಾಂಶಗಳಿಗೂ ಒಗಟುಗಳಲ್ಲಿ ಹೋಲಿಕೆಯಿರುವುದೆಂಬುದನ್ನು ಗಮನಿಸಿ, ಐದು ಮುಖ್ಯ ವಿಭಾಗಗಳನ್ನು ಮುಂದಿಟ್ಟಿದ್ದಾನೆ. ಅವುಗಳೆಂದರೆ ೧) ಮಾನವ ಮತ್ತು ಪ್ರಾಣಿಗಳನ್ನು ಹೊರತುಪಡಿಸಿ ಮಿಕ್ಕ ಜೀವಿಗಳೊಡನೆ ಹೋಲಿಕೆ ೨) ಪ್ರಾಣಿಗಳೊಡನೆ ಹೋಲಿಕೆ ೩) ಮಾನವರೊಡನೆ ಹೋಲಿಕೆ ೪) ಸಸ್ಯದೊಡನೆ ಹೋಲಿಕೆ ೫) ವಸ್ತುವಿನೊಡನೆ ಹೋಲಿಕೆ. ಉಳಿದಂತೆ ಧಾರ್ಮಿಕ ಒಗಟು, ಪ್ರಾಕೃತಿಕ ಒಗಟು, ಕಥಾಮೂಲ ಒಗಟು, ಪ್ರಾಣಿ ಸಂಬಂಧಿ ಒಗಟು, ಪೌರಾಣಿಕ ಒಗಟು, ವಿನೋದಾತ್ಮಕ ಒಗಟು, ಗಣಿತಾತ್ಮಕ ಒಗಟು, ರೂಪ ಪ್ರಧಾನ ಅರ್ಥ ಎಂಬಿತ್ಯಾದಿಯಾಗಿ ಪ್ರಧಾನ ಮತ್ತು ಕ್ರಿಯಾ ಪ್ರಧಾನ ಒಗಟುಗಳೆಂದು ಬಗೆ ಬಗೆಯಾಗಿ ವರ್ಗೀಕರಿಸಲಾಗಿದೆ.

ಪ್ರಾಣಿ ಸಂಬಂಧಿ ಒಗಟುಗಳು

ಒಗಟು	ಉತ್ತರ
೧. ಹಳ್ಳಿ ಗಡಿಯಾರ, ಒಳ್ಳೆ ಆಹಾರ	ಕೋಳಿ
೨. ಒಂದ ದೋಸೆ ಸಾವಿರ ಜನ ತಿಂತಾರ	ಜೇನು
೩. ಹಾರಿದರ ಹಣಮಂತ ಕೂಗಿದರ ಶಂಖ	ಕಪ್ಪೆ
೪. ಹುಲಿಯ ಚಿಕ್ಕಮ್ಮ ಇಲಿಯ ಮಂಕಮ್ಮ	ಬೆಕ್ಕು
೫. ಇಟ ಗುಡ್ಯಾಗ ಇಟಾಪ್ಪ ಕುತ್ತಾನ ಬಂದವರಿಗೆಲ್ಲ ಪ್ರಸಾದ ಕೊಡತಾನ	ಚೇಳು

ಪ್ರಕೃತಿಯಲ್ಲಿ ಗಿಡ, ಹೂ, ಹಣ್ಣು, ವಸ್ತುಗಳು ಹಲವಾರು ಗಾದೆಗಳಲ್ಲಿ ಬಳಕೆಗೊಂಡಿವೆ.

೧. ಆಯಿಗಿ ಮಡಚಾಕ ಬರಾಂಗಿಲ್ಲ, ಮುತ್ಯಾಗ ಎಣಸಾಕ ಬರಾಂಗಿಲ್ಲ
ಉತ್ತರ: ಮುಗಿಲು ಚುಕ್ಕಿ

೨. ಹಸರ ದವಾಖಾನೆ, ಕೆಂಪ ಡಾಕ್ಟರ, ಕರಿ ಗುಳಿಗಿ
ಉತ್ತರ: ಪಪ್ಪಾಳೆ ಹಣ್ಣು

೩. ಕಣ್ಣಿಗೆ ಕಾಣಿಸುವುದಿಲ್ಲ, ಕೈಗೆ ಸಿಗೋದಿಲ್ಲ
ಉತ್ತರ: ಗಾಳಿ

೪. ಕಡದ್ರ ಕಡ್ಯಾಂಗಿಲ್ಲ, ಬಡದ್ರ ಪೆಟ್ಟ ಹತ್ತೈತಿ
ಉತ್ತರ: ನೀರು

೫. ಹಗ್ಗ ಹಾಸೈತಿ, ಗೂಳಿ ಮಲಗೈತಿ
ಉತ್ತರ: ಕುಂಬಳಕಾಯಿ ಹಾಗೂ ಅದರ ಬಳ್ಳಿ

೬. ನೀಲಿ ಸಾಗರದಲ್ಲಿ, ಬೆಳ್ಳಿ ಮೀನುಗಳು
ಉತ್ತರ: ನಕ್ಷತ್ರ

೭. ಅಂಗಿ ತಗಿ, ಬಾವ್ಯಾಗ ಜಿಗಿ
ಉತ್ತರ: ಬಾಳೆ ಹಣ್ಣು

೮. ಅಪ್ಪ ಬಡ್ಯಪ್ಪ, ಅವ್ವ ಗೂಟವ್ವ ಮಗಳು ಮಾಸುಂದರಿ, ಮಗಾ ಗುಂಡಣ್ಣ
ಉತ್ತರ: ಕುಂಬಳ ಬಳ್ಳಿ

೯. ಒಂಟಗಾಲಿನ ಕಂಬ ನಾ ಇರ್ತಿನಿ ಊರ ತುಂಬ
ಉತ್ತರ: ಬುಗುರಿ

೧೦. ಒಬ್ಬಳ ತಾಯಿಗಿ ಲೆಕ್ಕವಿಲ್ಲದ ಮಕ್ಕಳು ಎಣಿಸಲಾಗುವದಿಲ್ಲ
ಉತ್ತರ: ಮೆಕ್ಕೆಜೋಳದ ತೆನೆ

೧೧. ಹಸಿರು ಡಬ್ಬಿಯಲ್ಲಿ ಬಿಳಿಯ ಅಕ್ಕಿ
ಉತ್ತರ: ಸವತೆಕಾಯಿ

೧೨. ಗಿಡ್ಡ ಗಿಡಕ ಗಿಣಿ ಮುಕರ್ಯಾವ
ಉತ್ತರ: ಸುಲಗಾಯಿ

೧೩. ಒಂದು ತೇಲುತ್ತೆ ಒಂದು ಕರಗುತ್ತೆ ಒಂದು ಮುಳುಗುತ್ತೆ
ಉತ್ತರ: ಎಲೆ, ಸುಣ್ಣ, ಅಡಕೆ

೧೪. ಕೆಂಪ ಕುದರಿ ಮಣ್ಣಾಗ ಮುಚ್ಚಿತಿ
ಉತ್ತರ: ಗಜ್ಜರೆ

೧೫. ಕಡಿದರೆ ಹಾಲು, ಒಡೆದರೆ ಹಾಲು ಒಳಗಡೆ ಸಾವಿರ ಮಕ್ಕಳು, ನಾನು ಯಾರು
ಉತ್ತರ: ಹಲಸಿನ ಹಣ್ಣು

೧೬. ತಾಯಿ ಪಾತಾಳಕ್ಕೆ, ತಂದೆ ಆಕಾಶಕ್ಕೆ ಮಗ ವ್ಯಾಪಾರಕ್ಕೆ, ಮಗಳು ಮದುವೆಗೆ ಹೋಗಿದ್ದಾಳೆ
ಉತ್ತರ:ಅಡಿಕೆ ಮರದ ವಿವಿಧ ಭಾಗ ಮತ್ತು ಅಡಿಕೆ

೧೭. ಆಕಾಶದೊಳಗಿನ ಗಿಣಿ ಊಟದ ಹೊತ್ತಿಗಿ ರಾಣಿ
ಉತ್ತರ: ಬಾಳೆ ಎಲೆ

೧೮. ನೀರಿಗಿ ಹೋಗಲ್ಲ, ನೀರು ಮುಟ್ಟುದಿಲ್ಲ, ನೀರು ತರ್ತಿನಿ
ಉತ್ತರ: ತೆಂಗಿನಕಾಯಿ

೧೯. ಕಡೆದರೆ ಕಚ್ಚಾಗುವುದಿಲ್ಲ, ಹಿಡಿದರೆ ಹಿಡಿಯಾಗುವುದಿಲ್ಲ
ಉತ್ತರ: ನೀರು

೨೦. ಮನೆ ಮೇಲೆ ಮಲ್ಲಿಗಿ ಹೂ
ಉತ್ತರ: ಮಂಜು

೨೧. ಬಿಳಿ ಕುದುರೆಗೆ ಹಸಿರು ಬಾಲ
ಉತ್ತರ: ಮೂಲಂಗಿ

೨೨. ಕಂಬದ ಮೇಲೆ ನಿಂಬೆಕಾಯಿ
ಉತ್ತರ: ಲವಂಗ

೨೩. ಹಿಡಿದರ ಹಿಡಿ ತುಂಬ ಬಿಟ್ಟರೆ ಮನಿ ತುಂಬ
ಉತ್ತರ: ಕಸಬರಿಗೆ

ಮಾನವ ಕುರಿತು ಮತ್ತು ಶರೀರ ವಿವಿಧ ಭಾಗಗಳ ಕುರಿತು

೧. ಒಂದು ಗಿಡಕ ಒಂದ ಪದಕ
ಉತ್ತರ: ಉಗುರು

೨. ಮನಿ ಮಂದಿಮುಂದ ಮಗಳ ಕೈ ಹಿಡಿತಾನ
ಉತ್ತರ: ಬಳಿಗಾರ

೩. ಹಾಲಿನಲ್ಲಿ ಕಪ್ಪ ಚುಕ್ಕಿ ಬಿದ್ದೈತಿ
ಉತ್ತರ: ಕಣ್ಣು ಗುಡ್ಡೆ

೪. ಕಿತ್ತರೆ ಬಾಡುವುದಿಲ್ಲ, ನೆಟ್ಟರೆ ಹುಟ್ಟುವುದಿಲ್ಲ
ಉತ್ತರ: ಕೂದಲು

೫. ಕಪ್ಪುಂಟು ಕಸ್ತೂರಿಯಲ್ಲ ಜಲ ಉಂಟು ನದಿಯಲ್ಲ, ನಾನ್ಯಾರು
ಉತ್ತರ: ಕಣ್ಣು

೬. ಗುಡಿಯ ಹಿಂದೆ, ಗುಂಡಕಲ್ಲು ಬಿದ್ದೈತಿ

ಉತ್ತರ: ತುರುಬ

೭. ಕರಿ ಹೊಲದಾಗ ಕಡತಾರ ಬಿದ್ದೈತಿ

ಉತ್ತರ: ಬೈತಲೆ

ಒಗಟುಗಳು ಆದಿ ಮಾನವನ ಬುದ್ಧಿ ಭಾವವನ್ನು ಬಿಂಬಿಸುವ ರತ್ನಗನ್ನಡಿಯಿದ್ದಂತೆ. ಒಗಟುಗಳಲ್ಲಿ ಜನಪದರ ಬುದ್ಧಿ, ಊಹನಾ ಶಕ್ತಿಗಳು ದಿಗ್ಭ್ರಮೆ ಹಿಡಿಸುವ ರೀತಿಯಲ್ಲಿರುತ್ತವೆ.

ಒಗಟುಗಳು ಗದ್ಯ, ಪದ್ಯಗಳೆರಡರಲ್ಲೂ ಜನ್ಮ ತಾಳಬಹುದು. ಅತೀ ಹೆಚ್ಚಾಗಿ ಪದ್ಯದಲ್ಲಿಯೇ ಜನ್ಮ ತಾಳಿವೆ. ಕಾರಣ ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳಬಹುದೆಂದು. ಹಾಗೆಯೇ ಒಗಟುಗಳಲ್ಲಿ ರೂಪಕ, ಹಾಸ್ಯ, ಪ್ರಾಸಗಳಿರುತ್ತವೆ. ಕಾವ್ಯ ಸೌಂದರ್ಯ ಜೀವನ ಸೌಂದರ್ಯಗಳಿರುತ್ತವೆ, ಉಪಮೇಯಗಳಿರುತ್ತವೆ. ದ್ವಿಪದಿ, ತ್ರಿಪದಿ, ಚತುಷ್ಪದಿ, ಷಟ್ಪದಿ ಎಲ್ಲದರಲ್ಲಿಯೂ ರಚಿತವಾಗಿರುತ್ತವೆ. ಒಗಟಿನ ಭಾಷೆ ಸಾಂಕೇತಿಕವಾಗಿರುತ್ತದೆ. ರಹಸ್ಯಾತ್ಮಕವಾಗಿದ್ದು ಒಗಟುಗಳೆಲ್ಲಾ ಪ್ರಶ್ನೆಯ ರೂಪದಲ್ಲಿಯೇ ಇರುತ್ತವೆ.

ಒಗಟುಗಳು ಜನಪದರ ರಸಿಕ ಉಕ್ತಿ ಚಾತುರ್ಯ, ಅವರ ಮನೋಧರ್ಮ ಹಾಗೂ ಅಭಿವ್ಯಕ್ತಿ ಸಾಮರ್ಥ್ಯವನ್ನು ಪದರು ಪದರುಗಳಾಗಿ ತೋರಿಸಬಲ್ಲವು. ಒಗಟುಗಳಲ್ಲಿ ಬರುವ ಅಶ್ಲೀಲ ಪದಗಳು, ಅಶ್ಲೀಲವಾಗಿದ್ದರೂ ಅದರ ಉತ್ತರ ಮತ್ತು ಒಳ ಅರ್ಥ ಅತ್ಯಂತ ಶುದ್ಧವಾಗಿರುತ್ತವೆ.

ಹಬ್ಬ ಹರಿದಿನಗಳಲ್ಲಿ, ಮದುವೆಗಳಲ್ಲಿ, ಹೊಲ-ಗದ್ದೆಗಳಲ್ಲಿ ನಾಟಿ ಮಾಡುವಾಗ, ಕಳೆ ತೆಗೆಯುವಾಗ, ಅಳಿಯ ಮಾವನ ಮನೆಗೆ ಬಂದಾಗ, ಬೀಗ ಬೀಗರು ಸೇರಿದಾಗ, ರಾತ್ರಿಯ ಹೊತ್ತಿನಲ್ಲಿ ಕಣ, ಗದ್ದೆಗಳನ್ನು ಕಾಯುವ ಸಂದರ್ಭಗಳಲ್ಲಿ ಒಗಟಿನ ಕ್ರಿಯೆಯಲ್ಲಿ ಹೆಂಗಸರು, ಗಂಡಸರು, ವಯಸ್ಸಾದವರು, ಮಕ್ಕಳು ಹದಿ ಹರೆಯದ ಹುಡುಗ-ಹುಡುಗಿಯರೆಲ್ಲರೂ ಭಾಗವಹಿಸುವರು.

ಪ್ರಕೃತಿಯ ವಸ್ತುಗಳಾದ ಆಕಾಶ, ಸೂರ್ಯ, ಚಂದ್ರ, ನಕ್ಷತ್ರ, ಮರಗಿಡ, ಹೂ, ಗಾಳಿ, ಬೆಳಕು, ಕತ್ತಲು, ಪ್ರಾಣಿ, ಪಶು, ಪಕ್ಷಿಗಳು ಮುಂತಾದವುಗಳನ್ನು ಅರಿತುಕೊಳ್ಳಲು ಜನಪದರು ಒಗಟುಗಳಿಗೆ ಮೊರೆ ಹೋದರು. ಒಂದು ರೀತಿಯಲ್ಲಿ ಪ್ರಕೃತಿ ಶಿಕ್ಷಣವಾಗಿ ಆ ಮುಖಾಂತರ ಪ್ರಕೃತಿಯನ್ನು ಪರಿಚಯಿಸಿಕೊಂಡರು. ಅಲ್ಲದೇ ತಮ್ಮ ಮುಂದಿನ ಪೀಳಿಗೆಗೂ ಸಹ ಪ್ರಕೃತಿಯನ್ನು ಪರಿಚಯಿಸುವ ಕ್ರಿಯೆಯಲ್ಲಿ ತೊಡಗಿದರು.

ಬೈಗುಳಗಳು

ಜಾನಪದದ ಅನೇಕ ಪ್ರಕಾರಗಳಲ್ಲಿ ಬೈಗುಳ ಕೂಡಾ ಒಂದು. ಜನಪದ ಭಾಷಿಕ ಅಧ್ಯಯನದಲ್ಲಿ ಇದಕ್ಕೆ ಮಹತ್ವದ ಸ್ಥಾನವೊಂದನ್ನು ಈಗಾಗಲೇ ನೀಡಲಾಗಿದೆ. ಬೈಗುಳ ತಲೆಮಾರಿನಿಂದ ತಲೆಮಾರಿಗೆ ವಾಕ್ಪರಂಪರೆಯಿಂದ ಸಾಗಿ ಬರುತ್ತವೆ. ಹಾಗೆ ಬರುವಾಗ ಕೆಲವು ಬದಲಾವಣೆ, ಬೆಳವಣಿಗೆಗಳನ್ನು ಪಡೆದುಕೊಳ್ಳುವವು. ಇವು ಮೂಲದಲ್ಲಿ ಅಜ್ಞಾತನೊಬ್ಬನ ಸೃಷ್ಟಿಯಾಗಿದ್ದು; ತರುವಾಯ ಸಾರ್ವಜನಿಕರ ಮಾನ್ಯತೆ ಪಡೆದು ಬಳಕೆಯಾಗುತ್ತಾ ಎಲ್ಲರ

ಸ್ವತ್ತಾಗಿ ಬಿಡುತ್ತವೆ. ಆದ್ದರಿಂದ ಬೈಗುಳುಗಳನ್ನು ಜಾನಪದವೆಂದು, ನಮ್ಮ ಸಂಸ್ಕೃತಿಯ ಭಾಗವೆಂದು ಪರಿಗಣಿಸುವಲ್ಲಿ ಯಾವ ಆತಂಕಕ್ಕೂ ಅವಕಾಶವಿಲ್ಲ. ಬೈಗಳನ್ನು ವಾಚ್ಯಾರ್ಥಕ್ಕಿಂತ ಅದರ ನಿಯೋಗಾತ್ಮಕ ಅರ್ಥಗಳೇನೆಂದು ತಿಳಿಯುವಲ್ಲಿ ಅವುಗಳ ವಿಶೇಷತೆಯಿದೆ. ಯಾರು? ಯಾರಿಗೆ? ಯಾವ ಸಂದರ್ಭದಲ್ಲಿ ಬಯ್ಯುತ್ತಿದ್ದಾರೆಂಬುದನ್ನು ಆಧರಿಸಿ ಅವುಗಳ ಸಾಂದರ್ಭಿಕ ಅರ್ಥ ವ್ಯತ್ಯಾಸಗೊಳ್ಳುತ್ತಾ ಹೋಗುತ್ತವೆ. ಯಾವುದೇ ಅಶ್ಲೀಲವಾದ ಪದ ಅಥವಾ ಬಯ್ಗಳು ಎದುರಾಳಿಯನ್ನು ಮಾನಸಿಕವಾಗಿ ದುರ್ಬಲಗೊಳಿಸುವ ಇಲ್ಲವೇ ನೋಯಿಸುವ ಹೋರಾಟದ ಅಸ್ತ್ರವಾಗಿ ಬಳಕೆಯಾದರೆ; ಮತ್ತೊಂದು ಕಡೆ ಸ್ನೇಹ, ಆತ್ಮೀಯತೆ, ಪ್ರೀತಿ, ಮೆಚ್ಚುಗೆ, ವಿಶ್ವಾಸದ ರೂಪದಲ್ಲಿ ಸ್ನೇಹಿತನಿಗೆ, ಮಗುವಿಗೆ ಬಳಕೆಯಾಗುವುದನ್ನು ನೋಡಬಹುದಾಗಿದೆ. ಬೈಗುಳದಲ್ಲಿ ವಾಚಾರ್ಥಕ್ಕಿಂತ ಅದರ ಸಾಂದರ್ಭಿಕ ಮತ್ತು ನಿಯೋಗಾತ್ಮಕ ಅರ್ಥಗಳೇ ಮುಖ್ಯವಾಗಿವೆ. ಇದಲ್ಲದೆ ಹೋಳಿ ಹಬ್ಬದ ಭಾಗವಾಗಿ, ಮಾರಿ ಹಬ್ಬದ ಭಾಗವಾಗಿ, ಆಚರಣೆಗಳ ವಿಧಿವಿಧಾನಗಳಲ್ಲಿ ಬಯ್ಗಳ ಪಾತ್ರ ಗಮನಾರ್ಹವಾದುದು. ಜೋಕುಮಾರ ಸ್ವಾಮಿಯಂಥ ಸಮೃದ್ಧ ದೇವತೆಗೂ ಬಯ್ಗಳುಗಳೇ ಮಂಗಳಾರತಿಯಾಗುವುದುಂಟು.

ಶಬ್ದ ಭಂಡಾರದಲ್ಲಿ ಆಕರ್ಷಕ ಭಾಗವೇ ಬೈಗುಳ. ಜನರ ಲಕ್ಷವನ್ನು ತಮ್ಮೆಡೆಗೆ ಸೆಳೆಯುವ ಶಕ್ತಿ ಈ ಬೈಗುಳಕ್ಕಿದೆ. ಬೈಗುಳ ಶಾಬ್ದಿಕ ಹೊಡೆತ, ಬೈಗುಳ ಎನ್ನುವುದು ಕೆಟ್ಟ ಮಾತಲ್ಲ, ಕೆಟ್ಟ ಮಾತುಗಳೆಲ್ಲವೂ ಬೈಗುಳವಲ್ಲ.

ಬೈಗುಳದ ವಿಧಗಳು

೧. ಪ್ರೀತಿ, ಸ್ನೇಹ, ಸಲುಗೆಯ ಬೈಗುಳಗಳು
೨. ಹಗೆತನ, ದ್ವೇಷ ಸಂಬಂಧಿ ಬೈಗುಳಗಳು
೩. ಕಾಮಸಂಬಂಧಿ, ಲೈಂಗಿಕ ಕ್ರಿಯಾ ಸಂಬಂಧಿ ಬೈಗುಳಗಳು
೪. ಅನೈತಿಕ ಸಂಬಂಧದ ಬೈಗುಳಗಳು
೫. ಶಾಪರೂಪದ ಬೈಗುಳಗಳು
೬. ಮಕ್ಕಳ ಬೈಗುಳಗಳು
೭. ಹೆಂಗಸರ ಬೈಗುಳಗಳು
೮. ಗಂಡಸರ ಬೈಗುಳಗಳು
೯. ಅನ್ಯಭಾಷಾ ಸ್ವೀಕರಣದ ಬೈಗುಳಗಳು[೫೩]

ಪ್ರೀತಿ-ಸ್ನೇಹ-ಸಲಿಗೆಯ ಬೈಗುಳಗಳು

ಬೈಗುಳದ ಉದ್ದೇಶ ತಮಗಾಗದವರಿಗೆ ಮಾನಸಿಕ ನೋವುಂಟು ಮಾಡುವುದೇ ಆಗಿದ್ದರು ಪ್ರೀತಿ, ಸ್ನೇಹ, ಸಲಿಗೆಯ ಬೈಗುಳಗಳಲ್ಲಿ ಅದಿರುವದಿಲ್ಲ, ಅಂಥವುಗಳನ್ನು ಈ ವರ್ಗಕ್ಕೆ ಸೇರಿಸಬಹುದಾಗಿದೆ. ಅವುಗಳನ್ನು ಹೀಗೆ ಪಟ್ಟಿ ಮಾಡಬಹುದು.

೧. ಹುಚ್ಚ ಸೂಳಿ ಮಗನ
೨. ನಿನ್ನವ್ವನ
೩. ಮಳ್ಳ ಸೂಳಿಮಗನ
೪. ಹಡಸು ಬೀಜ ಬಾರೊ

೫. ಏ ನಾಲಾಯಕ ಬಾರೊ
೬. ಏ ಚೋದು ಬಾರೊ
೭. ಏ ನಿನ್ನ ತಳಿಯ
೮. ನಿನ್ನ ಕಂಹಿ ಕುಲಾನ
೯. ಅಬುರು ಇಲ್ಲದ ಗಬುರು
೧೦. ನಿಮ್ಮ ಜ್ಯಾತ್ಯಾಗ ನನ್ನ
೧೧. ನಿಮ್ಮ ಕುಲದಾಗ ನನ್ನ
೧೨. ನಿಮ್ಮಾಯಿ ತಲೆ
೧೩. ಬಾರಾಕೊ ಕುರಸಾಲ್ಯಾ
೧೪. ಏ ತುಡಗಾ
೧೫. ಏ ಹಲಕಟ ಬಾ

ಹಗೆತನ, ದ್ವೇಷ ಸಂಬಂಧಿ ಬೈಗುಳ

ಹೆಸರೇ ಸೂಚಿಸುವಂತೆ ಹಗೆತನ, ದ್ವೇಷ, ಅಸೂಯೆಗೆ ಸಂಬಂಧಿಸಿದಂತೆ ಈ ಭಾಗದಲ್ಲಿ ಸೇರಿಸಬಹುದಾಗಿದೆ. ಅವುಗಳು ಹೀಗೆವೆ –

ಮರ್ಮಾಂಗಗಳ ಹೆಸರಿನ ಬೈಗುಳ

ಯೋನಿ, ಶಿಶ್ನ ಮೊದಲಾದ ಮರ್ಮಾಂಗಗಳ ಹೆಸರನ್ನು ಒರಟಾದ ಭಾಷಿಕ ಪದ (ಎರಡೆರಡು ಅಕ್ಷರದ ಪದಗಳು) ಉಪಯೋಗಿಸಿ ಅವುಗಳ ಹಿಂದೆ 'ನನ್ನ','ನಿನ್ನ' ಪದವನ್ನು ಸೇರಿಸಿಕೊಂಡು ಬಯ್ಯುವದುಂಟು.

ನಮ್ಮ ಮರ್ಮಾಂಗಗಳು ಇತರರಿಗೆ ಕಾಣಬಾರದೆಂಬ ಅಥವಾ ತೋರಿಸಬಾರದೆಂಬ ಕಾರಣದಿಂದಾಗಿ ಉಡುಪು ಧರಿಸಿಕೊಂಡು ನಾವು ಸಾಮಾಜಿಕ ಕಟ್ಟುಪಾಡುಗಳನ್ನು ಕಾಪಾಡಿಕೊಂಡು ಬರುತ್ತವೆ. ಇದು ನಮ್ಮ ಸಂಸ್ಕೃತಿ; ಸಭ್ಯತೆಯ ಕುರುಹು. ಹಾಗೆಯೇ ಅವುಗಳ ಒರಟಾದ ಹೆಸರುಗಳನ್ನು ಹೇಳಲು ಅಥವಾ ಕೇಳಲು ಯಾರೂ ಇಷ್ಟಪಡುವುದಿಲ್ಲ. ಆದರೆ ಅಂಥ ಕಟ್ಟುಪಾಡುಗಳನ್ನು ನಾವು ಮೀರಬಲ್ಲೆವು ಎಂಬ ಉದ್ಧಟತನವನ್ನು ಪ್ರದರ್ಶಿಸಿ, ಎದುರಾಳಿಯನ್ನು ಮಾನಸಿಕವಾಗಿ ಘಾಸಿಗೊಳಿಸುವ ಉದ್ದೇಶ ಈ ಬಯ್ಗುಳಗಳಲ್ಲಡಗಿದೆ.

ಹಾಗೆಯೇ ಮರ್ಮಾಂಗದ ಸುತ್ತಲಿನ ಕೂದಲಿಗೆ (ಶಂಟ) ಪದ ಬಳಸಿ ಬಯ್ಯುವದುಂಟು.

೧. ನನ್ನು ಕಿತ್ಕೋತಿಯೇನೋ?
೨. ನೀ ಯೇನ ನನ್ನ ಶಂಟ ಕೇಳ್ತಿಯೋ?
೩. ಊರೆಲ್ಲ ಹರ್‍ಕೊಂಡ್ರು ಆಗುದಿಲ್ಲ ಹೋಗೋ
೪. ನೀ ಯೇನ್ ನನ್ನ ಶಂಟೊ
೫. ಹರ್‍ಕೊಳ್ಳುವವನಿದ್ರೆ ಬಾರೋ
೬. ನೀನು ನನ್ನ ಶಂಟ ಸಮಾನ
೭. ನನ್ನವು ಒಂದೆರಡು ಕಿತ್ಕೊಂಡಂಗ ಅಷ್ಟ

ಇವೆಲ್ಲ ಬೈಗುಳದಲ್ಲಿ ಸೊಂಟದ ಕೆಳಗಿನ ಅಂದರೆ ತೊಡೆ ಸಂದಿಯ ಭಾಗದ ಅಂಗಗಳ ಒರಟು ಭಾಷಿಕ ಪದಗಳಾಗಿರುತ್ತವೆ.

ಅಂಗಾಂಗಗಳನ್ನು ಊನಗೊಳಿಸುವ ಕುರಿತು ದ್ವೇಷದ, ಹಗೆತನದ ಬೈಗುಳ

೧. ನಿನ್ನ ಕಾಲಕಿತ್ತು ಕೈಯಾಗ ಕೊಟ್ಟೇನು
೨. ನಿನ್ನ ಕಾಲ ಮುರಿತೆನು
೩. ನಿನ್ನ ಕಣ್ಣಾಗ ಮಣ್ಣಾಕ
೪. ನಿನ್ನ ಕಣ್ಣಾಗ ಕಾರಾ ಹಾಕಲಿ
೫. ನಿನ್ನ ಕಾಲಾಗ ಹುಳಾ ಬೀಳಲಿ
೬. ನಿನ್ನ ಬಾಯಾಗ ಮಣ್ಣ ಬೀಳಲಿ
೭. ನಿನ್ನ ಕಿವ್ಯಾಗ ಕಾದ ಎಣ್ಣೆ ಸುರುವಲಿ
೮. ನಿನ್ನ ಹೆಡಕ ಮುರಿಲಿ
೯. ಮುಕಳ್ಯಾಗ ಮಣ್ಣ ಬೀಳಲಿ
೧೦. ಬಾಯಾಗ ಹುಳಾ ಬೀಳಲಿ
೧೧. ನಿನ್ನ ನಾಲ್ಗಿ ಸೀಳೆನು
೧೨. ನಿನ್ನ ಕಣ್ಣು ಕಿತ್ತೆನು
೧೩. ಕಿಂವ್ಯಾಗ ಮಣ್ಣ ಬೀಳಲಿ
೧೪. ಬಾಯಾಗ ಹೇಲ ತುಂಬಲಿ
೧೫. ನಿನ್ನ ಬಾಯಾಗ ಉಚ್ಚೆ ಹೊಯ್ಯಲಿ
೧೬. ಶೆಗಣಾ ತನ್ನಲಿಕ್ಕೆ ತಿಳಿಯೋದಿಲ್ಲೆನೊ
೧೭. ಮುಂದೆ ಇಟ್ಟರೆ ತಿನ್ತಿಯಾ

ಶಾಪರೂಪದ ಬೈಗುಳ

೧. ನಿನ್ನ ಕಣ್ಣ ಸೇದಿ ಹೋಗಲಿ
೨. ನಿನ್ನ ವಂಶ ನಿರ್ವಂಶವಾಗಲಿ
೩. ನಿನ್ನ ಕೈ ಕತ್ತರಸಲಿ
೪. ನೀನು ಹಾಳಾಗಿ ಹೋಗು
೫. ನಾಗರಹಾವ ಕಡಿಲಿ
೬. ಬಾಯಾಗ ಹುಳಾ ಬೀಳಲಿ
೭. ನಿನ್ನ ಕಾಲ ಕತ್ತರಿಸಲಿ
೮. ನಿನ್ನ ಮಾರಿ ಮಣ್ಣಾಗ ಅಡಗಲಿ
೯. ನಿನ್ನ ಗುಳದಾಳಿ ಹರಿಲಿ
೧೦. ನಿನ್ನ ಸೆರಗ ಹರಿಲಿ

ಕಾಮಸಂಬಂಧಿ, ಲೈಂಗಿಕ ಕ್ರಿಯಾ ಸಂಬಂಧಿ ಬೈಗುಳಗಳು

ನಮ್ಮ ಸಮಾಜ; ವಿವಾಹದ ಚೌಕಟ್ಟಿನಲ್ಲಿ ಸತಿ-ಪತಿಯರಿಗೆ ಮಾತ್ರ ಲೈಂಗಿಕ ಸಂಬಂಧವನ್ನಿಟ್ಟುಕೊಳ್ಳಲು ಸಮ್ಮತಿಸುತ್ತದೆ. ಆದರೆ ಲೈಂಗಿಕವಾಗಿ ಇನ್ನಿತರ ವ್ಯಕ್ತಿಗಳೊಂದಿಗೆ ಸಂಭೋಗವನ್ನು ಆರೋಪಿಸಿ ಆಡುವ ಮಾತುಗಳು ಬಯ್ಗಳು ಎನಿಸಿಕೊಂಡಿವೆ.

ನಿಮ್ಮಪ್ಪ ನಿನ್ನ (ಸಂಭೋಗಕ್ಕಿರುವ ಒರಟು ಪದ) ಇಲ್ಲಿ ತಂದೆ ಮತ್ತು ಮಗಳ ಲೈಂಗಿಕ ಸಂಬಂಧವನ್ನು ಆರೋಪಿಸಿ ಹೇಳುವುದರಿಂದ ಎಂಥವರು ಮಾನಸಿಕವಾಗಿ ಜರ್ಝರಿತರಾಗುವರು. ನಿಷೇಧಿತ (ಅಪವಿತ್ರ) ಸಂಬಂಧಗಳನ್ನು ಶಾಬ್ದಿಕವಾಗಿ ಸಾಧ್ಯಪಡಿಸುವ ಬೈಗುಳ ಎದುರಾಳಿಯ ಮಾನಸಿಕ ಉದ್ವಿಗ್ನತೆಗೆ ಕಾರಣವಾಗುತ್ತದೆ. ಅಲ್ಲದೇ ಎದುರಾಳಿಯ ಬಾಯನ್ನು ಸುಲಭವಾಗಿ ಮುಚ್ಚಿಸುತ್ತವೆ.

ಈ ಬಯ್ಗಳನ್ನು ಹಿರಿಯರಿಗಿಂತ ಕಿಶೋರದವರು ಹೆಚ್ಚಾಗಿ ಬಳಸುವರು. ಇವರು ಪ್ರೌಢಾವಸ್ಥೆಗೆ ತಲುಪುತ್ತಿರುವ, ಹಾಗೆಯೇ ಇವರ ಮನಸ್ಸಿನಲ್ಲಿ ಸೂಪ್ತವಾಗಿರುವ ಲೈಂಗಿಕ ಬಯಕೆಗಳು ಈ ಬಯ್ಗುಳಗಳ ರೂಪದಲ್ಲಿ ಹೊರಹಾಕಲ್ಪಡುತ್ತವೆ. ಆದರೆ ಸಾಮಾನ್ಯವಾಗಿ ಸಮಾನ ವಯಸ್ಸಿನ ಮಕ್ಕಳು ಈ ರೀತಿ ಬೈದಾಡುವದನ್ನು ಗಮನಿಸಬಹುದಾಗಿದೆ. ಅವುಗಳನ್ನು ಈ ರೀತಿ ಗಮನಿಸಬಹುದಾಗಿದೆ.

೧. ನಿನ್ನ ತುಣ್ಣ್ಯಾಗ ಮಣ್ಣ ಬೀಳಲಿ

೨. ಒಂದ ತುಣ್ಣಿಗೆ ಹುಟ್ಟಿದವನೆನ್ಲೆ ನೀನು

೩. ನಿನ್ನ ತುಲ್ಲಾಗ ಕಾಲ್ಹಾಕಾ

೪. ನಿನ್ನ ತುಲ್ಲಾಗ ಕಾರಾ ತುಂಬಲಿ

೫. ನಿಮೌವನ ತುಲ್ಲ

೬. ಊರಿಗೆ ಹಡಸವಳೆ

೭. ಊರಡ್ಲಿ

೮. ದಬಲಗುಂಡಿಯವಳೆ

೯. ಕಂವಟ ಮುಕಳಿಯವಳೇ

೧೦. ಹೊಲೆಯನಿಗ್ಹುಟ್ಟಿದವಳೇ

೧೧. ಹಾದರಗಿತ್ತಿ ಮಗನೇ

೧೨. ನಿನ್ನ ನಾಯಿಗಿ ಹಚ್ಚಲಿ

೧೩. ನಿನ್ನ ಹಳ್ಳಕ್ಕಚ್ಚಲಿ

೧೪. ನಿನ್ನ ತುಲ್ಲಾಗ ಹೊಲೆಯನ ತುಣ್ಣಿ

೧೫. ನಿನ್ನ ತುಲ್ಲಾಗ ಚಪ್ಪಲ ಹಾಕಲಿ

೧೬. ನಿನಗ ನನ್ನ ಗಂಡನ್ಹಚ್ಚಲಿ

೧೭. ನಿನ್ನ ಮಲಿ ಮೂಗ ಕೊಯಲಿ

ಮಕ್ಕಳ ಬೈಗುಳಗಳು

೧. ನಿನ್ನ ಬಾಯಾಗ ಮಣ್ಣಾಕ

೨. ನಿನ್ನ ಮಾರಿಗಿ ಮಣ್ಣೆರಲಿ

೩. ಎ ಹೂರಬೀಜ

೪. ಏ ನಿನ್ನ ತಳಿಯ

೫. ಕೈ ಬೀಜ

೬. ಏ ಹಡಸು ಬೀಜ
೭. ಸೂಳೆ
೮. ಹಾದರಗಿತ್ತಿ
೯. ಗರತಿ ಆಗ್ಯಾಳು
೧೦. ಮೊಂಡ ಹಾದರಗಿತ್ತೆ
೧೧. ನಿನ್ನ ಗದ್ದಕ್ಕಟ ಕಟ್ಟಲಿ

ಹೆಂಗಸರ ಬೈಗುಳಗಳು

೧. ನನ್ನ ಸಂವತಿ
೨. ನನ್ನ ಗಂಡನ ರಂಡೆ
೩. ನಿನ್ನ ತುಲ್ಲಿಗೆ ಕಳ್ಳಿ ದಡಿ ಸಿಗಸಲಿ
೪. ಜಗಕ ಮೀರಿದ ಹೆಣ್ಣ
೫. ಬೋಸುಡಿ
೬. ಮೊಂಡ ರಂಡೆ
೭. ಹಾದರಗಿತ್ತಿ
೮. ಗರತಿ ರಂಡಿ
೯. ಕಿಸಿಬ್ಯಾಡ ಹೋಗೆ
೧೦. ನಿನ್ನಂಗ ಹಾದರ ಮಾಡಿದವಳಲ್ಲ
೧೧. ಎಮ್ಮಿ ಮಣಕದಂತವಳ
೧೨. ಗಂಡ ಬಿಟ್ಟ ರಂಡಿ
೧೩. ಊರ್ಹಾದರಗಿತ್ತಿ
೧೪. ವೈಯಾರಿ
೧೫. ದುರುಗವ್ವ ಮಾರ್ರ್ಯಾಕ್ಕಿನ
೧೬. ಲೇ ಗೊಡ್ಡಿ
೧೭. ಲೇ ಬಂಜಿ
೧೮. ಗಂಡನ ಬಿಟ್ಟ ಬಂದ ಮುಂಡಿ
೧೯. ಊರ ಬೋಳಿ
೨೦. ಹಲ್ಕಟ ರಂಡೆ

ಹೆಂಗಸರು ಗಂಡಸರಿಗೆ ಬೈಯುವ ಬೈಗುಳ

೧. ನಿನ್ನ ಹೆಂಡ್ತಿ ರಂಡ್ಯಾಗ
೨. ನಿನ್ನ ಮನಿ ಮುರ್ರೊಗ್ಲಿ
೩. ನಿನ್ನ ಹೊತ್ಕೊಂಡೊಗ್ಲಿ
೪. ಏ ಹೆಂಗಸರಂತವ್ನ
೫. ದೊಡ್ಡ ಗಂಡ್ಸ ನೀನು
೬. ನಿನ್ನ ಹೆಜ್ಜ್ಯಾಗ ಸಜ್ಜಿ ಬಿತ್ತಿ

೭. ನಿನ್ನ ಬಾಯಾಗ ಮಣ್ಣ ಬಿಳ್ಳಿ
೮. ನನ್ನ ಗಂಡ ಬರ್ಲಿ ಮಾಡಿಸ್ತಿನಿ ನಿನಗೆ
೯. ಏ ಹೆಗ್ಗಣದಂತ ಮಾರ್‍ಯಾವನ
೧೦. ರಂಡಿ ಮುಂಡೆ ಮಕದಂತವ್ನ
೧೧. ಏ ಮಾದಗನ ತುಣ್ಣಿಗೆ ಹುಟ್ಟದವ್ನೆ
೧೨. ಏ ಗಂಡ್ಸೇನೊ ನೀನು
೧೩. ಮಂಗ್ಯಾನಂತ ಮಾರ್‍ಯಾವನ
೧೪. ನಿನ್ನ ಹೆಣಾ ಹೊರ್ಲಿ

ಗಂಡಸರು ಹೆಂಗಸರಿಗೆ ಬೈಯುವ ಬೈಗಳು

೧. ಹಾದರಗಿತ್ತಿ
೨. ಮಹಾನ ಪತಿವ್ರತೆ ಇವ್ವು
೩. ನಿಯೇನ್ ಕಿಸ್ಯಾಕ ಬಂದಿ ಇಲ್ಲಿ
೪. ನಿಯೇನ್ ಶೆಂಟ ಹೇಳ್ತಿ
೫. ತುಡ್ಗಿ
೬. ಲೇ ರಂಡಿ
೭. ಲೇ ಬೋಸಡಿ
೮. ನಿನ್ನ ಗಂಡನ್ ಬಿಟ್ಟು ನನ್ಹತ್ರ ಹಡ್ಸಾಕ ಬಂದಿದೇನ
೯. ಊರಾದರಗಿತ್ತಿ
೧೦. ಊರ ಸೂಳೆ
೧೧. ಇದಿ ಮಾಯಿ
೧೨. ಲೇ ಗೊಡ್ಡಿ
೧೩. ನಿನ್ನಾಳ್ತಿನಿ ಬಾ
೧೪. ಹಲ್ಕಟ ಹೆಣ್ಣ
೧೫. ಉಡಾಳಿ

ಗಂಡಸರು ಗಂಡಸರಿಗೆ ಬೈಯುವ ಬಯ್ಗಳು

೧. ಏ ಹೆಂಗಸರಂತವ್ನ
೨. ಏ ಬೋಸುಡಿ ಮಗ್ನ
೩. ಏ ಬೋಳಿ ಮಗ್ನ
೪. ಕರಿ ಮಾರಿಯವನ
೫. ಹಾದರಗಿತ್ತಿ ಮಗನ
೬. ನಿಯೇನ್ ಶೆಂಟ ಹೇಳ್ತಿ
೭. ನಿನ್ನ ಮಾರಿ ನೋಡಿದ್ರ ಮುಂಜಾನೆ ಹೇಲ ಬರಾಂಗಿಲ್ಲ
೮. ಹೆಂಥಾ ಮಗಾ ಹುಟ್ಟಿದಿಲೇ ಎಪ್ಪ
೯. ರಂಡಿಮುಂಡಿ ಮಗನ

೧೦. ಲಫಂಗ
೧೧. ಲುಚ್ಚಾ
೧೨. ನಾಲಾಯಕ ನನ್ನ ಮಗ
೧೩. ಸೂಳೆ ಮಗ
೧೪. ಸೂಳೆತಮ್ಮನ ಮಗನೆ

ಸಾವು ಸಂಬಂಧಿ ಬಯ್ಗಳು

ಸಾವಿನ ಶಬ್ದ ಕೇಳಿದರೆ ಸಾಕು ಮನುಷ್ಯ ಅಂಜುತ್ತಾನೆ. ಆದ್ದರಿಂದ ಬಯ್ಯುವಾಗ ಸಾವನ್ನು ಪರ್ಯಾಯವಾಗಿ ಸೂಚಿಸುವ ಪದಗಳನ್ನು ಬಳಸುವದುಂಟು.

೧. ನಿನ್ನೆಂಡ್ತಿ ರಂಡೆ ಆಗಲಿ
೨. ನಿನ್ನ ಬಾಯಾಗ ಮಣ್ಣಾಕಲಿ
೩. ನಿನ್ನ ಮೋತಿಗಿ ಮಣ್ಣೆರಸಲಿ
೪. ನಿನ್ನ ಮಾರಿ ಮಣ್ಣಾಗ ಇಡಲಿ
೫. ನಿನ್ನ ಹೆಣಾ ಚಂದ ಮಾಡಲಿ
೬. ನಿನಗ ಗದ್ದಕಟ್ಟ ಕಟ್ಟಲಿ
೭. ನೀ ಸೆಟದ ಹೋಗ್ಲಿ
೮. ನಿನ್ನ ಹೆಜ್ಯಾಗ ನವಣಿ ಬಿತ್ಲಿ
೯. ನಿನ್ನ ಎದಿ ಮ್ಯಾಲ ಕಲ್ಲಿಡ್ಲಿ
೧೦. ನಿನ್ನ ಗೋರಿ ಮ್ಯಾಲ ಮುಳ್ಳಹಚ್ಲಿ

ಎದುರಾಳಿ ಗಂಡಸಾಗಿದ್ದಾಗ ಆತನ ಸಾವನ್ನ ಹೆಂಡತಿಯ ವೈಧವ್ಯದ ಮೂಲಕ ಹೇಳಲಾಗುತ್ತದೆ. ಹಾಗೆಯೇ ಹೆಣದ ಕಣ್ಣು ಮುಚ್ಚಿ ಅದರ ಮೇಲೆ ಸ್ವಲ್ಪ ಅಕ್ಕಿ ಕಾಳನ್ನು ಇಡುವುದು ಕೆಲವು ಜನಾಂಗದಲ್ಲಿ ಕಂಡುಬರುತ್ತದೆ. ಅಲ್ಲದೇ ಸಮಾಧಿಯ ಮೇಲೆ, ಸಮಾಧಿಯ ನಂತರ ಶವವನ್ನು ನಾಯಿ, ನರಿ, ತೋಳಗಳು ಎಳೆದು ಹೆಣವನ್ನು ಹೊರತೆಗೆದಾವು ಎಂಬ ಕಾರಣಕ್ಕೆ ಎದೆಯ ಭಾಗದ ಮೇಲೆ ಮಣ್ಣು ಮುಚ್ಚಿದ ನಂತರ ಮುಳ್ಳು ಹಾಕುವ ಇಲ್ಲವೇ ಬಂಡೆಕಲ್ಲು ಎಳೆಯುವ ಪದ್ಧತಿಯು ಇದೆ.

ಜಾತಿ ಸೂಚಕ ಬಯ್ಗಳು

ಸಮಾಜದ ತಳಪದರದವರ ಜಾತಿ ಸೂಚಕ ಪದಗಳನ್ನು ಹಾಗೂ ಆಹಾರ ಪಾನೀಯ ಪದ್ಧತಿಗಳನ್ನು ಬಳಸಿ ಬಯ್ಯುವದುಂಟು. ಉದಾ: ಚಂಡಾಳ, ದನಾ ತಿನ್ನವನಾ, ಹೆಂಡ ಕುಡ್ಯಾವನಾ ಇತ್ಯಾದಿ. ಸಾಮಾನ್ಯವಾಗಿ ವರ್ಣಾಶ್ರಮ ಧರ್ಮದ ವ್ಯವಸ್ಥೆಯನ್ನನುಸರಿಸಿ ಈ ಬಯ್ಗಳು ರೂಢಿಗೆ ಬಂದಿರಬೇಕು. ಮೇಲುವರ್ಗದವರು ತನ್ನ ಜಾತಿಯ ವ್ಯಕ್ತಿಯನ್ನು ಬಯ್ಯುವಾಗ ಇಂಥ ಪದಗಳನ್ನು ಬಳಸುವದುಂಟು. ಮೇಲು ವರ್ಗದವರಲ್ಲಿ ಇವು ನಿಷಿದ್ಧವಾದುವು. ಆದರೂ ಅವರೇ ಈ ಬೈಗಳನ್ನು ಬಳಸುವುದನ್ನ ಗಮನಿಸಿದರೆ 'ಜಾತಿ ಪದ್ಧತಿಯ' ಕ್ರೂರತನ ವರ್ಣಾಶ್ರಮದಲ್ಲಿ ಬೇರೂರಿದ್ದ ಅಂಶಗಳು ಗೋಚರವಾಗುತ್ತವೆ.

ವಂಶ ಪ್ರಜ್ಞೆ ಕುರಿತ ಬೈಗಳು

ಸಾಮಾನ್ಯವಾಗಿ ಎದುರಾಳಿಯು 'ಹಾದರಗಿತ್ತಿ ಮಗನೆ', 'ಕಳ್ಳ ಸೂಳೆ ಮಗನೆ', 'ಕಳ್ ನನ್ನ ಮಗನೆ' ಎಂದಾಗ ಅದಕ್ಕೆ ಪ್ರತಿಕ್ರಿಯೆಯಾಗಿ ಆತನ ಬೈಗಳು ತಿರುಗುಬಾಣವಾದಂತಾಗಿ 'ನನಗೇನಾದ್ರು ಅನ್ನು' ಆದ್ರೆ ನಮ್ಮಪ್ಪ, ನಮ್ಮಮ್ಮನ ಸುದ್ದಿಗೆ ಬಂದ್ರೆ ಸುಮ್ಮ ಇರುದಿಲ್ಲ ನೋಡು ಎಂದು ರೇಗಾಡುವದುಂಟು.

ಎಲ್ಲರಿಗೂ ತಂದೆ ತಾಯಿಯರು ಅತ್ಯಂತ ಶ್ರೇಷ್ಠರು. ದೇವರ ಸಮಾನವೆಂಬ ಭಾವನೆಯಿರುತ್ತದೆ. ಇದು ನಮ್ಮ ಸಂಸ್ಕೃತಿ ನಮಗೆಲ್ಲಾ ಕಲಿಸಿಕೊಟ್ಟದ್ದು. ಅಂಥ ಗೌರವ ಭಾವನೆಯನ್ನು ಅಂಥ ವಂಶಪ್ರಜ್ಞೆಯನ್ನು ಬೇರಿಡಿದು ಅಲುಗಾಡಿಸ ಹೊರಟಾಗ ಅಂಥವರ ಬಗ್ಗೆ ಎಲ್ಲಿಲ್ಲದ ಸಿಟ್ಟು ಬರುತ್ತದೆ. ಇಲ್ಲಿ ಜನ್ಮದ ಅಸ್ತಿತ್ವವನ್ನು ಪ್ರಶ್ನಿಸುವ ಸಂದರ್ಭ ಬರುತ್ತದೆ. ಅಧಿಕೃತವಾಗಿ ತಂದೆಯ ಅಸ್ತಿತ್ವವಿಲ್ಲವೆಂಬುದನ್ನು ಅಂಥವರನ್ನು ಸಮಾಜ ನಿಂದನೆಯ ದೃಷ್ಟಿಯಿಂದ ನೋಡುವುದನ್ನು ಗೂಡಾರ್ಥದಲ್ಲಿ ಹೇಳಲಾಗಿದೆ.

ಅನ್ಯಭಾಷಾ ಬೈಗಳು

ಭಾಷೆ ಬೆಳೆಯುವಲ್ಲಿ ಭಾಷಾ ಸ್ವೀಕರಣ ಹೇಗೆ ನೆರವಾಗುತ್ತದೋ ಹಾಗೆಯೇ ಬಯ್ಗಳಗಳ ಕೋಶದಲ್ಲಿ ಅನ್ಯಭಾಷೆಯ ಬಯ್ಗಳು ಸರ್ವೆ ಸಾಮಾನ್ಯ. ಅವು ಈ ರೀತಿಯಾಗಿವೆ.

೧. ಬೆಹನ್ ಚೋದ-ಸೋದರಿಯನ್ನು ಸಂಭೊಗಿಸುವವನು
೨. ಬೇಕೂಪ
೩. ಲೋಪರ
೪. ಚಾರ ಸೌ ಬೀಸ
೫. ಬದ್ಮಾಷ
೬. ಮಾದರ ಚೋದ
೭. ಸ್ಕೌಂಡ್ರಲ್
೮. ಹರಾಮಖೋರ
೯. ನಾಲಾಯಕ್ಕ
೧೦. ಸ್ಟುಪಿಡ
೧೧. ಇಡಿಯಟ ಮುಂತಾದವು ಇವೆಲ್ಲ ಶಾಬ್ದಿಕ ಬಯ್ಗುಳಾಗುತ್ತವೆ.

ಕ್ರಿಯಾತ್ಮಕ ಬಯ್ಗಳು

ಪರಸ್ಪರರು ಜಗಳವಾಡುತ್ತಿರುವ ಸಂದರ್ಭದಲ್ಲಿ ಎದುರಾಳಿಯ ಮನೆಯ ಮುಂದೆ ನಿಂತು ಬೊಗಸೆಯಲ್ಲಿ ಮಣ್ಣು ತುಂಬಿಕೊಂಡು ತೂರುವುದು (ನಿನ್ನ ಮನೆ ಹಾಳಾಗಲಿ ಎಂದು ಇದರರ್ಥ). ಹಾಗೆಯೇ ಸಂಭೋಗ ಕ್ರಿಯೆಯನ್ನು ಕೈಗಳಲ್ಲಿ ಅನುಕರಿಸಿ ತೋರಿಸುವುದು. ಅಲ್ಲದೇ ಕಾಲು ತೋರಿಸುವುದು, ಕೈಯಲ್ಲಿ ಚಿಟಿಕೆ ಮುರಿಯುವದು, ಕೂದಲನ್ನ ಮರ್ಮಾಂಗದಿಂದ ಕಿತ್ತಂತೆ, ಗಾಳಿಗೆ ತೂರುವಂತೆ ಅಭಿನಯಿಸಿ ತೋರಿಸುವುದು. ಇಲ್ಲಿ ಮಾತು ಇಲ್ಲವಾದರೂ ಕೆಲವೊಮ್ಮೆ ಇವು ಕೂಡ ಪರಿಣಾಮಕಾರಿಯಾಗಿ ಬೈಗುಳದ ಕಾರ್ಯ ನಿರ್ವಹಿಸುತ್ತವೆ.

ಒಟ್ಟಾರೆ ಬಯ್ಗಳು ಇಂದು ಕೇವಲ ಗ್ರಾಮೀಣ ಪ್ರದೇಶದ ಜನರಲ್ಲಿ ಮಾತ್ರ ಬಳಕೆಯಾಗುವದಿಲ್ಲ, ನಗರಗಳಲ್ಲೂ ಇದರ ಧ್ವನಿ ಕೇಳಿ ಬರುತ್ತದೆ. ಮನುಷ್ಯನ ಮಾನಸಿಕ ಉದ್ವಿಗ್ನತೆ, ಕೋಪ, ಅಸಹಾಯಕತೆ, ಕೀಳರಿಮೆ, ಮೇಲರಿಮೆ, ಶಾಬ್ದಿಕ ದಬ್ಬಾಳಿಕೆಯೇ ಮುಂತಾದವು ಬಯ್ಗುಳನ್ನು ಕೊಡಲು ಕಾರಣವಾಗುತ್ತವೆ. ಮನುಕುಲದ ಜೊತೆಗೆ ಬಯ್ಗಳು ಮುಂದೆಯೂ ಉಳಿಯುವವು.

ಅಡಿ ಟಿಪ್ಪಣಿಗಳು

೧. ಭಾಷಾ ವಿಜ್ಞಾನ ಪರಿಚಯ ಡಾ॥ ಕೆ. ಕೆಂಪೆಗೌಡ ಪುಟ-೧
೨. ಅದೇ ಪುಟ – ೮
೩. ಅಥಣಿ ತಾಲೂಕು ಸಮಗ್ರ ದರ್ಶನ ಪ್ರಸಂ. ಡಾ॥ ವ್ಹಿ.ಎಸ್. ಮಾಳಿ, ವಿಮೋಚನಾ ಪ್ರಕಾಶನ, ಅಥಣಿ ಪುಟ-೯೫
೪. ಕನ್ನಡ ಸಾಹಿತ್ಯ ಸಂಸ್ಕೃತಿ ಮೀಮಾಂಸೆ ಸಂಪಾದಕರು ಡಾ॥ ಸಿ.ಬಿ. ಹೊನ್ನಯ್ಯ, ಜೈ ಭೀಮ ಪ್ರಕಾಶನ ನಾಗದೇವನಹಳ್ಳಿ ಬೆಂಗಳೂರು ಪುಟ-೩೬೨
೫. ಎಂ. ಚಿದಾನಂದ ಮೂರ್ತಿ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ-೨೩೪,೧೯೭೦
೬. ಗುರವ ಆರ್.ಎನ್. "ಕರ್ನಾಟಕ ಭಾರತಿ" ಸಂಖ್ಯೆ ೨ ಸಂ.೩ ೧೯೭೦(ಉಮ್ರಾಣಿ ಶಾಸನ)
೭. ಅದೇ
೮. ಬಾಳಾಸಾಹೇಬ ಲೋಕಾಪುರ, ಕನ್ನಡದ ಕೆಲವು ಜೈನ ಶಾಸನ ಕವಿಗಳು ೨೦೦೪
೯. ಕ.ಇ.ನಂ.೨ ಶಾ.ಸಂ.೨೪ ರಾಮತೀರ್ಥ ತಾ॥ ಅಥಣಿ, ೧೧೬೬
೧೦. ಕಲಬುರ್ಗಿ ಎಂ.ಎಂ. ಮಹಾರಾಷ್ಟ್ರದ ಕನ್ನಡ ಶಾಸನಗಳು ಪುಟ-೫೫, ೧೯೮೩
೧೧. ಡಾ॥ ಬಿ.ಆರ್.ರಾಠೋಡರ "ಕಣಂಬಡೆ ಮುನ್ನೂರು ಒಂದು ಅಧ್ಯಯನ" ಪಿ.ಹೆಚ್.ಡಿ. ಪ್ರಬಂಧ ಪುಟ-೧೨೮
೧೨. ಅದೇ ಪುಟ-೧೩೦
೧೩. ಅದೇ
೧೪. ಅದೇ ಪುಟ-೧೩೧
೧೫. ಅದೇ ಪುಟ-೧೩೧
೧೬. ಜಯರಾಮ ವಿ. ಪ್ರಾಚೀನ ಕನ್ನಡ ಶಾಸನಗಳ ಸಾಹಿತ್ಯ ಅಧ್ಯಯನ ಪುಟ-೬೬, ೨೦೦೮
೧೭. ಡಾ॥ ಬಿ.ಆರ್. ರಾಠೋಡ "ಕಂಬಂಡೆ ಮುನ್ನೂರು ಒಂದು ಅಧ್ಯಯನ" ಪಿ.ಹೆಚ್.ಡಿ. ಪ್ರಬಂಧ ಪುಟ-೧೩೨
೧೮. ಅದೇ
೧೯. ಕನ್ನಡ ಸಾಹಿತ್ಯ ಸಂಸ್ಕೃತಿ ಮೀಮಾಂಸೆ ಸಂಪಾದಕ ಡಾ॥ ಸಿ.ಬಿ. ಹೊನ್ನಯ್ಯ ಪುಟ-೩೨೬
೨೦. ಕನ್ನಡ ಸಾಹಿತ್ಯ ಕೋಶ ಸಂಪಾದಕ ರಾಜಪ್ಪ ದಳವಾಯಿ ಪುಟ-೪೮೦

೨೧. ಅದೇ ಪುಟ

೨೨. ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ ಡಾ॥ ಚಿ.ಸಿ. ನಿಂಗಣ್ಣ, ಸಿದ್ಧಲಿಂಗೇಶ್ವರ ಪ್ರಕಾಶನ ಪುಟ-೩೯೩

೨೩. ಅದೇ ಪುಟ

೨೪. ಕನ್ನಡ ಸಾಹಿತ್ಯ ಸಂಸ್ಕೃತಿ ಮೀಮಾಸೆ ಸಂಪಾದಕ ಡಾ॥ ಸಿ.ಬಿ. ಹೊನ್ನಯ್ಯ ಪುಟ-೩೩೬

೨೫. ಅದೇ ಪುಟ-೩೮೧

೨೬. ಶ್ರೀ ಸಿದರಾಯಪ್ಪ ಸಿ. ದೊಡ್ಡನಿಂಗಪ್ಪಗೋಳ ವಯಸ್ಸು-೮೩ ಜಾತಿ-ಹಿಂದೂ ಲಿಂಗಾಯತ ಕೊಟ್ಟಲಗಿ ಗ್ರಾಮ

೨೭. ಶ್ರೀಮತಿ ಕಲಾವತಿ ಧರೆಪ್ಪ ಮಾಳಿ ವಯಸ್ಸು-೫೦ ಉದ್ಯೋಗ-ಮನೆಗೆಲಸ ಜಾತಿ-ಹಿಂದೂ ಮಾಳಿ ಸಾ॥ ಕೊಟ್ಟಲಗಿ

೨೮. ಶ್ರೀಮತಿ ದಾನವ್ವ ಮ. ಮಂಗಿ ವಯಸ್ಸು-೬೦ ಜಾತಿ-ಹಿಂದೂ ಲಿಂಗಾಯತ ಸಾ॥ ಕೊಟ್ಟಲಗಿ

೨೯. ಅದೇ

೩೦. ಅದೇ

೩೧. ಶ್ರೀ ಶಿವಲಿಂಗಪ್ಪ ಗಿರೆಪ್ಪ ಹದನೂರ ವಯಸ್ಸು-೫೫ ಸಾ॥ ಕೊಟ್ಟಲಗಿ

೩೨. ಶ್ರೀಮತಿ ಯಶೋಧಾ ಸಿದರಾಯಪ್ಪ ದೊಡ್ಡನಿಂಗಪ್ಪಗೋಳ ಸಾ॥ ಕೊಟ್ಟಲಗಿ ವಯಸ್ಸು ೭೫ ಜಾತಿ-ಹಿಂದೂ ಲಿಂಗಾಯತ

೩೩. ಅದೇ

೩೪. ಶ್ರೀಮತಿ ದಾನವ್ವ ಮಲ್ಲಯ್ಯ ಮಂಗಿ ವಯಸ್ಸು-೬೦ ಜಾತಿ-ಹಿಂದೂ ಲಿಂಗಾಯತ ಸಾ॥ ಕೊಟ್ಟಲಗಿ ಉದ್ಯೋಗ-ಮನೆಗೆಲಸ

೩೫. ಅದೇ

೩೬. ಶ್ರೀದೇವಿ ನಾರಾಯಣ ಜತ್ತಿ ವಯಸ್ಸು-೧೮ ಜಾತಿ ಲಿಂಗಾಯತ ಸಾ॥ ಕೊಟ್ಟಲಗಿ ಉದ್ಯೋಗ-ವಿದ್ಯಾರ್ಥಿನಿ

೩೭. ಶ್ರೀಮತಿ ದಾನವ್ವ ಮಂಗಿ ವಯಸ್ಸು-೬೦ ಜಾತಿ-ಲಿಂಗಾಯತ ಉದ್ಯೋಗ-ಮನೆಗೆಲಸ ಸಾ॥ ಕೊಟ್ಟಲಗಿ

೩೮. ಶ್ರೀಮತಿ ಯಶೋಧಾ ಸಿ. ದೊಡ್ಡನಿಂಗಪ್ಪಗೋಳ ವಯಸ್ಸು-೭೫ ಸಾ॥ ಕೊಟ್ಟಲಗಿ ವಯಸ್ಸು-೭೫ ಜಾತಿ-ಹಿಂದೂ ಲಿಂಗಾಯತ ಉದ್ಯೋಗ-ಮನೆಗೆಲಸ

೩೯. ಶ್ರೀ ಸಂಗಯ್ಯ ಮ. ಮಂಗಿ ವಯಸ್ಸು-೩೬ ಜಾತಿ-ಲಿಂಗಾಯತ ಸಾ॥ ಕೊಟ್ಟಲಗಿ ಉದ್ಯೋಗ-ಮನೆಗೆಲಸ

೪೦. ಶ್ರೀಮತಿ ಯಶೋಧಾ ಸಿ. ದೊಡ್ಡನಿಂಗಪ್ಪಗೋಳ ವಯಸ್ಸು-೭೫ ಸಾ॥ ಕೊಟ್ಟಲಗಿ ವಯಸ್ಸು-೭೫ ಜಾತಿ-ಹಿಂದೂ ಲಿಂಗಾಯತ ಉದ್ಯೋಗ-ಮನೆಗೆಲಸ

೪೧. ಶ್ರೀಮತಿ ದಾನವ್ವ ಮಂಗಿ ವಯಸ್ಸು-೬೦ ಜಾತಿ-ಲಿಂಗಾಯತ ಉದ್ಯೋಗ-ಮನೆಗೆಲಸ ಸಾ॥ ಕೊಟ್ಟಲಗಿ

೪೨. ಶ್ರೀಮತಿ ಕಲಾವತಿ ಧರೆಪ್ಪ ಮಾಳಿ ವಯಸ್ಸು-೫೦ ಉದ್ಯೋಗ-ಮನೆಗೆಲಸ ಜಾತಿ-ಹಿಂದೂ ಮಾಳಿ ಸಾ॥ ಕೊಟ್ಬಲಗಿ

೪೩. ಅದೇ

೪೪. ಜಾನಪದ ಕೈಪಿಡಿ ಪ್ರಸಂ. ಡಾ॥ ಎಚ್.ಜೆ. ಲಕ್ಕಪ್ಪಗೌಡ ಪುಟ – ೧೩೫

೪೫. ಕನ್ನಡ ಸಾಹಿತ್ಯ ಸಂಸ್ಕೃತಿ ಮಿಮಾಂಸೆ ಸಂಪಾದಕ ಡಾ॥ ಸಿ.ಬಿ. ಹೊನ್ನಯ್ಯ ಪುಟ-೩೭೨

೪೬. ಜಾನಪದ ಕೈಪಿಡಿ ಪ್ರಧಾನ ಸಂಪಾದಕ ಡಾ॥ ಎಚ್.ಜೆ. ಲಕ್ಕಪ್ಪಗೌಡ ಪುಟ-೧೩೭

೪೭. ಕನ್ನಡ ಸಾಹಿತ್ಯ ಸಂಸ್ಕೃತಿ ವಿಮಾಂಸೆ ಸಂಪಾದಕ ಡಾ॥ ಸಿ.ಬಿ. ಹೊನ್ನಯ್ಯ ಪುಟ-೩೯೭

೪೮. ಶ್ರೀಮತಿ ಯಶೋಧಾ ಸಿ. ದೊಡ್ಡನಿಂಗಪ್ಪಗೋಳ ವಯಸ್ಸು ೭೫ ಜಾತಿ ಲಿಂಗಾಯತ ಉದ್ಯೋಗ- ಮನೆಗೆಲಸ ಊರು-ಕೊಟ್ಬಲಗಿ)

೪೯. ಜನಪದ ಕೈಪಿಡಿ ಪ್ರಧಾನ ಸಂಪಾದಕ ಡಾ॥ ಎಚ್.ಜೆ. ಲಕ್ಕಪ್ಪಗೌಡ ಪುಟ-೬೫

೫೦. ಕನ್ನಡ ಸಾಹಿತ್ಯ ಸಂಸ್ಕೃತಿ ಮಿಮಾಂಸೆ ಸಂಪಾದಕರು ಡಾ॥ ಸಿ.ಬಿ. ಹೊನ್ನಯ್ಯ ಪುಟ-೩೯೫

೫೧. ಜಾನಪದ ಕೈಪಿಡಿ ಪ್ರಸಂಪಾದಕ ಡಾ॥ಎಚ್.ಜೆ. ಲಕ್ಕಪ್ಪಗೌಡ ಪುಟ-೩೮

೫೨. ಜಾನಪದ ಕೈಪಿಡಿ ಪ್ರಧಾನ ಸಂಪಾದಕ ಡಾ॥ ಎಚ್.ಜೆ. ಲಕ್ಕಪ್ಪಗೌಡ ಪುಟ-೪೦, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೫೩. ರಾಮನಗರ ಒಂದು ಸಾಂಸ್ಕೃತಿಕ ಅಧ್ಯಯನ ಪಿ.ಹೆಚ್.ಡಿ. ಮಹಾಪ್ರಬಂಧ ಸಂಪಾದಕರು ಡಾ॥ ಎ.ಸಿ. ಪಾರ್ಥ ಪುಟ-೨೫೯

ಅಧ್ಯಾಯ ೯

ಸಮಾರೋಪ

೯.೧. ಒಟ್ಟುನೋಟ
೯.೨. ಅಧ್ಯಯನದ ಫಲಿತಗಳು
೯.೩. ಮುಂದಿನ ಅಧ್ಯಯನದ ಸಾಧ್ಯತೆಗಳು
೯.೪. ಅನುಬಂಧ
೯.೫. ಚಿತ್ರ ಸಂಪುಟ

ಅಧ್ಯಾಯ ೯

ಸಮಾರೋಪ

ಒಟ್ಟು ನೋಟ

ಕೊಟ್ಟಲಗಿ ಗ್ರಾಮದ ವ್ಯಾಪ್ತಿಯಲ್ಲಿನ ಸಂಸ್ಕೃತಿಯನ್ನು ಕುರಿತು ವಿವೇಚಿಸುವ ಪ್ರಯತ್ನ ಮಾಡಲಾಗಿದೆ. ಭೌಗೋಳಿಕವಾಗಿ ಕೊಟ್ಟಲಗಿ ಪ್ರದೇಶದ ವೈಶಿಷ್ಟ್ಯತೆ ಮತ್ತು ಓರೆ ಕೋರೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಭೌಗೋಳಿಕ ಪರಿಸರವು ಅಲ್ಲಿನ ಸಂಸ್ಕೃತಿಯನ್ನು ರೂಪಿಸುವಲ್ಲಿ ವಹಿಸಿರುವ ಪಾತ್ರವನ್ನು ಕೊಟ್ಟಲಗಿ ಗ್ರಾಮಕ್ಕೆ ಸಂಬಂಧಿಸಿ; ಭೌತಿಕವಾಗಿ ವಿವರಿಸಲಾಗಿದೆ. ಕೊಟ್ಟಲಗಿ ಗ್ರಾಮದ ಪ್ರಾಚೀನ ಪರಂಪರೆಯನ್ನು ಗ್ರಹಿಸುವದಕ್ಕಾಗಿ ಐತಿಹಾಸಿಕವಾಗಿ, ಲಭ್ಯವಿದ್ದ ಶಾಸನಗಳು, ವೀರಗಲ್ಲುಗಳು, ದಾನ ಶಾಸನಗಳು ವಿವರಗಳೊಂದಿಗೆ ಪ್ರಾದೇಶಿಕವಾಗಿ ಅವುಗಳ ಲಕ್ಷಣಗಳನ್ನು ಗಮನಿಸಿ ಸಾಂಸ್ಕೃತಿಕ ವಿವರಗಳನ್ನು ವಿಷದಪಡಿಸಲಾಗಿದೆ. ಬೃಹತ್ ಚರಿತ್ರೆ ಇರುವ ಕರ್ನಾಟಕ ಸಂಸ್ಕೃತಿಯ ಹಿರಿಮೆಯನ್ನು ಹೊತ್ತು ನಿಂತ ಹಲವು ಪ್ರಮುಖ ಆಡಳಿತ ವಿಭಾಗಗಳಲ್ಲಿ ಮೂನ್ನೂರು ಹಳ್ಳಿಗಳನ್ನು ಒಳಗೊಂಡ 'ಕಣಂಬಡೆ ನಾಡು' ಒಂದಾಗಿದೆ. ಮಹಾರಾಷ್ಟ್ರದ (ಅಂದಿನ ಮುಂಬೈ -ಕರ್ನಾಟಕ) ಜತ್ತ ತಾಲೂಕಿನ ದಕ್ಷಿಣ ಭಾಗ, ಮೀರಜ ತಾಲೂಕಿನ ಅತೀ ಪೂರ್ವ ಭಾಗ, ಕರ್ನಾಟಕದ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಪಶ್ಚಿಮ ಭಾಗ ಬಿಟ್ಟು ಉಳಿದ ಭಾಗ, ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನ ಕೃಷ್ಣಾ ನದಿಯ ಉತ್ತರ ಮತ್ತು ಪೂರ್ವ ಭಾಗ, ಬಿಜಾಪೂರ ತಾಲೂಕಿನ ಪಶ್ಚಿಮ ಭಾಗ ಮತ್ತು ಇಂಡಿ ತಾಲೂಕಿನ ಅತೀ ಪಶ್ಚಿಮ ಭಾಗಗಳನ್ನು ಒಳಗೊಂಡಿರುವದು; ಶಾಸನಗಳ ಅಧ್ಯಯನದಿಂದ ತಿಳಿದು ಬರುತ್ತದೆ. ಹೀಗೆ ಕಣಂಬಡೆ ನಾಡು ಒಳಗೊಂಡ ಹಲವಾರು ಗ್ರಾಮಗಳಲ್ಲಿ ಕೊಟ್ಟಲಗಿ ಗ್ರಾಮವು ಕೂಡಾ ಒಂದಾಗಿದೆ. ಹೀಗಾಗಿ ಕಣಂಬಡೆ ನಾಡಿನ ಸಮಕಾಲಿನ ಗ್ರಾಮಗಳಾದ ರಾಮತೀರ್ಥ, ಉಂಬರವಾಣಿ ಶಾಸನಗಳಲ್ಲಿ ಕೊಟ್ಟಲಗಿ ಗ್ರಾಮವು ಉಲ್ಲೇಖಗೊಂಡಿದ್ದು ಗಮನಾರ್ಹ ಸಂಗತಿಯಾಗಿದೆ. ಕೊಟ್ಟಲಗಿ ಗ್ರಾಮವನ್ನು ಕಲ್ಯಾಣಿ ಚಾಲುಕ್ಯ ಎರಡನೇಯ ಜಯಸಿಂಹನ ಕಾಲಕ್ಕೆ ನಾಗಲಾವಿಸತ್ರಕ್ಕೆ ಅಂದರೆ ವಿದ್ಯಾಕೇಂದ್ರಕ್ಕೆ ದಾನವಾಗಿ ನೀಡಿದ್ದನ್ನು ಗ್ರಾಮದ ಏಕೈಕ ಶಾಸನವಾದ ಕ್ರಿಶ ೧೦೨೨ ರ ಶಾಸನ ತಿಳಿಸುತ್ತದೆ. ಅದರಂತೆ ಕ್ರಿಶ ೧೧೬೭ ರ ರಾಮತೀರ್ಥ ಶಾಸನವು ಭುಜಬಲ ಚಕ್ರವರ್ತಿಯ ಆದೇಶದ ಮೇರೆಗೆ ರಾಮತೀರ್ಥದ ಸ್ವಯಂಭೂ ರಾಮೇಶ್ವರ ದೇವಾಲಯಕ್ಕೆ ಹಿರಿಯ ಕೋಲ ಎಂಟು

ಮತ್ತರು ಕೆಯ್ಯ ಮತ್ತು ಅಂಗಡಿ ಮನೆಯನ್ನು ದಾನವಾಗಿ ನೀಡಿದ ಸಂಗತಿಯನ್ನು ತಿಳಿಸುತ್ತದೆ. ಇದೇ ಶಾಸನವು ಕೊಟ್ಟಲಗಿ ಅಗ್ರಹಾರವಾಗಿದ್ದ ವಿಷಯವನ್ನು ತಿಳಿಸುತ್ತದೆ. ಉಮರಾಣಿ ಶಾಸನವು ಕ್ರಿ.ಶ.೧೧೬೭ರ ಕಾಲದ ಮಹಾಮಂಡಳೇಶ್ವರನಾದ ಹೆಮ್ಮಾಡಿ ಅರಸನು ದಂಡನಾಯಕನಾದ ಮಧುವಣಯ್ಯ ಪ್ರಮುಖರು. ಹೆಮೇಶ್ವರ, ಚಂದಲೇಶ್ವರ ದೇವಾಲಯದ ಜೀರ್ಣೋದ್ಧಾರಕ್ಕೆ ಭೂಮಿಯನ್ನು ದಾನವಾಗಿ ಬಿಡುವ ಸಮಯದಲ್ಲಿ ಪೂರ್ವಕ್ಕೆ ಕೊಟ್ಟಲಗಿ ಗ್ರಾಮವಿತ್ತೆಂದು ಸೀಮೆಯ ವಿವರವನ್ನು ತಿಳಿಸಲಾಗಿದೆ. ಅಲ್ಲದೆ ಗ್ರಾಮದ ಕರಿಯ ಕಾಳಿದಾಸ, ಭಟ್ಟೋಪಾಧ್ಯಾಯರನ್ನು ಉಲ್ಲೇಖಿಸುತ್ತಿದೆ. ಇದರಿಂದ ಉಂಬರವಾಣಿಯ ನೆರೆಯ ಗ್ರಾಮವೇ ಕೊಟ್ಟಲಗಿ ಆಗಿತ್ತೆಂದು ಹಾಗೂ ವಿದ್ವಜ್ಜನರನ್ನು ಒಳಗೊಂಡಿತ್ತೆಂದು ಅರಿತುಕೊಳ್ಳಲು ಸಹಾಯಕ ವಾಗಿದೆ. ಕೊಟ್ಟಲಗಿ ಗ್ರಾಮದ ಪ್ರಾಚೀನತೆಯನ್ನು ಶಾಸನಾಧಾರದಿಂದ ಸ್ಪಷ್ಟೀಕರಿಸಲಾಗಿದೆ. ಚಾರಿತ್ರಿಕವಾಗಿ ನಿರ್ಮಾಣಗೊಂಡಿರುವ ಕಲ್ಯಾಣ ಚಾಲುಕ್ಯ ಮಾದರಿಯ ದೇವಾಯಲಗಳು ಮತ್ತು ಸ್ಮಾರಕಗಳು ಬದಲಾದ ಸನ್ನಿವೇಶದಲ್ಲಿ ಅವುಗಳ ಸ್ಥಿತಿಗತಿಗಳು ಹಾಗೂ ಶಿಲ್ಪ ಕಲೆಗಳ ಮಹತ್ವವನ್ನು ವಿವರಿಸಲಾಗಿದೆ. ಪ್ರಾಗೈತಿಹಾಸಿಕ ನೆಲೆಯ ಕುರಿತು ವಿವೇಚಿಸಲಾಗಿದೆ.

ಆಧುನಿಕ ಜೀವನ ವಿಧಾನಗಳು ಪರಂಪರಾನುಗತವಾದ ಬದುಕಿನ ಶೈಲಿಯನ್ನು ವಿಘಟಿಸುವುದ ರಿಂದಾಗುವ ಅನೇಕ ವೈರುಧ್ಯಗಳ ನಡುವೆಯೂ ಸೌಹಾರ್ದಯುತವಾದ ಸಹಬಾಳ್ವೆಗೆ ತುಡಿಯುವ ಜೀವನೋತ್ಸಾಹ ಕುಗ್ಗಿಲ್ಲದಿರುವುದು ಇಲ್ಲಿನ ಸಂಸ್ಕೃತಿಯಿಂದ ತಿಳಿಯುತ್ತದೆ. ವರ್ಗ ಮತ್ತು ವರ್ಣ ಶ್ರೇಣೀಕರಣ ವ್ಯವಸ್ಥೆಯಲ್ಲಿ ಉಳ್ಳವರ ಮತ್ತು ವೈದಿಕ ವರ್ಣ ವಿಧಾನಗಳನ್ನು ಅನುಸರಿಸಿ ಸಾಮಾಜಿಕ ಶ್ರೇಷ್ಠತೆಗೆ ಹಾತೊರೆಯುವ ಸ್ಥಿತಿ ಅನೇಕ ಶೂದ್ರ ಮತ್ತು ಕೆಳಜಾತಿ ಸಮುದಾಯಗಳಲ್ಲಿವೆ. ಇದೇ ಕಾರಣಕ್ಕಾಗಿ ಅವರ ಆಚರಣಾ ವಿಧಿಗಳಲ್ಲಿ ಬದಲಾವಣೆಯ ಪ್ರಕ್ರಿಯೆಗಳಾಗಿದ್ದು ಅಂತಿಮವಾಗಿ ಸಾಮಾಜಿಕ ಸ್ಥಾನ ಮಾನಗಳನ್ನು ಗಳಿಸುವ ಉದ್ದೇಶವನ್ನು ಹೊಂದಲಾಗಿದ್ದರೂ; ಒಟ್ಟು ಜಾತಿ ಸಮಾಜದ ರಚನೆ ಬದಲಾಗಲಿಲ್ಲ. ಅವರ ಆಚರಣಾ ಸಂಸ್ಕೃತಿಯಲ್ಲಿ ಇದ್ದ ಮೂಲದಲ್ಲಿನ ಸಹಜತೆಗಳು ಕಣ್ಮರೆಯಾಗಿ ಕೃತಕವಾಗಿ ಪರಿಣಮಿಸಿ ಸತ್ವಹೀನಗೊಂಡಿವೆ. ಮೇಲ್ನೋಟಕ್ಕೆ ಬದಲಾದಂತೆ ಕಾಣುವ ಸಮಾಜದಲ್ಲಿ ಅಂತರಂಗದಲ್ಲಿಯೇ ಅಸ್ಪೃಶ್ಯತೆ, ಜಾತೀಯತೆ, ಶೋಷಕ ಪ್ರವೃತ್ತಿ ಮುಂತಾದ ಕ್ರೂರ ಸಂಗತಿಗಳು ಅಡಗಿದ್ದು, ಆಧುನಿಕತೆಯ ತಂತ್ರಗಳು ಜನಸಾಮಾನ್ಯರ ಶೋಷಣೆಯನ್ನು ಪೋಷಿಸುವ ಅಸ್ತ್ರಗಳಾಗಿ ಪರಿಣಮಿಸಿರುವುದು ಇಲ್ಲಿನ ರಾಜಕೀಯ, ಸಾಮಾಜಿಕ, ಧಾರ್ಮಿಕ ಪ್ರವೃತ್ತಿಗಳಿಂದ ಎದ್ದು ಕಾಣುತ್ತವೆ. ಈ ದೃಷ್ಟಿಯಿಂದ ಸಂಸ್ಕೃತಿ ವಿಮೋಚನೆಯೆಂಬುದು ಬದುಕಿನ ನೆಲೆಯಲ್ಲಿಯೇ ಪ್ರಾಧಾನ್ಯತೆಯನ್ನು ಪಡೆಯಬೇಕಾದ ಅವಶ್ಯಕತೆ ಇದೆ. ಭೌತಿಕವಾದ ಪರಿವರ್ತನೆಗಳು ಹೊರನೋಟಕ್ಕೆ ತೋರಿಬಂದರೂ ಜನಜೀವನದಲ್ಲಿ ಗುಣಾತ್ಮಕವಾದ ಬದಲಾವಣೆಗಳಿಗೆ ಅವಕಾಶವಿಲ್ಲದಂತಾಗಿದೆ. ನಗರ-ಹಳ್ಳಿ, ಅಕ್ಷರಸ್ಥ-ಅನಕ್ಷರಸ್ಥ, ಬುದ್ಧಿ-ಶ್ರಮ ಇವುಗಳ ನಡುವಿನ ಹೊಂದಾಣಿಕೆ ಸಾಧ್ಯವಾಗದೆ ಅಂತರಗಳು ವಿಸ್ತಾರಗೊಂಡು ಒಂದು ರೀತಿಯ ಸಾಮಾಜಿಕ ಕ್ಷೋಭೆ ಇಲ್ಲಿನ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಆಧುನೀಕರಣ, ಪಾಶ್ಚ್ಯಾತೀಕರಣ ಇವುಗಳ

ಪ್ರಕ್ರಿಯೆಯಿಂದಾಗಿ ಸಾಂಪ್ರದಾಯಕವಾದ ಸಾಮಾಜಿಕ ತಾರತಮ್ಯಗಳು ದೂರಸರಿದು ಮಾನವಿ ಸಮಾಜ ನಿರ್ಮಾಣಗೊಳ್ಳುತ್ತದೆ ಎಂದು ನಿರೀಕ್ಷಿಸಿದ್ದವರಿಗೆ ನಿರಾಶೆಯಾದಂತಾಗಿದೆ. ತಮ್ಮ ನೆಲೆಯಲ್ಲಿಯೇ ಪರಕೀಯರಾಗಿ ಪರಿಣಮಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಆರ್ಥಿಕ ಅಸಮರ್ಥತೆಯಿಂದ ಮನುಷ್ಯನನ್ನು ಕೆಳಹಂತಕ್ಕೆ ನೂಕುವ ಪ್ರವೃತ್ತಿಗಳು ಹೆಚ್ಚುತ್ತಿರುವುದರಿಂದ ಆರ್ಥಿಕವಾಗಿ ಬಡತನದಲ್ಲಿರುವ ವಿವಿಧ ಸಮುದಾಯದ ಜನ ಹತಾಶೆಯ ಮನೋಭಾವನೆಯಲ್ಲಿ ಇದ್ದಾರೆ.

ಸ್ವಾತಂತ್ರ್ಯ ಚಳುವಳಿಗಳ ಕುರಿತು ವಿವೇಚಿಸುವುದು ಒಂದು ರೀತಿಯ ರೋಮಾಂಚನವನ್ನುಂಟು ಮಾಡುವ ಸಂಗತಿಯೇ ಸರಿ. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮ, ಏಕೀಕರಣದ ಸಂದರ್ಭದಲ್ಲಿ ಜನರಲ್ಲಿದ್ದ ಮೌಲ್ಯಗಳು ಗ್ರಾಮದ ಉದ್ಧಾತ್ತ ಮೌಲ್ಯಗಳನ್ನು ಪ್ರತಿನಿಧಿಸುತ್ತವೆ. ಆಧುನಿಕ ರಾಜಕೀಯ ಸ್ಥಿತ್ಯಂತರಗಳಿಗೆ ಒಳಗಾಗಿ ಉದಾತ್ತ ಮೌಲ್ಯಗಳನ್ನು ಸಂಪೂರ್ಣವಾಗಿ ಅನುಸರಿಸಲಾಗಿದೆ ಪರದಾಡುತ್ತಿರುವದು ಒಂದೆಡೆಯಾದರೆ, ಆ ಸ್ಥಿತ್ಯಂತರಗಳನ್ನು ತಮ್ಮ ದಾಳವನ್ನಾಗಿಸಿ ಕೊಂಡು ಮೌಲ್ಯಗಳ ಹೆಸರಿನಲ್ಲಿ, ಪರಂಪರೆಯ ಹೆಸರಿನಲ್ಲಿ ಜನಸಾಮಾನ್ಯರನ್ನು ಶೋಷಿಸುತ್ತಿರುವ ಇನ್ನೊಂದು ಮುಖ ಅನಾವರಣಗೊಳ್ಳುತ್ತದೆ.

ಗ್ರಾಮದ ತುಂಬ ಕಂಡುಬರುವ ಗುಡಿ-ಗುಂಡಾರಗಳು ಗ್ರಾಮೀಣರ ದೈವ ಶ್ರದ್ಧೆಯನ್ನು ಪ್ರತಿನಿಧಿಸುತ್ತದೆ. ಕೆಲವು ದೇವರುಗಳು ನಿರ್ದಿಷ್ಟ ಜಾತಿಯವರಿಂದ ಪೂಜಿಸಲ್ಪಡಬಹುದಾದರೂ; ಅನ್ಯ ಜಾತಿಯವರು ಇಡಿಯಾಗಿ ಯಾವ ದೇವರನ್ನು ತಿರಸ್ಕರಿಸುವದಿಲ್ಲ.

ಪಾರಂಪರಿಕ ವಿಷಯದಲ್ಲಿ ರೈತ ಆದಾಯ ಕಾಣದೆ ಆಧುನಿಕ ಕೃಷಿ ಪದ್ದತಿಯನ್ನು ಅಳವಡಿಸಿಕೊಳ್ಳಲು ಸಾಧ್ಯವಿಲ್ಲದೆ ಇಕ್ಕಟ್ಟಿನ ಸ್ಥಿತಿಯಲ್ಲಿ ಬದುಕುತ್ತಿದ್ದಾನೆ. ಇಂದಿನ ರೈತ ಬದುಕಲು ಅನಿವಾರ್ಯವೆನ್ನುವ ರೀತಿ ಕೃಷಿ ಕಾರ್ಯ ನಿರ್ವಹಿಸುತ್ತಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ನಿಸರ್ಗದ ಮುನಿಸಿನಿಂದಾಗಿ ಬರಗಾಲದ ಬಾಧೆ ಅತಿಯಾಗಿ ಅಷ್ಟರಮಟ್ಟಿಗೆ ನೀರಿನ ಕೊರತೆಗೆ ಕಾರಣವಾಗಿದೆ. ಆಧುನಿಕ ಅನಿಶ್ಚಿತ ಮಾರುಕಟ್ಟೆಗಳ ಹಿನ್ನೆಲೆಯಲ್ಲಿ ನಿಗದಿತ ದರ ಪಡೆಯಲಾಗದೆ ರೈತ ಪರದಾಡುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ.

ಜನಪದ ಸಂಪ್ರದಾಯ ಒಂದು ಸಮುದಾಯದ ಸಮಷ್ಟಿ ಸೃಷ್ಟಿ. ಸಾಮಾಜಿಕ ಜೀವನ ಸಂಕೇತ. ದೇಶದ ಸಂಸ್ಕೃತಿಯ ತಾಯಿ ಬೇರು. ಅದು ಜನಸಾಮಾನ್ಯರ ಕೃತಿಯೂ ಹೌದು. ಸ್ಮೃತಿಯೂ ಹೌದು. ಪೀಳಿಗೆಯಿಂದ ಪೀಳಿಗೆಗೆ ಹರಿದು ಬಂದುದು. ಹೀಗೆ ಹರಿದು ಬರುತ್ತಿರುವ ಮತ್ತು ಈಗ ಕಣ್ಮರೆಯಾಗುತ್ತಿರುವ ಹಂತದಲ್ಲಿರುವ ನಂಬಿಕೆ, ಆಚರಣೆ, ರೂಢಿ, ಸಂಪ್ರದಾಯಕ್ಕೆ ಸಂಬಂಧಿಸಿದ ಅನೇಕ ಅಂಶಗಳನ್ನು ಇಲ್ಲಿ ಪರಿಚಯಿಸಲಾಗಿದೆ. ವಿವಿಧ ಸಮುದಾಯಗಳು ಅಲ್ಪಸಂಖ್ಯಾತರಾಗಿರುವದರಿಂದ ಬಹುಸಂಖ್ಯಾತ ಸಮುದಾಯದ ಆಚರಣೆಗಳ ಪ್ರಭಾವಕ್ಕೆ ಒಳಗಾದದ್ದು ಕಂಡು ಬರುತ್ತದೆ. ಅವುಗಳನ್ನು ಅಧ್ಯಯನದಲ್ಲಿ ನಿರೂಪಿಸಲಾಗಿದೆ.

ಮನುಕುಲದ ಸಂಸ್ಕೃತಿಯು ಮೌಲ್ಯಾಧಾರಿತವಾದದ್ದು. ಭಾಷೆ, ಶಿಷ್ಟಸಾಹಿತ್ಯ, ಜನಪದ ಸಾಹಿತ್ಯ, ಜನಪದ ಗೀತೆ, ಕಥೆ, ಗಾದೆ, ಒಡಪು, ಒಗಟು, ಬೈಗುಳ ವಿವಿಧ ರೂಪದಲ್ಲಿರುವ

ಜನಪದರ ಸಾಹಿತ್ಯ ಸೃಷ್ಟಿಯನ್ನು ಗಮನಿಸಲಾಗಿದೆ. ಶಾಸನಗಳ ಭಾಷೆ, ಛಂದಸ್ಸು, ಸ್ಥಳೀಯ ಭಾಷಾ ವೈಶಿಷ್ಟ್ಯವನ್ನು ಗಮನಿಸಲಾಗಿದೆ.

ಪ್ರಮುಖವಾಗಿ ಒಂಬತ್ತು ಅಧ್ಯಾಯಗಳ ಹರವುವುಳ್ಳ ಈ ಮಹಾ ಪ್ರಬಂಧವು ಒಂದೊಂದು ಅಧ್ಯಾಯದಲ್ಲೂ ಅದರ ವ್ಯಾಪ್ತಿಗೆ ಸಂಬಂಧಿಸಿದ ವಿಷಯದ ಪದರುಗಳು ಉಪ ವಿಂಗಡಣೆಗಳಾಗಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಅಧ್ಯಯನದ ಗುರಿ ಉದ್ದೇಶಗಳು ಖಚಿತವಾಗಿವೆ.

ಯಾವುದೇ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಸಾಂಸ್ಕೃತಿಕ ಅಧ್ಯಯನ ನಡೆಸುವಾಗ ಅದರ ಆಳ ಹರವುಗಳನ್ನು ತಿಳಿದುಕೊಂಡೆ ಅಧ್ಯಯನ ನಡೆಸಬೇಕಾಗುತ್ತದೆ. ಹಾಗಾಗಿ ಈ ಅಧ್ಯಯನದಲ್ಲಿ ಒಂದು ವ್ಯಾಪ್ತಿಯನ್ನು ನಿರ್ಮಿಸಿಕೊಂಡು ಅನೂಕೂಲಕ್ಕಾಗಿ ಹಲವು ಭಾಗಗಳನ್ನಾಗಿ ವಿಂಗಡಿಸಿದ್ದೇನೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ ಎಂದಿದ್ದು ಅಧ್ಯಯನದ ಅಗತ್ಯ ಸ್ವರೂಪದೊಂದಿಗೆ ಮೂಲ ಆಕರ ಸಾಮಗ್ರಿ ಮತ್ತು ಅಧ್ಯಯನ ಕ್ರಮವನ್ನು ಸ್ಪಷ್ಟಪಡಿಸಲಾಗಿದೆ. ಇದುವರೆಗೆ ಆಗಿರುವ ಅಧ್ಯಯನಗಳನ್ನು ಗಮನಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ "ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ" ಎಂದಿದ್ದು ಇದರಲ್ಲಿ ಗ್ರಾಮದ ಭೂ ವಿವರ, ವಾಯುಗುಣ, ಅರಣ್ಯ ಸಂಪತ್ತು, ಜೀವ ಸಂಕುಲ, ಸಾರಿಗೆ ಸಂಪರ್ಕ, ಗ್ರಾಮದ ಅಂಕಿ ಅಂಶಗಳ ಕೋಷ್ಟಕ ಹಾಗೂ ಚಾರಿತ್ರಿಕ ಹಿನ್ನೆಲೆ ಕೊಟ್ಟಲಗಿ ಸ್ಥಳನಾಮ ಪದನಿಷ್ಪತ್ತಿ, ಗ್ರಾಮದ ಪ್ರಾಚೀನತೆ ಶಾಸನಗಳಲ್ಲಿ ಕೊಟ್ಟಲಗಿ ಮತ್ತು ಕೊಟ್ಟಲಗಿ ಪ್ರದೇಶವನ್ನು ಆಳಿದ ರಾಜ್ಯ ಮನೆತನಗಳು, ಕಲ್ಯಾಣಿ ಚಾಲುಕ್ಯರ ಕೊಡುಗೆಗಳು, ಕಲ್ಯಾಣ ಚಾಲುಕ್ಯರ ಕಲೆ, ವಾಸ್ತುಶಿಲ್ಪ ದೇವಾಲಯಗಳು, ಸುತ್ತಮುತ್ತಲ ಗ್ರಾಮಗಳು ಮತ್ತು ವೈಶಿಷ್ಟ್ಯ ಮುಂತಾದ ವೈಶಿಷ್ಟ್ಯಗಳನ್ನು ವಿವರಿಸಲಾಗಿದೆ.

ಚಾರಿತ್ರಿಕ ಹಿನ್ನೆಲೆಯಲ್ಲಿ ಕೊಟ್ಟಲಗಿ ಸ್ಥಳನಾಮದ ಹಿನ್ನೆಲೆಯಾಗಿ ಕೋಟೆ ವಹಿಸಿರುವ ಪಾತ್ರದ ಕುರಿತು ವಿವರಿಸಲಾಗಿದೆ ಹಾಗೂ ಗ್ರಾಮ ನಾಮಕ್ಕೆ ಸಂಬಂಧಿಸಿ ಕಾರಣವಾಗಿರುವ ಜನಪದ ನಂಬಿಕೆಯಲ್ಲಿರುವ ಎರಡು ಐತಿಹ್ಯಗಳನ್ನು ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ "ಸಾಮಾಜಿಕ ಪರಂಪರೆ" ಎಂಬುದಾಗಿ ಮಾಡಿಕೊಂಡು ಇದರಲ್ಲಿ ಗ್ರಾಮದಲ್ಲಿನ ಸಮುದಾಯಗಳು ಕುಟುಂಬ ಪದ್ಧತಿ, ಮನೆಗಳ ಮಾದರಿ, ಆಹಾರ ಪದ್ಧತಿ, ಉಡುಗೆ ತೊಡುಗೆ, ಜನಪದ ವೈದ್ಯ, ನ್ಯಾಯ ವ್ಯವಸ್ಥೆ, ಅತಿಥಿ ಸತ್ಕಾರ, ಆರ್ಥಿಕ ವ್ಯವಸ್ಥೆ, ಜನಪದ ಆಟಗಳು, ಜನಪದ ಕಲೆಗಳು ಮತ್ತು ಕಲಾವಿದರು, ಶೈಕ್ಷಣಿಕ ವ್ಯವಸ್ಥೆ ಮುಂತಾದವುಗಳನ್ನು ಗಮನಿಸಲಾಗಿದೆ. ವಿವಿಧ ಸಮುದಾಯಗಳನ್ನು ಸಾಸ್ಕೃತಿಕವಾಗಿ ಅವರ ಹಿನ್ನೆಲೆ, ಪ್ರಸ್ತುತ ಸ್ಥಿತಿಗತಿ, ಸಾಮಾಜಿಕವಾಗಿ ಅವರ ಸ್ಥಾನಮಾನಗಳನ್ನು ಗಮನಿಸಲಾಗಿದೆ. ಪ್ರಮುಖವಾಗಿ ಬಹುಸಂಖ್ಯಾತರಾದ ಲಿಂಗಾಯತ ಸಮುದಾಯ ಹಾಗೂ ಮುಸ್ಲಿಂ, ಬಣಜಿಗ, ಪಂಚಾಳ, ಕುರುಬ, ಬೇಡ, ಹೊಲೆಯ, ಮಾದಿಗ, ಕುಂಬಾರ, ರಜಪೂತ, ತಳವಾರ ಮುಂತಾದ ಸಮುದಾಯಗಳ ಉದ್ಯೋಗ ಹಾಗೂ ಅವರ ಸ್ಥಿತಿಗತಿಗಳ ವಿವರ ದಾಖಲಿಸಲಾಗಿದೆ.

ನಾಲ್ಕನೆಯ ಅಧ್ಯಾಯವು ರಾಜಕೀಯ ಪರಂಪರೆಗೆ ಮೀಸಲಾಗಿದೆ. ಇಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೊಟ್ಟಲಗಿ ಇಂಚಗೇರಿ ಮಠದ ಶ್ರೀ ಸದ್ಗುರು ಮಾಧವಾನಂದ ಪ್ರಭುಜೀಯವರು ಪ್ರಭಾವ ಹಾಗೂ ಆಧುನಿಕ ರಾಜಕೀಯ ಪರಂಪರೆಗೆ ಸಂಬಂಧಿಸಿದ ವಿಚಾರಕ್ಕೆ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಸ್ವಾತಂತ್ರ್ಯ ಸಂಗ್ರಾಮದ ಕುರಿತು ವಿಶೇಷ ಗಮನಹರಿಸಲಾಗಿದೆ.

"ಧಾರ್ಮಿಕ ಪರಂಪರೆ" ಕುರಿತು ಐದನೆಯ ಅಧ್ಯಾಯದಲ್ಲಿ ಅಧ್ಯಯನ ಕೈಗೊಂಡು ಇದರಲ್ಲಿ ಪ್ರಮುಖ ದೇವಾಲಯಗಳು ದೇವಾಲಯಗಳಲ್ಲಿನ ಆರಾಧನಾ ಸಂಪ್ರದಾಯಗಳು ಕೊಟ್ಟಲಗಿ ದೇವಾಲಯಗಳು ಸೂಚಿಸುವ ಸಾಂಸ್ಕೃತಿಕ ಸಂಬಂಧಗಳು (ಹೊಕ್ಕು ಬಳಕೆಗಳು) ಮುಂತಾದವುದನ್ನು ಪರಿಶೀಲಿಸಲಾಗಿದೆ.

ಅಧ್ಯಾಯ ಆರರಲ್ಲಿ ಗ್ರಾಮದ "ಕೃಷಿ ಪದ್ಧತಿ" ಯನ್ನು ವಿವರವಾಗಿ ನೋಡಲಾಗಿದೆ. ಮುಂಗಾರು ಹಿಂಗಾರು, ಕೃಷಿ ಕ್ಷೇತ್ರ ಬೆಳೆಗಳು, ಕೃಷಿ ಪದ್ದತಿ, ಪ್ರಮುಖ ವಾಣಿಜ್ಯ ಬೆಳೆಗಳು, ಸಾಕುಪ್ರಾಣಿಗಳು, ಹೈನುಗಾರಿಕೆ, ತೋಟಗಾರಿಕೆ, ಗ್ರಾಮೀಣ ಸಮಾಜ ಮತ್ತು ಆಧುನಿಕ ಕೃಷಿಯ ಕುರಿತು ವಿವೇಚಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ "ಆಚರಣೆಗಳು" ಎಂದಿದ್ದು ಜೀವನಾವರ್ತನದ ಆಚರಣೆಗಳಾದ ಸೀಮಂತ, ಜನನ, ನಾಮಕರಣ, ಮದುವೆ, ಶವ ಸಂಸ್ಕಾರ ಮೊದಲಾದ ಇತರ ಸಂಪ್ರದಾಯಗಳು ಹಾಗೂ ವಾರ್ಷಿಕಾವರ್ತನದ ಆಚರಣೆಗಳನ್ನು ಸವಿವರವಾಗಿ ಗಮನಿಸಲಾಗಿದೆ. ಆಚರಣೆಗಳ ಕುರಿತು ವಿವೇಚನೆಯನ್ನು ವಿಶೇಷವಾಗಿ ಗಮನಿಸಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ ಭಾಷೆ ಮತ್ತು ಸಾಹಿತ್ಯಕ್ಕೆ ಮಿಸಲಿರಿಸಲಾಗಿದೆ. ಅಲ್ಲಿನ ಪರಿಸರದಲ್ಲಿನ ಭಾಷೆ, ಶಿಷ್ಟ ಸಾಹಿತ್ಯ, ಜನಪದ ಸಾಹಿತ್ಯ, ಜನಪದ ಗೀತೆಗಳು, ಕಥೆಗಳು, ಕಥನ ಕಾವ್ಯ, ಗಾದೆ, ಒಡುಪುಗಳು, ಒಗಟು, ಬೈಗುಳಗಳು ಮೊದಲಾದ ಗ್ರಾಮದ ಜನಪದ ಸಾಹಿತ್ಯವನ್ನು ವಿಸ್ತೃತವಾದ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ ಒಂಬತ್ತರಲ್ಲಿ ಸಮಾರೋಪದ ಕುರಿತು ಒಟ್ಟು ಅಧ್ಯಯನದ ನೋಟ, ಅಧ್ಯಯನದ ಫಲಿತಗಳು, ಮುಂದಿನ ಅಧ್ಯಯನದ ಸಾಧ್ಯತೆಗಳು, ಅನುಬಂಧ, ಚಿತ್ರ ಸಂಪುಟಗಳು, ಕ್ಷೇತ್ರ ಕಾರ್ಯದ ಅನುಭವ ಹಾಗೂ ಉಪಸಂಹಾರ ಮಹಾಪ್ರಬಂಧದಲ್ಲಿ ಪ್ರಸ್ತಾಪಿತಗೊಂಡಿರುವ ಹಲವಾರು ವಿಷಯಗಳ ಸಾಂಸ್ಕೃತಿಕ ಮಹತ್ವ, ಸಾಮಾಜಿಕ ಸಂದರ್ಭದಲ್ಲಿ ಅವುಗಳ ಸ್ಥಾನಮಾನಗಳನ್ನು ಗಮನಿಸಲಾಗಿದೆ. ಅಧ್ಯಯನದ ಕಲಿತಗಳಲ್ಲಿ ಸಂಶೋಧನೆಯ ಸಂದರ್ಭದಲ್ಲಿ ಕಂಡುಬಂದ ಅಂಶಗಳನ್ನು ದಾಖಲಿಸಿದ್ದು ಮುಂದಿನ ಅಧ್ಯಯನದ ಸಾಧ್ಯತೆಗಳು ಜೊತೆಗೆ ಕ್ಷೇತ್ರ ಕಾರ್ಯಾನುಭವ ಮುಂತಾದವುಗಳನ್ನು ವಿವರವಾಗಿ ವಿವೇಚಿಸಲಾಗಿದೆ.

ಕೊಟ್ಟಲಗಿ ಗ್ರಾಮವು ನಾನು ಹುಟ್ಟಿದ ಊರಾಗಿದ್ದರೂ ಬಹುಪಾಲು ಕ್ಷೇತ್ರ ಕಾರ್ಯದ ಆಧಾರದ ಮೇಲೆಯೇ ಈ ಪ್ರಬಂಧ ಅಧ್ಯಯನ ಅವಲಂಬಿತವಾಗಿದೆ. ಕಾರಣ ವಕ್ತೃಗಳಿಂದ ಅಪಾರ ಸಹಾಯ ಹಾಗೂ ಸಹಕಾರಗಳನ್ನು ಪಡೆಯಲಾಗಿದೆ. ಹೀಗಾಗಿ ವಕ್ತೃಗಳ ಪರಿಚಯ

ಪಟ್ಟಿಯನ್ನು ಅಳವಡಿಸಿದ್ದೇನೆ. ವಿಷಯ ಸಂಬಂಧಿತವಾದ ಛಾಯಾಚಿತ್ರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ. ಜೊತೆಗೆ ಅಧ್ಯಯನಕ್ಕೆ ಬಳಸಿಕೊಂಡಿರುವ ಪ್ರಕಟಿತ ಜನಪದ ಸಾಹಿತ್ಯ ಹಾಗೂ ಇತರೇ ಎಲ್ಲ ಕೃತಿಗಳನ್ನು ಪಟ್ಟಿಮಾಡಿದ್ದೇನೆ.

ಅಧ್ಯಯನದಿಂದ ಕಂಡುಕೊಂಡ ಫಲಿತಗಳು

೧) ಕೊಟ್ಟಲಗಿ ಗ್ರಾಮವು ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದ ಗ್ರಾಮ ಎಂದು ಕಂಡುಬರುತ್ತದೆ. ಇದಕ್ಕೆ ಪೂರಕವೆಂಬಂತೆ ಪ್ರಾಚೀನ ದೇವಾಲಯಗಳು ಮತ್ತು ಕಲ್ಯಾಣಿ ಚಾಲುಕ್ಯರ ೨ನೇಯ ಜಯಸಿಂಹನ ಶಾಸನವು ದೊರೆತಿದೆ.

೨) ಗ್ರಾಮವು ಇಂದೂ ಕೂಡ ತನ್ನ ವ್ಯವಹಾರವನ್ನು ನೆರೆಯ ರಾಜ್ಯವಾದ ಮಹಾರಾಷ್ಟ್ರದ ಜತ್ತ, ಸಾಂಗಲಿ, ಮಿರಜ, ಕೋಲ್ಹಾಪೂರ, ಮುಂಬಯಿ ಪಟ್ಟಣಗಳ ಜೊತೆಯಲ್ಲಿ ನಡೆಸುತ್ತದೆ.

೩) ಗ್ರಾಮದಲ್ಲಿ ನಡೆಯುವ ಜಾತ್ರೆಗಳು ಉತ್ಸವಗಳು ಹಬ್ಬಹರಿದಿನಗಳು ಬಹಳಷ್ಟು ಅನ್ಯೋನ್ಯತೆಗಳಿಂದ ಕೂಡಿದೆ.

೪) ಗ್ರಾಮದಲ್ಲಿ ಎರಡು ವೀರಗಲ್ಲುಗಳಿವೆ.

೫) ಗ್ರಾಮದ ಪರಿಸರವು ಆಧುನಿಕತೆಯ ಕಡೆಗೆ ಮುಖ ಮಾಡಿದ್ದರೂ ಇಲ್ಲಿ ಮೂಲ ಸಂಸ್ಕೃತಿಗೆ ಧಕ್ಕೆ ತರುವ ಕೆಲಸ ನಡೆದಿರುವದಿಲ್ಲ. ಧಾರ್ಮಿಕ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿವೆ.

೬) ಬಹಳಷ್ಟು ಸಂಖ್ಯೆಯಲ್ಲಿ ವಿಭಕ್ತ ಕುಟುಂಬಗಳು ಕಂಡುಬಂದರೂ ತಮ್ಮ ಅನುಕೂಲಕ್ಕಾಗಿ ವಿರಳವಾಗಿಯಾದರೂ ಅವಿಭಕ್ತ ಕುಟುಂಬಗಳು ಹುಟ್ಟಿಕೊಂಡಿವೆ.

೭) ಸರಳ ವಿವಾಹ ಪದ್ಧತಿಯು ಎಲ್ಲೆಲ್ಲೂ ಕಂಡುಬರುತ್ತದೆ.

೮) ಆರ್ಥಿಕವಾಗಿ ಈ ಗ್ರಾಮದಲ್ಲಿ ಬಹುತೇಕ ಕುಟುಂಬಗಳು ಹಿಂದುಳಿದಿವೆ.

೯) ಪ್ರಾಣಿ ಬಲಿಯಂತಹ ಅನಿಷ್ಠ ಪದ್ಧತಿ ಗ್ರಾಮದಲ್ಲಿ ಜಾರಿಯಲ್ಲಿರುವುದು ಕಂಡುಬರುತ್ತದೆ.

೧೦) ಕೊಟ್ಟಲಗಿ ಗ್ರಾಮದಲ್ಲಿ ದೇವದಾಸಿ ಪದ್ಧತಿಯು ಅಷ್ಟಾಗಿ ಕಂಡುಬರುವುದಿಲ್ಲ.

೧೧) ಮಹಿಳೆಯರಿಗೆ ತೆರವು ಕೊಡುವ ಪದ್ಧತಿಯು ಗ್ರಾಮದ ಕೊರವ ಸಮುದಾಯದಲ್ಲಿ ಜಾರಿಯಲ್ಲಿರುವುದು ಕಂಡುಬರುತ್ತದೆ.

೧೨) ಜನರು ಕೀಳರಿಮೆಗೆ ಒಳಗಾಗಿದ್ದಾರೆ.

೧೩) ವರದಕ್ಷಿಣೆಯಂತಹ ಪಿಡುಗಿನಿಂದ ಗ್ರಾಮವು ಹೊರತಾಗಿಲ್ಲ.

೧೪) ಗ್ರಾಮವು ಕಲ್ಯಾಣಿ ಚಾಲುಕ್ಯರ ಹಾಗೂ ಕಲಚೂರಿಗಳ ಆಳ್ವಿಕೆಗೆ ಒಳಪಟ್ಟಿರುವ ಸಂಗತಿ ತಿಳಿದುಬರುತ್ತದೆ.

೧೫) ಸಭೆಯ ಸಮಾರಂಭದಲ್ಲಿ ಕಚೇರಿಗಳಲ್ಲಿ ಕೆಲವೊಂದು ಜನರು ಮಾತನಾಡುವದಕ್ಕೆ ಹಿಂಜರಿಯುವರು.

೧೬) ಉಡುಗೆ ತೊಡುಗೆಗಳಲ್ಲಿ ಸಾಂಪ್ರದಾಯಕತೆಯಿದ್ದು ಆಧುನಿಕತೆಗೆ ಒಗ್ಗಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

೧೭) ಗ್ರಾಮವು ಒಂದು ಅಗ್ರಹಾರವಾಗಿತ್ತು.

೧೮) ಗ್ರಾಮವು ಪ್ರಾಗೈತಿಹಾಸಿಕ ನೆಲೆಯನ್ನು ಹೊಂದಿದೆ.

೧೯) ಕೊಟ್ಟಲಗಿ ಗ್ರಾಮವನ್ನು ೨ನೇ ಜಯಸಿಂಹನ ಕಾಲದಲ್ಲಿ ಗುಲ್ಬರ್ಗಾ ಜಿಲ್ಲೆಯ ನಾಗಾವಿ ಶೈಕ್ಷಣಿಕ ಕೇಂದ್ರಕ್ಕೆ ದತ್ತಿಯಾಗಿ ನೀಡಲಾಗಿತ್ತು.

೨೦) ರಾಮತೀರ್ಥದ ಸ್ವಯಂಭೂ ರಾಮೇಶ್ವರ ದೇವಾಲಯಕ್ಕೆ ಕೊಟ್ಟಲಗಿ ಗ್ರಾಮವನ್ನು ಉಂಬಳಿಯಾಗಿ ನೀಡಲಾಗಿತ್ತು.

೨೧) ಶ್ರೀ ಸಿದ್ಧೇಶ್ವರದ ದೇವಾಲಯದ ದೀಪಸ್ತಂಭವು ಪ್ರಮುಖ ವಿಶೇಷ ಆಕರ್ಷಣೆಯಾಗಿದೆ.

೨೨) ಗ್ರಾಮವು ಕಲ್ಯಾಣಿ ಚಾಲುಕ್ಯರ ಕಾಲದ ಶಿಲ್ಪಕಲಾ ವೈಭವವನ್ನುಳ್ಳ ದೇವಾಲಯಗಳನ್ನು ಹೊಂದಿದೆ.

೨೩) ಮೇಲಿಂದ ಮೇಲೆ ಗ್ರಾಮವು ಬರಗಾಲಕ್ಕೆ ತುತ್ತಾಗುವುದು ಕಂಡುಬರುತ್ತದೆ.

೨೪) ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂದರ್ಶನ ಮಾಡಲು ಹೋದರೆ ಕೆಲವೊಂದು ಜನಪದರು ಭಯಭೀತರಾಗುವಷ್ಟು ಮುಗ್ಧತೆಯನ್ನು ಹೊಂದಿರುವುದು ಕಂಡುಬಂತು.

೨೫) ಗ್ರಾಮದ ಕೊರವ ಜನಾಂಗದಲ್ಲಿ ಮರಣದ ಆಚರಣೆಯಲ್ಲಿ ಕಠೋರವಾದ ನಿಯಮಗಳು ಕಂಡುಬರುತ್ತವೆ.

೨೬) ಗ್ರಾಮದೇವತೆಯಾದ ಶ್ರೀ ಸಿದ್ಧೇಶ್ವರ ಹಿನ್ನೆಲೆಯಲ್ಲಿ ಆಚರಣೆ ನಂಬಿಗೆಗಳು ಗಟ್ಟಿಯಾಗಿ ನೆಲೆಗೊಂಡಿವೆ.

೨೭) ಗ್ರಾಮದ ಜನರು ಭಾವೈಕ್ಯತಾ ನೆಲೆಯ ಹಿನ್ನೆಲೆಯಲ್ಲಿ ಬೆಳೆದು ಬಂದಿದ್ದು ಆ ಭಾವನೆಯ ಹಿನ್ನೆಲೆಯಲ್ಲಿ ವಿವಿಧ ಸಮುದಾಯಗಳು ಸಹಬಾಳ್ವೆಯನ್ನು ನಡೆಸುತ್ತಿರುವುದು ಕಂಡುಬರುತ್ತದೆ.

೨೮) ಗ್ರಾಮದ ಹೊಲೆಯರು ಮತ್ತು ಮಾದಿಗ ಸಮುದಾಯದಲ್ಲಿ ಮಾತ್ರ ಜನನದ ಸಂದರ್ಭದಲ್ಲಿ ಮೂರದೇಶಿ(ಮೂರನೇ ದಿನದ ಆಚರಣೆ) ಆಚರಣೆ ಕಂಡುಬರುತ್ತದೆ. ಕೇವಲ ಈ ಆಚರಣೆ ಹೊಲೆಯ ಮತ್ತು ಮಾದಿಗ ಸಮುದಾಯದಲ್ಲಿರುವುದು ಗ್ರಾಮದ ವಿಶೇಷವಾಗಿದೆ.

೨೯) ಕೊರವ ಸಮುದಾಯದಲ್ಲಿ ೧೨ ಮತ್ತು ೧೩ನೇ ದಿನಕ್ಕೆ ನಾಮಕರಣ ಮಾಡುವುದಿಲ್ಲ. ಬದಲಿಗೆ ೫ನೇ ದಿನಕ್ಕೆ ನಾಮಕರಣ ಮಾಡುತ್ತಾರೆ.

೩೦) ಗ್ರಾಮದ ಎಲ್ಲ ಸಮುದಾಯಗಳಲ್ಲಿ ಅಪಘಾತ ರೋಗರುಜಿನಗಳಾಗಿ ಮರಣ ಹೊಂದಿದ ವ್ಯಕ್ತಿಯ ಶವವನ್ನು ಸುಡುತ್ತಾರೆ.

೩೧) ಗ್ರಾಮದ ಕೊರವ ಸಮುದಾಯದಲ್ಲಿ ವ್ಯಕ್ತಿ ಸತ್ತ ೨ನೇಯ ದಿನ ಕಾರ್ಯದ ಸಂದರ್ಭದಲ್ಲಿ ಕೋಳಿ ಬಲಿ ಕೊಡುತ್ತಾರೆ. ಅಲ್ಲದೇ ೩ನೇ ದಿನ, ೫ನೇ ದಿನ, ೭ನೇ ದಿನ, ೯ನೇ ದಿನ, ೧೩ನೇ ದಿನ ಈ ಸಂದರ್ಭದ ಆಚರಣೆಯಲ್ಲಿ ಕಡ್ಡಾಯವಾಗಿ ಆಡಿನ ಮರಿಯನ್ನು(ಹೋತು) ಬಲಿಕೊಡುತ್ತಾರೆ.

೩೨) ಗ್ರಾಮದ ಕುರುಬ ಸಮುದಾಯದವರಲ್ಲಿ ಹೆರಿಗೆಯಾದ ನಂತರ ತವರಿನಿಂದ ಬರುವ ಸೊಸೆ ತವರಿನಿಂದ ತೊಟ್ಟಿಲು ಬಟ್ಟಲು ತರುವುದಕ್ಕೆ ಅವಕಾಶವಿಲ್ಲ. ಹಾಗೆಯೇ ತಮ್ಮ ಮನೆಯಲ್ಲಿನ ಮಗಳಿಗೆ ಕೂಡಾ ಗಂಡನ ಮನೆಗೆ ಕೊಟ್ಟು ಕಳಿಸುವುದಿಲ್ಲ.

೩೩) ಕುರುಬ ಸಮುದಾಯದಲ್ಲಿ ಮದುವೆಯಾಗಿ ಬರುವ ಹೆಣ್ಣು ಮಂಚದ ಜೊತೆ ಉಡುಗೊರೆಯಾಗಿ ಗಾದೆಯನ್ನು ತರುವಂತಿಲ್ಲ. ಬದಲಿಗೆ ಕುರಿ ಉಣ್ಣೆಯ ತಡಿಯನ್ನು(ಹಾಸಿಗೆ) ತರಬೇಕು ಎಂಬ ಪದ್ಧತಿ ಇದೆ.

೩೪) ಕುರುಬ ಸಮುದಾಯದವರು ವರ್ಷವಿಡೀ ಬಾಳೆಹಣ್ಣನ್ನು ಕೊಂಡು ತಿನ್ನುವಂತಿಲ್ಲ. ಆದರೆ ಮಹಾನವಮಿಯ ನವರಾತ್ರಿಯ ಸಂದರ್ಭದಲ್ಲಿ ಒಂಭತ್ತು ದಿವಸ ಬಾಳೆಹಣ್ಣನ್ನು ತಂದು ತಿನ್ನಲು ಅವಕಾಶವಿದೆ. ಆದರೆ ಇನ್ನುಳಿದ ದಿನಗಳಲ್ಲಿ ಯಾರಾದರೂ ಅನ್ಯ ವ್ಯಕ್ತಿಗಳು ಕೊಡಿಸಿದ್ದಲ್ಲಿ ತಿನ್ನಬಹುದಾಗಿದೆ.

೩೫) ಗ್ರಾಮದ ರಜಪೂತ ಸಮುದಾಯದಲ್ಲಿ ಜನ್ಮ ಸಂದರ್ಭದ ಐದೇಶಿ(ಐದನೇ ದಿನದ ಆಚರಣೆ) ಶೆಟವಿ ಪೂಜೆ ನೆರವೇರಿಸುವುದಿಲ್ಲ.

೩೬) ಗ್ರಾಮದ ರಜಪೂತ ಸಮುದಾಯದವರು ಜನನದ ಸಂದರ್ಭದಲ್ಲಿ ಮಗುವಿಗೆ ತೊಟ್ಟಿಲು ಕೊಂಡು ತರುವುದಿಲ್ಲ.

೩೭) ಗ್ರಾಮದ ರಜಪೂತ ಸಮುದಾಯದ ಸ್ತ್ರೀಯು ಕಡ್ಡಾಯವಾಗಿ ಮೂಗಿನ ಮೇಲಿನ ಎಡಭಾಗದಲ್ಲಿ ಹಚ್ಚೆ ಹಾಕಿಸಿಕೊಳ್ಳುತ್ತಾರೆ.

೩೮) ಗ್ರಾಮದ ಬ್ರಾಹ್ಮಣ, ಬಡಿಗೇರ, ಕಂಬಾರ, ಪತ್ತಾರ, ರಜಪೂತ, ಮುಸ್ಲಿಂ ಸಮುದಾಯದವರು ಶವವನ್ನು ಮಲಗಿಸಿ ಸ್ಮಶಾನಕ್ಕೆ ಸಾಗಿಸುತ್ತಾರೆ.

೩೯) ಗ್ರಾಮದ ರಜಪೂತ ಸಮುದಾಯದಲ್ಲಿ 'ಹಿರಿಯರ ಮಳಾ' ಎಂಬ ಕಾರ್ಯಕ್ರಮವನ್ನು ವರ್ಷದಲ್ಲಿ ಒಮ್ಮೆ ಆಚರಿಸಿ ೨೦, ೩೦ ಜನರಿಗೆ ಅನ್ನದಾನ ಮಾಡುತ್ತಾರೆ.

೪೦) ಗ್ರಾಮದ ಜನತೆ ದುರ್ಗವ್ವನ ಗುಡಿ ಹೊತ್ತುಕೊಂಡು ಬರುವವರಿಗೆ, ಗೌಲೆತ್ತಿನವರಿಗೆ, ಭೀಕ್ಷುಕರಿಗೆ ಯಾರಿಗೆ ಆಗಲೀ ಮನೆಗೆ ಭಿಕ್ಷೆಗೆ ಬಂದರೆ ಬರಿಗೈಯಿಂದ ಕಳಿಸದೆ ಧಾನ್ಯ ಅಥವಾ ಹಣ ಏನಾದರೂ ದಾನ ಮಾಡುತ್ತಾರೆ.

೪೧) ಇತ್ತೀಚಿಗೆ ಮುಸ್ಲಿಂ ಜನಾಂಗದಲ್ಲಿ ಚಿಕ್ಕಮ್ಮನ ಮಗಳು ಸೋದರಿ ಸಂಬಂಧಿಯನ್ನು ಮದುವೆಯಾಗುವುದು ಕಡಿಮೆಯಾಗುತ್ತಿದೆ.

೪೨) ಶ್ರೀ ಸಿದ್ದೇಶ್ವರ ದೇವಸ್ಥಾನದ ಮೇಲಿನಿಂದ ಹರಕೆ ಹೊತ್ತ ಮಕ್ಕಳನ್ನು ಕೆಳಗೆ ಹಾರಿಸುತ್ತಾರೆ. ಈ ಪದ್ಧತಿ ಆಚರಣೆಯನ್ನು ಸಿದ್ದೇಶ್ವರನಿಗೆ ಹರಕೆ ಹೊತ್ತು ಮಕ್ಕಳನ್ನು ಹೆತ್ತವರು ನೆರವೇರಿಸುತ್ತಾರೆ.

೪೩) ಶ್ರೀ ಸಿದ್ದೇಶ್ವರ ದೇವಸ್ಥಾನಕ್ಕೆ ಪ್ರತಿದಿನ ಹಾಲನ್ನು ತಂದು ಅರ್ಪಿಸುತ್ತಾರೆ.

೪೪) ಶ್ರೀ ಸಿದ್ದೇಶ್ವರ ದೇವಸ್ಥಾನಕ್ಕೆ ಪ್ರತಿ ಸೋಮವಾರ ಮನೆಯಲ್ಲಿ ಹಾಲು ಹಿಂಡುವ ಪ್ರಾಣಿಗಳಿದ್ದರೆ ದೇವಸ್ಥಾನಕ್ಕೆ ಕಡ್ಡಾಯವಾಗಿ ತುಪ್ಪವನ್ನು ತಂದು ಅರ್ಪಿಸುತ್ತಾರೆ.

೪೫) ಶ್ರೀ ಸಿದ್ದೇಶ್ವರ ದೇವಾಲಯಕ್ಕೆ ಬರುವ ಭಕ್ತಾದಿಗಳು ಭಕ್ತಿಯಿಂದ ತುಪ್ಪವನ್ನು ಅರ್ಪಿಸುತ್ತಾರೆ. ಅಲ್ಲದೇ ಪರ ಊರಿನ ಭಕ್ತರು ಆಕಳು ಎಮ್ಮೆಗಳು ಕರು ಹಾಕಿದ ಮೇಲೆ ಮೀಸಲು ತುಪ್ಪವೆಂದು ಸಿದ್ದೇಶ್ವರನಿಗೆ ತಂದು ಅರ್ಪಿಸುತ್ತಾರೆ.

೪೬) ಗ್ರಾಮದ ಮಲ್ಲಯ್ಯ ದೇವರಿಗೆ ಹರಕೆ ಹೊತ್ತು ಗ್ರಾಮದ ಜನ ಗ್ರಾಮದಲ್ಲೆಲ್ಲ ಬೆಲ್ಲವನ್ನು ಹಂಚುತ್ತಾರೆ.

೪೭) ಸ್ತ್ರೀ ಸಂಘಗಳ ಮೂಲಕ ಹೆಣ್ಣುಮಕ್ಕಳು ಸಂಘಟಿತರಾಗಿ ಆರ್ಥಿಕ ಸುಭದ್ರತೆ ಹೊಂದುವುದರ ಜೊತೆಗೆ ವೈಚಾರಿಕತೆಯ ಕಡೆಗೆ ವಾಲುತ್ತಿದ್ದಾರೆ.

೪೮) ಮಾಟ ಮಂತ್ರಗಳಲ್ಲಿ ಜನರು ನಂಬಿಕೆ ಇಟ್ಟಿದ್ದಾರೆ.

೪೯) ಮನೆ ಕಟ್ಟುವಾಗ ವಾಸ್ತುವಿನ ಕಾರಣಕ್ಕಾಗಿ ಹೀಗೆಯೇ ಕಟ್ಟಬೇಕೆಂಬ ಕೆಲವೊಂದು ನಂಬಿಕಯುಂಟು.

೫೦) ಗ್ರಾಮದ ಬಡಕೂಲಿಕಾರರು ನೆರೆಯ ಮಹಾರಾಷ್ಟ್ರ, ಗೋವಾ, ಹಾಗೂ ರಾಜ್ಯದ ವಿವಿಧ ಭಾಗಗಳಿಗೆ ಉದ್ಯೋಗವನ್ನರಸಿ ಗುಳೆ ಹೋಗುತ್ತಾರೆ.

ಅಧ್ಯಯನದ ಸಾಧ್ಯತೆಗಳು

೧) ಗ್ರಾಮವು ನೆರೆಯ ಮಹಾರಾಷ್ಟ್ರಕ್ಕೆ ಹೊಂದಿಕೊಂಡಿದ್ದು ಗಡಿನಾಡಿನಲ್ಲಿ ಕನ್ನಡ ಮರಾಠಿ ಭಾಷೆಗಳು ಪರಸ್ಪರ ಪ್ರಭಾವ ಬೀರಿವೆ. ಈ ಹಿನ್ನೆಲೆಯಲ್ಲಿ ಕನ್ನಡ ಮರಾಠಿ ಸಂಸ್ಕೃತಿಯ ಕುರಿತು ಅಧ್ಯಯನ ಕೈಗೊಳ್ಳಬಹುದು.

೨) ಕೊಟ್ಟಲಗಿ ಗ್ರಾಮದಂತೆ ಅಥಣಿ ತಾಲೂಕಿನ ಗಡಿನಾಡಿನಲ್ಲಿರುವ ಪಶ್ಚಿಮಕ್ಕೆ ಸುಮಾರು ೨೨ ಹಳ್ಳಿಗಳ ಸ್ಥಿತಿಗತಿಗಳ ಕುರಿತು ಅಧ್ಯಯನ ಕೈಗೊಳ್ಳಬಹುದು.

೩) ಗ್ರಾಮದ ಕ್ರಿ.ಶ. ೧೦೨೨ ರ ಕಲ್ಯಾಣಿ ಚಾಲುಕ್ಯ ೨ನೇ ಜಯಸಿಂಹನ ಶಾಸನವನ್ನು ಆಧಾರವಾಗಿಟ್ಟು ಕೊಂಡು ಅಧ್ಯಯನ ಕೈಗೊಳ್ಳಲಾಗಿದೆ. ಕ್ರಿ.ಶ. ೧೦೨೨ ಕ್ಕೂ ಮೊದಲು ಕೊಟ್ಟಲಗಿ ಗ್ರಾಮವು ಡೋಣಿ ನದಿಯ ದಡದಲ್ಲಿ ಇರಬಹುದು ಎಂಬ ಸಂಶಯಕ್ಕೆ ಪೂರಕವಾಗಿ ಡೋಣಿ ನದಿಯ ದಡದಲ್ಲಿ ಜನ ವಸತಿಯ ನೆಲೆ ಕಂಡು ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ವಿಶೇಷವಾಗಿ ಪ್ರಾಚ್ಯಾವಶೇಷಗಳ ಕುರಿತು ಅಧ್ಯಯನ ಕೈಗೊಂಡಿದ್ದೆ ಆದಲ್ಲಿ ನವ ನಾಗರೀಕತೆಯು ಬೆಳಕಿಗೆ ಬರುವ ಸಂಭವವಿದೆ. ಆದ್ದರಿಂದ ಪ್ರಾಚ್ಯಶಾಸ್ತ್ರ ಕುರಿತು ಅಧ್ಯಯನ ಮಾಡಬಹುದು.

೪) ಕಣಂಬಡೆ ನಾಡು ಕರಹಾಡ ಸಾಸಿರದ ವ್ಯಾಪ್ತಿಗೆ ಒಳಪಟ್ಟಿದ್ದರಿಂದ ಮೌರ್ಯ ಶಾತವಾಹನರ ಕಾಲದಿಂದಲೂ ಇಲ್ಲಿ ರಾಜಕೀಯ ಸ್ಥಿರತೆ ಇದ್ದಿರುವ ಸಂಭವನೀಯತೆ ಕಂಡುಬರುತ್ತದೆ. ಏಕೆಂದರೆ ಕಡಂಬಡೆ ನಾಡಿನ ರಾಜಕೀಯ ಚರಿತ್ರೆ ಮೌರ್ಯರು ಶಾತವಾಹನರಿಂದಲೇ ಪ್ರಾರಂಭವಾಗುತ್ತದೆ. ಇವರ ಕಾಲದ ಶಾಸನಗಳು ಮಾತ್ರ ಇಲ್ಲಿ ಕಂಡು ಬಂದಿರುವದಿಲ್ಲ. ಬೆಳಗಾವಿ ಜಿಲ್ಲೆಯಲ್ಲಿ ವಡಗಾಂವ, ಮಾಧವಪೂರ, ಹಲಸಿ, ತಲ್ಲೂರ, ಕುಡಚಿ ಮುಂತಾದ ಕಡೆ ದೊರೆಯುವುದರಿಂದ ಈ ನಿಟ್ಟಿನಲ್ಲಿ ಹೆಚ್ಚಿನ ಸಂಶೋಧನೆ ಮಾಡಿದರೆ ಈ ಪ್ರದೇಶದಲ್ಲಿ ಅವರ ಆಳ್ವಿಕೆ ಕುರಿತು ಸ್ಪಷ್ಟವಾದ ಆಧಾರಗಳು ದೊರೆಯಬಹುದಾದ ಸಾಧ್ಯತೆ ಇದೆ.

೫) ಗ್ರಾಮದ ಸ್ವಾತಂತ್ರ ಯೋಧರು ಜತ್ತ ಸಂಸ್ಥಾನ; ಉಮರಾಣಿ ಸಂಸ್ಥಾನಗಳ ಏಕೀಕರಣಕ್ಕೆ ಶ್ರಮಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಜತ್ತ ಮತ್ತು ಉಮರಾಣಿ ಸಂಸ್ಥಾನಗಳ ಕುರಿತು ರಾಜಕೀಯ ಹಿನ್ನೆಲೆಯಲ್ಲಿ ಅಧ್ಯಯನವನ್ನು ಕೈಗೊಳ್ಳಬಹುದು.

ಶಾಸನ ಸಂಪುಟಗಳು

೧) Epigraphia Indica Vol.-XXX

೨) Karnataka Inscriptions Vol.-II & V

೩) South Indian Inscriptions Vol.-XV, XVIII, XX

೪) ಸೂರ್ಯನಾಥ ಕಾಮತ್ ಕರ್ನಾಟಕ ರಾಜ್ಯ ಗೇಜೆಟಿಯರ ಭಾಗ-೧ ಮತು ಭಾಗ-೨ ಕರ್ನಾಟಕ ರಾಜ್ಯ ಸರಕಾರ ಬೆಂಗಳೂರು ೧೯೮೨.

೫) ಮಹಾರಾಷ್ಟ್ರದ ಕನ್ನಡದ ಶಾಸನಗಳು ಸಂಪುಟ -೬, ಕನ್ನಡ ವಿಶ್ವವಿದ್ಯಾಲಯ ಹಂಪಿ.

೬) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೯. ಕನ್ನಡ ವಿಶ್ವವಿದ್ಯಾಲಯ ಹಂಪಿ.

೭) ಬೆಳಗಾವಿ ಜಿಲ್ಲಾ ಗೆಜೆಟಿಯರ್ ಪುಟ ಸಂಖ್ಯೆ-೨೩ ೧೯೮೭

ಗ್ರಂಥಋಣ

೧. ಅಪರ್ಣಾ ಕೆ.ಎಸ್.–ದೇವಾಲಯ ವಸ್ತುಶಿಲ್ಪ ಪರಿಚಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ –೧೯೯೯

೨. ಅರ್ಜುನ ಗೋಳಸಂಗಿಯವರ ಗೋಳಸಂಗಿ ಗ್ರಾಮದ ಸಾಂಸ್ಕೃತಿಕ ಅಧ್ಯಯನ.

೩. ಅಥಣಿ ಪರಿಸರದ ವಾಲ್ಮೀಕಿ ಸಮುದಾಯ ಡಾ॥ ಬಿ. ಪ್ರೇಮಾನಂದ ಜನಪದ ಅಧ್ಯಯನ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೯.

೪. ಅಥಣಿ ತಾಲೂಕಾ ಸಮಗ್ರ ದರ್ಶನ ಪ್ರಸಂ. ಡಾ॥ ವ್ಹಿ. ಎಸ್. ಮಾಳಿ ವಿಮೋಚನಾ ಪ್ರಕಾಶನ, ಅಥಣಿ

೫. ಉತ್ತರ ಕರ್ನಾಟಕದ ಗೀತ ಮೇಳಗಳು ವಿರೇಶ ಬಡಿಗೇರ ವಿಮೋಚನಾ ಪ್ರಕಾಶನ ಅಥಣಿ

೬. ಎಲಿಗಾರ ಚನ್ನಕ್ಕ–ಪ್ರಾಚೀನ ಕರ್ನಾಟದ ರಾಣಿಯರು, ಧಾರವಾಡ–೧೯೮೭

೭. ಕಲಬುರ್ಗಿ ಎಂ.ಎಂ. ಕನ್ನಡ ಶಾಸನ ಸಂಪದ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ–೧೯೭೪

೮. ಕಲಬುರ್ಗಿ ಎಂ.ಎಂ. ಮಹಾರಾಷ್ಟ್ರದ ಕನ್ನಡದ ಶಾಸನಗಳು. ಕನ್ನಡ ಅಧ್ಯಯನ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ೧೯೮೭.

೯. ಕಣಂಬಡೆ ಮೂನ್ನೂರು ಒಂದು ಅಧ್ಯಯನ ಪಿ.ಹೆಚ್.ಡಿ ಪ್ರಬಂಧ ಬಿ. ಆರ್. ರಾಠೋಡ–೨೦೧೧.

೧೦. ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ. ಡಾ॥ ಚಿ. ಸಿ. ನಿಂಗಣ್ಣ ಸಿದ್ದಲಿಂಗೇಶ್ವರ ಪ್ರಕಾಶನ ಗುಲಬರ್ಗಾ ೨೦೦೮

೧೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಡಾ॥ ಚಿದಾನಂದಮೂರ್ತಿ–ಎಂ. ಪ್ರಸಾರಾಂಗ ಕಶಾಸಾಲ ಮೈಸೂರು.

೧೨. ಕನ್ನಡ ಸಾಹಿತ್ಯ ಸಂಸ್ಕೃತಿ ಮಿಮಾಂಸೆ ಸಂಪಾದಕ ಡಾ॥ ಸಿ.ಬಿ.ಹೊನ್ನಯ್ಯ. ಜೈ ಭೀಮ ಪ್ರಕಾಶನ ಬೆಂಗಳೂರು ೨೦೦೮

೧೩. ಕನ್ನಡ ಜನಪದ ನಂಬಿಕೆಗಳು ಡಾ॥ ಮಂಜುನಾಥ ಬೇವಿನಕಟ್ಟಿ ಜ್ಯೋತಿ ಪ್ರಕಾಶನ ಮೈಸೂರು–೨೦೦೭

೧೪. ಕರ್ನಾಟಕ ಭಾರತಿ ಸಂಪುಟ ೩ ಸಂಚಿಕೆ ೨ ಆರ್.ಎನ್. ಗುರವ–೧೯೭೦

೧೫. ಕನ್ನಡ ಸಂಸ್ಕೃತಿ 'ಮರಿಯಪ್ಪ ಭಟ್ಟ' ಕ.ಸ.ಪ್ರಮ.ನಿ ಚಾಮರಾಜ ಪೇಟೆ ಬೆಂಗಳೂರು–೧೯೬೭

೧೬. ಕಲ್ಯಾಣ ಚಾಲುಕ್ಯ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ ಎಚ್.ಎಸ್. ಗೋಪಾಲರಾವ ಪ್ರಾ.ಸ.ನಿ.ಮೈಸೂರು ೧೯೯೩

೧೭. ಕಾಡುಗೊಲ್ಲರ ಜಾನಪದ ಒಂದು ಅಧ್ಯಯನ ಡಾ॥ ಕಾಳೇಗೌಡ ನಾಗವಾರ ಬೆಂಗಳೂರು ವಿವಿಗೆ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧ ೧೯೮೪

೧೮. ಕೃಷ್ಣಾರಾಯ ಅ.ನಂ. ಭಾರತೀಯ ಸಂಸ್ಕೃತಿ ದರ್ಶನ, ಸಾಹಿತ್ಯ ಮತ್ತು ದರ್ಶನ ಮೈಸೂರು ೧೯೬೨.

೧೯. ಕೊಪ್ಪಾ. ಎಸ್. ಕೆ–ತರ್ದವಾಡಿ ನಾಡು–ಒಂದು ಅಧ್ಯಯನ, ಪ್ರತಿಭಾ ಪ್ರಕಾಶನ ಇಂಡಿ–೧೯೯೦.

೨೦. ಗುರವ ಆರ್.ಎನ್. ತರ್ದವಾಡಿ ನಾಡು ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೨೧. ಗೊಂಬೆ ಚಿತ್ತಾರದ ಮಡೆಕಡೆದೂ ಡಾ॥ ಕೂಡ್ಲೂರು ವೆಂಕಟಪ್ಪ ಧಾತ್ರಿ ಪುಸ್ತಕಮಾಲೆ ನಂ. ೧೭೦ ೩ನೇ ಸಿ ಅಡ್ಡರಸ್ತೆ ವಿನಾಯಕ ಬಡಾವಣೆ ನಾಗರಬಾವಿ ಬೆಂಗಳೂರು –೨೦೦೯.

೨೨. ಚನ್ನಣ್ಣ ವಾಲಿಕಾರ ಒಂದು ಗ್ರಾಮದ ಜಾನಪದೀಯ ಅಧ್ಯಯನ

೨೩. ಚಿದಾನಂದ ಮೂರ್ತಿ ಎಂ. ಸಂಶೋಧನಾ ತರಂಗ ೧೯೬೬

೨೪. ಚಿದಾನಂದ ಮೂರ್ತಿ ಎಂ. ಕನ್ನಡ ಶಾಸನಗಳು ಸಾಂಸ್ಕೃತಿಕ ಅಧ್ಯಯನ, ಮೈಸೂರು ವಿಶ್ವವಿದ್ಯಾಲಯ ಮೈಸೂರು–೧೯೭೯

೨೫. ಚಿದಾನಂದಮೂರ್ತಿ ಬಂ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪ್ರಸಾರಾಂಗ –ಮೈಸೂರು ವಿಶ್ವವಿದ್ಯಾಲಯ ಮೈಸೂರು–೧೯೭೯.

೨೬. ಜಾನಪದ ಕೈಪಿಡಿ ಪ್ರಧಾನ ಸಂಪಾದಕ–ಡಾ॥ ಎಚ್. ಜೆ. ಲಕ್ಕಪ್ಪಗೌಡ. ಕನ್ನಡ ಪುಸ್ತಕ ಪ್ರಾಧಿಕಾರ ಪಂಪ ಮಹಾಕವಿ ರಸ್ತೆ ಬೆಂಗಳೂರು ೧೯೯೭

೨೭. ಜಾತ್ರೆಗಳು ಎಸ್.ಎಸ್. ಹಿರೇಮಠ ಸಮತಾ ಪ್ರಕಾಶನ ಹೊಸಪೇಟೆ–೧೯೯೩

೨೮. ಜಾನಪದ ಆಟಗಳು ಮಲ್ಲಿಕಾ ಸಂ. ಮೇತ್ರಿ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು–೨೦೦೬

೨೯. ತಿಪ್ಪೆರುದ್ರ ಸ್ವಾಮಿ–ಕರ್ನಾಟಕ ಸಂಸ್ಕೃತಿ ಸಮೀಕ್ಷೆ–೧೯೬೮

೩೦. ನರಸಿಂಹಾಚಾರ್ಯ ಡಿ.ಎಲ್.–ವಡ್ಡಾರಾಧನೆ–ಮೈಸೂರು ಪಬ್ಲಿಷಿಂಗ್ (ಎರಡನೇಯ ಮುದ್ರಣ) ಹೌಸ ೧೯೯೩.

೩೧. ನರಸಿಂಹಚಾರ್ ಆರ್–ಕರ್ನಾಟಕದ ಕವಿಚರಿತೆ ಭಾಗ–೧ ಬೆಂಗಳೂರು ೧೯೭೨, ಭಾಗ–೨ ೧೯೯೩, ಭಾಗ–೩ ೧೯೭೪.

೩೨. ನಯಸೇನ : ಧರ್ಮಾಮೃತ (ಸಂ) ವೆಂಕಟರಾಮಪ್ಪ ಕೆ. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು–೧೯೭೮.

೩೩. ನಾಗರಾಜ ಕೆ.ಜಿ. ಕಲ್ಯಾಣ ಚಾಲುಕ್ಯರ ವಾಸ್ತುಶಿಲ್ಪ ಕಲಾ ಪ್ರಪಂಚ. ಕರ್ನಾಟಕ ಲಲಿತ ಕಲಾ ಅಕಾಡೆಮಿ. ಬೆಂಗಳೂರು ೧೯೯೪

೩೪. ನಾಗಯ್ಯ ಜೆ.ಎಂ. ೬ನೇಯ ವಿಕ್ರಮಾದಿತ್ಯನ ಶಾಸನಗಳು ೧ ಅಧ್ಯಯನ. ಶ್ರೀ ನಾಗನೂರು ರುದ್ರಾಕ್ಷಿ ಮಠ ಬೆಳಗಾವಿ ೧೯೯೨.

೩೫. ನಾರಾಯಣ ಆನಿಖಿಂಡಿ ಪ್ರಸಂ ಸುವರ್ಣ ಸುಗಂಧ ಸ್ಮರಣ ಸಂಚಿಕೆ ಸಾಹಿತ್ಯ ಸಾಂಸ್ಕೃತಿಕ ಸಂಘ ಅಥಣಿ–೨೦೦೫.

೩೬. ಪಂಚಮುಖಿ ಆರ್.ಎಸ್. ಕರ್ನಾಟಕ ಇತಿಹಾಸ, ಕರ್ನಾಟಕ ಇತಿಹಾಸ ಸಂಶೋಧನ ಮಂಡಳಿ ಧಾರವಾಡ– ೧೯೬೭

೩೭. ಪರಶಿವಮೂರ್ತಿ ಡಿ. ವ್ಹಿ :– ಕನ್ನಡ ಶಾಸಸಶಿಲ್ಪ ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ–೧೯೯೯.

೩೮. ಪರಿವರ್ತನೆಯ ಸುಳಿಯಲ್ಲಿ ಕಿರು ಸಮುದಾಯಗಳು ಶಂಕರನಾರಾಯಣರಾವ ಎನ್.ಪಿ ಕ.ಸಾ.ಪ–೨೦೦೦

೩೯. ಪಂಚಮುಖಿ ಆರ್.ಎಸ್. ಕರ್ನಾಟಕದ ಅರಸು ಮನೆತನಗಳು, ಧಾರವಾಡ ೧೯೯೯

೪೦. ಫ್ಲೀಟ್ ಜೆ. ಎಫ್. : ಭಾರತೀಯ ಶಾಸನಶಾಸ್ತ್ರ ಪರಿಚಯ (ಅನುವಾದ) ಸಿ.ಪಿ.ಕೆ ª ÃÉ ÃgÀ ¸ÀgÀ ¥ÀÉÀ±ÀÀ೧೯೩೭.

೪೧. ಬಸವರಾಜ ಕಲ್ಗುಡಿ ನಕ್ಷೆ–ನಕ್ಷತ್ರ ಕನ್ನಡ ಸಂಘ ಕ್ರೈಸ್ಟ ಕಾಲೇಜು ಬೆಂಗಳೂರು – ೧೯೭೨.

೪೨. ಭಾಷಾ ವಿಜ್ಞಾನ ಪರಿಚಯ ಡಾ॥ ಕೆ. ಕೆಂಪೆಗೌಡ. ನವಭಾರತಿ ಪ್ರಕಾಶನ ಮೈಸೂರು ೨೦೦೫

೪೩. ಭಾರತದ ಹಳ್ಳಿಗಳು ಡಾ॥ ಹಿರೇಮಲ್ಲೂರು ಈಶ್ವರಂ ಮೈಸೂರು ವಿ.ವಿ ಪ್ರಸಾರಾಂಗ ಮೈಸೂರು–೧೯೭೨

೪೪. ಬೋರಲಿಂಗಯ್ಯ ಹಿ.ಚಿ. ಕರ್ನಾಟಕ ಜಾನಪದ ಕಲೆಗಳ ಕೋಶ. ಕ.ವಿ.ವಿ. ಹಂಪಿ ೧೯೯೬

೪೫. ಮಹಾರಾಷ್ಟ್ರ ಮೂಲ ಶಂ.ಬಾ. ಜೋಶಿ. ದ್ವಿತೀಯ ಅವೃತ್ತಿ ೧೯೮೮

೪೬. ಮಂಜುನಾಥ ಬೆವಿನಕಟ್ಟಿ ಕನ್ನಡ ಜನಪದ ನಂಬಿಕೆಗಳು, ಜ್ಯೋತಿ ಪ್ರಕಾಶನ ಮೈಸೂರು. ೨೦೦೭

೪೭. ಮವುಂಡಿ ಮಲ್ಲಾರಿ: ಕನ್ನಡ ನಾಡಿನ ಶಾಸನ ಕವಿಗಳು ದ್ವಿತೀಯ ಆವೃತ್ತಿ ಪ್ರತಿಭಾ ಗ್ರಂಥ ಮಾಲೆ ಧಾರವಾಡ–೧೯೭೮.

೪೮. ಮಾಳಿ ವ್ಹಿ.ಎಸ್. , ಅಥಣಿ ತಾಲೂಕು ಸಮಗ್ರ ದರ್ಶನ ವಿಮೋಚನಾ ಸಂಸ್ಥೆ ೨೦೦೭.

೪೯. ಮಾಧವ ಜೀವನ ದರ್ಶನ ಸಂಪಾದಕರು ಮಹಾಲಿಂಗ ಮಂಗಿ–೧೯೯೫

೫೦. ರಾಮಚಂದ್ರರಾವ ಎಸ್.ಕೆ.–ಮೂರ್ತಿಶಿಲ್ಪ ನೆಲೆ ಹಿನ್ನೆಲೆ ೧೯೭೫

೫೧. ರಾಮಚಂದ್ರನ ಎಸ್.ಕೆ. ಮೂರ್ತಿಶಿಲ್ಪ ನೆಲೆ ಹಿನ್ನೆಲೆ ಜ್ಞಾನ ಭಾರತಿ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು, ೧೯೭೭

೫೨. ರಾಮನಗರ : ಒಂದು ಸಾಂಸ್ಕೃತಿಕ ಅಧ್ಯಯನ ಡಾ॥ ಎ. ಸಿ. ಪಾರ್ಥ ಕನ್ನಡ ಅಧ್ಯಯನ ಕೇಂದ್ರ–ಬೆಂಗಳೂರು ೨೦೦೭

೫೩. ವಡ್ಡಾರಾಧನೆ, ಶಿವಕೋಟ್ಯಾಚಾರ್ಯ

೫೪. ವಿಲಾಸ ಕಾಂಬಳೆ, ಅಥಣಿ ಪ್ರದೇಶದ ಸಾಂಸ್ಕೃತಿಕ ಅಧ್ಯಯನ, ಎಂ.ಫಿಲ್. ಪ್ರಬಂಧ ಕರ್ನಾಟಕ ವಿರ್ಶವವಿದ್ಯಾಲಯ ಧಾರವಾಡ.

೫೫. ಶೇಷಶಾಸ್ತ್ರಿ ಆರ್. ಕರ್ನಾಟಕದ ವೀರಗಲ್ಲುಗಳು ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ೧೯೮೨

೫೬. ಸಂಶೋಧನಾ ತರಂಗ ಡಾ. ಎಂ. ಚಿದಾನಂದ ಮೂರ್ತಿ ೧೯೬೬

೫೭. ಹೀರೆಮಠ ಬಿ. ಆರ್. ಶಾಸನಗಳಲ್ಲಿ ಕರ್ನಾಟಕದ ವರ್ತಕರು. ಕನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೮೬.೨೧)

೫೮. ಹಿರೇಮಲ್ಲೂರು ಈಶ್ವರನ್ ಲಿಂಗಾಯತ ಧರ್ಮ, ಸಂಸ್ಕೃತಿ ಮತ್ತು ಸಮಾಜ ಮೈಸೂರು -೧೯೮೧.

೫೯. ಹಿರೇಮಠ ಆರ್. ಸಿ. ಮತ್ತು ಎಂ. ಎಂ. ಕಲಬುರ್ಗಿ - ಶಾಸನ ಸಂಪದ.

ಇಂಗ್ಲೀಷ ಕೃತಿಗಳು

1. Gopal B.R. The Chalukyas of Karnataka & Kalachuris Prasarang Karnataka Unviersity Dharwad 1981.
2. Katkar ishwar N. Art & Architecture of the Chaluykas of Kalyan Karnatak Dharwad 1982.
3. Leela S. Shantakumari, History of the Agrahar of Karnataka, Madras New Ear Publication. - 1986
4. Mujumdar R.C. and A.D. Pusalkear: The History and culture of India people.
5. Mainwright Archaeology & Place names and History : 1962.
6. Shanta Kumari: Agraharas in ancient Karnataka 1986.
7. Suryanath Kamat U. Belgaum District Gyastear Dodashree printers Bangalore-1987

ಕನ್ನಡದ ಪತ್ರಿಕೆಗಳು

೧) ಕನ್ನಡಸಾಹಿತ್ಯ ಪರಿಷತ್ ಪತ್ರಿಕೆ

೨) ಸಂಯುಕ್ತ ಕರ್ನಾಟಕ ೦೪-೦೨-೨೦೧೦

ಇಂಗ್ಲೀಷ ಪತ್ರಿಕೆಗಳು

1) Indian Antiquary (Journal of Oriental Research)

2) Journal of Indian History.

3) Journal of Karnataka University Humanities.

ಪಾರಿಭಾಷಿಕ ಪದಕೋಶ

ಐದೇಶಿ - ಮಲ್ಲಯ್ಯನ ಆಚರಣೆ

ಆಹೇರ - ಬಟ್ಟೆಬರೆ ಉಡುಗೊರೆ ಕೊಡುವುದು

ಮಂಗನಿ - ವಿವಾಹ ನಿಶ್ಚಯ

ನಿಖಾಹ - ವಿವಾಹ

ನಿಖಾಹ ದಫ್ತರ - ವಿವಾಹ ದಾಖಲೆ ಪುಸ್ತಕ

ಸಲಾಂ - ವಂದನೆ

ಬಿಚಾಣಾ ದಿಡಿ - ಹಾಸಿಗೆ ಒಂದೂವರೆ ಪಟ್ಟು

ಫಿರಾಣೆ ಪಟ್ಟಿ - ಹಣೆಪಟ್ಟಿ

ಪಿಂಜರಾ - ಮುಸ್ಲಿಂರ ಶವ ಪೆಟ್ಟಿಗೆ

ಖಬರಸ್ಥಾನ - ಮುಸ್ಲಿಂ ಸ್ಮಶಾನ

ದುವಾ - ಪ್ರಾರ್ಥನೆ

ಸಗೀರಾ ಗುನ್ಹಾ - ತಿಳಿಯದೆ ಮಾಡಿದ ತಪ್ಪು

ಕಬೀರಾ ಗುನ್ಹಾ - ತಿಳಿದು ಮಾಡಿದ ತಪ್ಪು

ರಾತಕಾ ಗುನ್ಹಾ - ರಾತ್ರಿ ಮಾಡಿದ ತಪ್ಪು

ಧೂಳಪಾದ - ಸ್ವಾಮಿಗಳ ಪಾದಪೂಜೆ ಮಾಡಿ ಸಂಗ್ರಹಿಸಿದ ತೀರ್ಥ

ರೋಜಾ - ಉಪವಾಸ

ಥಳಿ- ವಂಶ

ಹೋಳಿಗೆ – ಕಡಲೆ ಬೆಲ್ಲ ಕುದಿಸಿ ಅರೆದು ಗೋದಿಯ ಹಿಟ್ಟಿನಲ್ಲಿ ಮಾಡಿದ ಸಿಹಿ ಪದಾರ್ಥ
ಗಾಣದ ಎಣ್ಣೆ – ಅಡುಗೆಗೆ ಬಳಸುವ ಎಣ್ಣೆ
ಬಾಟಿ – ಜೋಳದ ಎಳೆಯ ದಂಟು
ದಡ್ಡಿ – ದನಕರು ಕಟ್ಟುವ ಸ್ಥಳ, ತಿಪ್ಪೆ ಎಸೆಯುವ ಸ್ಥಳ
ಗಿಲಾವ – ಸಿಮೆಂಟ್ ಸಣ್ಣ ಉಸುಕು ಮಿಶ್ರಣ ಮಾಡಿ ಕಲ್ಲಿ ಇಟ್ಟಿಗೆ ಗೋಡೆಗೆ ಸಮತಟ್ಟಾಗುವಂತೆ ಲೇಪಿಸುವುದು.
ಎಲೆ – ವಿಳೆದ ಎಲೆ
ಭಂಡಾರ – ಅರಿಶಿಣದ ಪುಡಿ
ಕುಬಸ – ಶ್ರೀಮಂತ
ಐದೆಸಿ – ಜನನದ ನಂತರ ಐದನೇ ದಿನದ ಆಚರಣೆ
ಹದಿಮೂರ ದೇಶಿ – ಹದಿಮೂರನೇ ದಿವಸ ನಾಮಕರಣ
ಗೂಟ – ದನಕಟ್ಟಲು ನೆಲದ ಆಳದಲ್ಲಿ ಹಾಕಿರುವ ಕಟ್ಟಿಗೆ
ಲೊಳ್ಳಾಗುದ್ದಿ – ದನ ಎಮ್ಮೆ ಗಳು ಓಡದಿರಲೆಂದು ಕೊರಳಲ್ಲಿ ಕಟ್ಟುವ ಕಟ್ಟಿಗೆ
ಮಳಾ – ನೀರಾವರಿ ತೋಟ ಮೊಳಕೈಯಿಂದ ತುದಿಗೈ ಅಳತೆ
ಹಮ್ಮಿಣಿ – ಪ್ರಾಚೀನ ಕಾಲದ ಹಣ ಇಟ್ಟುಕೊಳ್ಳುವ ಚೀಲ
ಇಮಾನ – ಹಿಂದೂ ಶವಒಯ್ಯುವ ಸಾಧನ
ಬಿರಾಡ – ತೆರಿಗೆ
ಉಡದಾರ – ಸೊಂಟದಲ್ಲಿ ಕಟ್ಟುವ ಆಭರಣ
ಕೆರುವ – ಚರ್ಮದಿಂದ ತಯಾರಿಸಿದ ದಪ್ಪದಾದ ಚಪ್ಪಲಿ ಇದಕ್ಕೆ ಕೆಳಗೆ ಕಬ್ಬಿಣ ಮಳೆಗಳನ್ನು ಬಡಿದಿರುತ್ತಾರೆ.
ಕೌದಿ – ಜನಪದರು ಕಸೂತಿ ಕಲೆಯಿಂದ ತಯಾರಿಸಿದ ಹೊದಿಕೆ ಅಥವಾ ಹಾಸಿಗೆ

ವಕ್ತೃಗಳ ವಿವರ

೧) ಶ್ರೀ ಪಿ.ಡಿ. ಬಡಿಗೇರ, ವಯಸ್ಸು–೫೦, ಜಾತಿ–ಹಿಂದೂ ಪಂಚಾಳ, ಸಾ॥ನಾಗಠಾಣ, ತಾ॥ಜಿ॥ ಬಿಜಾಪೂರ, ಗ್ರಾಮ ಲೆಕ್ಕಾಧಿಕಾರಿಗಳು, ಕೊಟ್ಟಲಗಿ

೨) ಶ್ರೀ ಟಿ.ಎ. ಪಾಟೀಲ, ವಯಸ್ಸು–೪೫, ಜಾತಿ–ಲಿಂಗಾಯತ, ಗ್ರಾಮ ಪಂಚಾಯತ ಸಹಾಯಕರು, ಗ್ರಾ.ಪಂ. ಕೊಟ್ಟಲಗಿ.

೩) ಶ್ರೀ ಸಿದರಾಯ ಸಿದ್ದಪ್ಪ ದೊಡ್ಡನಿಂಗಪ್ಪಗೋಳ, ವಯಸ್ಸು : ೮೫, ಉದ್ಯೋಗ: ವಿಶ್ರಾಂತಿ, ಜಾತಿ : ಲಿಂಗಾಯತ, ಸಾ॥ ಕೊಟ್ಟಲಗಿ.

೪) ಶ್ರೀಮತಿ ಬಾಗವ್ವ ಸಿ. ನಾಟೀಕಾರ, ವಯಸ್ಸು : ೬೦ ವರ್ಷ, ಜಾತಿ : ಬೇಡರ, ಸಾ॥ ಕೊಟ್ಟಲಗಿ.

೫) ಶ್ರೀ ಸಂಗಪ್ಪ ಬಡವಗೋಳ, ವಯಸ್ಸು : ೫೦ ವರ್ಷ, ಉದ್ಯೋಗ: ಒಕ್ಕಲುತನ, ಜಾತಿ : ಲಿಂಗಾಯತ, ಸಾ॥ ಕೊಟ್ಟಲಗಿ.

೬) ಶ್ರೀಮತಿ ಕಲಾವತಿ ಧರೆಪ್ಪ ಮಾಳಿ, ವಯಸ್ಸು : ೫೦ ವರ್ಷ, ಉದ್ಯೋಗ : ಮನೆಗೆಲಸ, ಜಾತಿ : ಹಿಂದೂ ಮಾಳಿ, ಸಾ॥ ಕೊಟ್ಟಲಗಿ.

೭) ಶ್ರೀ ಶಿವಲಿಂಗಪ್ಪ ಗಿರೆಪ್ಪ ಮಾಳಿ, ವಯಸ್ಸು : ೫೫, ಉದ್ಯೋಗ: ಒಕ್ಕಲುತನ, ಜಾತಿ: ಹಿಂದೂ ಮಾಳಿ, ವರ್ಷ, ಸಾ॥ ಕೊಟ್ಟಲಗಿ.

೮) ಶ್ರೀಮತಿ ಯಶೋಧಾ ಸಿದರಾಯಪ್ಪ ದೊಡ್ಡನಿಂಗಪ್ಪಗೋಳ, ವಯಸ್ಸು : ೭೫ ವರ್ಷ, ಜಾತಿ : ಹಿಂದೂ ಲಿಂಗಾಯತ, ಸಾ॥ ಕೊಟ್ಟಲಗಿ.

೯) ಶ್ರೀಮತಿ ದಾನವ್ವ ಮಲ್ಲಯ್ಯ ಮಂಗಿ, ವಯಸ್ಸು : ೬೦ ವರ್ಷ, ಉದ್ಯೋಗ: ಮನೆಗೆಲಸ, ಜಾತಿ : ಹಿಂದೂ ಲಿಂಗಾಯತ, ಸಾ॥ ಕೊಟ್ಟಲಗಿ,

೧೦) ಕುಮಾರಿ ಶ್ರೀದೇವಿ ನಾರಾಯಣ ಜತ್ತಿ, ವಯಸ್ಸು : ೧೮ ವರ್ಷ, ಜಾತಿ: ಹಿಂದೂ ಲಿಂಗಾಯತ, ಸಾ॥ ಕೊಟ್ಟಲಗಿ.

೧೧) ಶ್ರೀ ಸಂಗಯ್ಯ ಮ. ಮಂಗಿ, ವಯಸ್ಸು : ೩೬ ವರ್ಷ, ಉದ್ಯೋಗ : ಕಲಾವಿದರು, ಜಾತಿ : ಹಿಂದೂ ಲಿಂಗಾಯತ, ಸಾ॥ ಕೊಟ್ಟಲಗಿ.

೧೨) ಶ್ರೀ ಪರಸಪ್ಪ ಸಿದ್ದಪ್ಪ ಹಿರೇಕುರಬರ, ವಯಸ್ಸು : ೮೫ ವರ್ಷ, ಉದ್ಯೋಗ: ವಿಶ್ರಾಂತಿ, ಜಾತಿ : ಕುರುಬ, ಸಾ॥ ಕೊಟ್ಟಲಗಿ.

೧೩) ಶ್ರೀ ಸಾತಲಿಂಗಯ್ಯ ಮಠಪತಿ, ಉದ್ಯೋಗ: ಗ್ರಾ.ಸೇ.ಸ.ಸಂಘ, ಕಾರ್ಯದರ್ಶಿಗಳು, ಜಾತಿ: ಲಿಂಗಾಯತ ವಯಸ್ಸು : ೫೫ ವರ್ಷ, ಸಾ॥ ಕೊಟ್ಟಲಗಿ.

೧೪) ಶ್ರೀ ಕಲ್ಲಪ್ಪ ಶಿವಪ್ಪ ಮಾದರ, ವಯಸ್ಸು : ೫೦ ವರ್ಷ, ಉದ್ಯೋಗ : ಚಮ್ಮಾರಿಕ, ಸಾ॥ ಕೊಟ್ಟಲಗಿ.

೧೫) ಶ್ರೀ ಹಣಮಂತ ಕರಬಸಪ್ಪ ಕೊಟ್ಯಾಳ, ವಯಸ್ಸು : ೫೫ ವರ್ಷ, ಜಾತಿ : ಹಿಂದೂ ಲಿಂಗಾಯತ, ಉದ್ಯೋಗ : ಒಕ್ಕಲುತನ, ಸಾ॥ ಕೊಟ್ಟಲಗಿ.

೧೬) ಶ್ರೀ ಸತೀಶ ಶಾಂತಪ್ಪ ಉಪಾಸೆ, ವಯಸ್ಸು : ೪೦ ವರ್ಷ, ಉದ್ಯೋಗ: ವ್ಯಾಪಾರ, ಜಾತಿ : ಹಿಂದೂ ಬಣಜಿಗ, ಸಾ॥ ಕೊಟ್ಟಲಗಿ

೧೭) ಶ್ರೀ ಈಶ್ವರಾನಂದ ಸ್ವಾಮಿಗಳು, ಶಿವತ್ರಯಸಿದ್ಧಾಶ್ರಮ, ವಯಸ್ಸು : ೮೦, ಜಾತಿ– ಲಿಂಗಾಯತ, ವರ್ಷ, ಸಾ॥ ಕೊಟ್ಟಲಗಿ.

೧೮) ಶ್ರೀಮತಿ ಕಲಾವತಿ ಅರ್ಜುನ ಕೊಟ್ಯಾಳ, ವಯಸ್ಸು : ೮೦ ವರ್ಷ, ಉದ್ಯೋಗ: ವಿಶ್ರಾಂತಿ, ಸಾ॥ ಕೊಟ್ಟಲಗಿ.

೧೯) ಶ್ರೀ ಗುರಪ್ಪ ಸಿದ್ದಪ್ಪ ಈಶ್ವರಪ್ಪಗೋಳ, ವಯಸ್ಸು : ೪೦ ವರ್ಷ, ಉದ್ಯೋಗ: ಒಕ್ಕಲುತನ, ಜಾತಿ : ಹಿಂದೂ ಲಿಂಗಾಯತ, ಸಾ॥ ಕೊಟ್ಟಲಗಿ.

೨೦) ಶ್ರೀ ಆನಂದ ಸಿದರಾಯ ಮಾಳಿ, ವಯಸ್ಸು : ೩೫ ವರ್ಷ, ಉದ್ಯೋಗ: ಪ್ರಾ. ಶಾಲಾ ಶಿಕ್ಷಕರು, ಸಾ॥ ಕೊಟ್ಟಲಗಿ.

೨೧) ಶ್ರೀ ಭೀಮಸಿಂಗ ಹಣಮಂತಸಿಂಗ ರಜಪೂತ, ವಯಸ್ಸು : ೬೪, ಜಾತಿ: ರಜಪೂತ, ಉದ್ಯೋಗ : ಒಕ್ಕಲುತನ, ಸಾ॥ ಕೊಟ್ಟಲಗಿ.

೨೨) ಶ್ರೀ ನಿಂಗಪ್ಪ ಚನಬಸು ಹಿರಗೊಂಡ, ವಯಸ್ಸು : ೫೨ ವರ್ಷ, ಜಾತಿ : ಆದಿ ಬಣಜಿಗ, ಸಾ॥ ರಾವಳಗುಂಡವಾಡಿ, ತಾ॥ ಜತ್ತ, ಜಿ॥ ಸಾಂಗಲಿ (ಮಹಾರಾಷ್ಟ್ರ)

೨೩) ಶ್ರೀ ಬಸವರಾಜ ಮಾನಪ್ಪ ಸುತಾರ, ವಯಸ್ಸು ; ೪೦ ವರ್ಷ, ಸಾ॥ ರಾವಳಗುಂಡವಾಡಿ, ತಾ॥ ಜತ್ತ, ಜಿ॥ ಸಾಂಗಲಿ (ಮಹಾರಾಷ್ಟ್ರ)

೨೪) ಶ್ರೀ ಶಮಸುದ್ದಿನ ಇಬ್ರಾಹಿಂ ಮುಲ್ಲಾ, ವಯಸ್ಸು : ೪೨ ವರ್ಷ, ಉದ್ಯೋಗ: ಪ್ರಾಥಮಿಕ ಶಾಲಾ ಶಿಕ್ಷಕರು, ಜಾತಿ: ಮುಸ್ಲಿಂ, ಸಾ॥ ಕೊಟ್ಟಲಗಿ.

೨೫) ಶ್ರೀ ಆನಂದ ಸಿದರಾಯ ಮಾಳಿ, (ಆದರ್ಶ ಶಿಕ್ಷಕ ಪುರಸ್ಕಾರ) ವಯಸ್ಸು: ೪೦ ವರ್ಷ, ಜಾತಿ : ಹಿಂದೂ ಮಾಳಿ, ಸಾ॥ ಕೊಟ್ಟಲಗಿ.

೨೬) ಶ್ರೀಮತಿ ಕಸ್ತೂರಿ ಅರ್ಜುನ ಬಸನಕ್ಕಿ, ವಯಸ್ಸು : ೪೦ ವರ್ಷ, ಉದ್ಯೋಗ: ಮನೆಗೆಲಸ, ಸಾ॥ ಕೊಟ್ಟಲಗಿ.

೨೭) ಶ್ರೀ ಹಣಮಂತ ಮಹಾದೇವ ಕಂಬಾರ, ವಯಸ್ಸು : ೩೯ ವರ್ಷ, ಸಾ॥ ಕೊಟ್ಟಲಗಿ.

೨೮) ಶ್ರೀ ಸಿದ್ರಾಮ ರಾಚಯ್ಯ ಮಂಗಿ, ವಯಸ್ಸು : ೭೦ ವರ್ಷ, ಉದ್ಯೋಗ: ವಿಶ್ರಾಂತಿ, ಸಾ॥ ಕೊಟ್ಟಲಗಿ.

೨೯) ಶ್ರೀ ದಾನಪ್ಪ ಪವಾಡೆಪ್ಪ ಸಿಂಧೂರ, ವಯಸ್ಸು : ೭೫ ವರ್ಷ, ಉದ್ಯೋಗ: ವಿಶ್ರಾಂತಿ, ಸಾ॥ ಕೊಟ್ಟಲಗಿ.

೩೦) ಶ್ರೀ ಸದಾಶಿವ ಹಣಮಂತ ಸಿಂಧೂರ, ವಯಸ್ಸು : ೫೦ ವರ್ಷ, ಉದ್ಯೋಗ: ಒಕ್ಕಲುತನ, ಜಾತಿ : ಬೇಡರ, ಸಾ॥ ಕೊಟ್ಟಲಗಿ.

೩೧) ಶ್ರೀ ಸದಾನಂದ ಸ್ವಾಮಿಗಳು, ಬಳ್ಳಾರಿ ವಯಸ್ಸು : ೬೪ ವರ್ಷ, ಸಾ॥ ಕೊಟ್ಟಲಗಿ.

೩೨) ಶ್ರೀ ಹುಸೇನ ಅಬ್ದುಲ್ ಸನದಿ, ಜಾತಿ : ಮುಸ್ಲಿಂ ಶೇಖ, ವಯಸ್ಸು : ೭೨ ವರ್ಷ, ಉದ್ಯೋಗ : ಒಕ್ಕಲುತನ, ಸಾ॥ ಕೊಟ್ಟಲಗಿ.

೩೩) ಶ್ರೀ ರಾಯಪ್ಪ ಬಸಗೊಂಡ ಬನ್ನೂರ (ಪೂಜಾರಿ) ವಯಸ್ಸು : ೬೫ ವರ್ಷ, ಉದ್ಯೋಗ : ಪೂಜಾರಿ, ಸಾ॥ ಕೊಟ್ಟಲಗಿ.

೩೪) ಶ್ರೀ ದಶರಥರಾಜ ನಿಂಗಪ್ಪ ಗರಸಂಗಿ, ವಯಸ್ಸು : ೪೫ ವರ್ಷ, ಉದ್ಯೋಗ: ಪ್ರಾ. ಶಾಲಾ ಶಿಕ್ಷಕರು, ಬಸನವ ಬಾಗೇವಾಡಿ, ಸಾ॥ ಗಣಿ, ತಾ॥ ಬಸವನ ಬಾಗೇವಾಡಿ.

೩೫) ಶ್ರೀ ರಾಮಗೊಂಡ ಶಿವಗೊಂಡ ಬ್ಯಾಳಿ, ವಯಸ್ಸು : ೪೧ ವರ್ಷ, ಉದ್ಯೋಗ: ಒಕ್ಕಲುತನ, ಜಾತಿ : ಹಿಂದೂ ಲಿಂಗಾಯತ, ಸಾ॥ ಕನಮಡಿ ಗ್ರಾಮದ ತೋಟ.

೩೬) ಕು. ಸುನಂದಾ ಸಂಗಪ್ಪ ಬಸವಗೋಳ, ವಯಸ್ಸು : ೧೬ ವರ್ಷ, ಉದ್ಯೋಗ: ವಿದ್ಯಾರ್ಥಿ, ಸಾ॥ ಕೊಟ್ಟಲಗಿ.

೩೭) ಕು. ಭಾಗ್ಯಶ್ರೀ ಭೀಮಪ್ಪ ಅಥಣಿ, ವಯಸ್ಸು : ೧೬ ವರ್ಷ, ಉದ್ಯೋಗ: ವಿದ್ಯಾರ್ಥಿ, ಸಾ॥ ಕೊಟ್ಟಲಗಿ.

೩೮) ಶ್ರೀ ಲಕ್ಷ್ಮೀಬಾಯಿ ಜೋಗಿ, ವಯಸ್ಸು : ೫೦ ವರ್ಷ, ಜಾತಿ : ಕುರುಬ, ಸಾ॥ ಕೊಟ್ಟಲಗಿ.

೩೯) ಶ್ರೀ ಸಿದ್ದಪ್ಪ ಬಾಳಪ್ಪ ಕುಂಬಾರ, ವಯಸ್ಸು : ೮೫ ವರ್ಷ, ಉದ್ಯೋಗ: ಕುಂಬಾರಿಕೆ, ಸಾ॥ ಕೊಟ್ಟಲಗಿ.

೪೦) ಶ್ರೀ ಗಿರಮಲ್ಲಪ್ಪ ಶಿ. ಬಡವಗೋಳ, ವಯಸ್ಸು : ೮೦ ವರ್ಷ, ಉದ್ಯೋಗ: ವಿಶ್ರಾಂತಿ, ಗ್ರಾಮ ಪ್ರಮುಖರು, ಜಾತಿ : ಹಿಂದೂ ಲಿಂಗಾಯತ, ಸಾ॥ ಕೊಟ್ಟಲಗಿ.

೪೧) ಶ್ರೀ ಶಿವಪ್ಪ ಷಣ್ಮುಖಪ್ಪ ಆಜೂರ, ವಯಸ್ಸು : ೫೮ ವರ್ಷ, ಉದ್ಯೋಗ: ಕಲಾವಿದ, ಸಾ॥ ಕೊಟ್ಟಲಗಿ.

೪೨) ಶ್ರೀ ಸೋಮನಿಂಗ ಬಾಳಪ್ಪ ಕಟ್ಟಿಮನಿ, ವಯಸ್ಸು : ೫೮ ವರ್ಷ, ಉದ್ಯೋಗ: ಒಕ್ಕಲುತನ, ಸಾ॥ ಕೊಟ್ಟಲಗಿ.

೪೩) ಶ್ರೀ ಗುರುಪಾದ ಉಮಣ್ಣ ಗುರವ, ವಯಸ್ಸು : ೬೦ ವರ್ಷ, ಉದ್ಯೋಗ: ಹಣಮಂತದೇವರ ಪೂಜಾರಿ, ಸಾ॥ ಕೊಟ್ಟಲಗಿ.

೪೪) ಶ್ರೀ ರಾಯಪ್ಪ ಬಸಗೊಂಡ ಬನ್ನೂರ, ವಯಸ್ಸು : ೬೫ ವರ್ಷ, ಉದ್ಯೋಗ: ಪೂಜಾರಿ, ಸಾ॥ ಕೊಟ್ಟಲಗಿ.

೪೫) ಶ್ರೀ ಶ್ರೀಶೈಲ ಕಲ್ಲಯ್ಯ ಮಠಪತಿ, ವಯಸ್ಸು : ೬೫ ವರ್ಷ, ಉದ್ಯೋಗ: ಒಕ್ಕಲುತನ, ಸಾ॥ ಕೊಟ್ಟಲಗಿ.

೪೬) ಶ್ರೀ ರ‍್ಯಾವಯ್ಯ ಬಸಯ್ಯ ಅಚಕನಳ್ಳಿ, ವಯಸ್ಸು : ೬೦ ವರ್ಷ, ಉದ್ಯೋಗ: ಒಕ್ಕಲುತನ, ಸಾ॥ ಕೊಟ್ಟಲಗಿ.

೪೭) ಶ್ರೀ ಇಮಾಮಸಾಬ ಮೌಲಾಸಾಬ ನದಾಫ, ವಯಸ್ಸು : ೮೧ ವರ್ಷ, ಜಾತಿ: ಪಿಂಜಾರ, ಸಾ॥ ಕೊಟ್ಟಲಗಿ.

೪೮) ಶ್ರೀ ಸಿದ್ದಪ್ಪ ಬಾಳಪ್ಪ ಕುಂಬಾರ, ವಯಸ್ಸು : ೮೫ ವರ್ಷ, ಉದ್ಯೋಗ: ಕುಂಬಾರಿಕೆ, ಸಾ॥ ಕೊಟ್ಟಲಗಿ.

೪೯) ಶ್ರೀ ವಜೀರ ಹುಸೇನ ಕೊಕಟನೂರ, ವಯಸ್ಸು : ೪೦ ವರ್ಷ, ಜಾತಿ : ಶೇಖ, ಸಾ॥ ಕೊಟ್ಟಲಗಿ.

೫೦) ಶ್ರೀ ಬಸಪ್ಪ ಶಿವಬಸು ಸಿಂಧೂರ, (ಕಾಡೇಸಿ) ವಯಸ್ಸು : ೩೦ ವರ್ಷ, ಉದ್ಯೋಗ : ಒಕ್ಕಲುತನ, ಸಾ॥ ಕೊಟ್ಟಲಗಿ.

೫೧) ಶ್ರೀ ಮಹೇಶ ಶಂಕ್ರಪ್ಪ ಬಂಡರಗೋಟಿ, ವಯಸ್ಸು : ೩೦ ವರ್ಷ, ಉದ್ಯೋಗ: ಪ್ರಾಥಮಿಕ ಶಾಲೆ, ಶಿಕ್ಷಕರು, ಸಾ॥ ಕೊಟ್ಟಲಗಿ.

೫೨) ಶ್ರೀ ಬೌರಮ್ಮ ಕೊಟ್ಟಲಗಿ, ವಯಸ್ಸು : ೫೫ ವರ್ಷ, ಉದ್ಯೋಗ : ಗಿಗೀ ಹಾಡು ಕಲಾವಿದರು, ಸಾ॥ ಕೊಟ್ಟಲಗಿ.

೫೩) ಶ್ರೀ ಮಲ್ಲಪ್ಪ ಸಿದಗೊಂಡ ಮುಡೆಪ್ಪಗೋಳ, ವಯಸ್ಸು : ೪೮ ವರ್ಷ, ಜಾತಿ: ಲಿಂಗಾಯತ, ಉದ್ಯೋಗ : ಕಲಾವಿದರು, ಸಾ॥ ಕೊಟ್ಟಲಗಿ.

೫೪) ಶ್ರೀ ಧರೆಪ್ಪ ಮಾನಪ್ಪ ಬಡಿಗೇರ, ವಯಸ್ಸು : ೫೦ ವರ್ಷ, ಉದ್ಯೋಗ: ಬಡಿಗತನ, ಸಾ॥ ಕೊಟ್ಟಲಗಿ.

೫೫) ಶ್ರೀ ರಾಜು ರಾಮಚಂದ್ರ ಭಜಂತ್ರಿ, ವಯಸ್ಸು : ೮೫ ವರ್ಷ, ಉದ್ಯೋಗ: ಶಹನಾಯಿವಾದಕ, ಜಾತಿ : ಕೊರವ, ಸಾ॥ ಕೊಟ್ಟಲಗಿ.

೫೬) ಶ್ರೀಮತಿ ಜಕ್ಕವ್ವ ಹಣಮಂತ ಭಜಂತ್ರಿ, ವಯಸ್ಸು : ೮೦ ವರ್ಷ, ಉದ್ಯೋಗ: ವಿಶ್ರಾಂತಿ, ಜಾತಿ : ಕೊರವ, ಸಾ॥ ಕೊಟ್ಟಲಗಿ.

೫೭) ಶ್ರೀ ವಿಶ್ವನಾಥ ಶಿವಪ್ಪ ಗಣಿ, ಉದ್ಯೋಗ : ಕೃಷಿ, ಗ್ರಾಮದ ಗಣ್ಯವ್ಯಕ್ತಿ, ವಯಸ್ಸು : ೫೫ ವರ್ಷ,

ಸಾ॥ ಕೊಟ್ಟಲಗಿ.

೫೮) ಶ್ರೀ ಸಿದರಾಯ ಈರಪ್ಪ ಯಲಡಗಿ, ವಯಸ್ಸು : ೫೦ ವರ್ಷ, ಉದ್ಯೋಗ: ಒಕ್ಕಲುತನ ಹಾಗೂ ವ್ಯಾಪಾರ, ಗ್ರಾಮದ ಗಣ್ಯರು, ಸಾ॥ ಕೊಟ್ಟಲಗಿ.

೫೯) ಶ್ರೀ ಪೀರಗೊಂಡ ಬ್ಯಾಳಿ, ವಯಸ್ಸು : ೫೮ ವರ್ಷ, ಉದ್ಯೋಗ : ಒಕ್ಕಲುತನ, ಗ್ರಾಮ ಪ್ರಮುಖರು, ಜಾತಿ :ಲಿಂಗಾಯತ, ಸಾ॥ ಕೊಟ್ಟಲಗಿ.

೬೦) ಶ್ರೀ ಶಿವಬಸು ನಾಗಪ್ಪ ಸಿಂಧೂರ, ವಯಸ್ಸು : ೬೦ ವರ್ಷ್, ಜಾತಿ : ಲಿಂಗಾಯತ, ಉದ್ಯೋಗ : ಒಕ್ಕಲುತನ, ಸಾ॥ ಕೊಟ್ಟಲಗಿ.

೬೧) ಶ್ರೀ ಇಲಾಹಿ ಚಾಂದಸಾಬ ಕೊಕಟನೂರ, ವಯಸ್ಸು : ೩೬ ವರ್ಷ, ಉದ್ಯೋಗ : ಪ್ರಾ. ಶಾಲಾ ಶಿಕ್ಷಕರು, ಜಾತಿ: ಮುಸ್ಲಿಂ, ಸಾ॥ ಕೊಟ್ಟಲಗಿ.

೬೨) ಶ್ರೀ ಮಲಗೌಡಾ ಈರಗೌಡಾ ಪಾಟೀಲ, ವಯಸ್ಸು : ೩೬ ವರ್ಷ, ಉದ್ಯೋಗ: ಇಂಜೀನಿಯರ್, ಜಾತಿ: ಲಿಂಗಾಯತ, ಸಾ॥ ಕೊಟ್ಟಲಗಿ

೬೩) ಶ್ರೀ ಅಣ್ಣಾಸಾಬ ಸಿದಗೌಡಾ ಬಿರಾದಾರ, ವಯಸ್ಸು : ೩೬ ವರ್ಷ, ಉದ್ಯೋಗ: ಒಕ್ಕಲುತನ, ಜಾತಿ: ಲಿಂಗಾಯತ, ಸಾ॥ ಕೊಟ್ಟಲಗಿ.

೬೪) ಶ್ರೀ ಸೋಮನಾಥ ಸತ್ತೆಪ್ಪಾ ತೇಲಿ, ವಯಸ್ಸು : ೩೬. ಉದ್ಯೋಗ : ಪ್ರಾಥಮಿಕ ಶಾಲಾ ಶಿಕ್ಷಕ, ಜಾತಿ: ಹಿಂದೂ ಗಾಣಿಗ, ಸಾ॥ ಕೊಟ್ಟಲಗಿ.

೬೫) ಶ್ರೀ ಬಸವರಾಜ ಸಿ. ತಾಂವಂಶಿ, ವಯಸ್ಸು : ೪೩, ಉದ್ಯೋಗ : ಪ್ರಾಥಮಿಕ ಶಾಲಾ ಶಿಕ್ಷಕ, ಜಾತಿ: ಲಿಂಗಾಯತ, ಸಾ॥ ಕೊಟ್ಟಲಗಿ.

೬೬) ಶ್ರೀ ಮಹಾದೇವ ಕರೆಪ್ಪಗೋಳ ವಯಸ್ಸು: ೪೫, ಉದ್ಯೋಗ: ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು, ಜಾತಿ: ಲಿಂಗಾಯತ, ಸಾ॥ ಕೊಟ್ಟಲಗಿ.

೬೭) ಶ್ರೀ ಅಶೋಕ ಜಾಲವಾದಿ ವಯಸ್ಸು: ೪೫, ಉದ್ಯೋಗ: ಪ್ರಾಥಮಿಕ ಶಾಲಾ ಶಿಕ್ಷಕ, ಜಾತಿ: ಹಿಂದೂ ಶಿವಸಿಂಪಿ, ಸಾ॥ ಕೊಟ್ಟಲಗಿ.

೬೮) ಶ್ರೀ ಗಂಗಾರಾಮ ಬಿಸನಕ್ಕಿ ವಯಸ್ಸು: ೬೫, ಉದ್ಯೋಗ: ವಿಶ್ರಾಂತಿ, ಜಾತಿ: ಹಿಂದೂ ಬೇಡರ, ಸಾ॥ ಕೊಟ್ಟಲಗಿ.




ಪ್ರಾಚೀನ ಪವಾಡ ಸಿದ್ದ ದೇವಾಲಯ



ಬಟಗೂರ ದುರ್ಗವ್ವ ದೇವಾಲಯ



ದುರ್ಗಾದೇವಿ ದೇವಾಲಯ (ಮಾದರ ಓಣಿ)



ವಿಠ್ಠಲ ಸಿಂಗ ಮಹಾರಾಜರ ದೇವಾಲಯ (ಮನಮಿ ಮುತ್ಯಾ)



ಹನುಮಂತ ದೇವರ ದೇವಾಲಯ



ಭರಮದೇವರ ದೇವಾಲಯ



ವಾಡೆದ ಲಕ್ಷ್ಮೀ ದೇವಾಲಯ



ಮಲ್ಲಿಕಾರ್ಜುನ ದೇವಸ್ಥಾನ.



ಹಿರೇಮಸೂತಿ, ಕೊಟ್ಟಲಗಿ.



ಹಾಜಿ ಮಸ್ತಾನ ದರ್ಗಾ



ಹೊಸ ಮಸೀದಿ ಕಟ್ಟಡ



ಊರಿನ ಎಲ್ಲಮ್ಮ ದೇವಾಲಯ



ಕಲಾಲಿಂಗ ದೇವಸ್ಥಾನದ ಹೊಸ್ತಿಲು



ಕೋಟಲಿಂಗ ದೇವಾಲಯ



ಕಲಾಲಿಂಗ ದೇವಾಲಯ



ಕಲಾಲಿಂಗ ದೇವಾಲಯದ ಕಲಾತ್ಮಕ ಬಾಗಿಲು



ಮುದ್ದಮ್ಮಾದೇವಿ ದೇವಸ್ಥಾನ, ಕೊಟ್ಟಲಗಿ.



ಶ್ರೀ ಬಸವಾರೂಢ ದೇವಾಲಯ



ವಿಠ್ಠಲ ಸಿಂಗ ದೇವಾಲಯದ ಪಾರ್ಶ್ವ ಭಾಗ



ಕಲಾಲಿಂಗ ದೇವಾಲಯದಲ್ಲಿರುವ ಶಿವಲಿಂಗ



ಜ್ಯೋತಿರ್ಲಿಂಗ ದೇವಾಲಯ, ಹೂತೋಟ ಕೊಟ್ಟಲಗಿ.



ಕವಟಗಿ ಮುತ್ಯಾ ದೇವಸ್ಥಾನ ಹಾಗೂ
ಹಿಂಭಾಗದಲ್ಲಿ ಕಲಾಲಿಂಗ ದೇವಾಲಯ



ಸಿದ್ದೇಶ್ವರ ದೇವಾಲಯದಲ್ಲಿರುವ
ಕಲ್ಯಾಣ ಚಾಲುಕ್ಯರ ಕಾಲದ ಭಿತ್ತಿ ಚಿತ್ರ.




ಕಲ್ಯಾಣಿ ಚಾಲುಕ್ಯರ ಕಾಲದ ವೀರಗಲ್ಲುಗಳು.




ಕಲ್ಯಾಣಿ ಚಾಲುಕ್ಯರ ಕಾಲದ ದಾನ ಶಾಸನಗಳು.



ಸಿದ್ದೇಶ್ವರ ದೇವಾಲಯದ ಪಾರ್ಶ್ವ ಭಾಗ.



ಕೋಟಲಿಂಗದೇವಾಲಯದಲ್ಲಿರುವ ಶಿವಲಿಂಗ.



ನಡು ಊರಿನ ಲಕ್ಷ್ಮೀ ದೇವಾಲಯ




ವಿಠ್ಠರಾಯ ದೇವಸ್ಥಾನದ ಮಂಟಪ




ಸಿದ್ದೇಶ್ವರ ದೇವಾಲಯ ಕಂಬದ ಮೇಲಿರುವ ಉಬ್ಬು ಶಿಲ್ಪಗಳು




ರಾಮತೀರ್ಥದ ರಾಮೇಶ್ವರ ದೇವಾಲಯ ಹಾಗೂ ದೀಪ ಸ್ತಂಭ

ಕೊಟ್ಟಲಗಿ ಶ್ರೀ ಸಿದ್ದೇಶ್ವರ ದೇವಾಲಯದಲ್ಲಿ ಬಾಳೆ ಹಣ್ಣುಗಳಿಂದ ಶೃಂಗರಿಸಿದ ದೃಶ್ಯ ಹಾಗೂ ನಾಗಶಿಲ್ಪ.



ಶ್ರೀ ವಿಠ್ಠರಾಯ ದೇವಸ್ಥಾನ



ಕೋಟಲಿಂಗ ದೇವಸ್ಥಾನದಲ್ಲಿರುವ ನಂದಿ ವಿಗ್ರಹ.




ಸಿದ್ದೇಶ್ವರ ದೇವಾಲಯದ ಶಿಖರ ಹಾಗೂ ಹಬ್ಬದ ಸಂದರ್ಭದಲ್ಲಿ ಶೃಂಗರಿಸಿದ ದೃಶ್ಯ.




ಕಲಾಲಿಂಗ ದೇವಾಲಯದ
ನಂದಿ ವಿಗ್ರಹ.



ಕೊಟ್ಟಲಗಿ-ಉಮರಾಣಿ
ಸೀಮೆಯಲ್ಲಿನ ದಾನ ಶಾಸನಗಳು.



ಶ್ರೀ ಸಿದ್ದಾರೂಢ ದೇವಾಲಯ



ಶ್ರೀ ಕಲಾಲಿಂಗ ದೇವಾಲಯ



ಜ್ಯೋತಿರ್ಲಿಂಗ ದೇವಾಲಯದ
ನಂದಿ ವಿಗ್ರಹ ಹಾಗೂ ಶಿವಲಿಂಗ



ಕೋಟಲಿಂಗ ದೇವಾಲಯದಲ್ಲಿನ
ನಾಗ ಶಿಲ್ಪ.





ಸಿದ್ದೇಶ್ವರ ದೇವಾಲಯದಲ್ಲಿನ
ಪ್ರವೇಶ ದ್ವಾರ ಮಂಟಪದ ಕಂಬಗಳು.



ಸಿದ್ದೇಶ್ವರ ದೇವಾಲಯದ
ಹೊರಾಂಗಣದಲ್ಲಿ ಮೂರ್ತಿ ಶಿಲ್ಪ



ಪ್ರಾಚೀನ ಕಾಲದ
ಶಿಲ್ಪಕಲೆಯ ಅವಶೇಷಗಳು.







ಸಿದ್ದೇಶ್ವರ ದೇವಾಲಯದ ದೀಪ ಸ್ತಂಭದ ವಿಹಂಗಮ ನೋಟ.




ಸಿದ್ದೇಶ್ವರ ದೇವಾಲಯದಲ್ಲಿರುವ
ಗಣಪತಿ ವಿಗ್ರಹ.




ಸಿದ್ದೇಶ್ವರ ದೇವಾಲಯದ
ಪಾರ್ಶ್ವ ನೋಟ.





ಸಿದ್ದೇಶ್ವರ ದೇವಾಲಯದಲ್ಲಿರುವ ಕಂಬಗಳ ಮೇಲಿನ
ಉಬ್ಬುಶಿಲ್ಪಗಳು.






ಸಿದೇಶ್ವರ ದೇವಾಲಯದ ಉಬ್ಬು ಶಿಲ್ಪ ಹಾಗೂ
ಮುಖ ಮಂಟಪ ಮೇಲ್ಭಾಗದ ಶಿಲ್ಪ ಕಲೆ ನೋಟ.




ಹಿರೋಡೇಶ್ವರ ದೇವಾಲಯ



ದುರ್ಗಾದೇವಿ ದೇವಾಲಯ (ಕೋರವರ ಓಣಿ)



ಸಿದ್ದೇಶ್ವರ ದೇವಾಲಯದ
ಉಬ್ಬು ಶಿಲ್ಪ.




ಕೋಟಲಿಂಗ
ದೇವಾಲಯದಲ್ಲಿರುವ ಶಿವಲಿಂಗ.





ಸಿದ್ದೇಶ್ವರ ದೇವಾಲಯದಲ್ಲಿ
ನಾಗರ ಪಂಚಮಿಯ ದಿನ ಶೃಂಗರಿಸಿದ ನಾಗಶಿಲ್ಪ.



ಶ್ರಾವಣ ಮಾಸದಲ್ಲಿ ಹೊಳೆಗೆ
ಹೊಗುತ್ತಿರುವ ಸಿದ್ದೇಶ್ವರ ಉತ್ಸವ ಮೂರ್ತಿ.



ಅಗಸ್ಟ್ 15 ರಂದು ದೇಶ ಭಕ್ತರ
ವೇಷದಲ್ಲಿ ಗ್ರಾಮದ ಮಕ್ಕಳು.





ಸಿದ್ದೇಶ್ವರ ದೇವಾಲಯದಲ್ಲಿ ಪೂಜಾರಿಗಳು
ಹಬ್ಬದ ದಿನಗಳಂದು ಅಭಿಷೇಕ ವಿತರಿಸುತ್ತಿರುವ ದೃಶ್ಯ.



ಸಿದೇಶ್ವರ ದೇವಾಲಯದಲ್ಲಿ
ತೆಂಗು ಒಡೆಯುತ್ತಿರುವ ದೃಶ್ಯ.



ಕೃಷ್ಣಾ ನದಿಯಿಂದ ಸಿದ್ದೇಶ್ವರ
ಅಭಿಷೇಕಕ್ಕೆ ತೀರ್ಥ ತರುತ್ತಿರುವ ದೃಶ್ಯ.



ಸಾಕ್ಷರ ಭಾರತ ಕಾರ್ಯಕ್ರಮದಲ್ಲಿ ಗ್ರಾಮದ ಗಣ್ಯರು.



ಡಾ|| ಬಿ. ಆರ್. ಅಂಬೇಡ್ಕರ್ ಭವನ, ಕೊಟ್ಟಲಗಿ.



ಸರಕಾರಿ ಪ್ರೌಢ ಶಾಲೆ, ಕೊಟ್ಟಲಗಿ.



ಸರಕಾರಿ ಆಯುರ್ವೇದ ಆಸ್ಪತ್ರೆ, ಕೊಟ್ಟಲಗಿ.



ಊರಿನ ವಿಠ್ಠಲ ಮಂದಿರ. (ಬೀರದೇವರ)



ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಬಸವಾರೂಢ ಶಾಲೆಯ ಶಿಕ್ಷಕರು ಹಾಗೂ ಮಕ್ಕಳು.





ಸಾಕ್ಷರ ಭಾರತ ಕಾರ್ಯಕ್ರಮದಲ್ಲಿ ಕಲಾ ತಂಡದವರು ನಾಟಕ ಕಾರ್ಯಕ್ರಮ ನೀಡುತ್ತಿರುವುದು.



ರಾಷ್ಟ್ರೀಯ ದಿನಾಚರಣೆಯಲ್ಲಿ ಗ್ರಾಮದ ಶಾಲೆಯ ಮಕ್ಕಳು.



ಸಾಕ್ಷರ ಭಾರತ ಪ್ರೇರಕರ ತರಬೇತಿ ಕಾರ್ಯಕ್ರಮ.



ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೊಟ್ಟಲಗಿ.



ಮಹಿಳಾ ಸಂಘದ ಸದಸ್ಯರು
ವಾರದ ಸಮಾಲೋಚನೆ ಸಭೆಯಲ್ಲಿ ತೊಡಗಿರುವುದು.



ಗ್ರಾಮ ಪಂಚಾಯತ ಕಾರ್ಯಾಲಯ, ಕೊಟ್ಟಲಗಿ.



ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ; ಕೊಟ್ಟಲಗಿ.




ಶ್ರಾವಣ ಮಾಸದದಲ್ಲಿ ನಡೆಯುತ್ತಿರುವ
ಪ್ರವಚನ ಕಾರ್ಯಕ್ರಮ.



ಶ್ರಾವಣ ಮಾಸದಲ್ಲಿ ಪ್ರಸಾದ ಮಾಡುತ್ತಿರುವ ಭಕ್ತಾದಿಗಳ ದೃಶ್ಯ



ವಿವಾಹದಲ್ಲಿ ನವ-ದಂಪತಿಗಳು.



ಮಾಂಗಲ್ಯಧಾರಣ ಮಾಡುತ್ತಿರುವ ದೃಶ್ಯ.





ವಧು-ವರರು ಅಕ್ಷತೆಯ ನಂತರ ತಂದೆ-ತಾಯಿ ಹಾಗೂ ಅಜ್ಜ-ಅಜ್ಜಿಯರಿಂದ ಆಶೀರ್ವಾದ ಪಡೆಯುತ್ತಿರುವ ದೃಶ್ಯ.




ಕಾಮಗಾರಿ ಆರಂಭಕ್ಕೆ ಮುನ್ನ ಪೂಜೆ ಸಲ್ಲಿಸುತ್ತಿರುವ ದೃಶ್ಯ.



ಶಿವತ್ರಯ ಸಿದ್ದಾಶ್ರಮದಲ್ಲಿ ಪ್ರವಚನ ಕಾರ್ಯಕ್ರಮ.



ಗ್ರಾಮದ ಚಾವಡಿಯಲ್ಲಿ ಗಣ್ಯರು ಹಾಗೂ ಗ್ರಾಮಸ್ಥರು ಸಮಾಲೋಚನೆ ಸಭೆಯಲ್ಲಿ ತೊಡಗಿರುವುದು.



ಸಾಕ್ಷರತೆಯ ಮಹತ್ವ ಬಿಂಬಿಸುವ ಪ್ರಕಟಣಾ ಫಲಕ.



ಗ್ರಾಮದ ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ
ನೆರೆದಿರುವ ಅಪಾರ ಜನಸ್ತೋಮ.



ಶ್ರೀ ಬಸವಾರೂಢ ಹಿರಿಯ ಪ್ರಾಥಮಿಕ ಶಾಲೆ



ಗ್ರಾಮದ ಪುರುಷ ಹಾಗೂ ಮಹಿಳಾ ಸಂಘದ ಸದಸ್ಯರು
ರಾಳೆಗಣಸಿದ್ಧಿಯಲ್ಲಿ ಪ್ರವಾಸದಲ್ಲಿರುವುದು.



ಹನುಮಾನ ಜಯಂತಿಯ ಪೂಜಾ ಸಂದರ್ಭದಲ್ಲಿ






ತೋಟಗಾರಿಕಾ ಸಸ್ಯಗಳ ತಯಾರಿಕಾ ಘಟಕವನ್ನು ಪ್ರವಾಸದ ಸಂದರ್ಭದಲ್ಲಿ ವೀಕ್ಷಿಸುತ್ತಿರುವ ಗ್ರಾಮದ ರೈತರು.



ಸಾಕ್ಷರ ಭಾರತ ಕಾರ್ಯಕ್ರಮದಲ್ಲಿ
ಶಿಕ್ಷಣ ಪಡೆಯುತ್ತಿರುವ ಮಹಿಳೆಯರು



ವಿಜ್ಞಾನ ವಸ್ತು ಪ್ರದರ್ಶನವನ್ನು ವೀಕ್ಷಿಸುತ್ತಿರುವ ಗ್ರಾಮಸ್ಥರು.



ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಗ್ರಾಮದ ಮಗು.



ವಿವಿಧ ಪ್ರಾಣಿ ಮುಖವಾಡ ಧರಿಸಿರುವ ಗ್ರಾಮದ ಮಕ್ಕಳು.



ಸಾರ್ವಜನಿಕ ಕಾಮಗಾರಿ ನಡೆಯುತ್ತಿರುವ ದೃಶ್ಯ.



ಗ್ರಾಮದ ಯುವಕರು ಬಸವೇಶ್ವರ ಜಯಂತಿಯ
ಕಾರ್ಯಕ್ರಮದಲ್ಲಿ ನೃತ್ಯ ಮಾಡುತ್ತಿರುವ ದೃಶ್ಯ.



ಬಸವೇಶ್ವರ ಜಯಂತಿಯ ನಾಮಕರಣ ಹಾಗೂ
ತೊಟ್ಟಿಲು ಕಾರ್ಯಕ್ರಮದಲ್ಲಿ ಗ್ರಾಮದ ಮಹಿಳೆಯರು.



ಗ್ರಾಮದ ಸಮಾಜ ಸೇವಾ ಕಾರ್ಯ ಶಿಬಿರದಲ್ಲಿ
ಪೂಜ್ಯರು ಹಾಗೂ ಗಣ್ಯರು.





ಕಾರ್ಯಕ್ರಮವೊಂದರಲ್ಲಿ ಗ್ರಾಮದ ಮಗುವೊಂದು
ಬಸವೇಶ್ವರ ಹಾಗೂ ಸ್ವಾಮಿ ವಿವೇಕಾನಂದರ ವೇಷಭೂಷಣ ಧರಿಸಿರುವುದು.



ರಸ್ತೆ ರಿಪೇರಿ ಪೂಜಾ ಕಾರ್ಯಕ್ರಮದಲ್ಲಿ
ಗ್ರಾಮದ ಸರ್ವ ಗಣ್ಯರು ಹಾಗೂ ಗ್ರಾಮಸ್ಥರು.



ಬಸವ ಜಯಂತಿಯ ಅಂಗವಾಗಿ ಹಮ್ಮಿಕೊಂಡ
ರೈತರ ಜಾತ್ರೆ ಕಾರ್ಯಕ್ರಮ.



ಮಹಿಳಾ ಸಂಘಟನೆಗಳ ಸ್ತ್ರೀಯರು ಸಾಮೂಹಿಕ
ಕ್ರೀಡೆಗಳಲ್ಲಿ ತೊಡಗಿರುವ ದೃಶ್ಯ.



ರೈತರ ಹೊಲದಲ್ಲಿ ನಿರ್ಮಿಸಿರುವ ನೀರು ತಡೆಗೋಡೆಯನ್ನು
ವೀಕ್ಷಿಸುತ್ತಿರುವ ಪುರುಷ ಸಂಘದ ಸದಸ್ಯರು.



ಬಸವೇಶ್ವರ ಜಯಂತಿಯ ಭಾವಚಿತ್ರ ಮೆರವಣಿಗೆ
ಕಾರ್ಯಕ್ರಮದಲ್ಲಿ ಗ್ರಾಮಸ್ಥರು.



ಸಾಂಸ್ಕೃತಿಕ ಕಾರ್ಯಕ್ರಮ ವೀಕ್ಷಣೆಯಲ್ಲಿ ಗ್ರಾಮಸ್ಥರು.



ಹನುಮಾನ ಜಯಂತಿಯ
ಪ್ರಸಾದ ಸ್ವೀಕರಿಸುತ್ತಿರುವ ಗ್ರಾಮಸ್ಥರು.



ಕಾರ ಹುಣ್ಣಿಮೆಯಲ್ಲಿ ಶೃಂಗರಿಸಿರುವ ಎತ್ತುಗಳು.



ಸಾವಯುವ ಗೊಬ್ಬರ ತಯಾರಿಕಾ ಘಟಕ, ಕೊಟ್ಟಲಗಿ.



ಸಾಕ್ಷರ ಭಾರತ ಕಾರ್ಯಕ್ರಮದಲ್ಲಿ
ಪಠ್ಯ-ಪುಸ್ತಕ ಪರಿಕರಗಳನ್ನು ಪಡೆಯುತ್ತಿರುವ ಮಹಿಳೆಯರು.



ಬಸವ ಜಯಂತಿಯ ದಿನ ಎತ್ತುಗಳ ಮೆರವಣಿಗೆ.



ಜನ್ಮ ದಿನದಂದು ಮಗುವಿಗೆ ಆರತಿ ಮಾಡುತ್ತಿರುವುದು.



ಗ್ರಾಮದ ಗೀಗಿ ಕಲಾವಿದೆ ಬೌರಮ್ಮನವರು,
ಸಾಹಿತಿ ಗೋ. ರು. ಚನ್ನಬಸಪ್ಪ ಅವರಿಂದ ಪ್ರಶಸ್ತಿ ಸ್ವೀಕರಿಸುತ್ತಿರುವುದು.



ಶ್ರೀ ಕೋಟಲಿಂಗ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುತ್ತಿರುವುದು.




ಜನ್ಮ ದಿನದಂದು ಆಧುನಿಕ ವೇಷ ಭೂಷಣದಲ್ಲಿ ಗ್ರಾಮದ ಮಗು.



ಮೊಹರಂ ಸಂದರ್ಭದಲ್ಲಿ ಗ್ರಾಮದ
ಕುದುರೆ ಕುಣಿತದ ಕಲಾವಿದರು.



ಜಾನಪದ ಕಲಾ ಮೇಳದಲ್ಲಿ
ಗೀಗಿ ಕಲಾವಿದೆ ಬೌರಮ್ಮನವರು.



ಹಬ್ಬಗಳ ಸಂದರ್ಭದಲ್ಲಿ
ಸಿದ್ದೇಶ್ವರ ದೇವಾಲಯ ಶೃಂಗರಿಸಿರುವುದು.




ಮದುವೆಯಲ್ಲಿ ವಧು-ವರರಿಗೆ ಬಾಸಿಂಗ್ ಕಟ್ಟುತ್ತಿರುವುದು.



ವಧು-ವರನಿಗೆ ಮಾಲೆ ಹಾಕುತ್ತಿರುವುದು.



ಮುತ್ತೈದೆಯರು ವಧುವನ್ನು ಶೃಂಗರಿಸುತ್ತಿರುವುದು.



ನೆರೆಯ ಗ್ರಾಮ ರಾವಳಗುಂಡವಾಡಿಯಲ್ಲಿ ಆದರ್ಶ ಗ್ರಾಮದ ಗೋಡೆ ಬರಹ.



ಗ್ರಾಮಕ್ಕೆ ಆಗಮಿಸಿರುವ ಕೋಲೆ ಬಸವ



ಗ್ರಾಮಕ್ಕೆ ಆಗಮಿಸಿರುವ ರಾಮಯ್ಯ.



ಮರಗಮ್ಮನ ಬಂಡಿ ಬಿಡುವ ಕಾರ್ಯಕ್ರಮದಲ್ಲಿ ಸೇರಿದ ಜನ ಸ್ತೋಮ.



ಸಿದ್ದೇಶ್ವರ ದೇವರು ಹೊಳಿಗೆ ಹೋಗಿ ಬರುತ್ತಿರುವ ದೃಶ್ಯ



ಮೋಹರಂ ಸಂದರ್ಭದಲ್ಲಿ ಪಂಜೆ ದೇವರ ಮೆರವಣಿಗೆ.





ಮೋಹರಂ ಆಚರಣೆಯ ಡೋಲಿ ಹಾಗೂ ಪಂಜೆ ದೇವರುಗಳು ಹೊಳೆಗೆ ಹೋಗುತ್ತಿರುವ ದೃಶ್ಯ.



ಮೊಹರಂನಲ್ಲಿ ಡೋಲಿ ಮೆರವಣಿಗೆ.



ನೂಲು ಸುತುವ ಕಾರ್ಯಕ್ರಮದಲ್ಲಿ ಕೈಯಲ್ಲಿ ಎಲೆ ಹಾಗೂ ಅಕ್ಕಿ ಕಾಳು ಹಿಡಿದ ವಧು.



ಗ್ರಾಮದ ಭೂಮಿ ಉಳುಮೆ ಮಾಡುತ್ತಿರುವ ರೈತ.



ಶ್ರೀ ಮಾಧವಾನಂದರ ಸ್ಮರಣಾರ್ಥ ಸಪ್ತಾಹದಲ್ಲಿ
ಕುಂಭ ಹೊತ್ತ ಮೆರವಣಿಗೆಯಲ್ಲಿ ಗ್ರಾಮದ ಮಹಿಳೆಯರು.



ನಾಟಕ ಪ್ರದರ್ಶನದಲ್ಲಿ ಗ್ರಾಮದ ಕಲಾವಿದರು.



ಕೊಟ್ಟಲಗಿ ಗ್ರಾಮದ ಮಹಾದ್ವಾರ



ಶ್ರೀ ಮಾಧವಾನಂದರ ಸ್ಮರಣಾರ್ಥ ಸಪ್ತಾಹದಲ್ಲಿ
ಮೆರವಣಿಗೆಯಲ್ಲಿ ಪಾಲ್ಗೊಂಡ ಭಕ್ತಾದಿಗಳು.



ಶ್ರೀ ಸಿದ್ಧೇಶ್ವರ ದೇವಸ್ಥಾನದಲ್ಲಿ ಕರಡಿ ವಾದ್ಯದೊಂದಿಗೆ
ದೀಡ ನಮಸ್ಕಾರ ಹಾಕುತ್ತಿರುವುದು.



ಅಯ್ಯಪ್ಪ ಸ್ವಾಮಿ ಪೂಜೆಯಲ್ಲಿ ತೊಡಗಿರುವ
ಗ್ರಾಮದ ಅಯ್ಯಪ್ಪ ಸ್ವಾಮಿ ಭಕ್ತಾದಿಗಳು.



ಅಯ್ಯಪ್ಪ ಸ್ವಾಮಿ ಅಭಿಷೇಕದಲ್ಲಿ ತೊಡಗಿರುವ
ಗ್ರಾಮದ ಅಯ್ಯಪ್ಪ ಸ್ವಾಮಿ ಭಕ್ತಾದಿಗಳು.



ಅಯ್ಯಪ್ಪ ಸ್ವಾಮಿ ಮಹಾಪ್ರಸಾದದಲ್ಲಿ ತೊಡಗಿರುವ
ಗ್ರಾಮದ ಅಯ್ಯಪ್ಪ ಸ್ವಾಮಿ ಭಕ್ತಾದಿಗಳು.



ಬೀಗರು ಆಯೇರಿ ಮಾಡುತ್ತಿರುವುದು.



ಮದುವೆಗಾಗಿ ಪರಿಕರಗಳನ್ನು ಸಿದ್ದಗೊಳಿಸುತ್ತಿರುವ ಸ್ವಾಮಿಗಳು.



ವಧು-ವರರನ್ನು ಅಕ್ಷತೆಗಾಗಿ ಕೂಡಿಸುವ
ಸ್ಥಳದಲ್ಲಿ ಹಾಕಿರುವ ಶಾಸಕ್ಕಿ.



ಗ್ರಾಮಕ್ಕೆ ನೀರು ಪೂರೈಸುವ
ಮೇಲ್ಮಟ್ಟದ ಜಲ ಸಂಗ್ರಹಗಾರ



ಹರಕೆಗಾಗಿ ಗಂಡು ಮಗುವಿಗೆ
ಜಡೆ ಬಿಟ್ಟಿರುವುದು.



ಗ್ರಾಮದಲ್ಲಿ ಪ್ರೇರಕರ ತರಬೇತಿ ಕಾರ್ಯಕ್ರಮವನ್ನು
ಉದ್ಘಾಟಿಸುತ್ತಿರುವ ತಾ. ಪಂ. ಸದಸ್ಯರು ಹಾಗೂ ಗಣ್ಯರು.



ಗ್ರಾಮದ ಜನರನ್ನು ಉದ್ದೇಶಿಸಿ ಸಾಕ್ಷರತಾ ಕಲಾ ಜಾಥಾದವರು
ಸಂಗೀತ ಹಾಗೂ ನಾಟಕ ಕಾರ್ಯಕ್ರಮ ನೀಡುತ್ತಿರುವದು.



ಯಂತ್ರದ ಮುಖಾಂತರ ಗ್ರಾಮದ
ಭೂಮಿಯನ್ನು ಸಮಗೊಳಿಸುತ್ತಿರುವುದು.



ಬಸವ ಜಯಂತಿಯ ಮೆರವಣಿಗೆ ಹಾಗೂ
ಗ್ರಾಮದ ಮಹಿಳೆಯರು.